ಮನುಷ್ಯ ಜಾತಿ
ತಾನೊಂದೆ ವಲಂ

ಕೇಶಿರಾಜ ವಿರಚಿತ

# ಶಬ್ದಮಣಿದರ್ಪಣಂ

ಪರಿಷ್ಕೃತ ಮುದ್ರಣದ ಸಂಪಾದಕ

ಡಾ.ಟಿ.ವಿ.ವೆಂಕಟಾಚಲಶಾಸ್ತ್ರೀ

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು–೫೬೦೦೧೮

ಕೇಶಿರಾಜ ವಿರಚಿತ

# ಶಬ್ದಮಣಿದರ್ಪಣಂ

(ಉಪೋದ್ಘಾತ, ಪರಿಷ್ಕೃತಪಠ್ಯ ಮತ್ತು ಅನುಬಂಧಗಳು)

ಪರಿಷ್ಕೃತ ಮುದ್ರಣದ ಸಂಪಾದಕ

ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

*SHABDAMANIDARPANAM* - Kesiraja's (c.1260) Jewel Mirror of Grammar Edited by Dr. T.V. Venkatachala Shastri and published by **Kannada Sahitya Parishattu,** Pampa Maḥakavi Road, Chamarajapete, Bengaluru - 560018 Pages : XLVI + 306 Price : 170=00; **2015**

ಪ್ರಥಮ ಮುದ್ರಣ : ೧೯೨೦
ಪರಿಷ್ಕೃತ ಮುದ್ರಣ : ೧೯೯೬
ಮರು ಮುದ್ರಣ : ೨೦೦೬
ಮರು ಮುದ್ರಣ : ೨೦೧೫
ಪ್ರತಿಗಳು : ೧೦೦೦
ಬೆಲೆ : ಒಂದು ನೂರ ಎಪ್ಪತ್ತು ರೂಪಾಯಿಗಳು



ಮುಖಪುಟ ವಿನ್ಯಾಸ : ಫ್ಲವರ್ ಗ್ರಾಫಿಕ್



ಮುದ್ರಣ : ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

# ಅಧ್ಯಕ್ಷರ ನುಡಿ

ಕನ್ನಡ ಪುಸ್ತಕ ಪ್ರಕಾಶನೋದ್ಯಮ ಇಂದು ಹುಲುಸಾಗಿ ಬೆಳೆದಿದೆ. ವರ್ಷಕ್ಕೆ ಪ್ರಥಮಾವೃತ್ತಿಯ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಪುಸ್ತಕಗಳು ಪ್ರಕಟವಾಗುತ್ತಿವೆ. ಅವಲ್ಲದೆ ಸಹಸ್ರಾರು ಮರುಮುದ್ರಣಗಳು ಹಾಗೂ ಲೆಕ್ಕಕ್ಕೆ ಬಾರದ ಇತರ ಸಾವಿರಾರು ಪುಸ್ತಕಗಳು ಪ್ರಕಟಣೆಯಾಗುತ್ತಿವೆ. ಈ ಉದ್ಯಮಕ್ಕೆ ಸಾರ್ವಜನಿಕ ಕ್ಷೇತ್ರದ ಕೊಡುಗೆಯೂ ಕಡಿಮೆಯಲ್ಲ. ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳು, ವಿವಿಧ ಅಕಾಡೆಮಿಗಳು, ಪುಸ್ತಕ ಪ್ರಾಧಿಕಾರ, ಸಾಹಿತ್ಯ ಪರಿಷತ್ತಿನಂಥ ಸಾರ್ವಜನಿಕ ಸಂಸ್ಥೆಗಳು ನಿರಂತರವಾಗಿ ಪುಸ್ತಕಗಳನ್ನು ಪ್ರಕಟಿಸುತ್ತಲಿವೆ. ಖಾಸಗಿ ಪ್ರಕಾಶನ ಸಂಸ್ಥೆಗಳಂತೂ ಪೈಪೋಟಿಯಿಂದಲೇ ಪುಸ್ತಕ ಪ್ರಕಾಶನದಲ್ಲಿ ತೊಡಗಿವೆ.

ಸಮಗ್ರ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಭಾಜನವಾಗಿರುವ, ೧೯೧೫ರಲ್ಲಿ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು, ಶತಮಾನೋತ್ಸವದ ಹೊಸ್ತಿಲಲ್ಲಿದೆ. ಕಳೆದ ೯೯ ವರ್ಷಗಳಿಂದಲೂ ಕನ್ನಡ ಗ್ರಂಥಗಳ ಪ್ರಕಟಣೆಯನ್ನು ನಿರಂತರವಾಗಿ ಮಾಡುತ್ತಾ ಬಂದಿರುವ ಪರಿಷತ್ತು ಸುಮಾರು ಒಂದು ಸಾವಿರದ ನಾಲ್ಕುನೂರಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿರುತ್ತದೆ. ಸರಿಸುಮಾರು ಒಂದು ಶತಮಾನದಷ್ಟು ಕಾಲಾವಧಿಯ ನಿರಂತರತೆ ಹಾಗೂ ಕೃತಿಗಳ ಮೌಲಿಕತೆಯ ದೃಷ್ಟಿಯಿಂದ ಇದೊಂದು ಅಪೂರ್ವ ದಾಖಲೆಯಾಗಿದೆ. ಕನ್ನಡ ಪ್ರಕಟಣಾ ಚರಿತ್ರೆಯಲ್ಲಂತೂ ಅನನ್ಯವೇ ಸರಿ.

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ ಪುಸ್ತಕಗಳನ್ನು ಸಹೃದಯರು ಮೆಚ್ಚಿ ಸ್ವೀಕರಿಸಲು ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ ಸಿದ್ಧಪಡಿಸಿದ ಮೇಲೆ ಅವುಗಳ ಮಾರಾಟದ ಪ್ರಮಾಣ ಹೆಚ್ಚುತ್ತಿದೆ. ಓದುಗರು ಬಯಸುವ ಪುಸ್ತಕಗಳನ್ನು ಅವರ ಕೈಗೆ ತಲುಪುವಂತೆ ಮಾಡುವುದೇ ಪುಸ್ತಕೋದ್ಯಮದ ಪ್ರಾಥಮಿಕ ಆಶಯ. ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ ಸ್ಪಂದಿಸುತ್ತ, ಆ ಕ್ಷೇತ್ರದಲ್ಲಿ ಬಹುವೇಗವಾಗಿ ಸಾಗುತ್ತಿರುವ ಪ್ರಕಾಶಕರ ನಡುವೆ ಕನ್ನಡ ಅಕ್ಷರ ಸೇವೆ ಮಾಡುತ್ತಿದ್ದೇವೆಂದು ಭಾವಿಸಿ ಕನ್ನಡ ಸಾಹಿತ್ಯ ಪರಿಷತ್ತು ತಣ್ಣಗೆ, ನಿರುಮ್ಮಳವಾಗಿ ಇರುವ ಕಾಲ ಮುಗಿದುಹೋಗಿದೆ. ಹೊಸಕಾಲದ ಅಗತ್ಯಕ್ಕೆ ಅನುಗುಣವಾಗಿ ಬದಲಾಗುವುದು ಅನಿವಾರ್ಯವಾಗಿದೆ.

ಓದುಗರಿಂದ ಬೇಡಿಕೆ ಇರುವ ದೃಷ್ಟಿಯಿಂದ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರು ಪರಿಷ್ಕರಿಸಿ, ಸಂಪಾದಿಸಿರುವ ಕೇಶಿರಾಜ ವಿರಚಿತ 'ಶಬ್ದಮಣಿದರ್ಪಣಂ' ಕೃತಿಯನ್ನು ಪುನರ್ ಮುದ್ರಿಸಲಾಗುತ್ತಿದೆ.

ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿದ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿವರ್ಗಕ್ಕೆ ಹಾಗೂ ಈ ಕಾರ್ಯದಲ್ಲಿ ಸಹಕಾರ ನೀಡಿದ ಪ್ರಕಟಣ ಸಮಿತಿಯ ಎಲ್ಲಾ ಸದಸ್ಯರಿಗೆ ನನ್ನ ಕೃತಜ್ಞತೆಗಳು.

೧೭-೦೪-೨೦೧೫

ಪುಂಡಲೀಕ ಹಾಲಂಬಿ
ಅಧ್ಯಕ್ಷರು

## ಅಧ್ಯಕ್ಷರ ನುಡಿ

### (ಪರಿಷ್ಕೃತ ಮೊದಲ ಮುದ್ರಣದ ಆವೃತ್ತಿಯದು)

ಪಠ್ಯಪುಸ್ತಕ ರಚನೆ ಒಂದು ಬಗೆಯ ಸಂಕೀರ್ಣಸ್ವರೂಪದ್ದು; ಅತ್ತ ಸೃಜನ ಶೀಲವೂ ಅಲ್ಲ, ಇತ್ತ ಸೃಜನೇತರವೂ ಅಲ್ಲ. ಇದು ಒಂದು ಬಗೆಯ ದುಂಬಿಯ ಕಾರ್ಯ. ಹೂವು ಹೂವಿನ ಹೊಂಬಟ್ಟಲ ಮಧುವನ್ನು ಹೀರಿ, ಓಂಕಾರದ ಝೇಂಕಾರ ಮಾಡುತ್ತ ಗೂಡಿನೆಡೆಗೆ ಸಾಗಿ, ಜೇನುಗೂಡ ಕಟ್ಟುವ ಮಧುಸಂಗ್ರಹದ ಸ್ವಾದಿಷ್ಟ ಕಾರ್ಯ. ಇದರ ಸೃಷ್ಟಿ ಸಂದರ್ಭದಲ್ಲಿ ಸಂಪಾದಕರಿಗೆ ದೇಶ, ಕಾಲ, ಪರಿಸರ, ಪ್ರಭಾವದಿಗಳ ಪ್ರಜ್ಞೆ ಇರಬೇಕು, ಔಚಿತ್ಯಜ್ಞಾನವೂ ಇರಬೇಕು, ಈ ಅರ್ಥದಲ್ಲಿ ಪಠ್ಯಪುಸ್ತಕರಚನೆ ಒಂದು ಕಲೆ. ಅದರದೇ ಆದ ಸಂಹಿತೆ ಇರುವುದರಿಂದ ಒಂದು ವೈಜ್ಞಾನಿಕ ನಿರ್ಮಾಣ ಕೂಡ.

ಇಂತಹ ಜವಾಬ್ದಾರಿಯುತ ಕಾರ್ಯ ನಿರ್ವಹಣೆಗಾಗಿ ಪರಿಷತ್ತು ತಜ್ಞರ ಒಂದು ಸಮಿತಿಯನ್ನು ರಚಿಸಿತು. ಆ ಸಮಿತಿ ಈ ಕೆಳಕಂಡಂತೆ ಇದೆ:

'ಡಾ. ಸಾ. ಶಿ. ಮರುಳಯ್ಯ, ಶ್ರೀ ಪುಂಡಲೀಕ ಹಾಲಂಬಿ, ಶ್ರೀ ಬೇಡರೆಡ್ಡಿಹಳ್ಳಿ ಪಂಪಣ್ಣ, ಪ್ರೊ. ಕೆ.ಎಂ. ಸೀತಾರಾಮಯ್ಯ, ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ, ಡಾ. ಕಮಲಾಹಂಪನಾ, ಡಾ. ಪಿ. ವಿ. ನಾರಾಯಣ, ಪ್ರೊ. ಡಿ. ಲಿಂಗಯ್ಯ, ಪ್ರೊ. ಜಿ. ಅಶ್ವತ್ಥನಾರಾಯಣ, ಪ್ರೊ. ಜಿ. ಅಬ್ದುಲ್ ಬಷೀರ್, ಶ್ರೀಮತಿ ನಾ. ನಂಜಮ್ಮ, ಶ್ರೀಮತಿ ಶಕುಂತಲಾ ಪ್ರಸಾದ್'.

ಪರಿಷತ್ತು ನಡೆಸುವ ಪ್ರವೇಶ, ಕಾವ, ಜಾಣ ಮತ್ತು ರತ್ನ ಪರೀಕ್ಷೆಗಳಿಗಾಗಿ ಪಠ್ಯ ವಿಷಯವನ್ನಾಧರಿಸಿದ ಪಠ್ಯಪುಸ್ತಕವನ್ನು ಸಮಿತಿ ರಚಿಸಿಕೊಟ್ಟಿತು. ಕೆಲವನ್ನು ಈಗಾಗಲೇ ಪ್ರಸಿದ್ಧ ಲೇಖಕರು ಸಿದ್ಧಪಡಿಸಿ ಪ್ರಕಟಿಸಿದ್ದ ಕೃತಿಗಳನ್ನು ಆರಿಸಿ ಪಠ್ಯಪುಸ್ತಕವಾಗಿ ಗೊತ್ತುಪಡಿಸಿತು. ಹೀಗಾಗಿ ಸುಮಾರು ಹದಿನೈದು ಹದಿನಾರು ಪುಸ್ತಕಗಳು ಈ ದಿಸೆಯಲ್ಲಿ ಬೆಳಕು ಕಂಡವು. ಪರೀಕ್ಷಾರ್ಥಿಗಳ ವಯೋಮಿತಿ, ಗ್ರಹಣಶಕ್ತಿ, ಅಭಿವ್ಯಕ್ತಿ ಸಾಮರ್ಥ್ಯಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯಪುಸ್ತಕಗಳನ್ನು ಸಮಿತಿ ಸಿದ್ಧಪಡಿಸಿತು ಇಲ್ಲವೆ ಆರಿಸಿಕೊಟ್ಟಿತು. ಕೆಲವು ಸಂಪಾದಿತ ಕೃತಿಗಳಿಗೆ ಒಂದು ಸೂಕ್ತ ಶೀರ್ಷಿಕೆಯನ್ನು ಆಲೋಚಿಸಿಡುವ ಕೋರಿಕೆಯನ್ನು ಮುಂದಿಟ್ಟಾಗ ೧೯೯೭ನೆಯ ವರ್ಷ ಭಾರತ ಸ್ವಾತಂತ್ರ್ಯದ ಸುವರ್ಣ ವರ್ಷವಾದ್ದರಿಂದ 'ಸುವರ್ಣ ಭಾರತಿ' ಎಂದಿಡುವಂತೆಯೂ ಪರೀಕ್ಷೆಗಳ ವರ್ಗಗಳಿಗನುಗುಣವಾಗಿ ೧, ೨, ೩ – ಇತ್ಯಾದಿ ಸಂಖ್ಯಾ ಸಂಯೋಗದೊಂದಿಗೆ ಪ್ರಕಟಿಸಬೇಕೆಂದೂ ಸಮಿತಿ ಸಲಹೆ ನೀಡಿತು. ಸಲಹೆ ಸೂಕ್ತ ಹಾಗೂ ಅರ್ಥಪೂರ್ಣವಾದ್ದರಿಂದ ಸಮಿತಿಯೇ ರಚಿಸಿದ ಕೃತಿಗಳಿಗೆ ಆ ಶೀರ್ಷಿಕೆಯನ್ನು ಇಡಲಾಗಿದೆ.

ಒಂದೊಂದು ಪುಸ್ತಕ ರಚನೆಗೂ ಕನಿಷ್ಠ ಇಬ್ಬಿಬ್ಬರು ಸಂಪಾದಕರುಗಳಿದ್ದುಕೊಂಡು ಅವರು ಆರಿಸಿದ ಪಠ್ಯಭಾಗ ಹಾಗೂ ರೂಪಿಸಿಕೊಟ್ಟ ಅಭ್ಯಾಸಭಾಗಗಳನ್ನು ಸಮಿತಿ ಆದ್ಯಂತವಾಗಿ ಪ್ರತಿ ಅಕ್ಷರವನ್ನು ಓದಿ, ತಪ್ಪಿದ್ದರೆ ತಿದ್ದಿ, ತೀಡಿ, ಮಾರ್ಪಡಿಸಿ – ಒಟ್ಟಿನಲ್ಲಿ ಪ್ರಕಟಿತಗ್ರಂಥ ದೋಷರಹಿತವಾಗಿರುವಂತೆ ಎಚ್ಚರ ವಹಿಸಿದೆ. ಕೃತಿಯ ಗಾತ್ರ, ವಿಷಯಗಳ ಔಚಿತ್ಯ ಹಾಗೂ ಅಭ್ಯಾಸರಚನೆಯಲ್ಲಿಯ ವೈಜ್ಞಾನಿಕವಿಧಾನ – ಎಲ್ಲಾ ವಿಷಯಗಳಲ್ಲೂ ಪಕ್ವತೆಯನ್ನು ಕಾಣಲು ಪ್ರಯತ್ನಿಸಿದೆ. ಇದಕ್ಕಾಗಿ ಒಂದು ವರ್ಷದ ಅವಧಿಯಲ್ಲಿ ಸುಮಾರು ಹದಿನಾರು ಬಾರಿ ಸಭೆ ಸೇರಿ ಶ್ರಮಿಸಿದೆ.

ಈ ಬಗೆಯ ಪಠ್ಯಪುಸ್ತಕರಚನೆಯ ಹಿನ್ನೆಲೆಯಲ್ಲಿ ಪರಿಷತ್ತಿನ ಇರಾದೆ ಏನೆಂಬುದರ ಬಗೆಗೆ ಒಂದು ಮಾತು: ಅದು ಅನ್ಯರ ಹಂಗಿಲ್ಲದ ತನ್ನದೇ ಆದ ಆಸ್ತಿಯ ಮೂಲಕ ಸ್ವಾವಲಂಬನ ಸಾಧಿಸುವುದು. ಈ ದಿಸೆಯಲ್ಲಿ ಈ ಸಾಲಿನ ಸಂಕಲಿತ ಹಾಗೂ ಸಂಪಾದಿತ ಕೃತಿಗಳ ಸಂಪೂರ್ಣಸ್ವಾಮ್ಯವನ್ನು ಪರಿಷತ್ತು ಪಡೆದಿದೆ. ಆದರೆ ಸಮಯಾಭಾವದಿಂದ ತನ್ನದೇ ಆದ ಎಲ್ಲ ಕೃತಿಗಳನ್ನು ಕೊಡಲಾಗಲಿಲ್ಲ. ಸದ್ಯದ ಪರಿಸ್ಥಿತಿ ಪೂರ್ಣವಾಗಿ ಅನುಮೋದಿಸದಿದ್ದರೂ ಮುಂದಿನ ಪಠ್ಯಪುಸ್ತಕ ರಚನಾ ಸಂದರ್ಭದಲ್ಲಿ ಪರಿಷತ್ತು ಸಂಪೂರ್ಣ ಸ್ವೋಪಜ್ಞ ಸ್ವಾಮ್ಯವನ್ನು ಪಡೆದು ಶ್ರೀಮಂತವಾಗಲಿ ಎಂಬ ಸದಾಶಯ ಇಲ್ಲಿದೆ ಎಂದು ನಿವೇದಿಸಿಕೊಳ್ಳುತ್ತೇನೆ.

ಪ್ರಸ್ತುತ ಕೇಶಿರಾಜವಿರಚಿತ 'ಶಬ್ದಮಣಿದರ್ಪಣಂ' (ಪರಿಷ್ಕೃತ ಮುದ್ರಣ) ಕೃತಿಯನ್ನು ಡಾ. ಟಿ.ವಿ ವೆಂಕಟಾಚಲ ಶಾಸ್ತ್ರೀಗಳು 'ಕನ್ನಡ ರತ್ನ' ಪರೀಕ್ಷೆಗೆ ಪಠ್ಯಪುಸ್ತಕವಾಗಿ ಸಿದ್ಧಪಡಿಸಿಕೊಟ್ಟಿದ್ದಾರೆ. ಅವರಿಗೆ ಮತ್ತು ಅನುಮೋದಿಸಿ ಸಹಕರಿಸಿದ ಪಠ್ಯಪುಸ್ತಕ ರಚನಾ ಸಮಿತಿಗೆ ಪರಿಷತ್ತಿನ ಪರವಾಗಿ ಹಾರ್ದಿಕ ನಮನಗಳು.

೨೦, ಜುಲೈ ೧೯೯೭

ಸಾ.ಶಿ.ಮರುಳಯ್ಯ<br>
ಅಧ್ಯಕ್ಷರು

# ಅರಿಕೆ

ಕರ್ಣಾಟಕ (ಕನ್ನಡ) ಸಾಹಿತ್ಯ ಪರಿಷತ್ತು ಸಿದ್ಧಾರ್ಥಿನಾಮ ಸಂವತ್ಸರದ ಪುಷ್ಯಮಾಸದ ಬಹುಳ ಪಕ್ಷದ ಪಂಚಮಿಯಂದು (೧೦-೧-೧೯೨೦) ಕೇಶಿರಾಜನ 'ಶಬ್ದಮಣಿದರ್ಪಣ'ವನ್ನು ತನ್ನ ಒಂದು ಗಣ್ಯ ಪ್ರಕಟನೆಯನ್ನಾಗಿ ಹೊರತಂದಿತು. ಇದೇ ವರ್ಷ ಕಿಟ್ಟೆಲರು ಸಂಪಾದಿಸಿದ ಇದೇ ಕೃತಿಯ 'ಮೂರನೆಯ ಸುಧಾರಿಸಲ್ಪಟ್ಟ ಆವೃತ್ತಿ' ಸಹ ಪಿ. ಮಂಗೇಶರಾಯರಿಂದ ಪುನಸ್ಸಂಪಾದಿತವಾಗಿ ಪ್ರಕಟವಾಯಿತು. ಜೆ. ಗ್ಯಾರೆಟ್ ಅವರ ಸರ್ವಪ್ರಥಮ ಪರಿಷ್ಕರಣವೂ (೧೮೬೮) ಆ ಬಳಿಕ ಎಫ್. ಕಿಟ್ಟೆಲ್ ಅವರ ಪರಿಷ್ಕರಣಗಳೂ (ಪ್ರಥಮ: ೧೮೭೨; ದ್ವಿತೀಯ: ೧೮೯೯) ಪ್ರಕಟವಾದ ತರುವಾಯದಲ್ಲಿ ಬಹುಶಃ ಪರಿಷತ್ತಿನ ಪರಿಷ್ಕರಣವೇ ನಾಲ್ಕನೆಯದು.

ಪರಿಷತ್ತಿನ ಪರಿಷ್ಕರಣದ ಸಂಪಾದಕರು ಯಾರು ಎನ್ನುವುದು ತಿಳಿಯದು. ಅದರ ಸೂಚನೆ ಆ ಪರಿಷ್ಕರಣದಲ್ಲಿ ಎಲ್ಲಿಯೂ ದೊರೆಯುವುದಿಲ್ಲ. ಅದು ಪ್ರಕಟವಾದ ಕಾಲದಲ್ಲಿ ಪರಿಷತ್ತಿನ ಅಧ್ಯಕ್ಷರಾಗಿದ್ದವರು ಶ್ರೀಮಾನ್ ಎಚ್.ವಿ. ನಂಜುಂಡಯ್ಯನವರು. ಪರಿಷತ್ತಿನಲ್ಲಿ ಆಗ ಪಂಡಿತರಾಗಿ ಕೆಲಸ ಮಾಡುತ್ತಿದ್ದವರು ಎಂದರೆ, ಶ್ರೀಮಾನ್ ಕಡಬ ನಂಜುಂಡ ಶಾಸ್ತ್ರಿಗಳು ಮತ್ತು ಶ್ರೀಮಾನ್ ತೋಗೆರೆ ನಂಜುಂಡ ಶಾಸ್ತ್ರಿಗಳು. ಈ ಪಂಡಿತರು ಆಗ್ಗೆ 'ಶಬ್ದಮಣಿದರ್ಪಣ'ದ ಸಂಪಾದನಕಾರ್ಯದಲ್ಲಿ ತೊಡಗಿದ್ದರೆಂಬುದನ್ನು ಹಿರಿಯರಾದ ಶ್ರೀಮಾನ್ ನಿಟ್ಟೂರು ಶ್ರೀನಿವಾಸರಾಯರು ನೆನಪಿಸಿಕೊಂಡಿದ್ದಾರೆ. ಇದಕ್ಕೆ ದಾಖಲೆಗಳೇನಾದರೂ ದೊರೆಯುವುದೇ, ನೋಡಬೇಕಾಗಿದೆ; ಸಂಭಾವ್ಯತೆಯೇನೋ ಉಂಟು.

'ಶಬ್ದಮಣಿದರ್ಪಣ'ದ ಹಲವು ಪರಿಷ್ಕರಣಗಳು ಈಗ ಪ್ರಚಾರದಲ್ಲಿವೆ. ಅವುಗಳಲ್ಲಿ ಕೆಲವು ಪುನರ್ಮುದ್ರಣಗಳನ್ನೂ ಕಂಡಿವೆ. ಹಳೆಯ ಪರಿಷ್ಕರಣಗಳಲ್ಲಿ ಪುನರ್ಮುದ್ರಣದ ಯೋಗವನ್ನು ಕಾಣದೆ ಇದ್ದುದೆಂದರೆ, ಪರಿಷತ್ತಿನ ಶಮದ.ವೇ. ಇದು ಹೀಗಾಗಲು ಕಾರಣವೇನೋ ತಿಳಿಯದು. ಬೇರೆ ಬೇರೆ ಪರಿಷ್ಕರಣಗಳು ನೋಡಲು ದೊರೆಯುತ್ತಿರುವಾಗ, ಅದರ ಆವಶ್ಯಕತೆ ಪರಿಷತ್ತಿನ ಅಂದಂದಿನ ಅಧ್ಯಕ್ಷರಿಗೆ, ಪ್ರಕಟನ ಸಮಿತಿಗೆ, ತೋರದಿರಬಹುದು. ಈಗ್ಗೆ ಕೆಲವು ವರ್ಷಗಳಿಂದಲೂ ನಾನು ಪರಿಷದಧ್ಯಕ್ಷರುಗಳಿಗೆ ಪುನರ್ಮುದ್ರಣದ ವಿಷಯವನ್ನು ಜ್ಞಾಪಿಸುತ್ತಲೂ ಒತ್ತಾಯಿಸುತ್ತಲೂ ಇದ್ದೆ. ಅದು ಪರಿಷತ್ತಿನ ಪ್ರಕಟನೆಗಳಲ್ಲಿ ಗಣ್ಯವಾದುದೆಂದೂ ಆರ್ಥಿಕವಾಗಿ ಸಹಾಯ ಮಾಡುವಂಥದೆಂದೂ ಹೇಳುತ್ತಿದ್ದೆ. ನನ್ನ ಒತ್ತಾಯಕ್ಕೆ ಬೇರೊಂದು ಕಾರಣದ ಬೆಂಬಲವೂ ಇತ್ತು: ಪರಿಷತ್ತಿನ ಪರಿಷ್ಕರಣ ಆ ಕಾಲಕ್ಕೆ ಪ್ರಸಿದ್ಧರಾಗಿದ್ದ, ಸಂಪ್ರದಾಯಶಿಕ್ಷಣದ ಕನ್ನಡ ಪಂಡಿತರಿಂದ ಸಂಪಾದಿತವಾಗಿದ್ದುದು ಹಾಗೂ ಪ್ರಚಲಿತ ಪರಿಷ್ಕರಣಗಳಿಗಿಂತ ಅದು ಸೂತ್ರ ವೃತ್ತಿಗಳ ವಿಷಯದಲ್ಲಿ ಕೆಲಮಟ್ಟಿಗೆ ಪ್ರತ್ಯೇಕವಾದ ಪಾಠಗಳನ್ನು ಒಳಗೊಂಡಿದ್ದುದು. ಕನ್ನಡ ಭಾಷೆಯ ಪ್ರೌಢ ವಿದ್ಯಾರ್ಥಿಗಳಿಗೆ ಕನ್ನಡ ವ್ಯಾಕರಣಗಳ ತೌಲನಿಕ ಅಧ್ಯಯನವೆಂಬ ಪಾಠವನ್ನು ಕಲಿಸುವಾಗ ಈ ವಿಷಯ ನನ್ನ ಗಮನಕ್ಕೆ ಬಂದಿತ್ತು. ಅಲ್ಲಲ್ಲಿಯ ಅದರ ಉಪಯುಕ್ತ ಪಾಠಭೇದಗಳಿಂದ ನಾನು ನನ್ನ ಸಮಸ್ಯೆಗಳಿಗೆ ಪರಿಹಾರವನ್ನೂ ಕಂಡುಕೊಂಡಿದ್ದೆ.

ನನ್ನ ಅಪೇಕ್ಷೆ ಹುಸಿ ಹೋಗಲಿಲ್ಲ; ಬೇಡಿಕೆ ವಿಫಲವಾಗಲಿಲ್ಲ. ಈಗ ಪರಿಷದಧ್ಯಕ್ಷರಾಗಿರುವ, ಕೇಶಿರಾಜನ ಅಭಿಮಾನಿಗಳೂ ಅವನ ವ್ಯಾಕರಣದ ಮೇಲೆ ಗ್ರಂಥವೊಂದನ್ನು ರಚಿಸಿರುವವರೂ ಆದ ಡಾ. ಸಾ.ಶಿ. ಮರುಳಯ್ಯನವರು ವಿಶೇಷವಾಗಿ ಆಸಕ್ತಿವಹಿಸಿ, ಪರಿಷತ್ತಿನ ಶಮದ. ಪರಿಷ್ಕರಣಕಾರ್ಯಕ್ಕೆ, ಅದರ ಪ್ರಕಟನೆಗೆ, ಅನುವು ಮಾಡಿದ್ದಾರೆ. ಅವರು ದೊಡ್ಡಮನಸ್ಸು ಮಾಡಿದರೆಂದು ಕೆಲಸ ಆಯಿತು. ಈ ಪರಿಷ್ಕರಣದ ಸಂಪಾದನೆಯ ಗುರುತರವಾದ ಜವಾಬ್ದಾರಿಯನ್ನು ಅವರು ನನಗೆ ವಹಿಸಿ, ವೈಯಕ್ತಿಕವಾಗಿಯೂ ವಿಶ್ವಾಸ ತೋರಿದ್ದಾರೆ; ನಾನು ನನ್ನ ಕೈಯಲ್ಲಾದ ಮಟ್ಟಿಗೆ ಅದನ್ನು ನಿರ್ವಹಿಸಿದ್ದೇನೆ. ಅವರಿಗೆ, ಪ್ರಕಟನ ಸಮಿತಿಯ ಸದಸ್ಯರಿಗೆ, ಪರಿಷತ್ತಿನ ಸಿಬ್ಬಂದಿವರ್ಗದ ಶ್ರೀ ಹೇಮಾದ್ರಿ, ಶ್ರೀಮತಿ ನಾಗವೇಣಿ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

ಈಗ ನೋಡಲು ಸುಲಭವಾಗಿ ದೊರೆಯದ ಪ್ರಥಮ ಪರಿಷ್ಕರಣದ ಪ್ರತಿಯನ್ನು ಮೈಸೂರಿನ ಕೇಂದ್ರ ಶಾಸನತಜ್ಞರ ಇಲಾಖೆಯ ಗ್ರಂಥಭಂಡಾರದಿಂದ ನನಗೆ ಒದಗಿಸಿದವರು, ಆ ಭಂಡಾರದ ಗ್ರಂಥಪಾಲಕಿಯಾದ ಶ್ರೀಮತಿ ಅಂಬಿಕಾ ದೇವಿಯವರು. ಅವರ ಸೌಜನ್ಯ ದೊಡ್ಡದು.

ಮುದ್ರಣದಲ್ಲಿ ಮೊದಲ ಕರಡಚ್ಚುಗಳನ್ನು ತುಂಬ ಶ್ರಮವಹಿಸಿ ಪರಿಶೀಲಿಸಿ ಶ್ರೀಮಾನ್ ಹೊ.ರಾ. ಸತ್ಯನಾರಾಯಣ ರಾವ್ ಅವರು ನನಗೆ ಸಹಾಯವಾಗಿದ್ದಾರೆ. ಎರಡನೆಯ ಸೂಚೀಪತ್ರದ ಪ್ರಯೋಗಗಳ ವರ್ಣಾನುಕ್ರಮಣಿಕೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಕಛೇರಿಯ ಸಂಪಾದಕವರ್ಗದವರು, ಶ್ರೀಮತಿಯರಾದ ಉಮಾದೇವಿ, ವಿಜಯಲಕ್ಷ್ಮಿ, ಸುಜಯ ಮತ್ತು ಶ್ರೀಮಾನ್ ಬಸವರಾಜು ಅವರು, ಶ್ರಮವಹಿಸಿ ಸಿದ್ಧಮಾಡಿಕೊಟ್ಟಿದ್ದಾರೆ.

ಈ ಬಗೆಯ ಪುಸ್ತಕಗಳ ಮುದ್ರಣ ಕ್ಲಿಷ್ಟವಾದುದು, ಕಷ್ಟಕರವಾದುದು. ಅವನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಮುದ್ರಣಕಾರ್ಯವನ್ನು ಸಂತೋಷದಿಂದಲೂ ಧೈರ್ಯವಾಗಿಯೂ ನಿರ್ವಹಿಸಿ, ತ್ವರಿತವಾಗಿಯೂ ಸುಂದರವಾಗಿಯೂ ಗ್ರಂಥವನ್ನು ಮುದ್ರಿಸಿರುವವರು ಬೆಂಗಳೂರಿನ ಸ್ಕ್ಯಾನ್ ಕಂಪ್ಯೂಟರ್ಸ್ ಸಿಸ್ಟಮ್ಸ್ ಸಂಸ್ಥೆಯ ಒಡತಿಯರಾದ ಶ್ರೀಮತಿ ಹೇಮಾ ನರಹರಿರಾವ್ ಅವರು. ಅವರೂ ಅವರ ಬಳಗದವರೂ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ.

ಈ ಎಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

ಪ್ರಸ್ತುತ ಪರಿಷ್ಕರಣದಲ್ಲಿ ನಾನು ಅನುಸರಿಸಿದ ಕ್ರಮಗಳನ್ನು ಕುರಿತು ಇಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ.

ಸೂತ್ರಗಳ ಪಾಠವಿಷಯದಲ್ಲಿ ಪ್ರಚಲಿತ ಪರಿಷ್ಕರಣಗಳಿಗೂ ಪರಿಷತ್ತಿನ ಪರಿಷ್ಕರಣಕ್ಕೂ ಅಲ್ಲಲ್ಲಿ ಕೆಲಮಟ್ಟಿಗೆ ವ್ಯತ್ಯಾಸಗಳು ಕಂಡುಬರುತ್ತವೆ. ಈ ವ್ಯತ್ಯಾಸಗಳಿಗೆ ಹಸ್ತಪ್ರತಿಗಳ ಪಾಠಭೇದಗಳೇ ಮುಖ್ಯಕಾರಣವಾಗಿರಬಹುದು. ಪರಿಷತ್ತಿನ ಪರಿಷ್ಕರಣಕರ್ತರು ಒಪ್ಪಿರುವ ಕೆಲವು ಪಾಠಗಳು ಸಂಭಾವ್ಯವಾಗಿಯೂ ಇವೆ, ಸಮರ್ಥನೀಯವಾಗಿಯೂ ಇವೆ. ಆದುದರಿಂದ ವಿರಳವಾಗಿ ಹೊರತು, ಸೂತ್ರಪಾಠವನ್ನು ಎಲ್ಲಿಯೂ ತಿದ್ದಲು ಹೋಗಿಲ್ಲ. ಆದರೆ ಪ್ರಚಲಿತ ಪರಿಷ್ಕರಣಗಳ ಪಾಠಭೇದಗಳನ್ನು ಪ್ರಸ್ತುತ ಪರಿಷ್ಕರಣದ ಅಡಿಟಿಪ್ಪಣಿಯಲ್ಲಿ, ಸಾಮಾನ್ಯರೀತಿಯಲ್ಲಿ, ದುಂಡುಕಂಸಗಳೊಳಗೆ ಸೂಚಿಸಿದೆ. ಅಲ್ಲದೆ ನಿಟ್ಟೂರ ನಂಜಯ್ಯನ

ಟೀಕೆಯ ಪಾಠ ಸಹ ಪ್ರಥಮಪರಿಷ್ಕರಣದ ಸೂತ್ರಪಾಠಕ್ಕೆ ಅನುಸಾರವಾಗಿಯೇ ಇರುವುದರಿಂದ, ಟೀಕೆಯ ಪಾಠವನ್ನು ಸಹ ಆಗ ಪರಿಷ್ಕರಿಸುವುದು ಅನಿವಾರ್ಯವಾಗುತ್ತದೆ. ಶಮದ.ದ ಅನ್ಯ ಪ್ರಚಲಿತ ಪರಿಷ್ಕರಣಗಳಲ್ಲಿ ಹೇಗೆ ಸೂತ್ರ ಮತ್ತು ಟೀಕೆಗಳ ಪಾಠಗಳಲ್ಲಿ ಸಾಮಂಜಸ್ಯವಿರುವಂತೆ ಮಾಡಿದೆಯೋ ಹಾಗೆಯೇ ಇಲ್ಲಿ ಸಹ ಪ್ರಥಮ ಪರಿಷ್ಕರಣದ ಸಂಪಾದಕರು ಯಥೋಚಿತವಾದ ಸಂಪಾದಕೀಯ ಕಾರ್ಯದಿಂದ ತಾವೂ ಮಾಡಿದ್ದಾರೆ. ಹೀಗಾಗಿ ಈ ಪ್ರತ್ಯೇಕತೆಯನ್ನು ಉಳಿಸಿಕೊಳ್ಳದೆ ವಿಧಿಯಿಲ್ಲವಾಗಿದೆ. 'ವಿಚಾರ' ಭಾಗದ ಪಾಠವನ್ನು ಸಹ ಪ್ರಥಮ ಪರಿಷ್ಕರಣದಲ್ಲಿರುವಂತೆಯೇ ಇರಿಸಿದೆ. ಟೀಕೆಯ ಪಾಠದ ವ್ಯತ್ಯಾಸಗಳೂ ಹೆಚ್ಚು ಕಡಮೆಗಳೂ ವಿವಿಧ ಪರಿಷ್ಕರಣಗಳ ನಡುವೆ ಸಾಮಾನ್ಯವಾಗಿ ಕಾಣುವುದರಿಂದ, ಇಲ್ಲಿ ಟೀಕೆಯ ಪಾಠಗಳ ಕಡೆಯಿಂದ ಸೂತ್ರಗಳ ಪಾಠಗಳ ಕಡೆಗೆ ಪಾಠಶೋಧನೆಯ ದೃಷ್ಟಿಯಿಂದ ಸಾಗುವುದು ಕಷ್ಟಕರವಾದ ವ್ಯಾಯಾಮವೇ ಸರಿ. ಪ್ರಥಮ ಪರಿಷ್ಕರಣದ ಸಂಪಾದಕರು, ಅವರೇ ತಿಳಿಸಿರುವಂತೆ, ಅಪಭ್ರಂಶ ಮತ್ತು ಅವ್ಯಯ ಪ್ರಕರಣಗಳಿಗೆ ಟೀಕೆಗಳನ್ನು ಕೈಬಿಟ್ಟಿದ್ದಾರೆ. ಅವರ ಆಶಯವನ್ನು ಇಲ್ಲಿ ಪುರಸ್ಕರಿಸಿದೆ.

ವೃತ್ತಿಯ ಪಾಠದಲ್ಲಿ ಪ್ರಚಲಿತ ಪರಿಷ್ಕರಣಗಳಿಗೂ ಪರಿಷತ್ತಿನ ಪರಿಷ್ಕರಣಕ್ಕೂ ವ್ಯತ್ಯಾಸಗಳು ಅಧಿಕವಾಗಿ ಕಂಡುಬರುತ್ತವೆ. ಅಲ್ಲದೆ ಬೇರೆ ಬೇರೆ ಪ್ರಕರಣಗಳಲ್ಲಿ ಒಂದೊಂದೆಡೆ ಹಾಗೂ ಅವ್ಯಯಪ್ರಕರಣದ ಹಲವೆಡೆ ಪ್ರಥಮ ಪರಿಷ್ಕರಣದ ಸಂಪಾದಕರು ತಾವೇ ಹೊಸದಾಗಿ ವೃತ್ತಿಗಳನ್ನು ಬರೆದು ಸೇರಿಸಿದ್ದಾರೆ. ಈ ಸಂಬಂಧದಲ್ಲಿ ಅವರ ವಿವೇಚನೆಯೇನೆಂಬುದು ಅವರ ಉಪೋದ್ಘಾತದಿಂದ ತಿಳಿಯುವುದು. ಈ ಸೇರ್ಪಡೆಗಳಿಗೆ ಔಚಿತ್ಯದ ಪ್ರಶ್ನೆ ಹೇಗೇ ಇರಲಿ, ವ್ಯತ್ಯಾಸಗಳಿಗೆ ಕಾರಣಗಳನ್ನು ಗುರುತಿಸುವುದೇ ತೊಡಕಿನ ಪ್ರಶ್ನೆ. ಕೆಲಮಟ್ಟಿಗೆ ಹಸ್ತಪ್ರತಿಗಳು ಕಾರಣವೆನ್ನಬಹುದು; ಇನ್ನು ಕೆಲಮಟ್ಟಿಗೆ ಪ್ರಸ್ತುತ ಪರಿಷತ್ತಿನ ಪರಿಷ್ಕರಣಕರ್ತರು ವಹಿಸಿದ ಸ್ವಾತಂತ್ರ್ಯವನ್ನು ಕಾರಣವೆಂದು ತಿಳಿದರೆ ತಪ್ಪಾಗಲಾರದು. ಏಕೆಂದರೆ, ಪ್ರಚಲಿತ ಪರಿಷ್ಕರಣಗಳ ವಿಸ್ತೃತ ವಿವರಣೆಗಳಿಗೆ ಇಲ್ಲಿ ಸಂಕ್ಷೇಪಗಳುಂಟು; ಶಬ್ದರೂಪಗಳಲ್ಲಿ, ಪದಸಂಘಟನೆ ಪದಚ್ಛೇದಗಳಲ್ಲಿ ಗಮನಾರ್ಹ ವ್ಯತ್ಯಾಸಗಳುಂಟು. ಈ ಕಾರಣಗಳಿಂದಾಗಿ ಈ ಪರಿಷ್ಕರಣದ ವೃತ್ತಿಯ ಪಾಠದ ಪ್ರತ್ಯೇಕತೆ ಎದ್ದು ತೋರುವಂತಿದೆ. ಈಗಿನ ಪರಿಷ್ಕರಣದಲ್ಲಿ ಸಹ ಈ ಪ್ರತ್ಯೇಕತೆಯನ್ನು, ವಿರಳವಾಗಿ ಹೊರತು, ಯಥಾರೀತಿ ಉಳಿಸಿದೆ.

ಎಂದಿನಿಂದಲೂ ವೃತ್ತಿಯ ಪಾಠದ ಸ್ವರೂಪ, ಕರ್ತೃತ್ವ ಇವು ಚರ್ಚೆಯ ವಿಷಯಗಳಾಗಿವೆ. ಈ ಚರ್ಚೆಗೆ ಪರಿಷತ್ತಿನ ಪರಿಷ್ಕರಣ ಇನ್ನಷ್ಟು ಅವಕಾಶ ಮಾಡಿಕೊಟ್ಟಿದೆ ಎನ್ನಬೇಕು. ಸೂತ್ರ ಮತ್ತು ಪ್ರಯೋಗಗಳ ಪಾಠವಿಷಯದಲ್ಲಿ ಕಂಡುಬರುವ ತೊಡಕುಗಳಿಗಿಂತ ವೃತ್ತಿಯ ಪಾಠಗಳ ತೊಡಕುಗಳು ಹೆಚ್ಚು ಸಂಕೀರ್ಣವಾದುವು ಎನ್ನಬೇಕು. ಹೀಗೆ ತಿಳಿಯುವುದಕ್ಕೆ ಇನ್ನೂ ಒಂದು ಕಾರಣವೆಂದರೆ, ವೃತ್ತಿಯ ಪಾಠದ ಭಾಷಾಸ್ವರೂಪ, ಅಲ್ಲಲ್ಲಿ ಹಳಗನ್ನಡ ಭಾಷಾಲಕ್ಷಣದ ವಿಧಿಗಳಿಗೆ ಅನುಗುಣವಾಗಿಲ್ಲದಿರುವುದು. ಈಗಾಗಲೇ ಈ ಪ್ರಶ್ನೆಗಳು ಒಂದಕ್ಕಿಂತ ಹೆಚ್ಚು ಸಲ ಸಂಶೋಧಕರನ್ನು ಕಾಡಿದೆ; ಪರಿಹಾರದ ಮಾರ್ಗಗಳು ತೋರುತ್ತಿಲ್ಲ.

ಸೂತ್ರಪಾಠ ಪ್ರೌಢವಾದುದು, ಜಟಿಲವಾದುದು; ಅಲ್ಲದೆ ಸಂಕ್ಷಿಪ್ತತೆ ಕಾರಣವಾಗಿ ಹೆಚ್ಚು ವಿವರಣೆ ಬಯಸುವಂಥದು. ಹೀಗಿರುವುದರಿಂದ ವೃತ್ತಿಯ ಪಾಠ ಅಭ್ಯಾಸಿಗಳ ಆವಶ್ಯಕತೆಗಳಿಗೆ ತಕ್ಕಂತೆ ವ್ಯತ್ಯಾಸಗಳಿಗೆ ಸಿಕ್ಕಿರುವುದು ಸಾಧ್ಯ.

ಪರಿಷತ್ತಿನ ಶಮದ.ದ ಪರಿಷ್ಕರಣದಲ್ಲಿ ಹೆಚ್ಚಿನ ದೋಷ ದೌರ್ಬಲ್ಯಗಳೂ ಅವ್ಯವಸ್ಥೆಯೂ ಕಾಣುವುದು ಪ್ರಯೋಗಗಳ ಪಾಠವಿಚಾರದಲ್ಲಿ ಎನ್ನಬೇಕು. ಅದರ ಈಗಿನ ಪರಿಷ್ಕರಣದಲ್ಲಿ ಅವನ್ನು ಪ್ರಚಲಿತ ಪರಿಷ್ಕರಣಗಳ ಆಧಾರದಿಂದ ನಿವಾರಿಸಲು ಪ್ರಯತ್ನಿಸಿದೆ. ಪ್ರಯೋಗಗಳನ್ನು ಯಥೋಚಿತವಾಗಿ ಪರಿಷ್ಕರಿಸಿ, ಛಂದೋಬದ್ಧವಾಗಿ ಮಾಡಿ ಮುದ್ರಿಸಿದೆ. ಲಭ್ಯವಿದ್ದ ಮಟ್ಟಿಗೆ ಪ್ರಯೋಗಗಳಿಗೆ ಆಕರಗಳನ್ನು ಸೂಚಿಸಿದೆ. ಹೀಗೆ ಮಾಡುವಾಗ, ಪ್ರಥಮ ಪರಿಷ್ಕರಣದಲ್ಲಿ ಸೇರಿರದೆ ಪ್ರಚಲಿತ ಪರಿಷ್ಕರಣಗಳಲ್ಲಿ ಕಾಣುವಂಥವನ್ನೂ ಈಗ ಹೊಸದಾಗಿ ಸೇರಿಸಿದೆ. ಈಗಿನ ಮಟ್ಟಿಗೆ ಪ್ರಯೋಗಪಾಠ ಕವಿರಾಜಮಾರ್ಗ ಕಾವ್ಯಾವಲೋಕನಾದಿ ಲಕ್ಷಣಗ್ರಂಥಗಳಲ್ಲಿ ಬಂದಿರುವಂತೆ ಪೂರ್ಣಪದ್ಯದ ರೂಪದಲ್ಲಿದ್ದಿತೇ ಕರ್ಣಾಟಕ ಭಾಷಾಭೂಷಣದಲ್ಲಿ ಬಂದಿರುವಂತೆ ಭಾಗಶಃ ಆದ ರೂಪದಲ್ಲಿದ್ದಿತೇ ಎಂಬ ಪ್ರಶ್ನೆಗೆ ಸಹ ಇನ್ನೂ ಉತ್ತರವನ್ನು ಕಂಡುಕೊಳ್ಳಬೇಕಾಗಿದೆ. ಹಾಗೆ ಕಂಡುಕೊಳ್ಳುವುದಕ್ಕೆ ಹಸ್ತಪ್ರತಿಗಳು ಈಗ ಹೆಚ್ಚಾಗಿ ಸಹಾಯಮಾಡುವ ಸ್ಥಿತಿಯಲ್ಲಿಲ್ಲ.

'ಶಬ್ದಮಣಿದರ್ಪಣ'ದ ಪ್ರಚಲಿತ ಪರಿಷ್ಕರಣಗಳು ತಂತಮ್ಮ ವೈಶಿಷ್ಟ್ಯಗಳೊಂದಿಗೆ ಈಗ ಪ್ರಚಾರದಲ್ಲಿರುವಂತೆಯೇ ಪರಿಷತ್ತಿನ ಪರಿಷ್ಕರಣ ಸಹ ಇರುವುದು ಸೂಕ್ತವೆಂದು ಭಾವಿಸಿ, ಈ ದ್ವಿತೀಯ ಪರಿಷ್ಕೃತ ಮುದ್ರಣದ ಸಿದ್ಧತೆಗೆ ಮೊದಲು ನಾನು ಕೆಲವು ಇತಿಮಿತಿಗಳನ್ನು ಹಾಕಿಕೊಂಡೆನು. ಅದರಲ್ಲಿ ಮುಖ್ಯವಾಗಿ ಹೆಚ್ಚು ಪರಿಷ್ಕರಣದ ಅಗತ್ಯವಿದ್ದ ಪ್ರಯೋಗಗಳ ಪಾಠದ ಕಡೆಗೇ ನನ್ನ ದೃಷ್ಟಿ ಹೆಚ್ಚಾಗಿ ಹರಿಯಿತು. ಸೂತ್ರ ವೃತ್ತಿಗಳ ಪಾಠದಲ್ಲಿ, ಅವುಗಳ ಪ್ರತ್ಯೇಕತೆಗಳನ್ನು ಉಳಿಸುವುದಕ್ಕಾಗಿ, ನಾನು ಹೆಚ್ಚಿನ ಪರಿಷ್ಕರಣಕ್ಕೆ ಹೋಗಲಿಲ್ಲ. ಇದೂ ಒಂದು ಕಾರಣವಾಗಿ ಪರಿಷತ್ತಿನ ಪರಿಷ್ಕರಣ ಹಾಗೂ ಪ್ರಚಲಿತ ಪರಿಷ್ಕರಣಗಳ ನಡುವೆ ಸೂತ್ರಸಂಖ್ಯಾನುಪೂರ್ವಿಯ ವ್ಯತ್ಯಾಸ ಹಾಗೆಯೇ ಉಳಿದುಕೊಂಡಿತು. ಈ ವ್ಯತ್ಯಾಸದ ಕಾರಣದಿಂದ ಕೃತಿಯ ಅಭ್ಯಾಸಿಗಳಿಗೆ ಕೆಲವು ತೊಡಕುಗಳುಂಟಾಗಬಹುದು. ಪ್ರಥಮ ಪರಿಷ್ಕರಣದ ಸಂಪಾದಕರು ಸೂತ್ರಸಂಖ್ಯಾನಿರ್ದೇಶನದಲ್ಲಿ ತಾವು ಅನುಸರಿಸಿದ ಕ್ರಮಗಳನ್ನು ಕುರಿತು ತಾವೇ ಬರೆದ ಉಪೋದ್ಘಾತದಲ್ಲಿ ವಿವರಿಸಿದ್ದಾರೆ. ತಮ್ಮ ಕ್ರಮಗಳ ಬಗೆಗೆ ಅವರು ಕೊಡುವ ವಿವರಣೆಗಳೂ ಸಮರ್ಥನೆಗಳೂ ಏನೇ ಇರಲಿ, ಅವು ಕೆಲವು ನ್ಯೂನಾತಿರೇಕಗಳಿಗೆ ಎಡೆಮಾಡಿವೆಯೆನ್ನಬೇಕು. ಈ ವಿಷಯದಲ್ಲಿ ನಾನು ಈಗ ಅಸಹಾಯಕ.

ಒಟ್ಟಾಗಿ ಗ್ರಂಥಪಾಠದ ವಿಷಯದಲ್ಲಿ ಪ್ರಥಮ ಪರಿಷ್ಕರಣದ ಸಂಪಾದಕರು ಸೂಚಿಸಿರುವ ಪಾಠಾಂತರ ವಿವರಣೆಗಳು ಮೊದಲಾದುವನ್ನು ಈ ದ್ವಿತೀಯ ಪರಿಷ್ಕರಣದಲ್ಲಿ ಹಾಗೆಯೇ ಉಳಿಸಿದೆ. ಹೊಸದಾಗಿ ಅಳವಡಿಸಿರುವ ಪಾಠಾಂತರ ವಿವರಣೆಗಳು ಮೊದಲಾದುವನ್ನು ದುಂಡುಕಂಸದೊಳಗೆ ತೋರಿಸಿದೆ. ಇವೆರಡೂ ಅಡಿಟಿಪ್ಪಣಿಗಳಿಗೆ ಸಂಬಂಧಿಸಿದವು. ಹಾಗೆಯೇ ಒಟ್ಟಾಗಿ ಗ್ರಂಥಪಾಠದ ಮುದ್ರಣದಲ್ಲಿ ಮೊದಲ ಪರಿಷ್ಕರಣದಲ್ಲಿ ಸೇರಿದ್ದ ಹಲವು ಸಾಮಾನ್ಯ ರೀತಿಯ ತಪ್ಪುಗಳನ್ನೂ ಅಚ್ಚಿನ ದೋಷಗಳನ್ನೂ ಈ ಪರಿಷ್ಕರಣದಲ್ಲಿ ನಿವಾರಿಸುವುದು ಸಾಧ್ಯವಾಗಿದೆ.

ಮೈಸೂರು ಟಿ.ವಿ. ವೆಂಕಟಾಚಲ ಶಾಸ್ತ್ರೀ

೨೬.೮.೧೯೯೭

# ವಿಷಯಸೂಚಿ

## ಪ್ರಯೋಗಗಳ ಆಕರಸೂಚಿ

ಅಜಿತತೀರ್ಥಕರ ಪುರಾಣತಿಲಕಂ (ರನ್ನ)
ಅನಂತನಾಥ ಪುರಾಣಂ (ಜನ್ನ)
ಆದಿಪುರಾಣಂ (ಪಂಪ)
ಎಪಿಗ್ರಾಫಿಯ ಕರ್ನಾಟಿಕ
ಕರ್ಣಾಟಕ ಕಾದಂಬರಿ (ನಾಗವರ್ಮ)
ಕರ್ಣಾಟಕ ಭಾಷಾಭೂಷಣಂ (ನಾಗವರ್ಮ)
ಕಾವ್ಯಾವಲೋಕನಂ (ನಾಗವರ್ಮ)
ಗಿರಿಜಾಕಲ್ಯಾಣ ಮಹಾಪ್ರಬಂಧಂ (ಹರಿಹರ)
ಚಂದ್ರಪ್ರಭ ಪುರಾಣಂ (ಅಗ್ಗಳ)
ಜೀವಸಂಬೋಧನಂ (ಬಂಧುವರ್ಮ)
ತ್ರೈಲೋಕ್ಯ ಚೂಡಾಮಣಿಸ್ತೋತ್ರಂ (ಬ್ರಹ್ಮಶಿವ)
ನೀತಿಕಂದಂ (ಬೊಪ್ಪಣಪಂಡಿತ)?
ಪುಷ್ಪದಂತ ಪುರಾಣಂ (ಗುಣವರ್ಮ)
ಭುವನೈಕ ರಾಮಾಭ್ಯುದಯಂ (ಪೊನ್ನ)?
ಮಲ್ಲಿನಾಥ ಪುರಾಣಂ (ನಾಗಚಂದ್ರ)
ಯಶೋಧರಚರಿತಂ (ಜನ್ನ)
ರಾಮಚಂದ್ರಚರಿತ ಪುರಾಣಂ (ನಾಗಚಂದ್ರ)
ಲೀಲಾವತೀ ಪ್ರಬಂಧಂ (ನೇಮಿಚಂದ್ರ)
ವಿಕ್ರಮಾರ್ಜುನವಿಜಯಂ (ಪಂಪ)
ಶಾಂತಿಪುರಾಣಂ (ಪೊನ್ನ)
ಶೂದ್ರಕಂ (ಗುಣವರ್ಮ)
ಶ್ರೀವೀರವರ್ಧಮಾನ ಪುರಾಣಂ (ನಾಗವರ್ಮ)
ಸಮಯ ಪರೀಕ್ಷೆ (ಬ್ರಹ್ಮಶಿವ)
ಸಾಹಸಭೀಮ ವಿಜಯಂ (ರನ್ನ)
ಸೂಕ್ತಿಸುಧಾರ್ಣವಂ (ಮಲ್ಲಿಕಾರ್ಜುನ)

## ಸಂಕೇತಗಳ ವಿವರಣಸೂಚಿ

| | |
|---|---|
| ಇ. | ಇತ್ಯಾದಿ |
| ಉದಾ. | ಉದಾಹರಣೆ |
| ಏ. ವ. | ಏಕವಚನ |
| ತೃ.ವಿ. | ತೃತೀಯಾವಿಭಕ್ತಿ |
| ಧರ್ಮನಾ. | ಮಧುರನ 'ಧರ್ಮನಾಥಪುರಾಣಂ' |
| ಪ. | ಪದ್ಯ |
| ಪ್ರ. | ಪ್ರಯೋಗ |
| ಪ್ರಾ. | ಪ್ರಾಕೃತ |
| ಬ. ವ. | ಬಹುವಚನ |
| ಭಾಷಾಭೂ. | 'ಕರ್ಣಾಟಕ ಭಾಷಾಭೂಷಣಂ' |
| ಮಹಾನೇ. | ಮಹಾಬಲನ 'ನೇಮಿನಾಥಪುರಾಣಂ' |
| ವ. | ವಚನ |
| ವೃ. | ವೃತ್ತಿ |
| ಶ.ದ. / ಶಮದ. | 'ಶಬ್ದಮಣಿದರ್ಪಣಂ' |
| ಶಬ್ದಸ್ಮ. | ಶಬ್ದಸ್ಮೃತಿ |
| ಶಬ್ದಾನು. | 'ಕರ್ಣಾಟಕ ಶಬ್ದಾನುಶಾಸನಂ' |
| ಸ.ವಾ. | ಸಮಾಪ್ತಿವಾಕ್ಯಂಗಳ್ |
| ಸಂ. | ಸಂಸ್ಕೃತ |
| ಸೂ. | ಸೂತ್ರ |

## 'ಶಬ್ದಮಣಿದರ್ಪಣಂ' ಪರಿಷ್ಕರಣಗಳ ಸೂಚಿ

J. Garrett : 1868, Government Press, Bangalore.

F. Kittel : 1872, C. Stolz, Basel Mission Book & Tract Depository, Mangalore.

: 1899, Basel Mission Book & Tract Depository, Mangalore (Second and Revised Edition) ; 1990, Asian Educational Services, New Delhi, Madras (Reprint).

: 1920, Kanarese Mission Book & Tract Depository, Mangalore (ಮೂರನೆಯ ಸುಧಾರಿಸಲ್ಪಟ್ಟ ಆವೃತ್ತಿ ; Re - edited by P. Mangesha Rao; ನಾಲ್ಕನೆಯ ಆವೃತ್ತಿ, 1965, ಶಂ.ಶಿ. ಕುಲಕರಣಿ, ಧಾರವಾಡ).

? : 1920, ಕರ್ಣಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು.

ಎ. ವೆಂಕಟರಾವ್ ಮತ್ತು
ಎಚ್. ಶೇಷ ಅಯ್ಯಂಗಾರ್ : 1939, University of Madras, Madras (Reprint 1973).

ಡಿ. ಎಲ್ ನರಸಿಂಹಾಚಾರ್ : 1959, ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು-೪ (ಪುನರ್ಮುದ್ರಣಗಳು: ೧೯೬೪, ೧೯೬೮, ೧೯೭೧, ೧೯೭೩, ೧೯೮೯).

ತ.ಸು. ಶಾಮರಾಯ ಮತ್ತು ನಂಜೇಗೌಡ : 1975, ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಎಚ್. ಗ್ರಂಥಮಾಲೆ, ಮೈಸೂರು.

ಡಿ.ಕೆ. ಭೀಮಸೇನ ರಾವ್ : 1977, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಎಲ್. ಬಸವರಾಜು : 1986, ಶ್ರೀ ಚಿನ್ಮೂಲಾದ್ರಿ ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ.

ಟಿ.ವಿ. ವೆಂಕಟಾಚಲ ಶಾಸ್ತ್ರೀ : 1994, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ
ಕನ್ನಡ ಭಾಷೆ ಸಾಹಿತ್ಯಗಳ ಉಜ್ಜೀವನಕ್ಕೆ ಶ್ರಮಿಸಿದ
ಪರಿಷತ್ಪಂಡಿತರು

**ಕಡಬ ನಂಜುಂಡ ಶಾಸ್ತ್ರಿಗಳು**

**ತೋಗೆರೆ ನಂಜುಂಡ ಶಾಸ್ತ್ರಿಗಳು**

ಇವರ ಸ್ಮರಣೆಗೆ

# ಉಪೋದ್ಘಾತ

## ಮೊದಲನೆಯ ಮುದ್ರಣ

ಇದುವರೆಗೆ ದೊರೆತಿರುವ ಕನ್ನಡ ವ್ಯಾಕರಣಗಳಲ್ಲಿ ಕರ್ಣಾಟಕ ಶಬ್ದಶಾಸ್ತ್ರವನ್ನು ವಿಸ್ತಾರವಾಗಿ ಪ್ರತಿಪಾದಿಸುವ ಗ್ರಂಥವು ಶಬ್ದಮಣಿದರ್ಪಣವೊಂದೇ ಎಂದು ಕರ್ಣಾಟಕ ಕವಿಚರಿತೆಯಲ್ಲಿ ಹೇಳಿದೆ.[೧] ನಾಗವರ್ಮನ ಕಾವ್ಯಾವಲೋಕನವೂ ಕರ್ಣಾಟಕ ಭಾಷಾಭೂಷಣವೂ ಶಬ್ದಮಣಿದರ್ಪಣಕ್ಕಿಂತಲೂ ಪುರಾತನವಾಗಿದ್ದರೂ - ಎಂದರೆ, ೧೨ನೆಯ ಶತಮಾನದ ಮಧ್ಯಭಾಗದಲ್ಲಿ ರಚಿತವಾಗಿದ್ದರೂ ಅಷ್ಟು ವಿಸ್ತಾರವಾಗಿಲ್ಲ. ಶಬ್ದಮಣಿದರ್ಪಣದಿಂದೀಚೆಗೆ ಹುಟ್ಟಿದ ಶಬ್ದಾನುಶಾಸನವು ಸಂಸ್ಕೃತದಲ್ಲಿ ಬರೆಯಲ್ಪಟ್ಟಿರುವುದರಿಂದ ಕನ್ನಡಿಗರಿಗೆ ಅಷ್ಟು ಸುಲಭವಲ್ಲದಿರುವುದು ಮಾತ್ರವಲ್ಲದೆ ಪ್ರಯೋಗಗಳ ವಿಷಯದಲ್ಲಿ ಶಬ್ದಮಣಿದರ್ಪಣಕ್ಕೆ ಸಮಾನವಾಗಲಾರದು.

ಕನ್ನಡ ಭಾಷೆಯು ಬಹಳ ಪ್ರಾಚೀನವಾದುದೆಂಬುದಕ್ಕೆ ಕರ್ಣಾಟಕ ಕವಿಚರಿತೆಯಲ್ಲಿ ಅನೇಕ ಪ್ರಮಾಣಗಳಿವೆ. ಸಮಂತಭದ್ರನೆಂಬ ಕನ್ನಡ ಕವಿಯು ಸುಮಾರು ೧೩೮ನೆಯ ಇಸವಿಯಲ್ಲಿ ಇದ್ದಿರಬೇಕೆಂದು ಕವಿಚರಿತ್ರಕಾರರಾದ ರಾ. ನರಸಿಂಹಾಚಾರ್ಯರು ಊಹಿಸುತ್ತಾರೆ.[೨] ಕನ್ನಡವನ್ನು ಉಚ್ಛ್ರಾಯ ಸ್ಥಿತಿಗೆ ತಂದವರು ಜೈನಮತದವರೆಂದು ನಿಸ್ಸಂಶಯವಾಗಿ ಹೇಳಬಹುದು. ಇದುವರೆಗೆ ದೊರೆತಿರುವ ಕನ್ನಡ ಗ್ರಂಥಗಳಲ್ಲಿ ಅಲಂಕಾರ ಗ್ರಂಥವಾದ ಕವಿರಾಜಮಾರ್ಗವೆಂಬುದು ಅತ್ಯಂತ ಪುರಾತನವಾದುದು. ಇದನ್ನು ಬರೆದ ನೃಪತುಂಗನು ೮೧೪ನೆಯ ಇಸವಿಯಿಂದ ೮೭೭ರ ವರೆಗೆ ರಾಜ್ಯಭಾರ ಮಾಡಿದ ರಾಷ್ಟ್ರಕೂಟ ವಂಶದ ಜೈನ ದೊರೆ. ಈತನ ರಾಜಧಾನಿ ಮಾನ್ಯಖೇಟಪುರ. ಇದು ಈಗಿನ ಷೋಲಾಪುರದ ಆಗ್ನೇಯಕ್ಕೆ ಸುಮಾರು ೬೦ ಮೈಲುಗಳ ದೂರದಲ್ಲಿ ಹೈದರಾಬಾದು ಸೀಮೆಯಲ್ಲಿರುವ 'ಮಾಲ್ ಖೇಡ್' ಎಂಬುದು ಆಗಿರಬಹುದೆಂದು ಹೇಳುತ್ತಾರೆ.[೩] ನೃಪತುಂಗನು ಕವಿರಾಜಮಾರ್ಗದಲ್ಲಿ ತನ್ನ ಕಾಲಕ್ಕೆ ಹಿಂದೆ ಹಳಗನ್ನಡವಿದ್ದಿತೆಂದು ಹೇಳುವುದರಿಂದಲೂ ಅವನು ಉದಾಹರಣೆಗಾಗಿ ಕೊಟ್ಟಿರುವ ಪದ್ಯಗಳ ಗಾಂಭೀರ್ಯದಿಂದಲೂ ಕನ್ನಡಭಾಷೆಯು ನೃಪತುಂಗನ ಕಾಲಕ್ಕೆ ಬಹಳ ಹಿಂದೆಯೇ ಉತ್ತಮಸ್ಥಿತಿಗೆ ಬಂದಿರಬೇಕೆಂದು ತಿಳಿಯಬರುತ್ತದೆ.[೪]

ಶಬ್ದಮಣಿದರ್ಪಣವನ್ನು ಬರೆದ ಕೇಶಿರಾಜನು ಸುಮಾರು ೧೨೬೦ನೆಯ ಇಸವಿಯಲ್ಲಿದ್ದಿರಬೇಕೆಂದು ಕವಿಚರಿತೆಯಲ್ಲಿ ಹೇಳಿದೆ.[೫] ಈತನು ಜೈನಮತದವನು; ಸತ್ಕವಿಗಳ ವಂಶದಲ್ಲಿ ಹುಟ್ಟಿದವನು[೬]; ಈ ವ್ಯಾಕರಣವಲ್ಲದೆ ಬೇರೆ ಐದು ಗ್ರಂಥಗಳನ್ನು ಬರೆದಿರುವಂತೆ ಹೇಳಿಕೊಂಡಿದ್ದಾನೆ.[೭] ತನ್ನ ವ್ಯಾಕರಣಕ್ಕೆ ಗಜಗ, ಗುಣನಂದಿ, ಮನಸಿಜ, ಅಸಗ, ಚಂದ್ರಭಟ್ಟ, ಗುಣವರ್ಮ, ಶ್ರೀವಿಜಯ, ಹೊನ್ನ, ಹಂಪ, ಸುಜನೋತ್ತಂಸ - ಈ ಕವಿಗಳ ಗ್ರಂಥಗಳು

~~~~~~~~~~~~~~~~~~

೧. ಸಂಪುಟ ೧, ಪುಟ ೩೧೩, ೨. ಕವಿಚರಿತೆ, ಸಂಪುಟ ೧, ಪುಟ ೧. ೩. ಕವಿಚರಿತೆ, ಸಂಪುಟ ೧, ಪುಟ ೧೬. ೪. ಕವಿಚರಿತೆ, ಸಂಪುಟ ೧, ಪುಟ ೩೧೧. ೫. ಸಂಪುಟ ೧, ಪುಟ ೧೯. ೬. ಶಬ್ದಮಣಿದರ್ಪಣ, ಪುಟ ೨, ಪದ್ಯ ೨. ೭. ಶ. ದ., ಪುಟ ೨೯೩, ಪದ್ಯ ೨.
~~~~~~~~~~~~~~~~~~

ಲಕ್ಷ್ಯವೆಂದು ಹೇಳಿರುವುದಲ್ಲದೆ[೧], ರನ್ನ, ನಾಗಚಂದ್ರ, ನಾಗವರ್ಮ, ನೇಮಿಚಂದ್ರ, ಹಂಸರಾಜ, ಬ್ರಹ್ಮಶಿವ - ಈ ಕವಿಗಳ ಗ್ರಂಥಗಳಿಂದಲೂ ಉದಾಹರಣೆಗಾಗಿ ಪದ್ಯಗಳನ್ನು ತೆಗೆದುಕೊಂಡಿದ್ದಾನೆ; ನಾಗವರ್ಮನ ಶಬ್ದಸ್ಮೃತಿಯ ಅನುಪೂರ್ವಿಯನ್ನೇ ಅನುಸರಿಸಿದ್ದರೂ ಶಬ್ದಮಣಿದರ್ಪಣದಲ್ಲಿ ಹೆಚ್ಚು ವಿಷಯಗಳನ್ನು ಸೇರಿಸಿ ವಿಸ್ತಾರವಾಗಿ ಬರೆದಿರುವಂತೆ ತೋರುತ್ತದೆ. ಇದರ ಸೂತ್ರಗಳ ವೃತ್ತಿಯನ್ನು ಗ್ರಂಥಕರ್ತನೇ ಬರೆದಿರುವನು. ಟೀಕೆ ಮತ್ತು ವಿಚಾರ ಮಾತ್ರ ನಿಟ್ಟೂರು ನಂಜಯ್ಯನು ಬರೆದುದು. ಈ ನಂಜಯ್ಯನು ಶಬ್ದಾನುಶಾಸನದಿಂದ ಸೂತ್ರಗಳನ್ನು ಉದಾಹರಣೆಗಾಗಿ ತೆಗೆದುಕೊಂಡಿರುವುದರಿಂದ[೨] ಕೇಶಿರಾಜನಿಗಿಂತಲೂ ಬಹಳ ಈಚಿನವನೆಂದು ತೋರುತ್ತದೆ.

ಕೇಶಿರಾಜನ ಕಾಲದಲ್ಲಿಯೇ 'ಱ' ಅಕ್ಷರದ ಪ್ರಯೋಗದ ವಿಷಯವಾಗಿ ಸಂಶಯವು ಹುಟ್ಟಿತ್ತೆಂದು ಕಂಡುಬರುವುದು. ಈ ಅಕ್ಷರವಿರುವ ಪದಗಳ ಪಟ್ಟಿಯನ್ನು ಶಬ್ದಮಣಿದರ್ಪಣದಲ್ಲಿ ಕೊಟ್ಟಿರುವುದು ಈ ಕಾರಣದಿಂದಲೇ ಇರಬೇಕು. 'ೞ' ಅಕ್ಷರದ ಪ್ರಯೋಗದ ವಿಷಯವನ್ನು ಎತ್ತದೆ ಬಿಟ್ಟಿರುವುದರಿಂದ ಅದು ಆಗ ರೂಢಿಯಲ್ಲಿದ್ದಿರಬಹುದು.[೩]

ಶಬ್ದಮಣಿದರ್ಪಣದ ಈ ನಮ್ಮ ಪ್ರತಿಯನ್ನು ಮೈಸೂರು 'ಓರಿಯಂಟಲ್ ಲೈಬ್ರರಿ'ಯಲ್ಲಿರುವ ಮೂರು ಓಲೆಯ ಪ್ರತಿಗಳ ಆಧಾರದಿಂದಲೂ, ಮಂಗಳೂರಿನಲ್ಲಿ ಅಚ್ಚಾಗಿರುವ ಎರಡು ಪುಸ್ತಕಗಳ ಸಹಾಯದಿಂದಲೂ ಮುದ್ರಿಸಲಾಗಿದೆ. ಒಂದು ಓಲೆಯ ಪ್ರತಿಯಲ್ಲಿ ಮಾತ್ರ ನಿಟ್ಟೂರು ನಂಜಯ್ಯನ ಟೀಕೆಯೂ ಇರುತ್ತದೆ. ಇದಕ್ಕೆ 'ಗ' ಎಂಬ ಸಂಜ್ಞೆಯನ್ನೂ, ಮಿಕ್ಕ ಎರಡಕ್ಕೂ 'ಕ', 'ಖ' ಎಂಬ ಸಂಜ್ಞೆಯನ್ನೂ ನಮ್ಮ ಪ್ರತಿಯಲ್ಲಿ ಕೊಟ್ಟಿದೆ. ಸೂತ್ರಗಳ ಆನುಪೂರ್ವಿಯು ಎಲ್ಲಾ ಪ್ರತಿಗಳಲ್ಲಿಯೂ ಒಂದೇ ವಿಧವಾಗಿಲ್ಲ; ಅಚ್ಚಾದ ಪ್ರತಿಗಳಲ್ಲಿರುವ ಕೆಲವು ಸೂತ್ರಗಳಿಗೆ 'ಅನುಕ್ತಸೂತ್ರಂ' ಎಂದು ಸಂಕೇತಮಾಡಿದ್ದಾರೆ.[೪] ಈ ಸೂತ್ರಗಳು ಓಲೆಯ ಪ್ರತಿಗಳಲ್ಲಿ ದೊರೆಯುವುದಿಲ್ಲ. ಇಂತಹ ಸೂತ್ರಗಳ ಕಡೆಯಲ್ಲಿ ಸೂತ್ರಸಂಖ್ಯೆಯನ್ನಿಡದೆ ನಕ್ಷತ್ರಚಿಹ್ನೆಯನ್ನು ನಮ್ಮ ಪುಸ್ತಕದಲ್ಲಿ ಕೊಟ್ಟಿದೆ. ೧೪೦ನೆಯ ಸೂತ್ರದ ಪೂರ್ವೋತ್ತರಾರ್ಧಗಳು ಮುದ್ರಿತಪ್ರತಿಗಳಲ್ಲಿ ಹಿಂದುಮುಂದಾಗಿದ್ದುದನ್ನು ಓಲೆಯ ಪ್ರತಿಗಳಲ್ಲಿರುವಂತೆ ಸರಿಮಾಡಿದೆ; ಇದೇ ಕ್ರಮವು ಸರಿಯೆಂದು ವೃತ್ತಿ ಟೀಕೆಗಳ ಪರ್ಯಾಲೋಚನೆಯಿಂದಲೂ ನಿರ್ಧರಿಸಬಹುದು. ೨೪೦ನೆಯ ಸೂತ್ರದ ಮುಂದಕ್ಕಿರುವ "ಕೂರಪ್ರಾಕಾರಂ" ಎಂಬ ಸೂತ್ರವು ಎಲ್ಲಾ ಪ್ರತಿಗಳಲ್ಲಿಯೂ ದೊರೆವುದರಿಂದ ಇದಕ್ಕೆ ಮಾತ್ರ ೨೪೦ (a) ಎಂಬ ಸಂಜ್ಞೆಯನ್ನು ಕೊಟ್ಟಿದೆ. ಮೊದಲಲ್ಲಿರುವ ಹತ್ತು ಮೂಲಪದ್ಯಗಳನ್ನೂ ಕೊನೆಯಲ್ಲಿರುವ ಸಮಾಪ್ತಿವಾಕ್ಯಗಳೆಂಬ ಐದು ಪದ್ಯಗಳನ್ನೂ, ಸೂತ್ರಲಕ್ಷಣವಿಲ್ಲವಾಗಿ, ಸೂತ್ರಸಂಖ್ಯೆಗೆ ಸೇರಿಸಿಲ್ಲ. ಪ್ರಯೋಗಸಾರವೆಂಬ ನಿಘಂಟುವಿನ ಮೊದಲಲ್ಲಿರುವ ಕಂದಕ್ಕೆ ಸೂತ್ರಸಂಖ್ಯೆಯನ್ನು ಕೊಟ್ಟಿದೆ. ಅಂತು, ಸೂತ್ರಸಂಖ್ಯೆಯನ್ನು ಮುದ್ರಿತ ಪ್ರತಿಗಳಲ್ಲಿರುವ ಸಂಖ್ಯೆಗೆ ಹೆಚ್ಚು ಕಡಿಮೆ ಮಾಡದೆ, ೩೨೩ನ್ನೇ ಇಡಲಾಗಿದೆ.

~~~~~~~~~~~~~~~~~~~

೧. ಶ. ದ. ಪುಟ ೩, ಪದ್ಯ ೫. ೨. ಶ. ದ. ಪುಟ ೭೪, ೭೫, ೧೯೬, ೨೦೩... ೩. ಕಿಟ್ಟೆಲ್ ಅವರ ಶಬ್ದಮಣಿದರ್ಪಣ (೧೮೭೨). ಪುಟ IX. ೪. ಶ. ದ. ಪುಟ ೧೦೬, ೨೧೮.
~~~~~~~~~~~~~~~~~~~

ಗ್ರಂಥದ ಭಾಗಗಳಿಗೆ ಅಚ್ಚಿನ ಪ್ರತಿಗಳಲ್ಲಿ ‘ಅಧ್ಯಾಯಂ’ ಎಂದು ಹೆಸರಿಟ್ಟಿರುತ್ತಾರೆ. ಆದರೆ “ಕ್ರಮದಿಂದೆ ಸಂಧಿ ನಾಮಂ . . . . . . . ಸಂಧಿ ಶಬ್ದಮಣಿದರ್ಪಣದೊಳ್”[೧] ಎಂದು ಕೇಶಿರಾಜನೇ ಸಂಕೇತಮಾಡಿರುವುದರಿಂದ ಈ ನಮ್ಮ ಪ್ರತಿಯಲ್ಲಿ ‘ಸಂಧಿ’ ಎಂದೇ ಸಂಕೇತಮಾಡಿದೆ. ಅಚ್ಚುಪುಸ್ತಕಗಳಲ್ಲಿ ‘ಪ್ರಯೋಗಸಾರಮೆಂಬ ಶಬ್ದಾರ್ಥನಿರ್ಣಯಂ’ ಎಂಬುದಕ್ಕೆ ‘೯ನೆಯ ಅಧ್ಯಾಯಂ’ ಎಂದು ಹೇಳಿದ್ದರೂ, ಓಲೆಯ ಪ್ರತಿಗಳಲ್ಲಿ ಈ ಸಂಖ್ಯೆಯನ್ನು ಕೊಡದೆ ಕೊನೆಯಲ್ಲಿ “ಪ್ರಯೋಗಸಾರಮೆಂಬ ಶಬ್ದಾರ್ಥನಿರ್ಣಯಂ ಪರಿಸಮಾಪ್ತಂ” ಎಂದು ಮಾತ್ರ ಇರುವುದರಿಂದಲೂ, ಗ್ರಂಥದ ಮೊದಲಿನಲ್ಲಿ ಕೊಟ್ಟಿರುವ “ಕ್ರಮದಿಂದೆ ಸಂಧಿ ನಾಮಂ . . . . . . .” ಎಂಬ ಪ್ರತಿಜ್ಞಾವಾಕ್ಯದಲ್ಲಿ ಈ ವಿಷಯವನ್ನು ಹೇಳದಿರುವುದರಿಂದಲೂ, ಈ ನಮ್ಮ ಪ್ರತಿಯಲ್ಲಿ ‘ಪ್ರಯೋಗಸಾರ’ವನ್ನು ೨ನೆಯ ಪರಿಶಿಷ್ಟವನ್ನಾಗಿ ಕೊಟ್ಟಿದೆ. ೨೩ನೆಯ ಸೂತ್ರಕ್ಕೆ ಸಂಬಂಧಪಟ್ಟ ೮೬ ವಿಶಿಷ್ಟ ಶಬ್ದಗಳ ಪಟ್ಟಿಯನ್ನು ೧ನೆಯ ಪರಿಶಿಷ್ಟವಾಗಿಯೂ, ಪಾಠಕರ ಸೌಕರ್ಯಕ್ಕಾಗಿ ಅಕಾರಾದಿ ವರ್ಣಾನುಕ್ರಮದಲ್ಲಿಯೂ ಮುದ್ರಿಸಿದೆ.

ವೃತ್ತಿಯನ್ನು, ಓಲೆಯ ಪ್ರತಿಗಳನ್ನನುಸರಿಸಿ ಸಾಧ್ಯವಾದ ಮಟ್ಟಿಗೆ ಪರಿಷ್ಕರಿಸಲಾಗಿದೆ. ಕೆಲವು ಸೂತ್ರಗಳಿಗೆ ಯಾವ ಪ್ರತಿಯಲ್ಲಿಯೂ ವೃತ್ತಿಯನ್ನೇ ಕೊಟ್ಟಿಲ್ಲ. ಹೀಗೆ ಬಿಟ್ಟಿರುವುದು, ಸೂತ್ರವು ಸುಲಭವೆಂದಲ್ಲ; ಏಕೆಂದರೆ, ಕೆಲವು ಕಡೆ ಇಂತಹವುಗಳಿಗೂ[೨] “ಇದರ್ಕಿದೆ ವೃತ್ತಿ” ಎಂದು ಬರೆದಿದೆ. ಆದುದರಿಂದ ವೃತ್ತಿಯನ್ನು ಕೊಡದಿರುವ ಸೂತ್ರಗಳಿಗೆ ಹೊಸದಾಗಿ ವೃತ್ತಿಯನ್ನು ಬರೆದು ಅಲ್ಲಲ್ಲಿಯೇ ಸೂಚಿಸಿರುತ್ತದೆ. ಅವ್ಯಯ ಪ್ರಕರಣದಲ್ಲಿ ಒಂದೆರಡಕ್ಕೆ ವಿನಾ ಮಿಕ್ಕ ಸೂತ್ರಗಳಿಗೆ ವೃತ್ತಿಯೇ ದೊರೆತಿಲ್ಲವಾಗಿ ಇವುಗಳ ವೃತ್ತಿಯನ್ನು ಸಮಗ್ರವಾಗಿ ಬರೆದಿದೆ.

ಅಚ್ಚಿನ ಪುಸ್ತಕಗಳಲ್ಲಿ ಕೊಟ್ಟಿರುವ ಹಲವು ಪ್ರಯೋಗಗಳಲ್ಲಿ ಅಶುದ್ಧಗಳು ಕಂಡುಬಂದುದರಿಂದ ಇತರ ಪ್ರತಿಗಳ ಸಾಹಾಯ್ಯದಿಂದ ಅಂತಹವನ್ನು ಸಾಧ್ಯವಾದ ಮಟ್ಟಿಗೆ ಪರಿಷ್ಕರಿಸಿದೆ; ಸಂಶಯವಾದುವುಗಳ ಪಕ್ಕದಲ್ಲಿ ಪ್ರಶ್ನಚಿಹ್ನೆ(?)ಯನ್ನು ಇಟ್ಟಿದೆ. ಕೆಲವು ಉದಾಹರಣ ವಾಕ್ಯಗಳು ಪದ್ಯರೂಪಗಳಾಗಿ ತೋರಿದುದರಿಂದ ಅವನ್ನು ಪದ್ಯರೂಪವಾಗಿಯೇ ಕೊಟ್ಟಿದೆ; ಕೆಲವನ್ನು ಯತ್ನವಿಲ್ಲದೆ ಹಾಗೆಯೇ ಬಿಡಬೇಕಾಯಿತು. ಕೆಲವು ಉದಾಹರಣೆಗಳಿಗೆ ಮಾತ್ರ ಆಕರವು ದೊರೆತರೂ, ಹಲವಕ್ಕೆ ದೊರೆತಿಲ್ಲವಾಗಿ, ಆಕರವನ್ನು ತೋರಿಸಲಾಗಲಿಲ್ಲ. ಧಾತುಪಾಠವನ್ನು, ಮೊದಲಿನಂತೆ ಸ್ವರಾಂತ ವ್ಯಂಜನಾಂತವಾಗಿಯೇ ಇಟ್ಟಿದ್ದರೂ, ಧಾತುಗಳನ್ನು ಪ್ರತ್ಯೇಕವಾಗಿ ವರ್ಣಾನುಕ್ರಮದಲ್ಲಿ ಕೊಟ್ಟು, ಕೆಲವಕ್ಕೆ ಕನ್ನಡದ ಅರ್ಥವನ್ನು ಬರೆದಿದೆ. ತದ್ಭವ ಪ್ರಕರಣದಲ್ಲಿಯೂ ಆಯಾ ಸೂತ್ರಗಳ ಪ್ರಯೋಗಗಳಲ್ಲಿರುವ ತದ್ಭವಗಳನ್ನು ವರ್ಣಾನುಪೂರ್ವಿಯಾಗಿ ತೋರಿಸಿದೆ.

ಟೀಕೆಯಲ್ಲಿ ಪೌನರುಕ್ತ್ಯಗಳು ಬಹಳವಾಗಿರುವುದರಿಂದಲೂ, ಕೆಲವೆಡೆಗಳಲ್ಲಿ ಅಶುದ್ಧಗಳಿರುವುದರಿಂದಲೂ, ತಕ್ಕಮಟ್ಟಿಗೆ ಪರಿಷ್ಕರಿಸಿ ಬರೆದಿದೆ. ಅಪಭ್ರಂಶ ಮತ್ತು ಅವ್ಯಯ ಪ್ರಕರಣಗಳಲ್ಲಿ ಸೂತ್ರವು ವೃತ್ತಿಯಿಂದಲೇ ಸುಲಭವಾಗಿ ಅರ್ಥವಾಗುವುದರಿಂದ, ಟೀಕೆಯನ್ನು ಕೊಟ್ಟಿಲ್ಲ. ಮುದ್ರಣದ ತಪ್ಪುಗಳು ಬೀಳದಂತೆ ಮಾಡಬೇಕೆಂದು ಎಷ್ಟು ಪ್ರಯತ್ನಮಾಡಿದರೂ

~~~~~~~~~~~~~~~~~~~

೧. ಶ. ದ., ಪುಟ ೫, ಪದ್ಯ ೧. ೨. ಶ. ದ. ಸೂ. ೪೫, ೫೧, ೧೭೧.
~~~~~~~~~~~~~~~~~~~

ಸಾಧ್ಯವಾಗದೆ, ಕೆಲವು ತಪ್ಪುಗಳು ಬಿದ್ದಿವೆ. ಅವುಗಳಲ್ಲಿ ಕೆಲವನ್ನು ತಿದ್ದಿ, ಮಿಕ್ಕುವನ್ನು ಶುದ್ಧಿಪತ್ರಿಕೆಯಲ್ಲಿ ಕೊಟ್ಟಿದೆ. ವೃತ್ತಿ, ಟೀಕೆ, ಪ್ರಯೋಗ - ಇವುಗಳನ್ನು ಹೆಚ್ಚಾಗಿ ತಿದ್ದಬಾರದೆಂದು ಮೊದಲು ಪ್ರತಿಜ್ಞೆ ಮಾಡಿಕೊಂಡು ಹೊರಟದ್ದರಿಂದ ಅಲ್ಲಲ್ಲಿ ಕೆಲವು ಅಸಂಬದ್ಧಗಳು ಕಾಣಬರಬಹುದು. 'ಆಗುವದು', 'ಎನಿಸುವದು' ಎಂಬ ರೂಪಗಳೂ, ಕೆಲವು ಕಡೆ 'ಪಂಣೆಲೆ' 'ಕಂಮಱಂ' 'ಸಂನಿಧಾನ' ಎಂಬ ರೂಪಗಳೂ, ಮತ್ತೆ ಕೆಲವು ಕಡೆ 'ಱೞ' ಗಳಿಗೆ ಪ್ರತಿಯಾಗಿ 'ರಳ'ಗಳೂ ಬಿದ್ದಿವೆ.

ಪಾಠಕರು ಸೂತ್ರಗಳನ್ನೂ ಪ್ರಯೋಗವಾಕ್ಯಗಳನ್ನೂ ಥಟ್ಟನೆ ಹುಡುಕಿ ತೆಗೆಯಲು ಅನುಕೂಲವಾಗುವಂತೆ ಇವುಗಳ ಸೂಚೀಪತ್ರಗಳನ್ನು ಹೊಸದಾಗಿ ಸೇರಿಸಿದೆ.

ಈ ಪ್ರತಿಯಲ್ಲಿ ಬಿದ್ದಿರಬಹುದಾದ ತಪ್ಪುಗಳನ್ನು ಪ್ರಾಜ್ಞರು ತೋರಿಸಿಕೊಟ್ಟಲ್ಲಿ, ಕೃತಜ್ಞತೆಯಿಂದ ಅಂಗೀಕರಿಸಿ, ಅವನ್ನು ಮುಂದಣ ಮುದ್ರಣದಲ್ಲಿ ನೇರ್ಪಡಿಸುವೆವು.

**ಸಂಪಾದಕರು.**

ಕರ್ಣಾಟಕ ಸಾಹಿತ್ಯ ಪರಿಷತ್ತು
ಬೆಂಗಳೂರು,
ಸಿದ್ಧಾರ್ಥಿ ಸಂ|| ಪುಷ್ಯ ಬ|| ೫.

# ಉಪೋದ್ಘಾತ

## ಎರಡನೆಯ ಮುದ್ರಣ

೧

ಕನ್ನಡ ಭಾಷೆಯ ವರ್ಣವ್ಯವಸ್ಥೆಯ ವಿಚಾರ ಆ ಭಾಷೆಯ ವ್ಯಾಕರಣ ಪ್ರಕ್ರಿಯೆಗಳ ಸಮೀಚೀನವಾದ ವಿಮರ್ಶೆಗೆ ಅಧಿಷ್ಠಾನ. ಹಾಗೆಂದೇ ಕೇಶಿರಾಜನು ಆ ವಿಚಾರವನ್ನು ಮೊದಲಲ್ಲಿಯೇ ಕೈಗೆತ್ತಿಕೊಂಡು, ಇತರ ವೈಯಾಕರಣರಿಗಿಂತ ಹೆಚ್ಚು ಪರಿಷ್ಕಾರವಾಗಿ ಅದನ್ನು ನಿರ್ವಹಿಸಿದ್ದಾನೆ. ವಸ್ತು ಮತ್ತು ನಿರೂಪಣಕ್ರಮಗಳಲ್ಲಿ ಅವನಿಗೆ ನಾಗವರ್ಮನ ವ್ಯಾಕರಣಗಳೇ ಮಾದರಿಯಾಗಿ ಒದಗಿವೆ, ಭಿತ್ತಿಯಾಗಿ ಸಹಾಯ ಮಾಡಿವೆ. ನಾಗವರ್ಮನ 'ಶಬ್ದಸ್ಮೃತಿ'ಯ ಹ್ರಸ್ವತೆಯನ್ನೂ 'ಕರ್ಣಾಟಕ ಭಾಷಾಭೂಷಣ'ದ ಪ್ರಯೋಗೋದಾಹರಣ ಕಾರ್ಪಣ್ಯವನ್ನೂ ದಾಟಿ ಅವನು ಮುನ್ನಡೆದಿದ್ದಾನೆ.

ಸವರ್ಣವಿಧಾನ, ನಾಮಿ, ಯೋಗವಾಹಗಳು, ಪ್ಲುತಸ್ವರ ಇತ್ಯಾದಿ ಪ್ರಕ್ರಿಯೆಗಳಿಗೆ ಕನ್ನಡ ವ್ಯಾಕರಣದಲ್ಲಿ ಅಂತಹ ಪ್ರಸ್ತುತತೆ ಇರಲಿಲ್ಲವೆಂಬುದು ನಿಜ; ಆದರೆ ಕ್ಷಳದ ಪ್ರತ್ಯೇಕತೆಯನ್ನು ಗುರುತಿಸಿ ಕನ್ನಡ ವರ್ಣಮಾಲೆಯಲ್ಲಿ ಅದರ ಸ್ಥಾನವನ್ನು ವಿವೇಚಿಸಿರುವುದು ಮೆಚ್ಚತಕ್ಕುದಾಗಿದೆ. ಹಾಗೆಯೇ ಕುಳ ಱಟಿ ಘಟಿತ ಶಬ್ದಗಳ ವಿಷಯದಲ್ಲಿ ಕವಿಗಳಿಗೂ ಅಭ್ಯಾಸಿಗಳಿಗೂ ತಲೆದೋರುತ್ತಿದ್ದ ಸಂದೇಹಗಳನ್ನು ಲಕ್ಷಿಸಿ, ಅವುಗಳ ರಚನೆ, ಮೂಲ ಮತ್ತು ಅರ್ಥವಿವರಣೆಗಳನ್ನು ವಿಶದಪಡಿಸುವ ಒಂದು ಪ್ರಾಮಾಣಿಕ, ವಿಸ್ತೃತ ಪ್ರಯತ್ನವನ್ನು ಅವನು ಕೈಕೊಂಡಿದ್ದಾನೆ. ಕಾಲಕ್ರಮದಲ್ಲಿ ಘಟಿಸಿದ ಸಹಜ ಭಾಷಿಕ ವ್ಯತ್ಯಯಗಳು ಕಾರಣವಾಗಿ ಈ ಧ್ವನಿಗಳು ಶಾಸನ ಮತ್ತು ಗ್ರಾಂಥಿಕ ಸಾಹಿತ್ಯದ ರಚನೆಗಳಲ್ಲಿ ಬಿಡಿರೂಪ, ಬದ್ಧರೂಪ ಮತ್ತು ಪ್ರಾಸಸ್ಥಾನ ಇವುಗಳಲ್ಲಿ ಒಂದು ಇನ್ನೊಂದರ ಸ್ಥಾನವನ್ನು ಹಿಡಿದು ಬಳಕೆಯಾಗುತ್ತಿದ್ದುದು ಕೇಶಿರಾಜನ ಕಾಲಕ್ಕೆ ಮೊದಲೇ ಸಾಮಾನ್ಯವಾಗಿತ್ತು. ಹಳಗನ್ನಡ ಭಾಷೆಯ ಸೌಷ್ಠವ, ಸೌಂದರ್ಯಗಳನ್ನು ಕಾಪಾಡುವ ಉದ್ದೇಶದಿಂದ ಅವನು ಈ ವಿಚಾರಕ್ಕೆ ಹೆಚ್ಚು ಗಮನವಿತ್ತಿರುವುದು ವಿದಿತ. ತನಗೇ ಕೆಲವೆಡೆ ಸಂದೇಹಗಳಿರುವುದನ್ನು ಅವನು ತಿಳಿಸಿರುವುದು ಅವನ ಪ್ರಾಮಾಣಿಕತೆಯನ್ನು ತೋರಿಸುವಂತೆಯೇ, ಇಂದಿನ ವರ್ಣನಾತ್ಮಕ ಭಾಷಾವಿಜ್ಞಾನಿಯ ಯಥಾತಥರೂಪಗಳ ಉಲ್ಲೇಖ ಪದ್ಧತಿಯ ಅನುಸರಣೆಯನ್ನೂ ತೋರಿಸುತ್ತದೆ. ಇಂತಹ ಯಾವ ವಿಮರ್ಶಕ ದೃಷ್ಟಿಯೂ ಇಲ್ಲದೆ, ಭಟ್ಟಾಕಳಂಕ ಕನ್ನಡ ವರ್ಣಮಾಲೆಯಲ್ಲಿರುವುದು ಒಂದೇ ಳಕಾರವೆಂದು ಮುಂತಾಗಿ ಹೇಳಿರುವುದು ಆಶ್ಚರ್ಯಕರವಾಗಿದೆ.

ಕೇಶಿರಾಜನ ಕಾಲಕ್ಕೆ ದ್ರಾವಿಡ ಭಾಷೆಗಳ ತೌಲನಿಕ ಅಧ್ಯಯನದ ದೃಷ್ಟಿ ಅಪರಿಚಿತವಾಗಿದ್ದುದರಿಂದ ಆತನು ಳ - ಱ ಕಾರ ಘಟಿತ ಶಬ್ದಗಳ ಸ್ಪಷ್ಟತೆಯ ವಿಚಾರದಲ್ಲಿ, ಮಹಾಪ್ರಾಣಾಕ್ಷರಗಳ ಅಸ್ತಿತ್ವದ ವಿಚಾರದಲ್ಲಿ ಹಿಡಿದ ದೃಷ್ಟಿ ಸಾಂಪ್ರದಾಯಿಕವಾಯಿತು, ಸಂಸ್ಕೃತ ವ್ಯಾಕರಣದ ಪ್ರಭಾವಲಯದಲ್ಲಿ ದೇಶ್ಯದ ಸ್ವರೂಪವನ್ನು ವಿವೇಚಿಸುವಂತಾಯಿತು

ಎಂದು ಹೇಳಬೇಕಾಗಿದೆ. ಮಹಾಪ್ರಾಣಗಳನ್ನು ವರ್ಣಮಾಲೆಗೆ ಸೇರಿಸುವಾಗ, ಅವನು ನಾಗವರ್ಮನ ವಿಹಿತ ಸೂಚನೆಯನ್ನು ತಕ್ಕ ರೀತಿಯಿಂದ ಗ್ರಹಿಸದೆ ಹೋದುದು ಒಂದು ಲೋಪವಾದರೆ, ತನ್ನ ಅಚ್ಚಕನ್ನಡದ ವ್ಯಾಪ್ತಿಗೆ ಕನ್ನಡ ಶಬ್ದಭಂಡಾರದ ಪ್ರಾಕೃತಾದಿ ಶಬ್ದಗಳನ್ನೂ ಸೇರಿಸಿಕೊಂಡುದು ಇನ್ನೊಂದು ದುಡುಕು ಎನ್ನಬೇಕು. ಆದರೆ ಪ್ರಾಚೀನ ಕವಿಪ್ರಯೋಗಗಳನ್ನೂ ಲೋಕರೂಢಿಯ ಅದ್ಯತನ ಶಿಷ್ಟಪ್ರಯೋಗಗಳನ್ನೂ ಮಾನ್ಯಮಾಡುವ ಒಂದು ಗೌರವದೃಷ್ಟಿಯೂ ಇಲ್ಲಿ ಕೆಲಸಮಾಡಿರುವಂತಿದೆ.

ಕೇಶಿರಾಜ ತನ್ನ ಕಾಲದವರೆಗೆ ಬೆಳೆದು ಬಂದಿದ್ದ ಹಳಗನ್ನಡ ಭಾಷೆಯನ್ನು ವಿಶ್ಲೇಷಣೆಗೆ ಸ್ವೀಕರಿಸಿದ್ದಾನೆ; ಎಂದರೆ ಶಬ್ದಮಣಿದರ್ಪಣದ ಸಾಮಗ್ರಿಯ ವ್ಯಾಪ್ತಿ ಆರಂಭಕಾಲದಿಂದ ೧೩ನೆಯ ಶತಮಾನದ ಮಧ್ಯಭಾಗದವರೆಗೆ. ಹಳಗನ್ನಡದ ರಚನೆಗಳೇ ಆದರೂ ಗದ್ಯಗ್ರಂಥಗಳನ್ನಾಗಲಿ ಶಾಸನಗಳನ್ನಾಗಲಿ ಅವನು ಬಹುಶಃ ಬಳಸಿರುವಂತೆ ತೋರುವುದಿಲ್ಲ; ಹಾಗೆಯೇ ವಚನವಾಙ್ಮಯ, ದೇಶ್ಯಛಂದೋಬಂಧಗಳ ರಚನೆಗಳನ್ನು ಸಹ. ಕೆಲವು ಜನಸಾಮಾನ್ಯಪ್ರಚಲಿತ ಮಾತು ವಾಕ್ಯಗಳನ್ನೂ ಸ್ವಕಲ್ಪಿತ ಮಾತು ವಾಕ್ಯಗಳನ್ನೂ ಅಲ್ಲಲ್ಲಿ ಉಪಯೋಗಿಸಿರುವಂತಿದೆ. ಆಕರಗಳಲ್ಲಿ ಚಿಕ್ಕದು-ದೊಡ್ಡದು ಎಂಬ, ಕಾವ್ಯ-ಶಾಸ್ತ್ರ ಎಂಬ ಭೇದಭಾವವನ್ನು ತೋರಿಸಿಲ್ಲ; ಉದ್ದೇಶಪೂರ್ವಕವೆಂದು ಹೇಳಲಾಗದಿದ್ದರೂ, ಜೈನಕವಿಗಳ ಕೃತಿಗಳಿಗೆ ಪ್ರಾಶಸ್ತ್ಯ ಸಂದಿರುವುದು ಸುವಿದಿತ. ಲಕ್ಷ್ಯಗಳಿಗೆ ಅವನು ವಿಶೇಷವಾಗಿ 'ಕಾವ್ಯಾವಲೋಕನ' 'ಸೂಕ್ತಿಸುಧಾರ್ಣವ' ಗಳನ್ನು ಲಕ್ಷಿಸಿರುವುದು ಸಹ ವಿದಿತವೇ.

ಕೇಶಿರಾಜನು ಸಂಧ್ಯಕ್ಷರಗಳನ್ನೂ ಬಿಂದುವನ್ನೂ ಮಹಾಪ್ರಾಣಗಳನ್ನೂ ಪಕಾರದ ವಿಕಲ್ಪವಾದ ಹಕಾರವನ್ನೂ ಕನ್ನಡ ವರ್ಣಮಾಲೆಗೆ ಸೇರಿಸಿರುವುದನ್ನು ಆಧುನಿಕ ಭಾಷಾ ವಿಜ್ಞಾನಿಗಳು ಒಪ್ಪುವುದಿಲ್ಲ. ದ್ರಾವಿಡ ಭಾಷೆಗಳ ಹಿನ್ನೆಲೆಯಲ್ಲಿ ಅವರು ಎತ್ತುವ ಆಕ್ಷೇಪಗಳನ್ನು ಸೂಕ್ತವೆನ್ನಬಹುದು. ಇದನ್ನು ಲಕ್ಷಿಸಿದರೆ, ೧೦ ಸ್ವರಗಳು, ೧೫ ವರ್ಗೀಯ ವ್ಯಂಜನಗಳು ಮತ್ತು ೮ ಅವರ್ಗೀಯ ವ್ಯಂಜನಗಳು ಕನ್ನಡ ವರ್ಣಗಳಾಗಿ (೩೩ ವರ್ಣಗಳು) ತೇಲುತ್ತವೆ.

ಹಳಗನ್ನಡದ ಮೂಲ ಭಾಷಿಕರಚನೆಯಲ್ಲಿ, ಯಾವ ಯಾವ ರೀತಿಯಲ್ಲಿ ಶೈಥಿಲ್ಯಗಳು ಹೊಕ್ಕಿವೆಯೆಂಬುದನ್ನು ಕೇಶಿರಾಜ ಅವಕಾಶ ದೊರೆತ ಹಾಗೆಲ್ಲ ಗುರುತಿಸಿದ್ದಾನೆ. ವ್ಯಂಜನಾಂತ ಶಬ್ದಗಳು ಸ್ವರಾಂತಗಳಾಗಿ, ಲಕಾರಾಂತ ಶಬ್ದಗಳು ಳ ಕಾರಾಂತಗಳಾಗಿ, ಸರೇಫ ಸಂಯುಕ್ತ ಶಬ್ದಗಳು ಸಜಾತೀಯದ್ವಿತ್ವಗಳೋ ರೇಫರಹಿತಗಳೋ ಆಗಿ ಕವಿಪ್ರಯೋಗಗಳಲ್ಲಿ ಬಂದಿರುವುದು, ಬರುತ್ತಿರುವುದು ಅವನ ಲಕ್ಷ್ಯಕ್ಕೆ ಬಂದಿವೆ. ಅದರಿಂದ ಕನ್ನಡ ಭಾಷೆಯ ಮರ್ಯಾದೆಗೆ ಕುಂದೆಂದು ಅವನು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸೂಚಿಸಿದ್ದಾನೆ. ಹೀಗೆ ಸೂಚಿಸುವಾಗ ಪ್ರಾಚೀನರೇ ಆತನ ಆದರ್ಶ; ಸ್ವಾತಂತ್ರ್ಯಪ್ರಿಯರಾದ ಆಧುನಿಕರ ವಿಷಯದಲ್ಲಿ ಅವನ ಆಕ್ಷೇಪ. ಆದರೆ ಕೆಲವೆಡೆ ಪ್ರಾಚೀನರಿಂದಲೇ ಮಾನ್ಯವಾದ, ರೂಢಿಯಲ್ಲಿ ಕೂಡ ಪ್ರಚಲಿತವಾದ, ವಿಕಲ್ಪವೂ ಶಿಥಿಲವೂ ಆದ ರೂಪಗಳನ್ನು ಸಹ ತಾನೂ ಒಪ್ಪಿ, ವ್ಯಾಕರಣದ ಸಮ್ಮತಿಯನ್ನೂ ಕೊಟ್ಟಿದ್ದಾನೆ. ಆ ಮೂಲಕ ವೈಯಾಕರಣನು ಪ್ರಯೋಗಶರಣನೆಂಬುದನ್ನು ಸಾರಿದ್ದಾನೆ. ಅಂತಹ ರೂಪಗಳನ್ನು ಒಪ್ಪುವಾಗ,

ಕವಿಪ್ರಯೋಗಗಳನ್ನು ಅವನು ಹೆಸರೆತ್ತಿ ಪ್ರಸ್ತಾವಿಸದೆ ಸಾಮಾನ್ಯ ಭಾಷಿಕಪ್ರಯೋಗಗಳೆಂಬಂತೆ ಉದಾಹರಿಸುವುದು ಅವನ ಸದಭಿರುಚಿಗೆ ಸಾಕ್ಷ್ಯವಾಗಿದೆ.

ಹಳಗನ್ನಡದ ಬೆಳೆವಣಿಗೆಯಲ್ಲಿ ಕಾಲಕಾಲಕ್ಕೆ ಉಂಟಾದ ವ್ಯತ್ಯಾಸಗಳಲ್ಲಿ ಸಬಿಂದುಕ ಶಬ್ದಗಳು ಒಮ್ಮೆ ಸಬಿಂದುಕ, ಇನ್ನೊಮ್ಮೆ ಅಬಿಂದುಕ ಎಂಬಂತೆ ವಿಕಲ್ಪವಾಗಿ ಬಳಕೆಯಾಗುತ್ತಿದ್ದ ರೂಢಿಯೂ ಒಂದು. ಈ ರೂಢಿಗನುಸಾರವಾಗಿ, ನಿತ್ಯಬಿಂದುಗಳೆಂದವು ಅವನ ಆದರ್ಶಪ್ರಾಯ ಆಕರಗಳಲ್ಲಿ ಬಹುಶಃ ವೈಕಲ್ಪ್ಯವಿಲ್ಲದೆ ಬಳಕೆಯಾಗುತ್ತಿದ್ದು, ವಿಕಲ್ಪಬಿಂದುಗಳು ಪರಿವರ್ತನೆಯ ಹಂತದಲ್ಲಿರುವಂಥವು ಎಂದು ಸಾಮಾನ್ಯವಾಗಿ ಹೇಳಬಹುದಾದರೂ ಈ ವೈಕಲ್ಪ್ಯ ಚೆನ್ನಾಗಿ ನೆಲೆಗೊಂಡ ರೂಢಿಯೇ ಆಗಿರಬೇಕು ಎಂಬುದನ್ನು ಅವನು ಅವಕ್ಕೆ ದೊರಕಿಸಿರುವ ವೈಯಾಕರಣ ಸಮ್ಮತಿಯಿಂದ ತಿಳಿಯಬಹುದಾಗಿದೆ. ಈ ವಿಷಯದಲ್ಲಿಯೂ ವರ್ಣನಾತ್ಮಕ ಭಾಷಾವಿಜ್ಞಾನಿಯಂತೆ ನಡೆದುಕೊಂಡಿದ್ದಾನೆ. ಶಿಥಿಲಪ್ರಯೋಗವೆಂದೋ ಆಕ್ಷೇಪಾರ್ಹವಾದ ಅಶಿಷ್ಟ ಪ್ರಯೋಗವೆಂದೋ ಕೇಶಿರಾಜನು ಅವನ್ನು ಕರೆದಿಲ್ಲವೆಂಬುದನ್ನು ಗಮನಿಸಿದರೆ ಇದು ವಿದಿತವಾಗುತ್ತದೆ. ಅನಂತರ ಕಾಲದಲ್ಲಿ ಕೆಲವು ನಿತ್ಯಬಿಂದುಗಳೂ ಎಲ್ಲ ವಿಕಲ್ಪಬಿಂದುಗಳೂ ಆಯಾ ಶಬ್ದದಲ್ಲಿಯ ಬಿಂದುವಿನ ಸ್ಥಾನವನ್ನು ಅನುಸರಿಸಿ ಪೂರ್ತಿಯಾಗಿ ಅಬಿಂದುಕಗಳಾಗಿ ಪರಿಣಮಿಸಿವೆಯೆನ್ನುವುದು ಈಗ ತಿಳಿದ ವಿಷಯ. ಸಬಿಂದುಕ ಶಬ್ದಗಳಲ್ಲಿ ಬಿಂದುಚ್ಯುತಿಯ ಸಾಧ್ಯಾಸಾಧ್ಯತೆಗಳನ್ನು ಕೇಶಿರಾಜನೇ ವಿಮರ್ಶಿಸಬಹುದಾಗಿತ್ತಲ್ಲ ಎಂದು ನಾವು ಅವನನ್ನು ಪ್ರಶ್ನಿಸುವಂತಿಲ್ಲ. ಈ ಪ್ರಕ್ರಿಯೆಗೆ ಸರಿಹೊಂದುವಂತೆ, ಪ್ರಭೇದ ಒಡೆದು ಕಾಣಲೆಂದು ಅವನು ನಿಯತದ್ವಿತ್ವ ಮತ್ತು ಶಿಥಿಲದ್ವಿತ್ವದ ಶಬ್ದಗಳನ್ನು ಮುಂದೆ ನಿರೂಪಿಸಿದ್ದಾನೆ.

ಶಿಥಿಲದ್ವಿತ್ವದ ಪ್ರಾಸಂಗಿಕ ಪ್ರಸ್ತಾವನೆ 'ಶಬ್ದಸ್ಮೃತಿ'ಯಲ್ಲಿ ಬಂದಿದ್ದರೂ (ಪ.೨೫೯), ಆ ಪ್ರಕ್ರಿಯೆಯ ಪ್ರತ್ಯೇಕವೂ ವಿಸ್ತೃತವೂ ಆದ ವಿವೇಚನೆ ಮೊದಲಸಲ ಕಂಡುಬರುವುದು 'ಶಬ್ದಮಣಿದರ್ಪಣ'ದಲ್ಲಿಯೇ. ಇತರ ದ್ರಾವಿಡ ಭಾಷೆಗಳಲ್ಲಿ ಕಾಣದ ಒಂದು ವಿಶೇಷ ಭಾಷಿಕಲಕ್ಷಣವಿದು. ಇದನ್ನು ಗುರುತಿಸಿದುದು ಕೇಶಿರಾಜನ ಭಾಷಾಪ್ರೌಢಿಮೆ ಸೂಕ್ಷ್ಮವಿಶ್ಲೇಷಣದೃಷ್ಟಿಗಳನ್ನು ಎತ್ತಿತೋರಿಸುತ್ತದೆ. ಗೌಣವಾಗಿ ಕವಿಗೆ ಛಂದಸ್ಸಿನ ಸೌಕರ್ಯಕ್ಕೆ ಒದಗುವುದನ್ನು ಒಪ್ಪಬಹುದಾದರೂ, ಮುಖ್ಯವಾಗಿ ಇದೊಂದು ವ್ಯಾಕರಣಪ್ರಕ್ರಿಯೆಯೇ ಆಗಿದೆ. ಛಂದಸ್ಸಿನ ಸೌಕರ್ಯವೆನ್ನುವುದು ಆಯಾ ಕವಿಯ ಅಪೇಕ್ಷೆ ಅಗತ್ಯಗಳಿಗೆ ಅನುಗುಣವಾಗಿ ಸಾಂದರ್ಭಿಕವೆಂಬುದರಿಂದಲೂ ಪೂರ್ವನಿರ್ದಿಷ್ಟ ಪರಿಸರಗಳಲ್ಲಿ ಬಲುಮಟ್ಟಿಗೆ ಸಾರ್ವತ್ರಿಕವಾಗಿ ಈ ಪ್ರಕ್ರಿಯೆ ಕಂಡುಬರುವುದು ಪ್ರಯೋಗಸಿದ್ಧವಾದುದರಿಂದಲೂ ಹೀಗೆ ತಿಳಿಯಲು ಅವಕಾಶವಾಗಿದೆ. ಕೇಶಿರಾಜನು ಶಿಥಿಲದ್ವಿತ್ವದ ಸಾಮಾನ್ಯ ಪರಿಸರಗಳನ್ನೂ ವಿರಳವಾದ ಅಪವಾದಗಳನ್ನೂ ವಿವರವಾಗಿ ನಿರೂಪಿಸಿದ್ದರೂ, ಅವುಗಳಿಗೆ ಭಾಷಿಕ ವಿಶ್ಲೇಷಣೆಯ ಮೂಲಕ ಕಾರಣಗಳನ್ನು ಸ್ಪಷ್ಟಪಡಿಸುವುದಿಲ್ಲ. ಆದರೆ ಆಧುನಿಕ ಭಾಷಾವಿಜ್ಞಾನಿಗಳು ಆ ಕಾರಣಗಳನ್ನು ಗುರುತಿಸಿದ್ದಾರೆ. ವರ್ತ್ಸ್ಯವಾಗಿರುವ ರೇಫೆಯನ್ನು ಸಂಪ್ರದಾಯದಂತೆ ಮೂರ್ಧನ್ಯವಾಗಿ ತಿಳಿದರೆ, ಪೂರ್ವಭಾಗಾಂತ್ಯದ ಧ್ವನಿಗಳೆಲ್ಲ ಮೂರ್ಧನ್ಯಗಳು; ಪರಭಾಗದ ಆದಿಯ ಧ್ವನಿಗಳೆಲ್ಲ ಮೂರ್ಧನ್ಯೇತರಗಳು / ಸರಳಾಕ್ಷರಗಳು/ ಘೋಷವರ್ಣಗಳು. ಹೀಗಾಗಿ ಇಲ್ಲಿ ಏರ್ಪಡುವ ದ್ವಿತ್ವ ನೈಸರ್ಗಿಕವಾದ ಶಿಥಿಲತ್ವವನ್ನು ಪಡೆಯಬಹುದಾಗಿದೆ. ಅಲ್ಲದೆ ಬಹುಪಾಲು ಶಿಥಿಲದ್ವಿತ್ವಶಬ್ದಗಳು ನಡುಗನ್ನಡದಲ್ಲಿ

ದ್ವಿತ್ವವಿರಳಗಳಾಗಿ ಪರಿವರ್ತಿಸಿರುವುವಲ್ಲದೆ, ಸಜಾತೀಯದ್ವಿತ್ವಗಳಾಗಿ ಅಲ್ಲ ಎನ್ನುವುದನ್ನೂ ಗಮನಿಸಬೇಕು. ಈ ಪ್ರಕ್ರಿಯೆಯ ಪ್ರಸ್ತಾವನೆಯಲ್ಲಿ ಭಟ್ಟಾಕಳಂಕ ಕೇಶಿರಾಜನನ್ನು ಅನುಸರಿಸಿ, ಒಂದೆರಡು ಅಂಶಗಳಲ್ಲಿ ಮುನ್ನಡೆದಿದ್ದಾನೆ (ಶಬ್ದಾನು. ಸೂ. ೭೩-೭೬).

ಕೆಲವು ದೇಶ್ಯಪ್ರಕೃತಿಗಳಲ್ಲಿ ವು > ಮ್ ಎಂಬ ಅಂತ್ಯವರ್ಣದ ವ್ಯತ್ಯಯವುಂಟೆಂದು ಕೇಶಿರಾಜ ಗುರುತಿಸಿದ್ದಾನೆ. ಆಯಾ ಪ್ರಕೃತಿಯಲ್ಲಿ 'ವು' ಮೂಲಘಟಕದ ಅವಶ್ಯವಾದ ಭಾಗವಲ್ಲವಾದ್ದರಿಂದ ಇದು ಹೀಗಾಗಿದೆ. ಕೇಶಿರಾಜ ಇಲ್ಲಿ ತಪ್ಪು ಸರಿಗಳನ್ನು ಹೇಳಲು ಹೋಗದೆ, ಇಂದಿನ ವರ್ಣನಾತ್ಮಕ ಭಾಷಾವಿಜ್ಞಾನಿಯಂತೆ ರೂಪಗಳನ್ನು ಮಾತ್ರ ಉಲ್ಲೇಖಿಸಿದ್ದಾನೆ. ಇದಕ್ಕೆ ಪೂರ್ವಕವಿಪ್ರಯೋಗಗಳುಂಟೆಂಬುದೇ ಕಾರಣ. ರೂಢಿಯ ಮಾತಿನ ವರಸೆಯೂ ಕಾಕುವೂ ಅವನ ಲಕ್ಷ್ಯವನ್ನು ತಪ್ಪಿಸಿಲ್ಲ ಎನ್ನುವುದಕ್ಕೆ "ಗೊರವನಲ್ಲ ಪೊಗಟಿನ್" ಎಂಬುದು ಒಳ್ಳೆಯ ಸಾಕ್ಷ್ಯ. ಈ ಕಾಕು ಬಹುಶಃ ಪ್ರಶ್ನಸಂಬಂಧಿ; ಎಂದರೆ, "ಗೊರವನಲ್ಲನೊ / ಗೊರವನಲ್ತೋ? ಪೊಗಟಿನ್" ಎಂಬುದಾಗಿ ಪ್ರಶ್ನೆ-ಉತ್ತರರೂಪದ್ದು (ಹೋಲಿಸಿ: ಪಂಪಭಾರತಂ ೧-೭೭).

## ೨

ಕೇಶಿರಾಜನ ಸಂಧಿವಿಚಾರದ ನಿರೂಪಣೆ ಸ್ವರವ್ಯಂಜನಭೇದ, ಪದಮಧ್ಯ ಪದಾಂತ್ಯಭೇದ ಎಂಬ ಕೆಲವು ಸಂಸ್ಕೃತ ಪಾರಿಭಾಷಿಕ ಅಂಶಗಳನ್ನು ಬಿಟ್ಟರೆ, ಕನ್ನಡ ಭಾಷೆಯ ರಚನೆಗೆ ವಿಶಿಷ್ಟವಾಗಿರುವಂಥದು, ಸ್ವೋಪಜ್ಞವಾದುದು. ನಾಗವರ್ಮನೇ ಇಲ್ಲಿಗೆ ಮೇಲ್ಪಂಕ್ತಿ. ಶಮದ.ದ ಉದಾಹರಣೆಗಳು ಸಂಖ್ಯೆಯಲ್ಲಿ ಸಮೃದ್ಧವಾಗಿದ್ದು, ಕನ್ನಡ ಸಂಧಿಕಾರ್ಯದ ವೈಲಕ್ಷಣ್ಯಗಳನ್ನು ಬಿಡಿಸಿ ತೋರಿಸಲು ಅವು ಸಮರ್ಥವಾಗಿವೆ. ಸಂಧಿಲಕ್ಷಣವನ್ನು ಹೇಳುವಾಗ "ಎರಡುಂ ಪಲವುಂ ವರ್ಣಂ। ಪರಸ್ಪರಂ ಕೂಡುವಂದಮದು ಸಂಧಿ ವಲಂ" (ಸೂ. ೪೯) ಎಂದಿರುವುದರ ಆಶಯ ಸ್ಪಷ್ಟವಿಲ್ಲ. ಸಂಧಿಗೆ ವಿಷಯವಾಗುವ ಸಂಧ್ಯಕ್ಷರಗಳನ್ನೂ ಸ್ವರಸಹಿತ ವ್ಯಂಜನವನ್ನೂ ಗಣನೆಗೆ ತೆಗೆದುಕೊಂಡರೆ ಅದನ್ನು ಸಮರ್ಥಿಸಬಹುದೇನೋ (ಇಂದ್ರಂಗೆ + ಐರಾವತಂ; ಅಱು + ಕವಿ; ನೀರ್ + ಪೊನಲ್ ಇ.)?

ಸಂಧಿಕಾರ್ಯಗಳೇನೂ ಇಲ್ಲದಿದ್ದರೂ, ಸಾರ್ಥಕಶಬ್ದಗಳ ಅನುಸ್ಯೂತವಾದ ಬರಹ ಉಚ್ಚಾರಣೆಗಳು ಕೂಡ ಇಲ್ಲಿ ಸಂಧಿವಿವಕ್ಷೆಗೆ ಒಳಪಟ್ಟಿದ್ದು, ಇದರಿಂದ ಸಂಧಿಲಕ್ಷಣದ ವ್ಯಾಪ್ತಿ ಹಿಗ್ಗಿದಂತಾಗಿದೆ; ಶಿಥಿಲಗೊಂಡಂತೆಯೂ ಆಗಿದೆ. ಶಬ್ದಗಳ ಅವಿರಲೋಚ್ಚಾರಣೆ ಸಂಗಮಗಳ ಸಂದರ್ಭಗಳಿಗೆ ಪ್ರಾಚೀನ ಕಾಲದ ಲೇಖನ/ ಪಠನ ಪದ್ಧತಿಯೂ ಶ್ರವ್ಯತೆಯ ಕಾಂಕ್ಷೆಯೂ ಬಲುಮಟ್ಟಿಗೆ ಕಾರಣಗಳಾಗಿವೆ. ಶ್ರುತಿಸಹ್ಯಸಂಧಿ ಕನ್ನಡ ಭಾಷೆಯ ವಿಶೇಷಲಕ್ಷಣವೆಂದಿರುವುದನ್ನು (ಶಮದ.ಸ.ವಾ.೫) ಇಲ್ಲಿ ನೆನೆಯಬೇಕು.

ಕನ್ನಡ ಭಾಷೆಯಲ್ಲಿ ಸಂಸ್ಕೃತ ಶಬ್ದಗಳೂ ಸಮಾಸಗಳೂ ವಿಪುಲವಾಗಿವೆಯೆಂಬುದನ್ನು ಬಲ್ಲವನಾಗಿಯೂ ಕೇಶಿರಾಜನು ಅಲ್ಲಿಯ ಸ್ವರ ವ್ಯಂಜನ ಸಂಧಿಗಳಲ್ಲಿ ಯಾವುದನ್ನೂ ಶಬ್ದಮಣಿದರ್ಪಣದಲ್ಲಿ ತರುವುದಿಲ್ಲ ಎನ್ನುವುದೇ ಮೊದಲು ಮೆಚ್ಚಬೇಕಾದ ಸಂಗತಿ. ಹಳಗನ್ನಡ ಭಾಷೆಯ ರಚನೆಯ ವಿಶ್ಲೇಷಣೆಯೇ ಅವನ ಸಂಕಲ್ಪವೆಂಬುದು

ಇದರಿಂದಲೂ ವಿದಿತವಾಗುತ್ತದೆ. ಈ ವಿಶ್ಲೇಷಣೆಯಲ್ಲಿ ಸಾಮಾನ್ಯ ಸ್ವರಸಂಧಿಗಳ ಲೋಪಾಗಮಗಳನ್ನೂ ವ್ಯಂಜನಸಂಧಿಯ ಆದೇಶಗಳನ್ನೂ ಪ್ರಕೃತಿಭಾವದ ಪ್ರತ್ಯೇಕತೆಯನ್ನೂ ನಿರೂಪಿಸಿರುವುದೇ ಅಲ್ಲದೆ, ಪದ್ಯಾರ್ಧ, ವಾಕ್ಯವೇಷ್ಟನ, ಅನುಕರಣಾತ್ಮಕಶಬ್ದ, ದ್ವಿತ್ವಾಕ್ಷರ, ದುಷ್ಪ್ರತೀತಿ, ಶ್ರುತಿಕಷ್ಟ ಈ ಕೆಲವು ಸಂಧಿವಿಸಂಧಿ ಸಂದರ್ಭಗಳನ್ನು, ಬಲುಮಟ್ಟಿಗೆ ಸಂಧಿಕಾರ್ಯಗಳ ವ್ಯಾಪ್ತಿಗೆ ಬಾರದೆ ಇರುವವನ್ನು ಸಹ, 'ಕವಿರಾಜಮಾರ್ಗ', 'ಕಾವ್ಯಾವಲೋಕನ' ಈ ಲಕ್ಷಣಗ್ರಂಥಗಳಿಂದ ಪ್ರೇರಣೆ ಪಡೆದು ತಪ್ಪದೆ ನಿರೂಪಿಸಿದೆ. ಛಂದಸ್ಸು, ಅಲಂಕಾರ, ಸ್ವರಾಘಾತವಿಧಿ, ಸಹಜೋಚ್ಚಾರ ವಿರಾಮ ಇಂತಹ ವ್ಯಾಕರಣೇತರಗಳಾದ ಕೆಲವು ಅಂಶಗಳು ಇಲ್ಲಿ ಕಾರ್ಯಪ್ರವೃತ್ತವಾಗಿವೆಯೆನ್ನುವುದನ್ನು ನಾವು ಗಮನಿಸಬೇಕು. ಕೇಶಿರಾಜನ ವ್ಯಾಕರಣದ ಶಿಸ್ತು ಶಬ್ದರಚನೆಯ ಕಟ್ಟುಪಾಡುಗಳನ್ನು ವಿಶ್ಲೇಷಿಸುವಲ್ಲಿ ಜಡವಲ್ಲ; ಅದು ನಾನಾ ಭಾಷಿಕಚರ್ಯೆ ಗಳನ್ನು ತನ್ನ ತಕ್ಕೆಗೆ ತೆಗೆದುಕೊಳ್ಳುತ್ತದೆ. ಅವನಿಗೆ ಧ್ವನಿಗಳ ಶ್ರವ್ಯಗುಣ, ಶಬ್ದಗಳ ಹಿತಕರವಾದ ಸಂಘಟನೆ, ಶಬ್ದಶಯ್ಯೆಯ ಸೌಕುಮಾರ್ಯ, ಉಚ್ಚಾರಸೌಕರ್ಯ ಇವುಗಳ ವಿಷಯದಲ್ಲಿ ಹೆಚ್ಚಿನ ಆಸಕ್ತಿ. ಒಟ್ಟಿನಲ್ಲಿ ಭಾಷಾಲಾಲಿತ್ಯದ ಬಗೆಗೆ ಅವನ ವಿವೇಕ ಸದಭಿರುಚಿಗಳು ಮನೋಜ್ಞವಾದವು.

'ಶಬ್ದಮಣಿದರ್ಪಣ'ದ ದ್ವಿತ್ವಾಕ್ಷರದ ಸಂಧಿದೋಷಕ್ಕೆ ಕೊಟ್ಟ ಉದಾ. ಭಿನ್ನಪಾಠದ 'ಕವಿರಾಜಮಾರ್ಗ'ದ ಉದಾಹರಣೆಯೇ. ಪ್ರಾಚೀನಕವಿಗಳಿಂದೆತ್ತಿದ ಬೇರೆ ಉದಾಹರಣೆಗಳನ್ನು ಕೊಡಬಹುದಾಗಿದ್ದಿತು. ಈ ಸಂದರ್ಭದಲ್ಲಿ ಬಂದಿರುವ 'ಅರೋಚಿ', 'ಸತೃಣಾಭ್ಯವಹಾರಿ'ಗಳ ಪ್ರಸ್ತಾವ ವಾಮನನ 'ಕಾವ್ಯಾಲಂಕಾರ ಸೂತ್ರವೃತ್ತಿ' ಯೊಳಗಿನದು. ಕವಿಗಳ ಸಾಮಾನ್ಯ ಅರ್ಹತೆ ಹೇಳುವ ಅಲ್ಲಿಯ ಮಾತನ್ನು (೧-೨-೧) ಇಲ್ಲಿ ಒಂದು ಅಮುಖ್ಯ ವ್ಯಾಕರಣಪ್ರಕ್ರಿಯೆಗೆ ಕೇಶಿರಾಜ ಬಳಸಬೇಕಾಗಿರಲಿಲ್ಲ. ಹಾಗೆ ನೋಡಿದರೆ, ಇದು ಛಂದಸ್ಸಿನ ಪರಿಧಿಗೆ ಸೇರಿದ ವಿರಾಮದ ವಿಷಯ. ಕೇಶಿರಾಜನ ಅಭ್ಯಾಸದ ಹರಹನ್ನು ಇದು ತೋರಿಸುತ್ತದೆ.

ವ್ಯಂಜನಸಂಧಿಯ ವಿಚಾರ ಅಧಿಕಪ್ರಯೋಗಗಳ ಸಮರ್ಥನೆಯೊಂದಿಗೆ ವಿಸ್ತೃತವಾಗಿ ಬಂದಿರುವುದು ಸಹಜವೇ. ಕೇಶಿರಾಜ ಕಲೆಹಾಕಿರುವ ವಿಶೇಷ ಹಾಗೂ ಅಪವಾದ ಸಂದರ್ಭಗಳಿಗೆ ಇನ್ನೂ ಕೆಲವನ್ನು ಸೇರಿಸಬಹುದು. ಕೆಲವು ಧಾತುಗಳ ರಚನೆಯನ್ನು ತಿಳಿಸುವಾಗ ವರ್ಣನಾತ್ಮಕ ಭಾಷಾವಿಜ್ಞಾನಿಯಂತೆ ರೂಪಭೇದಗಳನ್ನು ದಾಖಲಿಸುವನಲ್ಲದೆ (ಸೂ.೭೦, ೭೧) ಸರಿತಪ್ಪುಗಳ ವಿವೇಚನೆಗೆ ಅವನು ಹೋಗುವುದಿಲ್ಲ. ಹೆಚ್ಚಿನ ಉದಾಹರಣೆಗಳಿಗೆ ಅವನು 'ಕಾವ್ಯಾವಲೋಕನ', 'ಸೂಕ್ತಿಸುಧಾರ್ಣವ' ಗಳನ್ನೇ ಗಮನಿಸಿರುವುದು, ಅವನು ಅವಲಂಬಿಸಿರುವ ಮುಖ್ಯ ಆಕರಗಳೇ ಅವು ಎಂಬುದನ್ನು ತೋರಿಸುವಂತಿದೆ. ಜೊತೆಗೆ ಸೌಲಭ್ಯಾಕಾಂಕ್ಷೆಯ ಮನುಷ್ಯದೌರ್ಬಲ್ಯವನ್ನೂ ಪ್ರಕಟಿಸುತ್ತದೆ. ಅವನು ಬಳಸಿರುವ ಆಕರಗಳಲ್ಲಿ ಪೂರ್ವದ ಹಳಗನ್ನಡವೆಂಬ ಕಾಲದ ಪ್ರಯೋಗಗಳೂ ಇರುವಂತಿವೆ. ಸಂಧಿವಿಕಲ್ಪವನ್ನು ಹೇಳುವ 'ಕರೆಗತ್ವದಿರ್ಗೆಯಲ್ಲದೆ। ಪರಮಿರೆ' ಎಂಬ ಸೂತ್ರದ ಲಕ್ಷ್ಯಗಳು ಅವಕ್ಕೆ ಸೂಚನೆ. ಪದಮಧ್ಯಸಂಧಿಯ ನಿಯತಲಕ್ಷಣವನ್ನು ಮುರಿಯುವಂತಿರುವ ಈ ಲಕ್ಷ್ಯಗಳನ್ನು ಒಪ್ಪಿ ಅದನ್ನು ಸಾಧುವಾದ ಸಂಧಿವಿಕಲ್ಪ ಸಂದರ್ಭವೆಂದು ಕೇಶಿರಾಜ ಪ್ರಸ್ತಾವಿಸಿರುವುದು ಅಚ್ಚರಿಯ ಸಂಗತಿಯಾಗಿದೆ. 'ಅಸಿಯ ಒಜಿ,' 'ಪೊನ್ನ

ಅಂದಳಂ' ಇಂತಹ ವಿಸಂಧಿ ರೂಪಗಳನ್ನು ಅಸಾಧುವೆನ್ನುವ ಕೇಶಿರಾಜನೇ ಹೀಗೆ ಭಾವಿಸಿದ್ದಾನೆನ್ನುವುದು ಸ್ವಾರಸ್ಯದ ಸಂಗತಿ.

೩

ನಾಮಪದಗಳ ರಚನೆಯನ್ನು ಮೊದಲ ಸಲ ವಿವರವಿಶದವಾಗಿ ನಿರೂಪಿಸಿರುವುದು 'ಶಬ್ದಮಣಿದರ್ಪಣ'ದಲ್ಲಿಯೇ. ಕೃಲ್ಲಿಂಗಗಳ ರಚನೆಯನ್ನು ತಿಳಿಸುವಾಗ ಲಕ್ಷಣಲಕ್ಷ್ಯ ಸಮನ್ವಯ ತೃಪ್ತಿಕರವಾಗಿ ಆಗದು, ಮೊದಲೆರಡು ಉದಾಹರಣೆಗಳಲ್ಲಿ. ಕೇಶಿರಾಜ ನಾಗವರ್ಮನಂತೆ ತಾನೂ ಲಿಂಗಸಂಜ್ಞೆಯೊಂದಿಗೆ ಪ್ರಕರಣವನ್ನು ಬೆಳಸಿರುವುದು ಅವನ ವ್ಯಾಕರಣಪದ್ಧತಿ ಜೈನಸಂಪ್ರದಾಯದ ಕಡೆಗೆ ಒಲೆದಿರುವುದರ ಸೂಚನೆಯಾಗಿದೆ.

ವರ್ತಮಾನ ಕ್ರಿಯಾರೂಪಗಳ ಮೂಲಕ ಕೃನ್ನಾಮಗಳು ಶಕ್ಯವಿಲ್ಲ ಎಂದಿರುವ ಕೇಶಿರಾಜನ ಗ್ರಹಿಕೆಗೆ ಅಪವಾದಗಳುಂಟು ಎಂದರೂ, ಸಾಮಾನ್ಯನಿಯಮವಾಗಿ ಅದು ಸರಿ. ಭಟ್ಟಾಕಳಂಕ ಶಕ್ಯವೆಂದಿರುವುದನ್ನು ಮೆಚ್ಚಲಾಗದು. ಸಂಸ್ಕೃತದ ಭಾವ ವಚನಗಳನ್ನು ಆಯ್ದುಕೊಂಡು ಕನ್ನಡಕ್ರಿಯಾರೂಪಗಳನ್ನು ರಚಿಸುವ ಕೇಶಿರಾಜನ ಕ್ರಮ ಆಧುನಿಕರಿಗೆ ಗ್ರಾಹ್ಯವಾಗದೆ ಇರಬಹುದು; ಆದರೆ ಅದು ಸಂಪ್ರದಾಯಸಿದ್ಧವಾದ ಕ್ರಮ. ಸಮುಪಾತ್ತಕ್ರಿಯೆ ವಾಕ್ಯಮಾಲೆಗಳು ಪೂರ್ವಕವಿಕೃತಗಳಾಗಿ ನಾಮಾರ್ಥಕಗಳಾಗಿ ಬಳಕೆಯಾಗಬಹುದಾದರೆ, ಅವೂ ಲಿಂಗಗಳಾಗುವುದು ಸಾಧ್ಯ ಎಂಬುದನ್ನು ಮೊದಲ ಸಲ ಮನಗಂಡುದು ಅವನ ಪ್ರಗತಿಶೀಲ ವ್ಯಾಪಕದೃಷ್ಟಿಗೆ ಅನುಗುಣವಾಗಿದೆ. ನಾಮಲಿಂಗಗಳನ್ನು ದೇಶ್ಯ, ತದ್ಭವ, ಸಮಸಂಸ್ಕೃತಗಳೆಂದೂ ತತ್ಸಮಗಳೆಂದೂ ಅವನು ವಿಭಜಿಸಿರುವುದು ತೃಪ್ತಿಕರವಾಗಿದೆ. ಭಟ್ಟಾಕಳಂಕನು ಕೊನೆಯ ಎರಡರಲ್ಲಿ ಭೇದಮಾಡುವುದಿಲ್ಲ.

'ಶಬ್ದಮಣಿದರ್ಪಣ'ದ ನಾಮಲಿಂಗಗಳ ವಿವೇಚನೆಯಲ್ಲಿ ಕೆಲವು ನ್ಯೂನಾತಿರೇಕ ಗಳಿವೆ. ರೂಢನಾಮಗಳು ಪಂಚವರ್ಣಕೃತ ಪರಿಮಾಣದವು ಎನ್ನುವುದು, ಅನ್ವರ್ಥನಾಮಗಳಿಗೆ ಸ್ವತಂತ್ರ ದೇಶ್ಯಶಬ್ದಗಳನ್ನು ಲಕ್ಷಿಸದಿರುವುದು, ಏನ್ ಎಂಬ ಸರ್ವನಾಮದ ವಿಭಕ್ತಿಗತಿಯಲ್ಲಿ ದ್ವಿತೀಯಾವಿಭಕ್ತಿಯನ್ನು ತೋರಿಸದಿರುವುದು ಮುಂತಾದುವನ್ನು ಹೇಳಬಹುದು.

ಅಲ್ಪವ್ಯತ್ಯಾಸದ ಸ್ವೀಕೃತ ಸಂಸ್ಕೃತಶಬ್ದಗಳನ್ನು ಪ್ರಾಚೀನರನ್ನು ಅನುಸರಿಸಿ ಸಮಸಂಸ್ಕೃತವೆಂದಿರುವುದು ಸ್ತುತ್ಯಕ್ರಮ. ಇಲ್ಲಿ ಸ್ವರಾಂತ ವ್ಯಂಜನಾಂತ ಲಿಂಗಗಳ ರಚನೆಯ ವೈವಿಧ್ಯವನ್ನೂ ಸಂಸ್ಕೃತ ಅವ್ಯಯಗಳು, ತ್ಯದಾದಿ ಗಣಗಳು ಮುಂತಾದುವು ಪ್ರಾತಿಪದಿಕಗಳಾಗಲು ಅನುಸರಿಸಬೇಕಾದ ಕ್ರಮಗಳನ್ನೂ ವಿಶದಪಡಿಸಿದೆ. ಪಿತೃ, ಸಖಿ, ಜನ ಈ ಕೆಲವು ಸಂಸ್ಕೃತ ಪ್ರಕೃತಿಗಳ ವಿಚಾರದಲ್ಲಿ ಹೆಚ್ಚಿನ ವಿವರಣೆಯ ಅಗತ್ಯವಿತ್ತು. ಸಂಸ್ಕೃತದ ವ್ಯಂಜನಾಂತ ಶಬ್ದಗಳಲ್ಲಿ ಜನರ ಬಳಕೆಯವನ್ನು ಸಹ ಕೇಶಿರಾಜ ಆಯ್ದುಕೊಂಡಿದ್ದಾನೆ ಎನ್ನುವುದು 'ಜನಮುಲಿವ' ಎಂಬ ಮಾತಿನಿಂದ ವಿದಿತವಾಗುತ್ತದೆ. ಅವನ ವ್ಯಾಕರಣವಸ್ತುವಿನ ವ್ಯಾಪ್ತಿಯನ್ನೂ ಅದು ಸೂಚಿಸುತ್ತದೆ.

ಕೇಶಿರಾಜ ೯ ವಿಧದ ಲಿಂಗಗಳನ್ನು ಪ್ರತಿಪಾದಿಸುವಾಗ ಲಿಂಗಸಂಜ್ಞೆಯನ್ನು ಪುಂ ಸ್ತ್ರೀ ಇತ್ಯಾದಿ ಭೇದದ ಲಿಂಗಗಳೆಂದು ಉದ್ದೇಶಿಸಿರುವುದರಿಂದ, ಪ್ರಾತಿಪದಿಕವೆಂದ

ಲಿಂಗಸಂಜ್ಞೆಯಿಂದ ಇದು ಬೇರೆಯಾಗಿರುವುದು ಸ್ಪಷ್ಟ. ಪುಂ ಸ್ತ್ರೀ ನಪ್ ಆದಿಯಾದ ನವವಿಧಲಿಂಗಗಳೂ ಅವಿಷ್ಟಲಿಂಗವೆಂಬುದೂ ಸಂಸ್ಕೃತ ಪರಿಭಾಷೆಗಳಾಗಿರುವಂತೆಯೇ ಕೆಲವಂಶಗಳಲ್ಲಿ ಸಂಸ್ಕೃತ ವ್ಯಾಕರಣಪದ್ಧತಿಯ ಪ್ರಕ್ರಿಯೆಗಳೂ ಆಗಿವೆ; ಎಂದರೆ ಇಲ್ಲಿಯ ಮಾತು ಮತ್ತು ಆಶಯ ಎರಡರ ಮೂಲವೂ ಸಂಸ್ಕೃತ ವ್ಯಾಕರಣವೇ; ಕೇಶಿರಾಜನು ಕನ್ನಡದ ಪ್ರಾತಿಪದಿಕಗಳಿಗೆ ಅವನ್ನು ಅನ್ವಯಿಸಿದ್ದಾನೆ, ಅಷ್ಟೆ. ಸಾಂಪ್ರದಾಯಿಕ ವೈಯಾಕರಣಮಾನ್ಯವಾದ ಪುಂ ಸ್ತ್ರೀ ನಪ್ ಎಂಬ ತ್ರಿವಿಧಲಿಂಗಗಳು ಕನ್ನಡದಲ್ಲಿ ಒಡೆದು ಕಾಣುತ್ತಿದ್ದು, ಅವಕ್ಕೆ ಸಹಜವಾದ ಅರ್ಥನಿಷ್ಠ ಲಿಂಗತ್ವವಿರುವುದೇ ಅಲ್ಲದೆ ಪ್ರತ್ಯಯಗಳೂ ಅವನ್ನು ಸ್ಪಷ್ಟಪಡಿಸುತ್ತಿರುತ್ತವೆ. ಶಬ್ದಧರ್ಮಿಯಾದ ಸಂಸ್ಕೃತ ಲಿಂಗವಿವಕ್ಷೆಯ ಪರಿಕ್ರಮವನ್ನು ಮುಖ್ಯವಾಗಿ ತ್ರಿವಿಧಲಿಂಗ ವ್ಯವಸ್ಥೆಯ ಹಳಗನ್ನಡ ಲಿಂಗವಿವಕ್ಷೆಗೆ ಅನ್ವಯಿಸಿರುವ ಕೇಶಿರಾಜನು ಈ ನಿರೂಪಣೆ ಔಪಚಾರಿಕವಾದುದೆಂದು ತಾನೇ "ಪರಿವರ್ತಿಸವುಟಿಂದ ಲಿಂಗಮೊಳವಾಗಿರ್ದುಂ" ಎಂಬ ಮಾತಿನಲ್ಲಿ (ಸೂ.೯೧) ತಿಳಿಸಿದ್ದಾನೆ. ವಕ್ತೃ / ಕರ್ತೃವಿನ ವಿವಕ್ಷೆಯಂತೆ ಉಳಿದ ಲಿಂಗಗಳೆಲ್ಲ ಆಲಂಕಾರಿಕ ಪ್ರಯೋಗಗಳಾಗಿವೆ; ಸ್ವತಂತ್ರವಾಗಿ ಲಿಂಗಪ್ರಯುಕ್ತ ಕಾರ್ಯಶೂನ್ಯಗಳಾಗಿವೆ; ಅವ್ಯಕ್ತ ಲಿಂಗ / ಅಲಿಂಗಗಳಾಗಿವೆ; ವಾಕ್ಯಸ್ತರದಲ್ಲಿ ಲಿಂಗತ್ವವುಂಟೆಂದು ಹೇಳಬಹುದಾದ ವಿಶೇಷ್ಯಾಧೀನ ಲಿಂಗಗಳಾಗಿವೆ (ನೋಡಿ: ಶಬ್ದಾನು.ದ ಕುಂಡಲಗಿರಿ ಆಚಾರ್ಯರ ವಿವೇಚನೆ).

ಕೇಶಿರಾಜನು ಕವಿವಾಕ್ಯಗಳಲ್ಲಿಯ ಆಲಂಕಾರಿಕವಾದ ಪ್ರಯೋಗಗಳನ್ನು ಸಹ ವೈಯಾಕರಣನ ದೃಷ್ಟಿಯಿಂದ ಪರೀಕ್ಷಿಸಿ, ಅವಕ್ಕೆ ಸಮಾಧಾನ ಹೇಳಿರುವುದುಂಟು. ಇದಕ್ಕೆ ಸೂ. ೧೫೬ರ ಲಕ್ಷ್ಯ ಒಂದು ಒಳ್ಳೆಯ ಉದಾಹರಣೆ.

ನವವಿಧಲಿಂಗಗಳ ಹಾಗೆಯೇ ವಚನತ್ರಯದ ವ್ಯಾಖ್ಯೆಯಲ್ಲಿ ಸಹ ಕೇಶಿರಾಜ ಸಂಸ್ಕೃತ ವ್ಯಾಕರಣಪದ್ಧತಿಯನ್ನು ಅನುಸರಿಸಿದ್ದಾನೆ. ಇಂತಹ ಕಡೆ ಕನ್ನಡದ ವೈಶಿಷ್ಟ್ಯವನ್ನು ಸ್ಪಷ್ಟವಾಗಿ ಮಂಡಿಸುವ ಅವಕಾಶಗಳನ್ನು ಅವನು ಸುಲಭವಾಗಿ ಕಳೆದುಕೊಂಡಿದ್ದಾನೆ; ಎಂದಿನಂತೆ ನಾಗವರ್ಮನನ್ನೇ ಅನುಸರಿಸಿ ಹೀಗೆ ಮಾಡಿದ್ದಾನೆ. "ದ್ವಿವಚನಮುಚಿತದೆ ಬರ್ಕುಂ" ಎಂಬುದಾಗಿ ಹೇಳುವಾಗ, ದ್ವಿ.ಬಹುವಚನಗಳ ನಡುವೆ ಸಂಸ್ಕೃತದಲ್ಲಿರುವ ಹಾಗೆ ಪ್ರತ್ಯೇಕವಾದ ಪ್ರತ್ಯಯ ಸೇರುವ ವ್ಯವಸ್ಥೆ ಕನ್ನಡದಲ್ಲಿಲ್ಲವೆಂಬ ಸಾಮಾನ್ಯಸಂಗತಿಯನ್ನೇ ಇವರು ಅಲಕ್ಷಿಸಿದ್ದಾರೆ. ಗಳ್ ಮುಖ್ಯ ಬ.ವ. ಪ್ರತ್ಯಯವೆಂದೂ ಉಳಿದ ಬ.ವ. ಪ್ರತ್ಯಯಗಳು ಅದರ ಆದೇಶಗಳೆಂದೂ ತಿಳಿದಿರುವಲ್ಲಿ ನಾಗವರ್ಮನ ಅನುಸರಣೆಯಿಂದಾಗಿ ಕೇಶಿರಾಜ ತಕ್ಕಂತೆ ನಿರೂಪಣೆಮಾಡಿಲ್ಲ ಎನ್ನಬೇಕು. ಗಳ್ ಪ್ರತ್ಯಯದ ವ್ಯಾಪ್ತಿ ವಿಶಾಲವಾದುದು, ಪುಂ.ಸ್ತ್ರೀ ಪ್ರಕೃತಿಗಳಲ್ಲಿ ಕೂಡ ಅದು ಬರುವಂಥದು ಎಂಬುದರಿಂದ ಹೀಗೆ ಮಾಡಿರಬಹುದೇನೋ? ಹಾಗೆಯೇ ಅರ್, ಇರ್ ಮುಂತಾದ ಪ್ರತ್ಯಯಗಳು ಪುಂ.ಸ್ತ್ರೀ ಪ್ರಕೃತಿಗಳಿಗೆ ಸೇರುವಾಗ ಯಾವ ರೀತಿಯ ಪ್ರಕೃತಿಗೆ ಯಾವ ವಿಶಿಷ್ಟ ಪ್ರತ್ಯಯವಷ್ಟೇ ಸೇರುವುದು ಸಾಧ್ಯ ಎನ್ನುವುದನ್ನು ಸಹ ಅಭ್ಯಾಸಿಗಳ ವಿಮರ್ಶೆಗೇ ಬಿಡಲಾಗಿದೆ. ಪುಂ.ಸ್ತ್ರೀ. ವಿವಕ್ಷೆಯ ಇರ್, ಅರ್, ದಿರ್, ವಿರ್ ಎಂಬ ಬ.ವ. ಪ್ರತ್ಯಯಗಳು "ಅಕ್ಕುಂ ಲೋಕೋಕ್ತಿಗಳೊಳ್..." ಎಂದಿರುವುದು ಗಮನಾರ್ಹ; ಕಾವ್ಯಪ್ರಯೋಗಗಳಲ್ಲಿಯೂ ಸಮಕಾಲೀನ ಆಡುನುಡಿಯಲ್ಲಿಯೂ ಸಮಾನವಾಗಿ ಅವನ್ನು ಕಾಣಬಹುದು ಎನ್ನುವುದು

ಅದರ ಇಂಗಿತ. ವಚನಪಲ್ಲಟ ಹಾಗೂ ಜಾತ್ಯೇಕವಚನದ ಪ್ರಸ್ತಾವ ಸಹ ಕನ್ನಡದ ಆಡುಮಾತಿನ ವೈಚಿತ್ರ್ಯಕ್ಕೇ ಸಂಬಂಧಿಸಿರುವ ವಿಷಯ. ಕಾವ್ಯಪ್ರಯೋಗಗಳಿಗಿಂತಲೂ ಆಡುಮಾತಿನ ಧೋರಣೆಯಲ್ಲಿಯೇ ಅವನ್ನು ಹೆಚ್ಚಾಗಿ ಕಾಣುವುದು ಸಾಧ್ಯವೆನ್ನುವುದು ಕೇಶಿರಾಜನ ಉದಾಹರಣೆಗಳಿಂದ ತಿಳಿಯುತ್ತದೆ.

ನಾಮವಿಭಕ್ತಿಗಳು ಪ್ರಕರಣದ ಮುಖ್ಯಭಾಗ. 'ಶಬ್ದಮಣಿದರ್ಪಣ'ದಲ್ಲಿ ಈ ಸಂಬಂಧವಾದ ವಿವರಣೆ ನಾಗವರ್ಮನ ವಿವರಣೆಗಳಿಗೆ ಅನುಸಾರವಾಗಿಯೇ ಇದೆ. ಇಬ್ಬರಲ್ಲಿಯೂ ಕಾಣುವ "ಮಮಿಂಕೆಯದದೊಳ್" ಎಂಬ ವಿಭಕ್ತಿಪ್ರತ್ಯಯದ ಸೂತ್ರವೇ ಅತೃಪ್ತಿಕರ ಎನ್ನದೆ ವಿಧಿಯಿಲ್ಲ ; ಅವ್ಯಾಪ್ತಿದೋಷದೂಷಿತವಾಗಿದೆಯೆಂದು ಕೂಡ ಹೇಳಿಬಿಡಬಹುದು. ಇಲ್ಲಿ ಸೂತ್ರರಚನೆಯೇ ಭಾಷಿಕವಾಗಿ ವಿಲಕ್ಷಣವಾದುದು. ಇದು ಏನೇ ಇರಲಿ, ಪ್ರಥಮಾ ವಿಭಕ್ತಿಯ ಸ್ವರೂಪವಿವರಣೆ ಗತಾನುಗತಿಕವಾಗಿದ್ದು, ಇದಕ್ಕೆ ಕೆಲಮಟ್ಟಿಗೆ ಮ್/ನ್ ಧ್ವನಿಗಳನ್ನು ಪ್ರತಿನಿಧಿಸುವ ಬಿಂದುವಿನ ಗೊಂದಲವೇ ಕಾರಣವೆನ್ನಬೇಕು. ಕೇಶಿರಾಜ ತಾನು ಪ್ರಥಮಾವಿಭಕ್ತಿಯ ಪ್ರಯೋಗಗಳಿಗೆಂದು ನೀಡುವ ವಿವರಣೆಯ ಜೊತೆಗೆ ಪ್ರತ್ಯಯ ಹತ್ತದ ಪ್ರಕೃತಿಪ್ರಯೋಗಗಳಿಗೂ ಒಂದು ಸೂಚನೆ ನೀಡಬಹುದಾಗಿತ್ತು; ನೀಡಿಲ್ಲ. ಅವನು ಸಾಮಾನ್ಯ ಸಂದರ್ಭಗಳಿಗೆ, ವ್ಯಾಪ್ತಿಬಾಹುಳ್ಯವುಳ್ಳ ವ್ಯಾಕರಣಾಂಶಗಳಿಗೆ ವಿಶೇಷತಃ ಗಮನ ಕೊಡುತ್ತಾನೆ, ವಿರಳ ಇಲ್ಲವೆ ಅಪವಾದ ರೀತಿಯವುಗಳಿಗೆ ಅಲ್ಲ ಎಂಬುದೇ ಕಾರಣ, ಹೀಗೆ ಮಾಡಿರುವುದಕ್ಕೆ. ಅಕಾರಾಂತ ನಪ್ ಪ್ರಕೃತಿಗಳಿಗೆ ಸ್ವರ ಪರವಾದಾಗ ಮ>ವ ವ್ಯತ್ಯಯದ ಶೈಥಿಲ್ಯ ಅವನ ಗಮನಕ್ಕೆ ಬಂದಿದೆ. ಆದರೆ ಇದನ್ನು ಅವನು 'ವ-ಮ ಭೇದ' ದ ವಿಶಿಷ್ಟ ಸಂದರ್ಭವನ್ನಾಗಿ ತಿಳಿಯುವನಲ್ಲದೆ, ಭಾಷಿಕ ಶೈಥಿಲ್ಯವನ್ನಾಗಿ ತಿಳಿಯುವುದಿಲ್ಲ. ಸಂಸ್ಕೃತದ ಕರ್ಮಣಿ ಪ್ರಯೋಗದ ರಚನೆಯ ಪ್ರಭಾವದಿಂದಾಗಿ ತೃತೀಯೆಯನ್ನು ಕರ್ತೃವಿಭಕ್ತಿಯೆಂದು ಅವನಿಗೆ ಹೇಳಬೇಕಾಗಿ ಬಂದಿದೆ. ಇಂತಹ ಕಡೆ ಅವನು ಪೂರ್ವಕವಿಪ್ರಯೋಗಗಳನ್ನು ಉದ್ಧರಿಸಿದ್ದರೆ ಚೆನ್ನಾಗಿತ್ತು.

ದ್ವಿತೀಯಾ ವಿಭಕ್ತಿಯ ರಚನೆಯಲ್ಲಿ ಸಮುಚ್ಚಯದ ಉಂ ಸೇರುವ ಕ್ರಮ ವಿಶೇಷರೀತಿಯದು. ಇದನ್ನು ಗುರುತಿಸಿದ್ದರೂ, ಆ ವಿಶೇಷಕ್ಕೆ ಕಾರಣವನ್ನು ಅವನು ತಿಳಿಸದಿರುವುದು, ಇಂದಿಗೂ ಒಂದು ಅಪರಿಹಾರ್ಯವಾದ ತೊಡಕಿಗೆ ಕಾರಣವಾಗಿದೆ. ಅಲ್ಲದೆ ದೀರ್ಘಾದಿಯ ಆನ್ ಪ್ರತ್ಯಯವನ್ನು ಕುರಿತಾಗ, ಸ್ವರ ಪರವಾದರೆ ವಿಕಲ್ಪವಾಗಿ ಅನ್>ಆನ್ ಎಂದಾಗುವುದು ಎಂಬುದು ಅವನ ಗ್ರಹಿಕೆ; ಸಂಧಿಕಾರ್ಯವಿಲ್ಲದೆಯೂ ಆಗಬಹುದಾಗಿದೆ. ಹಾಗೆಯೇ ತೃತೀಯೆಯಲ್ಲಿ ಇಮ್/ ಇಂದಂ/ ಇಂದೆ ಪ್ರತ್ಯಯಗಳಿಗೆ ಎಕಾರದ ಆದೇಶವುಂಟೆಂದೂ ಅದು ಅಕಾರಾಂತ ನಪ್ ಪ್ರಕೃತಿಗಳಲ್ಲಿ ಮಾತ್ರ ಬರುವುದೆಂದೂ ಅವನು ತಿಳಿದಿರುವಂತಿದೆ; ಆದರೆ ಅಕಾರಾಂತವಲ್ಲದಲ್ಲಿಯೂ ಅದು ಬರಬಹುದು. ಚತುರ್ಥಿಯಲ್ಲಿ ಉಂ, ಅಂ ಎಂಬ ಎರಡು ಸಮುಚ್ಚಯಗಳಿಗೂ ಅವಕಾಶವಿರುವುದನ್ನು ಅವನ ಸೂಕ್ಷ್ಮ ದೃಷ್ಟಿ ಗಮನಿಸಿದೆ. ಪಂಚಮಿಯ ವಿಭಕ್ತಿವಿಧಿಯ ವಿವರಣೆ ಸಂಸ್ಕೃತ ವ್ಯಾಕರಣದ ಮರ್ಯಾದೆಗೆ ಅನುಸಾರವಾಗಿರುವುದು ಆ ಭಾಷೆಯ ಪ್ರಬಲ ಪ್ರಭಾವವನ್ನು ತೋರಿಸುವುದು. ಹೀಗಾಗಿ ಪ್ರತ್ಯಯವನ್ನು ಅತ್ > ಅತ್ತಣಿಂ ಎಂಬಂತೆ ಸೂಚಿಸಿದರೂ, ಪ್ರಯೋಗಗಳನ್ನು ಅರ್ಥ ಪಂಚಮಿಯದು, ಪ್ರತ್ಯಯ ತೃತೀಯೆಯದು ಎಂಬಂತೆ ಪೋಷಿಸಿದೆ. ಷಷ್ಠಿಯ 'ಆ' ದೀರ್ಘಾದೇಶವೆಂದು ಗಣಿಸಿದೆ; ಆದರೆ ಅದು ಅತಿಪ್ರಾಚೀನರೂಪ. ಇದು ಮೂಲತಃ

ನಾಗವರ್ಮನ ಗ್ರಹಿಕೆಯೇ (ಶಬ್ದಸ್ಮೃತಿ.೩೨); ಕೆಲವೊಮ್ಮೆ ಈ ದೀರ್ಘ ಆಕಾರ ಪಾದಾಂತರಾಳದಲ್ಲಿ ಬಂದಾಗ ನಿರ್ದೇಶನಾರ್ಥಕ ಸರ್ವನಾಮವೇ ಆಗಿದ್ದು, ಷಷ್ಠಿಯ ಭ್ರಾಂತಿಯನ್ನೂ ಉಂಟು ಮಾಡಬಹುದು. ಶಬ್ದಮಣಿದರ್ಪಣದ "ಎಲ್ಲಾ ವಿಭಕ್ತಿಗಳುಂ ಷಷ್ಠಿಗತಮಾದುವಾಗಿ ಸಂಬಂಧಮೆಂಬರ್" (ಸೂ. ೧೩೨) ಚರ್ಚೆಗೆ ಎಡೆಮಾಡಿರುವ ಮಾತು (ನೋಡಿ : ಷಷ್ಠೀಗತ ವಿಭಕ್ತಿ, ತೆಕ್ಕುಂಜ ಗೋಪಾಲಕೃಷ್ಣಭಟ್ಟ, 'ರತ್ನಮಂಜೂಷ', ಧರ್ಮಸ್ಥಳ, ೧೯೭೯; ಸಂಬಂಧವಿಭಕ್ತಿ, ಸೇಡಿಯಾಪು ಕೃಷ್ಣಭಟ್ಟ, 'ವಿಚಾರಪ್ರಪಂಚ', ಪುತ್ತೂರು, ೧೯೯೨). ಸಪ್ತಮೀವಿಭಕ್ತಿಯ ಪ್ರತ್ಯಯಗಳ ಶ್ರೇಣಿಯಲ್ಲಿ ಉಳ್ ದಾಖಲಾಗಿಲ್ಲ; ಇದು ಆಶ್ಚರ್ಯಕರ. ದಿಗ್ವಾಚಕೇತರವಾಗಿಯೂ ಸಪ್ತಮಿಯ ಅಲ್ ಬರುವುದನ್ನು ನಾಗವರ್ಮಾದಿಗಳು ಯಾರೂ ಪ್ರಸ್ತಾವಿಸಿಲ್ಲ. ಸಪ್ತಮಿಯ ವಿವೇಚನೆಯಲ್ಲಿ ಹೊಕ್ಕಿರುವ ದಿಗ್ವಾಚಕ ಪ್ರಕೃತಿಗಳ ವಿಭಕ್ತ್ಯಂತ ರಚನೆಯಲ್ಲಿ ಸ್ವಲ್ಪ ಮಟ್ಟಿಗೆ ಸಂದಿಗ್ಧತೆಗೆ ಅವಕಾಶವುಂಟು. ಇದು ಹೇಗಿದ್ದರೂ, ಇಲ್ಲಿಯೇ ಸ್ಥಾನವಾಚಕಗಳ ಪ್ರಸ್ತಾವ ಬಂದಿರುವುದನ್ನು ಒಪ್ಪುವುದು ಕಷ್ಟ. ಕೊನೆಯದಾಗಿ, ಸಂಬೋಧನೆಯ ವಿಭಕ್ತಿ ರಚನೆ ಸಂಕೀರ್ಣವಾದುದಾಗಿದ್ದು, ಕೇಶಿರಾಜ ಇದನ್ನು ಬೇಕಾದ ಎಲ್ಲ ರೂಪಗಳೊಂದಿಗೆ ಸ್ಪಷ್ಟಪಡಿಸಿಲ್ಲ. ಆದರೆ ಪೂರ್ವಕವಿ ಪ್ರಯೋಗಗಳಲ್ಲಿ ಆ ರೂಪವೈವಿಧ್ಯಗಳನ್ನು ಕಾಣಬಹುದು.

ವಿಭಕ್ತಿ ಪಲ್ಲಟವೆಂಬ ಪ್ರಕ್ರಿಯೆ ವಚನಪಲ್ಲಟವೆಂಬ ಪ್ರಕ್ರಿಯೆಯಂತೆಯೇ ವಾಕ್ಯಸ್ತರದಲ್ಲಿ ಪ್ರವರ್ತಿಸುವ ಜನರೂಢಿಯ ಒಂದು ಮಾತಿನ ವರಸೆಯಾಗಿದೆ. ಆದರೆ ಕೇಶಿರಾಜ ಇದನ್ನು "ನುಡಿವ ಬಿನ್ನಣದಿಂ ಕಾರಕಮನಿಯತಾರ್ಥಮೆಂದಱುವುದು" (ಸೂ. ೧೩೬) ಎಂದಿರುವುದೂ ಅದಕ್ಕೆ ಮೊದಲಲ್ಲಿಯೇ "ಇಂತೀ ಪೇೞ್ದ ವಿಭಕ್ತಿಗ । ಳೆಂತುಂ ಪಲ್ಲಟಿಸುಗುಂ ಯಥೇಷ್ಟಂ" ಎಂದಿರುವುದೂ ಅಷ್ಟು ಸರಿಯೆನ್ನುವಂತಿಲ್ಲ. ಜೊತೆಗೆ ಕೆಲವು ಉದಾಹರಣೆಗಳೂ ವಿಚಾರಣೀಯ ಗಳಾಗಿವೆ. ಉದಾಹರಣೆಗೆ: ಪ್ರಥಮಾವಿಭಕ್ತಿ ಹಾಗೂ ದ್ವಿತೀಯಾವಿಭಕ್ತಿಗಳ ಅರ್ಥದಲ್ಲಿ ಷಷ್ಠೀವಿಭಕ್ತಿಯ ಪ್ರಯೋಗಗಳು. ಕೆಲವಂತೂ ವಾಗ್ರೂಢಿಯ ವಿಲಕ್ಷಣ ಪ್ರಯೋಗಗಳಲ್ಲದೆ, ವಿಭಕ್ತಿಪಲ್ಲಟಗಳಲ್ಲ.

ನಾಮಪ್ರಕರಣದಲ್ಲಿ ಪ್ರಯೋಗವಿಶೇಷಗಳು ದ ಕಾರಾಗಮ, ಇನಾಗಮ, ಅಱಾಗಮ, ಅಣಾಗಮ, ದೀರ್ಘವ್ಯವಹೃತಿ ಇವುಗಳಿಗೆ ಸಂಬಂಧಿಸಿವೆ ಎಂದು ಸಾಮಾನ್ಯವಾಗಿ ಹೇಳಬಹುದು. ಈ ಸಂದರ್ಭದಲ್ಲಿ ಕೆಲವು ಲ ಕಾರಾಂತ ದೇಶ್ಯ ನಪ್ ಪ್ರಕೃತಿಗಳಲ್ಲಿ ಮ್ ಪ್ರತಿಯಾಗಿ ನ್ ಪ್ರತ್ಯಯವೇ ವಿಭಕ್ತಿಸ್ವೀಕಾರಪೂರ್ವದಲ್ಲಿ ಇರುತ್ತದೆ / ಬರುತ್ತದೆ ಎನ್ನುವುದು ಪ್ರಯೋಗ ಸಿದ್ಧವಾದುದು. ದ ಕಾರಾಗಮದ ದೆಸೆಯಿಂದ ವಿಭಕ್ತಿವಿಧಿಯ ಕೆಲವು ರಹಸ್ಯಗಳು ವಿದಿತವಾಗುತ್ತವೆ. ಇನಾಗಮದ ವಿಪುಲ ವೈಚಿತ್ರ್ಯಗಳು ಕೇಶಿರಾಜನ ಲಕ್ಷ್ಯ ಸೆಳೆದಿರುವುದು ಮೆಚ್ಚಬೇಕಾದ್ದು. ಅಣಾಗಮದ ವಿಷಯಗಳಲ್ಲಿ ಇನ್ನೂ ಹೇಳತಕ್ಕ ವಿಶೇಷಗಳಿದ್ದುವು. ದಿಗ್ವಾಚಕ ಸ್ಥಾನವಾಚಕಗಳಲ್ಲಿ ಕೂಡ ದಕಾರಾಗಮವಾಗುವ ವೈಚಿತ್ರ್ಯವನ್ನು ಸಕಾರಣವಾಗಿ ಹೇಳಿಲ್ಲವೆಂಬ ಕೊರತೆ ಕಣ್ಣೊತ್ತುತ್ತದೆ. ಶಬ್ದಾಂತರಾಳದ ದೀರ್ಘವ್ಯವಹೃತಿಗೆ ಆಯ್ದಿರುವ ಬಿಡಿಶಬ್ದಗಳಿಗೆ ಒಬ್ಬನೇ ಕವಿಯ ಆಕರಗಳನ್ನು ಗಮನಿಸಿರುವುದಂತೂ ಸ್ವಾರಸ್ಯಕರ. ಹೆಚ್ಚಿನ ಶಬ್ದಗಳಿಗೆ ಅವನು ಪಂಪನ ಕೃತಿಗಳನ್ನೇ ಆಶ್ರಯಿಸಿದ್ದಾನೆ.

ವಾಕ್ಯಾನ್ವಯದ ಬಗೆಗೆ 'ಶಬ್ದಸ್ಮೃತಿ'ಯ ಪ್ರಕ್ರಿಯೆಯನ್ನು ಪುನರುಚ್ಚರಿಸಿದೆ. ಆದರೆ ತೊಡಕಾದುದು ಎಂದರೆ, ವಾಕ್ಯದಲ್ಲಿ ಲಿಂಗತ್ರಯದ ಮುಖ್ಯಾಮುಖ್ಯತೆಯ ವಿಚಾರ. ಇದರ ವಿಚಾರವಾಗಿ ಈಗಾಗಲೇ ಸಾಕಷ್ಟು ಚರ್ಚೆ ನಡೆದಿದೆ. ಕೇಶಿರಾಜನು ಕಾವ್ಯೋದಾಹರಣೆಗಳಿಂದ ಈ ಸಂಗತಿಯನ್ನು ಸಮರ್ಥಿಸಿದ್ದರೆ ಚೆನ್ನಾಗಿತ್ತು. ಹೀಗೆಯೇ ವಾಕ್ಯಸ್ತರಕ್ಕೆ ಸಂಬಂಧಿಸಿರುವ ಸ್ವತಂತ್ರ ಮತ್ತು ಪರತಂತ್ರ ಸರ್ವನಾಮಗಳ ವಿಚಾರಗಳಲ್ಲಿ ಸಹ. ಆದರೆ ಇಂತಹ ಕಡೆಗಳಲ್ಲಿ ತನ್ನ ಕಾಲದ ಜನರೂಢಿಯ ಮಾತುಗಾರಿಕೆಯನ್ನು ಅವನು ಲಕ್ಷಿಸಿರುವುದು ಶ್ಲಾಘ್ಯ. ಅವನ ವ್ಯಾಕರಣ ಕೇವಲ ಪೂರ್ವಕವಿ ಪ್ರಯೋಗಗಳನ್ನಲ್ಲದೆ ತತ್ಕಾಲೀನ ಕನ್ನಡ ಭಾಷೆಯನ್ನು ಸಹ ಲಕ್ಷ್ಯಕ್ಕೆ ತೆಗೆದುಕೊಂಡಿದೆ ಎಂಬುದು ಇದರಿಂದ ವಿದಿತವಾಗುತ್ತದೆ.

ನೇಯಾರ್ಥದ ವಿವೇಚನೆ ನ್ಯಾಯವಾಗಿ ಅಲಂಕಾರಶಾಸ್ತ್ರದ ವಿಷಯ; ವ್ಯಾಕರಣಶಾಸ್ತ್ರದ ವಿಷಯವಲ್ಲ. ಅರ್ಥವ್ಯಕ್ತಿಯ ಒಂದು ದೋಷ ಇಲ್ಲಿ ಉದ್ದೇಶಿತ. 'ಕವಿರಾಜಮಾರ್ಗ' 'ಕಾವ್ಯಾವಲೋಕನ' ಗಳ ಪ್ರಭಾವದಿಂದಾಗಿ ಕೇಶಿರಾಜನು ಇದನ್ನು ಕುರಿತಿದ್ದಾನೆ. ವಾಕ್ಯರಚನೆ, ವಾಕ್ಯಶುದ್ಧಿಗಳ ಚರ್ಚೆಯ ಫಲಿತವಿದು. ಹೀಗೆಯೇ ಕಾರಕ ಕ್ರಿಯೆಗಳ ಅಧ್ಯಾಹಾರ ವಿಚಾರವೂ ವಾಕ್ಯದೀಪಕದ ವಿಚಾರವೂ ಅಲಂಕಾರಶಾಸ್ತ್ರ ಪರಿಧಿಗೇ ಸೇರಿದುವಾದರೂ ಮೇಲಿನ ಕಾರಣಗಳಿಗಾಗಿಯೇ ಪ್ರಸ್ತಾವಿಸಿದ್ದಾನೆ. ವಾಕ್ಯದೀಪಕದ ವಿಚಾರದಲ್ಲಿ ಜನರೂಢಿಯ ವಾಕ್ಯಗಳನ್ನು ಮಾತ್ರ ಲಕ್ಷಿಸಿದ್ದಾನೆ; ಕವಿಪ್ರಯೋಗಗಳನ್ನೂ ಉದಾಹರಿಸ ಬಹುದಾಗಿತ್ತು. ಇಂತಹ ವಾಕ್ಯರಚನೆ ದಿಟವಾಗಿ ವಿಲಕ್ಷಣವೇ ಆದರೂ, ಪ್ರಯೋಗಗಳುಂಟು. ಅಧ್ಯಾಹಾರಭೇದವಾದ ವಿಭಕ್ತಿ ಪರಿಣಾಮ ನಾಗವರ್ಮನನ್ನು ಅನುಸರಿಸಿ ಹೇಳಿದ್ದು. ಅಲಂಕಾರಶಾಸ್ತ್ರಪರಿಧಿಗೇ ಸೇರಿಸಬಹುದಾದ ಇದನ್ನು ಹೇಳದಿದ್ದರೂ ಆಗಿತ್ತು.

ಸರ್ವನಾಮಗಳ ರೂಪಾಂತರಗಳನ್ನು ಕೇಶಿರಾಜ ಕುರಿತಾಗ ಉತ್ತಮಪುರುಷದ ನಾನ್ - ನಾಮ್ ಪರ್ಯಾಯರೂಪಗಳನ್ನು ಏಕೆ ಪ್ರಸ್ತಾವಿಸಿಲ್ಲವೋ ತಿಳಿಯದು. 'ಪಂಪಭಾರತ'ದಲ್ಲಿಯೇ ನಾನ್ (೧-೧೧೮ ವ, ೮-೩೩ ವ. ೧೨-೨೪), ನಾಂ (೩-೨೬), ನಾನುಂ (೧-೮೨), ನಾನೆ (೧೪-೮ ವ) ಹಾಗೂ ನಾಂ (೬-೭೦, ೯-೪೮ ವ, ೧೨-೪೬), ನಾಮುಂ (೧೦-೫೯ ವ) ಎಂಬ ರೂಪಗಳಲ್ಲಿ ಅವುಗಳ ಪ್ರಯೋಗವುಂಟು. ಹೀಗೆಯೇ ಇತರತ್ರ ಸಹ.

ಸರ್ವನಾಮ ಮತ್ತು ಸಂಖ್ಯೇಯವಾಚಕಗಳ ಸಂಧಿರೂಪಗಳಲ್ಲಿ ಕೆಲವು ಉಚ್ಚಾರಸುಕರವಲ್ಲವೆಂದು ತಿಳಿದು, ಅವನ್ನು ದಾಖಲಿಸಿರುವುದು ಕೇಶಿರಾಜನ ಭಾಷಾಸೌಕುಮಾರ್ಯದೃಷ್ಟಿಗೆ ನಿದರ್ಶನವಾಗಿದೆ. ತ್ವರಿತೋಚ್ಚಾರದ ಜನರೂಢಿಯ ಎತ್ತಣ್ದು (< ಎತ್ತಣದು), ಆರ್ತು (< ಆರದು) ಎಂಬ ರೂಪಗಳನ್ನೂ ಪ್ರಬಲವಾಗಿ ಜನರೂಢಿಯಲ್ಲಿದ್ದು ಕವಿಪ್ರಯೋಗವನ್ನು ಹೊಕ್ಕ ಆಯ್ತು (< ಆದುದು), ಪೋಯ್ತು (< ಪೋದುದು) ಎಂಬ ರೂಪಗಳನ್ನೂ ಅವನು ಮಾನ್ಯಮಾಡಿರುವುದು ಅವನ ಪ್ರಗತಿಪರವಾದ ದೃಷ್ಟಿಯನ್ನು ಪ್ರಕಟಿಸುತ್ತದೆ. ಇದನ್ನು ಗಮನಿಸಿದರೆ, ಱಟ ಗಳ ಪಟ್ಟಿಯಲ್ಲಿರುವ, "ಅಱ್ತೆಯೆಂದು ಪ್ರೀತಿ (ಅದನರ್ತಿಯೆಂದು ಪೇೞಲಾಗದು)" ಎಂಬ ಉಲ್ಲೇಖದ ಕಂಸದೊಳಗಿನ ಟಿಪ್ಪಣಿ ಅವನದೇ ಆಗಿರಲಾರದೇನೋ ಎನ್ನಿಸುತ್ತದೆ.

ಸರ್ವನಾಮಗಳ ರೂಪಾಂತರಗಳಲ್ಲಿ ಪ್ರಯೋಗಗಳು ಲಭ್ಯವಿದ್ದೂ ನಿಮತಾದಿಗಳಿಗೆ ದ್ವಿರ್ಭಾವದ ಪ್ರಯೋಗಗಳನ್ನು ಶಬ್ದಮಣಿದರ್ಪಣದಲ್ಲಿ ಉದಾಹರಿಸಿಲ್ಲ. ಪ್ರಥಮಪುರುಷದ ನಪ್ ಏ.ವ.ದ ಅದು, ಇದು, ಉದು ರೂಪಗಳನ್ನು ಮೂಲವಾಗಿಟ್ಟುಕೊಂಡು ಪುಂ.ಸ್ತ್ರೀ. ರೂಪಗಳನ್ನು ವಿವರಿಸುವ ಕೇಶಿರಾಜನ ಕ್ರಮ ಆ,ಈ,ಊ ಎಂಬುವನ್ನು ಸರ್ವನಾಮಗಳ ಮೂಲಾಂಶಗಳೆಂದು ತಿಳಿಯುವ ಇಂದಿನ ಭಾಷಾವಿಜ್ಞಾನಿಗಳಿಗೆ ಒಪ್ಪಿಗೆಯಾಗಲಾರದು. ಸರ್ವನಾಮವೇ ಆದ ಎಲ್ಲ ಎಂಬುದರ ಸಮಸ್ತರೂಪಗಳನ್ನೂ ಆಶಯಗಳನ್ನೂ ಕೇಶಿರಾಜ ಇನ್ನೂ ಸ್ಪಷ್ಟವಾಗುವ ಹಾಗೆ ವಿವರಿಸುವ ಅಗತ್ಯವಿತ್ತು. ಈಗ ಅವನ ನಿರೂಪಣೆ ಸ್ಥೂಲರೀತಿಯಲ್ಲಿದೆ.

ಸಂಧ್ಯಕ್ಷರದ ಬರೆವಣಿಗೆಯ ರೀತಿಯನ್ನೂ ಸರ್ವನಾಮಗಳ ನ್/ ಮ್ > ಬಿಂದುವಿನ ಪರ್ಯಾಯವನ್ನೂ ಕೇಶಿರಾಜನು ಸಂಜ್ಞಾಪ್ರಕರಣದಲ್ಲಿಯೇ ಹೇಳಬಹುದಾಗಿತ್ತು. ದ್ವಿತೀಯಾ ವಿಭಕ್ತಿಯ ಆನ್ ಪ್ರತ್ಯಯದ ಹಾಗೆಯೇ ಪ್ರಥಮಪುರುಷದ ಆವೊಂ, ನುಡಿದೊಂ ಎಂಬಂತಹ ಹಳೆಯ ರೂಪಗಳನ್ನು ಕುರಿತಾಗ ಅವನ್ನು ಐಚ್ಛಿಕರೂಪಗಳೆಂದು ಹೇಳುವುದರ ಜೊತೆಗೆ, ಬಾಯಿಬಿಟ್ಟು ಹಳೆಯ ರೂಪಗಳೆಂದೂ ಹೇಳಬಹುದಾಗಿತ್ತು. ವಾಕ್ಯಸ್ತರದ ಣ-ನ ಸಂಯೋಗವು ನಾಮರೂಢಿಯ ದೃಷ್ಟಿಯಿಂದ ಸೂಕ್ತವಾದ ಗಮನಿಕೆಯೆಂದರೂ ತಣ್ಣೆಳಲ್, ಕಣ್ಣೀರ್ ಎಂಬಂತಹ ಬಹುಪ್ರಚುರ ಸಮಾಸಗಳನ್ನು ಸಹ 'ಉಚ್ಚರಿಸುವರ್ಗೆ ದುಷ್ಕರಂ' ಎಂದಿರುವುದು ಸೋಜಿಗವೇ ಸರಿ. ಅವನ ಮನೋಧರ್ಮ ಎಷ್ಟು ಸುಕುಮಾರವಾದುದು ಎನ್ನುವುದನ್ನು ಇದರಿಂದ ತಿಳಿಯುವುದು ಸಾಧ್ಯ. ಕಣ್ಣಿಮೆ ಎಂಬುದನ್ನು ಬಿಡಿಸುವಂತೆ (ಕಣ್ + ಎಮೆ) ಕಣ್ಣೆಲೆ ಎಂಬುದನ್ನು ಬಿಡಿಸಹೋದರೆ ತಪ್ಪಾದೀತು; ಸಂದರ್ಭ ಹಿಡಿದು ಬಿಡಿಸುವ (ಕಣ್ + ನೆಲೆ) ಎಚ್ಚರವಿರಬೇಕು (ಮಹಾನೇ. ೧೨ - ೨೦ ವ ; ಧರ್ಮನಾ. ೧-೭೦). ಪ > ಹ ವ್ಯತ್ಯಯ ಹಳಗನ್ನಡದ ಸೌಷ್ಠವ, ಭಾಷಾವಿಕಾಸಗಳ ದೃಷ್ಟಿಯಿಂದ ಒಂದು ಸ್ವಾರಸ್ಯಕರ ಪರಿವರ್ತನೆಯೇ ಸರಿ. ಇದನ್ನು ಈ ಮೊದಲೇ ನಾಗವರ್ಮ ಗಮನಿಸಿದ್ದಾನೆ (ಭಾಷಾಭೂ. ಸೂ. ೧೧೫ವೃ). ಇಬ್ಬರೂ ಈ ಪರಿವರ್ತನೆಯನ್ನು ವೈಕಲ್ಪಿಕವೆಂದು ಗುರುತಿಸಿದ್ದಾರೆ. 'ಶಬ್ದಮಣಿದರ್ಪಣ'ದ ಹೊನ್ನ, ಹಂಪ ಈ ಕವಿನಾಮೋಲ್ಲೇಖಗಳು (ಪ.೫) ಮೂಲದಲ್ಲಿ ಪಕಾರಘಟಿತವೇ ಇದ್ದುವೆಂದು ಸಾಧಿಸಿದರೂ, ವೃತ್ತಿ ಪ್ರಯೋಗಗಳಲ್ಲಿ ಹಲವೆಡೆ ಹಕಾರದ ಶಬ್ದಗಳುಂಟು. ಕೇಶಿರಾಜನಿಗೆ ಎಷ್ಟೋ ಮೊದಲು ಈ ವ್ಯತ್ಯಯ ಶಾಸನಗಳಲ್ಲಿ ಬಂದಿತ್ತು. ಅವನ ದೃಷ್ಟಿ ಶಾಸ್ತ್ರಜಡ, ನಿಯಮನಿಷ್ಠುರ ಅಲ್ಲ; ಮುಕ್ತ, ಪ್ರಗತಿಶೀಲ ಎಂಬುದು ಇದರಿಂದ ವಿದಿತ.

೪

ವಾಗ್ವಿಸ್ತರವನ್ನು ಅಡಕಗೊಳಿಸಿದ ನಾಮಪದಸಮುಚ್ಚಯವೇ ಸಮಾಸ. ಸಮಾಸದ ಅರ್ಥವ್ಯಾಪ್ತಿ, ವಿಗ್ರಹವಾಕ್ಯಗಳ ರಚನೆ, ಪೂರ್ವಾಪರ ಪ್ರಕೃತಿಗಳ ಸ್ವರೂಪ ಇವು ಒಂದು ಸಂಕೀರ್ಣ, ಜಟಿಲ ಭಾಷಾವ್ಯಾಪಾರ. ಇಲ್ಲಿ ಭಾಷೆಯ ಸಾಮಾನ್ಯ ಮರ್ಯಾದೆಯೂ ವಕ್ತೃ / ಶ್ರೋತೃವಿನ ಅಪೇಕ್ಷೆಯೂ ಸಮಂಜಸವಾಗಿ ಹೊಂದಿರಬೇಕಾಗುತ್ತದೆ. ಪೂರ್ವಾಪರ ಸ್ಥಾನಗಳ ಪ್ರಕೃತಿಗಳ ನಡುವಣ ಪ್ರತ್ಯಯಾದಿಗಳೂ ಶಾಬ್ದಿಕವಿವರಣೆಗಳೂ ಒಂದು ಪೂರ್ವನಿರ್ದಿಷ್ಟವಾದ

ವ್ಯವಸ್ಥೆಗೆ ಅನುಗುಣವಾಗಿ ಲೋಪಾಗಮಾದೇಶಗಳ ವಿಧಿಗೆ ಒಳಪಡಬೇಕಾಗುತ್ತದೆ. ಕೇಶಿರಾಜ ತನ್ನ ಅರಿವಿಗೆ ಬಂದ ಮಟ್ಟಿಗೆ ಕವಿಮಾರ್ಗಗತ ಸಮಾಸಗಳನ್ನು ನಿರೂಪಿಸಿರುವುದಾಗಿಯೂ ಲೋಕವ್ಯವಹಾರವನ್ನು ಗಮನಿಸಿ ಉಳಿದುವನ್ನು ತಿಳಿಯಬೇಕೆಂಬುದಾಗಿಯೂ ಹೇಳಿರುವುದರಲ್ಲಿ (ಸೂ. ೧೯೬) ಸಮಾಸದ ರಚನೆ ಸಂಕೀರ್ಣವಾದುದು, ವ್ಯಾಪ್ತಿ ವಿಸ್ತೃತವಾದುದು ಎಂಬುದರ ಸೂಚನೆಯಿದೆ. ವಿಸ್ತೃತ ವಿವೇಚನೆಯ ಸಂಸ್ಕೃತ ವ್ಯಾಕರಣಾಂತರ್ಗತ ಸಮಾಸಪ್ರಕರಣದ ವಿವರಣೆಗಳಲ್ಲಿ ಕನ್ನಡ ವೈಯಾಕರಣರು ತಮ್ಮ ಭಾಷೆಯ ಅಗತ್ಯಕ್ಕೆ ಸಾಕಾಗುವಷ್ಟು ಸಂಗತಿಗಳನ್ನು ಮಾತ್ರವೇ ಸ್ವೀಕರಿಸಿದ್ದಾರೆ ಎನ್ನುವುದು ನೆಮ್ಮದಿಯ ವಿಷಯ.

ಸಮಾಸನಾಮಗಳ ವಿಷಯದಲ್ಲಿ ಕೇಶಿರಾಜ ನಿಸ್ಸಹಾಯಕ; ಸಂಸ್ಕೃತ ವ್ಯಾಕರಣದಲ್ಲಿಯ ಅಭಿಜ್ಞೆಗಳನ್ನೇ ಬಳಸಿದ್ದಾನೆ. ಆದರೆ ವಿವರಣೆಗಳು ಸ್ವೋಪಜ್ಞವಾದವು. ಈ ಸಂದರ್ಭದ ಲೋಪಾಗಮಾದೇಶಗಳ ಅರ್ಥವ್ಯಾಪ್ತಿ ಸಂಧಿಪ್ರಕರಣದಲ್ಲಿ ಬರುವಂಥವುಗಳಿಗಿಂತ ಬೇರೆಯಾದವು. ತತ್ಪುರುಷದಲ್ಲಿಯ ಉದಾಹರಣೆಗಳೆಲ್ಲ ಷಷ್ಠೀತತ್ಪುರುಷದವು; ಅನ್ಯವಿಭಕ್ತಿಯ ತತ್ಪುರುಷಗಳನ್ನು ಗುರುತಿಸಲು ಅವಕಾಶವಿದ್ದೂ ಕೇಶಿರಾಜ ತೋರಿಸಿಲ್ಲ. ವಿಗ್ರಹವಾಕ್ಯಗಳ ರಚನೆಗೆ ಭಾಷಾವೈಜ್ಞಾನಿಕವಾದ ರೀತಿ ಕ್ರಮಗಳು ಏನೇ ಇದ್ದರೂ, ಅವನು ಸಾಂಪ್ರದಾಯಿಕ/ವಿಧ್ಯಾತ್ಮಕ ಕ್ರಮವನ್ನು ಅನುಸರಿಸಿರುತ್ತಾನೆ. ಆದುದರಿಂದ ಕೆಲವು ಕಡೆ, ಆ ರಚನೆಗಳು ವಿಚಾರಣೀಯಗಳಾಗಿ ಪ್ರಶ್ನಾರ್ಹಗಳಾಗಿ ಕಂಡುಬರುತ್ತವೆ. ಹಾಗೆಯೇ ಕರ್ತೃ/ ವಕ್ತೃಗಳ ವಿವಕ್ಷೆಗೆ ಅನುಗುಣವಾಗಿ ವಿಗ್ರಹವಾಕ್ಯವೆಂಬ ಸಾಧ್ಯತೆಯನ್ನು ಸಹ ಅವನು ಎಲ್ಲಿಯೂ ಸೂಚಿಸುವುದಿಲ್ಲ. ಕರ್ಮಧಾರಯದ ರಚನೆಯಲ್ಲಿ ಪೂರ್ವಪದ ಗುಣವಚನ ಇಲ್ಲವೆ ಕೃದಂತವಿಶೇಷಣವಾಗಿರುತ್ತದೆ ಎನ್ನುವುದು ಮನವರಿಕೆಯಾಗುವಂತಿದ್ದರೂ ಕೆಲವೆಡೆ ವಿಗ್ರಹವಾಕ್ಯದ ರಚನೆಯನ್ನು ಅಭ್ಯಾಸಿಗಳೇ ಪ್ರಯತ್ನಪಟ್ಟು ಗುರುತಿಸಿಕೊಳ್ಳಬೇಕು. ತತ್ಪುರುಷದ ವ್ಯಾಪ್ತಿಗಿಂತ ಕರ್ಮಧಾರಯದ ವ್ಯಾಪ್ತಿ ದೊಡ್ಡದು; ವಿಗ್ರಹವಾಕ್ಯ ಸಂಧಿಕಾರ್ಯಗಳು ಜಟಿಲವಾದುವು. ಕೆಲವು ಸೂಚನೆಗಳು (ಕಿಱಿದು > ಕುಱು, ಪಚ್ಚನೆ > ಪಂ, ಕೆಚ್ಚನೆ > ಕೆಂ, ಬೆಚ್ಚನೆ > ಬೆಂ) ತೃಪ್ತಿಕರವಲ್ಲ. ಕೊನೆಯ ಮೂರು ಉದಾಹರಣೆಗಳ ವಿಗ್ರಹವಾಕ್ಯಗಳ ವಿಧಿಗೆ ನಾಗವರ್ಮನೇ ಮೂಲ. ಆಧುನಿಕ ಭಾಷಾವಿಜ್ಞಾನ ಹಾಗೂ ದ್ರಾವಿಡದ ಸೋದರ ಭಾಷೆಗಳ ತುಲನೆಯ ಸಹಾಯದಿಂದ ಕೆಲವಂಶಗಳನ್ನು ನಾವು ವಿಶದಪಡಿಸಬೇಕಾಗುತ್ತದೆ.

ಗಮಕಸಮಾಸದ ವಿಚಾರ ಮೊದಲು ಕಾಣಿಸಿಕೊಳ್ಳುವುದು 'ಶಬ್ದಮಣಿದರ್ಪಣ' ದಲ್ಲಿ. ಕನ್ನಡದ ವಿಶೇಷಲಕ್ಷಣಗಳನ್ನು ಹೇಳುವಾಗ ಅದರ ಉಲ್ಲೇಖ ಮೊದಲಲ್ಲಿಯೇ ಇದೆ. ನಾಗವರ್ಮ ಪ್ರಸ್ತಾವಿಸದ ಈ ಸಮಾಸವನ್ನು ಕೇಶಿರಾಜ ಯಾವ ಕಾರಣದಿಂದ ಪ್ರಸ್ತಾವಿಸಿದನು, ಇದು ಸಮಾಸವೇ ಅಥವಾ ಅಲ್ಲವೇ, ಉತ್ತರಪದಾರ್ಥಪ್ರಧಾನ ಸಮಾಸಗಳ ಶ್ರೇಣಿಯಲ್ಲಿ ಇದರ ಸ್ಥಾನವೇನು, ದೇಶ್ಯ ಮತ್ತು ಸಂಸ್ಕೃತ ಪ್ರಕೃತಿಗಳ ನಿಷೇಧರಹಿತ ಸಂಘಟನೆಗೆ ಸಮಾಧಾನವೇನು ಈ ಮೊದಲಾದ ಸಮಸ್ಯೆಗಳು ಈಗಾಗಲೇ ಚರ್ಚಿತವಾಗಿವೆ. ಇವಕ್ಕೆಲ್ಲ ತೃಪ್ತಿಕರ ಸಮಾಧಾನವನ್ನು ಹೇಳುವುದು ಕಷ್ಟ; ಆದರೆ ಅಸಾಧ್ಯವೇನಲ್ಲ.

ಕೇಶಿರಾಜನ ಅನೇಕ ವ್ಯಾಕರಣಪ್ರಕ್ರಿಯೆಗಳಿಗೆ, ಪ್ರಯೋಗಗಳಿಗೆ ನಾಗವರ್ಮನ ವ್ಯಾಕರಣಗಳೇ ಆದರ್ಶ. ಆದರೂ ಅವನು ಸ್ವತಂತ್ರ ಸಂಶೋಧಕದೃಷ್ಟಿಯಿಂದ ಹೆಚ್ಚು ಪ್ರಕ್ರಿಯೆಗಳನ್ನು ಗುರುತಿಸಿದ್ದಾನೆ, ವಿಶ್ಲೇಷಿಸಿದ್ದಾನೆ, ಪ್ರಯೋಗಬಲದಿಂದ ಸಮರ್ಥಿಸಿದ್ದಾನೆ. ಆದ್ದರಿಂದಲೇ ಅವನಿಗೆ ಗಮಕಸಮಾಸಕ್ಕೆ ಸ್ಥಾನಕೊಡಬೇಕೆನ್ನಿಸಿರಬೇಕು. ಈ ಸಮಾಸದಲ್ಲಿ ಪೂರ್ವಪದವು ಸಂಖ್ಯೆ ಸರ್ವನಾಮ ಪ್ರಕೃತಿಗಳ ವಿಭಕ್ತ್ಯಂತರೂಪ, ಗುಣವಚನ ಪ್ರಕೃತಿಯ ವಿಶೇಷಣರೂಪ, ಧಾತುವಿನ ಕೃದಂತರೂಪ ಎಂಬಂತೆ ನಿಂತು, ಉತ್ತರಪದ ವಿಶೇಷ್ಯರೂಪದ ಪ್ರಾತಿಪದಿಕವಾಗಿರುತ್ತದೆ. ಇಂತಹ ರಚನೆಯನ್ನು ಕಂಡಾಗ ಅವನಿಗೆ, ಸಂಸ್ಕೃತದಲ್ಲಿ ವಿಭಕ್ತ್ಯಂತ ಪೂರ್ವಪದಗಳೊಂದಿಗೆ ಸಮಾಸಗಳೆನ್ನಿಸಿರುವ ಅಲುಕ್ ತತ್ಪುರುಷ, ಅಲುಕ್ ಬಹುವ್ರೀಹಿಗಳ ಹಾಗೆ ಇವನ್ನೂ ಸಮಾಸಗಳೆಂದು ಪರಿಗಣಿಸಬಹುದು ಎನ್ನಿಸಿರಬೇಕು. ಭಾಷಾವಿಜ್ಞಾನಿಗಳು ಕೊಡುವ ಸಮಾಸದ ವ್ಯಾಖ್ಯೆ, ನಿರೀಕ್ಷಿಸುವ ಪ್ರಕೃತಿಗಳ ಸಂಯೋಗವ್ಯವಸ್ಥೆ ಏನೇ ಇರಲಿ, ಸಂಸ್ಕೃತಭಾಷೆಯ ಸಮಾಸಗಳ ಸ್ವರೂಪವನ್ನು ಚೆನ್ನಾಗಿ ಬಲ್ಲವನಾದ ಕೇಶಿರಾಜ, ಆ ಮಾದರಿಯಲ್ಲಿ ಕನ್ನಡದಲ್ಲಿಯೂ ಗಮಕಸಮಾಸವನ್ನು ನೆಲೆಗೊಳಿಸಿದ್ದರೆ, ಆಶ್ಚರ್ಯವೇನಲ್ಲ. ಭಟ್ಟಾಕಳಂಕನು ಸಮಾಸವನ್ನು ಗಮಕವೆಂದು ಹೆಸರಿಟ್ಟು ಕರೆಯದೆ ಇದ್ದರೂ, ಈ ಸಮಾಸವನ್ನು ಪ್ರಸ್ತಾವಿಸಿರುವಲ್ಲಿಯೂ (ಸೂ. ೨೯೪) ಇದೇ ಧೋರಣೆಯಿರುವುದು ಸಾಧ್ಯ. ಕನ್ನಡದ ಪೂರ್ವಪದಗಳಿಗೆ ಸಂಸ್ಕೃತದ ಉತ್ತರಪದಗಳು ಎಲ್ಲಿ ಮಾತ್ರ ಬರಬಹುದು ಎಂಬುದರ ನಿದರ್ಶನಕ್ಕೆ ಇಲ್ಲಿ ಬಂದಿರುವಂತಿದೆ. ಸಂಖ್ಯಾಗಮಕವು ತತ್ಪುರುಷಕ್ಕೆ ಹತ್ತಿರವಾದರೆ, ಸರ್ವನಾಮ ಗುಣವಚನ ಕೃತ್ಪೂರ್ವಗಳು ಕರ್ಮಧಾರಯಕ್ಕೆ ಹತ್ತಿರ. ಪೂರ್ವೋತ್ತರಪ್ರಕೃತಿಗಳು ಸಂಧಿಕಾರ್ಯಗಳನ್ನು ಪಡೆದು ಬೆರೆಯದ ಕಾರಣ ದೇಶ್ಯ ಮತ್ತು ಸಂಸ್ಕೃತ ಶಬ್ದಗಳ ಸಂಯೋಗದ ಸಾಧುತ್ವವೇ ಗಮಕದ ವಿಶೇಷತೆಯೆಂದು ಕೆಲವರು ತಿಳಿಯುತ್ತಾರೆ; ಆದರೆ ದಿಟವಾಗಿ ಅಲುಕ್ ಸಮಾಸದ ರಚನೆಯೇ ಅದರ ವಿಶೇಷತೆಯೆನ್ನಬೇಕು.

ಸ್ಪಷ್ಟಪಡಿಸದಿದ್ದರೂ ನಿರ್ದೇಶನಾರ್ಥಕಗಳಾದ ಆ, ಈ, ಊ ಗಳೂ ಎಲ್ಲ ಏನ್ ಎಂಬ ಸರ್ವನಾಮಗಳೂ ಮಹಚ್ಛಬ್ದ ತದ್ಭವವಾದ ಮಾ ಎಂಬುದೂ ಪೂರ್ವಪದವಾಗಿದ್ದಾಗ ಗಮಕವಾಗುವುದೆಂದೇ ಕೇಶಿರಾಜನ ಗ್ರಹಿಕೆಯಿರುವಂತಿದೆ. ಆದರೆ ಇವೆಲ್ಲ ಕರ್ಮಧಾರಯಗಳೆಂದು ತಿಳಿಯುವುದೇ ಸರಿ.

'ಶಬ್ದಮಣಿದರ್ಪಣ'ದ ಗಮಕಸಮಾಸದ ಸೂತ್ರದಲ್ಲಿ (೧೬೮) ಬರುವ "ತನಗತ್ವಂ ಪೆಱಗಿತ್ವಂ" ಎಂಬ ಸೂತ್ರಭಾಗದ ಆಶಯ ಗುಣವಚನಕ್ಕೆ ಅನ್ವಯಿಸುವುದೆಂಬುದು ವೃತ್ತಿಯ ಸೂಚನೆಯಿಂದ ಮಾತ್ರವೇ ಅರ್ಥವಾಗುವುದರಿಂದ, ಸೂತ್ರ ನೇಯದ ದೋಷದಿಂದ ನರಳಿದೆಯೆಂದು ಹೇಳಬೇಕಾಗಿದೆ.

ಕ್ರಿಯಾಸಮಾಸದ ಪ್ರಸ್ತಾವ ಈ ಮೊದಲೇ 'ಶಬ್ದಸ್ಮೃತಿ' (೪೮), 'ಭಾಷಾಭೂಷಣ' (೧೩೩) ಗಳಲ್ಲಿ ಬಂದಿದ್ದು, ಕೇಶಿರಾಜ ಅದನ್ನು ವಿಸ್ತರಿಸಿದ್ದಾನೆ. ಆದರೆ ನಾಮಧಾತುಗಳನ್ನೂ ಅವುಗಳಿಂದ ಸಿದ್ಧವಾಗುವ ಅಪೂರ್ಣ ಕ್ರಿಯಾಪದಗಳನ್ನೂ ಸಮಾಸವೆನ್ನಬಹುದೇ? ಪೂರ್ವೋತ್ತರ ಪದಗಳೆರಡೂ ನಾಮವಾಚಕಗಳಾಗಿರಬೇಕೆಂಬ ಸಮಾಸಲಕ್ಷಣಕ್ಕೆ ಇದು ವಿರುದ್ಧವಲ್ಲವೇ? ಪೂರ್ಣಕ್ರಿಯಾಪದಗಳ ಪ್ರಯೋಗಗಳನ್ನು ಕೊಟ್ಟು ಕೃಲ್ಲಿಂಗಗಳೆಂದು

ಇಂಗಿತಗೊಳಿಸಿದಂತೆ, ಇಲ್ಲಿಯೂ ಮಾಡಿರಬಹುದೇ? ಉತ್ತರಪದಗಳನ್ನು ಕೃನ್ನಾಮಗಳಾಗಿ ತಿಳಿದರೆ, ಆಗ ಸಂ.ದಲ್ಲಿ ಪ್ರಚುರವಿರುವ ದ್ವಿತೀಯಾ ತತ್ಪುರುಷದ (ಉದಾ.ಕೃಷ್ಣಂ ಆಶ್ರಿತಃ - ಕೃಷ್ಣಾಶ್ರಿತಃ, ನರಕಂ ಪತಿತಃ - ನರಕಪತಿತಃ, ನಗರಂ ಗತಃ - ನಗರಗತಃ ಇ.) ಲಕ್ಷಣವನ್ನು ಇಲ್ಲಿಯೂ ಕಾಣಬಹುದು. ಕೇಶಿರಾಜ ದ್ವಿತೀಯಾ ತತ್ಪುರುಷವೆನ್ನಬಹುದಾದ ಕ್ರಿಯಾಸಮಾಸದ ಲಕ್ಷ್ಯಗಳನ್ನು ಮಾತ್ರವೇ ತೋರಿಸಿದ್ದಾನೆ. ಆದರೆ ತೃತೀಯಾದಿ ವಿಭಕ್ತಿಗಳ ಕ್ರಿಯಾಸಮಾಸಗಳೂ ಉಂಟು (ಈ ಸಮಾಸದ ಹೆಚ್ಚಿನ ವಿಚಾರಕ್ಕೆ ನೋಡಿ: ಕ.ಸಂ.ನಿ., 'ಶಬ್ದಮಣಿದರ್ಪಣಂ', ೧೯೯೪, ಪು.೮೩-೮೪; ಕ್ರಿಯಾ ಸಮಾಸ, ಸೇಡಿಯಾಪು ಕೃಷ್ಣಭಟ್ಟ, ಕರ್ನಾಟಕಲೋಚನ, ೮-೧, ಜೂನ್ ೧೯೯೫, ಪು. ೧-೯).

ಕರ್ಮಧಾರಯದ ಸಮಾಸಕಾರ್ಯಗಳು ವಿವಿಧವಾಗಿದ್ದು, ಕೆಲವು ಸಮಾಸ ಶಬ್ದಗಳ ರಚನೆ ಅರ್ಥಗಳು ಅಸ್ಪಷ್ಟವೆಂಬಂತಿವೆ; ಉದಾಹರಣೆಗಳು ಅಪೂರ್ವ ವೆಂಬಂತಿವೆ. ಈ ಅಪೂರ್ವವೆನ್ನುವ ಉದಾಹರಣೆಗಳಲ್ಲಿ ನಡುವೆ ಬಿಂದುವಿನ ಆಗಮವಾಗುವಂಥವು ವಿಶೇಷ ಪರಿಶೀಲನೆಗೆ ಅರ್ಹವಾದವು. ಹೀಗೆ ಬಿಂದು ಸೇರುವುದಕ್ಕೆ ಕಾರಣವಾದ ಭಾಷಾವ್ಯಾಪಾರಗಳು ಕುತೂಹಲಕರವಾದವು (ನೋಡಿ: ಶಮದ. ೧೯೯೪, ಪು.೭೬-೭೭). ಇವನ್ನು ಭಟ್ಟಾಕಳಂಕನು ಎಳೆಯೆಳೆಯಾಗಿ ಹಲವು ಸೂತ್ರಗಳ ವ್ಯಾಪ್ತಿಯಲ್ಲಿ (೩೩೩-೪೭) ಲಕ್ಷ್ಯಪೂರ್ವಕವಾಗಿ ವಿವರಿಸಿದ್ದರೂ, ಕೆಲವೆಡೆ ಆಗಮಗಳಿಗೆ ಕಾರಣವಾದ ಸಂದರ್ಭಗಳು ಸ್ಪಷ್ಟವಾಗುವುದಿಲ್ಲ. ಇದು ಏನಿದ್ದರೂ, ಗುಣವಚನ ಪ್ರಕೃತಿಗಳ ರೂಪವನ್ನು ಗ್ರಹಿಸುವುದಕ್ಕೆ ಕರ್ಮಧಾರಯ ಸಹಾಯಕವಾಗಿರುವುದು ಗಮನಾರ್ಹ. ಕೆಲವು ಕಡೆ ಕೇಶಿರಾಜ ವಿಗ್ರಹವಾಕ್ಯಗಳನ್ನು ತೋರಿಸಿರುವ ಕ್ರಮ ತೃಪ್ತಿಕರವಲ್ಲ (ಸೂ.೧೮೨, ೧೮೪ ಇ.).

ಕರ್ಮಧಾರಯದ ಭೇದವಾದ ದ್ವಿಗುವಿನಲ್ಲಿ ದೇಶ್ಯ ಸಂಖ್ಯಾವಾಚಕಗಳಿಗೆ ಉತ್ತರಪದವಾಗಿ ಬರುವ ಸಂಸ್ಕೃತಪದಗಳ ಸೇರಿಕೆಯ ವಿಷಯದಲ್ಲಿ ಕೇಶಿರಾಜ ಇನ್ನೂ ಸ್ಪಷ್ಟ ನಿರ್ದೇಶನವನ್ನು ನೀಡಬಹುದಾಗಿತ್ತು. 'ಪತ್ತು' ವಿನ ಆದೇಶರೂಪಗಳಲ್ಲಿ 'ಪದಿರ್' ಎಂಬುದನ್ನು ಹೇಳಲು ಅವನು ಮರೆತಿದ್ದಾನೆ.

ಅವ್ಯಯೀಭಾವವನ್ನು ನಾಗವರ್ಮ ಕೇಶಿರಾಜರು ಸಂಸ್ಕೃತದ ಕ್ರಮವನ್ನು ಹಿಡಿದು ಹಾಗೆಂದು ಕರೆದಿದ್ದರೂ, ಭಟ್ಟಾಕಳಂಕ ಮಾತ್ರ ಅಂಶಿಯೆಂದಿದ್ದಾನೆ. ಅಂಶಾಂಶಿಭಾವದಲ್ಲಿರುವ ಪದಯುಗ್ಮದಲ್ಲಿ ವಿಭಕ್ತಿಯ ಸ್ವೀಕಾರವು ಅಂಶಿಯ ಭಾಗದಲ್ಲಿಯೇ ನಡೆಯುವುದರಿಂದ ಭಟ್ಟಾಕಳಂಕ ಹಾಗೆ ಕರೆದಿರಬಹುದು. ಸಂಸ್ಕೃತದಲ್ಲಿ ಸಾಮಾನ್ಯವಾಗಿ ಪೂರ್ವಪದ ಅವ್ಯಯವಾಗಿದ್ದು, ಆ ಪೂರ್ವಪದದ ಅರ್ಥ ಮುಖ್ಯವಾಗಿರುತ್ತದೆ; ಕನ್ನಡದಲ್ಲಿ ಅವ್ಯಯವಾಗಿಲ್ಲದಿದ್ದರೂ ಪೂರ್ವಪದದ ಅರ್ಥ ಪ್ರಧಾನವಾಗಿದೆಯೆಂಬ ಒಂದು ಸಾಮ್ಯವಿರುವ ಕಾರಣ ಅವ್ಯಯೀಭಾವವೆಂಬ ಹೆಸರನ್ನು ಬಳಸಿದೆಯೆಂದು ನಾವು ತಿಳಿಯಬೇಕು. ಇಲ್ಲಿ ಪೂರ್ವಪದ ಸ್ಥಾನ/ದಿಗ್‌ವಾಚಕವಾದ ನಾಮವಿಶೇಷಣವಾಗಿರುತ್ತದೆ ಎಂದರೂ ತಾತ್ಪರ್ಯದಲ್ಲಿ ಅದೇ ವಿಶೇಷ್ಯ. ಈ ಸಮಾಸದ ಕೆಲವು ವಿಗ್ರಹವಾಕ್ಯಗಳನ್ನು ಭಾಷಾವಿಜ್ಞಾನದ ನೆರವಿನಿಂದ ಮಾತ್ರವೇ ತೃಪ್ತಿಕರವಾಗಿ ವಿವರಿಸುವುದು ಸಾಧ್ಯ. (ಉದಾ. ಅಗಂ + ಕಾಲ್ > ಅಂಗಾಲ್, ಮೇಲ್ / ಮೇಗು + ಕಾಲ್ > ಮೇಂಗಾಲ್ ಇ.).

ದ್ವಂದ್ವಸಮಾಸದಲ್ಲಿ ಕೇಶಿರಾಜ ಸಂಸ್ಕೃತದಲ್ಲಿರುವ ಹಾಗೆ ಪ್ರಭೇದ ಕಲ್ಪನೆಯನ್ನೇನೂ ಮಾಡಿಲ್ಲ. ನಿರೂಪಣೆ ಸ್ಥೂಲರೀತಿಯಲ್ಲಿದೆ; ಉದಾಹರಣೆಗಳು ಸರ್ವಪದಾರ್ಥ ಶ್ರೇಣಿಯವು. ಕನ್ನಡದ ಉಭಯಪದಾರ್ಥಶ್ರೇಣಿಯವುಗಳ ಸಮಾಸಾಂತ್ಯದಲ್ಲಿ ಬ.ವ. ಪ್ರತ್ಯಯ ಬರಲೇಬೇಕೆಂಬ ನಿಯಮವಿಲ್ಲ; ಆದರೆ ಸರ್ವಪದಾರ್ಥಶ್ರೇಣಿಯಲ್ಲಿ ಬ.ವ. ಪ್ರತ್ಯಯ ನಿತ್ಯ.

ಬಹುವ್ರೀಹಿಸಮಾಸದ ರಚನೆ ಸಂಸ್ಕೃತದಲ್ಲಿ ಸಂಕೀರ್ಣರೀತಿಯದು, ವೈವಿಧ್ಯವುಳ್ಳುದು. ಕನ್ನಡದಲ್ಲಿಯೂ ಕೆಲಮಟ್ಟಿಗೆ ಹೀಗೆಯೇ. ಇಲ್ಲಿ ಲಿಂಗವಚನ ವಿವಕ್ಷಿತಪ್ರತ್ಯಯ, ಇಕಾರ, ಅ-ಇಕಾರ ಇವು ಪ್ರಕೃತಿಗಳಿಂದ ಬಹುವ್ರೀಹಿಯನ್ನು ರೂಪಿಸುತ್ತವೆ. ಒಂದು ಸಮಾಸದಿಂದ ಇನ್ನೊಂದು ಸಮಾಸ ಸಿದ್ಧವಾಗುವುದು ಇಲ್ಲಿಯ ವಿಶೇಷ. ಲಿಂಗವಚನ ಪ್ರತ್ಯಯಗಳ ಸೇರಿಕೆಯಿಲ್ಲದೆ ಪ್ರಕೃತಿಯೇ ಬಹುವ್ರೀಹಿಯ ಅರ್ಥಕೊಡಬಹುದಾದರೂ (ಉದಾ. ಕಡುಗಲ್ಲೆರ್ದೆ) ಅಂಥವು ವಿರಳ. ಸಂಸ್ಕೃತ, ಪ್ರಾಕೃತ / ಅಪಭ್ರಂಶ ವ್ಯತೀಹಾರ ಬಹುವ್ರೀಹಿಯ ಲಕ್ಷಣದ ಉದಾಹರಣೆಗಳ ಅನುಕರಣೆಯಿಂದ ಅಲ್ಲಿಯ ಹಾಗೆಯೇ ಇಲ್ಲಿಯೂ ಪೂರ್ವೋತ್ತರ ಪದಗಳು ಅ-ಇ ಕಾರಗಳ ಪರಿವಿಡಿಯಿಂದ ಕೂಡಿರುವುದು ಆ ಬಗೆಯ ಸಮಾಸಗಳಲ್ಲಿ ಗಮನಾರ್ಹವೆನ್ನಬೇಕು. ಕೇಶಿರಾಜನ ಉದಾಹರಣೆಗಳಲ್ಲಿ ದೇಶ್ಯಶಬ್ದಗಳಿಂದಾದವು ಒಂದೂ ಇಲ್ಲ; ಕೋಲಾಕೋಲಿ, ಸಿಲ್ಕಾಸಿಲ್ಕಿ (ನಾಗವರ್ಮ: ಶ್ರೀವೀರವರ್ಧಮಾನ ಪುರಾಣಂ, ೮-೨೨) ಇಂಥವನ್ನು ಉದಾಹರಿಸಬಹುದಾಗಿತ್ತು. ಇಲಿ, ಕುಲಿ ಅಂತ್ಯವಾದ ಕೆಲವು ಬಹುವ್ರೀಹಿಗಳುಂಟೆಂದು ತೋರಿಸಿರುವುದು ಸರಿಯಲ್ಲ. ಅವು ನ್ಯಾಯವಾಗಿ ತದ್ಧಿತಾಂತಗಳೇ. ಏಕೆಂದರೆ ಇಲಿ, ಕುಲಿ ಸ್ವತಂತ್ರ ಪ್ರಕೃತಿಗಳಾಗಿ / ಪ್ರಾತಿಪದಿಕಗಳಾಗಿ ವಿಭಕ್ತಿಸ್ವೀಕಾರ ಸಾಮರ್ಥ್ಯವನ್ನು ಪಡೆದಿಲ್ಲ. ಆದರೂ ನಾಗವರ್ಮನನ್ನು ಅನುಸರಿಸಿ ಕೇಶಿರಾಜನೂ ಈ ಇಬ್ಬರನ್ನು ಅನುಸರಿಸಿ ಭಟ್ಟಾಕಳಂಕನೂ ಈ ಬಗೆಯ ಬಹುವ್ರೀಹಿಗಳನ್ನು ಕುರಿತಿದ್ದಾರೆ. ಇದಕ್ಕೆ ಸಮರ್ಥನೆ ಹೇಗೆ? ಭಟ್ಟಾಕಳಂಕನು ಕೊಡುವ ಸೂಚನೆಯನ್ನು ಗಮನಿಸಿ ಹೇಳುವುದಾದರೆ (ಶಬ್ದಾನು. ಸೂ. ೩೦೮), ಸಂಸ್ಕೃತದ ಸಮಾಸಪದ್ಧತಿಯನ್ನು ಹಿಡಿದು, ಅಲ್ಲಿಯ ನಞ್ ತತ್ಪುರುಷ ಅಥವಾ ಕೃದಂತ ತತ್ಪುರುಷ ಸಮಾಸವನ್ನೇ ಹೋಲುವಂತಿರುವ ಕನ್ನಡದ ತದ್ಧಿತಾಂತಪದಗಳನ್ನು ಸಮಾಸದ ಕಕ್ಷೆಗೆ ತಂದುಕೊಂಡಿದೆಯೆನ್ನಬೇಕಾಗುತ್ತದೆ. ಕನ್ನಡದಲ್ಲಿ ಅಕಾರದಂತೆ ಇ ಕಾರವೂ ಬಹುವ್ರೀಹಿಯ ಆಶಯವನ್ನು ತರಬಲ್ಲುದೆಂಬ ಕಾರಣದಿಂದ ನಾಗವರ್ಮ ಕೇಶಿರಾಜರು ಅವನ್ನು ಬಹುವ್ರೀಹಿ ಸಮಾಸದ ಪದಗಳನ್ನಾಗಿ ತಿಳಿದಿದ್ದಾರೆ; ಭಟ್ಟಾಕಳಂಕ ಸಮಾಸದ ಸಂಜ್ಞೆಯನ್ನು ಸೂ. ೩೦೮ರಲ್ಲಿ ಕೊಟ್ಟಿಲ್ಲ. ಆದರೆ ಸೂ. ೩೩೦ರ ನಿರೂಪಣೆಯಿಂದ ಅವನೂ ಬಹುವ್ರೀಹಿಯೆಂದೇ ತಿಳಿದಿರುವುದು ವಿದಿತ. ಇದು ಏನೇ ಆದರೂ ಮೊದಲೇ ಹೇಳಿದ ಕಾರಣದಿಂದ ಅಂತಹ ಶಬ್ದಗಳನ್ನು ತದ್ಧಿತಾಂತಗಳನ್ನಾಗಿ ತಿಳಿಯುವುದೇ ಸೂಕ್ತ. ಅದು ಕನ್ನಡದ ಜಾಯಮಾನಕ್ಕೆ ಅನುಸಾರವಾದುದು.

ಕೇಶಿರಾಜ ಸಂಖ್ಯಾ ಬಹುವ್ರೀಹಿಯನ್ನು ಕುರಿತಿಲ್ಲ; ಭಟ್ಟಾಕಳಂಕನು ಸಂಸ್ಕೃತದ ಸಂಖ್ಯೋಭಯಪದ ಬಹುವ್ರೀಹಿಯನ್ನು ಅನುಸರಿಸಿ ಅದನ್ನು ಕುರಿತಿದ್ದಾನೆ (ಸೂ.೩೧[illegible]) ಆದರೆ ಅವನ ಗ್ರಹಿಕೆಯಲ್ಲಿ 'ಅಥವಾ' ಎಂಬರ್ಥದ ಉದಾಹರಣೆಗಳನ್ನು (ಎರಡುಮೂಱು, ನಾಲ್ಕಯ್ದು) ಮಾತ್ರವೇ ಗ್ರಾಹ್ಯವಾದುವೆಂದೂ 'ಸಲ / ಬಾರಿ' ಎಂಬರ್ಥದ

ಉದಾಹರಣೆಗಳನ್ನು (ಈರ್ರೈದು, ಇರ್ಪತ್ತು), ಅವು ದ್ವಿಗುವಿನ ಉದಾಹರಣೆಗಳೆಂಬ ಕಾರಣದಿಂದಾಗಿ ಭ್ರಾಂತಿಜನ್ಯವಾದುವೆಂದೂ ತಿಳಿಯಬೇಕು.

ಅರಿಸಮಾಸ / ವಿರುದ್ಧ ಸಮಾಸ ಒಂದು ವಿಚಾರಣೀಯ ಶಬ್ದರಚನೆಯ ಸಮಾಸ. ಗಮಕ ಮತ್ತು ಕ್ರಿಯಾಸಮಾಸಗಳನ್ನು ಹೊರತುಪಡಿಸಿ, ತತ್ಪುರುಷ ಕರ್ಮಧಾರಯ ಮೊದಲಾದ ಸಮಾಸಗಳಲ್ಲಿ ವಿಹಿತವಲ್ಲದ ರೀತಿಯಲ್ಲಿ ಕನ್ನಡಶಬ್ದಗಳೊಂದಿಗೆ ಸಂಸ್ಕೃತಶಬ್ದಗಳು ಸಂಯೋಗಗೊಂಡರೆ ಅವು ಅರಿಸಮಾಸದ ದೋಷಕ್ಕೆ ಗುರಿಯಾಗುತ್ತವೆ. ಕನ್ನಡ ಮತ್ತು ಸಂಸ್ಕೃತ ಶಬ್ದಗಳು ಸೇರುವುದರಲ್ಲಿ ಶತ್ರುತ್ವ ಅಥವಾ ವಿರೋಧವೇಕೆ? ಅಂತಹ ಸೇರಿಕೆಯಿಂದ ಕಿವಿಗೆ ಅಹಿತಕರವಾದ ಮಾತು ಕೇಳಿದ ಅನುಭವವಾಗುವುದರಿಂದ ಶತ್ರುತ್ವ ಅಥವಾ ವಿರೋಧ. ಏಕೆ ಅಂತಹ ಅನುಭವವಾಗುತ್ತದೆ? ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಶಬ್ದಗಳಲ್ಲಿ ತಮತಮಗೆ ವಿಶಿಷ್ಟವಾದ ವರ್ಣಸಂಘಟನೆಯ ವ್ಯವಸ್ಥೆಯಿದ್ದು, ಆ ಶಬ್ದಗಳು ಬೆರೆತು ಒಂದೇ ಸಮಾಸಶಬ್ದವೆಂದು ಆದಾಗ, ಆ ವಿಶಿಷ್ಟತೆಗೆ ಭಂಗ ಬಂದು, ಅಪರಿಚಿತವೂ ಆಕಸ್ಮಿಕವೂ ಆದ ವರ್ಣಸಂಘಟನೆಯ ಅವ್ಯವಸ್ಥೆಯಿಂದ ಕೂಡಿದ ಶಬ್ದವೊಂದು ಕಿವಿಯ ಮೇಲೆ ಬಿದ್ದಂತಾಗಿ, ಮನಸ್ಸು ಗಲಿಬಿಲಿಗೊಳ್ಳುತ್ತದೆ. ಈ ಕಾರಣವಾಗಿ ಇಂತಹ ಸಮಾಸೀಕೃತ ಶಬ್ದಗಳನ್ನು ಕನ್ನಡಭಾಷೆಯ ಸೌಂದರ್ಯ ಸೌಕುಮಾರ್ಯಗಳಿಗಾಗಿ ಎಚ್ಚರವಹಿಸುತ್ತಿದ್ದ ಕವಿಗಳು ಸಾಮಾನ್ಯವಾಗಿ ಸಂಘಟಿಸುತ್ತಿರಲಿಲ್ಲ. ಲೋಕರೂಢಿಯಲ್ಲಿ ವಿರಳವಾದ, ಅಸಹಜವಾದ ವಾಗ್ಧೋರಣೆಯಿಂದಲೇ ಗಮನ ಸೆಳೆಯುವುದು ಉದ್ದೇಶವಾದ, ಬಿರುದಾವಳಿಯಂತಹ ಕಡೆಗಳಲ್ಲಿ ಮಾತ್ರ ಅವನ್ನು ಸಂಘಟಿಸುತ್ತಿದ್ದರು. ಇಲ್ಲವೆ ಆ ವಿಶಿಷ್ಟ ವರ್ಣಸಂಘಟನೆಯ ಸಂಸ್ಕೃತಶಬ್ದಗಳನ್ನು ಕನ್ನಡದ ಮರ್ಯಾದೆಗೆ ಒಗ್ಗುವಂತೆ ತದ್ಭವ ಮಾಡಿ, ಅಂತಹ ತದ್ಭವಗಳನ್ನು ಕನ್ನಡ ಶಬ್ದಗಳೊಂದಿಗೆ ಬೆರಸಿಯೋ ಅನೇಕ ತದ್ಭವಗಳನ್ನೇ ಒಗ್ಗೂಡಿಸಿಯೋ ಸಮಾಸಗಳನ್ನು ಮಾಡುತ್ತಿದ್ದರು. ಒಂದು ಪಕ್ಷ ಸಂಸ್ಕೃತ ಶಬ್ದಗಳು ಯಾವುದೇ ಶ್ರುತಿವೈಗುಣ್ಯವನ್ನು ತಾರದೆ ಕನ್ನಡ ಶಬ್ದಗಳೊಂದಿಗೆ ಹೊಂದಿಕೊಳ್ಳುವಂತಿದ್ದರೆ, ಎಂದರೆ ತದ್ಭವವಾಗುವ ಸಾಧ್ಯತೆಯೇ ಇಲ್ಲದೆ, ಆ ಪ್ರಕ್ರಿಯೆಗೆ ಒಳಪಡುವ ಆವಶ್ಯಕತೆಯೇ ಬೀಳದೆ, ಸುಲಲಿತಾಕ್ಷರಗಳಿಂದ ಕೂಡಿ ಅವಿಕಾರಿಗಳಾಗಿ ಇರಬಹುದಾದರೆ ಅಂಥವನ್ನು ಸಮಾಸರಚನೆಗೆ ಬಳಸಲು ಹಿಂಜರಿಯುತ್ತಿರಲಿಲ್ಲ (ಉದಾ. ಅಱುಗವಿ, ಕಡುರಾಗಂ, ಪರವೆಣ್). ನಾಗವರ್ಮ ಕೇಶಿರಾಜರ ಮನಸ್ಸಿನಲ್ಲಿ ಹೀಗೆಯೇ ವಿಚಾರ ವಿದ್ದಿರಬಹುದಾದರೂ, ನಾಗವರ್ಮನು 'ಸಮತೆಯಿಂದಂ ಸಲ್ಲುವ' ಮಿಶ್ರಣ ಯಾವುದು, ಅನ್ಯಥಾವೃತ್ತಿ ಯಾವುದು ಎಂಬುದನ್ನು ಬಿಡಿಸಿ ತೋರಿಸಬೇಕಾಯಿತು (ಶಬ್ದಸ್ಮೃ. ೬೩; ಭಾಷಾಭೂ.೧೩೨); ಕೇಶಿರಾಜನು ವಿಧಿನಿಷೇಧಗಳ ವಿಧಾನದಲ್ಲಿ ತನ್ನ ನಿಲವನ್ನು ಸ್ಪಷ್ಟಪಡಿಸಬೇಕಾಗಿದ್ದುದರಿಂದ, ಕನ್ನಡ ಸಂಸ್ಕೃತ ಶಬ್ದಗಳ ಸಮಾಸ ಪೂರ್ವಕವಿಪ್ರಯೋಗಗಳಾಗಿದ್ದರೆ ಗ್ರಾಹ್ಯವೆಂದೂ ಅದ್ಯತನ ಕವಿಪ್ರಯೋಗಗಳೋ ಲೋಕರೂಢಿಯವೋ ಆಗಿದ್ದರೆ ತ್ಯಾಜ್ಯವೆಂದೂ ಅಭಿಪ್ರಾಯಪಡುವಂತಾಯಿತು. ಭಟ್ಟಾಕಳಂಕನು ನಾಗವರ್ಮನನ್ನು ಅನುಸರಿಸಿ ಪೂರ್ವಕವಿಗಳಿಂದ ಸಾಧುವಾಗಿ ತಿಳಿಯಲ್ಪಟ್ಟ ಮಿಶ್ರಸಮಾಸಗಳನ್ನು ಉಪಾದೇಯಗಳಾಗಿ ಗ್ರಹಿಸಿದರೆ, ಕೇಶಿರಾಜನನ್ನು ಅನುಸರಿಸಿ ಬಿರುದಾವಳಿಗಳಲ್ಲಿಯ ಮಿಶ್ರಸಮಾಸಗಳನ್ನು ಅನಿರ್ಬಂಧಿತ ಶುದ್ಧಸಮಾಸಗಳೆಂದು ಅಂಗೀಕರಿಸಿದ್ದಾನೆ (ಶಬ್ದಾನು.೨೯೫-೯೬).

ಅನುಕರಣಾತ್ಮಕ ಮತ್ತು ವೀಪ್ಸಾಶಬ್ದಗಳ ಯುಗಳೋಚ್ಚಾರಣೆಯನ್ನು ಕೇಶಿರಾಜ ಸಮಾಸದ ಭಾಗವಾಗಿಯೇ ಪರಿಶೀಲಿಸಿದ್ದಾನೆ. ಆದರೆ ಇವುಗಳಲ್ಲಿ ಕೆಲವು ದ್ವಿರುಕ್ತಿಗಳಾಗಿರುವ ಕ್ರಿಯಾಪದಗಳು; ಇನ್ನು ಕೆಲವು ಅವ್ಯಯಗಳಾಗಿ ಪರಿವರ್ತಿಸಿದ ಗುಣವಚನಗಳಿಂದಾದ ನಾಮವಿಶೇಷಣಗಳು; ಮತ್ತೆ ಕೆಲವು ಅನುಕರಣಾತ್ಮಕಗಳಾದ ಅವ್ಯಯಗಳು; ಕೆಲವಂತೂ ತತ್ಪುರುಷ ದ್ವಂದ್ವಗಳಲ್ಲಿಯೇ ಸಮಾವೇಶವಾಗತಕ್ಕವು.

೫

ಪ್ರಕೃತಿಗಳಿಗೆ ನಾಮವಾಚಕಗಳ ಮೇಲೆ ಬೇರೆ ಬೇರೆ ಅರ್ಥಗಳನ್ನು ತರಬಲ್ಲ ತದ್ಧಿತ ಪ್ರತ್ಯಯಗಳೆಂಬ ನಾಮಾರ್ಥಕ ಪ್ರತ್ಯಯಗಳು ಸೇರಿ ತದ್ಧಿತಾಂತ ನಾಮಪದಗಳು ಏರ್ಪಡುತ್ತವೆ. ಸಮಾಸಗಳೂ ಈ ತದ್ಧಿತಾಂತಗಳೂ ನಿಷ್ಪನ್ನ ನಾಮಪದಗಳು. ಇವು ವಿವಿಧಾರ್ಥಗಳನ್ನು ಕೊಡುವಂತೆ ನಾಮಪದಗಳನ್ನು ಅಡಕವಾಗಿ ಕಲ್ಪಿಸುವ ಪ್ರಯತ್ನಗಳ ಫಲ. ಹೀಗೆ ಸಾಧಿತವಾದವು ಸು.೪೦-೫೦ ತದ್ಧಿತ ಪ್ರತ್ಯಯಗಳು. ಈ ಪ್ರತ್ಯಯಗಳು ಮೂಲತಃ ತಾವೂ ಪ್ರಕೃತಿಗಳೇ ಆಗಿದ್ದು, ಬಳಿಕ ಪ್ರತ್ಯಯಗಳಾಗಿ ಸಂಕುಚಿತವಾಗಿರುವಂತೆ ತೋರುವುದು. ಹೀಗೆ ಆಗಿರುವುದು ದೇಶ್ಯಪ್ರಕೃತಿಗಳಲ್ಲಿ. ಇವನ್ನು ಈಗ ತಕ್ಕಮಟ್ಟಿಗೆ ತಿಳಿಯಲಾಗಿದೆ. ಕೆಲವು ತದ್ಧಿತ ಪ್ರತ್ಯಯಗಳು ಸಂಸ್ಕೃತ ಹಾಗೂ ಪ್ರಾಕೃತ ಮೂಲದವಾಗಿದ್ದು, ಅವು ದೇಶ್ಯ ಪ್ರಕೃತಿಗಳಿಗೆ ಅಥವಾ ತದ್ಭವಗಳಿಗೆ ಸೇರುವಂತಾದುದು ಒಂದು ಸ್ವಾರಸ್ಯಕರವಾದ ಭಾಷಾವ್ಯಾಪಾರ; ಭಾಷಾಸಾಮರಸ್ಯದ ಪ್ರತೀಕ.

ವಿವಿಧ ಅರ್ಥಚ್ಛಾಯೆಗಳನ್ನು ತರಲು ಒಂದೇ ಪ್ರಕೃತಿಗೆ ಬೇರೆಬೇರೆ ತದ್ಧಿತ ಪ್ರತ್ಯಯಗಳನ್ನು ಸೇರಿಸುವ, ಅದೇ ಉದ್ದೇಶಕ್ಕಾಗಿ ಬೇರೆ ಬೇರೆ ಪ್ರಕೃತಿಗಳಿಗೆ ಒಂದೇ ಪ್ರತ್ಯಯವನ್ನು ತರುವ ಭಾಷಾಸೌಕರ್ಯ ಇಲ್ಲಿ ಮಾತ್ರ ಕಾಣುತ್ತದೆ. ಅಟಿಗ, ಅಡಿಗ, ಆಯ್ತ, ಆಳಿ ಇತ್ಯಾದಿ ಪ್ರತ್ಯಯಗಳನ್ನು ಕೇಶಿರಾಜ ಪ್ರಸ್ತಾವಿಸಿದ್ದಾನೆ. ನಾಗವರ್ಮನ ಸಾಮಗ್ರಿಯನ್ನು ಬಳಸಿದ್ದಾನೆ; ಬೆಳಸಿಯೂ ಇದ್ದಾನೆ. ಅವನು ಗಮನಿಸಿರದ ಇನ್ನೂ ಹಲವು ಪ್ರತ್ಯಯಗಳುಂಟು. ಉದಾಹರಣೆಗೆ, ಅಸಿಗ, ಇ, ಕುಚಿಗ, ತಿನಿ / ತೀನಿ, ಪಡು, ಮಯ, ವಡಿಚ ಇ. ಇವುಗಳಲ್ಲಿ ಹಲವಕ್ಕೆ ಪುಂ ಸ್ತ್ರೀ ನಪ್ ರೂಪಗಳುಂಟು. ಆದರೆ ಪುಂ ರೂಪಗಳೇ ಬಹುಪ್ರಚುರ. ಈ ಪ್ರತ್ಯಯಗಳಲ್ಲಿ ಕೆಲವನ್ನು ಹೀಗೆ ಗುರುತಿಸಿದೆ: ೧. ದೇಶ್ಯರಚನೆಯವು: ಆಡು + ಇಗ > ಅಟಿಗ/ ಅಡಿಗ, ಇಲ್ (< ಇಲ್ಲ ) + ಇ > ಇಲಿ, ಉಣ್ + ಇ > ಉಣಿ, ಉಳ್ + ಅ > ಉಳ್ಳ, ಉಳಿ (ಗೋಪನಾರ್ಥದಲ್ಲಿ) + ಗ > ಉಳಿಗ, ಒಡೆ + ಅ > ಒಡೆಯ, ಕೊಲ್ + ಇ > ಕುಲಿ / ಕುಲಿಗ, ಕೊಳ್ + ಇ > ಕುಳಿ / ಗುಳಿ, ತಿನ್ + ಇ > ತಿನಿ / ತೀನಿ ಇ. ೨ ಸಂಸ್ಕೃತಪ್ರತ್ಯಯಮೂಲವಾದವು : ಅಲಚ್ / ಅಲ > ಆಳಿ, ಆಯತ > ಆಯ್ತ, ಇಲ > ಆಯಿಲ, ಕ > ಕ / ಉಕ, ಕೃ / ಕಾರ > ಕಾಱ / ಗಾಱ, ಜ > ಚ / ಇಚ, ಠಕ್ / ಇಕ > ಇಗ, ಮತುಪ್ / ಮತ್ / ವತ್ > ವಂತ, ಮಯಟ್ / ಮಯ, ವಲ / ಪಾಲ > ವಳ / ವಳ್ಳ; ಸಂ.ದ ತ್ವ/ ತ್ವನ ಅಪಭ್ರಂಶದ -ತ್ತಣದ ಮೂಲಕ -ತನ, ಪ್ರಾಕೃತದ -ಪ್ಪಣದ ಮೂಲಕ -ಪಣ ಆಗಿರುವಂತಿದೆ. ಅಲ್ಲದೆ ಸಂಸ್ಕೃತಮೂಲದ

ಕೆಲವು ಪ್ರತ್ಯಯಗಳು ಪ್ರಾಕೃತದ ಮೂಲಕವಾಗಿಯೇ ಕನ್ನಡವನ್ನು ಹೊಕ್ಕಿವೆಯೆಂದು ಸಹ ಪ್ರತಿಪಾದಿಸಿರುವುದುಂಟು. (ಕನ್ನಡ - ಅಪಭ್ರಂಶಗಳಲ್ಲಿ ಕೊಳ್ಕೊಡುಗೆ, 'ಶ್ರೀಕಂಠತೀರ್ಥ' ೧೯೭೬, ಪು.೬೧೧-೧೨). ಪುಂ.ರೂಪಗಳಿಗೆ ಇತ್ತಿ / ಇತಿ / ತಿ (< ಪ್ರಾ. ಇತ್ಥೀ < ಸಂ. ಸ್ತ್ರೀ) ಪ್ರತ್ಯಯಗಳು ಸೇರಿ ಸ್ತ್ರೀಲಿಂಗದ ತದ್ಧಿತಾಂತರೂಪಗಳಾಗಿವೆ. ಕೆಲವು ತ್ರಿಲಿಂಗಕ್ಕೆ ಸರಿಬರುತ್ತವೆ.

ತದ್ಧಿತಾಂತ ನಾಮಪದಗಳಿಗೆ ಭಾವಾರ್ಥದಲ್ಲಿ ವಿವಿಧವಾಗಿ ಪ್ರತ್ಯಯಗಳು ಸೇರುವ ಅವಕಾಶವಿದೆ. ಹಾಗೆ ಸೇರಿದಾಗ ಭಾವ, ಸ್ಥಿತಿ, ಅವಸ್ಥೆ, ತಿಳಿವಿಕೆ ಮುಂತಾದ ಅರ್ಥಗಳು ಅವಕ್ಕೆ ಬರುತ್ತವೆ. ಇವು ಅಸೆಯ, ಇಕೆ / ಇಕ್ಕೆ, ಉ, ಉಮೆ, ಟು, ತನ, ಪು, ಮೆ ಇತ್ಯಾದಿಯಾದವು. ಇಕೆ / ಇಕ್ಕೆ ದೇಶ್ಯಪ್ರಕೃತಿಗಳಿಗೆ ಹತ್ತುವಂತೆಯೇ ಸಂಸ್ಕೃತ ಪ್ರಕೃತಿಗಳಿಗೆ ಕೂಡ ಹತ್ತಬಹುದು. ತನ ಪ್ರತ್ಯಯವನ್ನು ಸಂಸ್ಕೃತ ಪ್ರಕೃತಿಗಳಿಗೆ ಹತ್ತಿಸಬಾರದು ಎನ್ನುವುದು ಕೇಶಿರಾಜನ ಸ್ಪಷ್ಟವಾದ ಸೂಚನೆಯಾಗಿದೆ. ಆದರೆ ಭಟ್ಟಾಕಳಂಕ ಹತ್ತಿಸಬಹುದು ಎಂದಿದ್ದಾನೆ (ಶಬ್ದಾನು ಸೂ.೪೩೦ ವ್ಯಾ). ಇದಕ್ಕೆ ಕಾರಣ, ಕೇಶಿರಾಜನ ಕಾಲದವರೆಗೆ ಆ ಪ್ರತ್ಯಯ ಕೂಡಿದ ಭಾವನಾಮದ ವಿಷಯದಲ್ಲಿ ಕವಿಗಳು ಪಾಲಿಸುತ್ತಿದ್ದ ಕಟ್ಟುಪಾಡು ಅವನ ಅನಂತರಕಾಲದ ಕವಿಗಳ ಕೈಯಲ್ಲಿ ಕಾಲಗತಿಗೆ ಅನುಸಾರವಾಗಿ ಸಡಿಲಗೊಂಡಿತು ಎಂಬುದೇ ಆಗಿದೆ. ತನ ಪ್ರತ್ಯಯ ಸೇರಿದ ತದ್ಧಿತಾಂತ ಭಾವನಾಮಗಳಿಗೆ ವಿಧಿನಿಷೇಧಗಳು ದ್ರಾವಿಡಭಾಷೆಗಳಲ್ಲಿ ಬಲುಮಟ್ಟಿಗೆ ಸಮಾನವಾಗಿವೆ. ಅಸೆಯ, ಮೆ ಇವು ಸಂಖ್ಯಾಪ್ರಕೃತಿಗಳಿಗೆ, ಉ, ಕೆ, ಟು, ಪು, ಮೆ, ವಣಿಗೆ ಇವು ಭಾವಾರ್ಥದ ಗುಣವಾಚಕಗಳಿಗೆ ಹತ್ತುತ್ತವೆ.

ಕೇಶಿರಾಜನು ಕೃದಂತ ಭಾವನಾಮಗಳ ವಿಚಾರವನ್ನು ತದ್ಧಿತ ಪ್ರಕರಣದಲ್ಲಿ ಕುರಿತಿದ್ದಾನೆ; ಆಖ್ಯಾತ ಪ್ರಕರಣದಲ್ಲಿ ಕುರಿತಿದ್ದರೆ ಚೆನ್ನಾಗಿತ್ತು. ಈ ಗುಂಪಿನ ಪ್ರತ್ಯಯಗಳು ಸಹ ವಿವಿಧವಾದವು. ಇವು ಕನ್ನಡ ಭಾಷೆಯ ವ್ಯಾಪ್ತಿ ವಿಸ್ತಾರಗಳನ್ನೂ ಶಬ್ದರಚನೆಯಲ್ಲಿ ಅಡಕಗುಣ ಸಮ್ಮತೆಗಳನ್ನೂ ಮನವರಿಕೆಮಾಡಿಕೊಡಲು ಸಮರ್ಥವಾಗಿವೆ. ಕೇಶಿರಾಜ ಇಕೆ/ ಇಕ್ಕೆ, ಕ,ಕೆ, ಟ, ತ,ಪಿ,ಪು,ಮೆ,ವಿ,ವು ಹೀಗೆ ಕೆಲವನ್ನು ಗುರುತಿಸಿದ್ದಾನೆ. ಅಣೆ, ಗೆ, ತೆ, ವಳಿ, ವೆ ಮೊದಲಾದವನ್ನೂ ಈ ವರ್ಗಕ್ಕೆ ಸೇರಿಸಬಹುದು. ಧಾತುಗಳೇ ನೇರವಾಗಿ ಭಾವನಾಮದ ಅರ್ಥಗಳನ್ನು ಕೊಡಬಹುದು; ಪದಾದಿ ಸ್ವರವನ್ನು ದೀರ್ಘವಾಗಿ ಮಾಡುವುದರಿಂದಲೂ ಅದು ಸಾಧ್ಯ (ನಡೆ, ನುಡಿ, ಬೆಳೆ ; ಇಡು > ಈಡು, ಕುಡು > ಕೋಡು; ಇಸು > ಏಸು ಇ.). ಇಕೆ ಅರ್ಥದ ಅಣ (ಉದಾ. ಮಾಡುವಣ, ನೋಡುವಣ) ಬಹುಶಃ ಅಪಭ್ರಂಶ ಮೂಲವಾದುದು (ಅಣು > ಅಣ).

ಔಪಮ್ಯವಾಚಕವಾದ ಪೋಲ್ / ವೊಲ್, ಅಂತೆ / ಅಂತೆವೊಲ್ ಸೇರಿದ ನಾಮಪ್ರಕೃತಿಗಳನ್ನು ಸಹ ಕೇಶಿರಾಜ ತದ್ಧಿತಾಂತಗಳೆಂದಿದ್ದಾನೆ. ಇದಕ್ಕೆ ಸಂಸ್ಕೃತ ವೈಯಾಕರಣರೂ ಹಾಗೆ ತಿಳಿದಿರುವುದೇ (ಉದಾ. ಪುತ್ರವತ್, ಬ್ರಾಹ್ಮಣವತ್: ವತ್ ತದ್ಧಿತ ಪ್ರತ್ಯಯ) ಕಾರಣ. ಇಲ್ಲಿ ಪ್ರಕೃತಿಗಳು ಪೋಲ್, ಅಂತು. ಛಂದಸ್ಸಿನ ಅಗತ್ಯಕ್ಕಾಗಿ ಪೋಲ್ > ವೊಲ್ ಆಗಿರುವಂತೆಯೂ ಹಳಗನ್ನಡದ ವ್ಯಂಜನಾಂತ ವಾಗ್ಯೋರಣೆ ಕಾರಣವಾಗಿ ಕೂಡುನುಡಿ ಅಂತೆವೋಲ್ ಹುಟ್ಟಿರುವಂತೆಯೂ ತೋರುತ್ತದೆ.

ಕೇಶಿರಾಜ ಹಳಗನ್ನಡದ ಸೌಷ್ಠವ ಸೌಕುಮಾರ್ಯಗಳನ್ನು ಎತ್ತಿ ಹಿಡಿಯುವ ಯಾವ ಅವಕಾಶವನ್ನೂ ವ್ಯರ್ಥವಾಗಲು ಬಿಡುವುದಿಲ್ಲ. ಸಂಸ್ಕೃತದ ನಾಮ ಪ್ರಕೃತಿಗಳಿಗೆ ತನ ಪ್ರತ್ಯಯವನ್ನು ನಿಷೇಧಿಸಿರುವಲ್ಲಿ, ಕೃದಂತಭಾವನಾಮಗಳನ್ನು ಶಿಥಿಲಗೊಳಿಸಬಾರದೆನ್ನುವಲ್ಲಿ ( ಕಾಣ್ಕೆ > ಕಾಣಿಕೆ ; ಪೂಣ್ಕೆ > ಪೂಣಿಕೆ) ಇದನ್ನು ಗಮನಿಸಬಹುದಾಗಿದೆ.

೬

ಬೇರೆ ಯಾವುದೇ ಭಾಷೆಯಲ್ಲಿ ಹೇಗೋ ಹಾಗೆಯೇ ಕನ್ನಡದಲ್ಲಿ ಸಹ ಕ್ರಿಯಾಪದದ ಸ್ಥಾನ ಮುಖ್ಯವಾದುದು; ರಚನೆ ಸಂಕೀರ್ಣವಾದುದು; ಹೆಚ್ಚು ವಿವರಣೆಯನ್ನು ಅಪೇಕ್ಷಿಸುವಂಥದು. ಕೇಶಿರಾಜ ಕ್ರಿಯಾಪ್ರಕೃತಿ / ಧಾತುವನ್ನು ಗುರುತಿಸಲು ಅನುಸರಿಸುವ ವಿಧಾನ ಕುತೂಹಲಕರವಾದುದು. ಧಾತುಗಳಿಗೆ ನೇರವಾಗಿ ಆಖ್ಯಾತ ಪ್ರತ್ಯಯಗಳು ಸೇರಿ ಪ್ರತಿಷೇಧಕ್ರಿಯಾಪದಗಳಾಗುತ್ತವೆ ಎಂಬ ಗ್ರಹಿಕೆಯ ಮೇಲೆ ಔಪವಿಭಕ್ತಿಗಳೂ ನಾಮವಿಭಕ್ತಿಗಳೂ ಸೇರಿರದ ಪ್ರತಿಷೇಧಕ್ರಿಯಾರೂಪಗಳನ್ನು ಮೂಲವಾಗಿಟ್ಟುಕೊಂಡು, ಆಖ್ಯಾತಪ್ರತ್ಯಯಗಳನ್ನು ಲೋಪಿಸಿದರೆ ಉಳಿಯುವುದೇ ಧಾತುವೆನ್ನುತ್ತಾನೆ. ನಡುವೆ ಪ್ರತಿಷೇಧ ಪ್ರತ್ಯಯದ ಅಸ್ತಿತ್ವವುಂಟೆನ್ನುವ ಆಧುನಿಕಭಾಷಾವಿಜ್ಞಾನಿಗಳಿಗೆ ಕೇಶಿರಾಜನ ಕ್ರಮ ಸಮ್ಮತವಾಗದೆ ಹೋಗಬಹುದು.

ಕೇಶಿರಾಜನು ಕ್ರಿಯಾಪದರಚನೆಯ ಮುಖ್ಯಾಂಶದ ವಿವರಣೆಗೆ ಎಂದಿನಂತೆ ನಾಗವರ್ಮನನ್ನೇ ಅನುಸರಿಸಿದ್ದಾನೆ. "ಅಮರಯಿರೆನೆವು" ಎಂಬ ಪ್ರತ್ಯಯಸೂಚಿಯನ್ನು ಅವನಿಂದಲೇ ತೆಗೆದುಕೊಂಡಿದ್ದಾನೆ. ಆದರೆ 'ಅಮ್' ಎಂಬುದು ನ್ಯಾಯವಾಗಿ 'ಅನ್' ಎಂದಿರಬೇಕಾಗಿತ್ತು. ಅಲ್ಲದೆ ಈ ಸೂಚಿ ಅಸಮಗ್ರ. ಸ್ತ್ರೀಲಿಂಗ ಏಕವಚನದ ಅಳ್, ನಪುಂಸಕಲಿಂಗ ಏಕ ಮತ್ತು ಬಹುವಚನಗಳ ಉದು ಉವು ಎಂಬುವೂ ಅದರೊಂದಿಗೆ ಸೇರಬೇಕಾಗಿತ್ತು. ಇವನ್ನು ಕೇಶಿರಾಜ ಬೇರೆಡೆ ಹೇಳಿರುವುದೇನೊ, ನಿಜ. ಮ.ಪು. ಏ.ವ. ಅಯ್ > ಎ ಆಗಿರುವುದಕ್ಕೆ ಪೂರ್ವಕವಿಗಳಲ್ಲೇ ನಿದರ್ಶನಗಳಿವೆ. ಉದು ಉವು ಇವನ್ನು ನಪುಂಸಕಲಿಂಗದ ಸಹಜ ಆಖ್ಯಾತ ಪ್ರತ್ಯಯಗಳೆನ್ನದೆ ಆದೇಶಗಳೆಂದು ಏಕೆ ಹೇಳಬೇಕಾಯಿತೋ ತಿಳಿಯದು (ಸೂ.೨೨೫). ಆದರೆ ಭೂತಕಾಲದಲ್ಲಿ ಮಾತ್ರವೇ ಹತ್ತುವ ವಿಶೇಷ ಪ್ರತ್ಯಯಗಳಾದ ಇತು, ಇತ್ತು, ಅತ್ತು ಎಂಬವನ್ನು ಪ್ರಸ್ತಾವಿಸಿರುವುದು ಮೆಚ್ಚಬೇಕಾದ್ದು. ನಾಗವರ್ಮನೇ ಈ ವಿಷಯವನ್ನು ಹೇಳಲು ಮರೆತಿಲ್ಲ. ಧಾತುಗಳಿಗೆ ಇವು ಸೇರುವ ರೀತಿಯಲ್ಲಿ ಒಂದು ವಿಶಿಷ್ಟ ವ್ಯವಸ್ಥೆಯುಂಟು; ಅದನ್ನು ಇಬ್ಬರೂ ವಿವರಿಸಿಲ್ಲ.

ಮಧ್ಯಮಪುರುಷ ಏಕವಚನ ಸ್ತ್ರೀಲಿಂಗದಲ್ಲಿ, ಪುಲ್ಲಿಂಗದಲ್ಲಿ ಹೇಗೋ ಹಾಗೆಯೇ ಅಯ್ ಪೂರ್ಣ ಕ್ರಿಯಾಪದವನ್ನು ರಚಿಸುತ್ತದೆ. ಅಯ್ > ಎ ಸಹ ಸಾಧ್ಯ. ಆದರೆ ಅವ್ ಸಹ ಸೇರುತ್ತದೆ ಎಂಬುದನ್ನು ಕೇಶಿರಾಜ ಹೇಳದೆ ಬಿಟ್ಟಿದ್ದಾನೆ. ಪೂರ್ವಕವಿ ಪ್ರಯೋಗಗಳುಂಟು. ಆದರೆ ಈ ಅವ್ ಆಖ್ಯಾತಪ್ರತ್ಯಯವಾಗಿರದೆ, ಸಂಬೋಧನೆಗಾಗಿ ಬಂದಿರುವ ನಿಪಾತಾವ್ಯಯವಾಗಿರುವುದೆಂದು ತಿಳಿದು ಅವನು ಹೇಳದೆ ಬಿಟ್ಟಿರುವುದು ಸಾಧ್ಯ.

ಕನ್ನಡದ ಗುಣವಚನ, ಸರ್ವನಾಮ, ಸಂಖ್ಯೆ ಇವುಗಳ ಮೇಲೆ ಹಾಗೂ ಸಂಸ್ಕೃತದ ಗುಣವಚನ ಮತ್ತು ನಾಮವಾಚಕಗಳ ಮೇಲೆ ನೇರವಾಗಿ ಆಖ್ಯಾತಪ್ರತ್ಯಯ ಹತ್ತಿ ನಾಮಪದವೇ ಕ್ರಿಯಾಪದದ ಅರ್ಥ ಕೊಡುವಂತಾಗುವುದು ಒಂದು ಸ್ವಾರಸ್ಯಕರ ಭಾಷಾವ್ಯಾಪಾರ. ಭಾಷೆಯ ಸಂಗ್ರಾಹ್ಯಗುಣ, ರಚನೆಯ ಕೌಶಲ ಇಲ್ಲಿ ಎದ್ದು ತೋರುತ್ತದೆ. ಆದರೆ ಇಂತಹ ಕಡೆ ಕ್ರಿಯಾರ್ಥವಿರಲೇ ಬೇಕೆ, ಆಖ್ಯಾತಪ್ರತ್ಯಯಗಳು ಸರ್ವನಾಮಾರ್ಥಕಗಳೇ ಆಗಿರಬಾರದೇಕೆ ಎಂಬ ಪ್ರಶ್ನೆಗಳಿಗೆ ಅವಕಾಶವಿದೆ. ಧಾತುಗಳಿಗೆ ನೇರವಾಗಿ ನಾಮವಾಚಕ ಸೇರಿ ಕರ್ಮಧಾರಯ ಸಮಾಸದಂತಹ ಶಬ್ದಗಳು ಏರ್ಪಡುವುದನ್ನು ಕೇಶಿರಾಜ ಕುರಿತಿಲ್ಲ. (ಉದಾ. ಕೊಳ್ಗಾಗ್ರ್, ತಿಂಗುಳ್, ಪಿಟಿಬ್ನೀರ್).

ಕಾಲವಾಚಕಪ್ರತ್ಯಯಗಳು ಧಾತು ಮತ್ತು ಆಖ್ಯಾತಪ್ರತ್ಯಯಗಳ ನಡುವೆ ಬರುವುದು ಕ್ರಿಯಾಪದರಚನೆಯಲ್ಲಿ ಒಂದು ಮುಖ್ಯವಿಷಯ. ಆಗ ಔಪವಿಭಕ್ತಿಗಳು ಎಲ್ಲಿ ಕಾಣಿಸುತ್ತವೆ, ಎಲ್ಲಿ ಇಲ್ಲ ಎನ್ನುವುದು ಧಾತುವಿನ ಸ್ವರೂಪವನ್ನು ಅವಲಂಬಿಸಿ ರುತ್ತದೆ. ಕಾಲತ್ರಯದ ಮೂರು ಕ್ರಿಯಾಪದಗಳಿಗೂ ಪ್ರತಿಷೇಧ ಕ್ರಿಯಾರೂಪ ಒಂದೇ ವಿಧವಾದುದು. ಆದರೆ ಸಾಂಪ್ರದಾಯಿಕವಾಗಿ ಭೂತಕಾಲದ ರೂಪವೆಂದು ಇದನ್ನು ಕರೆಯಲಾಗುವುದು.

ಪುರುಷತ್ರಯಗಳು ಬೆರೆತು ಬರುವ ವಾಕ್ಯದ ರಚನೆಯಲ್ಲಿ ಕ್ರಿಯಾಪದದ ಸ್ವರೂಪ ಹೇಗಿರಬೇಕು ಎನ್ನುವುದನ್ನು ಕೇಶಿರಾಜನು ನಾಗವರ್ಮನನ್ನು ಅನುಸರಿಸಿ (ಶಬ್ದಸ್ಮೃತಿ ೮೫, ಭಾಷಾಭೂಷಣ ೨೦೧) ಸಯುಕ್ತಿಕವಾಗಿ ನಿರೂಪಿಸಿದ್ದಾನೆ (೨೨೩). ಅವನ ಲಕ್ಷ್ಯಗಳು ಸ್ವಕಲ್ಪಿತ ಗದ್ಯವಾಕ್ಯಗಳಾಗಿರುವಂತೆ ತೋರುತ್ತವೆ; ಕಾವ್ಯಪ್ರಯೋಗಗಳನ್ನು ಉದಾಹರಿಸಬಹುದಾಗಿತ್ತು.

ದ್ರಾವಿಡಭಾಷೆಯ ಪ್ರಾಚೀನಕಾಲದ ಲಿಂಗವ್ಯವಸ್ಥೆಯನ್ನು ಮನವರಿಕೆ ಮಾಡುವ ಕುಂ, ಗುಂ ಪ್ರತ್ಯಯಗಳು ಹೇಗೆ ಅವಿಶಿಷ್ಟ ಲಿಂಗವಚನವ್ಯವಸ್ಥೆಯಿಂದ ಕೂಡಿ ವರ್ತಮಾನ ಭವಿಷ್ಯತ್ ಕಾಲಗಳಲ್ಲಿ ಪ್ರಥಮಪುರುಷದ ಏಕವಚನದ ಕ್ರಿಯಾರ್ಥವನ್ನು ವಿಶೇಷವಾಗಿ ತರಬಲ್ಲುವು ಎಂಬುದನ್ನು ನಾಗವರ್ಮನು ಮೊದಲು (ಶಬ್ದಸ್ಮೃತಿ ೩೯೭; ಭಾಷಾಭೂ.೨೦೯) ತಿಳಿಸಿದ್ದಾನೆ. ಕೇಶಿರಾಜ ಭೂತಕಾಲಕ್ಕೆ ಕೂಡ ಅವು ಅನ್ವಯಿಸುವುದೆಂದು ತಿಳಿಸಿರುವನಾದರೂ, ತಕ್ಕ ಕಾವ್ಯಪ್ರಯೋಗಗಳನ್ನು ಉದ್ಧರಿಸಿರದ ಕಾರಣ ಇದು ಮತ್ತೆ ಪರಿಶೀಲಿಸತಕ್ಕುದಾಗಿದೆ. ಭಟ್ಟಾಕಳಂಕನ ವಿವೇಚನೆಯಂತೂ ಆಭಾಸಕರ, ದೋಷಪೂರ್ಣ (ಶಬ್ದಾನು.೪೭೨).

ಕೇಶಿರಾಜನು ಕುರಿತಿಲ್ಲದ ವಿಶೇಷ ಆಖ್ಯಾತಪ್ರತ್ಯಯಗಳು ಇನ್ನೂ ಕೆಲವುಂಟು. ಇವು ಕ್ವಚಿತ್ಪ್ರಯೋಗವಾದ್ದರಿಂದ, ಇವನ್ನು ಅವನು ಪ್ರಸ್ತಾವಿಸಿಲ್ಲದಿರಬಹುದು. ಇವುಗಳಲ್ಲಿ ಕೆಲವು ಬಹುಶಃ ಪೂರ್ವದ ಹಳಗನ್ನಡ ಕಾಲದವು (ಅನ್: ಆನ್/ ಒನ್; ಅಳ್: ಒಳ್; ಅರ್ : ಒರ್; ಉದು: ಒದು); ಕೆಲವು ವಿಶೇಷರೂಪಗಳಾಗಿದ್ದು, ಅವುಗಳ ರಚನೆ ವಿಸ್ತೃತ ಚರ್ಚೆಗೆ ಎಡೆಕೊಟ್ಟಿದೆ (ಇದೆ, ಅದೆ < ಇರ್ದಪುದು ? ; ಇವೆ, ಅವೆ < ಇರ್ದಪುವು ?). ಹೀಗೆಯೇ 'ಅದೆಂತೆನ್ನ, 'ಅದೇಕೆನ್ನ', 'ಕಟಕೋಪಾಧ್ಯಾಯನಾರೆಂಬ' ಇಂತಹ ರೂಪಗಳು (ಎನ್ನ / ಎಂಬ < ಎಂಬೆಯೊ ?) ಸಹ. ಮಧ್ಯಮಪುರುಷದ ಏ.ವ.ದ ಅಯ್ > ಎ ಆಗುವುದನ್ನು ಅದರ ಪ್ರಚುರತೆಯ ದೃಷ್ಟಿಯಿಂದಾದರೂ ಕೇಶಿರಾಜ ಪ್ರಸ್ತಾವಿಸಬಹುದಾಗಿತ್ತು.

ಕನ್ನಡ ಸಂಸ್ಕೃತ ಧಾತುಗಳ ಮೇಲೆ ಹತ್ತುವ ಪ್ರೇರಣಾದಿ ಅರ್ಥಗಳ ಇಸು/ ಚು ಪ್ರತ್ಯಯ ಭಾಷಿಕರಚನೆಯ ದೃಷ್ಟಿಯಿಂದ ವಿಚಾರಯೋಗ್ಯವಾದುದು. ಕೇಶಿರಾಜ ಹೇತ್ವಾದಿ ಅರ್ಥಗಳನ್ನು ಪೃಥಕ್ಕರಿಸಿಕೊಂಡು ಇವನ್ನು ವಿಶ್ಲೇಷಿಸಿದ್ದರೂ, ಕೆಲವೆಡೆ ಅವು ಸಂಸ್ಕೃತ ಭಾವವಚನಗಳಿಗೆ ಹಾಗೂ ಕನ್ನಡ ಧಾತುಗಳಿಗೆ ಹೇಗೆ ಸೇರುತ್ತವೆ, ಪೂರ್ವಪ್ರಕೃತಿಗಳ ನಿಚ್ಚಳವಾದ ಸ್ವರೂಪವೇನು ಎನ್ನುವುದನ್ನು ತಿಳಿಯುವುದೇ ಕಷ್ಟವೆನ್ನಬೇಕು. ಈ ವಿಷಯದಲ್ಲಿ ನಾಗವರ್ಮ ಸ್ವಾರ್ಥ, ಪ್ರಯೋಜಕಾರ್ಥ ಮತ್ತು ಹೇತ್ವರ್ಥಗಳನ್ನು ವಿಭಜಿಸಿ ಇಸು ಹತ್ತುವುದನ್ನು ನಿರೂಪಿಸಿದ್ದರೂ (ಭಾಷಾಭೂ. ೨೧೩,೨೧೪, ೨೨೦), ಪರ್ಯಾಯವಾದ ಚು ಬಗೆಗೆ ತನ್ನ ವ್ಯಾಕರಣಗಳಲ್ಲಿ ಏನೂ ಹೇಳಿಲ್ಲ. ಆದರೆ ಭಟ್ಟಾಕಳಂಕ ಇಸು / ಚು ಪರ್ಯಾಯವನ್ನೂ ಸಂಸ್ಕೃತ ಭಾವವಚನಾದಿಗಳಿಗೆ ಇಸು ಹತ್ತುವ ವೈಚಿತ್ರ್ಯವನ್ನೂ ತಕ್ಕ ವಿಸ್ತಾರದಲ್ಲಿ ಕುರಿತಿದ್ದಾನೆ (ಶಬ್ದಾನು.೪೪೫, ೫೩೩-೪೦). ಆದರೆ ಅವನ ನಿರೂಪಣೆಯಲ್ಲಿ ವಿವಾದಾಸ್ಪದವಾದ ಸಂಗತಿಗಳೂ ಇಲ್ಲದಿಲ್ಲ. ಈ ಪ್ರತ್ಯಯಗಳನ್ನು ಕುರಿತು ವಿಚಾರ ಮಾಡುವಾಗ ಎಲ್ಲ ವೈಯಾಕರಣಸೂಚನೆಗಳನ್ನೂ ಶಮದ.ದ ಧಾತುಪಾಠವನ್ನೂ ಒಗ್ಗೂಡಿಸಿಕೊಂಡು ವಿಚಾರವನ್ನು ಮಾಡುವುದು ಫಲಪ್ರದವೆಂದು ಹೇಳಬಹುದಾಗಿದೆ. ಧಾತುಪ್ರಕರಣದಲ್ಲಿ ಪರೋಕ್ಷವೆನ್ನಬಹುದಾದ ಸೂಚನೆಯಿರುವುದು ಹೊರತು ಕೇಶಿರಾಜ ಇಸು / ಚು ಇವುಗಳ ಪರ್ಯಾಯವನ್ನೇ ಹೇಳದಿರುವುದು ಗಮನಾರ್ಹವಾಗಿದೆ. ಅಂತಹ ಧಾತುಗಳು ಕೆಲವು ಮಾತ್ರ, ಹೆಚ್ಚಿನವು ಚುಕಾರಾಂತ ಸ್ವತಂತ್ರಧಾತುಗಳು ಎಂಬುದರಿಂದ ಅವನು ಹೇಳದೆ ಇರಬಹುದೇನೋ. ನಾಗವರ್ಮನು ತನ್ನ ವ್ಯಾಕರಣಗಳಲ್ಲಿ ಹೇಳದೆ ಇರುವುದೇ ಕಾರಣವಾಗಿರಲೂಬಹುದು.

ಕೇಶಿರಾಜ 'ಕವಿರಾಜಮಾರ್ಗ'ದ ದಕ್ಷಿಣೋತ್ತರ ಮಾರ್ಗಗಳ ಪ್ರಸ್ತಾವವನ್ನು ಎತ್ತುವುದಿಲ್ಲ. ಅದು ಅನಾವಶ್ಯಕವೆಂದು ಅವನಿಗೆ ತೋರಿರಬೇಕು. ಆದರೆ ರೂಪಗಳ ಪ್ರಸ್ತಾವವೇನೋ ಸ್ವಲ್ಪಮಟ್ಟಿಗೆ ಉಂಟು. ವರ್ತಮಾನ ಭೂತಕಾಲಗಳ ಕ್ರಿಯಾಪದಗಳ ರಚನೆಯಲ್ಲಿ ರ ಲ ಳ ಗಳಿಗೆ ಸಹ ಯಕಾರಕ್ಕೆ ಇರುವಂತೆಯೇ ಅನುನಾಸಿಕತ್ವ ಕೆಲವು ಸಲ ಉಂಟು ( ಬರ್: ಬಂದಪಂ, ಬಂದಂ; ನಿಲ್: ನಿಂದಪಂ, ನಿಂದಂ; ಕೊಳ್: ಕೊಂಡಪಂ, ಕೊಂಡಂ).

ಕೆಲವು ಧಾತುಗಳ ಭಾಷಿಕ ವ್ಯತ್ಯಯಗಳು ಅಘೋಷ ಮತ್ತು ಘೋಷ ವರ್ಣಗಳ ನಡುವಣ ವಿನಿಮಯವನ್ನೂ ಆದಿಸ್ವರದ ಸ್ವರೂಪವನ್ನೂ ಹಿಡಿದು ನಡೆಯುತ್ತವೆ. ಕೇಶಿರಾಜನೂ ಸೇರಿದಂತೆ ಪ್ರಾಚೀನ ವೈಯಾಕರಣರೆಲ್ಲ ಕಿಡು, ತಿಱು, ಬಿಸು, ಇಸು, ಕುಡು, ತುಡು ಈ ಕೆಲವು ಧಾತುಗಳನ್ನು ಸ್ವರ ಇ ಕಾರ ಉಕಾರಾದಿ ಶಬ್ದಗಳನ್ನಾಗಿ ಗ್ರಹಿಸಿ ಕ್ರಿಯಾಪದ ರಚನೆಯನ್ನು ನಿರೂಪಿಸಿದ್ದಾರೆ. ಆದರೆ ದ್ರಾವಿಡ ಭಾಷಾಸಾದೃಶ್ಯರೂಪಗಳ ಹಾಗೂ ಆ ಭಾಷೆಗಳಲ್ಲಿ ನಡೆಯುವ ಸ್ವರವ್ಯತ್ಯಯ ನಿಯಮದ ಅನ್ವಯ ಅವು ಸ್ವರ ಎ ಕಾರ ಒ ಕಾರಾದಿ ಶಬ್ದಗಳೆಂಬುದಾಗಿ ಆಧುನಿಕ ಭಾಷಾವಿಜ್ಞಾನಿಗಳು ತಿಳಿಯುತ್ತಾರೆ. ಆಗ ಅವುಗಳ ಕ್ರಿಯಾಪದ ರಚನೆಯನ್ನು ಹೆಚ್ಚು ಸರಳವಾಗಿ ನಿರೂಪಿಸುವುದು ಸಾಧ್ಯ. ಱ > ತ ಪರಿವರ್ತನೆಯಲ್ಲಿ ಸಹ ದ್ರಾವಿಡಭಾಷಾ ಸಾಮಾನ್ಯವಾದ ಲಕ್ಷಣವುಂಟು.

ಕೆಲವು ವ್ಯಂಜನಾಂತ ಧಾತುಗಳಲ್ಲಿ, ಏಕ ಉಚ್ಚಾರಾಂಶದವುಗಳಲ್ಲಿ, ಭೂತ ಕಾಲದ ಕ್ರಿಯಾಪದ ರಚನೆಯನ್ನು ನಿರೂಪಿಸುವಾಗ ದ >ತ, ದಪ >ತಪ ಎಂದು ನಿರೂಪಿಸುವುದು ಸಾಂಪ್ರದಾಯಿಕ ಕ್ರಮ. ಆದರೆ ತ > ದ , ತಪ > ದಪ ಎಂಬುದಾಗಿ ಗ್ರಹಿಸುವುದಕ್ಕೆ ಅವಕಾಶವುಂಟು. ಅದು ಸಹಜ ಧ್ವನಿವ್ಯತ್ಯಾಸದ ಕ್ರಮವೂ ಆಗಿದೆ. ಏಟ್, ಬೀಟ್, ಆಟ್ ಧಾತುಗಳು ಭೂತ ಮತ್ತು ವರ್ತಮಾನ ಕಾಲಗಳಲ್ಲಿ ಹ್ರಸ್ವಸ್ವರಾದಿಯಾಗಿ ಪರಿವರ್ತಿಸುವುದಷ್ಟೆ. ಈ ಗುಂಪಿಗೆ ಕೀಟ್ ಧಾತುವನ್ನೂ ಕೇಶಿರಾಜ ಸೇರಿಸಬಹುದಾಗಿತ್ತು. ಸಮಾನ ವರ್ಣಸಂಘಟನೆಯಿದ್ದೂ ಕಿಟ್ > ಕಿಟ್ಟಿಂ ಕಿಟ್ಟಿಪಂ ಎಂದಾಗದೆ, ಕಿಟ್ತಿಂ ಕಿಟ್ತಿಪಂ ಎಂದಾಗುವುದು ಒಂದು ವಿಶೇಷ. ಆಗು ಹೋಗು ಧಾತುಗಳು ಆಯ್ತು ಪೋಯ್ತು ರೂಪಗಳಲ್ಲಿ ಆಡುಮಾತಿನ ವಲಯದಿಂದ ಸಾಹಿತ್ಯವನ್ನು ಹೊಕ್ಕಿರುವುದು ಕೇಶಿರಾಜನ ಗಮನಕ್ಕೆ ಬಂದಿದೆ. ಭೂತಕಾಲದಲ್ಲಿ ಆಗು ಧಾತು ಆದುದು, ಆದತ್ತು, ಆಯ್ತು, ಆಯಿತು, ಅಕ್ಕುಂ ಎಂಬ ಐದು ರೂಪಗಳಲ್ಲಿರುವುದು ಗಮನಾರ್ಹ. ಪೋಗು ಧಾತು ಸಹ ಹೀಗೆಯೇ. ಭಟ್ಟಾಕಳಂಕನು ಈ ಎರಡು ಧಾತುಗಳಿಗೆ ನಿರ್ದೇಶಿಸುವ ರೂಪಗಳು ಅಸಮರ್ಥನೀಯ, ಆಭಾಸಕರ (ಶಬ್ದಾನು.ಸೂ.೪೭೨).

ಕೇಶಿರಾಜ ವಿಶಿಷ್ಟ ಕ್ರಿಯಾಪದರಚನೆಯ ಉಳ್ ಧಾತುವಿನ ಬಗೆಗೆ ನಿರೂಪಿಸುವಾಗ, ಉಂಟು (ಏ.ವ), ಒಳವು (ಬ.ವ.) ಗಳಿಗೆ ಸಂವಾದಿಯಾಗಿ ಉಳ್ಳುದು (ಏ.ವ.), ಉಳ್ಳುವು (ಬ.ವ.) ಸಹ ಪ್ರಸ್ತಾವಿಸಬಹುದಾಗಿತ್ತು. ಉಳಿದ ರೂಪಗಳಿರಲಿ; ಉಂಟು, ಉಳ್ಳುದು, ಉಳ್ಳುವುಗಳ ರಚನೆ ಹೇಗೆ? ಉಳ್ + ದ + ಉದು > ಉಂಟು / ಉಳ್ಳುದು, ಉಳ್ + ದ + ಉವು > ಉಳ್ಳುವು ಎಂದಾಗಲಿಲ್ಲವಾದರೆ, ಇಲ್ಲಿಯೂ ದತ್ವ ನಿಷೇಧವನ್ನು ಒಪ್ಪಿದರೆ, ಕ್ರಿಯಾರೂಪಸಿದ್ಧಿ ಹೇಗೆ? ವ್ಯಾವಹಾರಿಕವಾ 'ಶೂನ್ಯ ಆಕೃತಿಮಾ' ವನ್ನು ಒಪ್ಪಿ ಕೈತೊಳೆದುಕೊಳ್ಳಬೇಕೆ? ತಿಳಿಯದು.

ಉಳ್ ಧಾತುವಿಗೆ ಸದೃಶವಾದ ಒಡೆ ಧಾತುವಿನ ಬಗೆಗೆ ಕೇಶಿರಾಜ ಏನೂ ಹೇಳಿಲ್ಲ. ಪ್ರಾಚೀನ ಪ್ರಯೋಗಗಳುಂಟು (ಒಡೆಯನ್, ಒಡೆಯಳ್, ಒಡೆಯರ್; ಒಡೆಯದು / ಒಡೆತು). ಆದರೆ ಇಲ್ಲಿ ಪ್ರಥಮಪುರುಷದ ಪ್ರಾಚುರ್ಯವೇ ಸಾಮಾನ್ಯ. ಪ್ರತಿಷೇಧದ 'ಇಲ್ಲ' ಕ್ರಿಯಾತ್ಮಕಾವ್ಯಯವೆಂದು ಕೇಶಿರಾಜನೇ ತಿಳಿಸಿದ್ದು (ಸೂ.೩೦೧), ಅದಕ್ಕೆ ಲಿಂಗಪುರುಷ ಭೇದವಿಲ್ಲದೆ, ಇರುವುದು ಒಂದೇ ರೂಪ; ಆದರೆ 'ಅಲ್ಲ' ಎಂಬುದು ಅಲ್ತು ಎಂಬ ರೂಪದಲ್ಲಿ ಅವ್ಯಯದಂತೆ ನಡೆಯುವುದೆಂದೂ ಉಳಿದಂತೆ ಅದು ಇತರ ಧಾತುಗಳ ಹಾಗೆಯೇ ಎಂದೂ ತಿಳಿಯಬೇಕು.

ಪ್ರತಿಷೇಧಕ್ರಿಯೆ ಪ್ರ.ಪು.ದಲ್ಲಿ ಧಾತುವಿಗೆ ಆಖ್ಯಾತಪ್ರತ್ಯಯ ನೇರವಾಗಿ ಹತ್ತುವ ಮೂಲಕ ಸಿದ್ಧವಾಗುತ್ತದೆ. ವಿಶೇಷ ಸಂದರ್ಭಗಳಲ್ಲಿದು ಅದು > ಅ, ಆ (ಪ್ರಶ್ನೆಯೊಂದಿಗೆ), ಅದೆ > ಅ ರಚನೆಯಿಂದ ದ್ಯೋತನವಾಗುತ್ತದೆ. ಪ್ರತಿಷೇಧ ಕ್ರಿಯಾರೂಪಗಳ ಕೊನೆಗೆ ಅವಧಾರಣೆಯ ಎ ಕಾರ ಸೇರಿ ಅರ್ಥಪರಿಣಾಮ ಹೆಚ್ಚುವುದುಂಟು. ಮ.ಪು.ದಲ್ಲಿ ಧಾತುವಿಗೆ ಏ.ವ.ದಲ್ಲಿ ಅಲ್, ಬ.ವ.ದಲ್ಲಿ ಅಲಿಂ (< ಅಲ್ + ಇಂ ) ಬರುವುದು ಸಾಮಾನ್ಯ. ಭಟ್ಟಾಕಳಂಕ ತೋರಿಸಿರುವ ಬ.ವ.ದ ರೂಪಗಳು ಅಸಮರ್ಥನೀಯ. (ಭಾಷಾಭೂ.ದ

ಸೂ. ೨೨೨ ರ ಉದಾಹರಣೆಗಳ ಕೊನೆಗೆ ಬೇಡ, ಬಾರದು ಎಂದು ಸೇರಿಸಿರುವುದು ಲಿಪಿಕಾರಪ್ರಮಾದ). ಅಲ್ ಪ್ರತ್ಯಯ ಪ್ರಯೋಜನವಸ್ತುಕ್ರಿಯೆ, ಪ್ರತಿಷೇಧ, ಕ್ರಿಯಾರ್ಥಸೂಚನೆ, ಸಪ್ತಮ್ಯರ್ಥ, ಭಾವಾರ್ಥ ಹೀಗೆ ಐದು ಉದ್ದೇಶಗಳಿಗೆ ಬರುತ್ತದೆ. ಕೇಶಿರಾಜ ಈ ಕೊನೆಯದನ್ನು ಗಮನಿಸಿಲ್ಲ.

ಅಪೂರ್ಣ ಕ್ರಿಯಾಪದಗಳು ಭೂತನ್ಯೂನ ರೂಪದಲ್ಲಿ ಧಾತುವಿಗೆ ಇ / ಉ ಸೇರಿ, ವರ್ತಮಾನರೂಪದಲ್ಲಿ ಉತುಂ / ಉತ್ತುಂ, ಉತೆ / ಉತ್ತೆ ಸೇರಿ ಸಿದ್ಧವಾಗುತ್ತವೆ. ಈ ಪ್ರತ್ಯಯಗಳು ಸೇರಿದ ಎಲ್ಲ ನ್ಯೂನರೂಪಗಳೂ ಕ್ರಿಯಾವಿಶೇಷಣಗಳು / ಸಾಪೇಕ್ಷಕ್ರಿಯಾ ರೂಪಗಳು. ಹೊಸಗನ್ನಡಕಾಲದ ಕ್ರಿಯಾಪದರಚನೆಯಲ್ಲಿ ಇವು ಉಳಿದುಬಂದಿವೆ.

ಕೇಶಿರಾಜನ ಗ್ರಂಥಾಂತ್ಯ ಪದ್ಯದಲ್ಲಿ ಕನ್ನಡದ ವಿಶೇಷ ಲಕ್ಷಣದ ಪ್ರಕ್ರಿಯೆಯಾಗಿ ಉಕ್ತವಾಗಿರುವ ಸತಿಸಪ್ತಮಿ ಸಂಸ್ಕೃತದಲ್ಲಿ ಪರಿಚಿತವಾಗಿರುವ ಪ್ರಕ್ರಿಯೆಯೇ ಆಗಿರುವಾಗ ಹೇಗೆ ವಿಶೇಷವೆನ್ನಲಾದೀತು? ಈ ಪ್ರಕ್ರಿಯೆ ಸಂಸ್ಕೃತದಲ್ಲಿ ಸಾಮಾನ್ಯ, ಕನ್ನಡದಲ್ಲಿ ವಿರಳ ಎಂಬುದು 'ಸಮುಚಿತಮಾಗಿ ಬರ್ಪ' ಎಂಬ ಮಾತಿನ ಆಶಯವಿದ್ದೀತು. ಭಿನ್ನಕರ್ತೃಗಳೊಡನೆ ಕೂಡಿದ ಎರಡು ಕ್ರಿಯೆಗಳಲ್ಲಿ ಒಂದು ಕ್ರಿಯೆ ಮುಂದೆ ಆಗತಕ್ಕ ಮತ್ತೊಂದು ಕ್ರಿಯೆಗೆ ಸೂಚಕವಾಗಿದ್ದಲ್ಲಿ, ಮೊದಲನೆಯ ಕರ್ತೃವೂ ಮೊದಲನೆಯ ಅಪೂರ್ಣಕ್ರಿಯೆಯೂ ಸಂಸ್ಕೃತದಲ್ಲಿ ಸಪ್ತಮೀ ವಿಭಕ್ತಿಯ ಪ್ರತ್ಯಯಗಳಿಂದ ಕೂಡಿ ಸಪ್ತಮೀವಿಭಕ್ತಿಯಲ್ಲಿರುತ್ತವೆ (ಉದಾ. ತಸ್ಮಿನ್ ಗತೇ ಕಿಂ ವೃತ್ತಮ್: ತಸ್ಮಿನ್, ಗತೇ ಎರಡೂ ಸ.ವಿ.ಯಲ್ಲಿವೆ). ಕನ್ನಡದಲ್ಲಿ ಮೊದಲನೆಯ ಕರ್ತೃವು ಪ್ರಥಮಾವಿಭಕ್ತಿಯಲ್ಲಿದ್ದು, ಮೊದಲನೆಯ ಅಪೂರ್ಣಕ್ರಿಯೆಯು ಸಂಪ್ರತಿ ಕ್ರಿಯಾಹೇತ್ವರ್ಥಕ ಏಕಾರಾಂತ ಸೇರಿದ ಕೃದಂತಾವ್ಯಯವಾಗಿರುವುದು (ಉದಾ. "ಗಾಯಕಂ ಪಾಡೆ ದೇವಂ ಮೆಚ್ಚಿದಂ"; "ಪಾತ್ರವಾಡೆ ವಾದಕಂ ಬಾಜಿಸಿದಂ") ಇಲ್ಲವೆ ಕ್ರಿಯಾರ್ಥಕವಾದ ಉದುಂ, ಅಲೊಡಂ (ಭೂತಕಾಲದಲ್ಲಿ) ಅಥವಾ ಕಾಲಾರ್ಥಕವಾದ ಅನ್ನಂ, ಅನ್ನೆಗಂ, ಇನಂ, ಇನೆಗಂ (ವರ್ತಮಾನ ಭವಿಷ್ಯತ್ ಕಾಲಗಳಲ್ಲಿ ) ಎಂಬ ಪ್ರತ್ಯಯಗಳು ಕೂಡಿದ ಕೃದಂತಾವ್ಯಯವಾಗಿರುವುದು (ಉದಾ.ಗಳಿಗೆ ನೋಡಿ: ಶಮದ.ಸೂ. ೨೪೬, ೨೪೭). ಹೀಗೆ ಭಿನ್ನಕರ್ತೃಕದ ವಿಚಾರ, ಎರಡನೆಯ ಪೂರ್ಣಕ್ರಿಯಾಪದದ ಆಶಯಕ್ಕೆ ಮೊದಲನೆಯ ನ್ಯೂನ / ಸಾಪೇಕ್ಷ ಕ್ರಿಯಾಪದ (ಕೃದಂತಾವ್ಯಯ) ಪೋಷಕವಾಗುವ ವಿಚಾರ ಈ ಎರಡನ್ನು ಬಿಟ್ಟರೆ ಮಿಕ್ಕ ಭಾಗಗಳಲ್ಲಿ ಸಂಸ್ಕೃತ-ಕನ್ನಡ ಭಾಷೆಗಳ 'ಸತಿಸಪ್ತಮಿ' ಪ್ರಯೋಗವಿರುವುದೆಂಬ ವಾಕ್ಯವಿನ್ಯಾಸದಲ್ಲಿ ವ್ಯತ್ಯಾಸ ಉಂಟೆಂದು ತಿಳಿಯಬೇಕು. ಇಂತಹ ಪ್ರಯೋಗಗಳಲ್ಲಿ 'ಸತಿಸಪ್ತಮಿ' ಯ ಪ್ರತ್ಯಯವೆಂದು ತಾನು ತಿಳಿದ ಎ ಕಾರದ ಸ್ಥಾನದಲ್ಲಿ ಅಲ್ ಬಳಸುವುದು ಸರಿಯಲ್ಲ, ಅಲೊಡಂ ಬೇಕಾದರೆ ಬಳಸಬಹುದು ಎಂದು ತಿಳಿಸಿ ಪೂರ್ವಕವಿಪ್ರಯೋಗಗಳನ್ನು ಕೇಶಿರಾಜ ಉದಾಹರಿಸಿದ್ದಾನೆ. ಇದಕ್ಕೆ ಕಾರಣ ಸ್ಪಷ್ಟ. ಇಂತಹ ವಾಕ್ಯವಿನ್ಯಾಸದಲ್ಲಿ ನ್ಯೂನ / ಸಾಪೇಕ್ಷ ಕ್ರಿಯೆ ಅಲ್ ಸಹಿತವಾಗಿದ್ದರೆ, ಆಗ ಕ್ರಿಯಾರ್ಥದ ಅಲ್ ಧಾತುವಿಗೆ ಸೇರಿದ್ದರಿಂದ ಸಾಧ್ಯವಾಗುವ ಆಶಯವೇ ಇಲ್ಲಿಯೂ ಹುಟ್ಟುವಂತಾಗಿ ಅಪಾರ್ಥದ ಕಲ್ಪನೆಗೆ ಅವಕಾಶವಾಗುತ್ತದೆ. ಉದಾ.ಗೆ "ವಸಂತಂ ಬರಲೊಡಂ ಕೋಗಿಲೆಯುಲಿಗುಂ" (ವಸಂತ ಬರುತ್ತಿದ್ದ ಹಾಗೆಯೇ ಕೋಗಿಲೆ ಉಲಿಯುತ್ತದೆ) ಎಂಬುದು

ಸರಿಯಾದ ವಾಕ್ಯರಚನೆ; ಹಾಗಲ್ಲದೆ "ವಸಂತಂ ಬರಲ್ ಕೋಗಿಲೆಯುಲಿಗುಂ" (ವಸಂತ ಬರುವುದಕ್ಕಾಗಿ ಕೋಗಿಲೆ ಉಲಿಯುತ್ತದೆ.) ಎಂದಾದರೆ ಆಭಾಸಕರ. ಆದರೆ ಪೂರ್ವಕವಿಗಳಲ್ಲಿಯೇ ಎ, ಅಲೊಡಂ ಸ್ಥಾನಗಳಲ್ಲಿ ಅಲ್ ಬಳಸಿರುವ ಪ್ರಯೋಗಗಳು ವಿರಳವಾಗಿ ಉಂಟು. ಕೇಶಿರಾಜನು ಇದನ್ನು ಗಮನಿಸಿದ್ದಾನೆ (ಶಮದ ಸೂ.೨೪೯, ಪ್ರ.೧,೨).

೭

ಕೇಶಿರಾಜನು ಒಂದು ಸೂತ್ರದಲ್ಲಿ ಕನ್ನಡ ಧಾತುಗಳ ಸಾಮಾನ್ಯರಚನೆಯನ್ನು ತಿಳಿಸಿದ್ದಾನೆ. ಇದು ಅಸಮಗ್ರವಾದ ನಿರೂಪಣೆ. ಕನ್ನಡ ಧಾತುಗಳ ರಚನೆಯಲ್ಲಿ ಗಮನಿಸಬೇಕಾದ ಇನ್ನೂ ಹಲವಂಶಗಳುಂಟು. ಅವನ್ನು ಧಾತುಪಾಠದ ಆಧಾರದ ಮೇಲೆ ಅಭ್ಯಾಸಿಗಳೇ ಗುರುತಿಸಿಕೊಳ್ಳಬೇಕು. ಮೂಲದಲ್ಲಿ ಈ ಧಾತುಪಾಠ ಈಗ ಹಲವು ಪರಿಷ್ಕರಣಗಳಲ್ಲಿರುವ ಹಾಗೆ ಅಕಾರಾದಿ ಕ್ರಮದಲ್ಲಿದ್ದಿರಲಾರದು. ಕನ್ನಡ ಧಾತುಗಳ ಒಟ್ಟು ಸಂಖ್ಯೆ ಇನ್ನೂ ಅನಿರ್ದಿಷ್ಟ; ಬಹುಶಃ ಒಂದು ಸಾವಿರವನ್ನು ದಾಟಲಾರದೇನೊ. ಇವುಗಳಲ್ಲಿ ಸ್ವರಾಂತ ಧಾತುಗಳು ಇ / ಉ / ಎ ಸ್ವರಾಂತಗಳಿಗೆ ಸೀಮಿತ; ವ್ಯಂಜನಾಂತಧಾತುಗಳು ಸಾಮಾನ್ಯವಾಗಿ ಯ, ರ, ಲ, ವ, ಳ, ಱ, ೞ ಗಳಿಂದ ಕೊನೆಯಾಗತಕ್ಕುವು. ಏಕಾಕ್ಷರ ಧಾತುಗಳ ರಚನೆ ಭಿನ್ನವಾದುದು; ವಿಶೇಷವಾದುದು. ಇವು ಸುಮಾರು ೧೬ ಇರುವಂತೆ ತೋರುತ್ತದೆ.

ಕೇಶಿರಾಜ ಒದಗಿಸಿರುವ ಧಾತುಪಾಠ ಅಸಮಗ್ರ , ಅರ್ಥಚ್ಛಾಯೆಗಳು ತುಂಬ ಸೀಮಿತ. ಅಸಮಗ್ರವಾಗಿರುವ ಧಾತುಪಾಠದಲ್ಲಿಯೇ ಅಭ್ಯಾಸಿಗಳ ಸೌಕರ್ಯಕ್ಕೆಂದು ನಿಷ್ಪನ್ನ ರೂಪದ ಸಂಯುಕ್ತ ಧಾತುಗಳನ್ನೂ ಪ್ರೇರಣಾರ್ಥದ ಧಾತುಗಳನ್ನೂ ನ್ಯೂನರೂಪದ ಧಾತುಗಳನ್ನೂ ಕೂಡಿಸಿದೆ. ಅಲ್ಲದೆ ನಾಮಧಾತುಗಳೆಂದು ಹೇಳಬಹುದಾದವುಗಳಲ್ಲಿ ಕೆಲವು ನುಡಿಗಟ್ಟುಗಳೂ ಸೇರಿವೆ. ಈ ಎಲ್ಲವೂ ರಚನೆಯ ದೃಷ್ಟಿಯಿಂದ ಕನ್ನಡಭಾಷೆಯ ನಮ್ಯಗುಣವನ್ನೂ ವೈಯಾಕರಣವೈಚಿತ್ರ್ಯವನ್ನೂ ಪ್ರಕಟಿಸಲು ಸಮರ್ಥಗಳಾಗಿವೆ. ನುಡಿಗಟ್ಟುಗಳಲ್ಲಿರುವ ನಾಮಧಾತುಗಳು ಭಾಷೆಯ ರೂಪಕಶಕ್ತಿಯನ್ನು ಮನಗಾಣಿಸುತ್ತವೆ. ಇನ್ನೂ ಹಲವು ನುಡಿಗಟ್ಟುಗಳು ದಾಖಲೆಗೊಂಡಿಲ್ಲ. ಹಾಗೆಯೇ ಕೆಲವು ವಿಶಿಷ್ಟ ಧಾತುರೂಪಗಳಿಗೆ, ನಾಮಪದಗಳೇ ಧಾತುಗಳಾಗಿ ಪರಿವರ್ತಿಸಿ ಆದ ಕ್ರಿಯಾಪದಗಳಿಗೆ ಅಭ್ಯಾಸಿ ಸ್ವತಃ ಶೋಧಿಸಿ ತಿಳಿಯಬೇಕಾದ ಶ್ರಮ ತಪ್ಪದು. ಇದು ಏನೇ ಇದ್ದರೂ ನಾಗವರ್ಮನು ಪ್ರಸ್ತಾವಿಸದ ವಿಷಯಕ್ಕೆ ಒಂದು ಪ್ರಕರಣವನ್ನೇ ಪ್ರತ್ಯೇಕವಾಗಿ ಮೀಸಲು ಮಾಡಿರುವ ಈ ಪ್ರಥಮಪ್ರಯತ್ನ ಶ್ಲಾಘ್ಯವಾದುದು.

ಕೇಶಿರಾಜನ ಧಾತುಪಾಠ ಱ - ರ, ೞ - ಳ ಧ್ವನಿಗಳ ವರ್ಣತ್ವವನ್ನು ಸ್ಪಷ್ಟಪಡಿಸಲು ಸಹ ಪರೋಕ್ಷವಾಗಿ ಸಹಾಯ ಮಾಡುತ್ತದೆ. ಸಂಸ್ಕೃತದಲ್ಲಿ ಕನ್ನಡ ಧಾತುಗಳಿಗೆ ಅರ್ಥಸೂಚನೆ ಮಾಡಿರುವುದರಿಂದ ಕನ್ನಡ ಧಾತುಗಳ ಖಚಿತವಾದ ಅರ್ಥನಿರ್ಣಯಕ್ಕೆ ಸಹಾಯವಾಗಿರುವುದೇ ಅಲ್ಲದೆ, ಸಂಸ್ಕೃತ ಕನ್ನಡಗಳ ಈ ಅನುಕೂಲದಾಂಪತ್ಯ ಆದರ್ಶಪ್ರಾಯವಾದ ಭಾಷಾಸಾಮರಸ್ಯಕ್ಕೆ ಒಂದು ಮಾದರಿಯೂ ಆಗಿದೆ.

## ೮

ಈಗ ಅಪಭ್ರಂಶಗಳ, ಎಂದರೆ ಕನ್ನಡ ಭಾಷೆಯ ತದ್ಭವಗಳ ವಿಚಾರ. ಸಂಸ್ಕೃತ ಶಬ್ದಗಳನ್ನು ಕನ್ನಡ ಭಾಷೆಯ ಸಹಜ ಮರ್ಯಾದೆಗೆ ಒಪ್ಪುವಂತೆ ಪರಿವರ್ತಿಸಿಕೊಳ್ಳುವಾಗ ಯಾವ ಯಾವ ಭಾಷಿಕ ವ್ಯತ್ಯಾಸಗಳು ನಡೆಯುತ್ತವೆ ಎನ್ನುವುದನ್ನು ಸಮಸಂಸ್ಕೃತ ಹಾಗೂ ಅಪಭ್ರಂಶ / ತದ್ಭವ ಎಂಬ ಎರಡು ನೆಲೆಗಳಲ್ಲಿ ಪರಿಶೀಲಿಸಬೇಕಾಗಿದ್ದು, ನಾಗವರ್ಮ ಮೊದಲಿನದನ್ನು ಮಾತ್ರವೇ ಲಕ್ಷಿಸಿದ್ದಾನೆ; ಕೇಶಿರಾಜ ಎರಡನ್ನೂ ಲಕ್ಷಿಸಿದ್ದು, ವಿಷಯಕ್ಕೆ ಪೂರ್ಣವಾದ ನ್ಯಾಯ ದೊರಕಿಸಿದ್ದಾನೆ. ಶಮದ.ದಲ್ಲಿ 'ಸಕ್ಕದಂಗಳ ತದ್ಭವಂಗಳ್' ಎಂದಿದ್ದರೂ, ಪ್ರಾಕೃತ ತದ್ಭವಗಳೂ ಸೇರಿವೆ. ಪ್ರಾಕೃತಸಮ ಮತ್ತು ಪ್ರಾಕೃತಭವ ಎಂಬೆರಡು ವರ್ಗಗಳನ್ನೂ ಕೇಶಿರಾಜ ಕನ್ನಡ ತದ್ಭವಗಳೊಂದಿಗೆ ಅಭಿನ್ನವಾಗಿ ಕಾಣುವುದರಿಂದ, ಅವನ ದೃಷ್ಟಿಯಲ್ಲಿ ಕನ್ನಡ ಭಾಷೆಯ ಮರ್ಯಾದೆಗೆ ಹೊಂದಿಬರುವ ಮಟ್ಟಿಗೆ ಅವು 'ಅಚ್ಚಗನ್ನಡ' ಶಬ್ದಗಳೇ ಆದುದರಿಂದ, ಅವನು ಸಂಸ್ಕೃತ, ತದ್ಭವಗಳೆಂಬ ಎರಡು ಭೇದಗಳನ್ನಷ್ಟೇ ಮಾಡುತ್ತಾನೆ.

ಕೇಶಿರಾಜನು ಪ್ರಾಚೀನರನ್ನು ಅನುಸರಿಸಿ ವ್ಯತ್ಯಾಸರಹಿತ / ಪದಾಂತ ಅಲ್ಪ ವ್ಯತ್ಯಾಸದ ಸಂಸ್ಕೃತ ಶಬ್ದಗಳನ್ನು ಸಮಸಂಸ್ಕೃತವೆಂದು ಕರೆದಿದ್ದಾನೆ; ವೈಯಕ್ತಿಕವಿವೇಚನೆಯನ್ನು ಅನುಸರಿಸಿ ಪದಾದಿ, ಪದಾಂತರಾಳ ಹಾಗೂ ಪದಾಂತ್ಯದ ಸಮಗ್ರ ವ್ಯತ್ಯಾಸದ ಸಂಸ್ಕೃತಶಬ್ದಗಳನ್ನು ಅಪಭ್ರಂಶ / ತದ್ಭವ ಶಬ್ದಗಳೆಂದು ಕರೆದಿರುವುದು ಕಂಡುಬರುತ್ತದೆ. ಅಪಭ್ರಂಶವೆಂಬ ಮಾತು ನಾಗವರ್ಮನದು (ಶಬ್ದಸ್ಮೃತಿ. ೭೦, ಭಾಷಾಭೂ. ೧೮೭); ಆದರೆ ತದ್ಭವವೆಂಬುದು ಕೇಶಿರಾಜನದೇ. ಕೇಶಿರಾಜನು ಸಂಸ್ಕೃತಭವ, ಪ್ರಾಕೃತಭವ, ಪ್ರಾಕೃತಸಮ, ದೇಶ್ಯ, ತತ್ಸಮ (= ಸಂಸ್ಕೃತ ಕನ್ನಡ ಎರಡು ಭಾಷೆಗಳಿಗೂ ಆಯಾ ಭಾಷೆಯ ಸಹಜಶಬ್ದವೆಂದೇ ಸಲ್ಲುವ, ನಿರ್ದುಷ್ಟವಾಗಿ ಸಮಾಸವಾಗುವ ೨೧ ಶಬ್ದಗಳು) ಇವನ್ನೆಲ್ಲ 'ಅಚ್ಚಗನ್ನಡ' ವೆಂದೇ ಪರಿಗಣಿಸಿದ್ದಾನೆ (ಸೂ.೨೮೯).

ತದ್ಭವಶಬ್ದಗಳ ಭಾಷಿಕ ರಚನೆ ಸ್ವಚ್ಛಂದವಾದುದಲ್ಲ; ನಿಯಮನಿಷ್ಠವಾದುದು. ಸಂಸ್ಕೃತಶಬ್ದಗಳ ತಪ್ಪುರೂಪಗಳೂ ಗ್ರಾಮ್ಯವಾದ ಉಚ್ಚಾರಣೆಗಳೂ ತದ್ಭವಗಳಲ್ಲ. ಶಿಕ್ಷಾಶಾಸ್ತ್ರ, ಶಿಷ್ಟಸಮ್ಮತಿ, ಲೋಕರೂಢಿಯೆಂಬ ಮೂರು ಮಾಪನಸೂತ್ರಗಳು ಒಗ್ಗೂಡಿ ತದ್ಭವಗಳ ರಚನೆಯ ಗ್ರಾಹ್ಯತೆಯನ್ನು ನಿಶ್ಚಯಿಸುತ್ತವೆ. ಕೇಶಿರಾಜನಾದರೂ ಈ ಸೂತ್ರಗಳನ್ನೇ ಮಾರ್ಗದರ್ಶಕಗಳನ್ನಾಗಿಟ್ಟುಕೊಂಡು, ತದ್ಭವಗಳ ಭಾಷಿಕ ರಚನೆಯನ್ನು ನಿರೂಪಿಸಿದ್ದಾನೆ (ಸೂ.೨೫೨). ಈ ಸೂತ್ರಗಳಿಗೆ ಅತಿರಿಕ್ತವಾದ ಶಬ್ದಗಳು ಯಾದೃಚ್ಛಿಕ ಭಾಷಾರೂಪಗಳು, ತದ್ಭವಾಭಾಸಗಳು, ಸದೋಷಗಳು. ಇದು ಹೀಗಿದ್ದರೂ, ಆಧುನಿಕಭಾಷಾವಿಜ್ಞಾನದ ಭಾಷಾಸ್ವೀಕರಣ ತತ್ತ್ವಗಳ ಅನ್ವಯ ಭಾಷಿಕ ವ್ಯತ್ಯಾಸಗಳನ್ನು ತದ್ಭವಗಳಲ್ಲಿ ಗುರುತಿಸುವುದು ಅತ್ಯಾವಶ್ಯಕ. ಅದರ ವಿಧಿ ವಿಧಾನಗಳು ಬೇರೆಯಾಗಿದ್ದಿರಬಹುದು. ಕೆಲಕೆಲವು ತದ್ಭವಗಳ ಭಾಷಿಕ ವ್ಯತ್ಯಾಸಗಳು ಅನೇಕವಾಗಿರುವುದರಿಂದ ಕೇಶಿರಾಜ ಅವನ್ನು ಬೇರೆ ಬೇರೆ ಸೂತ್ರಗಳ ಅಡಿಯಲ್ಲಿ ಮತ್ತೆ ಮತ್ತೆ ಪರಿಶೀಲಿಸಿರುವುದುಂಟು.

ತದ್ಭವಗಳನ್ನು ಸ್ವರ, ವ್ಯಂಜನ ಮತ್ತು ಉಭಯಮಿಶ್ರ ಎಂಬುದಾಗಿ ವ್ಯತ್ಯಯಗಳ ದೃಷ್ಟಿಯಿಂದ ವಿಭಜಿಸಬಹುದು. ಕೇಶಿರಾಜನ ಉದಾಹರಣೆಗಳು ದಿಕ್ಸೂಚಿಗಳು. ಕೆಲವು

ಸೂಚನೆಗಳು ತೃಪ್ತಿಕರವಲ್ಲ. ಸಂಸ್ಕೃತಭವಗಳೆನ್ನುವ ಕೆಲವು ದಿಟವಾಗಿ ಪ್ರಾಕೃತಭವಗಳು ಇಲ್ಲವೆ ಪ್ರಾಕೃತಸಮಗಳು. ವಿಚಾರಣೀಯಗಳಾದ ಕೆಲವು ತದ್ಭವಗಳು ಆಧುನಿಕಭಾಷಾವಿಜ್ಞಾನದ ದೃಷ್ಟಿಯಿಂದ ಬೇರೆ ಬೇರೆ ಜನ್ಯ-ಜನಕ ಸಂಬಂಧಗಳನ್ನು ತೋರಿಸುತ್ತವೆ; ಕೆಲವು ತದ್ಭವಗಳು ಆರ್ಯ ಮತ್ತು ದ್ರಾವಿಡ ಭೇದದ ಭಿನ್ನ ಭಾಷಾಸ್ಕಂಧಗಳಿಗೆ ಸೇರಿರುವುದನ್ನೂ ಪ್ರಕಟಿಸುತ್ತವೆ.

ಕನ್ನಡ ಭಾಷೆಯ ಮರ್ಯಾದೆಗೆ ಅನುಗುಣವಾಗಿ ತದ್ಭವವಾಗುವ ಶಬ್ದಗಳು ಲೋಪ, ಆಗಮ ಮತ್ತು ಆದೇಶ ಕ್ರಿಯೆಗಳಿಗೆ ಒಳಪಟ್ಟಿವೆ. ಸ್ವರಗಳಲ್ಲಿ ಪರಸ್ಪರ ವಿನಿಮಯವುಂಟು. ವರ್ಗೀಯ ವ್ಯಂಜನಗಳಲ್ಲಿ ಪರುಷಗಳು ಸರಳಗಳಾಗಿ, ಮಹಾಪ್ರಾಣಗಳು ಅಲ್ಪಪ್ರಾಣಗಳಾಗಿ ಪರಿವರ್ತಿಸಿವೆ. ಅನುನಾಸಿಕಗಳಲ್ಲಿ ಙ, ಞ ಹೊರತು ಉಳಿದುವು ಪರಸ್ಪರವಾಗಿ ವಿನಿಮಯಗೊಂಡಿವೆ. ವಿಜಾತೀಯವಾದ ದ್ವಿತ್ವಗಳು ಸಜಾತೀಯಗಳಾಗಿವೆ ಇಲ್ಲವೆ ಸ್ವರಭಕ್ತಿಕ್ರಮದಲ್ಲಿ ವಿರಳಗೊಂಡಿವೆ. ದೇಸಿಗೆ ಸಹಜವಲ್ಲದ ವರ್ಣಗಳು ಸಮೀಪವರ್ಣಗಳಾಗಿ ಪರಿಣಮಿಸಿವೆ. ಆದಿಮಧ್ಯಾಂತಗಳಲ್ಲಿ ದ್ವಿತ್ವವುಳ್ಳ ಹ್ರಸ್ವದೀರ್ಘಪರಿಕ್ರಮದ ಶಬ್ದಗಳು ಲೋಪವಿಧಿಗೆ ಒಳಗಾಗಿವೆ.

ತದ್ಭವಪದಗಳ ಸಮಾಸ ಕೆಲವು ವಿಶಿಷ್ಟನಿಯಮಗಳನ್ನು ಅನುಸರಿಸುತ್ತವೆ. ಅಪಭ್ರಂಶ / ತದ್ಭವ (ಸಂಸ್ಕೃತಭವ, ಪ್ರಾಕೃತಸಮ, ಪ್ರಾಕೃತಭವ) ಮತ್ತು ಅಚ್ಚಗನ್ನಡ (ಅಪಭ್ರಂಶ / ತದ್ಭವ, ತತ್ಸಮ, ದೇಶ್ಯ) ಶಬ್ದಗಳ ಮಿಶ್ರಣದಲ್ಲಿ ಯಾವುದು ವಿಹಿತ, ಯಾವುದು ವಿಹಿತವಲ್ಲ ಎನ್ನುವುದು ಎಂದಿನಂತೆ ಇಲ್ಲಿಯೂ ಸಮಾಸಘಟಿತ ಶಬ್ದಗಳ ವರ್ಣಸಂಘಟನೆಯ ಶ್ರುತಿಸಹ್ಯತೆ ಶ್ರುತಿವೈಗುಣ್ಯಗಳನ್ನು ಅವಲಂಬಿಸಿರುತ್ತದೆ. ಹೇಗೂ ಸಂ + ಸಂ, ದೇ + ದೇ, ದೇ + ದ್ಭ, ದ್ಭ + ದೇ, ದ್ಭ + ದ್ಭ ಶಬ್ದಗಳ ಸಮಾಸಗಳು ನಿರ್ದುಷ್ಟವಾದುವು; ಹಾಗೆಯೇ ಪ್ರಯೋಗಪ್ರಾಚುರ್ಯ ಕಡಮೆಯಾದರೂ ಕವಿಪ್ರಯೋಗ ಮಾನ್ಯಗಳಾದ ಅವಿಕಾರಿ ಸಂಸ್ಕೃತ (ಅ.ಸಂ.) + ದ್ಭ, ದ್ಭ + ಅ.ಸಂ, ಅ.ಸಂ + ದೇ, ದೇ + ಅ.ಸಂ. ಶಬ್ದಗಳ ಸಮಾಸಗಳು ಸಹ ನಿರ್ದುಷ್ಟವಾದವೇ. ಇಲ್ಲಿ ಪೂರ್ವಕವಿ ಪ್ರಯೋಗಗಳು, ಅದ್ಯತನ ಕವಿಪ್ರಯೋಗಗಳು ಎಂಬ ಭೇದ ತೋರಿಕೆಯದು ಮಾತ್ರ. ಆ ಭೇದ ಅನಾವಶ್ಯಕ; ಏಕೆಂದರೆ ಅಂತಹ ಸಮಾಸಗಳ ವ್ಯಾಪ್ತಿಗೆ ಕಾಲದೇಶಗಳ ಮಿತಿಯೇನೂ ನಿಜವಾಗಿ ಇಲ್ಲ. ಈ ಮಿಶ್ರಣಗಳ ಹಿಂದಿನ ಭಾಷಿಕತತ್ತ್ವವನ್ನು ನಮ್ಮ ವೈಯಾಕರಣರು ಗುರುತಿಸಿದ್ದರೆ, ಅದನ್ನು ಸಾರ್ವತ್ರಿಕ ನಿಯಮವನ್ನಾಗಿ ಅವರು ನಿರೂಪಿಸಬಹುದಾಗಿತ್ತು. ಈ ವಿಷಯದಲ್ಲಿ ನಾಗವರ್ಮನಿಗೆ ಆ ದೃಷ್ಟಿ ನಿಚ್ಚಳವಾಗಿದ್ದಂತೆ ಅವನು ಕೊಡುವ ನಿರೂಪಣೆಯಿಂದ ವಿದಿತವಾಗುತ್ತದೆ. ಅವನು ಈ ವಿಷಯವನ್ನು ವಿಸ್ತರಿಸಿ, ಇನ್ನಷ್ಟು ಸ್ಪಷ್ಟಪಡಿಸಬಹುದಾಗಿತ್ತು.

ಭಟ್ಟಾಕಳಂಕನು ಸಮಸಂಸ್ಕೃತವನ್ನೇ ತತ್ಸಮವೆಂದಿದ್ದಾನೆ. ಇದು ಈಗ ಹೊಸಗನ್ನಡದ ವ್ಯಾಕರಣದಲ್ಲಿ ಅಂಗೀಕೃತವಾಗಿರುವ ಪರಿಭಾಷೆಯೇ ಆಗಿದೆ. ಆದರೆ ಕೇಶಿರಾಜನು ಪ್ರತ್ಯೇಕವಾದ ೨೧ ಶಬ್ದಗಳನ್ನು ಕೊಟ್ಟು, ಅವನ್ನು ದೇಶ್ಯ ಮತ್ತು ತದ್ಭವ ಶಬ್ದಗಳೊಂದಿಗೆ ಸಮಾಸವಾಗಲು ಯೋಗ್ಯವಾದವು ಎಂದೂ ಅವು ಕನ್ನಡ ಮತ್ತು ಸಂಸ್ಕೃತ ಭಾಷೆಗಳಿಗೆ ಸಮವಾಗಿ ಸೇರಿರುವ ಶಬ್ದಗಳು ಎಂದೂ ತಿಳಿದಿದ್ದಾನೆ. ಈ ಶಬ್ದಗಳು ಮೂಲತಃ ದೇಶ್ಯವೇ ಸಂಸ್ಕೃತವೇ ಎನ್ನುವುದು

ಇಲ್ಲಿ ಮುಖ್ಯ ಪ್ರಶ್ನೆ. ಈಚಿನ ಶೋಧನೆಗಳಿಂದ, ಇವುಗಳಲ್ಲಿ ಕೆಲವು ಮೂಲತಃ ದೇಶ್ಯ / ದ್ರಾವಿಡ ಶಬ್ದಗಳಾಗಿದ್ದು, ಸಂಸ್ಕೃತಕ್ಕೆ ಎರವಲಾಗಿ ಹೋಗಿರುವವು ಎಂದು ತಿಳಿದಿದೆ.

೬

ಅವ್ಯಯವೆಂದರೆ, ಲಿಂಗತ್ರಯ, ವಚನತ್ರಯ (ಕ. ವಚನದ್ವಯ) ಹಾಗೂ ಸಪ್ತವಿಭಕ್ತಿಗಳಲ್ಲಿ ಯಾವುದೇ ವ್ಯತ್ಯಾಸವನ್ನು ಹೊಂದದೆ, ಎಂದರೆ ಶಬ್ದರೂಪದಲ್ಲಿ ಏನೂ ವ್ಯಯ / ವಿಕಾರವಾಗದೆ ಸ್ವಸ್ವರೂಪದಲ್ಲಿರುವ ಶಬ್ದವೆಂದರ್ಥ. ಇದನ್ನು ಉಪಸರ್ಗಗಳು, ಕ್ರಿಯಾ ವಿಶೇಷಣಗಳು, ಸಮುಚ್ಚಯವಾಚಕ - ಭಾವವಾಚಕ - ಪದಪೂರಣಾರ್ಥಕ ನಿಪಾತಗಳು ಎಂದು ಸಂಸ್ಕೃತದಲ್ಲಿ ವಿಭಜಿಸಿರುವುದುಂಟು. ಕನ್ನಡದಲ್ಲಿ ಮೊದಲನೆಯದು ಹೊರತು ಉಳಿದವು ಉಂಟು. ಇಲ್ಲಿ ಕ್ರಿಯಾರ್ಥಕ, ಕೃದಂತ, ಸಾಮಾನ್ಯ, ಅನುಸರ್ಗ, ಸಂಬಂಧಸೂಚಕ, ಭಾವಸೂಚಕ ಎಂಬ ವಿಭಾಗದ ಅವ್ಯಯಗಳನ್ನು ಗುರುತಿಸಿರುವುದುಂಟು. ಕೇಶಿರಾಜ ಅನುಕರಣಾತ್ಮಕ, ಕ್ರಿಯಾತ್ಮಕ ಮೊದಲಾದ ಅವ್ಯಯಗಳನ್ನು ಒಂದು ಪ್ರತ್ಯೇಕವಾದ ಪ್ರಕರಣದಲ್ಲಿ ಕುರಿತಿದ್ದಾನೆ. ಅವನ ಹಲವು ಸೂಚನೆಗಳು ತೃಪ್ತಿಕರವಾಗಿದ್ದರೂ, ಕೆಲವು ಅಸ್ಪಷ್ಟವೆನ್ನುವಂತಿವೆ. ಉದಾಹರಣೆಗೆ, ನೂಂಕದು, ತೆತ್ತದು ನಪ್‌ಪ್ರತಿಷೇಧಕ್ರಿಯಾರೂಪಗಳಾಗಿ ತೋರುತ್ತವೆಯಲ್ಲದೆ, ಅವ್ಯಯಗಳಾಗಿ ತೋರುವುದಿಲ್ಲ. ಆದರೆ ಕೃದಂತಾವ್ಯಯಗಳಾಗಿ ಲಿಂಗ ವಚನ ಪುರುಷಗಳೆಂಬ ಭೇದವಿಲ್ಲದೆ ಅವು ಬಳಕೆಯಾಗುತ್ತಿದ್ದಿರಬಹುದು. ನೂಳದು ದಿಟವಾಗಿ ಟಿಘಟಿತ ಶಬ್ದ; ಆಧಿಕ್ಯಾರ್ಥ ಅತಿಶಯಾರ್ಥಗಳನ್ನು ಕೊಡುವ ಸಾಮಾನ್ಯಾವ್ಯಯ ('ನೂಟಿದುಮೆಸೆದಿರ್ಕುಮದಱ ಬಹಿರುದ್ಯಾನಂ', ಶಬ್ದಸ್ಮ್ಮ. ಪ. ೨೩೦). ನಾಮರೂಪವಾಗಿ ತೋರುವ ಕೀಱುದು (< ಕಿಱು) ಎಂಬುದೂ ಆಕೀರ್ಣಾರ್ಥವನ್ನು ಕೊಡುವ ಒಂದು ಅವ್ಯಯವೆಂದಿರುವುದು ವಿಚಾರಾರ್ಹ. ಮತ್ತೆ ಎಂಬುದೂ ಸೇರಿದಂತೆ ಕಾಲವಾಚಕಗಳೆಲ್ಲ ಪ್ರಾಯಶಃ ವಿಭಕ್ತ್ಯಂತ ಪ್ರಾತಿಪದಿಕಗಳಾಗಿ ನಡೆಯುತ್ತವೆ. ಇವು ಅವ್ಯಯಗಳಾಗಿಯೇ ಬಲುಮಟ್ಟಿಗೆ ವರ್ತಿಸುತ್ತವೆ. ಕೆಲವು ಕಾಲವಾಚಕಗಳ ರೂಪ ಅರ್ಥಗಳು ಕುತೂಹಲಕರವಾದವು.

ಕೇಶಿರಾಜ ಸಾಂಪ್ರದಾಯಿಕ ವೈಯಾಕರಣರಂತೆ ಅವ್ಯಯಗಳನ್ನು ವಿಭಜಿಸಿಲ್ಲ. ಅವು ಯಾವ ಅರ್ಥಗಳಲ್ಲಿ ಅವ್ಯಯಗಳಾಗಿ ಬಳಕೆಯಾಗುತ್ತವೆ ಎನ್ನುವುದನ್ನು ಹಿಡಿದು ಕ್ರಿಯಾಶೂನ್ಯಾರ್ಥ, ಅಧಿಕಾರ್ಥ, ಶೀಘ್ರಾರ್ಥ, ಭ್ರಮಾರ್ಥ ಎಂದು ಮುಂತಾಗಿ ಅವನ್ನು ವಿಭಜಿಸಿದ್ದಾನೆ. ಅವನ ಸರ್ವಸಂಗ್ರಾಹಕದೃಷ್ಟಿ ಅಭಿನಂದನೆಗೆ ತಕ್ಕುದು.

ಕೇಶಿರಾಜ ನಾಮಪ್ರಕರಣದಲ್ಲಿ ಅವ್ಯಯಲಿಂಗವೆಂಬ ಮಾತನ್ನು ಬಳಸಿದ್ದಾನೆ. ಈ ಮಾತಿನ ಆಶಯವೆಂದರೆ, ಸ್ವಾಭಾವಿಕವಾಗಿ ಅವ್ಯಯಗಳಾದ ಶಬ್ದಗಳು ಸಾಂದರ್ಭಿಕವಾಗಿ ಕೆಲವೊಮ್ಮೆ ವಿಭಕ್ತಿಸ್ವೀಕಾರಯೋಗ್ಯಗಳಾದ ಪ್ರಾತಿಪದಿಕಗಳಾಗಿಯೂ ಬಳಕೆಯಾಗಬಹುದು ಎಂಬುದೇ ಆಗಿದೆ. ಅದನ್ನು ಸಮರ್ಥಿಸುವಂತೆ ಪ್ರಥಮೆಯಿಂದ ಷಷ್ಠಿಯವರೆಗೆ ಉದಾಹರಣೆಗಳನ್ನೂ ಅವನು ತೋರಿಸಿದ್ದಾನೆ. ಆದರೆ "ನಿರ್ನಿಮಿತ್ತಂ ಬಂದಂ", "ಚಚ್ಚರಂ ನುಡಿದಂ" ಎಂಬಲ್ಲಿ ನಿರ್ನಿಮಿತ್ತಂ, ಚಚ್ಚರಂ ಇವು ಕ್ರಿಯಾವಿಶೇಷಣಾವ್ಯಯಗಳೆಂಬುದು ಸ್ಪಷ್ಟ. ಉಳಿದುವುಗಳಿಗೆ ಕೂಡ ಹೀಗೆಯೇ ಸಮಾಧಾನ ಕೊಡಬಹುದು. 'ಅಂತಱಿಂದೆ', 'ಮತ್ತಿನ' ಇವು ವಿಭಕ್ತ್ಯಂತ ನಾಮಪದಗಳೇ. ಇನ್ನು 'ಆವರ್ಕೆ' ಹೇಗೆ ತೃ.ವಿ.ಯೋ

ತಿಳಿಯದು. ಪಚ್ಚನೆ, ಕೆಚ್ಚನೆ ಇವು ಪಚ್ಚಗೆ, ಕೆಚ್ಚಗೆ ಎಂಬ ರೂಪದಲ್ಲಿ ಮೂಲದಲ್ಲಿದ್ದುದಾದರೆ ಅವನ್ನು ಚತುರ್ಥಿಯ ಅವ್ಯಯ ಲಿಂಗಗಳೆಂದು ತಿಳಿಯಲು ಸ್ವಲ್ಪ ಅವಕಾಶವಾಗಬಹುದು. ಎಂದರೆ, ಅವ್ಯಯಗಳು ಸಾಮಾನ್ಯವಾಗಿ ನಿರ್ವಿಕಾರಿಗಳಾದ ಶಬ್ದಗಳೇ ಆದರೂ ಕೆಲವು ಸಲ ಅವು ಪ್ರಾತಿಪದಿಕಗಳಾಗಿ / ಲಿಂಗಗಳಾಗಿ ಪ್ರಯೋಗವಾಗಬಹುದು ಎಂದಾಯಿತು. ಕನ್ನಡದ ವಿಶೇಷ ಲಕ್ಷಣಗಳಲ್ಲಿ ಉಕ್ತವಾದ "ವಿರಹಿತಾವ್ಯಯ ಸಂಸ್ಕೃತಲಿಂಗಂ" ಅಂತರ್ ಬಹಿರ್ ಇತ್ಯಾದಿ ಅಸಮಸ್ತ ಸಂಸ್ಕೃತಾವ್ಯಯಗಳಿಗೆ ಅನ್ವಯಿಸುವ ಲಕ್ಷಣವೆಂಬುದು ವಿದಿತವೇ ಇದೆಯಾದುದರಿಂದ, ಕನ್ನಡದಲ್ಲಿ ಅವನ ಅಭಿಪ್ರಾಯದಂತೆ ಅವ್ಯಯ ಲಿಂಗವೆಂಬುದು ಒಂದು ಸೀಮಿತವ್ಯಾಪ್ತಿಯಲ್ಲಿ ಪ್ರಚಲಿತವಾಗಿದೆಯೆಂದು ತಿಳಿಯಬೇಕು. ಅದು ಸರಿಯಾದ ಗ್ರಹಿಕೆಯೂ ಆಗಿದೆ.

ಮೈಸೂರು ಟಿ.ವಿ. ವೆಂಕಟಾಚಲ ಶಾಸ್ತ್ರೀ

# ಪೂರ್ವಪ್ರಕರಣಂ

## ಪೀಠಿಕೆ

ಸೂತ್ರಂ ॥ ಶ್ರೀ ವಾಗ್ದೇವಿಗೆ ಶಬ್ದದಿ ।
ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು ॥
ದ್ಭಾವಿಪ ನಿರ್ಮಲಮೂರ್ತಿಗಿ ।
ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ ॥ ೧ ॥

ಟೀಕೆ - ಆವಾವಿಂದ್ರಿಯದ = ಶ್ರೋತ್ರ ತ್ವಚ್ ನೇತ್ರ ಜಿಹ್ವಾ ಘ್ರಾಣಂಗಳೆಂಬ ಸರ್ವೇಂದ್ರಿಯಂಗಳ, ವಿಷಯಮಂ = ಶಬ್ದ ಸ್ಪರ್ಶ ರೂಪ ರಸ ಗಂಧಂಗಳೆಂಬ ಸಮಸ್ತ ವಿಷಯಂಗಳಂ, ಶ್ರೋತ್ರದೊಳ್ = ಶ್ರೋತ್ರೇಂದ್ರಿಯಮೊಂದಱಲ್ಲಿಯೆ, ಶಬ್ದದಿಂ = ಶಬ್ದದಿಂದೆ ("ಶಬ್ದಾನುವಿದ್ಧಮೇವೇದಂ ಜಗತ್ಸರ್ವಂ ಚರಾಚರಂ" - ಎಂಬ ಆಗಮವಾಕ್ಯಮುಂಟಾಗಿ ಸಮಸ್ತವಿಷಯಂಗಳುಂ ಶಬ್ದದಿಂದೆ ಅಱಿಯಲ್ಪಟ್ಟುವಾಗಿ), ಉದ್ಭಾವಿಪ = ಅಭಿವ್ಯಕ್ತಮಾಗಿ ಅಱಿಯಿಸುವ, ನಿರ್ಮಲಮೂರ್ತಿಗೆ = ವಿಮಲಸ್ವರೂಪೆಯಾದ, ಇಳಾವಂದ್ಯೆಗೆ = ಮನುಜರಿಂದ ವಂದಿಸಿಕೊಂಬಳಾದ, ಶ್ರೀ = ಐಶ್ವರ್ಯೋಪಲಕ್ಷಿತೆಯಾದ, ವಾಗ್ದೇವಿಗೆ = ವಾಕ್ಕೆಂಬ ದೇವಿಗೆ, ಶಾಸ್ತ್ರಮುಖದೊಳ್ = ಶಬ್ದಶಾಸ್ತ್ರ ಪ್ರಾರಂಭದಲ್ಲಿ, ಅವನತಂ = ನಮಸ್ಕರಿಸುವಾತಂ, ಅಪ್ಪೆಂ = ಆಗುವೆಂ.

ವೃತ್ತಿ - ಕಾಂತಿಯೆಂಬ ಗುಣದೊಳನ್ವಿತೆಯಪ್ಪ ವಾಕ್ಕೆಂಬ ದೇವಿಗೆ ಪಂಚೇಂದ್ರಿಯಂಗಳ ವಿಷಯಮಪ್ಪ ಶಬ್ದ ಸ್ಪರ್ಶ ರೂಪ ರಸ ಗಂಧಂಗಳೊಳ್ಪಂ ಶ್ರೋತ್ರೇಂದ್ರಿಯಮೊಂದಱಲ್ಲಿಯೆ ಶಬ್ದಮುಖದಿನಭಿವ್ಯಕ್ತಿಯಂ ಮಾಳ್ಪ ವಿಮಲಸ್ವರೂಪೆಗೆ ಭುವನಸ್ತುತ್ಯೆಗೆ ಈ ಶಾಸ್ತ್ರ ಪ್ರಾರಂಭದಲ್ಲಿ ನಮಸ್ಕರಿಸುವಾತನಪ್ಪೆಂ.

ಸೂತ್ರಂ ॥ ಕವಿ ಸುಮನೋಬಾಣನ ಯಾ ।
ದವಕಟಕಾಚಾರ್ಯನೆಸೆವ ದೌಹಿತ್ರನೆನಾಂ ॥
ಕವಿ ಕೇಶವನೆಂ ಯೋಗಿ ।
ಪ್ರವರ ಚಿದಾನಂದ ಮಲ್ಲಿಕಾರ್ಜುನ ಸುತನೆಂ ॥ ೨ ॥

ಟೀಕೆ - ಆಂ = ಶಾಸ್ತ್ರಕಾರನಾದ ನಾಂ, ಯಾದವ = ಯದುಕುಲದ ಕ್ಷತ್ರಿಯರ, ಕಟಕ = ಸಮೂಹಕ್ಕೆ, ಆಚಾರ್ಯನ = ಗುರುವಾದ, ಕವಿ ಸುಮನೋಬಾಣನ = ಸುಮನೋಬಾಣನೆಂಬ ಕವೀಶ್ವರನ, ಎಸೆವ ದೌಹಿತ್ರನೆಂ = ಶೋಭಿಸುವ ಮಗಳ ಮಗನೆಂ; ಯೋಗಿ = ಯೋಗಿಗಳಲ್ಲಿ , ಪ್ರವರ = ಅತ್ಯಂತ ಶ್ರೇಷ್ಠನಾದ, ಚಿದಾನಂದ ಮಲ್ಲಿಕಾರ್ಜುನ = ಜ್ಞಾನಾನಂದಮುಳ್ಳ ಮಲ್ಲಿಕಾರ್ಜುನನ, ಸುತನೆಂ = ಮಗನೆಂ; ಕವಿ ಕೇಶವನೆಂ = ಕೇಶಿರಾಜ ಕವೀಶ್ವರನೆಂ.

ವೃತ್ತಿ - ಯಾದವಕಟಕೋಪಾಧ್ಯಾಯನಪ್ಪ ಕವಿ ಸುಮನೋಬಾಣನ ಮಗಳ ಮಗನೆಂ, ಯೋಗಿವಲ್ಲಭನಪ್ಪ ಮಲ್ಲಿಕಾರ್ಜುನನಂದನನೆಂ, ಕೇಶಿರಾಜ ಕವಿಯೆಂ ಆಂ.

ಸೂತ್ರಂ ॥ ಗುಣಮಮರೆ ಶಬ್ದಮಣಿದ ।
ರ್ಪಣ ನಾಮವನಿಟ್ಟು ನೆಱಿಯೆ ಕರ್ಣಾಟಕ ಲ ॥
ಕ್ಷಣ ಶಬ್ದಶಾಸ್ತ್ರಮಂ ಲಾ ।
ಕ್ಷಣಿಕರ್ಪೇೞೆಂದು ಬೆಸಸೆ ಬಗೆವುಗೆ ಪೇೞ್ದೆಂ ॥ ೩ ॥

ಟೀಕೆ - ಗುಣಂ = ಶಬ್ದಸಾಮರ್ಥ್ಯವೆಂಬ ಗುಣಂ, ಅಮರೆ = ಪೊರ್ದುಗೆಯಾಗಲಾಗಿ, ಶಬ್ದಮಣಿದರ್ಪಣ ನಾಮವಂ = ಶಬ್ದಮಣಿದರ್ಪಣವೆಂಬ ಪೆಸರಂ, ಇಟ್ಟು = ಕೊಟ್ಟು, ನೆಱೆಯೆ = ಪೆರ್ಚುಗೆಯಾಗೆ, ಕರ್ಣಾಟಕ = ಕನ್ನಡಕ್ಕೆ, ಲಕ್ಷಣ = ಸ್ವರೂಪನಿರೂಪಕವಾದ, ಶಬ್ದಶಾಸ್ತ್ರಮಂ = ವ್ಯಾಕರಣಶಾಸ್ತ್ರಮಂ, ಲಾಕ್ಷಣಿಕರ್ = ಲಕ್ಷಣಾಚಾರ್ಯರ್, ಪೇೞಿಂದು = ಹೇಳಿಂದು, ಬೆಸಸೆ = ನಿರೂಪಿಸೆ, ಬಗೆವುಗೆ = ಮನಂಬುಗೆ, ಪೇೞ್ದೆಂ = ಹೇಳ್ದೆಂ.

ವೃತ್ತಿ - ಶಬ್ದಸಾಮರ್ಥ್ಯಮಮರೆ, ವಿಸ್ತರದಿಂ ಕರ್ಣಾಟಕವ್ಯಾಕರಣಮಂ, ಶಬ್ದಮಣಿ ದರ್ಪಣಮೆಂಬ ಪೆಸರನಿಟ್ಟು, ಲಕ್ಷಣಾಚಾರ್ಯರ್ ಪೇೞಿಂದು ಬೆಸಸೆ, ಮನಂಬುಗುವಂತೆ ಪೇೞ್ದೆಂ.

ಸೂತ್ರಂ ॥ ಅವಧರಿಪುದು ವಿಬುಧರ್ ದೋ ।
ಷವಿದಱೊಳೇನಾನುಮುಳ್ಳೊಡಂ ಪ್ರಿಯದಿಂ ತಿ ॥
ರ್ದುವುದು ಗುಣಯುಕ್ತಮುಂ ದೋ ।
ಷವಿದೂರಮುಮಾಗೆ ಮೆಚ್ಚಿ ಕೈಕೊಳ್ವುದಿದಂ ॥ ೪ ॥

ಟೀಕೆ - ಇದಂ = ಈ ಶಬ್ದಮಣಿದರ್ಪಣವಂ, ವಿಬುಧರ್ = ವಿದ್ವಾಂಸರ್, ಅವಧರಿಪುದು = ಕೇಳ್ವುದು ; ಇದಱೊಳ್ = ಈ ಶಬ್ದಮಣಿದರ್ಪಣದಲ್ಲಿ, ದೋಷಂ = ಅಷ್ಟಾದಶದೋಷಂ, ಏನಾನುಂ = ಏನಾದೊಡಂ, ಉಳ್ಳೊಡಂ = ಉಂಟಾದೊಡೆಯುಂ, ಪ್ರಿಯದಿಂ = ಪ್ರೀತಿಯಿಂದೆ, ತಿರ್ದುವುದು = ನೇರಿತ್ತಂ (ಸರಿ) ಮಾಡುವುದು ; ಗುಣಯುಕ್ತಮುಂ = ಶಬ್ದಸಾಮರ್ಥ್ಯವೆಂಬ ಗುಣದೊಡನೆ ಕೂಡಿದುದುಂ, ದೋಷವಿದೂರಮುಂ = ದೋಷರಹಿತಮಾದುದುಂ, ಆಗೆ = ಆಗಲಾಗಿ, ಮೆಚ್ಚಿ = ಒಡಂಬಟ್ಟು, ಕೈಕೊಳ್ವುದು = ಅಂಗೀಕರಿಸುವುದು.

ವೃತ್ತಿ - ಶಬ್ದಮಣಿದರ್ಪಣದೊಳೇನಾನುಂ ದೋಷಮುಳ್ಳೊಡಂ ವಿದ್ವಾಂಸರವಧರಿಸಿ ಕೇಳ್ದು, ಕರುಣದಿಂ ಮನಃಪ್ರೀತಿವೆರಸಿ ತಿರ್ದುವುದು; ಗುಣಾನ್ವಿತಮುಂ ನಿರ್ದೋಷಮುಮಾಗೆ, ಮೆಚ್ಚಿ ಸ್ವೀಕರಿಪುದು.

ಸೂತ್ರಂ ॥ ಗಜಗನ ಗುಣನಂದಿಯ ಮನ ।
ಸಿಜನಸಗನ ಚಂದ್ರಭಟ್ಟ ಗುಣವರ್ಮ ಶ್ರೀ ॥
ವಿಜಯರ ಹೊನ್ನನ ಹಂಪನ ।
ಸುಜನೋತ್ತಂಸನ ಸುಮಾರ್ಗಮಿದಱೊಳೆ ಲಕ್ಷ್ಯಂ ॥ ೫ ॥

ಟೀಕೆ - ಗಜಗನ, ಗುಣನಂದಿಯ, ಮನಸಿಜನ, ಅಸಗನ, ಚಂದ್ರಭಟ್ಟ ಗುಣವರ್ಮ ಶ್ರೀವಿಜಯರ, ಹೊನ್ನನ, ಹಂಪನ, ಸುಜನೋತ್ತಂಸನ, ಸುಮಾರ್ಗಂ = ಲೇಸಾದ ಕಾವ್ಯಮಾರ್ಗಂ, ಇದಱೊಳೆ, ಲಕ್ಷ್ಯಂ = ಉದಾಹರಣೆಗಳ್.

ವೃತ್ತಿ - ಈ ಕವಿಗಳಾದಿಯಾದ ಮತ್ತಂ ಪಲಂಬರ್ ಪ್ರಸಿದ್ಧ ಕವಿಗಳುದಾಹರಣಂ ಗಳಿದಱೊಳೊಳವು.

ಸೂತ್ರಂ ॥ ಪ್ರಾಸಚ್ಛಂದೋನ್ವಯ ವಿ ।
ನ್ಯಾಸದಿನಂತಿಂತು ಶಬ್ದಮಿರ್ಕುಂ ವೃತ್ತಿ ॥
ವ್ಯಾಸಂ ತದ್ವ್ಯಾಕುಳಮೆಂ ।
ದಾ ಸೂತ್ರಕ್ಕರ್ಥವೃತ್ತಿ ವರ್ತಿಸೆ ಬರೆದೆಂ ॥ ೬ ॥

**ಟೀಕೆ** - ಪ್ರಾಸ = ಷಟ್ಪ್ರಾಸಂಗಳ, ಛಂದಃ = ಛಂದಸ್ಸಿನ, ಅನ್ವಯ = ಅನ್ವಯದ, ವಿನ್ಯಾಸದಿಂ = ನಿಱುಗೆಯಿಂದೆ, ಶಬ್ದಂ = ಶಬ್ದಂಗಳ್, ಅಂತಿಂತು = ಪಲ್ಲಟವಾಗಿ, ಇರ್ಕುಂ = ಇರ್ಪುವು; ವೃತ್ತಿವ್ಯಾಸಂ = ವೃತ್ತಿವಿಸ್ತರಂ, ತತ್ = ಅವುಗಳಿಂ, ವ್ಯಾಕುಳಮೆಂದು = ಸಂದೇಹವಪ್ಪುದೆಂದು, ಆ ಸೂತ್ರಕ್ಕೆ = ಆಯಾ ಸೂತ್ರಂಗಳ್ಗೆ, ಅರ್ಥವೃತ್ತಿ = ಅರ್ಥದ ವೃತ್ತಿ, ವರ್ತಿಸೆ = ಪ್ರವರ್ತಿಸೆ, ಬರೆದೆಂ = (ವೃತ್ತಿಯಂ) ಲಿಖಿಸಿದೆಂ.

**ವೃತ್ತಿ** - ಪ್ರಾಸದ, ಛಂದದ, ಅನ್ವಯದ ನಿಱುಗೆಯಿಂ ಶಬ್ದಂಗಳ್ ವ್ಯತ್ಯಯಮಾಗಿರ್ಪುವು; ಅವಱಿವಱ ಬಱಿಯೊಳ್ವೃತ್ತಿಯ ವಿಸ್ತರಂ ವ್ಯಾಕುಲಮಾದಪುದೆಂದಾ ಸೂತ್ರಕ್ಕೆ ತಾತ್ಪರ್ಯಾರ್ಥಂ ಪ್ರವರ್ತಿಸುತ್ತುಮಿರೆ ವೃತ್ತಿಯಂ ಬರೆದೆಂ.

**ಸೂತ್ರಂ ॥ ಜನಮಂಗೀಕರಿಪುದು ನೆ ।**
**ಟ್ಟನೆ ಸಂಬಂಧಾಭಿಧೇಯ ಶಕ್ಯಾನುಷ್ಠಾ ॥**
**ನ ನಿಜೇಷ್ಟಸಿದ್ಧಿಗಳ್ ನೆಲ ।**
**ಸಿ ನಿಂದ ಕಾರಣದೆ ಶಬ್ದಮಣಿದರ್ಪಣಮಂ ॥ ೭ ॥**

**ಟೀಕೆ** - ಸಂಬಂಧ = ಪ್ರಕೃತಿ ಪ್ರತ್ಯಯ ಸಂಬಂಧ, ಲಕ್ಷ್ಯ ಲಕ್ಷಣ ಸಂಬಂಧ, ವಿಶೇಷ್ಯ ವಿಶೇಷಣ ಸಂಬಂಧ, ಕರ್ತೃ ಕರ್ಮ ಕ್ರಿಯಾ ಸಂಬಂಧಮೆಂಬ ಪೊರ್ದುಗೆ, ಅಭಿಧೇಯಂ = ಅರ್ಥಂ, ಶಕ್ಯಾನುಷ್ಠಾನಂ = ಆ ಅರ್ಥವನ್ನು ಸಾಧಿಸಲ್ತಕ್ಕ ಉದ್ಯೋಗಂ, ನಿಜ = ತನ್ನ, ಇಷ್ಟಸಿದ್ಧಿಗಳ್ = ಇಷ್ಟಾರ್ಥಸಿದ್ಧಿಗಳ್, ನೆಟ್ಟನೆ = ವ್ಯಕ್ತಮಾಗಿ, ನೆಲಸಿ = ನೆಲೆಗೊಂಡು, ನಿಂದ ಕಾರಣದೆ = ಇರ್ಪ ಕಾರಣದಿಂದೆ, ಶಬ್ದಮಣಿದರ್ಪಣಮಂ = ಶಬ್ದಮಣಿದರ್ಪಣವೆಂಬ ಶಾಸ್ತ್ರಮಂ, ಜನಂ = ವಿದ್ವಜ್ಜನಂ, ಅಂಗೀಕರಿಪುದು = ಸ್ವೀಕರಿಸುವುದು.

**ವೃತ್ತಿ** - ಸಂಬಂಧಮೆಂದು ಪೊರ್ದುಗೆ; ಅಭಿಧೇಯಮೆಂದರ್ಥಂ; ಶಕ್ಯಾನುಷ್ಠಾನಮೆಂದಾ ಪದಾರ್ಥಮಂ ಸಾಧಿಸಲ್ತಕ್ಕುದ್ಯೋಗಂ; ಇಷ್ಟಸಿದ್ಧಿಯೆಂದದಱ ಫಲಪ್ರಾಪ್ತಿ - ಇವು ಶಬ್ದಮಣಿದರ್ಪಣದೊಳ್ ನೆಲೆಗೊಂಡಿರ್ಪುದಱಿಂ ಸ್ವೀಕರಿಸದ ಲೋಕಮಿಲ್ಲ.

## ವ್ಯಾಕರಣ ಪ್ರಾರಂಭಂ

**ಸೂತ್ರಂ ॥ ಕ್ರಮದಿಂದೆ ಸಂಧಿ ನಾಮಂ ।**
**ಸಮಾಸಮಾ ತದ್ಧಿತಂ ಪೊದಟ್ದಾಖ್ಯಾತಂ ॥**
**ಪ್ರಮುದಿತ ಧಾತುವಪಭ್ರಂ ।**
**ಶಮವ್ಯಯಂ ಸಂಧಿ ಶಬ್ದಮಣಿದರ್ಪಣದೊಳ್ ॥ ೧ ॥**

**ಟೀಕೆ** - ಶಬ್ದಮಣಿದರ್ಪಣದೊಳ್ = ಶಬ್ದಮಣಿದರ್ಪಣದಲ್ಲಿ, ಕ್ರಮದಿಂದೆ = ತಱುವಾಯಿಂದೆ, ಸಂಧಿ = ಸಂಧಿ ಪ್ರಕರಣಮೆಂದು, ನಾಮಂ = ನಾಮ ಪ್ರಕರಣಮೆಂದು, ಸಮಾಸಂ = ಸಮಾಸ ಪ್ರಕರಣಮೆಂದು, ಆ ತದ್ಧಿತಂ = ಆ ಪ್ರಸಿದ್ಧವಾದ ತದ್ಧಿತ ಪ್ರಕರಣಮೆಂದು, ಪೊದಟ್ದ = ಪ್ರಸಿದ್ಧಿವಡೆದ, ಆಖ್ಯಾತಂ = ಆಖ್ಯಾತ ಪ್ರಕರಣಮೆಂದು, ಪ್ರಮುದಿತ ಧಾತು = ವಿಶೇಷವಾಗಿ ಸಂತೋಷಿಸಲ್ಪಟ್ಟ ಧಾತು ಪ್ರಕರಣಮೆಂದು, ಅಪಭ್ರಂಶಂ = ಅಪಭ್ರಂಶ ಪ್ರಕರಣಮೆಂದು, ಅವ್ಯಯಂ = ಅವ್ಯಯ ಪ್ರಕರಣಮೆಂದು, ಸಂಧಿ = ಸಂಧಿಗಳ್ (ಎಂಟು).

**ವೃತ್ತಿ** - ತಱುವಾಯಿಂ ಸಂಧಿಯೆಂದುಂ, ನಾಮಮೆಂದುಂ, ಸಮಾಸಮೆಂದುಂ, ತದ್ಧಿತಮೆಂದುಂ, ಆಖ್ಯಾತಮೆಂದುಂ, ಧಾತುವೆಂದುಂ, ಅಪಭ್ರಂಶಮೆಂದುಂ, ಅವ್ಯಯಮೆಂದುಂ, ಈ ಶಬ್ದಮಣಿದರ್ಪಣದೊಳ್ ಸಂಧಿಯೆಂಟಕ್ಕುಂ.

**ಸೂತ್ರಂ ॥ ಅನುಕೂಲಪವನನಿಂ ಜೀ ।**
**ವನಿಷ್ಟದಿಂ ನಾಭಿಮೂಲದೊಳ್ ಕಹಳೆಯ ಪಾಂ ॥**
**ಗಿನ ವೋಲ್ ಶಬ್ದದ್ರವ್ಯಂ ।**
**ಜನಿಯಿಸುಗುಂ ಶ್ವೇತಮದಱ ಕಾರ್ಯಂ ಶಬ್ದಂ ॥ ೨ ॥**

**ಟೀಕೆ** - ಜೀವನ = ಜೀವಾತ್ಮನ, ಇಷ್ಟದಿಂ = ಇಚ್ಛೆಯಿಂದೆ, ಅನುಕೂಲಪವನನಿಂ = ಜೀವನೊಡನೆ ಅನುಕೂಲವಾದ ಪ್ರಾಣಮಾರುತನಿಂದೆ, ನಾಭಿಮೂಲದೊಳ್ = ನಾಭಿಯ ಮೊದಲಲ್ಲಿ, ಕಹಳೆಯ ಪಾಂಗಿನವೋಲ್ = (ನೆಗಪಿದ) ಕಹಳೆಯಾಕಾರದ ಹಾಗೆ, ಶಬ್ದದ್ರವ್ಯಂ = ಶಬ್ದವೆಂಬ ದ್ರವ್ಯಂ, ಶ್ವೇತಂ = ಧವಳವರ್ಣಮಾಗಿ, ಜನಿಯಿಸುಗುಂ= ಪುಟ್ಟುವುದು; ಅದಱ = ಆ ಶಬ್ದದ್ರವ್ಯದ, ಕಾರ್ಯಂ = ಪ್ರಯೋಜನಂ, ಶಬ್ದಂ = ಶಬ್ದಮಕ್ಕುಂ.

**ವೃತ್ತಿ** - ಅನುಕೂಲಪವನನ ಬೆಂಬಱಯಿಂ ಜೀವನೊಡನೆ ಸಂಬಂಧಮಾಗಿರ್ಪುದಱಂ ನಾಭಿಯ ಮೊದಲಲ್ಲಿ ನೆಗಪಿದ ಕಹಳೆಯಾಕಾರದಿಂ *ಶಬ್ದಮೆಂಬ ದ್ರವ್ಯಂ ಧವಳವರ್ಣಮಾಗಿ ಪುಟ್ಟುಗುಂ; ಅದಱ ಕಾರ್ಯಮಂ ಶಬ್ದಮೆಂಬರ್.

* **ವಿಚಾರಂ** - ಶಬ್ದದ್ರವ್ಯಮೆಂದೊಡೆ ಘಟಕ್ಕೆ ಮೃತ್ತಿಕೆಯೆಂತಂತೆ ಅಕ್ಷರಾತ್ಮಕವಾದ ಶಬ್ದಂಗಳ್ಪುಟ್ಟವುದರ್ಕೆ ಉಪಾದಾನಕಾರಣವಾದ ವಸ್ತುವೆಂದಱವುದು; ಶಬ್ದಕ್ಕೆ ದ್ರವ್ಯತ್ವಮಂ ಜೈನರ್ ಪೇೞ್ದಪರ್.

**ಸೂತ್ರಂ ॥ ವ್ಯಾಕರಣದಿಂದೆ ಪದಮಾ ।**
**ವ್ಯಾಕರಣದ ಪದದಿನರ್ಥಮರ್ಥದೆ ತತ್ತ್ವಾ ॥**
**ಲೋಕಂ ತತ್ತ್ವಾಲೋಕದಿ ।**
**ನಾಕಾಂಕ್ಷಿಪ ಮುಕ್ತಿಯಕ್ಕುಮದೆ ಬುಧರ್ಗೆ ಫಲಂ ॥ ೩ ॥**

**ಟೀಕೆ** - ವ್ಯಾಕರಣದಿಂದೆ = ಶಬ್ದಶಾಸ್ತ್ರದಿಂದೆ, ಪದಂ = ಪದಸಿದ್ಧಿ, ಅಕ್ಕುಂ = ಅಪ್ಪುದು; ಆ ವ್ಯಾಕರಣದ = ಆ ಶಬ್ದಶಾಸ್ತ್ರದ, ಪದದಿಂ = ಪದಸಿದ್ಧಿಯಿಂದೆ, ಅರ್ಥಂ = ಅರ್ಥವಿಚಾರಂ (ಅಪ್ಪುದು); ಅರ್ಥದೆ = ಅರ್ಥವಿಚಾರದಿಂದೆ, ತತ್ತ್ವಾಲೋಕಂ = ತತ್ತ್ವಜ್ಞಾನಂ (ಅಪ್ಪುದು); ತತ್ತ್ವಾಲೋಕದಿಂ = ತತ್ತ್ವಜ್ಞಾನದಿಂದೆ, ಆಕಾಂಕ್ಷಿಪ ಮುಕ್ತಿ = ಬಯಸಲ್ತಕ್ಕ ಮೋಕ್ಷಂ (ಅಪ್ಪುದು); ಅದೆ = ಆ ಮೋಕ್ಷವೆ, ಬುಧರ್ಗೆ = ವಿದ್ವಾಂಸರ್ಗೆ, ಫಲಂ = ಸತ್ಫಲಂ (ಅಪ್ಪುದು).

**ವೃತ್ತಿ** - ವ್ಯಾಕರಣದಿಂದೆ ಪದಸಿದ್ಧಿಯಕ್ಕುಂ; ಆ ವ್ಯಾಕರಣದ ಪದಸಿದ್ಧಿಯಿಂದರ್ಥಜ್ಞಾನಮಕ್ಕುಂ; ಆ ಜ್ಞಾನದಿಂ ತತ್ತ್ವವಿಚಾರಮಕ್ಕುಂ; ತತ್ತ್ವವಿಚಾರದಿಂ ಬಯಸುವ ಮುಕ್ತಿ ದೊರೆಕೊಳ್ಗುಂ; ಬುಧರ್ಗದುಕಾರಣದಿಂ ವ್ಯಾಕರಣಮುಪಾದೇಯಂ.

## ಅಕ್ಷರಸಂಜ್ಞಾ ಸ್ವರೂಪಂ

**ಸೂತ್ರಂ ॥ ಆರಯೆ ತಚ್ಛಾಸ್ತ್ರವ್ಯವ ।**
**ಹಾರಜ್ಞಾನಾರ್ಥಮಾಗಿ ಪೇೞಲ್ಪಡುಗುಂ ॥**
**ಧೀರರಿನಕ್ಷರಸಂಜ್ಞಾ ।**
**ಕಾರಂ ವ್ಯಾಕರಣದಾದಿಯೊಳ್ ಪರಿವಿಡಿಯಿಂ ॥ ೧ ॥**

**ಟೀಕೆ** – ತಚ್ಛಾಸ್ತ್ರ = ಆ ಶಬ್ದಶಾಸ್ತ್ರದ, ವ್ಯವಹಾರ = ವ್ಯವಹಾರದ, ಜ್ಞಾನಾರ್ಥಮಾಗಿ = ತಿಳಿವಳಿಕೆಯ ಪ್ರಯೋಜನಮಾಗಿ (ತಿಳಿವಳಿಕೆಗಾಗಿ), ಆರಯೆ = ವಿಚಾರಿಸೆ, ವ್ಯಾಕರಣದ = ವ್ಯಾಕರಣಶಾಸ್ತ್ರದ, ಆದಿಯೊಳ್ =ಮೊದಲಲ್ಲಿ, ಧೀರರಿಂ = ವಿದ್ವಾಂಸರಿಂದೆ, ಅಕ್ಷರಸಂಜ್ಞಾಕಾರಂ = ಅಕ್ಷರಂಗಳ ಸಂಜ್ಞಾಸ್ವರೂಪಂ, ಪರಿವಿಡಿಯಿಂ = ತಱುವಾಯಿಂದೆ, ಪೇೞಲ್ಪಡುಗುಂ = ಹೇಳಲ್ಪಡುವುದು.

**ವೃತ್ತಿ** – ಆ ಶಬ್ದಶಾಸ್ತ್ರವ್ಯವಹಾರಮಂ ತಿಳಿಯಲ್ಕೆ ಅಕ್ಷರಸಂಜ್ಞಾಸ್ವರೂಪಂ ವ್ಯಾಕರಣದ ಮೊದಲೊಳ್ ಕ್ರಮದಿಂ ಪೇೞಲ್ಪಡುಗುಂ.

**ಸೂತ್ರಂ ॥ ಅಕ್ಕರಮುಂ ವರ್ಣಮುಮೆಂ ।**
**ದಕ್ಕುಂ ಶುದ್ಧಾಕ್ಷರಕ್ಕೆ ನಾಮಂ ಬರೆಪಂ ॥**
**ಬೊಕ್ಕುಚ್ಚರಿಸಲ್ ಬಾರದು ।**
**ವಕ್ಕರಮಲ್ತವು ಘನಸ್ವನಾದಿ ಧ್ವನಿಗಳ್ ॥ ೨ ॥**

**ಟೀಕೆ** – ಅಕ್ಕರಮುಂ = ಅಕ್ಕರಮೆಂದುಂ, ವರ್ಣಮುಂ = ವರ್ಣಮೆಂದುಂ, ಶುದ್ಧಾಕ್ಷರಕ್ಕೆ = ಶುದ್ಧವಾದಕ್ಷರಂಗಳ್ಗೆ, ನಾಮಂ = ಪೆಸರ್, ಅಕ್ಕುಂ = ಅಪ್ಪುದು; ಬರೆಪಂಬೊಕ್ಕು = ಬರೆವುದಂ ಪೊಕ್ಕು, ಉಚ್ಚರಿಸಲ್ ಬಾರದುವು = ಉಚ್ಚಾರಣೆಗೆ ಬಾರದುವು, ಅಕ್ಕರಂಗಳ್ = ಅಕ್ಷರಂಗಳ್, ಅಲ್ತು = ಅಲ್ಲ; ಅವು = ತಾವು, ಘನ = ಮೇಘದ, ಸ್ವನ = ಧ್ವನಿ, ಆದಿ = ಮೊದಲಾದ, ಧ್ವನಿಗಳ್ = (ಪಲವು ತೆಱದ) ಧ್ವನಿಗಳ್ (ಅಪ್ಪುವು).

**ವೃತ್ತಿ** – ಅಕ್ಕರಮೆಂದುಂ ವರ್ಣಮೆಂದುಂ ಶುದ್ಧಾಕ್ಷರಕ್ಕೆ ಪರ್ಯಾಯನಾಮಂ; ಬರೆಯಲು ಮುಚ್ಚರಿಸಲುಂ ಬಾರದುವಕ್ಷರಂಗಳಲ್ತವು ಮೊೞಗು ಮೊದಲಾದ ಪಲತೆಱದ ಧ್ವನಿಗಳ್.

**ಸೂತ್ರಂ ॥ ವ್ಯವಹರಿಪುವೆರಡು ರೂಪಿಂ ।**
**ದವಕ್ಕರಂ ಶ್ರಾವಣಂ ಸ್ವನೈಕಾಕಾರಂ ॥**
**ವಿವಿಧಾಕಾರಂ ಲಿಪಿಭೇ ।**
**ದ ವೃತ್ತಿಯಿಂ ಚಾಕ್ಷುಷಂ ಪುರಾತನಮತದಿಂ ॥ ೩ ॥**

**ಟೀಕೆ** – ಪುರಾತನ ಮತದಿಂದೆ = ಪೂರ್ವದ ಕವಿಗಳ ಮತಧಿಂದೆ, ಅಕ್ಕರಂಗಳ್, ಅವು = ಅವು ತಾಂ, ಎರಡು ರೂಪಿಂದೆ = ಶ್ರಾವಣ ಚಾಕ್ಷುಷವೆಂಬೆರಡು ತೆಱದಾಕಾರದಿಂದೆ, ವ್ಯವಹರಿಪುವು= ವರ್ತಿಪುವು; ಸ್ವನೈಕಾಕಾರಂ = ಧ್ವನಿಯೊಂದಱಾಕಾರವನುಳ್ಳುದು, ಶ್ರಾವಣಂ = ಶ್ರಾವಣಮೆನಿಪುದು; ಲಿಪಿ = ಲಿಪಿಗಳ, ಭೇದ = ಭೇದದ, ವೃತ್ತಿಯಿಂ = ವರ್ತನೆಯಿಂದೆ, ವಿವಿಧಾಕಾರಂ = ನಾನಾ ಪ್ರಕಾರವಾದ ಆಕಾರವನ್ನುಳ್ಳುದು, ಚಾಕ್ಷುಷಂ = ಚಾಕ್ಷುಷವೆನಿಸುವುದು; ಶ್ರಾವಣಮೆಂದೊಡೆ ಕಿವಿಯಲ್ಲಿ ಕೇಳ್ವುದು, ಚಾಕ್ಷುಷಮೆಂದೊಡೆ ಕಣ್ಣೊಳ್ಕಾಣ್ಬುದೆಂದಱಿವುದು.

**ವೃತ್ತಿ** – ಎರಡುತೆಱದಾಕಾರದಿಂದಕ್ಕರಂ ವರ್ತಿಸುಗುಂ; ಶಬ್ದಾಕಾರದಿಂ ಕಿವಿಗೆ ವಿಷಯಮಾದಕ್ಷರಂ ಶ್ರಾವಣಮೆಂಬುದು; ಲಿಪಿಭೇದದಿಂ ಪಲವಾಕಾರಮಾಗಿ ಕಣ್ಗೆ ತೋಱುವಕ್ಕರಂ ಚಾಕ್ಷುಷಮೆಂಬುದು; ಇದನಾದಿಮಾರ್ಗದಿನಱಿವುದು.

## ೧. ವರ್ಣಂಗಳ್

**ಸೂತ್ರಂ ॥ ವರ್ಣಂಗಳ ಪಾಠಕ್ರಮ ।**
**ಮರ್ಣವವೃತ ಧಾತ್ರಿಯೊಳ್ ಪ್ರಸಿದ್ಧಂ ನಿಜದಿಂ ॥**
**ವರ್ಣಂಗಳಕಾರಾದ್ಯಾ ।**
**ಪೂರ್ಣತೆಯಂ ಪಡೆವುವಾ ಳಕಾರಂಬರೆಗಂ ॥ ೪ ॥**

**ಟೀಕೆ –** ಅರ್ಣವ = ಸಮುದ್ರದಿಂದೆ, ವೃತ = ಸುತ್ತಲ್ಪಟ್ಟ, ಧಾತ್ರಿಯೊಳ್ = ಭೂಮಿಯಲ್ಲಿ, ವರ್ಣಂಗಳ = ಅಕ್ಷರಂಗಳ, ಪಾಠಕ್ರಮಂ = ಓದುವನುಕ್ರಮಂ, ನಿಜದಿಂ = ಸಹಜದಿಂದೆ, ಪ್ರಸಿದ್ಧಂ; ವರ್ಣಂಗಳ್ = ಅಕ್ಷರಂಗಳ್, ಅಕಾರ = ಅಕಾರಂ, ಆದಿ = ಮೊದಲಾಗಿ, ಆಪೂರ್ಣತೆಯಂ = ಪರಿಪೂರ್ಣತ್ವಮಂ, ಆ ಳಕಾರಂಬರೆಗಂ = ಆ ಳಕಾರಪರ್ಯಂತಂ, ಪಡೆವುವು.

**ವೃತ್ತಿ** - ಅಕ್ಕರಂಗಳನೋದುವನುಕ್ರಮಂ ಕಡಲುಡಿಗೆಯಾದ ಪೊಡವಿಯೊಳ್ ಪ್ರಸಿದ್ಧಂ; ಅಕ್ಕರಂಗಳಕಾರಂ ಮೊದಲಾಗಿ ಳಕಾರಪರ್ಯಂತಂ ಪರಿಪೂರ್ಣಮಾಗಿರ್ಪುವು: ಅವಾವುವೆಂದೊಡೆ -

ಅ ಆ, ಇ ಈ, ಉ ಊ, ಋ ೠ, ಌ, ೡ, ಏ ಐ, ಓ ಔ; ಕ್ ಖ್, ಗ್ ಘ್, ಙ್; ಚ್ ಛ್, ಜ್ ಝ್, ಞ್; ಟ್ ಠ್, ಡ್ ಢ್, ಣ್; ತ್ ಥ್, ದ್ ಧ್, ನ್; ಪ್ ಫ್, ಬ್ ಭ್, ಮ್; ಯ್, ರ್, ಲ್, ವ್, ಶ್, ಷ್, ಸ್, ಹ್, ಳ್.

**ಸೂತ್ರಂ ॥ ಕುಳದ ನಿಯಾಮದೊಳೆಂದುಂ ।**
**ಕ್ಷಳಕ್ಕೆ ಲಾಕ್ಷರ ವಿಕಲ್ಪಮಿಲ್ಲ ವಿಕಲ್ಪಂ ॥**
**ಕ್ಷಳನಿಲ್ಲದಿಲ್ಲ ಸಂಸ್ಕೃತ ।**
**ದೊಳಾ ಲಕಾರಕ್ಕೆ ಪೇೞ್ದಿನದಱಿಂ ಕ್ಷಳನಂ ॥ ೫ ॥**

**ಟೀಕೆ –** ಕುಳದ = ಕುಳ ಳಕಾರದ, ನಿಯಾಮದೊಳ್ = ಪ್ರಾಸಿನಲ್ಲಿ, ಕ್ಷಳಕ್ಕೆ = ಕ್ಷಳ ಳಕಾರಕ್ಕೆ, ಲಾಕ್ಷರ ವಿಕಲ್ಪಂ = ಲಕಾರದ ವಿಕಲ್ಪಂ, ಎಂದುಂ = ಆವಾಗಳುಂ, ಇಲ್ಲ = ಉಂಟಾಗದು; ಕ್ಷಳನಿಲ್ಲದೆ = ಕ್ಷಳಮೆಂಬ ಳಕಾರಮಿಲ್ಲದೆ, ವಿಕಲ್ಪಂ = ಲಾಕ್ಷರ ವಿಕಲ್ಪಂ, ಇಲ್ಲ; ಸಂಸ್ಕೃತದೊಳ್ = ಸಂಸ್ಕೃತದಲ್ಲಿ, ಆ ಲಕಾರಕ್ಕೆ = ಆ ಸಂಸ್ಕೃತದಲ್ಲಿರ್ದ ಲಕಾರಕ್ಕೆ, ಅದಱಿಂ = ಅದು ಕಾರಣದಿಂದೆ, ಕ್ಷಳನಂ = ಕ್ಷಳನೆಂಬ ಳಕಾರಮಂ, ಪೇೞ್ದಿಂ = ಹೇೞ್ದಿಂ.

**ವೃತ್ತಿ –** ಕುಳಪ್ರಾಸಮಾಗೆ ಪೇೞ್ದ ಕಬ್ಬಂ [ಕ್ಷಳನಂ] ಸೇಱಿಗೆಯ್ವುದಾಗಿ, ಲಕಾರಮಂ ವಿಕಲ್ಪಮಂ ಮಾಡಬಾರದು; ಲಕಾರಪ್ರಾಸಮಾಗೆ ಪೇೞ್ದ ಕನ್ನಡದ ಕಬ್ಬದೊಳ್ ಕ್ಷಳನಂ ವಿಕಲ್ಪದಿನಿರಿಸ ಬಾರದು, ಇದುವುಮಾಗದು; ಕ್ಷಳನೆಂಬುದಿಲ್ಲದೆ ಸಂಸ್ಕೃತ ಪದದ ಲಕಾರಕ್ಕೆ ವಿಕಲ್ಪಮಂ ಪೇೞಲ್ಬಾರದಾಗಿ, ಕ್ಷಳನನಿದಱೊಳೆ ಬೆರಸಿ ಪೇೞ್ದಿಂ.*

* **ವಿಚಾರಂ** - ಕುಳಮೆಂದೊಡೆ ಕನ್ನಡ ಶಬ್ದದಲ್ಲಿ ಇರ್ದ ಳಕಾರಂ; ಕ್ಷಳಮೆಂದೊಡೆ ಸಂಸ್ಕೃತ ಶಬ್ದದಲ್ಲಿ "ಲಳಯೋರಭೇದಃ" ಎಂದು ಉಂಟಾಗಿ, ಲಕಾರ ಳಕಾರಂಗಳ್ಗೆ ಭೇದವಿಲ್ಲದ ಳಕಾರಮೆಂದಱುವುದು. (೧೬ನೆಯ ಸೂತ್ರವಂ ನೋಡುವುದು).

**ಪ್ರಯೋಗಂ – ಕುಳಕ್ಷಳಪ್ರಾಸಕ್ಕೆ -**

ಕಂ ॥ ಕಿಳಿಱಿ ಹಯಂಗಳ್ ಗರ್ಜಿಸೆ
ಜಳದನಿಭಂಗಳ್ ಗಜಂಗಳ್ . . . . . ॥ ೧
(ಕಿಳಿಱಿ, ಜಲದ - ಎಂದಾಗದು)

ಲಕಾರಕ್ಕೆ ಕ್ಷಳನನಿರಿಸಬಾರದುದರ್ಕೆ -

ಕಂ ॥ ಓಲಗದೊಳೂರ್ಮೆ ನತನರ ।
ಪಾಲಕಚೂಡಾಮಣಿದ್ಯುತಿಪ್ಲುತಚರಣಂ ॥ ೨

## ೨. ಸ್ವರಂಗಳ್

**ಸೂತ್ರಂ ॥ ತರದಿನಕಾರಂ ಮೊದಲಾ ।**
**ಗಿರೆ ಪದಿನಾಲ್ಕುಂ ಸ್ವರಂಗಳಾದಿಯ ಪತ್ತ ॥**
**ಕ್ಕರಮುಂ ಸಮಾನಮೆನಿಸುಗು ।**
**ಮೆರಡೆರಡವಱೊಳ್ ಸವರ್ಣಮೆಂತೋದಿದೊಡಂ ॥ ೬ ॥**

**ಟೀಕೆ -** ತರದಿಂ = ತಱುವಾಯಿಂದೆ, ಅಕಾರಂ = ಅತ್ವಂ, ಮೊದಲಾಗಿ = ಆದಿಯಾಗಿ, ಇರೆ = ಇರಲಾಗಿ, ಪದಿನಾಲ್ಕುಂ = ಹದಿನಾಲ್ಕಕ್ಷರಂಗಳುಂ, ಸ್ವರಂಗಳ್ = ಸ್ವರಾಕ್ಷರಂಗಳ್, ಎನಿಸುಗುಂ = ಎನಿಸುವುವು; ಆದಿಯ = ಮೊದಲ, ಪತ್ತಕ್ಕರಮುಂ = ಹತ್ತಕ್ಷರಂಗಳುಂ, ಸಮಾನಂ = ಸಮಾನಂಗಳ್, ಎನಿಸುಗುಂ = ಎನಿಸುವುವು; ಅವಱೊಳ್ = ಆ ಸಮಾನಸಂಜ್ಞೆಯಂ ಪಡೆದ ಹತ್ತಕ್ಷರಂಗಳಲ್ಲಿ, ಎರಡೆರಡು = ಎರಡೆರಡಕ್ಷರಂಗಳ್, ಎಂತೋದಿದೊಡಂ = (ಅನುಲೋಮ ವಿಲೋಮಂಗಳಾಗಿ) ಎಂತು ಓದಿದೊಡೆಯುಂ, ಸವರ್ಣಂ = ಸವರ್ಣಂಗಳ್, ಎನಿಸುಗುಂ = ಎನಿಸುವುವು.

**ವೃತ್ತಿ -** ಕ್ರಮದಿಂದಕಾರಂ ಮೊದಲಾಗಿ ಔಕಾರಪರ್ಯಂತಮಿರ್ದ ಪದಿನಾಲ್ಕಕ್ಕರಂ ಸ್ವರಸಂಜ್ಞೆಯಂ ಪಡೆಗುಂ; ಅಲ್ಲಿ ಮೊದಲ ಪತ್ತಕ್ಕರಂ ಸಮಾನ ಸಂಜ್ಞೆಯಂ ಪಡೆಗುಂ; ಆ ಪತ್ತಕ್ಕರಂಗಳೊಳ್ ಎರಡೆರಡಕ್ಕರಂಗಳ್ ತಮ್ಮೊಳನುಲೋಮದೊಳಿರ್ದೊಡಂ ವಿಲೋಮದೊಳಿರ್ದೊಡಂ ಸವರ್ಣಸಂಜ್ಞೆಯಂ ಪಡೆಗುಂ.

ಪದಿನಾಲ್ಕು ಸ್ವರಂಗಳ್ -

ಅ ಆ, ಇ ಈ, ಉ ಊ, ಋ ೠ, ಌ ೡ , ಏ ಐ, ಓ ಔ - ಎಂಬೀ ಪದಿನಾಲ್ಕುಂ ಸ್ವರಂಗಳ್.

ಸಮಾನ ಸಂಜ್ಞಾಕ್ಷರಂಗಳ್ -

ಅ ಆ, ಇ ಈ, ಉ ಊ, ಋ ೠ, ಌ ೡ - ಎಂಬಿವು ಪತ್ತುಂ ಸಮಾನ ಸಂಜ್ಞೆಗಳ್.

ಅನುಲೋಮಕ್ಕೆ -

ಅ ಆ, ಇ ಈ - ಎಂಬೀ ಪ್ರಕಾರಮಾಗಿ ಆ ಪತ್ತಕ್ಷರಂಗಳ್ ಅನುಲೋಮದೊಳಿರ್ದೊರ್ಡಂ ಸವರ್ಣಸಂಜ್ಞೆಯಂ ಪಡೆಗುಂ.

ವಿಲೋಮಕ್ಕೆ -

ಆ ಅ, ಈ ಇ - ಎಂಬೀ ಪ್ರಕಾರಮಾಗಿರ್ದೊಡಂ ಸವರ್ಣಸಂಜ್ಞೆಯಂ ಪಡೆಗುಂ.

**ಸೂತ್ರಂ ॥ ಕ್ರಮದಿಂ ಹ್ರಸ್ವಕ್ಕಂ ಹ್ರ ।**
**ಸ್ವಮೊದವೆ ದೀರ್ಘಕ್ಕೆ ದೀರ್ಘಮೊದವೆ ತಗುಳ್ಗುಂ ॥**
**ಸಮಸಂದಾ ಯುಗಳಂಗಳೊ ।**
**ಳಮಳಿನಮಾಗೆಲ್ಲಿಯುಂ ಸವರ್ಣವಿಧಾನಂ ॥ ೭ ॥**

**ಟೀಕೆ -** ಸಮಸಂದ = ಸಮಾನವಾಗಿ ಸಂದ, ಆ ಯುಗಳಂಗಳೊಳ್ = ಆ ಎರಡೆರಡಕ್ಷರಂಗಳಲ್ಲಿ, ಕ್ರಮದಿಂ = ತಱುವಾಯಿಂದೆ, ಹ್ರಸ್ವಕ್ಕಂ = ಹ್ರಸ್ವಾಕ್ಷರಕ್ಕೆಯುಂ, ಹ್ರಸ್ವಂ = ಹ್ರಸ್ವಾಕ್ಷರಂ, ಒದವೆ = ಬರಲ್, ದೀರ್ಘಕ್ಕೆ = ದೀರ್ಘಾಕ್ಷರಕ್ಕೆ, ದೀರ್ಘಂ = ದೀರ್ಘಾಕ್ಷರಂ, ಒದವೆ = ಬರಲ್, ಅಮಳಿನಮಾಗಿ = ನಿರ್ದೋಷಮಾಗಿ, ಎಲ್ಲಿಯುಂ = ಆವೆಡೆಯಲ್ಲಿಯುಂ, ಸವರ್ಣವಿಧಾನಂ= ಸವರ್ಣಸಂಜ್ಞಾವಿಧಾನಂ, ತಗುಳ್ಗುಂ = ಎಯ್ದುವುದು.

**ವೃತ್ತಿ -** ತಱುವಾಯಿಂದಾ ಯುಗಳಂಗಳೊಳೆ ಹ್ರಸ್ವಕ್ಕೆ ಹ್ರಸ್ವಂ ಪರಮಾದೊಡಂ, ದೀರ್ಘಕ್ಕೆ ದೀರ್ಘಂ ಪರಮಾದೊಡಂ, ನಿರ್ದೋಷಮಾಗಿ ಸವರ್ಣಸಂಜ್ಞೆವರ್ತಿಸುಗುಂ. ಎಂತೆಂದೊಡೆ -

ಹ್ರಸ್ವಕ್ಕೆ - ಅ ಅ, ಇ ಇ, ಉ ಉ, ಋ ಋ, ಌ ಌ,

ದೀರ್ಘಕ್ಕೆ - ಆ ಆ, ಈ ಈ, ಊ ಊ, ೠ ೠ, ೡ ೡ,

**ಸೂತ್ರಂ ॥ ಸವನಿಸಿದೆ ಏ ಒ ಓ ಎಂ ।**
**ಬಿವು ಕನ್ನಡದೊಳ್ ಸ್ವಭಾವದಿಂದೊಳವು ಸವ ॥**
**ರ್ಣವುಮಪ್ಪುವು ವರ್ಣಾಂಕಂ ।**
**ಸವರ್ಣಸಂಜ್ಞೆಯೊಳಮೊದವುಗುಂ ವ್ಯಾಕೃತಿಯೊಳ್ ॥ ೮ ॥**

**ಟೀಕೆ** - ಕನ್ನಡದೊಳ್ = ಕನ್ನಡ ಭಾಷೆಯಲ್ಲಿ, ಸವನಿಸಿದ = ಬಂದ, ಎ ಏ ಒ ಓ ಎಂಬಿವು = ಈ ಯುಗಳಾಕ್ಷರಂಗಳ್, ಸ್ವಭಾವದಿಂದೆ = ಸಹಜದಿಂದೆ, ಒಳವು = ಉಂಟು; ಸವರ್ಣವುಂ = ಸವರ್ಣಂಗಳುಂ, ಅಪ್ಪುವು = ಆಗುವುವು; ವ್ಯಾಕೃತಿಯೊಳ್ = ವ್ಯಾಕರಣದಲ್ಲಿ, ಸವರ್ಣಸಂಜ್ಞೆಯೊಳಂ = ಸವರ್ಣವೆಂಬ ಸಂಜ್ಞೆಯಲ್ಲಿಯುಂ, ವರ್ಣಾಂಕಂ = ವರ್ಣವೆಂಬ ಸಂಜ್ಞೆ, ಒದವುಗುಂ = ಬರ್ಪುದು.

**ವೃತ್ತಿ -** ಎ ಏ, ಒ ಓ ಎಂಬೀ ಯುಗಳಾಕ್ಷರಂಗಳ್ ವಿಶಂಕಾವಧಾರಣ ನಿಪಾತಂಗಳಲ್ಲದೆ ನಿಜದಿನೊಳವು; ಸವರ್ಣಸಂಜ್ಞೆಯುಮವರ್ಕೆ ದೊರೆಕೊಳ್ವುದು; ವ್ಯಾಕರಣದೊಳ್ ಸವರ್ಣಸಂಜ್ಞೆಗೆ ವರ್ಣಸಂಜ್ಞೆಯುಮುಂಟು.

**ಪ್ರಯೋಗಂ -** ಎಲೆ, ಎಲವಂ; ಏರಿ, ಏತಂ; ಒಕ್ಕಲ್, ಒರೆಗಲ್; ಓತಂ, ಓರಗೆ.

ಕಂ॥ ಎತ್ತುಂಗೋ[ಲ]ಂ ವಿರಹಿಗೆ
ಚಿತ್ತಭವಂ ... ೧

(ಸೂಕ್ತಿಸುಧಾರ್ಣವಂ ೧೦-೮೦)

ಕಂ ॥ ಎಡಱಿದರನಟ್ಟಿ ಮೋದುವ
ಪಡಿಯಱಗಟ್ಟಿಗೆಗಳ್ ... ೨

ಸ್ವಾಗತ ॥ ಏಳಿದಂಗೆಯಲಿಮೀಗಡೆ ... ೩

(ಕಾವ್ಯಾವಲೋಕನಂ ೩೧೪)

ಉ ॥ ಮಾ ॥ ಏತಱ ಮಾತೊ ಭೂತಳದೊಳ್ ... ೪

(ಕಾವ್ಯಾವಲೋಕನಂ ೫೩)

ಕಂ ॥ ಏಟುಂ ಬಸನಮುಮಂ ನರ
ಪಾಳಕರುಬುಗೆ ... ೫

ಉ ॥ ಮಾ ॥ ಒತ್ತರಮೊತ್ತಿದಂತೆ ಬೆಱಗಾಗೆ ಕೃಪಾದಿಗಳೊತ್ತೆ ... ೬

ಕಂ ॥ ಓಸರಿಸಿದ ಜವನಿಕೆಯೊಡ
ನೋಸರಿಸಿದನಿಸಲೆ ಕಂತು ಪುಷ್ಪಾಂಜಲಿಯಂ ... ೭

(ಆದಿಪುರಾಣಂ ೯-೨೧, ಕಾವ್ಯಾವಲೋಕನಂ ೬೪೭)

**ಸೂತ್ರಂ ॥ ವಿದಿತ ಸಮಾನಂಗಳ ಪೂ ।**
**ರ್ವದಕ್ಕರಂ ಹ್ರಸ್ವಮದಱ ಪರದಕ್ಕರಮಂ ॥**
**ತದು ದೀರ್ಘಮವರ್ಣಂ ಪಿಂ ।**
**ಗಿದಾ ಸ್ವರಂ ನಾಮಿಯೆಂದು ಪೇೞಲ್ಪಡುಗುಂ ॥ ೯ ॥**

**ಟೀಕೆ** – ವಿದಿತ = ಪ್ರಸಿದ್ಧವಾದ, ಸಮಾನಂಗಳ = ಸಮಾನಸಂಜ್ಞೆಯಂ ಪಡೆದ ಪತ್ತಕ್ಕರಂಗಳ, ಪೂರ್ವದ = ಮೊದಲ, ಅಕ್ಕರಂ = ಅಕ್ಷರಂ, ಹ್ರಸ್ವಂ = ಹ್ರಸ್ವಾಕ್ಷರಂ; ಅದಱ = ಆ ಹ್ರಸ್ವಾಕ್ಷರದ, ಪರದ = ಮುಂದಣ, ಅಕ್ಕರಂ = ಅಕ್ಷರಂ, ಅಂತು = ಹಾಗೆ, ಅದು = ತಾಂ, ದೀರ್ಘಂ = ದೀರ್ಘಾಕ್ಷರಂ; ಅವರ್ಣಂ = ಅ ಆ ಎಂಬ ವರ್ಣಂ, ಪಿಂಗಿದ =ತೊಲಗಿದ, ಆ ಸ್ವರಂ = ಆ ಹನ್ನೆರಡು ಸ್ವರಾಕ್ಷರಂಗಳ್, ನಾಮಿಯೆಂದು = ನಾಮಿಗಳೆಂದು, ಪೇೞಲ್ಪಡುಗುಂ = ಪೇೞಲ್ಪಡುವುವು.

**ವೃತ್ತಿ** – ಸಮಾನಸಂಜ್ಞೆಯಂ ಪಡೆದ ಪತ್ತಕ್ಕರಂಗಳ ಮೊದಲಕ್ಕರಂಗಳ್ ಹ್ರಸ್ವಂಗಳ್; ಅವಾವುವೆಂದೊಡೆ - ಅ, ಇ, ಉ, ಋ, ಌ ಎಂಬಿವು; ಎ, ಒ ಎಂಬಿವುಮಂತೆ ಸಲ್ವುವು. ಅವಱ ಮುಂದಣಕ್ಕರಂಗಳ್ ದೀರ್ಘಂ; ಅವಾವುವೆಂದೊಡೆ - ಆ, ಈ, ಊ, ೠ, ൡ , ಏ, ಓ. ಅ ಆ ಎಂಬ* ವರ್ಣಂ ಪಿಂಗಿದಾ ಪನ್ನೆರಡು ಸ್ವರಂಗಳ್ ನಾಮಿಸಂಜ್ಞೆಯಂ ಪಡೆವುವು; ಅವಾವುವೆಂದೊಡೆ - ಇ ಈ, ಉ ಊ, ಋ ೠ, ಌ ൡ , ಏ ಐ, ಓ ಔ ಎಂಬಿವು.

* **ವಿಚಾರಂ** – ವರ್ಣಸಂಜ್ಞೆ ಎಂತೆಂದೊಡೆ, ಅವರ್ಣಂ ಇವರ್ಣಂ ಉವರ್ಣಂ ಎಂಬಂತೆ ಇವಂ ತಿಳಿವುದು.
* ವಿಶೇಷ - ವರ್ಣಗ್ರಹಣೇ ಸವರ್ಣಗ್ರಹಣಂ, ಕಾರಗ್ರಹಣೇ ಕೇವಲಗ್ರಹಣಮಿತಿ ವಿವೇಕಃ.

ಉಪೇಂದ್ರವಜ್ರ ॥ ಅವರ್ಣವಾದಕ್ಕೆಡೆಯಾಗದೊಳ್ಪಿಂ ।
ದವರ್ಣಕಾಮರ್ ಗುಣವೃದ್ಧಿಧಾಮರ್ ॥
ದಿವಾಕರರ್ ವ್ಯಾಕೃತಿನಾಮಿಗಳ್ ಪೋಲ್ ।
ದಿವಕ್ಕೆ ಪನ್ನಿರ್ವರೆ ಮುಖ್ಯರಾದರ್ ॥ ೧

(ಕಾವ್ಯಾವಲೋಕನಂ ೧೩)

**ಸೂತ್ರಂ ॥ ಕ್ರಮದೆ ಗುರುದೀರ್ಘಮೇಕಾ ।**
**ರಮುಖ್ಯಸಂಧ್ಯಕ್ಷರಂಗಳವು ನಿಜದಿಂ ಹ್ರ ॥**
**ಸ್ವಮದೇಕಮಾತ್ರಕಂ ದೀ ।**
**ರ್ಘಮುಭಯಮಾತ್ರಂ ತ್ರಿಮಾತ್ರಕಂ ಪ್ಲುತಮಕ್ಕುಂ ॥ ೧೦ ॥**

**ಟೀಕೆ** - ಕ್ರಮದೆ = ತಱುವಾಯಿಂದೆ, ಏಕಾರ = ಏಕಾರಂ, ಮುಖ್ಯ = ಮೊದಲಾದ, ಸಂಧ್ಯಕ್ಷರಂಗಳ್ = ಏ ಐ, ಓ ಔ ಎಂಬ ಸಂಧ್ಯಕ್ಷರಂಗಳ್, ಅವು = ಅವು ತಾಂ, ನಿಜದಿಂ = ಸ್ವಭಾವದಿಂದೆ, ಗುರು = ಗುರುಗಳುಂ, ದೀರ್ಘಂ = ದೀರ್ಘಂಗಳುಂ, ಅಕ್ಕುಂ = ಅಪ್ಪುವು; ಏಕಮಾತ್ರಕಂ = ಒಂದು ಮಾತ್ರೆಯನುಳ್ಳುದು, ಅದು = ಅದು ತಾಂ, ಹ್ರಸ್ವಂ = ಹ್ರಸ್ವಾಕ್ಷರಂ (ಅಪ್ಪುದು); ಉಭಯಮಾತ್ರಂ = ಎರಡು ಮಾತ್ರೆಯನುಳ್ಳುದು, ದೀರ್ಘಂ = ದೀರ್ಘಾಕ್ಷರಂ (ಅಪ್ಪುದು); ತ್ರಿಮಾತ್ರಕಂ = ಮೂಱು ಮಾತ್ರೆಯನುಳ್ಳುದು, ಪ್ಲುತಂ = ಪ್ಲುತಾಕ್ಷರಂ (ಅಪ್ಪುದು).

**ವೃತ್ತಿ** - ತಱುವಾಯಿಂ ಗುರುವುಂ ದೀರ್ಘಮುಂ ಗೂಢಸಂಧಿಯುಮಾಗಿ ಸ್ವಭಾವದಿಂದೇಕಾರಂ ಮೊದಲಾದ ಸಂಧ್ಯಕ್ಷರಂಗಳಪ್ಪುವು; ಅವಾವುವೆಂದೊಡೆ - ಏ ಐ, ಓ ಔ.*

ಕಂ ॥ ವರಸಂಧ್ಯಕ್ಷರದಂತಿರೆ ।
ಗುರು ದೀರ್ಘಂ ಗೂಢಸಂಧಿಯೆನೆ ತೋಳ್ ನಾಲ್ಕುಂ ॥
ಕರಮೆಸೆದಿರ್ಕುಂ ಪದ್ಮೋ ।
ದರಂಗೆ ಚಕ್ರಾಸಿ ಶಂಖ ಶಾರ್ಙ್ಗ ಸಮೇತಂ ॥ ೧

ಎರಡು ವ್ಯಂಜನಮನುಚ್ಚರಿಸುವನಿತು ಕಾಲಂ ಮಾತ್ರೆಯೆಂಬುದು; ಅದು ಹ್ರಸ್ವಮೆನಿಪುದು, ಲಘುವೆನಿಪುದು; ಸ್ವರವ್ಯಂಜನದಿನೇಕಮಾತ್ರಮಾದೊಡೆ ಹ್ರಸ್ವಂ, ದ್ವಿಮಾತ್ರಮಾದೊಡೆ ದೀರ್ಘಂ, ತ್ರಿಮಾತ್ರಮಾದೊಡೆ ಪ್ಲುತಂ.

* **ವಿಚಾರಂ** - ಸಂಧ್ಯಕ್ಷರಂಗಳೆಂದೊಡೆ ಸಂಸ್ಕೃತ ವ್ಯವಹಾರದಲ್ಲಿ ಸಂಧಿಯಾದಕ್ಷರಗಳೆಂದಱಿವುದು; ಅದೆಂತೆಂದೊಡೆ - ಅಕಾರಮುಂ ಇಕಾರಮುಂ ಕೂಡಿ ಸಂಧಿಯಾಗೆ, ಏಕಾರಂ ಪುಟ್ಟುಗುಂ; ಅಕಾರಮುಂ ಏಕಾರಮುಂ ಕೂಡಿ ಸಂಧಿಯಾಗೆ, ಐಕಾರಂ ಪುಟ್ಟುಗುಂ; ಅಕಾರಮುಂ ಉಕಾರಮುಂ ಕೂಡಿ ಸಂಧಿಯಾಗೆ, ಓಕಾರಂ ಪುಟ್ಟುಗುಂ; ಅಕಾರಮುಂ ಓಕಾರಮುಂ ಕೂಡಿ ಸಂಧಿಯಾಗೆ, ಔಕಾರಂ ಪುಟ್ಟುಗುಂ. ಇದರ್ಕುದಾಹರಣೆಗಳ್ -

ಅಕಾರಂ ಇಕಾರಂ ಕೂಡಿ ಏಕಾರಮಾದುದರ್ಕೆ-ನಿಜ + ಇಷ್ಟಸಿದ್ಧಿಗಳ್ = ನಿಜೇಷ್ಟಸಿದ್ಧಿಗಳ್
ಐಕಾರಕ್ಕೆ - ಜ್ಯಾದಿಸಮಸ್ತ + ಏಕಾಕ್ಷರಂ = ಜ್ಯಾದಿಸಮಸ್ತೈಕಾಕ್ಷರಂ
ಓಕಾರಕ್ಕೆ - ವಿದಿತ + ಉಭಯಕರ್ತೃಕಂ = ವಿದಿತೋಭಯಕರ್ತೃಕಂ
ಔಕಾರಕ್ಕೆ - ವಿದಿತ + ಓಕಾರಂ = ವಿದಿತೌಕಾರಂ - ಎಂಬಂತೆ.

**ಪ್ರಯೋಗಂ - ಹ್ರಸ್ವ ದೀರ್ಘ ಪ್ಲುತಕ್ಕೆ**

ಕಂ॥ . . . ಭು [ಬ್ಭೂ] ಭೂ ಎಂದು ಪೂರಯಿಸಿದುದು ಶಂಖಂ ೨

ಕಂ॥ . . . ಕು [ಕ್ಕೂ] ಕೂ ಎಂದು ಕೋಟಿ ಕೂಗಿದುವಾಗಳ್ ೩

(ಕಾವ್ಯಾವಲೋಕನಂ ೧೧)

**ಸೂತ್ರಂ ॥ ಬಿಂದುವನುಸ್ವಾರಂ ತಾ ।**
**ನೆಂದಕ್ಕುಂ ಸೊನ್ನೆ ಮುತ್ತುವೋಲ್ ವೃತ್ತತೆಯಿಂ ॥**
**ಸಂದಿರ್ಪುದಂತದಡಕಿ ।**
**ಲ್ಯೊಂದಿರೆ ಮಣಿಗೊಪ್ಪುವೋಲ್ ವಿಸರ್ಗಮೆನಿಕ್ಕುಂ ॥ ೧೧ ॥**

**ಟೀಕೆ** - ಬಿಂದು = ಬಿಂದುವೆಂದುಂ, ಅನುಸ್ವಾರಂ = ಅನುಸ್ವಾರವೆಂದುಂ, ಸೊನ್ನೆ, ತಾಂ, ಅಕ್ಕುಂ = ಅಪ್ಪುದು; ವೃತ್ತತೆಯಿಂ = ಬಟ್ಟಿತ್ತಾಗಿರ್ಪುದಱಿಂದೆ, ಮುತ್ತುವೋಲ್ = ಮುತ್ತಿನ ಮಣಿಯ ಹಾಗೆ, ಸಂದಿರ್ಪುದು = ಸಲುವಳಿಯಾಗಿರ್ಪುದು; ಅಂತು = ಹಾಗೆ, ಅದು = ಆ ಸೊನ್ನೆ, ಅಡಕಿಲ್ಯೊಂದಿರೆ = ಒಂದಱ ಮೇಲೊಂದಿರೆ,

ಮಣಿಗೊಪ್ಪುವೋಲ್ = ಮಣಿಗೊಪ್ಪಿನ (ರತ್ನದ ಬುಗುಡಿಯ) ಹಾಗೆ, ವಿಸರ್ಗಂ = ವಿಸರ್ಜನೀಯಂ, ಎನಿಕ್ಕುಂ = ಎನಿಸುವುದು.

**ವೃತ್ತಿ** - ಬಿಂದುವೆಂದುಮನುಸ್ವಾರಮೆಂದುಂ ಸೊನ್ನೆಗೆ ಪೆಸರಕ್ಕುಂ; ಬಿಂದು ಮುತ್ತಂ ಪೋಲ್ತು ಸೊನ್ನೆಯಂತೆ ಬಟ್ಟಿತ್ತಾಗಿರ್ಪುದಱಿಂ ಶೂನ್ಯಶಬ್ದಂ; ಇದಪಭ್ರಂಶಮಾಗಿ ಕನ್ನಡದೊಳ್ ಸೊನ್ನೆಯೆಂದಾಯ್ತು; ಬಿಂದುವಿನಂತಿರ್ಪುದಱಿಂ ಬಿಂದುವೆಂದಾಯ್ತು; ಬಿಂದುಸ್ವರೂಪಂ (೦). ಮಣಿಗೊಪ್ಪುವಿನಂತಿರೆ, ಎರಡು ಸೊನ್ನೆಯುಮಡಕಿಲಾಗಿ ನಿಲೆ, ವಿಸರ್ಗಮೆನಿಸುಗುಂ; ವಿಸರ್ಜನೀಯಮೆಂದುಂ ವಿಸರ್ಗಕ್ಕೆ ಪೆಸರ್; ವಿಸರ್ಗ ಸ್ವರೂಪಂ (ಃ).

**ಪ್ರಯೋಗಂ** -

ಬಿಂದುವಿಂಗೆ -

ಆಂದೋಳಂ, ಅಂದುಗೆ,

ಉ॥ ಮಾ॥ ಅಂಬಿಕೆ ಬೆರ್ಚಿ ಬೆಳ್ಪಳಿಸೆ . . . ೧

ಶಾ॥ ವಿ॥ ಬಂದಂ ಫಲ್ಗುಣನಿಲ್ಲಿ ಸಂದೆಯಮಣಂ ತಾನಿಲ್ಲ . . . ೨

ವಿಸರ್ಗಕ್ಕೆ -

ಅಃ ಸಂದೆಯಮಿಲ್ಲ ಮೆಚ್ಚಿದೆಂ ೩

**ಸೂತ್ರಂ ॥ ಸ್ವರಪರದೊಳಿರ್ಪ [1]ತೆಱದಿಂ ।**
**ದುರುಮುಖ್ಯೋಚ್ಚಾರಣಕ್ಕೆ ಬಾರದ ಕತದಿಂ ॥**
**ಪರಿಕಿಸೆ ಬಿಂದು ವಿಸರ್ಗಂ ।**
**ಸ್ವರಾಂಗಮುಂ ವ್ಯಂಜನಾಂಗಮುಂ ತಾವೆಂಬರ್ ॥ ೧೨ ॥**

**ಟೀಕೆ** - ಸ್ವರ = ಸ್ವರಾಕ್ಷರಂಗಳ, ಪರದೊಳ್ = ಮುಂದುಗಡೆಯಲ್ಲಿ, ಇರ್ಪ ತೆಱದಿಂದೆ = ಇರ್ಪ ರೀತಿಯಿಂದೆ, ಉರು = ವಿಶೇಷವಾಗಿ, ಮುಖ್ಯೋಚ್ಚಾರಣಕ್ಕೆ = ಮುಖ್ಯವಾಗಿ ಉಚ್ಚರಿಪುದಕ್ಕೆ, ಬಾರದ ಕತದಿಂ = ಬಾರದ ಕಾರಣದಿಂದೆ, ಪರಿಕಿಸೆ = ವಿಚಾರಿಸೆ, ಬಿಂದು = ಸೊನ್ನೆ, ವಿಸರ್ಗಂ = ವಿಸರ್ಜನೀಯಂ, ಸ್ವರಾಂಗಮುಂ = ಸ್ವರಾಂಗಮೆಂದುಂ, ವ್ಯಂಜನಾಂಗಮುಂ = ವ್ಯಂಜನಾಂಗಮೆಂದುಂ, ತಾಂ = ವಿದ್ವಾಂಸರ್ತಾಂ, ಎಂಬರ್ = ಪೇೞ್ವರ್.

**ವೃತ್ತಿ** - ಸ್ವರಂಗಳ ಪರದೊಳಿರ್ಪ ದೂಸಱಿಂ, ಸ್ವತಂತ್ರಮಾಗುಚ್ಚರಿಸಲ್ ಬಾರದುದಱಿಂ, ಬಿಂದು ವಿಸರ್ಗಂಗಳ್ ಸ್ವರಾಂಗಮುಂ ವ್ಯಂಜನಾಂಗಮುಮಪ್ಪುವು.*

* **ವಿಚಾರಂ** - ಸ್ವರಂಗಳ ಪರದೊಳಿರ್ಪುದಱಿಂ ಸ್ವರಾಂಗಮೆಂದುಂ, ಸಂಸ್ಕೃತದೊಳ್[2] "ಮೋನುಸ್ವಾರಃ" "ಸ್ರೋರ್ವಿಸರ್ಗಃ" ಎಂಬ ಸೂತ್ರಗಳಿಂದೆ ಮಕಾರಮನುಸ್ವಾರಮೆಂದುಂ ರೇಫಸಕಾರಂಗಳ್ ವಿಸರ್ಗಮೆಂದುಂ ಪೇೞ್ವುದಱಿಂ ವ್ಯಂಜನಾಂಗಮೆಂದುಂ ಪೇೞ್ವರ್. ಅದಱಿಂ ಕೆಲಂಬರ್ ವ್ಯಾಕರಣಕಾರರ್ ಸ್ವರಸಂಜ್ಞೆಯಲ್ಲಿ ಪೇೞ್ವರ್; ಕೆಲಂಬರ್ ಜಿಹ್ವಾಮೂಲೀಯೋಪಧ್ಮಾನೀಯ ಬಿಂದು ವಿಸರ್ಗಗಳಂ ವ್ಯಂಜನಸಂಜ್ಞೆಯಲ್ಲಿ ಯೋಗವಾಹಂಗಳೆಂದು ಪೇೞ್ವರ್.

~~~~~~~~~~~~~~~~~~~~~~

೧. ಕತದಿಂ. ೨. ಪಾಣಿನಿಸೂತ್ರಂ ೮. ೩, ೨೩.
~~~~~~~~~~~~~~~~~~~~~~

## ೩. ವ್ಯಂಜನಂಗಳ್

**ಸೂತ್ರಂ ॥ ಪ್ರಕಟತರ ವ್ಯಂಜನಸಂ ।**
**ಜ್ಞೆ ಕಕಾರದಿನಾ ಳಕಾರಪರ್ಯಂತಂ ಪಂ ॥**
**ಚಕ ಪಂಚಕಂಗಳಿಂ ಪಂ ।**
**ಚಕಮಕ್ಕುಂ ವರ್ಗಮಂತ್ಯವರ್ಣಮವರ್ಗಂ ॥ ೧೩ ॥**

**ಟೀಕೆ -** ಕ ಕಾರದಿಂ = ಕ ಕಾರದಿಂದೆ, ಆ ಳಕಾರಪರ್ಯಂತಂ = ಆ ಳಕಾರಪರ್ಯಂತವಾಗಿ, ಪ್ರಕಟತರ = ಪ್ರಸಿದ್ಧಮಾದ, ವ್ಯಂಜನಸಂಜ್ಞೆ = ವ್ಯಂಜನಾಕ್ಷರಂಗಳೆಂಬ ಸಂಜ್ಞೆ (ಅಪ್ಪುದು); ಪಂಚಕ ಪಂಚಕಂಗಳಿಂ = ಐದೈದಕ್ಷರಂಗಳಿಂದೆ, ವರ್ಗಂ = ವರ್ಗಂಗಳ್, ಪಂಚಕಂ = ಐದು, ಅಕ್ಕುಂ = ಅಪ್ಪುವು; ಅಂತ್ಯವರ್ಣಂ = ಕಡೆಯಣ ಒಂಬತ್ತಕ್ಷರಂಗಳ್, ಅವರ್ಗಂ = ಅವರ್ಗಾಕ್ಷರಂಗಳ್ ಅಪ್ಪುವು.

**ವೃತ್ತಿ** - ಕಕಾರಂ ಮೊದಲಾಗಿ ಳಕಾರಪರ್ಯಂತಂ ವರ್ತಿಪ ವರ್ಣಂಗಳ್ ವ್ಯಂಜನ ಸಂಜ್ಞೆಯಂ ಪ್ರತ್ಯೇಕಂ ಪಡೆಗುಂ. ಕ್ ಖ್ ಗ್ ಘ್ ಙ್, ಚ್ ಛ್ ಜ್ ಝ್ ಞ್, ಟ್ ಠ್ ಡ್ ಢ್ ಣ್, ತ್ ಥ್ ದ್ ಧ್ ನ್, ಪ್ ಫ್ ಬ್ ಭ್ ಮ್; ಯ್ ರ್ ಲ್ ವ್ ಶ್ ಷ್ ಸ್ ಹ್ ಳ್ ಎಂಬಿವು ೩೪ ವ್ಯಂಜನಂಗಳ್. ಅವಱೊಳ್ ಕಕಾರಂ ಮೊದಲಾಗಿ ಮಕಾರಪರ್ಯಂತಮೈದೈದು ವರ್ಣಂಗಳೊಂದೊಂದು ವರ್ಗಮಾಗಿ, ವರ್ಗಮೈದಕ್ಕುಂ; ಆ ವರ್ಗಾಕ್ಷರಂಗಳಿರ್ಪತ್ತೈದಱ ಕಡೆಯಕ್ಕರಂಗಳವರ್ಗಂಗಳ್: ಯ್ ರ್ ಲ್ ವ್ ಶ್ ಷ್ ಸ್ ಹ್ ಳ್ - ಎಂಬಿವು.

**ಸೂತ್ರಂ ॥ ವರ್ಗದ್ವಿತೀಯವರ್ಣಂ ।**
**ವರ್ಗಚತುರ್ಥಾಕ್ಷರಂ ಮಹಾಪ್ರಾಣಮವಂ ॥**
**ಮಾರ್ಗವಿದರ್ ಸಂಖ್ಯೆಯೊಳಂ ।**
**ಭೋರ್ಗರೆವನುಕೃತಿಯೊಳಂ ಪ್ರಯೋಗಿಸುತಿರ್ಪರ್ ॥ ೧೪ ॥**

**ಟೀಕೆ -** ವರ್ಗ = ವರ್ಗಂಗಳ, ದ್ವಿತೀಯವರ್ಣಂ = ಖ್ ಛ್ ಠ್ ಥ್ ಫ್ ಎಂಬೆರಡನೆಯ ಅಕ್ಕರಂಗಳುಂ, ವರ್ಗ = ವರ್ಗಂಗಳ, ಚತುರ್ಥಾಕ್ಷರಂ = ಘ್ ಝ್ ಢ್ ಧ್ ಭ್ ಎಂಬ ನಾಲ್ಕನೆಯ ಅಕ್ಷರಂಗಳುಂ, ಮಹಾಪ್ರಾಣಂ = ಮಹಾಪ್ರಾಣಾಕ್ಷರಂಗಳೆನಿಸುವುವು, ಅವಂ = ಆ ಮಹಾಪ್ರಾಣಾಕ್ಷರಂಗಳಂ, ಮಾರ್ಗವಿದರ್ = (ಕನ್ನಡದ) ಕವಿಮಾರ್ಗಮಂ ಬಲ್ಲವರ್, ಸಂಖ್ಯೆಯೊಳಂ = ಸಂಖ್ಯಾವಾಚಿಗಳಲ್ಲಿಯುಂ, ಭೋರ್ಗರೆವ = ಧ್ವನಿಗೆಯ್ವ, ಅನುಕೃತಿಯೊಳಂ = ಅನುಕರಣಶಬ್ದಂಗಳಲ್ಲಿಯುಂ, ಪ್ರಯೋಗಿಸುತಿರ್ಪರ್ = ಪ್ರಯೋಗವಂ ಮಾಡುತಿರ್ಪರ್.

**ವೃತ್ತಿ** - ವರ್ಗದೆರಡನೆಯಕ್ಕರಂಗಳುಂ ನಾಲ್ಕನೆಯಕ್ಕರಂಗಳುಂ ಮಹಾಪ್ರಾಣಂಗಳೆನಿಸುಗುಂ*; ಇವಂ ಸಂಖ್ಯೆಯೊಳಮನುಕರಣದೊಳಂ ಮಾರ್ಗವಿದರ್ ಪ್ರಯೋಗಿಸುವರ್.

* **ವಿಚಾರಂ** - ವರ್ಗದೆರಡನೆಯ ನಾಲ್ಕನೆಯ ಅಕ್ಷರಂಗಳ್ ಮಹಾಪ್ರಾಣಂಗಳಾದಲ್ಲಿ ವರ್ಗದೊಂದನೆಯ ಮೂಱನೆಯ ಕ್, ಚ್, ಟ್, ತ್, ಪ್; ಗ್, ಜ್, ಡ್, ದ್, ಬ್ ಎಂಬಿವು ಅಲ್ಪಪ್ರಾಣಂಗಳೆಂದಱಿವುದು.

**ಪ್ರಯೋಗಂ -**

ಸಂಖ್ಯೆಗೆ - ಇರ್ಛಾಸಿರಂ, ಎಣ್ಛಾಸಿರಂ, ನೂರ್ಛಾಸಿರಂ

ಮ ॥ ವಿ ॥ ಪದಿನೆಣ್ಛಾಸಿರಲೋಹವಕ್ಕರೆಯ ಜಾತ್ಯಶ್ವಂಗಳಿರ್ಛಾಸಿರಂ
... ೧

(ಕಾವ್ಯಾವಲೋಕನಂ ೭೭)

ಅನುಕರಣಕ್ಕೆ -

ಖಣಿಲ್ಲನೆ, ಖಟಿಲನೆ, ಛಮ್ಮನೆ, ಧುಮ್ಮನೆ, ಝುಲುಮ್ಮನೆ, ಪಠಿಲ್ಲನೆ, ಥಮ್ಮನೆ, ಥೊಪ್ಪನೆ, ಧಣಮ್ಮನೆ, ಫೊಟ್ಟನೆ, ಘಟಿಲನೆ, ಝುಲ್ಲನೆ, ದುಧುಮ್ಮನೆ, ಧಟಿಮ್ಮನೆ, ಭೋರನೆ ಎಂಬಿವಾದಿಯಾಗಱಿವುದು.

**ಸೂತ್ರಂ ॥ ಒಳವು ಮಹಾಪ್ರಾಣಂಗ ।**
**ಳ್ವಿಳಸತ್ಕರ್ಣಾಟಭಾಷೆಯೊಳ್ ಕೆಲವು ನಿಜೋ ॥**
**ಜ್ಜ್ವಳಮಾಗಿ ವರ್ಗದಂತ್ಯಂ ।**
**ಗಳನಱಿಯನುನಾಸಿಕಾಖ್ಯೆಯಂ ತಳೆದಿರ್ಕುಂ ॥ ೧೫ ॥**

**ಟೀಕೆ** - ವಿಳಸತ್ = ಒಪ್ಪಲ್ಪಟ್ಟ, ಕರ್ಣಾಟ = ಕನ್ನಡದ, ಭಾಷೆಯೊಳ್ = ಭಾಷೆಯಲ್ಲಿ, ಮಹಾಪ್ರಾಣಂಗಳ್ = ಮಹಾಪ್ರಾಣಂಗಳಾದ, ಕೆಲವು = ಕೆಲವು ಶಬ್ದಂಗಳ್, ನಿಜ = ಸಹಜದಿಂದೆ, ಉಜ್ಜ್ವಳಂ = ಪ್ರಕಾಶಿಪುವು, ಆಗಿ, ಒಳವು = ಉಂಟು; ವರ್ಗದ = ವರ್ಗಂಗಳ, ಅಂತ್ಯಂಗಳಂ = ಙ್, ಞ್, ಣ್, ನ್, ಮ್ ಎಂಬ ಅಂತ್ಯಾಕ್ಷರಂಗಳಂ, ಅಱಿ = ತಿಳಿ, ಅನುನಾಸಿಕಾಖ್ಯೆಯಂ = ಅನುನಾಸಿಕವೆಂಬ ಪೆಸರಂ, ತಳೆದು = ಧರಿಸಿ, ಇರ್ಕುಂ = ಇರ್ಪುವು.

**ವೃತ್ತಿ** - ಒಪ್ಪುವ ಕನ್ನಡದೊಳ್ ಸ್ವಭಾವದಿಂ ಕೆಲವು ಮಹಾಪ್ರಾಣಂಗಳೊಳವು; ಅವಾವುವೆಂದೊಡೆ-

ವರ್ಗ ದ್ವಿತೀಯಾಕ್ಷರಂಗಳ್ಗೆ - ವಖ್ಖಾಣಂ, ದೆಖ್ಖಾಣಂ (ದೆಖ್ಖಾಳಂ), ಪಖ್ಖಾಳಂ, ಅಖ್ಖಂಡಂ (ಅಖ್ಖಣ್ಡಂ), ಖೊಪ್ಪರಂ, ಖಾಣಂ, ಖಾರಿಗೆ; ಛಲ್ಲಿ ಮಾಡಿದಂ (ಛಲ್ಲಂ ಮಾಡಿದಂ), ಛರ್ಪಿಸಿದಂ (ಛಪ್ಪಿಸಿದಂ), ಎಕ್ಕಛಾಯಂ; ಠಾವು, ಠಾಣಂ, ಠಕ್ಕಿಸಿದಂ (ಠೆಕ್ಕಿಸಿದಂ), ಠಾಣೆಸಿತು; ಥಟ್ಟು, ಥಾಪನೆ, ಸುತ್ಥಣೆ (ಸುತ್ಥಣೆಯಂ), ಮತ್ಥವಟ್ಟಿಗೆ, ಕಥಾಯಂ (ಕತ್ಥಾಯಂ); ಫಳೆಯಕಾಱಂ, ಫೆಳಾವುಗಂ, ಫೇಳಿ, ಅಫಳಿಯಂ (ಅಪ್ಫಳಿಯಂ).

ವರ್ಗಚತುರ್ಥಾಕ್ಷರಂಗಳ್ಗೆ - ಘಟಿಯಂ, ಘಾಟಿಗೆ (ಘಾರಿಗೆ), ಘೋಟಿಗೆ, ಘೋಸಂ, ಘಾಸಿ, ಘಾಸರಂ; ಝುಳಂ, ಝುಳಕಂ, ಝುಲ್ಲಱಿ (ಝುಲ್ಲರಿ), ಝುಟಿಸಿತು, ಝೂಳಿಸಿತು, ಝುಳಪಿಸಿತು, ಝುಲ್ಲಿ, ಝುಂಕೆ; ಢೊಂಕಣೆ, ಢೆಂಕಣ, ಅಢಾಳಂ (ಢಾಳಂ), ವೇಢೆಯಂ, ಢೆಂಕೆ, ಢೊಕ್ಕರಂ; ಧಟಿಂ, ಧಾಳಿ, ಧಾರಿ, ಧವಳಂ (ಧವಡಂ); ಭಂಗಾರಂ, ಭಂಡಾರಂ, ಭರಿಕೈ, ಭಲ್ಲೆಯಂ, ಭಾವಂ.

ಕಂಭಕ್ಕಂ ಭಾಸೆಗಂ ವಿಕಲ್ಪಂ.

ವರ್ಗಂಗಳೈದನೆಯ ಅಕ್ಕರಂಗಳನುನಾಸಿಕಾಖ್ಯೆಯಂ ಪಡೆಗುಂ; ಙ್, ಞ್, ಣ್, ನ್, ಮ್ ಎಂಬಿವು; ಇವರ್ಕೆ ಪ್ರಯೋಗಂ -

ಕಂದ ॥ ಬಿಙ್ಕಂಬೆತ್ತಸೆವಞ್ಚೆಯ ।
ಸಙ್ಕುಳಮುಂ ತೊಣ್ಡುಗೆಡೆವ ಶುಕಸಾರಿಕೆಯುಂ ॥
ಸೋಙ್ಕಿ ಬಲವನ್ದು ತೀಡುವ ।
ತೆಙ್ಕಣ ಗಾಳಿಯುಮದೇಂ ಮನಙ್ಗೊಳಿಸಿದುವೋ ॥ ೧

(ಕಾವ್ಯಾವಲೋಕನಂ ೧೮)

**ಸೂತ್ರಂ ॥ ಅನುನಾಸಿಕಮುಂ ಯವಲಮ ।**
**ನನುನಾಸಿಕಮುಂ ದಲೆಂಬರಾ ಸಂಸ್ಕೃತ ಶ ॥**
**ಬ್ದನಿಯುಕ್ತ ಲಕಾರದ ನೆಲೆ ।**
**ಗೆ ನಿಂದು ಸರಿಯಾಗಿ ಸಲ್ವುದಂ ಕ್ಷಳನೆಂಬರ್ ॥ ೧೬ ॥**

**ಟೀಕೆ** - ಯವಲಂ = ಯಕಾರ ವಕಾರ ಲಕಾರಂಗಳ್, ಅನುನಾಸಿಕಮುಂ = ಅನುನಾಸಿಕಂಗಳೆಂದುಂ, ಅನನುನಾಸಿಕಮುಂ = ನಿರನುನಾಸಿಕಂಗಳೆಂದುಂ, ದಲ್ = ನಿಶ್ಚಯವಾಗಿ, ಎಂಬರ್ = ಪೇೞ್ವರ್; ಆ ಸಂಸ್ಕೃತ = ಆ ಸಂಸ್ಕೃತದ, ಶಬ್ದ = ಶಬ್ದದಲ್ಲಿ, ನಿಯುಕ್ತ = ಕೂಡಲ್ಪಟ್ಟ, ಲಕಾರದ = ಲತ್ವದ, ನೆಲೆಗೆ = ಸ್ಥಾನಕ್ಕೆ, ಸರಿಯಾಗಿ = ಸಮಾನವಾಗಿ, ನಿಂದು = ನೆಲೆಗೊಂಡು, ಸಲ್ವುದಂ = ಸಲುವಳಿಯಾಗಿರ್ಪ ಳಕಾರಮಂ, ಕ್ಷಳಂ = ಕ್ಷಳನೆಂದು, ಎಂಬರ್ = ಪೇೞ್ವರ್.

**ವೃತ್ತಿ** - ಯ ವ ಲಂಗಳನುನಾಸಿಕಂಗಳುಂ ನಿರನುನಾಸಿಕಂಗಳುಮಪ್ಪುವು; ಸಂಸ್ಕೃತ ಶಬ್ದದಲ್ಲಿ ಯುಕ್ತಮಾದ ಲಕಾರದ ಸ್ಥಾನಕ್ಕೆ ನಿಂದು ಸರಿಯಾಗಿ ಸಲ್ವ ಳಕಾರಮಂ ಕ್ಷಳನೆಂಬರ್.

**ಪ್ರಯೋಗಂ** -

ಅನುನಾಸಿಕ ಯಕಾರಕ್ಕೆ - ಮೇಯಿಸಿದಂ, ನೋಯಿಸಿದಂ, ಮಯಣಂ, ನಯಣಂ, ಮಾಯಂ.

ಅನುನಾಸಿಕ ವಕಾರಕ್ಕೆ - ಸೇವಂ, ಸೋವೆ, ಸಾವೆ, ಜಾವಂ, ಮಾವಂತಂ ಕೋವಣಂ, ಕಾವಣಂ, ಸೇವಗೆ.

ಅನುನಾಸಿಕ ಲಕಾರಕ್ಕೆ - ಕೊಲ್ಲಣಿಗೆ, ಅಲ್ಲಣಿಗೆ ಎಂದು ಮೇಳಂ, ಹಲ್ಲಣಂ, ಇಲ್ಲಣಂ.

ನಿರನುನಾಸಿಕ ಯಕಾರಕ್ಕೆ - ಬಯಕೆ, ಬಿಯದಂ, ಬಿಯಳಂ, ದಯಕಾಱಂ, ದಾಯಿಗಂ, ವಾಯಂ, ಬಯಲ್.

ನಿರನುನಾಸಿಕ ವಕಾರಕ್ಕೆ - ಕವಳಂ, ಹವಳಂ, ತಿವಳಿ, ತವಕಂ (ಅವಕಂ).

ನಿರನುನಾಸಿಕ ಲಕಾರಕ್ಕೆ - ಹಾಲಿಗೆ, ಹಲಸಿಗಂ, ಹಲಗೆ, ನೆಲಕಲನೆಂದು ಲೋಭಿ.

ಲಕಾರಕ್ಕೆ ಕ್ಷಳಂ - ಜಲಂ = ಜಳಂ; ತಿಲಂ = ತಿಳಂ; ಫಲಂ = ಫಳಂ; ಬಲಂ = ಬಳಂ; ಖಲಂ = ಖಳಂ; ಕಮಲಂ = ಕಮಳಂ.

**ಸೂತ್ರಂ ॥ ಸಮಸಂದಿರ್ದ ೱಮುಮ ।**
**ೲಮುಮೊಂದಿದ ಬಿಂದುವುಂ ವಿಸರ್ಗಮುಮೆಂದ ॥**
**ಕ್ಕುಮಿವೆಯ್ದೆ ಯೋಗವಾಹಂ ।**
**ಕ್ರಮದಿಂ ಕಪಯುಗಳಮಿವಱೊಳನುಬಂಧಂಗಳ್ ॥ ೧೭ ॥**

**ಟೀಕೆ** -ಸಮಸಂದು = ಸಮಾನವಾಗಿ ಸಂದು, ಇರ್ದ, ೱ ಮುಂ = ೱಕೆಂಬ ಜಿಹ್ವಾಮೂಲೀಯಮುಂ, ೲಮುಂ = ೲಎಂಬ ಉಪಧ್ಮಾನೀಯಮುಂ, ಒಂದಿದ = ಕೂಡಿದ, ಬಿಂದುವುಂ = ಸೊನ್ನೆಯುಂ, ವಿಸರ್ಗಮುಂ = ವಿಸರ್ಜನೀಯಮುಂ, ಎಂದು, ಇವು = ಈ ನಾಲ್ಕಕ್ಷರಂಗಳ್, ಎಯ್ದೆ = ಚೆನ್ನಾಗಿ, ಯೋಗವಾಹಂ = ಯೋಗವಾಹಾಕ್ಷರಂಗಳ್, ಅಕ್ಕುಂ = ಅಪ್ಪುವು; ಕ್ರಮದಿಂ = ತಱುವಾಯಿಂದೆ, ಕಪಯುಗಳಂ = ಕಕಾರ ಪಕಾರಂಗಳೆಂಬೆರಡುಂ, ಇವಱ ಕೊಳ್ = ಈ ಜಿಹ್ವಾಮೂಲೀಯೋಪಧ್ಮಾನೀಯಂಗಳಲ್ಲಿ ಅನುಬಂಧಂಗಳ್ = ಸಂಬಂಧಂಗಳಾಗಿರ್ಪುವು.

ವೃತ್ತಿ - ಕಕಾರಮುಚ್ಚಾರಣಾರ್ಥಮಾಗುೞಿದ, ಪಸುಂಬೆಯ ಲಚ್ಚಣದಂತಿರ್ದ ವರ್ಣಂ ಜಿಹ್ವಾಮೂಲೀಯಮೆಂಬುದು; (ಕಕಾರ ಸಂಗಡದ) ಅದಱ ಸ್ವರೂಪಂ (X).

ಪಕಾರಮುಚ್ಚಾರಣಾರ್ಥಮಾಗುೞಿದ ಕುಮಾರೀಸ್ತನಯುಗಳಾಕೃತಿಯ ವರ್ಣಮುಪಧ್ಮಾನೀಯಂ; (ಪಕಾರ ಸಂಗಡದ) ಅದಱ ಸ್ವರೂಪಂ ( ).

ಕೈವಾರಮಂ ಬೀಸಿದಂತೆ ಬಟ್ಟಿತ್ತಾಗಿ ತೋರ್ಪುದು ಸೊನ್ನೆ; ಅದಱ ಸ್ವರೂಪಂ (०).

ಮೇಲೆಯುಂ ಕೆಳಗೆಯುಂ ಆ ತೆಱದಿನಿರೆ ವಿಸರ್ಗಂ; ಅದಱ ಸ್ವರೂಪಂ (ಃ). - ಈ ನಾಲ್ಕು ಯೋಗವಾಹಂಗಳ್.

೪. ದೇಶೀಯಂಗಳ್ - ಱ, ೞ, ಳ (ಕುಳಂ), ಎ, ಒ.

ಸೂತ್ರಂ ॥ ಅತಿಪೀಡನದಿಂ ರೇಫಾ ।
ಶ್ರಿತಮಾದ ಱಕಾರಮುಂ ಸಮಂತು ಡಕಾರಾ ।
ಶ್ರಿತಮಾದ ೞನುಮಂಗೀ ।
ಕೃತಪದ ಲತ್ವಕ್ಕೆ ಬೆಟ್ಟಿತೆನಿಸಿದ ಕುಳನುಂ ॥ ೧೮ ॥

ಇವು ವರ್ಣಾವೃತ್ತಿಗೆ ಸ ।
ಲ್ವುವು ಸಂದುಂ ಪ್ರಾಸದೆಡೆಗೆ ಸಲ್ಲವು ಯಮಕ ॥
ವ್ಯವಹೃತಿಗಾಗವು ದೇಶೀ ।
ಯವೆನಿಪುವಾ [1]ಹ್ರಸ್ವಮೆನಿಸಿದಾ ಎ ಒ ಸಹಿತಂ ॥ ೧೯ ॥

ಟೀಕೆ - ಅತಿಪೀಡನದಿಂ = ರೇಫೆ ಪುಟ್ಟುವ ಸ್ಥಾನಮಂ ಬೆಟ್ಟಿತ್ತಾಗಿ ಉಚ್ಚರಿಪುದಱಿಂದೆ, ರೇಫಾಶ್ರಿತಂ = ರೇಫೆಯನಾಶ್ರೈಸಿ ಪುಟ್ಟಿದುದು, ಆದ, ಱಕಾರಮುಂ, ಸಮಂತು = ಹಾಗೆ, ಡಕಾರಾಶ್ರಿತಂ = ಡಕಾರವನಾಶ್ರೈಸಿ ಪುಟ್ಟಿದುದು, ಆದ, ೞನುಂ = ೞನೆಂಬ ೞಕಾರಮುಂ, ಅಂಗೀಕೃತಪದ ಲತ್ವಕ್ಕೆ = ಅಂಗೀಕರಿಸಲ್ಪಟ್ಟ ಪದಂಗಳ ಲಕಾರಕ್ಕೆ, ಬೆಟ್ಟಿತೆನಿಸಿದ = ಬೆಟ್ಟಿತ್ತಾಗಿ (ಒತ್ತಿ) ಉಚ್ಚರಿಸುವುದಱಿಂಪಾದ, ಕುಳನುಂ = ಕುಳವೆಂಬ ಳಕಾರಮುಂ, ಇವು = ಈ ಅಕ್ಷರಂಗಳ್, ವರ್ಣಾವೃತ್ತಿಗೆ = ವರ್ಣಂಗಳಾವೃತ್ತಿಗೆ, ಸಲ್ವುವು = ಸಲುವಳಿಯಪ್ಪುವು; ಸಂದುಂ = ವರ್ಣಾವೃತ್ತಿಗೆ ಸಂದುಂ, ಪ್ರಾಸದ = ನಿಯಾಮದ (ನಿಯಮದ), ಎಡೆಗೆ = ಸ್ಥಾನಕ್ಕೆ, ಸಲ್ಲವು = ಸಲುವಳಿಯಾಗವು; ಯಮಕ ವ್ಯವಹೃತಿಗೆ = ಯಮಕ ವ್ಯವಹಾರಕ್ಕೆ, ಆಗವು = ಸಲುವಳಿಯಾಗವು; ಆ ಹ್ರಸ್ವಮೆನಿಸಿದ = ಆ ಸ್ವರಸಂಜ್ಞೆಯಲ್ಲಿ ಹ್ರಸ್ವಂಗಳೆನಿಸಿದ ಆ ಎ ಒ ಸಹಿತಂ = ಆ ಎ ಒ ಎಂಬಿವು ಸಹಿತವಾಗಿ, ದೇಶೀಯಂ= ದೇಶೀಯಾಕ್ಷರಂಗಳ್, ಎನಿಪುವು = ಎನಿಸುವುವು.

ವೃತ್ತಿ - ರೇಫೆ ಪುಟ್ಟುವ ತಾಣಮಂ ಬೆಟ್ಟಿತ್ತಾಗುಚ್ಚರಿಸೆ, ಱಕಾರಂ ಪುಟ್ಟುಗುಂ; ಡಕಾರಂ ಪುಟ್ಟುವ ತಾಣಮಂ ಬೆಟ್ಟಿತ್ತಾಗುಚ್ಚರಿಸೆ, ೞಂ ಪುಟ್ಟುಗುಂ; ಲಕಾರಂ ಪುಟ್ಟುವ ತಾಣಮಂ ಬೆಟ್ಟಿತ್ತಾಗುಚ್ಚರಿಸೆ, ಕುಳ ಳಕಾರಂ ಪುಟ್ಟುಗುಂ. ರೇಫೆ ಮೂರ್ಧನ್ಯಂ, ಱಕಾರಮದಱೊಳ್ ಏಕಸ್ಥಾನಿ; ಡಕಾರಂ ಮೂರ್ಧನ್ಯಂ, ೞನದಱೊಳ್ ಏಕಸ್ಥಾನಿ; ಲಕಾರಂ ದಂತ್ಯಂ, ಕುಳನದಱೊಳ್ ಏಕಸ್ಥಾನಿ.

~~~~~~~~~~~~~~~~~

೧. (ಹ್ರಸ್ವಮೆನಿಸಿದೇ ಒ ಸಹಿತಂ)
~~~~~~~~~~~~~~~~~

ಮೊರೆ - ಮೊಱೆ, ಮರೆ-ಮಱೆ; ಕೋಡಿ - ಕೋೞಿ, ಕಡಲ್ - ಕೞಲ್; ಮೊಲೆ - ಮೊಳೆ, ಕಲೆ - ಕಳೆ; ಇಂತೇಕಸ್ಥಾನಿಗಳಾದ ಕಾರಣದಿಂದಿವು ವರ್ಣಾವೃತ್ತಿಗೆ ಸಲ್ವುವು; ನಿಯಾಮಕ್ಕಂ ಯಮಕವ್ಯವಹೃತಿಗಮಾಗವು. ಱಕಾರಮುಂ ೞನುಂ ಕುಳನುಂ ಹ್ರಸ್ವಮಾದ ಎ ಒ ಎಂಬಿವುಂ ಸಂಸ್ಕೃತದೊಳಿಲ್ಲ; ಅವು ಕೂಡಿ ದೇಶೀಯಂಗಳಾಗಿ ಕನ್ನಡದೊಳೊಳವು.

**ಪ್ರಯೋಗಂ -**

ರೇಫ ಱಕಾರಂಗಳ ವರ್ಣಾವೃತ್ತಿಗೆ -

ಕಂ॥ ಸುರಗಿಱಿದೊಱಗಿದ ಬಿರುದರ ।
ಕರುಳಂ ಕೊಱೆಕೊಱೆದು ಮರುಳಿರುಳ್ತಿಂಬೆಡೆಯೊಳ್ ॥ ೧

ಡಕಾರ ೞಂಗಳ ವರ್ಣಾವೃತ್ತಿಗೆ -

ಕಂ॥ ಕೞಲೆ ನುಡಿದೞಲೆ ಬಗ್ಗಿಸಿ ।
ಘೞಿಲನೆ ನಡೆಯೆಂದು ಜಡಿದು ಸಾರಥಿಯಂ ಪಾಂ ॥ ೨

(ಕಾವ್ಯಾವಲೋಕನಂ ೨೬)

ಲಕಾರ ಕುಳಂಗಳ ವರ್ಣಾವೃತ್ತಿಗೆ -

ಕಂ॥ ... ದೆಸೆಗಳ
ನಳುರ್ದು [ಸ] ರಲ್ಕೆಳರ್ದು ಮಿಳಿರ್ದು ತಳರ್ದತ್ತಾಗಳ್ ॥ ೩

(ಕಾವ್ಯಾವಲೋಕನಂ ೨೩)

ರೇಫ ಱಕಾರಂಗಳ [ಪ್ರಾಸ] ನಿಯಮಮಾಗದುದರ್ಕೆ -

ಕಂ॥ ಧುರದೊಳ್ಪಱಿಮಱಿಯಾಡುವ ।
ತೆಱದಿಂದುಱದಿಱಿದನೆಂಬ ನಿಯಮಂ ದೂಷ್ಯಂ ॥ ೪

ಡಕಾರ ೞಂಗಳ್ಗೆ ಪ್ರಾಸಮಾಗದುದರ್ಕೆ -

ಕಂ॥ ಕೋಡದಿಱಿದಿಂದ್ರರಾದರ್ ।
ನಾೞಿಗೆಯೊಳ್ ವೀರರೆಂಬ ನಿಯಮಂ ದೂಷ್ಯಂ ॥ ೫

ಲಕಾರ ಕುಳಂಗಳ ಪ್ರಾಸಮಾಗದುದರ್ಕೆ -

ಕಂ॥ ನೆಲದೊಳ್ ಪಗೆ ಪುಗೆ ಫಣೆಯವೊ ।
ಲೊಳಪೊಕ್ಕಳಱಿಸಿದನೆಂಬ ನಿಯಮಂ ದೂಷ್ಯಂ॥ ೬

ಯಮಕಂಗಳಾಗದುದರ್ಕೆ -

ಕಂ॥ ಕರೆಯಂ ನೆರವಂ ವಂಶಂ ।
ಕಱೆಯಂ ಪೊತ್ತಪ್ಪುದೆಂದು ಸಂಗರಮುಖದೊಳ್ ॥ ೭

ಇಲ್ಲಿ ಶಬ್ದಾವೃತ್ತಿ ಕೆಟ್ಟಿರ್ಪುದಾಗಿಯುಂ, ಕಱೆಯಂ ಪೊತ್ತಪ್ಪುದೆಂಬುದಂ ಕರೆಯಂ ಪೊತ್ತಪ್ಪುದೆಂದೊಡೆ ಅರ್ಥಘಟನೆಯಿಲ್ಲಾಗಿಯುಂ, ಯಮಕಲಕ್ಷಣಮಿಲ್ಲ.

ಡಕಾರ ೞಂಗಳುಂ, ಲಕಾರ ಕುಳಂಗಳುಂ, ಈ ತೆಱದಿಂ ಯಮಕಕ್ಕೆ ಸಲ್ಲವು.

ಡಕಾರಕ್ಕಾದೇಶಮಾದ ಱಟಿಕ್ಕೆ ಪ್ರಯೋಗಂ - ಕಾಡುಕಿಚ್ಚು = ಕಾಱ್ಕಿಚ್ಚು; ಕೋಡುಕುಟ್ಟು = ಕೋಱ್ಕುಟ್ಟು; ನೀಡುಕರಿಸಿದಂ = ನೀಱ್ಕರಿಸಿದಂ; ಬೀಡುಕೊಂಡಂ = ಬೀಱ್ಕೊಂಡಂ; ನಾಡ ಕಡೆ = ನಾಱ್ಕಡೆ; ಸೇಡುಪಟ್ಟಂ = ಸೇಱ್ಪಟ್ಟಂ; ನೀರಡಿಕೆ = ನೀರಱ್ಕೆ ; ಎರಡು ಮೂಱು = ಎರಱ್ಮೂಱು; ಮಾಡುವಂ = ಮಾಱ್ಪಂ; ನೋಡುವಂ = ನೋಱ್ಪಂ; ಬೇಡುವಂ = ಬೇಱ್ಪಂ; ಬೆಗಡುವಂ = ಬೆಗಱ್ಪಂ; ಪಱ್ಕೆ ತಱ್ಕೈಸಿದನೆಂಬಲ್ಲಿ ತಡಕೈಯಂ ಮಾಡಿದನೆಂಬರ್ಥಂ; ನಾಡಿ = ನಾಱಿ; ನಾಡಿಕಾ = ನಾಱುಗೆ (ನಾಱುಗೆಯೆಂದು ಘಟಿಗೆ); ಎಸಡಿಗೆ = ಎಸಱ್ಗೆ (ಪೂವಿನೆಸಳೊಳ್ ಕುಳಂ); ಕಿವುಡು ಕೇಳ್ವನೆಂಬಲ್ಲಿ ಕಿವುಱ್ಕೇಳ್ವಂ.

**ಸೂತ್ರಂ॥ ದಾಡಿಮಮಾ ಕೂಷ್ಮಾಂಡಂ ।**
**ಗೌಡಂ ಗುಡಮಡಸಿ ಪೊಡೆವ ಝುಗಡೆ ವಿಡಂಗಂ ॥**
**ಕೂಡೆ ಕುಳನೇಡಕಮುಮಱಿ ।**
**ರೂಢಿಯ ಕುಳನೆಂದು ಱಟಿದಪಭ್ರಂಶತೆಯೊಳ್ ॥ ೨೦ ॥**

**ಟೀಕೆ** - ಱಟಿದ ಅಪಭ್ರಂಶತೆಯೊಳ್ ದಾಡಿಮಂ, ಆ ಕೂಷ್ಮಾಂಡಂ, ಗೌಡಂ, ಗುಡಂ, ಅಡಸಿ ಪೊಡೆವ ಝುಗಡೆ, ವಿಡಂಗಂ, ಕೂಡೆ ಕುಳಂ; ಏಡಕಮುಂ ರೂಢಿಯ ಕುಳಂ ಎಂದು ಅಱಿ॥

**ವೃತ್ತಿ** - ದಾಳಿಂಬಂ, ಕುಂಬಳಂ, ಗೌಳಂ, ಗುಳಂ, ಝುಗಳೆ, ವಿಳಂಗಂ ಇವು ಕೂಡೆ ಡಕಾರಕ್ಕೆ ಪುಟ್ಟಿ ಱಟಿದಪಭ್ರಂಶತೆಯಂ ಪಡೆದುಂ ರೂಢಿಯ ಕುಳಂಗಳ್; ಏಳಗ ಮೆಂಬುದು ಏಡಕಕ್ಕೆ ಪುಟ್ಟಿಯುಂ ಕುಳಂ.

**ಸೂತ್ರಂ॥ ಕೃತಿಮಾರ್ಗದೊಳುಂಟು ಟಕಾ ।**
**ರ ತಕಾರ ಠಕಾರ ರೇಫದೆಡೆಗಂ ಬಹುಳ ॥**
**ಸ್ಥಿತಿಯಿಂ ಕ್ಷಳಕಮುಪಭ್ರಂ ।**
**ಶತೆಯೊಳ್ ಸುಕವೀಂದ್ರರಿಂದೆ ಱಟಿದಾದೇಶಂ ॥ ೨೧ ॥**

**ಟೀಕೆ** - ಕೃತಿಮಾರ್ಗದೊಳ್ = ಕಾವ್ಯಮಾರ್ಗದಲ್ಲಿ; ಸುಕವೀಂದ್ರರಿಂದೆ = ಸತ್ಕವೀಂದ್ರರಿಂದೆ; ಅಪಭ್ರಂಶತೆಯೊಳ್ = ಅಪಭ್ರಂಶದಲ್ಲಿ; ಟಕಾರ ತಕಾರ ಠಕಾರ ರೇಫದ, ಎಡೆಗಂ = ಸ್ಥಾನಕ್ಕೆಯುಂ, ಕ್ಷಳಕಂ = ಕ್ಷಳ ಳಕಾರಕ್ಕೆಯುಂ, ಬಹುಳ ಸ್ಥಿತಿಯಿಂ, ಱಟಿದ = ಱಟಿಮೆಂಬ ಟಕಾರದ; ಆದೇಶಂ, ಉಂಟು = ಉಂಟಾಗಿರ್ಪುದು.

**ವೃತ್ತಿ** - ಕಾವ್ಯಮಾರ್ಗದೊಳ್ ಟಕಾರ ತಕಾರ ಠಕಾರ ರೇಫ ಕ್ಷಳಂಗಳ್ಗೆ ಱಟಾದೇಶಂ* ಅಪಭ್ರಂಶತೆಯೊಳುಂಟು.

* ವಿಚಾರಂ - ಆದೇಶಮೆಂದೊಡೆ ಮೊದಲಿರ್ದುದಂ ತೊಲಗಿಸಿ ಬರ್ಪುದೆಂದಱಿವುದು.

**ಪ್ರಯೋಗಂ** -

ಟಕಾರಕ್ಕೆ - ಘಟಿಕೆ = ಗಱಿಗೆ ; ಘೋಟಿಕೆ = ಗೋಱಿಗೆ ; ಧಾಟಿ = ದಾಱಿ; ಲಾಟಂ = ಲಾಱಂ ; ಲಾಟಭಾಷಿಕಂ = ಲಾಱಬಾಸೆಗಂ ; ಘೋಟಾರೂಢಂ = ಗೋಱಾಯಿಲಂ ; ಕುಕ್ಕುಟಂ = ಕೋಱಿ॥

ತಕಾರಕ್ಕೆ - ಪ್ರತಿಹಸ್ತಂ = ಪಱಿಹತ್ತಂ ; ಪ್ರತಿಪಾದುಕಂ = ಪಱಿವಾವುಗೆ.

ಠಕಾರಕ್ಕೆ - ಮಠಿಕೆ = ಮಱಿಗೆ ; ಪೀಠಿಕೆ = ಪೀಱಿಗೆ.

ರೇಫಕ್ಕೆ - ಕೂರಂ = ಕೂಱ್ ; ಝುಲ್ಲರಿ = ಝುಲ್ಲಱಿ

ಕ್ಷಳಕ್ಕೆ - ತಾಳಂ = ತಾೞ್ ; ಪುಳಿನಂ = ಪುೞಿಲ್; ಕಳಮಂ = ಕೞಿವೆ;

ಅರ್ಗಳಂ = ಅಗುೞಿ; [1]ಮನ್ವಾಳಿ = ಮನ್ನೞಿ; ಅಳಿಕಾಬದ್ಧಂ = ಅೞಿಗೆವದ್ದಂ.

**ಸೂತ್ರಂ॥ ಸ್ಫಟಿಕಂ ಪೇಟಿಕೆ ವೀಟಿಕೆ ।**
**ಘುಟಿಕೆ ವರಾಟಂ ಪೊದಟ್ಟಿ ರಘಟೆ ಕುಳಂ ತಾಂ ॥**
**ಸ್ಫುಟಸಹಿತಂ ಸ್ಫೋಟಕ ಲಂ ।**
**ಪಟ ಶಬ್ದಯುಗಂ ೞಟಿಕ್ಕೆ ನೆಱೆ ಸಂದೇಹಂ ॥ ೨೨ ॥**

**ಟೀಕೆ** - ಸ್ಫಟಿಕಂ, ಪೇಟಿಕೆ, ವೀಟಿಕೆ, ಘುಟಿಕೆ, ವರಾಟಂ, ಪೊದಟ್ಟಿ ರಘಟೆ, ಸ್ಫುಟಸಹಿತಂ ತಾಂ ಕುಳಂ ; ಸ್ಫೋಟಕ ಲಂಪಟ ಶಬ್ದಯುಗಂ ೞಟಿಕ್ಕೆ ನೆಱೆ ಸಂದೇಹಂ.

**ವೃತ್ತಿ** - ಪಳಿಕು, ಪೇಳಿಗೆ, ವೀಳಿಗೆ, ಗುಳಿಗೆ, ವರಾಳಂ, ರಗಳೆ, ಪುಳಂ - ಇವು ಅಪಭ್ರಂಶದೊಳ್ ಟಕಾರಕ್ಕೆ ಪುಟ್ಟಿಯುಂ ಕುಳಂಗಳಾದುವು; ಸ್ಫೋಟಕ ಶಬ್ದಕ್ಕಾದ ಹೋಳಿಗೆಯೆಂಬುದುಂ, ಲಂಪಟಶಬ್ದಕ್ಕಾದ ಲಂಬಳಮೆಂಬುದುಂ ೞಟಿಕ್ಕೆ ಸಂದೇಹಂ, ಕುಳಂಗಳೆಯಪ್ಪುವು.

**ಸೂತ್ರಂ ॥ ಏಕ ದ್ವಿ ತ್ರಿ ಚತುಃ ಪಂ ।**
**ಚಾಕಲಿತಾರ್ಥಂಗಳಾಗಿ ೞಟಿನೊಳವು ನಿಸ ॥**
**ರ್ಗಾಕೃತಿಯಿಂದವನಾದಿಮ ।**
**ಹಾಕವಿಕೃತಿದೃಷ್ಟಮಂ ನಿರಾಕುಳಮುಸಿರ್ವೆಂ ॥ ೨೩ ॥**

**ಟೀಕೆ** - ಏಕ = ಒಂದೞಿಲ್ಲಿ, ದ್ವಿ = ಎರಡೞಿಲ್ಲಿ, ತ್ರಿ = ಮೂಱೞಿಲ್ಲಿ, ಚತುಃ = ನಾಲ್ಕೞಿಲ್ಲಿ, ಪಂಚ = ಐದೞಿಲ್ಲಿ, ಆಕಲಿತ = ಕೂಡಲ್ಪಟ್ಟ, ಅರ್ಥಂಗಳ್ = ಅರ್ಥವುಳ್ಳವು, ಆಗಿ, ೞಟಿಂ = ೞಟಿಶಬ್ದಂಗಳ್, ಒಳವು = ಉಂಟು; ನಿಸರ್ಗಾಕೃತಿಯಿಂದೆ = ನಿಶ್ಚಯಾಕಾರದಿಂದೆ, ಅವಂ = ಆ ೞಟಿಶಬ್ದಂಗಳಂ, ಆದಿ = ಪೂರ್ವದ, ಮಹಾಕವಿ = ಮಹಾಕವಿಗಳ, ಕೃತಿದೃಷ್ಟಮಂ =ಕಾವ್ಯದೃಷ್ಟಮಂ, ನಿರಾಕುಳಂ = ವ್ಯಾಕುಳಮಿಲ್ಲದ ಹಾಗೆ, ಉಸಿರ್ವೆಂ = ಪೇೞ್ವೆಂ.

**ವೃತ್ತಿ** - ಒಂದರ್ಥಮಂ ಎರಡರ್ಥಮಂ ಮೂಱರ್ಥಮಂ ನಾಲ್ಕರ್ಥಮಂ ಐದರ್ಥಮಂ ಪೇೞ್ವ ಸಹಜ ೞಟಿಂಗಳಂ ಪ್ರಮಾಣಪುರುಷರ ಕಾವ್ಯಮಾರ್ಗದಿಂ ಕಂಡು, ನೆಱೆ ಪೇೞ್ವೆಪೆಂ. ಅವಾವುವೆಂದೊಡೆ[1] -

~~~~~~~~~~~~~~~~

೧. ಕೂರಲ ಹಿಂದಿನ ಸರಗಳ ಗುಂಪು. ೨. (ಪ್ರಥಮ ಮುದ್ರಣದಲ್ಲಿ ಈ ಮುಂದಿನ ಸಹಜ ೞಟಿಗಳ ಪದಪಟ್ಟಿಯನ್ನು ೧ನೆಯ ಪರಿಶಿಷ್ಟವಾಗಿ ಕೊಡಲಾಗಿತ್ತು. ಈಗ ಉಚಿತಸ್ಥಾನದಲ್ಲಿ ಸೇರಿಸಿದೆ. ಆದರೆ ಸಾಮಾನ್ಯಸ್ಖಾಲಿತ್ಯಗಳನ್ನು ತಿದ್ದಿ ಅಲ್ಲಿದ್ದಂತೆಯೇ ಮುದ್ರಿಸಿದೆ.)
~~~~~~~~~~~~~~~~

೧. ಅಗೞ್ತೆ =ಖನನಂ.

೨. ಅಗ್ಗೞಿಕೆ = ಲಾೞವಿಂಡಿಗೆ, ಆವುಜದ ಮುಟ್ಟು (ಆವುಜ = ಸಂಗೀತವಾದ್ಯ).

೩. ಅಗುೞ್ದಂ = ನೀರ್ನೆಲೆದಪ್ಪಿದಂ.

೪. ಅದವೞಲ್ = ಮಱುಕಂ.

೫. ಅವಗೞಿಯಂ = ಉರವಣೆಕಾರ್ತನಂ.

೬. ಅಸಕೞಿದಂ = ಕೈಮೀಱಿದಂ.

೭. ಅೞ್ಕಿರ್ತಂ = ಪ್ರೀತಿವಟ್ಟಂ.

೮. ಅೞ್ಕಮೆ = ಅಱಿವೆ.

೯. ಅೞ್ದಂ = ನೀರೊಳ್ ಮುೞುಗಿದಂ; ಕೆಟ್ಟಂ.

೧೦. ಅೞು = ಬಳ್ಳದೞು; ವಿಧಿಕ್ರಿಯೆ; (ತುಂಬಿಯುಂ ಪೇೞ್ವಲ್ಲಿ ಕ್ಷಳಂ)

೧೧. ಅೞಿದಂ = ಸತ್ತಂ; ಕೆಟ್ಟಂ (ಸತ್ತವಂ; ಕೆಟ್ಟವಂ); ಕಿಡಿಸಿದವಂ.

೧೨. ಅೞುಪಂ = ಆೞುಪುವಂ; ಅೞುಪಿದವಂ.

೧೩. ಅೞ್ತು = ಪ್ರೀತಿ.

೧೪. ಅೞ್ಕೆ = ರೋದನಂ.

೧೫. ಆೞ್ದಂ= ಮುೞುಗಿದಂ.

೧೬. ಆೞಾೞುಗಂ = ಒಂದು ಸಾಮಾನ್ಯ ಮಾಲಾಬಂಧಂ.

೧೭. ಆೞು = ವಂಚನೆ; ಏಕಗ್ರಾಹಿತ್ವಂ; (ಸಂಸ್ಕೃತದೊಳ್ ಸಖಿಯುಂ, ಸಾಲುಂ ಬರ್ಪೆಡೆ ಕ್ಷಳಂ).

೧೮. ಇಕ್ಕುೞ್ = ವ್ಯಾಧಿವಿಕಾರಂ; ಸಂದಂಶಂ; ತಾಂಡಸಂ.

೧೯. ಇೞಿದಂ = ಮೈಗುಂದಿದಂ; ಕೆಳಗಣ್ಗೆ ವಂದಂ.

೨೦. ಈ ಸೂೞ್ = ವರ್ತಮಾನ ವರುಷಂ.

೨೧. ಈೞ್ದಂ = ಸೆಳೆದಂ.

೨೨. ಉಂಬೞಿ = ಕೊಡುಗೆ.

೨೩. ಉೞುಕು = ಭಾವವಾಚಿ.

೨೪. ಉೞುಗಂ = ಶಕುನದ ಹಕ್ಕಿ.

೨೫. ಉೞಿದುದು = ಬಿಟ್ಟುದು; ಬಿೞ್ದುದು; ಜೀವಿಸಿದುದು; ಲಾಭವಾದುದು. ಅಡಂಗಿದುದು, ಬಡಿಗೆಯ ಮತ್ತು ಕಳ್ಳನ ಬೇಂಟೆಯ ಉಳಿ - ಇವುಗಳೊಳ್ ಕುಳಂ. ಸ್ಥಾನವ್ಯಕ್ತಿಯಂ ಪೇೞ್ವೊಡೆ ಉೞು, ಪೆಱಉೞು ಎಂಬವ್ಯಯಂ ಱೞಿಂ.

೨೬. ಉೞುವು = ಭಾವವಾಚಿ.

೨೭. ಉೞುಗಿದಂ = ಒಲ್ದಂ.

೨೮. ಉೞುಗು = ಬೇಟಂ.

೨೯. ಉೞ್ಕೆ = ಉೞ್ವಿ ಭಾವಂ.

೩೦. ಎೞಲ್ದಂ = ಜೋಲ್ದಂ; ಬೞಲ್ದಂ.

೩೧. ಎೞವಿದಂ = ನೀವಿದಂ.

೩೨. ಎೞ್ಚತ್ತಂ = ನಿದ್ರೆತಿಳಿದಂ; ಕತ್ತನೋ ಸರಿಸಿದಂ; ಮಱವೆ ಪಿಂಗಿದಂ.

೩೩. ಎೞ್ದಂ = ನೆಗೆದಂ; ನಿದ್ರೆತಿಳಿದಂ; ದೊರೆಕೊಂಡಂ;

೩೪. ಎೞ್ತು = ಗೂೞು; ಹೊರಸಿನ ನೆಯ್ಗೆ; ಊಕೆಯ ನುಲಿ.

೩೫. ಎೞೆ = ನೂಲೆೞೆ; ಬರೆಸೆಳೆವುದು (ಭೂಮ್ಯರ್ಥದೊಳ್ ಕುಳಂ).

೩೬. ಏೞು = ಸಂಖ್ಯಾವಾಚಿ.

೩೭. ಒೞ್ಕು = ನದೀಪ್ರವಾಹಂ.

೩೮. ಕಚ್ಚೞು = ಒತ್ತಿ ಚಪ್ಪಟೆಯಾದುದು.

೩೮*. "ಕೞಕೞಿಸಿದನರ್ಕಂ"

೩೯. ಕೞಕುೞಂ = ಸ್ಥಾನವ್ಯಾಕುಲತೆ.

೪೦. ಕೞಲ್ = ಮಜ್ಜಿಗೆ; ಅಂದುಗೆ; ತನುತ್ವಂ.

೪೧. ಕೞಲ್ದಂ = ಬಡವಾದಂ; ಮನಮಿಕ್ಕಂ.

೪೨. ಕೞಲೆ = ಮುಳ್ವೆರಸಿದ ಗುಜ್ಜ ಗೊಂಬು.

೪೩. ಕೞ್ಕನೆ = ಆಕಸ್ಮಿಕಂ.

೪೪. ಕೞ್ತಲೆ = ಮರ್ವು.

೪೫. ಕೞಿದಂ = ಸತ್ತಂ; ದೂರಂಬೋದಂ; ಕಯ್ಮೀಱಿದಂ.

೪೬. ಕೞಿಲೆ = ಬಿದಿರು ಕುಡಿ.

೪೭. ಕೞುವು = ಭಾವವಾಚಿ.

೪೮. ಕೞ್ತೆ = ಗರ್ದಭಂ.

೪೯. ಕಿಮುೞ್ದುೞಿದಂ = ಸಣ್ಣಮಾಗಿ ತುೞಿದಂ.

೫೦. ಕಿೞ್ತಂ = ನಿರ್ಮೂಲಿಸಿದಂ.

೫೧. ಕಿೞ್ಗಿದಂ = ಗುಜ್ಜಂ.

೫೨. ಕೀೞ್ = ದೊರೆಯಿಲ್ಲದ (ಬಣ್ಣ ಕಡಿಮೆಯಾದ) ಭಂಗಾರಂ; ತುರಗ ಮುಖದ ಲೋಹಂ; ಕ್ಷೀಣಕುಲಂ; ಕೆಳಗು.

೫೩. ಕುೞಿಂ (ಗುೞಿಂ) = ನೇಗಿಲ್ವಾಯ ಕರ್ಬುನಂ.

೫೪. ಕುೞ = ಅಗುೞ್ದಿಡೆ.

೫೫. ಕೂೞಿಂ = ಎಗ್ಗಂ.

೫೬. ಕೆೞವಂ = ಮುದುಕಂ.

೫೭. ಕೇೞ = ಪಂಕ್ತಿ (ಕ್ರೀಡೆಯೊಳ್ ಕ್ಷಳಂ)

೫೮. ಕೊತ್ತೞ = ಕಾಗೆಯ ಮೊತ್ತಂ; ಬೆಸದ ವರ ನೆರವಿ.

೫೯. ಕೊೞಲ್ = ವೇಣುವಾದ್ಯಂ (ಕೊಳಲೆಂಬ ಕ್ರಿಯೆಯೊಳ್ ಕುಳಂ).

೬೦. ಕೊೞೆತುದು = ಜೀರ್ಣಿಸಿದುದು; ಮಲಮೇಱುದುದು; ಮನಮಿಕ್ಕಿದುದು.

೬೧. ಕೌಂಕುೞ್ = ಕಕ್ಷಮೂಲಂ.

೬೨. ಖೞಲ್ಲನೆ (ಖೞಲೆನೆ), ಛೞಲ್ಲನೆ, ಫೞಲ್ಲನೆ, ಘುೞುಮ್ಮನೆ (ಘುೞಿಮ್ಮನೆ), ಧೞಮ್ಮನೆ, ಫೞಲ್ಲನೆ - ಇವು ಮೊದಲಾದ ಮಹಾಪ್ರಾಣಾನುಕರಣಂಗಳ್ ನಿತ್ಯ ೞಕಾರಂಗಳ್.

೬೩. ಗೞಗೞನೆ = ಬೇಗಂ.

೬೪. ಗೞಪಂ = ಸೊರಹುವಂ.

೬೫. ಗೞೆ = ಕಡೆಗೋಲ್; ಕೊಲ್ಲಟಿಗರಾಡುವ ಗಣೆ.

೬೬. ಗುೞಿಂ = ಆನೆ ಕುದುರೆಗಳ ಪಕ್ಕರಿಕೆ.

೬೭. "ಗುೞುಗುೞು ಗೞಗೞಯೆನುತುಂ ಪರಿವ ಪರಿವೊನಲ್ ಸೊಗಯಿಸುಗುಂ" (ಸೂ. ೫೪). ಇವು ಮೊದಲಾದುವು ಅಲ್ಪಪ್ರಾಣಾನುಕರಣಂಗಳ್; ೞಕಾರಮುಂ ಕುಳನುಮಪ್ಪುವು.

೬೮. ಗೆೞಸು = ಗೆಡ್ಡೆ.

೬೯. ಗೋೞುಟ್ಟಂ, ಗೀೞುಟ್ಟಂ, ಗೞಗೞನೆ.

೭೦. ಘೞಯಂ = ಸಮಕಟ್ಟು.

೭೧. ಚಾೞ್ = ರಾಹು.

೭೨. ಜಗುೞ್ದಂ = ಜಾಱಿದಂ.

೭೩. ಜೇರ್ಕೊೞವೆ = ಜಲಯಂತ್ರಂ.

೭೪. ತಲ್ಲೞಂ = ಭಯಂ.

೭೫. ತೞತೞಗುದಿ, ತೞ್ತೞಗುದಿ - ಎಂಬಿವು ಕಾಸುವ ರಸದ್ರವ್ಯಾನುಕರಣಂಗಳ್.

೭೬. "ತೞತೞನೆ ನೇಸಮೂರ್ಡಿದುದು". (ಸೂ. ೧೯೩)

೭೭. ತೞಲ್ = ಮುತ್ತ ಕಾಯ್.

೭೮. ತೞ = ಸ್ಥೂಲದಾರು (ಸತ್ತ್ವಾರ್ಥದೊಳ್ ಕುಳಂ).

೭೯. ತೞ್ಗಿದಂ = ಕುಸಿದಂ.

೮೦. ತೞೆ = ಆತಪತ್ರಂ (ತಳೆಯೆಂಬ ಕ್ರಿಯೆಯೊಳಂ, ಪಶುವಿನ ತಳೆಯೊಳಂ ಕುಳಂ).

೮೧. ತಾೞ್ = ಒಂದು ಮರಂ; ಅಗುೞ; ಸೂರಣದ ದಂಟು.

೮೨. ತಿಪ್ಪುೞ್ = ಪಕ್ಕಿಯ ಗಱಿ.

೮೩. ತುಪ್ಪುೞ್ = ಪಕ್ಕಿಯ ರೋಮಂ.

೮೪. ತುೞಕಲ್ = ಸೊಪ್ಪಾದುದು.

೮೫. ತುೞದಂ = ಕಾಲೊಳ್ ಮರ್ದಿಸಿದಂ; ಘಾಸಿಮಾಡಿದಂ; ಬಡವಾದಂ; ಅಗಲ್ದಂ.

೮೬. ತುೞಲ್ = ಪೊಡವಡಿಕೆ; ವೀರಂ.

೮೭. ತುೞಲ್ಸಂದಂ = ವೀರಂ; ಪಂಚಮಂ.

೮೮. ತೆಗೞ್ದಂ = ಪೞದಂ.

೮೯. ತೇೞ್ = ವೃಶ್ಚಿಕಂ.

೯೦. ತೊೞಲ್ದಂ = ಭ್ರಮೆಗೊಂಡಂ; ಗರ ವೞಗೆಗೆ ವಂದಂ.

೯೧. ತೊೞಲಿಕಲ್ = ತೊೞಲ್ವುದು.

೯೨. ತೊೞ್ತುೞ = ಸೊಪ್ಪಾದುದು.

೯೩. ತೊೞ್ತು = ದಾಸಂ; ದಾಸಿ.

೯೪. ದಂಡುೞಗಂ = ದಂಡದೊಳ್ ಪಡೆದವಂ.

೯೫. ದೞದುೞಂ (ದೞವುೞಂ) = ಬಲ್ಲೂಱಿ.

೯೬. ದೞಂ = ತುರಂಗಬಲಂ; ಸಾಮಾನ್ಯ ಬಲಂ.

೯೭. ದೞ್ದೞಿ = ಸಂಕಲೆ.

೯೮. ನಾೞವಾಸಗೆ = ಕಳ್ಳವಾಸಗೆ (ಸಂಸ್ಕೃತದೊಳ್ 'ನಾಳಂ'ಕ್ಷಳಂ)

೯೯. ನೆಗೞ್ = ಪ್ರಸಿದ್ಧಿ; ಚರಿತ್ರಂ; ಜಲಗ್ರಾಹಂ.

೧೦೦. ನೆೞಲ್ = ಆತಪತ್ರಾದಿ ಛಾಯೆ; ಜಳದರ್ಪಣಪ್ರತಿಬಿಂಬಂ; ಒಂದು ಮರಂ.

೧೦೧. ನೆೞಿಲ್ಲನೆ (ನೆೞಿಲೆನೆ), "ನೆಟ್ಟನೆಯ ಮುಱಿದುದು" - ಇವು ಅನುಕರಣಂಗಳ್.

೧೦೨. ಪೞಗಂ = ಒಣಗಿದೆಲೆ.

೧೦೩. ಪೞದು = ಜೀರ್ಣಂ.

೧೦೪. ಪೞಪೞನೆ, ಪೞ್ಪೞನೆ = ವಿರಲಾರ್ಥಂ.

೧೦೫. ಪೞವು = ನರೆಗಿಕ್ಕುವ ಕರ್ಪೂರ.

೧೦೬. ಪೞವಿಗೆ (ಪೞಯಿಗೆ) = ಕೇತನಂ.

೧೦೭. ಪೞಹಂ = ಬೇಂಟೆಯ ತೆರೆ; ವಾದ್ಯ ವಿಶೇಷಂ.

೧೦೮. ಪೞಿ = ವಸ್ತ್ರವಿಶೇಷಂ; ದೂಷಣಂ; ನಾಯ ಸೋವುವುದು; ಲೋಹದ ಘಟ್ಟಿ.

೧೦೯. ಪೞ್ತಿ = ಕಾರ್ಪಾಸಂ.

೧೧೦. ಪೞು = ಅಡವಿ.

೧೧೧. ಪೞ್ಕೆ = ಶಯನಂ; ಶಯನಸ್ಥಾನಂ.

೧೧೨. ಪೞ್ಕೆ ತೞ್ಕೈಸಿದಂ = ತಡಕಯ್ಯಂ ಮಾಡಿದಂ.

೧೧೩. ಪಾೞ್ = ಶೂನ್ಯಸ್ಥಾನಂ.

೧೧೪. ಪಾೞಿ = ಕ್ರಮಂ.

೧೧೫. ಪುಚ್ಚೞಿ = ಕೇಡು.

೧೧೬. ಪುೞ್ಗಿ = ಉರ್ದು, ತೊವರಿ, ಹೆಸರು ಮೊದಲಾದುವನಿಕ್ಕಿ ಅಟ್ಟ ಕೂೞ್.

೧೧೭. ಪುೞು = ಕೀಟಕಂ.

೧೧೮. ಪೆೞಕು = ಜಗಳಂ.

೧೧೯. ಪೆೞವಂ = ಕಾಲಿಲ್ಲದವಂ.

೧೨೦. ಪೇೞ್ದಂ = ನಿರೂಪಿಸಿದಂ.

೧೨೧. ಪೊರ್ಕುೞ್ = ನಾಭಿ.

೧೨೨. ಪೊಗೞ್ತೆ = ಕೀರ್ತನಂ.

೧೨೩. ಪೊಂಪುೞಿ = ಪೆರ್ಚುಗೆ.

೧೨೪. ಪೊೞಕು = ಸಾಮಾನ್ಯಾಕೃತಿ.

೧೨೫. ಪೊೞಲ್ = ಮರದ ಪೊಟ್ಟೆ; ಪುರಂ.

೧೨೬. ಪೊೞ್ತಿಡೆ (ಪೊೞ್ತಿೞೆ) = ಉದಯ ಕಾಲಂ.

೧೨೭. ಪೊೞ್ತು = ಸಾಮಾನ್ಯಕಾಲಂ; ಪ್ರಸವಕಾಲಂ; ನೇಸೞ್.

೧೨೮. ಪೊೞೆ = ಬಟ್ಟೆ; ತೊರೆ (ಹೊಳೆ)

೧೨೯. ಪೋೞ್ = ಸೀೞ್ದ ಭಾಗಂ.

೧೩೦. ಬೞ್ದಂ (ಬಾೞ್ದಂ) =ಜೀವಿಸಿದಂ; ಒಕ್ಕಲಾದಂ.

೧೩೧. ಬೞಿ = ಬಟ್ಟೆ; ವಂಶಂ; ಕರೆವಂ; ಲೇಪಿಸುವುದು; ಪಿಂಗಲಿಯ ಬೞಿಗೊರಲ್; ಮತ್ತೆ.

೧೩೨. ಬೞಿಯಂ = ವಿಧೇಯಂ.

೧೩೩. ಬೞಿಯಂ, ಬೞಿಕಂ, ಬೞಿಕ್ಕಂ, ಬೞಿಕೆ, ಬೞಿಕ್ಕೆ - ಇವು ಪಶ್ಚಾದರ್ಥಂಗಳ್.

೧೩೪. ಬೞಿಲ್ದಂ = ಜಗುೞ್ದಂ.

೧೩೫. ಬೞಿವೞಿ = ಕೊಟ್ಟ ವಸ್ತುವಿನ ಬೞಿಯೊಳ್ ಕೊಡುವುದು.

೧೩೬. ಬೞ್ದುಂಕಿದಂ = ಜೀವಿಸಿದಂ; ಬಿಡಲ್ಪಟ್ಟಂ.

೧೩೭. ಬಾಸುೞ್ = ಪೊಯ್ದ ಬೞಿ.

೧೩೮. ಬಾೞ್ = ಜೀವನಾರ್ಥಂ; (ನಾವಿದವಾಳ್, ಕೂರ್ವಾಳ್, ಹರಗುವಾಳ್ -ಎಂಬಲ್ಲಿ ಕುಳಂ).

೧೩೯. ಬಾೞುಕಂ = ಸೀೞ್ದೊಣಗಿ ಬಾೞ್ದ ಶಾಕಂ.

೧೪೦. ಬಾೞ್ತೆ = ಪ್ರಯೋಜನಂ.

೧೪೧. ಬೀೞಿಲ್= ಮರದ ಜಡೆ.

೧೪೨. ಬಿೞ್ದುದು = ಪೞಸಿದುದು; ಸತ್ತುದು; ಕೈ ಜೋಲ್ದುದು.

೧೪೩. ಬಿೞ್ಕೆ = ಒಂದು ಮರಂ.

೧೪೪. ಬೀೞ್ = ಮಾಡದ ಕೆಯ್; ಪತನಕ್ರಿಯೆ.

೧೪೫. ಬೆಂಬೞಿ = ಪಿಂದೆ ಬರ್ಪುದು.

೧೪೬. ಬೆೞಲ್ = ಒಂದು ಮರಂ.

೧೪೭. ಬೋೞಂ = ಮಿೞ್ತು; ಮುಂಡಂ; ಒಂದೌಷಧಂ.

೧೪೮. ಬೋೞಿ = ಒಂದಂಬಿನ ಭೇದಂ.

೧೪೯. ಮಣ್ಮುೞ = ರೂಪೞಿದ ಸಾವು.

೧೫೦. ಮಲ್ಲೞ = ಶರೀರವ್ಯಾಕುಲತೆ ; ಸುತ್ತಿ ಬರ್ಪುದು.

೧೫೧. ಮೞಿಲ್ದುದು (ಕೞಿಲ್ದುದು); ಮೞಿಮೞಿಸಿತ್ತು = ಕಣ್ಕದಡಿದ ಭಾವಂ.

೧೫೨. ಮೞಿ = ವೃಷ್ಟಿ.

೧೫೩. ಮೞ್ತಿ = ಒಂದು ಮರಂ.

೧೫೪. ಮುೞ್ತುಗ = ಒಂದು ಮರಂ.

೧೫೫. ಮೂೞ = ಕಿವಿಯಿಲ್ಲದವಳ್; ಕರಗದ ಜೂಳಿ.

೧೫೬. ಮೊೞಕಾಲ್= ಒಳ್ದೊಡೆಯ ಸಂದು.

೧೫೭. ಮೊೞಗು = ಮುಗಿಲ ದನಿ; ಒಂದು ಮರದ ಪೆಸರ್; ವಾದನವಿಧಿ; ವಾದ್ಯಂ.

೧೫೮. ಮೊೞಂ = ಅರತ್ನಿ.

೧೫೯. ಜಾೞುಗೆ = ಉಡುಗೆ.

೧೬೦. ಸುೞ = ಕೆಲಸಗಳ್ಪಂ; ಸಸಿಯ ಸುೞ; ಸುೞುವ ಭಾವಂ; ಜಲಾವರ್ತಂ. (ಸೂಳಿಯೆಂದೀಶ್ವರನ ಪೇೞ್ವಲ್ಲಿ ೞಳಂ).

೧೬೧. ಸುೞುದಂ = ಸಂಚಲಿಸಿದಂ; ಬೞುಗೆ ವಂದಂ.

೧೬೨. ಸೂೞ್ = ಬಾರಿ.

೧೬೩. ಸೂೞಾಯ್ತಂ = ಸೂೞ್ಗಿರೆವಂ.

೧೬೪. ಹೞ್ಗಿ= ದೂವೆಯೊಳ್ ತಳಲಂ ಪೂೞ್ದಿ ಕ್ರಿಯೆ.

೧೬೫. ಹಾೞ್ಮನೆಹಾೞಂ = ತುಡುಗುಣಿನಾಯ್.

೧೬೬. ಹಿೞುದುದು = ರಸಮಂ ಹಿಂಡಿದುದು (ಬಿರಿದುದೆಂಬಲ್ಲಿ ಕುಳಂ).[1]

---

೧. (ಬೇರೆ ಬೇರೆ ಪರಿಷ್ಕರಣಗಳಲ್ಲಿ ಈ ಪದಪಟ್ಟಿಯ ಪದಗಳ ಸಂಖ್ಯೆ, ಅವುಗಳ ಅನುಕ್ರಮ, ನಿರೂಪಣೆಯ ರೀತಿ, ವಿವರಣೆ ಇವುಗಳಲ್ಲಿ ವ್ಯತ್ಯಾಸಗಳು ಕಾಣುತ್ತವೆ; ಅಲ್ಲದೆ ಹೆಚ್ಚಿನ ಪರಿಷ್ಕರಣಗಳಲ್ಲಿ ಒಂದರ್ಥಕ್ಕೆ, ಎರಡರ್ಥಕ್ಕೆ ಮುಂತಾಗಿ ಐದರ್ಥಗಳವರೆಗೆ ಎಂದು ಪೃಥಕ್ಕರಣಸಹಿತವಾಗಿ ಶಬ್ದಗಳನ್ನು ಸಂಘಟಿಸಿದೆ. ಪದಾನುಕ್ರಮಣಿಯ ಕೊನೆಗೆ "ಇವು ಪ್ರಯೋಗದೃಷ್ಟಂಗಳಿವಱೊಳ್ ಸಂಶಯಮಿಲ್ಲ" ಎಂಬ ಮಾತು ಇತರ ಪರಿಷ್ಕರಣಗಳಲ್ಲಿದ್ದರೂ, ಪರಿಷತ್ತಿನ ಪರಿಷ್ಕರಣದಲ್ಲಿ ಕಾಣಿಸದು. ಪರಿಷತ್ತಿನ ಪ್ರಥಮಪರಿಷ್ಕರಣದ ಸ್ವರೂಪವನ್ನು ಅದರ ಪ್ರತ್ಯೇಕತೆಗಾಗಿ ಇಲ್ಲಿ ಹಾಗೆಯೇ ಉಳಿಸಿದೆ.)

**ಸೂತ್ರಂ ॥ ಪಿರಿಯರ್ ಸಲಿಪರ್ ದಡ್ಡ ।**
**ಕ್ಕರದ ಱಟಿಕ್ಕೈದೆ ರೇಫೆವೆರಸಿದ ದಡ್ಡ ॥**
**ಕ್ಕರಮಂ ಱಟಿನಾಗದನು ।**
**ಚ್ಚರಿಸಲ್ಕಾಗಿರ್ದ ತೆಱದಿನಂತದು ಶುದ್ಧಂ ॥ ೨೪ ॥**

**ಟೀಕೆ** - ಪಿರಿಯರ್ = ಶ್ರೇಷ್ಠರಾದ ವಿದ್ವಾಂಸರ್, ದಡ್ಡಕ್ಕರದ = ಒತ್ತಿನಕ್ಷರದ, ಱಟಿಕ್ಕೆ = ಱಟಿಪ್ರಾಸಿಂಗೆ, ಐದೆ = ಚೆನ್ನಾಗಿ, ರೇಫೆವೆರಸಿದ ದಡ್ಡಕ್ಕರಮಂ = ರೇಫೆಯೊಡನೆ ಕೂಡಿದ ದ್ವಿತ್ವಾಕ್ಷರಮಂ, ಸಲಿಪರ್ = ಪ್ರಾಸಿಂಗೆ ಸಲಿಸುವರ್; ಱಟಿನಾಗಿ = ಱಟಿಪ್ರಾಸವಾಗಿ, ಅದಂ = ಆ ರೇಫೆವೆರಸಿದ ದ್ವಿತ್ವಾಕ್ಷರಮಂ, ಉಚ್ಚರಿಸಲ್ಕೆ = ಓದುವುದರ್ಕೆ, ಆಗಿರ್ದ ತೆಱದಿಂ = ಸಲುವಳಿಯಾಗಿರ್ದ ರೀತಿಯಿಂದೆ, ಅಂತು = ಹಾಗೆ, ಅದು = ಅದು ತಾಂ, ಶುದ್ಧಂ = ಶುದ್ಧಮಪ್ಪುದು.

**ವೃತ್ತಿ** - ದಡ್ಡಕ್ಕರದ ಱಟಿಕ್ಕೆ ಪ್ರತಿಯಾಗಿ ರೇಫೆವೆರಸಿದ ದಡ್ಡಕ್ಕರಮಂ ಪ್ರಾಸಕ್ಕೆ ಪಿರಿಯರ್ ಪೇೞ್ದ ಪ್ರಯೋಗಮೊಳವು; ಆ ದಡ್ಡಕ್ಕರದ ರೇಫಮಂ [1]ಱಟಿನಾಗುಚ್ಚರಿಸಲ್ಕಾಗಿರ್ದ ತೆಱದಿನದು ಶುದ್ಧಂ.

**ಪ್ರಯೋಗಂ** -

ಉ॥ ಮಾ॥ ಬಟ್ಟುದು ಬಳ್ಳವಾಡಿ ನೆಱೆ ನಂಬಿದುದಾರುಹತಂ ಜಿನೇಂದ್ರನಂ
ತಿರ್ದ್ದ ಮಹಾನುಭಾವರ್ ... ೧

ಕಂ ॥ ಚುರ್ಚಿದವೋಲ್ ಬಿಸಿಲಳುರೆ ಕಿ ।
ಮುಟ್ಟುದ ತಳಿರಂತೆ ನೊಂದು ... ೨

ಕಂ ॥ ಒರ್ಕ್ಕುಡಿತೆ ನೀರ್ಗೆ ಪಱಪ ।
ಟ್ಟೆರ್ಕ್ಕೆಯ ಪಣ್ಣೆಲೆಯ ಮುಱುಗೆ ದೇಸಿಗರಂ ದೇ ॥
ವರ್ಕ್ಕಳ್ಗೊಡೆಯರ್ ಮಾೞ್ಪರೆ ।
ನೀೞ್ಕರಿಸದ ನಿಮ್ಮ ದೊರೆಗೆ ಬೋಟಿಯರೊಳರೇ ॥ ೩

**ಸೂತ್ರಂ॥ ಝುಳಕಂ [2]ಝುಳಪಿಸಿದಂ ಜೊಂ**
**ಗುಳಿ ಬೊಂಬುಳಿಯಾಳಮಾಳಮಂತೆ ಠಮಾಳಂ ॥**
**ವಳಿಗೆ ನೆಗಟ್ಟೊಂದುಳಿ ಜಂ ।**
**ಗುಳಿ ಪುತ್ತಳಿ ಗೋಳಿ ಫೇಳಿ ಱಟಿಸಂದೇಹಂ ॥ ೨೫ ॥**

**ಟೀಕೆ** - ಝುಳಕಂ, ಝುಳಪಿಸಿದಂ, ಜೊಂಗುಳಿ, ಬೊಂಬುಳಿ, ಆಳಮಾಳಂ, ಅಂತೆ ಠಮಾಳಂ, ವಳಿಗೆ, ನೆಗಟ್ಟಿ ಒಂದುಳಿ, ಜಂಗುಳಿ, ಪುತ್ತಳಿ, ಗೋಳಿ, ಫೇಳಿ ಱಟಿಸಂದೇಹಂ; ಕುಳವೆ ಅಪ್ಪುವು.

**ವೃತ್ತಿ** – ಈ ಪೇೞ್ದ ಶಬ್ದಂಗಳ್ ಱಟಿಕ್ಕೆ ಸಂದೇಹಂಗಳಿವಂ ಪ್ರಯೋಗಮಂ ಕಂಡು ಪೇೞ್ವುದು.

**ಸೂತ್ರಂ ॥ ಇಳಿ[3]ದಳಿಯನೇಳಿದಂ ಸೂ ।**
**ಕುಳಿಯೋಕುಳಿ ಕಳಱು ಪೆಳಱು ಮಱುಕುಳಿಯಳಿಯಂ ॥**
**ಕುಳಿಯಂ [4]ಮಾಳಿಗೆ ಜಾಳಿಗೆ ।**
**ತಳಿಗೆ[5]ಯೊಳಿರ್ಬಳಸು ಬಳಸಿಗಂ ಮೊಳೆ ತಾಳಂ ॥ ೨೬ ॥**

~~~~~~~~~~~~~~~~~~~~

೧. (ಬಟಿನಾಗುಚ್ಚರಿಸಲಾಗದು; ನಿಸರ್ಗದಿನದು ಶುದ್ಧಂ) ೨. (ಝುಳಪಿಸಿದಂ ಜಾಂಗುಳಿ) ೩. (ಇಳಿದಿಳಿಯ) ೪. (ಮೋಳಿಗೆ) ೫. (ಯಳಿರ್ಬಳಸು)
~~~~~~~~~~~~~~~~~~~~

ಸೂತ್ರಂ ॥ ಆಳಿಸಿದಂ ಪೇಳಿಸಿದಂ ।
ಕೇಳಂ ಜೂದಾಳಿ¹ಯಳಿಲೆ ಕಳವಳಮಾ ಮೆ ॥
ಯ್ಮೇಳಂ ಮಾಳಂ ತಾಳಿಗೆ ।
ಯಿಾಳಿಗೆಯಿಱುಕುಳಿಯಿವಾದಿಯಾಗಱ ಕುಳನಂ ॥ ೨೭ ॥

ಟೀಕೆ - ಇಳಿದಳಿಯಂ, ಏಳಿದಂ, ಸೂಕುಳಿ, ಓಕುಳಿ, ಕಳಱು, ಪೆಳಱು, ಮಱುಕುಳಿ, ಅಳಿಯಂ, ಕುಳಿಯಂ, ಮಾಳಿಗೆ, ಜಾಳಿಗೆ, ತಳಿಗೆಯೊಳಿರ್, ಬಳಸು, ಬಳಸಿಗಂ, ಮೊಳೆ, ತಾಳಂ, ಆಳಿಸಿದಂ, ಪೇಳಿಸಿದಂ, ಕೇಳಂ, ಜೂದಾಳಿ, ಅಳಿಲೆ, ಕಳವಳಂ, ಆ ಮೆಯ್ಮೇಳಂ, ಮಾಳಂ, ತಾಳಿಗೆ, ಈಳಿಗೆ, ಇಱುಕುಳಿ - ಇವಾದಿಯಾಗಿ ಕುಳನಂ ಅಱಿ.

ವೃತ್ತಿ - ಈ ಪೇೞ್ದ ಶಬ್ದಂಗಳ್ ಕುಳಂಗಳ್.

ಸೂತ್ರಂ ॥ ಬೆರಲೆರಲೊರಲ್ಕೊರಲ್ಸರ ।
ಲರಲ್ಪರಲ್ಮರಲುಮಂತೆ ನರಲುಂ ಮುಂಗೈ ॥
ಸರಲುಂ ಲಾಂತಮಿವಂ ಗ್ರಾ ।
ಮ್ಯರಱಿಯದುಚ್ಚರಿಸುವರ್ ಕುಳಾಂತಭ್ರಮೆಯಿಂ ॥ ೨೮ ॥

ಟೀಕೆ - ಬೆರಲ್, ಎರಲ್, ಒರಲ್, ಕೊರಲ್, ಸರಲ್, ಅರಲ್, ಪರಲ್, ಮರಲುಂ, ಅಂತೆ, ನರಲುಂ, ಮುಂಗೈಸರಲುಂ, (ಇವು) ಲಾಂತಂ = ಲಕಾರಾಂತಂಗಳ್; ಇವಂ, ಗ್ರಾಮ್ಯರ್ = ಮೂಢರ್, ಅಱಿಯದೆ = ತಿಳಿಯದೆ, ಕುಳಾಂತಭ್ರಮೆಯಿಂ = ಕುಳಾಂತ ಭ್ರಮೆಯಿಂದೆ, ಉಚ್ಚರಿಸುವರ್ = ಓದುವರ್.

ವೃತ್ತಿ - ಬೆರಲ್ ಮೊದಲಾದ ಈ ಶಬ್ದಂಗಳ್ ನಿತ್ಯಮಾಗಿ ಲಾಂತಂಗಳ್; ಇವಂ ಬೆರಳ್ ಕೊರಳೆಂಬಂತೆ ಕುಳನಾಗುಚ್ಚರಿಸಬಾರದು.

ಸೂತ್ರಂ ॥ ಮರಲರಲೆರಲೆಂಬಿವಱಂ
ತರಾಳರೇಫಕ್ಕೆ ಲತ್ವಮುಂ ದೊರೆಕೊಳ್ಗುಂ ॥
ಪಿರಿದುಂ ಮಲರಲರೆಲರೆಂ ।
ದೊರೆವುದು ಕೃತಿಯೊಳ್ ವಿಕಲ್ಪವಿಧಿಯಿಂದಮಿವಂ ॥ ೨೯ ॥

ಟೀಕೆ - ಮರಲ್ = ಮರಲೆಂದು, ಅರಲ್ = ಅರಲೆಂದು, ಎರಲ್ = ಎರಲೆಂದು, ಎಂಬಿವಱ = ಎಂಬೀ ಮೂಱು ಶಬ್ದಂಗಳ, ಅಂತರಾಳ = ನಡುವಣ, ರೇಫಕ್ಕೆ = ರೇಫೆಗೆ, ಲತ್ವಮುಂ = ಲಕಾರಮುಂ, ದೊರೆಕೊಳ್ಗುಂ = ಬರ್ಪುದು; ಉಂ ಎಂಬ ಸಮುಚ್ಚಯದಿಂದೆ ಅಂತ್ಯ ಲತ್ವಕ್ಕೆ ರೇಫೆಯುಂ ದೊರೆಕೊಳ್ವುದು; ಪಿರಿದುಂ = ಬಹುಳಮಾಗಿಯುಂ, ಕೃತಿಯೊಳ್ = ಕಾವ್ಯದಲ್ಲಿ, ಇವಂ = ಈ ಮೂಱು ಶಬ್ದಂಗಳಂ, ಮಲರ್ = ಮಲರೆಂದು, ಅಲರ್ = ಅಲರೆಂದು, ಎಲರ್ = ಎಲರೆಂದು, ವಿಕಲ್ಪವಿಧಿಯಿಂದಂ = ವಿಕಲ್ಪವಿಧಾನದಿಂದೆ, ಒರೆವುದು = ಪೇೞ್ವುದು.

ವೃತ್ತಿ - ಮರಲ್ ಅರಲ್ ಎರಲ್ ಎಂಬಿವಱ ಮಧ್ಯರೇಫಕ್ಕೆ ಲತ್ವಮುಂ ಸಮುಚ್ಚಯ ವಶದಿಂದಂತ್ಯಲತ್ವಕ್ಕೆ ರೇಫಮುಮಾಗಿ, ಮಲರ್ ಅಲರ್ ಎಲರ್ ಎಂದು *ವಿಕಲ್ಪದಿನಕ್ಕುಂ; ಪಿರಿದೆಂಬುದಱುಂ ಮರಲೆಂಬುದಱ ರೇಫಕ್ಕೆ ಣತ್ವಮುಮಾಗಿ, ಮಣಲೆಂದುಮುಂಟು.

* ವಿಚಾರಂ - ವಿಕಲ್ಪಮೆಂದೊಡೆ ಎರಡು ತೆಱನುಂಟೆಂಬರ್ಥಂ.

~~~~~~~~~~~~~~~~~~~~

೧. (ಯಿಳಿಲೆ)
~~~~~~~~~~~~~~~~~~~~

### ೫. ವರ್ಣಂಗಳ್ ಪುಟ್ಟುವ ತಾಣಂಗಳ್, ಮೇಣ್ ಕೆಲವಕ್ಕರಂಗಳ ವಿಶೇಷಂಗಳ್

**ಸೂತ್ರಂ ॥ ಕೊರಲುಂ ಜಿಹ್ವಾಮೂಲಮು ।**
**ಮುರಮುಂ ತಾಲುಗೆಯುಮೋಷ್ಠಮುಂ ನಾಸಿಕೆಯುಂ ॥**
**ಶಿರಮುಂ ದಂತಮುಮೆಂದ ।**
**ಕ್ಕರಮುದಯಿಪ ತಾಣಮಾದುವೀ ಪೇೞ್ದೆಂಟುಂ ॥ ೩೦ ॥**

**ಟೀಕೆ** - ಕೊರಲುಂ = ಕಂಠಮುಂ, ಜಿಹ್ವಾಮೂಲಮುಂ = ನಾಲಿಗೆಯ ಬುಡನುಂ, ಉರಮುಂ =ಎರ್ದೆಯುಂ, ತಾಲುಗೆಯುಂ = ಗಲ್ಲಮುಂ, ಓಷ್ಠಮುಂ = ತುಟಿಯುಂ, ನಾಸಿಕೆಯುಂ, ಶಿರಮುಂ = ಮಸ್ತಕಮುಂ, ದಂತಮುಂ = ಪಲ್ಗಳುಂ, ಎಂದು = ಹೀಗೆಂದು, ಈ ಪೇೞ್ದೆಂಟುಂ = ಈ ಪೇೞ್ದೆಂಟು ತಾಣಂಗಳುಂ, ಅಕ್ಕರಂ = ಅಕ್ಷರಂಗಳ್, ಉದಯಿಪ ತಾಣಂ = ಹುಟ್ಟುವ ಸ್ಥಾನಂಗಳ್,ಆದುವು = ಸಲುವಳಿ ಆದುವು.

**ವೃತ್ತಿ** - ಈ ಪೇೞ್ದೆಂಟಱೊಳ್ ಅಕ್ಕರಂಗಳ್ ಪುಟ್ಟುಗುಂ; ಅವಱೊಳೇಕ ಸ್ಥಾನಿಗಳನಱಿದು, ವರ್ಣಾವೃತ್ತಿಯಂ ಮಾೞ್ಪುದು.

**ಸೂತ್ರಂ ॥ ಕವಿಗಳ್ ಸ್ವರದಿಂ ವರ್ಗದಿ ।**
**ನವರ್ಗದಿಂ ಯೋಗವಾಹದಿಂ ದೇಶಿಯೊಳು ॥**
**ದ್ಭವಮಪ್ಪ ವರ್ಣದಿಂ ಪಂ ।**
**ಚವಿಧಂ ತಾನೆಂದು ತಿಳಿಪುವರ್ ಶುದ್ಧಗೆಯಂ ॥ ೩೧ ॥**

**ಟೀಕೆ** - ಕವಿಗಳ್ = ವಿದ್ವಾಂಸರ್, ತಾಂ = ತಾವು, ಸ್ವರದಿಂ = (ಅ, ಆ ಇತ್ಯಾದಿ) ಸ್ವರಾಕ್ಷರಂಗಳಿಂದೆ, ವರ್ಗದಿಂ = (ಕ, ಖ ಇತ್ಯಾದಿ) ವರ್ಗಾಕ್ಷರಂಗಳಿಂದೆ, ಅವರ್ಗದಿಂ = (ಯ, ರ ಇತ್ಯಾದಿ) ಅವರ್ಗಾಕ್ಷರಂಗಳಿಂದೆ, ಯೋಗವಾಹದಿಂ = (ಂ, ಃ ಇತ್ಯಾದಿ) ಯೋಗವಾಹಾಕ್ಷರಂಗಳಿಂದೆ, ದೇಶಿಯೊಳ್ = ಕನ್ನಡದ ದೇಶಿಯಲ್ಲಿ, ಉದ್ಭವಮಪ್ಪ ವರ್ಣದಿಂ = ಹುಟ್ಟಿದ (ಎ, ಒ ಇತ್ಯಾದಿ) ಅಕ್ಷರಂಗಳಿಂದೆ, ಪಂಚವಿಧಂ = ಐದು ಪ್ರಕಾರಮೆಂದು, ಶುದ್ಧಗೆಯಂ = ಶುದ್ಧಾಕ್ಷರಂಗಳಂ, ತಿಳಿಪುವರ್ = ತಿಳಿಸುವರ್.

**ವೃತ್ತಿ** - ಸ್ವರದಿಂ ವರ್ಗದಿಂ ಅವರ್ಗದಿಂ ಯೋಗವಾಹದಿಂ ದೇಶೀಯಂಗಳಿಂ, ಇಂತು, ಶುದ್ಧಾಕ್ಷರಂಗಳ್ ಕನ್ನಡದೊಳ್ ಪಂಚವಿಧಮೆಂದು, ಕವಿಗಳ್ ಬಾಲಶಿಕ್ಷೆಯಂ ಮಾೞ್ಪರ್.

**ಸೂತ್ರಂ ॥ ತರದಿಂದಂ ಪದಿನಾಲ್ಕುಂ ।**
**ಸ್ವರಮಿರ್ಪತ್ತೈದು ವರ್ಣಮವು ವರ್ಗಂ ತ ॥**
**ತ್ಪರದೊಂಬತ್ತುಮವರ್ಗಂ ।**
**ಪರಿಭಾವಿಸೆ ಯೋಗವಾಹಮವು ನಾಲ್ಕೆ ವಲಂ ॥ ೩೨ ॥**

**ಟೀಕೆ** - ತರದಿಂದಂ = ಕ್ರಮದಿಂದಂ, ಪದಿನಾಲ್ಕುಂ = ಹದಿನಾಲ್ಕಕ್ಷರಂಗಳುಂ, ಸ್ವರಂ = ಸ್ವರಾಕ್ಷರಂಗಳ್; ಇರ್ಪತ್ತೈದು ವರ್ಣಂ = ಇಪ್ಪತ್ತೈದಕ್ಷರಂಗಳ್, ಅವು, ವರ್ಗಂ = ವರ್ಗಾಕ್ಷರಂಗಳ್; ತತ್ಪರದ = ಆ ವರ್ಗಾಕ್ಷರಂಗಳ ಮುಂದಣ, ಒಂಬತ್ತು = ಒಂಬತ್ತಕ್ಷರಂಗಳ್, ಅವರ್ಗಂ = ಅವರ್ಗಾಕ್ಷರಂಗಳ್; ಪರಿಭಾವಿಸೆ = ವಿಚಾರಿಸೆ, ಯೋಗವಾಹಂ = ಯೋಗವಾಹಾಕ್ಷರಂಗಳ್, ಅವು, ನಾಲ್ಕೆ = ನಾಲ್ಕಕ್ಷರಂಗಳೆ, ವಲಂ = ನಿಶ್ಚಯಂ.

**ವೃತ್ತಿ** - ಕ್ರಮದಿಂ ಸ್ವರಂ ಪದಿನಾಲ್ಕಕ್ಕರಂಗಳ್, ವರ್ಗಮಿರ್ಪತ್ತೈದಕ್ಕರಂಗಳ್, ಅವರ್ಗಮೊಂಬತ್ತಕ್ಕರಂಗಳ್, ಯೋಗವಾಹಂ ನಾಲ್ಕಕ್ಕರಂಗಳ್; ಅಂತು ಸಂಸ್ಕೃತದೊಳ್ ಶುದ್ಧಗೆಯ್ಮೆವತ್ತೆರಡಕ್ಕುಂ.

ಸೂತ್ರಂ ॥ ತಿಳಿ ದೇಶೀಯಮುಮೈದಂ ।
ಕಳೆ ನೀಂ ಌ  ವರ್ಣ ಶ ಷ ವಿಸರ್ಗ ೱ ೲ ॥
ಕ್ಷಳನಂ ನಾಲ್ವತ್ತೇೞಾ ।
ಯ್ತಳೆ ಶುದ್ಧಗೆಯಚ್ಚಗನ್ನಡಕ್ಕೀ ಕ್ರಮದಿಂ ॥ ೩೩ ॥

**ಟೀಕೆ** - ದೇಶೀಯಮುಂ = ದೇಶೀಯಾಕ್ಷರಂಗಳುಂ, ಐದಂ = (ಱ, ೞ, ಳ, ಎ, ಒ, ಎಂಬಿವು) ಐದಂ; ನೀಂ, ತಿಳಿ = ಅಱು, ಌ ೡ ವರ್ಣ, ಇ ವರ್ಣ, ಶ, ಷ, ವಿಸರ್ಗ, ೱ , ೲ , ಕ್ಷಳನಂ = ಌವರ್ಣ, ೡವರ್ಣ, ಶಕಾರ, ಷಕಾರ, ವಿಸರ್ಗ, ಜಿಹ್ವಾಮೂಲೀಯ, ಉಪಧ್ಮಾನೀಯ, ಕ್ಷಳಂಗಳೆಂಬಕ್ಕರಂಗಳಂ, ಕಳೆ = ಕರ್ಣಾಟ ಭಾಷೆಯೊಳಿಲ್ಲೆಂದು ಬಿಡು; ಈ ಕ್ರಮದಿಂ = ಈ ರೀತಿಯಿಂದೆ, ಅಚ್ಚಗನ್ನಡಕ್ಕೆ = ಸಂಸ್ಕೃತಂ ಬೆರೆಯದ ಬಱಿಯ ಕನ್ನಡಕ್ಕೆ, ಶುದ್ಧಗೆ = ಶುದ್ಧಾಕ್ಷರಂಗಳ್, ನಾಲ್ವತ್ತೇೞಾಯ್ತು = ನಾಲ್ವತ್ತೇೞಕ್ಷರಂಗಳಾದುವೆಂದು, ಅಳೆ = ಪ್ರಮಾಣಿಸು.

**ವೃತ್ತಿ** - ಕನ್ನಡದೊಳ್ ದೇಶೀಯಮೈದು ತೆಱಂ; ಪಿಂತಣೈವತ್ತೆರಡಕ್ಕರಂಗಳ್ಕೂಡೆ ಐವತ್ತೇೞಕ್ಕರಂಗಳ್; ಅವಱೊಳಗೆ ಌ ೡ, ಇ ಇ, ಶ ಷ, ವಿಸರ್ಗ, ೱ, ೲ, ಕ್ಷಳಂಗಳೆಂಬ ಪತ್ತಂ ಕಳೆಯಲ್ ಅಚ್ಚಗನ್ನಡದೊಳ್ ಶುದ್ಧಗೆ ನಾಲ್ವತ್ತೇೞುವಿಧಂ; ನಿಸರ್ಗಮಾಗಿ ವಿಸರ್ಗಮಿಲ್ಲ.

ಸೂತ್ರಂ॥ ತನು ವಾದ್ಯಂ ನಾಲಗೆ ವಾ
ದನದಂಡಂ ಕರ್ತೃವಾತ್ಮನವನ ಮನೋವೃ ॥
ತ್ತಿನಿಮಿತ್ತಮಾಗಿ ಶಬ್ದಂ ।
ಜನಿಯಿಸುಗುಂ ಧವಳವರ್ಣಮಕ್ಷರರೂಪಂ ॥ ೩೪ ॥

**ಟೀಕೆ** - ತನು = ಶರೀರಂ, ವಾದ್ಯಂ =ವಾದ್ಯವು; ನಾಲಗೆ = ಜಿಹ್ವೆ, ವಾದನದಂಡಂ = ವಾದ್ಯಮಂ ನುಡಿಸುವ ಕುಡುಹು; ಆತ್ಮಂ = ಜೀವಾತ್ಮಂ, ಕರ್ತೃ= ವಾದ್ಯಮಂ ನುಡಿಸುವ ಕರ್ತೃ; ಅವನ =ಆ ಜೀವಾತ್ಮನ, ಮನಃ = ಮನಸ್ಸಿನ, ವೃತ್ತಿ =ವರ್ತನೆಯೆ, ನಿಮಿತ್ತಂ = ಕಾರಣಂ, ಆಗಿ, ಧವಳವರ್ಣಂ = ಶ್ವೇತವರ್ಣಮಾದ, ಅಕ್ಷರರೂಪಂ = ಅಕ್ಷರಾತ್ಮಕಮಾದ, ಶಬ್ದಂ = ಧ್ವನಿ, ಜನಿಯಿಸುಗುಂ = ಪುಟ್ಟುವುದು.

**ವೃತ್ತಿ** - ಶರೀರಮೆ ವಾದ್ಯಂ, ನಾಲಗೆ ಬಾಜಿಸುವ ಕುಡುಹು, ವಾದಕನಾತ್ಮಂ; ಆತನ ಮನೋವೃತ್ತಿಯಿಂದೆ ಧವಳವರ್ಣಮಂತಪ್ಪಕ್ಷರರೂಪಮಪ್ಪ ಶಬ್ದಂ ಪುಟ್ಟುಗುಂ.

ಸೂತ್ರಂ॥ ಪದದರ್ಥಮಂ ವಿಭಾಗಿಸು ।
ವುದಱಿಂದೆ ವಿಭಕ್ತಿಯಂತದಂ ಪ್ರತ್ಯಯಮೆಂ ॥
ಬುದು ತತ್ಪ್ರತ್ಯಯದಿಂ ಪೂ ।
ರ್ವದೊಳಿರ್ಕುಂ ಪ್ರಕೃತಿಯೆರಡುಮಮರ್ದೊದವೆ ಪದಂ ॥ ೩೫ ॥

**ಟೀಕೆ** - ಪದದ = ಪದಂಗಳ, ಅರ್ಥಮಂ = ಪುರುಳಂ, ವಿಭಾಗಿಸುವುದಱಿಂದೆ = ವಿಭಾಗಿಸಿಕೊಡುವುದಱಿಂದೆ, ವಿಭಕ್ತಿ = ವಿಭಕ್ತಿ ಎನಿಪುದು; ಅಂತು = ಹಾಂಗೆ, ಅದಂ = ಆ ವಿಭಕ್ತಿಯಂ, ಪ್ರತ್ಯಯಂ = ಪ್ರತ್ಯಯಮೆಂದು, ಎಂಬುದು = ಪೇೞ್ವುದು; ತತ್ಪ್ರತ್ಯಯದಿಂ = ಆ ವಿಭಕ್ತಿಯಿಂದೆ, ಪೂರ್ವದೊಳ್ = ಮೊದಲಲ್ಲಿ, ಪ್ರಕೃತಿ, ಇರ್ಕುಂ = ಇರ್ಪುದು, ಎರಡುಂ = ಪ್ರಕೃತಿ ಪ್ರತ್ಯಯಮೆಂಬೆರಡುಂ, ಅಮರ್ದು = ಪೊರ್ದುಗೆಯಾಗಿ, ಒದವೆ = ಸೇರಲ್,ಪದಂ = ಪದಮೆನಿಸುವುದು.

**ವೃತ್ತಿ** - ಪದದೊಳಿರ್ದರ್ಥಮಂ ತಂತಮ್ಮರ್ಥಾನುಗುಣಮಾಗಿ ವಿಭಾಗಿಸಿ ಕುಡುವುದಱಿಂ ವಿಭಕ್ತಿಯೆನಿಸುಗುಂ; ಆ ವಿಭಕ್ತಿಯಂ ಪ್ರತ್ಯಯಮೆನಲಕ್ಕುಂ. ಅವಾವುವೆಂದೊಡೆ - ಮ್, ಅಮ್ ಮೊದಲಾದ ನಾಮಾಖ್ಯಾತ ವಿಭಕ್ತಿಗಳ್. ಅವಱಿಂ ಪಿಂದಿರ್ಪ ಲಿಂಗಮಂ ಧಾತುವಂ

ಪ್ರಕೃತಿಯೆನಲಕ್ಕುಂ; ಪ್ರಕೃತಿ ಪ್ರತ್ಯಯಂಗಳೆರಡುಂ ಕೂಡೆ ಪದಮಕ್ಕುಂ. ಮರ, ದೇವ ಎಂದು (ನಾಮ) ಲಿಂಗಮನಿರಿಸಿ ಮ್ ಎಂಬ (ನಾಮ) ವಿಭಕ್ತಿಯಂ ಕುಡೆ, ಮರಂ ದೇವಂ ಎಂದು (ನಾಮ) ಪದಮಕ್ಕುಂ. ನುಡಿ, ನೋಡು ಎಂಬ ಧಾತುವನಿರಿಸಿ, ಅಮ್ ಎಂಬ (ಆಖ್ಯಾತ) ವಿಭಕ್ತಿಯಂ ಕುಡೆ, ನುಡಿದಂ ನೋಡಿದಂ ಎಂದು (ಆಖ್ಯಾತ) ಪದಮಕ್ಕುಂ. ಅವ್ಯಯಮುಂ ಸಮಾಸದೊಳಗಣ ನಾಮಭಾಗಮುಂ ವಿಭಕ್ತಿಯಂ ಕೊಟ್ಟುಱುವುದಱಿಂ ಪದಮೆಂದಱುವುದು.

**ಸೂತ್ರಂ॥ ಕೆಲವು ನಿಜಬಿಂದುಗಳ್ ಕೆಲ ।**
**ಕೆಲವು ವಿಕಲ್ಪಾರ್ಥಬಿಂದುಗಳ್ ದ್ವಿತ್ವಂಗಳ್ ॥**
**ಕೆಲವಾ ಶಿಥಿಲದ್ವಿತ್ವಂ ।**
**[1]ಕೆಲಮುಭಯಮುಮಾಗಿ ಕೆಲವು ಪದನಱುವುದವಂ॥ ೩೬ ॥**

**ಟೀಕೆ –** ಕೆಲವು = ಕೆಲವು ಶಬ್ದಂಗಳ್, ನಿಜಬಿಂದುಗಳ್ = ನಿತ್ಯಬಿಂದುಗಳೆನಿಸುವುವು ; ಕೆಲಕೆಲವು = ಹಲವು ಕೆಲವು ಶಬ್ದಂಗಳ್ ವಿಕಲ್ಪಾರ್ಥಬಿಂದುಗಳ್ = ವಿಕಲ್ಪದಿಂ ಸಬಿಂದುಕಮಬಿಂದುಕಮಾಗಿರ್ಪುವು ; ಕೆಲವು = ಕೆಲವು ಶಬ್ದಂಗಳ್, ದ್ವಿತ್ವಂಗಳ್ = ಒತ್ತಕ್ಕರಂಗಳಾಗಿರ್ಪುವು ; ಕೆಲಂ = ಕೆಲವು ಶಬ್ದಂಗಳ್, ಆ = ಆ ಪ್ರಸಿದ್ಧಮಾದ, ಶಿಥಿಲದ್ವಿತ್ವಂ = ಶಿಥಿಲವಾದ ದ್ವಿತ್ವಂಗಳಾಗಿರ್ಪುವು ; ಕೆಲವು ಪದಂ = ಕೆಲವು ಪದಂಗಳ್, ಉಭಯಮುಂ = ದ್ವಿತ್ವ ಶಿಥಿಲದ್ವಿತ್ವಮೆಂಬುಭಯಮುಂ, ಆಗಿ = ಆಗಿ (ಇರ್ಪುವು); ಅವಂ = ಆ ಪದಂಗಳಂ, ಅಱಿವುದು = ತಿಳಿವುದು.

**ವೃತ್ತಿ** - ಕೆಲವು ಪದಂಗಳ್ ಸ್ವಭಾವದಿಂ ನಿತ್ಯಬಿಂದುಗಳ್; ಕೆಲವು ಪದಂಗಳ್ ವಿಕಲ್ಪದಿಂ ಸಬಿಂದುಕಮಬಿಂದುಕಮಾಗಿರ್ಪುವು; ಕೆಲವು ಪದಂಗಳ್ ನಿಯತದಿಂ ದ್ವಿತ್ವಂಗಳ್; ಕೆಲವು ಪದಂಗಳ್ ಶಿಥಿಲದ್ವಿತ್ವಂಗಳ್; ಕೆಲವು ಪದಂಗಳ್ ಶಿಥಿಲಮುಂ ದ್ವಿತ್ವಮುಮಾಗಿರ್ಪುವು.

**ಪ್ರಯೋಗಂ –**

ನಿತ್ಯಬಿಂದುಗೆ -

ಬೆಡಂಗು, ಕಡಂಗು, ಅಡಂಗು, ತೊಡಂಬೆ, ತೊಡಂಕು, ಕೊಡಂತಿ, ಪಡಂಗು, ಸಿಡುಂಬು, ಸೆಱಂಗು, ಎಱಂಕೆ, ತುಱುಂಬು, ತಱುಂಬು, ಕುಱುಂಬು, ಕುಱುಂಬಂ, ಒಱಂತೆ, ಕೊಱಂತೆ, ಪಳುಂಕಿದಂ, ಕೂಂಕಿದಂ, ತೂಂಕಿದಂ, ಅವುಂಕಿದಂ, ಕವುಂಕುೞ್, ಪೇಂಕುಳಿ, ಚೆಲಂಕು, ತೇಂಕು, ಕುಸುಂಬೆ, ಹಸುಂಬೆ, ಮುಸುಂಬು, ಕಱುಂಬು, ದಾಂಟು, ದೂಂಟು, ಗೆಂಟು, ಗೊಂಟು, ಗೆಂಟುಗೆ, ಗಂಟಿಗೆ, ಬೇಂಟೆ, ಸುಂಟಗೆ, ದೋಂಟಿ, ಮೇಂಟಿ, ಮಿಾಂಟು, ಮಿಾಂಟಿದಂ, ಈಂಟು, ಕೂಂಟು, ಕುಂಟಣಿ, ಸೊರಂಟು, ಒಱಂಟು, ತೆರಂಟು, ಸೀಂಟು, ತೋಂಟಂ, ತೋಂಟಿಗಂ, ಪೊಸಂತಿಲ್, ಗಳಂತಿಗೆ, ಪಳಂಚಿದಂ, ಸಾಂದು, ಸೇಂದು, ನಾಂದು, ಕಡುಂಬು, ಕಡಂದುಱು, ಕೊಡಂಬೆ, ಬಣಂಬೆ, ಬಣಂಜಿಗಂ, ಬೆಂದುಱು(?), ಬೆದಂಡೆ, ಚಲುಂಕಿದಂ, ಪಲುಂಬಿದಂ, ನಿಲುಂಬಿದಂ, ಅಸುಂಬಿದಂ, ಕರಂಡಗೆ, ತಂದಲ್ - ಇವು ಮೊದಲಾದುವು.

೧. (ಕೆಲವು)

ವಿಕಲ್ಪಬಿಂದುಗೆ -

ಕದಂಪು - ಕದಪು; ಕೊಡಂಕೆ - ಕೊಡಕೆ; ಇಱುಂಪೆ - ಇಱುಪೆ; ನೊರಂಜು - ನೊರಜು; ಜಿನುಂಗು - ಜಿನುಗು; ಬೆಳಂತಿಗೆ - ಬೆಳತಿಗೆ; ಕರಿಂಕು - ಕರಿಕು; ತೊಳಂಕು - ತೊಳಕು; ಕಣಂಜು - ಕಣಜು; ಅಱಂಬೆ - ಅಱಬೆ; ಕಱುಂಕೆ - ಕಱುಕೆ; ಕುಱುಂಕಿದಂ - ಕುಱುಕಿದಂ; ಇಱುಂಕಿದಂ - ಇಱುಕಿದಂ; ಕರ್ದುಂಕಿದಂ - ಕರ್ದುಕಿದಂ; ದುಘುಂಮಿಱಿದಂ - ದುಘುಮಿಱಿದಂ; ತುಳುಂಕಿದಂ - ತುಳುಕಿದಂ; ಪೊಳಂಕಿದಂ - ಪೊಳಕಿದಂ; ಮುಸುಂಕಿದಂ - ಮುಸುಕಿದಂ - ಇವು ಮೊದಲಾದುವು.

ನಿಯತದ್ವಿತ್ವಕ್ಕೆ -

ಪಪ್ಪುಕಂ, ಕಪ್ಪಡಿ, ಬಿಪ್ಪಂಡಂ, ಉಪ್ಪಡಂ, ತಿಪ್ಪುಳ್, ಸೊಪ್ಪುಳ್, ಕೊಪ್ಪಲ್, ಕೊಪ್ಪಂ, ಕೊಪ್ಪು, ಚಪ್ಪರಂ, ಒಪ್ಪಂ, ನೆಪ್ಪು, ಕಪ್ಪಳಿ, ತಪ್ಪಡಿ, ಱೊಪ್ಪಂ, ತೆಪ್ಪಂ, ಟೆಪ್ಪರಂ, ದುಪ್ಪಡಿ, ಉಪ್ಪರಂ, ಹಪ್ಪಳಿಕೆ, ಹಿಪ್ಪಲಿ, ಸಿಪ್ಪು, ಸಕ್ಕರೆ, ಕಕ್ಕಸಂ, ಮೊಕ್ಕಳಂ, ಬಕ್ಕಸೆ, ರಕ್ಕಸಿ, ಕೆಕ್ಕೊರಸು, ಉಕ್ಕೆವಂ, ಬಕ್ಕರಸೆ, ಬಕ್ಕುಡಿದಂ, ಮೊಗ್ಗರಂ, ಮೊಗ್ಗು, ಬಗ್ಗಂ, ಬಗ್ಗಣೆ, ಎಗ್ಗಂ, ಲಗ್ಗಿಗಂ, ಅಗ್ಗಳಂ, ವೆಗ್ಗಳಂ, ಸುಗ್ಗಂ, ಸುಗ್ಗಿ, ಉಗ್ಗಂ, ಉಗ್ಗಿ, ತೊಟಿಲ್ದಂ, ಬಟಿಲ್ದಂ, ಕಟಿಲ್ದಂ, ಬಟ್ದಿಂ, ಬಿಟ್ದಿಂ, ಅಟ್ದಿಂ, ಎಟ್ದಿಂ, ಸುರುಳ್ದಂ, ಅಟ್ಟು, ಕಟ್ಟಿ, ಮುಟ್ಟಿಲೆ, ಕಟ್ಟಿಲೆ, ತೊಟ್ಟು - ಇವು ಮೊದಲಾದುವು.

ಶಿಥಿಲದ್ವಿತ್ವಕ್ಕೆ -

ಮಗುಟ್ದಿಂ, ಅಗುಟ್ದಿಂ, ಜಗುಟ್ದಿಂ, ಪೊಗಟ್ದಿಂ, ತುಮುಟ್ದಿಂ, ನುಸುಟ್ದಿಂ, ಮಸುಟ್ದಿಂ, ಮುಗುಟ್ದಿಂ, ತೆಗಟ್ದಿಂ, ನೆಗಟ್ದಿಂ, ತಿಮಿರ್ದಂ.

ದ್ವಿತ್ವಮುಂ ಶಿಥಿಲಮುಂ ಆದುವರ್ಕೆ - ತಗುಳ್ದಂ - ತಗುಳ್ದಂ ; ಪೊರಳ್ದಂ - ಪೊರಳ್ದಂ ಎಂಬಂತೆ.

**ಸೂತ್ರಂ ॥ ಉರ್ದುಂ ಬಿರ್ದುಂ ತರ್ದುಂ ।**
**ಮರ್ದುಂ ಗುರ್ದುಂ ಸಮಂತು ತಿರ್ದುಂ ಪರ್ದುಂ ॥**
**ಗರ್ದುಱುಮುರ್ದಿದುದೆನೆಯುಂ ।**
**ಗರ್ದೆಯುಮಾ ಗುರ್ದೆಯುಂ ಸರೇಫ ಪದಂಗಳ್ ॥ ೩೭ ॥**

**ಟೀಕೆ** – ಉರ್ದುಂ, ಬಿರ್ದುಂ, ತರ್ದುಂ, ಮರ್ದುಂ, ಗುರ್ದುಂ, ಸಮಂತು ತಿರ್ದುಂ, ಪರ್ದುಂ, ಗರ್ದುಱುಂ, ಉರ್ದಿದುದು ಎನೆಯುಂ, ಗರ್ದೆಯುಂ, ಆ ಗುರ್ದೆಯುಂ, ಸರೇಫ ಪದಂಗಳ್ = ರೇಫೆಯೊಡನೆ ಕೂಡಿದ ಪದಂಗಳೆನಿಸುವುವು.

**ಸೂತ್ರ ॥ ನುರ್ಗಿದುದೆನೆ ತರ್ಗಿದುದೆನೆ ।**
**ಕಿರ್ಗಿದುದೆನೆ ಜರ್ಗುವಿಟ್ದುದೆನೆ [೧]ಪೆರ್ಗತ್ತಾ ॥**
**ವೊರ್ಗಾದರ್ಪೆರ್ಗಳವೆನೆ ।**
**ಕುರ್ಗಿದುದೆನೆ ಮಾರ್ಗದೊಳ್ ಸರೇಫಪದಂಗಳ್ ॥ ೩೮ ॥**

---

೧. (ಪೆರ್ಗರ್ ತಾ)

**ಟೀಕೆ** - ನುರ್ಗಿದುದು, ತರ್ಗಿದುದು, ಕಿರ್ಗಿದುದು, ಜರ್ಗುವಿಟ್ಟುದು, ಪೆರ್ಗತ್ತು, ಆ ಒರ್ಗಾದರ್, ಪೆರ್ಗಳವು, ಕುರ್ಗಿದುದು - ಇವು ಮಾರ್ಗದೊಳ್ ಸರೇಫಪದಂಗಳ್.

**ಸೂತ್ರಂ ॥ ಇರ್ಪುಂ ತೋರ್ಪುಂ ಕೆರ್ಪುಂ ।**
**[1]ನೆರ್ಪುಂ [2]ಪೆರ್ಪೆಯುಮುಡರ್ಪುಮಾರ್ಪುಂ ಕೂರ್ಪುಂ ॥**
**ಪರ್ಪರಿಕೆಯು[3]ಮೆರ್ಪುಂ ಮೆ ।**
**ಯ್ಗರ್ಪುಂ ಮೊದಲಾಗಿ ರೇಫಸಂಯೋಗಂಗಳ್ ॥ ೩೯ ॥**

**ಟೀಕೆ** - ಇರ್ಪುಂ, ತೋರ್ಪುಂ, ಕೆರ್ಪುಂ, ನೆರ್ಪುಂ, ಪೆರ್ಪೆಯುಂ, ಅಡರ್ಪುಂ, ಆರ್ಪುಂ, ಕೂರ್ಪುಂ, ಪರ್ಪರಿಕೆಯುಂ, ಎರ್ಪುಂ, ಮೈಗರ್ಪುಂ ಮೊದಲಾಗಿ ರೇಫಸಂಯೋಗಗಳ್.

**ಸೂತ್ರಂ ॥ ಆರ್ದಂ ಸಾರ್ದಂ [5]ಪೋರ್ದಂ ।**
**ತೀರ್ದಂ [4]ಪಾರ್ದಂ ಸಮಂತು ಪೀರ್ದಂ ಕಾರ್ದಂ ॥**
**ನೇರ್ದಂ ಬಾರ್ದಂ ಗೋರ್ದಂ ।**
**ಸೋರ್ದಂ ತಾನೆಂದೊಡಂ *ಗುರೂಪಧೆಯಿನಿತುಂ ॥ ೪೦ ॥+**

**ಟೀಕೆ** - ಆರ್ದಂ, ಸಾರ್ದಂ, ಪೋರ್ದಂ, ತೀರ್ದಂ, ಪಾರ್ದಂ, ಸಮಂತು ಪೀರ್ದಂ, ಕಾರ್ದಂ, ನೇರ್ದಂ, ಬಾರ್ದಂ, ಗೋರ್ದಂ, ಸೋರ್ದಂ ಎಂದೊಡಂ ತಾಂ ಇನಿತುಂ ಗುರೂಪಧೆಗಳ್.
* **ವಿಚಾರಂ** - ಉಪಧೆಯೆಂದೊಡೆ ವ್ಯಾಕರಣಂಗಳಲ್ಲಿ - ॥ ಅಲೋಂತ್ಯಾತ್ ಪೂರ್ವ ಉಪಧಾ ॥ ಎಂಬ[1] ಸಂಜ್ಞಾಸೂತ್ರದಿಂ - ಅಂತ್ಯದತ್ತಣಿಂ ಮೊದಲ ವರ್ಣಮುಪಧೆ ಎಂದಱಿ ॥ ೪೦ ॥

೧. ಅಂತ್ಯಾದ್ ವರ್ಣಾತ್ ಪೂರ್ವ ಉಪಧಾ ಎಂದು, ವಾಜಸನೇಯಿ ಪ್ರಾತಿಶಾಖ್ಯದೊಳುಂಟು. (೧,೩೫); ಪಾಣಿನಿ ೧, ೧, ೬೫.

**ಸೂತ್ರಂ ॥ ಊರ್ಗಳ್ ಕೇರ್ಗಳ್ ಬೇರ್ಗ ।**
**ಳ್ನಾರ್ಗಳ್ ತೇರ್ಗಳ್ ನೆಗಟ್ತೆಯಾರ್ಗಳ್ ಕೂರ್ಗಳ್ ॥**
**[6]ನೇರ್ಗಳ್ ಸೀರ್ಗಳ್ ತಾರ್ಗಳ್ ।**
**ಸೂರ್ಗಳ್ ಕಾರ್ಗಳ್ ಗುರೂಪಧಾರ್ಥಮೆನಿಕ್ಕುಂ ॥ ೪೧ ॥**

**ಟೀಕೆ** - ಊರ್ಗಳ್, ಕೇರ್ಗಳ್, ಬೇರ್ಗಳ್, ನಾರ್ಗಳ್, ತೇರ್ಗಳ್, ನೆಗಟ್ತೆಯ ಆರ್ಗಳ್, ಕೂರ್ಗಳ್, ನೇರ್ಗಳ್, ಸೀರ್ಗಳ್, ತಾರ್ಗಳ್, ಸೂರ್ಗಳ್, ಕಾರ್ಗಳ್ (ಇಂತಿವುಂ) ಗುರೂಪಧಾರ್ಥಂ ಎನಿಕ್ಕುಂ.

**ಸೂತ್ರಂ ॥ ಪಿಂತಮರ್ದಿರೆ ಱಟ ಕುಳ ರೇ ।**
**ಫಾಂತಂ ಹ್ರಸ್ವಾದಿ [7]ಲಿಂಗಮಂತವು ಗಳ್ ಮೇ ॥**
**ಣಂತೆ ಚತುರ್ಥಿಯ ಗೆಯೆ ಮೇಣ್ ।**
**ಮುಂತಮರ್ದಿರೆ ಪಿರಿದುಮೊದವುಗುಂ ಶಿಥಿಲತ್ವಂ ॥ ೪೨ ॥**

**ಟೀಕೆ** - ಹ್ರಸ್ವಾದಿಲಿಂಗಂ = ಹ್ರಸ್ವಾದಿಲಿಂಗಂಗಳಾದ, ಱಟಕುಳ ರೇಫಾಂತಂ = ಱಟಾಂತ ಕುಳಾಂತ ರೇಫಾಂತಂಗಳಾದ ಶಬ್ದಂಗಳ್, ಪಿಂತೆ = ಹಿಂದುಗಡೆಯಲ್ಲಿ, ಅಂತು = ಹಾಂಗೆ, ಅವು = ಆ ಶಬ್ದಂಗಳ್, ಅಮರ್ದಿರೆ = ಪೊರ್ದುಗೆಯಾಗಿ ಇರೆ, ಮೇಣ್ = ವಿಕಲ್ಪದಿಂದೆ, ಗಳ್= ಬಹುವಚನದ ಗಳಾಗಮಂ, ಅಂತೆ

~~~~~~~~~~~~~~~~~~~

೧. (ನೇರ್ಪುಂ) ೨. (ಪಿರ್ಪೆ) ೩. (ಮಿರ್ಪುಂ), ೪. (ಪಾರ್ದಂ)
೫. (ಪೋರ್ದಂ) + ( ೩೯- ೪೦ರ ಅನುಕ್ರಮದಲ್ಲಿ ವ್ಯತ್ಯಯವಿದೆ) ೬. (ನೀರ್ಗಳ್) ೭. (ಲಿಂಗಮಂತಾ)
~~~~~~~~~~~~~~~~~~~

= ಹಾಂಗೆ, ಮೇಣ್ = ಅದಲ್ಲದೆ, ಚತುರ್ಥಿಯ = ಚತುರ್ಥೀ ವಿಭಕ್ತಿಯ, ಗೆಯೆ = ಗೆಕಾರಂ, ಮುಂತೆ = ಮುಂದುಗಡೆಯಲ್ಲಿ, ಅಮರ್ದಿರೆ = ಪೊರ್ದುಗೆಯಾಗಿರೆ, ಪಿರಿದುಂ = ಬಹುಳಮಾಗಿ, ಶಿಥಿಲತ್ವಂ = ಶಿಥಿಲಭಾವಂ, ಒದವುಗುಂ = ಬರ್ಪುದು.

**ವೃತ್ತಿ** - ಪೆಱಗಣ ಮೆಯ್ಯೊಳ್ ಲಘು ಮೊದಲಾಗಿರ್ದ ಱಟಕುಳರೇಫಾಂತಂಗಳಪ್ಪ ಲಿಂಗಂಗಳಿರೆ, ಮುಂದೆ ಗಳ್ ಅಕ್ಕೆ, ಮೇಣ್ ಚತುರ್ಥಿಗಾದ ಗೆಕಾರಮಕ್ಕೆ, ಶಿಥಿಲಮಕ್ಕುಂ.

**ಪ್ರಯೋಗಂ -**

ಱಟಾಂತಕ್ಕೆ - ಅಗಟ್ಗಳ್, ಎಸಟ್ಗಳ್, ನೆಗಟ್ಗಳ್ (ಎಂದೊಡೆ ಜಲಚರಂಗಳ್), ಉಗುಟ್ಗಳ್; ಅಗಟ್ಗೆ, ಎಸಟ್ಗೆ, ನೆಗಟ್ಗೆ, ಉಗುಟ್ಗೆ.

ಆದಿದೀರ್ಘಮಾದೊಡಂ ಗುರುವಾದೊಡಂ ಶಿಥಿಲಮಿಲ್ಲ - ಬಾಸುಟ್ಗಳ್, ಇಕ್ಕುಟ್ಗಳ್, ಪೊಕ್ಕುಟ್ಗಳ್; ಬಾಸುಟ್ಗೆ, ಇಕ್ಕುಟ್ಗೆ, ಪೊಕ್ಕುಟ್ಗೆ.

ಕುಳಾಂತಕ್ಕೆ - ಮುಗುಳ್ಗಳ್, ಪುಗುಳ್ಗಳ್, ಅಮಳ್ಗಳ್, ಎಸಳ್ಗಳ್ (ಎಂದೊಡೆ ಪೂವಿನವು); ಮುಗುಳ್ಗೆ, ಪುಗುಳ್ಗೆ, ಅಮಳ್ಗೆ, ಎಸಳ್ಗೆ.

ಕಂ॥ ಅಮಳ್ಗಳ್ ನಯ ಗಣ ವಿಕ್ರಮ
ದಮಳ್ಗಳ್ ... ೧

(ಕಾವ್ಯಾವಲೋಕನಂ ೫೩೪)

ಪಿರಿದುಂ ಎಂಬುದಱಿಂ ಕೆಲವೆಡೆಯೊಳ್ ಶಿಥಿಲಮಿಲ್ಲದುದರ್ಕೆ - ಕುರುಳ್ಗಳ್, ಪುರುಳ್ಗಳ್, ಮರುಳ್ಗಳ್; ಕುರುಳ್ಗೆ ಇತ್ಯಾದಿ.

ರೇಫಾಂತಕ್ಕೆ - ಕನರ್ಗಳ್, ಕೊನರ್ಗಳ್, ತಳಿರ್ಗಳ್, ಕುಳಿರ್ಗಳ್, ಅಲರ್ಗಳ್, ಮಲರ್ಗಳ್, ಉಗುರ್ಗಳ್, ಪೊಗರ್ಗಳ್, ಒಗರ್ಗಳ್, ಚಿಗುರ್ಗಳ್, ಬಿದಿರ್ಗಳ್, ಕದಿರ್ಗಳ್, ಕುದಿರ್ಗಳ್, ತಿಮಿರ್ಗಳ್, ತೆಮರ್ಗಳ್, ಬೆಮರ್ಗಳ್.

ಚಂ॥ ಮಾ॥ ಬೆಮರ್ಗಳನೂದಿ ನುಣ್ದೊಡೆಗಳಂ ಪಿಡಿಕೆಯ್ಸಿ ... ೨

(ಸೂಕ್ತಿಸುಧಾರ್ಣವಂ ೧೪-೭೫)

ಎಸರ್ಗಳ್, ಮೊಸರ್ಗಳ್, ಒಸರ್ಗಳ್. ಉಸಿರ್ಗಳ್, ಪಸುರ್ಗಳ್, ನವಿರ್ಗಳ್; ಕನರ್ಗೆ, ನವಿರ್ಗೆ - ಇತ್ಯಾದಿ.

ಕಂ॥ ನಡೆದುದು ತಲೆನವಿರ್ಗೂಟಂ
ನಡೆದುದು. . . ೩

ಱಕಾರಾದೇಶ ರೇಫೆಗಂ ಶಿಥಿಲತ್ವಂ - ಅಳಿರ್ಗಳ್, ಕೆಸರ್ಗಳ್, ಬಸಿರ್ಗಳ್, ಪೆಸರ್ಗಳ್, ಹಗರ್ಗಳ್, ಎಡರ್ಗಳ್; ಅಳಿರ್ಗೆ - ಇತ್ಯಾದಿ[1].

ಕಂ॥ ... ಆ
ವೆಡರ್ಗಳುಮಂ ತಿರ್ದುವೊಂದು ಕೋಡುಂ ಪೆಂಪುಂ ೪

~~~~~~~~~~~~~~~~~~

೧. ಈ ಪದಂಗಳ ಪ್ರಕೃತಿರೂಪಂಗಳ್ ಱಾಂತಂಗಳಾಗಿರ್ಪುವು: ಅಳಿಱ್, ಕೆಸಱ್, ಬಸಿಱ್, ಪೆಸಱ್, ಹಗಱ್ - ಎಂಬಂತೆ.
~~~~~~~~~~~~~~~~~~

ಪಿರಿದುಮೆಂಬುದಱಿಂದೆ ಕಾದಲರ್ಗಳೆಂಬ ಪದ[ಂ] ಆದಿದೀರ್ಘಮಾಗಿಯುಂ ಶಿಥಿಲಮಾಯ್ತು.

**ಸೂತ್ರಂ॥ ಗ ದ ವ ಜಕಾರಮವಿದಿರಿರೆ ।**
**ಪದಮಧ್ಯಂ ವಿಷಯಮಾಗನೇಕಾಕ್ಷರದೊಳ್ ॥**
**ಪುದಿಯೆ ಲಘೂಪಧೆ ಕೆಲಕೆಲ ।**
**ವೊದವಿರ್ಕುಂ ರಾಂತ ಳಾಂತಮವು ಶಿಥಿಲತೆಯಂ ॥ ೪೩ ॥**

**ಟೀಕೆ -** ಪದಮಧ್ಯಂ = ಸಮಾಸಮಧ್ಯಂ, ವಿಷಯಂ = ಲಕ್ಷ್ಯಂ (ಗುರಿ), ಆಗೆ,ಗದವಜಕಾರಂ = ಗಕಾರ, ದಕಾರ, ವಕಾರ, ಜಕಾರಂಗಳ್, ಅವು, ಇದಿರಿರೆ = ಮುಂದಿರೆ, ಅನೇಕಾಕ್ಷರದೊಳ್ = ಅನೇಕಾಕ್ಷರದಲ್ಲಿ, ಪುದಿಯೆ = ಪ್ರವೇಶಮಾಗೆ, ಲಘೂಪಧೆ = ಲಘುವೆ ಉಪಧೆಯಾದ, ಕೆಲ ಕೆಲವು = ಹಲವು ಕೆಲವು, ರಾಂತ ಳಾಂತಂ = ರೇಫಾಂತ ಳಕಾರಾಂತ ಶಬ್ದಂಗಳ್, ಅವು, ಶಿಥಿಲತೆಯಂ = ಶಿಥಿಲತ್ವಮಂ, ಒದವಿರ್ಕುಂ = ಪೊರ್ದಿರ್ಪುವು.

**ವೃತ್ತಿ -** ಮುಂತೆ ಗದವಜಕಾರಂಗಳಿರೆ, ಪೆಱಗಣ ಮೆಯ್ಯೊಳ್ ರಾಂತ ಳಾಂತಗಳ್ ಸಮಾಸಮಧ್ಯಮೆ ವಿಷಯಮಾಗಿ, ಪಲವಕ್ಕರಂಗಳೊಳ್ಕೂಡಿ ಲಘೂಪಧೆಯಾಗಿ ನಿಲೆ, ಆ ರಾಂತ ಳಾಂತಂಗಳ್ಗೆ ಶಿಥಿಲತ್ವಮಕ್ಕುಂ.

**ಪ್ರಯೋಗಂ -**

ರಾಂತಕ್ಕೆ - ಕುಳಿರ್ಗಾಳಿ, ಬೆಳರ್ಗೆಂಪು, ತಳಿರ್ದೋರಣಂ, ಅಲರ್ದೋರಣಂ, ಅಲರ್ದೊಂಟಂ, ಬಿದಿರ್ದಟ್ಟಿ, ಪೊಗರ್ವಟ್ಟೆ, ಬೆಮರ್ವನಿ, ಅಲರ್ಜೊಂಪಂ, ಕದಿರ್ಜೊನ್ನಂ.

ಳಾಂತಕ್ಕೆ - ಮುಗುಳ್ಗಾಯ್, ಅಮಳ್ದೊಂಗಲ್, ಎಸಳ್ವಸೆ, ಅಮಳ್ಜಂತ್ರಂ.

**ಸೂತ್ರಂ ॥ ಪುಗೆ ದ ದಪ ವಕಾರಂ ವಿಧಿ ।**
**ಯ ಗೆಕಾರಂ ವರ್ತಮಾನಕಾಲದ ಗುಂ ಧಾ ॥**
**ತುಗೆ ಱಟ ಕುಳ ರೇಫಾಂತ ।**
**ಕ್ಕೊಗೆಗುಂ ಶಿಥಿಲತ್ವಮಗುರುಪೂರ್ವಸ್ಥಿತಿಯಿಂ ॥ ೪೪ ॥**

**ಟೀಕೆ** - ಅಗುರುಪೂರ್ವಸ್ಥಿತಿಯಿಂ = ಲಘು ಮೊದಲಾಗಿರ್ಪುದಱಿಂದೆ, ಱಟ ಕುಳ ರೇಫಾಂತಕ್ಕೆ = ಱಟಾಂತ ಕುಳಾಂತ ರೇಫಾಂತಗಳಾದ, ಧಾತುಗೆ = ಧಾತುಗಳ್ಗೆ, ದ ದಪ ವಕಾರಂ = ದಕಾರ ದಪಕಾರ ವಕಾರಂಗಳ್, ವಿಧಿಯ = ವಿಧ್ಯರ್ಥದ, ಗೆಕಾರಂ = ಗೆ ಎಂಬಕ್ಷರಂ, ವರ್ತಮಾನಕಾಲದ = ವರ್ತಮಾನಕಾಲಾರ್ಥದ, ಗುಂ = ಗುಂಕಾರಂ, ಪುಗೆ = ಪ್ರವೇಶಮಾಗೆ, ಶಿಥಿಲತ್ವಂ = ಶಿಥಿಲಭಾವಂ, ಒಗೆಗುಂ = ಪುಟ್ಟುಗುಂ.

**ವೃತ್ತಿ** - ಹ್ರಸ್ವಾದಿಗಳಪ್ಪ ಱಟ ಕುಳ ರೇಫಾಂತಂಗಳಪ್ಪನೇಕಾಕ್ಷರಧಾತುಗಳ್ಗೆ ಭೂತ ವರ್ತಮಾನ ಭವಿಷ್ಯಂತಿಗಾದ, ದ, ದಪ, ವ ಎಂಬಿವು ಪರಮಾದೊಡಂ, ಪ್ರಥಮಪುರುಷದ ವಿಧ್ಯರ್ಥದೊಳಾದ ಗೆ ಎಂಬುದು ಪರಮಾದೊಡಂ, ಪ್ರಥಮಪುರುಷದ ವರ್ತಮಾನ ಭವಿಷ್ಯಂತಿಗಾದ ಗುಂ ಎಂಬುದು ಪರಮಾದೊಡಂ, ಕ್ರಿಯಾಪದದೊಳ್ ಶಿಥಿಲತ್ವಮುಂಟು.

**ಪ್ರಯೋಗಂ -**

ಱಟಾಂತಂಗಳ ದ, ದಪ, ವಂಗಳ್ಗೆ - ಜಗುಱ್ದಂ, ಅಗುಱ್ದಂ, ಪೊಗಱ್ದಂ, ತೆಗಱ್ದಂ, ನೆಗಱ್ದಂ, ತುಮುಱ್ದಂ; ಜಗುಱ್ದಪಂ ಇತ್ಯಾದಿ; ಜಗುಱ್ವಂ ಇತ್ಯಾದಿ.

ಗೆಕಾರಕ್ಕೆ - ತೆಗಟ್ಗೆ, ನೆಗಟ್ಗೆ, ಪೊಗಟ್ಗೆ ಎಂಬಂತಱುವುದು.

ಗುಂ ಎಂಬುದರ್ಕೆ - ತೆಗಟ್ಗುಂ, ನೆಗಟ್ಗುಂ, ಪೊಗಟ್ಗುಂ ಎಂಬಂತುೞಿದುವರ್ಕೆಲ್ಲಂ ಪತ್ತಿಸುವುದು.

ಕುಳಾಂತಕ್ಕೆ - ನುಸುಳ್ದಂ, ಮಸುಳ್ದಂ, ನುಗುಳ್ದಂ; ಮಸುಳ್ದಪಂ ಇತ್ಯಾದಿ; ಮಸುಳ್ವಂ ಇತ್ಯಾದಿ.

ಗೆಕಾರಕ್ಕೆ - ನುಸುಳ್ಗೆ, ಮಸುಳ್ಗೆ ಎಂಬಂತೆ.

ಗುಂ ಎಂಬುದರ್ಕೆ - ನುಸುಳ್ಗುಂ, ಮಸುಳ್ಗುಂ ಎಂಬಂತೆ ಮಾಟ್ಪುದು.

ತೆರಳ್ದಂ, ಪೊರಳ್ದಂ ಎಂಬಂತೆ ಕೆಲಕೆಲವೆಡೆಯೊಳ್ ಶಿಥಿಲತ್ವಮುಂ ದ್ವಿತ್ವಮುಮುಂಟು.[೧]

ರೇಫಾಂತಕ್ಕೆ - ತೊಡರ್ದಂ, ತಳರ್ದಂ, ಕೆಳರ್ದಂ, ಎಡರ್ದಂ, ಅಳರ್ದಂ, ಅದಿರ್ದಂ, ಬಿದಿರ್ದಂ, ಅಮರ್ದಂ, ನಿಮಿರ್ದಂ; ನಿಮಿರ್ದಪಂ; ನಿಮಿರ್ವಂ ಎಂಬಂತೆಲ್ಲಕ್ಕಂ ಪತ್ತಿಸುವುದು.

ಗೆಕಾರಕ್ಕೆ - ತೊಡರ್ಗೆ, ಅದಿರ್ಗೆ, ಬಿದಿರ್ಗೆ, ಎಡರ್ಗೆ ಎಂಬಂತೆ.

ಗುಂ ಎಂಬುದರ್ಕೆ - ಅಮರ್ಗುಂ, ನಿಮಿರ್ಗುಂ ಎಂಬಂತೆ.

ದೀರ್ಘಾದಿಗೆ ಶಿಥಿಲತ್ವಮಿಲ್ಲ - ಆರ್ದಂ, ಸಾರ್ದಂ, ಪಾರ್ದಂ, ಸೋರ್ದಂ, ನೇರ್ದಂ ಎಂಬಂತೆ.

**ಸೂತ್ರಂ ॥ ಬರ್ದಿಲಂ ಸಗ್ಗಕ್ಕೆ ಪೆಸ ।**
**ಗರ್ದುಗೆಸೆವಮರ್ದಮರ್ದುವಳ್ಳಿ ಕಂಪಲರ್ದುದೆನ ॥**
**ಲ್ಕೆರ್ದೆವಾಯದಿರ್ಮುತ್ತೆ ಪೊದ ।**
**ಟೆರ್ದೆಯೆಂಬಿವು ಸಹಜಶಿಥಿಲವೃತ್ತಿಯನಾಳ್ಗುಂ ॥ ೪೫ ॥**

**ಟೀಕೆ-** ಬರ್ದಿಲಂ = ಬರ್ದಿಲಮೆಂದು, ಸಗ್ಗಕ್ಕೆ = ಸ್ವರ್ಗಕ್ಕೆ, ಪೆಸರ್ = ಹೆಸರ್; ಗರ್ದುಗು = ಗರ್ದುಗು ಎಂದು, ಎಸೆವ = ಒಪ್ಪುವ, [ಅಮರ್ದು- ಅಮರ್ದು ಎಂದು], ಅಮರ್ದುವಳ್ಳಿ = ಅಮರ್ದುವಳ್ಳಿಯೆಂದು, ಕಂಪಲರ್ದುದು= ಕಂಪಲರ್ದುದು ಎಂದು, ಎನಲ್ಕೆ = ಪೇೞಲ್ಕೆ, ಎರ್ದೆವಾಯ್ = ಎರ್ದೆವಾಯೆಂದು, ಅದಿರ್ಮುತ್ತೆ = ಅದಿರ್ಮುತ್ತೆಯೆಂದು, ಪೊದಟ್ದ = ಪ್ರಸಿದ್ಧಿವಡೆದ, ಎರ್ದೆ = ಎರ್ದೆಯೆಂದು, ಎಂಬಿವು = ಎಂಬೀ ಶಬ್ದಂಗಳ್, ಸಹಜ ಶಿಥಿಲವೃತ್ತಿಯಂ = ಸಹಜವಾದ ಶಿಥಿಲದ ವೃತ್ತಿಯಂ, ಆಳ್ಗುಂ = ತಾಳ್ವುವು.

**ವೃತ್ತಿ -** ಇದರ್ಕಿದೆ ವೃತ್ತಿ.

**ಸೂತ್ರಂ॥ ನರವುಂ ನೆರವುಂ ದೇವರ ।**
**ಬರವುಂ ತೆರವುಂ ನೆಗಟ್ತೆಯೆಟ್ತರವುಂ ಸಂ ॥**
**ಚರಿಸುವ ನೊಳವುಂ ತಾಮರೆ ।**
**ಬರ ಮತದಿಂದಂತ್ಯವರ್ಣಲೋಪಮನಾಳ್ಗುಂ ॥ ೪೬ ॥**

೧. (ತೆರಳ್ವಂ ಪೊರಳ್ವಂ ಎಂಬಂತೆ ಕೆಲವೆಡೆಯೊಳಶಿಥಿಲತ್ವಂ)

**ಟೀಕೆ** - ನರವುಂ = ನರವು ಎಂಬ ಶಬ್ದಮುಂ, ನೆರವುಂ = ನೆರವು ಎಂಬ ಶಬ್ದಮುಂ, ದೇವರ ಬರವುಂ = ದೇವರ ಬರವು ಎಂಬ ಶಬ್ದಮುಂ, ತೆರವುಂ = ತೆರವು ಎಂಬ ಶಬ್ದಮುಂ, ನೆಗಟ್ತೆಯ = ಪ್ರಸಿದ್ಧಿಯ, ಎಟ್ತಿರವುಂ - ಎಟ್ತಿರವು ಎಂಬ ಶಬ್ದಮುಂ, ಸಂಚರಿಸುವ ನೊಳವುಂ = ಸಂಚಾರವ ಮಾಳ್ಪ ನೊಳವು ಎಂಬ ಶಬ್ದಮುಂ, ತಾಂ, ಅರೆಬರ = ಕೆಲಂಬರ, ಮತದಿಂದೆ, ಅಂತ್ಯ = ಕಡೆಯಣ, ವರ್ಣ = ಅಕ್ಷರದ, ಲೋಪಮಂ = ಅದರ್ಶನಮಂ, ಆಳ್ಗುಂ = ತಾಳ್ಗುಂ.

**ವೃತ್ತಿ** - ಈ ಪದಂಗಳ ಕಡೆಯ ವಕಾರಕ್ಕೆ ವಿಕಲ್ಪದಿಂ ಲೋಪಮುಂಟು.

**ಪ್ರಯೋಗಂ** -

ನರವು = ನರಂ; ನೆರಂ, ಬರಂ, ಎಟ್ತಿರಂ, ನೊಳಂ ಎಂದಱಿವುದು.

**ಸೂತ್ರಂ ॥ ಪುದಿಗುಂ ನಿರ್ಧಾರಣದ ।**
**ಲ್ಲದೆಯೆಂಬ ದೆಕಾರದೆಡೆಗೆ ಪಿರಿದುಂ ಲೋಪಂ ॥**
**ಪುದಿಯದು ಲೋಪಂ ಪ್ರತಿಷೇ ।**
**ಧದೊಳಲ್ಲದುವೆಂಬ ಪದಮನಲ್ತೆನಲಕ್ಕುಂ ॥ ೪೭ ॥**

**ಟೀಕೆ** - ನಿರ್ಧಾರಣದ = ನಿರ್ಧಾರಣಾರ್ಥದ, ಅಲ್ಲದೆಯೆಂಬ ದೆಕಾರದ = ಅಲ್ಲದೆ ಎಂದು ಪೇಳ್ವ ದೆಕಾರದ, ಎಡೆಗೆ = ಸ್ಥಾನಕ್ಕೆ, ಪಿರಿದುಂ = ವಿಶೇಷವಾಗಿಯುಂ, ಲೋಪಂ = ಅದರ್ಶನಂ, ಪುದಿಗುಂ = ಪ್ರವೇಶವಾಗುವುದು; ಅಲ್ಲದು ಎಂಬುದಱ ದುಕಾರಕ್ಕೆ, ಪ್ರತಿಷೇಧದೊಳ್ = ಪ್ರತಿಷೇಧದಲ್ಲಿ, ಲೋಪಂ = ಅದರ್ಶನಂ, ಪುದಿಯದು = ಪ್ರವೇಶವಾಗದು; ಅಲ್ಲದುವೆಂಬ ಪದಮಂ = ಅಲ್ಲದು ಎಂದು ಪೇಳ್ವ ಪದವಂ, ಅಲ್ತೆನಲ್ = ಅಲ್ತು ಎಂದು ಹೇಟಿಲ್, ಅಕ್ಕುಂ = ಅಪ್ಪುದು.

**ವೃತ್ತಿ** - ನಿರ್ಧಾರಣಾರ್ಥಮಂ ಪೇಳ್ವ ಅಲ್ಲದೆಯೆಂಬ ಶಬ್ದದ ದೆಕಾರಕ್ಕೆ ವಿಕಲ್ಪದಿಂ ಲೋಪಮುಂಟು; ಅಲ್ಲದುವೆಂಬ ಪ್ರತಿಷೇಧದೊಳ್ ದುಕಾರಕ್ಕೆ ಲೋಪಮಾಗ [ ಲ್ಲೆ ]ನಲಾಗದು. ಅಲ್ಲದು ಎಂಬುದನಲ್ತೆಂದು ವಿಕಲ್ಪದಿನೆನಲಕ್ಕುಂ; ಅದರ್ಕೆ ಲಿಂಗವಚನ ವ್ಯವಸ್ಥೆಯಿಲ್ಲ.

**ಪ್ರಯೋಗಂ** -

ದೆಕಾರಲೋಪಕ್ಕೆ - ಗೊರವನಲ್ಲದೆ ಪೊಗಟಿನೆಂಬಲ್ಲಿ, ಗೊರವನಲ್ಲ ಪೊಗಟಿನೆಂದುಂಟು.

ಪ್ರತಿಷೇಧದೊಳ್ ಲಿಂಗತ್ರಯಕ್ಕೆ - ಅವನಲ್ತು, ಅವಳಲ್ತು, ಅದಲ್ತು.

ವಚನತ್ರಯಕ್ಕೆ -

ಉ॥ ಮಾ॥ ಒರ್ವನೆ ಗಂಡನಲ್ತೆ ಜಗತೀತಳದೊಳ್. . . ೧

ಕಂ॥ ಆ ಇರ್ವರ್ ತೋಳ್ಗಳಲ್ತೆ ನೃಪತಿಗೆ ರಣದೊಳ್ . . . ೨

ಕಂ॥ ... ತೇಜೋಧಿಕ ಕವಿ
ನಿಳಯದೊಳೀಷತ್ಪ್ರಭರ್ ಮಹಾಪ್ರಭರಲ್ತೇ ೩

**ಸೂತ್ರಂ ॥ ಯ ರ ಲ ಣ ನ ಳ ಱ ೞ ವರ್ಣೋ ।**
**ತ್ಕರಮೆ ವಲಂ ಪದದ ಕಡೆಯೊಳಸ್ವರವಿಧಿಯಂ ॥**
**ಪಿರಿದುಂ ತಾಳ್ದುಗುಮಿವನಱ ।**
**ವರೆ ಕನ್ನಡಗಬ್ಬದೊಳ್ ತೊಡಂಕದೆ ಸಲ್ವರ್ ॥ ೪೮ ॥**

**ಟೀಕೆ** - ಯ ರ ಲ ಣ ನ ಳ ಱ ೞ = ಯಕಾರ, ರೇಫ, ಲಕಾರ, ಣಕಾರ, ನಕಾರ, ಳಕಾರ, ಱಕಾರ, ೞಕಾರಂಗಳೆಂಬ, ವರ್ಣ = ಅಕ್ಷರಂಗಳ, ಉತ್ಕರಮೆ = ಹೆಚ್ಚಿಗೆಯೆ, ವಲಂ = ನಿಶ್ಚಯವಾಗಿ, ಪದದ = ಪದಂಗಳ, ಕಡೆಯೊಳ್ = ಅಂತ್ಯದಲ್ಲಿ, ಅಸ್ವರವಿಧಿಯಂ = ವ್ಯಂಜನವಿಧಿಯಂ, ಪಿರಿದುಂ = ಬಹುಳಮಾಗಿಯುಂ, ತಾಳ್ದುಗುಂ = ಧರಿಸುವುದು; ಇವಂ = ಈ ವ್ಯಂಜನಾಂತ ಶಬ್ದಂಗಳಂ, ಅಱುವರೆ = ತಿಳಿವರೆ, ಕನ್ನಡ ಗಬ್ಬದೊಳ್ = ಕರ್ಣಾಟಕ ಕಾವ್ಯಂಗಳಲ್ಲಿ, ತೊಡಂಕದೆ = ತೊಡಕಿಲ್ಲದೆ, ಸಲ್ವರ್ = ಸಲುವಳಿಯಾಗಿರ್ಪರ್.

**ವೃತ್ತಿ** – ಯಕಾರ ರೇಫ ಲಕಾರ ಣಕಾರ ನಕಾರ ಳಕಾರ ಱಕಾರ ೞಕಾರಂಗಳ್ ಕನ್ನಡದೊಳ್ ಪಿರಿದುಂ ವ್ಯಂಜನಾಂತಂಗಳಾದ ಪದಂಗಳಾಗಿರ್ಪುವು; ಇವನಱಿದು ಪ್ರಯೋಗಿಸುವರ್ಗೆ ಕವಿತ್ವದೊಳ್ ತೊಡಂಕಿಲ್ಲ.

**ಪ್ರಯೋಗಂ** –

ಯಕಾರಕ್ಕೆ - ಕೆಯ್, ಮೆಯ್, ನೆಯ್, ಕೊಯ್, ಪೊಯ್, ಪಾಯ್, ಸಾಯ್, ಬಾಯ್, ಬಯ್.

ರೇಫೆಗೆ - ನಾರ್, ಬೇರ್, ತೇರ್, ಬರ್, ತೆಮರ್, ಬೆಮರ್, ಉಸಿರ್, ಮೊಸರ್, ತಳಿರ್, ಕುಳಿರ್.

ಲಕಾರಕ್ಕೆ - ಪಾಲ್, ಕೇಲ್, ಕೋಲ್, ಸಾಲ್, ನೂಲ್, ಕಲ್, ನೆಲ್, ಬಿಲ್, ಕವಲ್, ಅವಲ್, ತಂದಲ್.

ಣಕಾರಕ್ಕೆ - ಪವಣ್, ನಾಣ್, ಜಾಣ್, ಮಾಣ್, ಗೇಣ್, ಕಣ್, ಮಣ್, ಪೂಣ್, ಪುಣ್.

ನಕಾರಕ್ಕೆ - ಪೊನ್, ಬೆನ್, ಏನ್, ಜೇನ್, ಸೀನ್, ಈನ್, ಬಾನ್, ಪೇನ್.

ಳಕಾರಕ್ಕೆ - ಒಳ್, ಬೆಳ್, ತಳ್, ಕಳ್, ಮಿದುಳ್, ಕರುಳ್, ಕುರುಳ್, ತಿರುಳ್, ಮುಗುಳ್.

ಱಕಾರಕ್ಕೆ - ಬಸಿಱ್, ಕೆಸಱ್, ಪೆಸಱ್, ನೇಸಱ್, ಎಟ್ಟಱ್, ಪೊಱವಾಱ್.

ೞಕ್ಕೆ - ಪೋೞ್, ಬೀೞ್, ತೇೞ್, ಬಾೞ್, ಎಸೞ್, ಅಗೞ್, ನೆಗೞ್, ಪೊಗೞ್, ತೆಗೞ್.

ಪಿರಿದುಮೆಂಬುದಱಿಂ ಕೆಲವಱೊಳ್ ವ್ಯಂಜನಮಿಲ್ಲ; ಅವಾವುವೆಂದೊಡೆ- ಕರು, ತಣು, ಅನು, ಕೞು, ತುೞು, ಪೞು, ಪುೞು - ಇವು ಮೊದಲಾದುವು.

**ಸೂತ್ರಂ ॥ ಎರಡುಂ ಪಲವುಂ ವರ್ಣಂ ।**
**ಪರಸ್ಪರಂ ಕೂಡುವಂದಮದು ಸಂಧಿ ವಲಂ ॥**
**ಸ್ವರರಹಿತವ್ಯಂಜನಮವು ।**
**ಪರವರ್ಣಮನೈದುತಿರ್ಪುವಾ ಸಂಹಿತೆಯೊಳ್ ॥ ೪೯ ॥**

**ಟೀಕೆ** – ಎರಡುಂ = ಎರಡಕ್ಷರಂಗಳುಂ, ಪಲವುಂ = ಹಲವಕ್ಷರಂಗಳುಂ, ಪರಸ್ಪರಂ = ಅನ್ಯೋನ್ಯವಾಗಿ, ಕೂಡುವಂದಂ= ಸಂಯೋಗವಾಗುವಂದಂ, ಅದು, ಸಂಧಿ = ಸಂಧಿಯೆನಿಪುದು, ವಲಂ = ನಿಶ್ಚಯಂ; ಆ ಸಂಹಿತೆಯೊಳ್ = ಆ ಸಂಧಿಯಲ್ಲಿ, ಸ್ವರರಹಿತ = ಸ್ವರಹೀನವಾದ, ವ್ಯಂಜನಂ = ವ್ಯಂಜನಾಕ್ಷರಂ, ಅವು, ಪರವರ್ಣಮಂ =ಮುಂದಣಕ್ಷರವಂ, ಅಯ್ದುತೆ ಇರ್ಪುವು = ಕೂಡುತ್ತಿರ್ಪುವು.

ವೃತ್ತಿ - ಎರಡಕ್ಕರಂ ಮೇಣ್ಪಲವಕ್ಕರಂ ತಮ್ಮೊಳನ್ಯೋನ್ಯಮಾಗಿ ಕೂಡುವುದು ಸಂಧಿಯೆನಿಸುಗುಂ; ಆ ಸಂಧಿಯಲ್ಲಿ ಸ್ವರರಹಿತ ವ್ಯಂಜನಂಗಳ್ ಮುಂದಣಕ್ಕರಮನ್ನೆದುವುವು.

**ಪ್ರಯೋಗಂ -**

ಸ್ವರಯುಕ್ತ ವ್ಯಂಜನಕ್ಕೆ - ಕೂರ್ತು ಈವಂ = ಕೂರ್ತೀವಂ; ಎನ್ನ ಅರಸಂ = ಎನ್ನರಸಂ; ಮುನ್ನೆ ಇಱುವಂ = ಮುನ್ನಿಱುವಂ.

ಸ್ವರರಹಿತ ವ್ಯಂಜನಕ್ಕೆ - ಜಾಣ್ ಉಂಟು = ಜಾಣುಂಟು, ಕುರುಳ್ ಕೊಂಕಾಯ್ತು = ಕುರುಳ್ಕೊಂಕಾಯ್ತು.

**ಸೂತ್ರಂ ॥ ಪದಮಧ್ಯಂ ಪದದಂತ್ಯಂ ।**
**ವಿದಗ್ಧರಿಂ ಸಂಧಿವಿಷಯಮೆರಡಕ್ಕುಮಿಳಾ ॥**
**ವಿದಿತಪ್ರಕೃತಿಪ್ರತ್ಯಯ ।**
**ಮೊಧವಿದ ಪದಯುಗದ ಬೆರಕೆ ಬೇಡಿರ್ದುದಱಿಂ ॥ ೫೦ ॥**

ಟೀಕೆ - ಇಳಾವಿದಿತಪ್ರಕೃತಿಪ್ರತ್ಯಯಂ = ಭೂಮಿಯಲ್ಲಿ ಪ್ರಸಿದ್ಧವಾದ ಪ್ರಕೃತಿಪ್ರತ್ಯಯಂಗಳ್, ಒದವಿದ ಪದಯುಗದ=ಸೇರುವ ಪದಂಗಳೆರಡಱ, ಬೆರಕೆ= ಸಂಯೋಗಂ, ಬೇಡಿದುದಱಿಂ = ಬೇಕಾಗಿರ್ದುದಱಿಂದೆ, ಪದಮಧ್ಯಂ = ಪದಮಧ್ಯಸಂಧಿಯೆಂದು, ಪದದಂತ್ಯಂ = ಪದಾಂತಸಂಧಿಯೆಂದು, ವಿದಗ್ಧರಿಂ = ವಿದ್ವಾಂಸರಿಂದೆ, ಸಂಧಿವಿಷಯಂ = ಸಂಧಿ ಎರಡು ತೆಱಂ, ಅಕ್ಕುಂ = ಅಪ್ಪುದು.

ವೃತ್ತಿ - ಪ್ರಕೃತಿ ಪ್ರತ್ಯಯಂಗಳ ಮಧ್ಯಮುಂ, ಪೂರ್ವಪದದ ಕಡೆಯುಂ ಪದಪದದ ಮೊದಲುಂ ಕೂಡೆ, ಪದಮಧ್ಯಸಂಧಿ, ಪದಾಂತಸಂಧಿ ಎಂದು ಸಂಧಿವಿಷಯಮಿರ್ತೆಱಂ.

**ಪ್ರಯೋಗಂ -**

ಪದಮಧ್ಯಸಂಧಿಗೆ, ನಾಮವಿಭಕ್ತಿಯಲ್ಲಿ - ಮಾತು + ಅಮ್ = ಮಾತಂ; ಮಾತು + ಇಮ್ = ಮಾತಿಂ; ಮಾತು + ಇಂಗೆ = ಮಾತಿಂಗೆ; ಮಾತಿನ + ಅತ್ತಣಿಂ = ಮಾತಿನತ್ತಣಿಂ; ಮಾತು + ಇನ = ಮಾತಿನ; ಮಾತಿನ + ಒಳ್ = ಮಾತಿನೊಳ್.

ಧಾತು (ಆಖ್ಯಾತ) ವಿಭಕ್ತಿಯಲ್ಲಿ - ನುಡಿದ + ಅಮ್ = ನುಡಿದಂ ; ನುಡಿದ + ಅರ್ = ನುಡಿದರ್; ನುಡಿದ + ಅಯ್ = ನುಡಿದಯ್; ನುಡಿದ + ಇರ್ = ನುಡಿದಿರ್; ನುಡಿದ + ಎನ್ = ನುಡಿದೆನ್; ನುಡಿದ + ಎವು = ನುಡಿದೆವು.

ಪದಾಂತಸಂಧಿಗೆ ನಾಮಪದಂಗಳಲ್ಲಿ - ಅವನ + ಆಳ್ತನಂ = ಅವನಾಳ್ತನಂ; ಕಾಮನ + ಅಂಡಲೆ = ಕಾಮನಂಡಲೆ.

ಕ್ರಿಯಾಪದಂ ಬೆರಕೆಯಾದಲ್ಲಿ - ನುಡಿದರ್ + ಅವರ್ = ನುಡಿದರವರ್; ಬೆಸಸಿದೆವು + ಒಳ್ಪಂ = ಬೆಸಸಿದೆವೊಳ್ಪಂ ಇಂತಱುವುದು.

**ಸೂತ್ರಂ ॥ ಇದು ಪೂರ್ವಪ್ರಕರಣಮಿಂ ।**
**ತಿದಱೊಳ್ ಸಾಕಲ್ಯಸಂಜ್ಞೆ ಪೇೞವೆನಲ್ಬೇ ॥**
**ಡುದಿತ ಪ್ರಕರಣಗಣ ಸೂ ।**
**ತ್ರದಿಷ್ಟದಿಂ ಸಂಜ್ಞೆಯೊಡನೆ ಪೇೞಲ್ಪಡುಗುಂ ॥ ೫೧ ॥**

**ಟೀಕೆ** - ಇದು, ಪೂರ್ವಪ್ರಕರಣಂ = ಮೊದಲ ಪ್ರಕರಣಂ; ಇಂತು = ಹೀಂಗೆ, ಇದಱೊಳ್ = ಈ ಪ್ರಕರಣದಲ್ಲಿ, ಸಾಕಲ್ಯಸಂಜ್ಞೆ = ಸಮಸ್ತಸಂಜ್ಞೆಗಳ್, ಪೇೞವೆನಲ್ವೇಡ = ಹೇೞುತಿಲ್ಲೆನಬೇಡ; ಉದಿತ ಪ್ರಕರಣ ಗಣ ಸೂತ್ರದ = ಉಂಟಾಗಲ್ಪಟ್ಟ ಪ್ರಕರಣದ ಸಮೂಹದ ಸೂತ್ರಂಗಳ, ಇಷ್ಟದಿಂ = ಇಷ್ಟದಿಂದೆ, ಸಂಜ್ಞೆಯೊಡನೆ = ಸಂಜ್ಞೆಯ ಕೂಡೆ, ಪೇೞಲ್ಪಡುಗುಂ = ಹೇೞಲ್ಪಡುವುವು.

**ವೃತ್ತಿ** - ಸಂಜ್ಞಾಪ್ರಕರಣಂ ಸಂಪೂರ್ಣಂ.

# ಮೊದಲನೆಯ ಸಂಧಿ

## ಸಂಧಿಪ್ರಕರಣಂ

### ೧. ಸ್ವರಸಂಧಿ

**ಸೂತ್ರಂ ॥ ಸ್ವರಮಿದಿರೊಳಿರೆ ವಿಭಕ್ತಿ ।**
**ಸ್ವರಕಂ ಪ್ರಕೃತಿಸ್ವರಕ್ಕಮಕ್ಕುಂ ಲೋಪಂ ॥**
**ವರಸಂಸ್ಕೃತ ಕರ್ಣಾಟಕ ।**
**ಮೆರಡಱೊಳಂ ನಾಮರೂಢಿಯಱಿಯದ ಪಕ್ಷಂ ॥ ೫೨ ॥**

**ಟೀಕೆ** - ವರ = ಶ್ರೇಷ್ಠವಾದ, ಸಂಸ್ಕೃತಕರ್ಣಾಟಕಂ = ಸಂಸ್ಕೃತಕರ್ಣಾಟಕಂಗಳೆಂಬ, ಎರಡಱೊಳಂ = ಎರಡು ಶಬ್ದದಲ್ಲಿಯುಂ, ನಾಮರೂಢಿ = ನಾಮಪ್ರಸಿದ್ಧಿಯು, ಅಱಿಯದ ಪಕ್ಷಂ = ಕೆಡದ ಪಕ್ಷದಲ್ಲಿ, ಸ್ವರಂ = ಸ್ವರಾಕ್ಷರಂ, ಇದಿರೊಳ್ = ಮುಂದುಗಡೆಯಲ್ಲಿ , ಇರೆ, ವಿಭಕ್ತಿಸ್ವರಕಂ = ವಿಭಕ್ತಿಸ್ವರಕ್ಕೆಯುಂ, ಪ್ರಕೃತಿಸ್ವರಕ್ಕಂ = ಪ್ರಕೃತಿಸ್ವರಕ್ಕೆಯುಂ, ಲೋಪಂ = ಅದರ್ಶನಂ, ಅಕ್ಕುಂ = ಅಪ್ಪುದು.

**ವೃತ್ತಿ** – ಸ್ವರಂ ಪರಮಾಗೆ, ಸಂಸ್ಕೃತದ ಕನ್ನಡದ ವಿಭಕ್ತಿಸ್ವರಕ್ಕಂ ಪ್ರಕೃತಿಯ ಸಹಜಸ್ವರಕ್ಕಂ, ನಾಮಪ್ರಸಿದ್ಧಿ ಕೆಡದ ಪಕ್ಷಂ, ಲೋಪಮಕ್ಕುಂ.

**ಪ್ರಯೋಗಂ** –

ಸಂಸ್ಕೃತಪ್ರಕೃತಿಯ ವಿಭಕ್ತಿ ಸ್ವರಲೋಪಕ್ಕೆ - ಕ್ರಮದೆ + ಆಯ್ತು = ಕ್ರಮದಾಯ್ತು; ಇಂದ್ರಂಗೆ + ಐರಾವತಂ = ಇಂದ್ರಂಗೈರಾವತಂ; ಗಿರಿಯತ್ತಣಿಂದೆ + ಇೞಿದಂ = ಗಿರಿಯತ್ತಣಿಂದಿೞಿದಂ; ಗೃಹದಲ್ಲಿ + ಇರ್ದಂ = ಗೃಹದಲ್ಲಿರ್ದಂ; ಈಶ್ವರನ + ಒಲವು = ಈಶ್ವರನೊಲವು.

ವಿಭಕ್ತ್ಯಾದಿ ಕೂಡುವೆಡೆ ಸಂಸ್ಕೃತ ಪ್ರಕೃತಿಸ್ವರಲೋಪಕ್ಕೆ - ಬುಧ + ಅರ್ = ಬುಧರ್; ಉದ್ಧತ + ಅರ್ = ಉದ್ಧತರ್; ದೇವ + ಎಂಬರ್ = ದೇವೆಂಬರ್; ರಾಗ + ಇಸು = ರಾಗಿಸು; ಭಂಗ + ಇಸು = ಭಂಗಿಸು; ಭಾವ + ಇಸು = ಭಾವಿಸು - ಇಂತುೞಿದುವನಱಿವುದು.

ಕರ್ಣಾಟಕ ಪ್ರಕೃತಿಯ ವಿಭಕ್ತಿಸ್ವರಲೋಪಕ್ಕೆ - ನೆಲದಿಂದೆ + ಉಣ್ಬಂ = ನೆಲದಿಂದುಣ್ಬಂ; ಲೇಸಿಂಗೆ + ಒಡೆಯಂ = ಲೇಸಿಂಗೊಡೆಯಂ; ಮರದತ್ತಣಿಂದೆ + ಇೞಿದಂ = ಮರದತ್ತಣಿಂದಿೞಿದಂ; ಚಲದ + ಆಣ್ಮಂ = ಚಲದಾಣ್ಮಂ; ಪೊಲದಲ್ಲಿ + ಇರ್ದಂ = ಪೊಲದಲ್ಲಿರ್ದಂ; ನೆಲದೆ + ಎಟ್ಟಿಂದಂ = ನೆಲದೆಟ್ಟಿಂದಂ.

ಆಖ್ಯಾತವಿಭಕ್ತಿಸ್ವರ ಲೋಪಕ್ಕೆ - ಮಾಡಿದೆವು + ಒಳ್ಪಂ = ಮಾಡಿದೆವೊಳ್ಪಂ.

ಕ್ರಿಯಾವಿಭಕ್ತಿಯಾದೇಶಮಾದ ಸ್ವರದ ಲೋಪಕ್ಕೆ - ಕೂಡಿ + ಇರ್ದಂ = ಕೂಡಿರ್ದಂ; ಪಸಿದು + ಉಣ್ಡಂ = ಪಸಿದುಣ್ಡಂ.

ಕರ್ಣಾಟಕ ಪ್ರಕೃತಿಸ್ವರ ಲೋಪಕ್ಕೆ - ಅಕಾರಕ್ಕೆ - ಅರಸ + ಆಳ್ = ಅರಸಾಳ್; ಅಚ್ಚ + ಆನೆ = ಅಚ್ಚಾನೆ; ಜೀಯ + ಎಂಬಂ = ಜೀಯೆಂಬಂ; ಬಡಬಡ + ಆದಂ = ಬಡಬಡಾದಂ; ಸಾವಂತ + ಓಲಗಂ = ಸಾವಂತೋಲಗಂ.

ಇಕಾರಕ್ಕೆ - ದಾಟಿಟ್ಟಂ, ಹಂದಿಟ್ಟಂ, ಸವಡಿಟ್ಟಂ.

ಉಕಾರಕ್ಕೆ - ಸುತ್ತೋಲೆ, ಹತ್ತೆಂಟು, ಲೇಸೆಲ್ಲಂ, ಸೊವಡೊಂದು.

ಎಕಾರಕ್ಕೆ - ಸೇಸಿಕ್ಕಿದಂ, ಮುಡಿಗಿಕ್ಕಿದೆಂ, ಮತ್ತೆಲ್ಲಂ, ಮುನ್ನಿಱಿವಂ.

ನಾಮಂ ಕಿಡುವೊಡೆ ಸಂಸ್ಕೃತ ಕರ್ಣಾಟಕದ ಪ್ರಕೃತಿಸ್ವರಕ್ಕೆ ಲೋಪಮಿಲ್ಲ - ಪಟು + ಏಕವಾಕ್ಯಂ = ಪಟುವೇಕವಾಕ್ಯಂ; ವಿಧು + ಇದು = ವಿಧುವಿದು; ಮಡು+ಇದು = ಮಡುವಿದು; ಕುಡು + ಇಲ್ಲ = ಕುಡುವಿಲ್ಲ.

**ಸೂತ್ರಂ ॥ ಆತ್ವದಿನಿವರ್ಣದಿಂ ಮ ।**
**ತ್ತೋತ್ವದಿನೈತ್ವದಿನೆವರ್ಣದಿಂ ಮುಂದಕ್ಕುಂ ॥**
**ಯತ್ವಮದವಧಾರಣೆ ಪರ ।**
**ಮತ್ವಂ ಪಿಂತಾಗೆ ಷಷ್ಠಿನಿಯಮದೆ ಯತ್ವಂ ॥ ೫೩ ॥**

**ಟೀಕೆ** - ಆ ಸಂಹಿತೆಯೊಳೆಂಬುದನುವರ್ತನೆ; ಆತ್ವದಿಂ = ಆಕಾರದಿಂದೆ, ಇ ವರ್ಣದಿಂ = ಇ ಈ ಎಂಬ ಸವರ್ಣದಿಂದೆ, ಮತ್ತೆ = ಬಳಿಕಂ, ಓತ್ವದಿಂ = ಓಕಾರದಿಂದೆ, ಐತ್ವದಿಂ = ಐ ಕಾರದಿಂದೆ, ಎವರ್ಣದಿಂ = ಎ ಏ ಎಂಬ ಸವರ್ಣದಿಂ, ಮುಂದೆ = ಮುಂದುಗಡೆಯಲ್ಲಿ, ಯತ್ವಂ = ಯಕಾರಂ, ಅದು, ಅಕ್ಕುಂ = ಅಪ್ಪುದು; ಅವಧಾರಣೆ = ನಿರ್ಧಾರಣೆಯ ಎಕಾರಂ, ಪರಂ = ಮುಂದಣದು, ಅತ್ವಂ = ಅಕಾರಂ, ಪಿಂತು = ಹಿಂದು, ಆಗೆ, ಷಷ್ಠಿ = ಷಷ್ಠಿಯೆಂಬ ವಿಭಕ್ತಿಯ, ನಿಯಮದೆ = ಕಟ್ಟನಿಂದೆ, ಯತ್ವಂ = ಯಕಾರಂ ಅಪ್ಪುದು.

**ವೃತ್ತಿ** - ಆ ಇ ಈ ಓ ಐ ಎ ಏ ಎಂಬಿವರ್ಕೆ ಸ್ವರಂ ಪರಮಾಗೆ, ನಡುವೆ ಯತ್ವಮಕ್ಕುಂ; ಷಷ್ಠಿಯಕಾರಂ ಪೆಱಗಿರೆ, ಅವಧಾರಣೆಯೆಕಾರಂ ಪರದೊಳಿರೆ, ನಿಯಮದಿಂ ಯತ್ವಮಕ್ಕುಂ.

**ಪ್ರಯೋಗಂ -**

ಆ ಕಾರಕ್ಕೆ -

ಕಂ ॥ ಆಯಿರ್ದ ಮಾಱ್ಕೆಯೊಳೆ ಪರ
ಮಾಯುಷ್ಯಾಂತಂಬರಂ ... ೧
(ಆದಿಪುರಾಣಂ ೨ - ೫೩)

ಮಲ್ಲಿಕಾಮಾಲೆ ॥ ಕಾಯಲುಂ ಬಲಗರ್ವದಿಂ ನೆಲನೆಲ್ಲಮಂ . . . ೨
(ಕಾವ್ಯಾವಲೋಕನಂ ೩-೫೮)

ಸಾಯಲೆ ವೇಡಿ ತಾನೀಯನೆ ಧರೆಯಂ ಗಾಂಗೇಯ ಕೇಳ್ ೩

ಇ ಕಾರಕ್ಕೆ -

ಮ ॥ ಸ್ರ ॥ ಕಲಿಯಾರ್ ನಿಷ್ಕಾಮಿಯಾವಂ ವಧುವನುವಶೆಯಾಗಲ್ ... ೪

ಮ ॥ ವಿ ॥ ಬಲಿಯಂ ಬೇಡುಗುಮೆಂದು ಕಟ್ಟಿದಲಗಂ ಕಿೞ್ತಿರ್ಪಿನಂ ... ೫

ಕಂ ॥ ... ಪಿಡಿಯೆಂದಸಿತಾಳಪತ್ರಮಂ ಯತಿ ಕೊಟ್ಟಂ ... ೬

ಈ ಕಾರಕ್ಕೆ -

ಸ್ರ ॥ ಈಯಲ್ಬಂದತ್ತು ಕಲ್ಪಾಂಘ್ರಿಪಮಭಿಮತಮಂ ... ೭
(ಆದಿಪುರಾಣಂ ೯-೧೩೨, ಕಾವ್ಯಾವಲೋಕನಂ ೧೮೭)

ಕಂ ॥ ಶ್ರೀಯಂ ಪೂರ್ವಾರ್ಜಿತ ಪು
ಣ್ಯಾಯತ್ತದಿನಜಿಸಿ ಕಾಣ್ಬವೋಲ್ ಕಂಡಂ ... ೮

ಕಂ ॥ ಸ್ತ್ರೀಯೆಂಬನಾಥೆಯೆಂಬ
ನ್ಯಾಯದ ಕೊಲೆಯೆಂಬ ... ೯

(ಕಾವ್ಯಾವಲೋಕನಂ ೪೦)

ಓ ಕಾರಕ್ಕೆ -

ಕಂ ॥ ... ಅಮರಾಂ
ಗನೆಯರ್ ಜೋಯೆಂದು ಪಾಡಿದರ್ ಜೋಗುಳಮಂ ೧೦

ಕಂ ॥ ... ಅಬ್ರಹ್ಮಣ್ಯಂ
ಭೋಯೆನಲುಂ ಬ್ರಾಹ್ಮಣರವಿ
ಧಾಯೆನಲುಂ ಬಲ್ಲರಿಜುಯಲವರೆತ್ತಜುವರ್ ೧೧

(ಗದಾಯುದ್ಧಂ ೨-೧೬)

ಶ್ರೀಯಳ್ಕದ ಕುರುನಾಯಕರೊಕ್ಕಲೊಳೋಯೆನ
ಲೊರ್ವರುಮಿಲ್ಲಧಂತು ನೋಯಿಸಿದಂ (?) ... ೧೨

ತೋಯಲುಂ ಹಿಂಡಲುಂ ... ೧೩

ಐ ಕಾರಕ್ಕೆ -

ಥೈಯೆಂದಂ; ರೈಯೊದವಿತ್ತು

ಮ ॥ ವಿ ॥ ಒದೆದದ್ರಿಕ್ಷಿತಿಸಂಧಿ ಪತ್ತುವಿಡೆ ಭೈಭೈಯೆಂಬಿನಂ ಕಿಬ್ಬು ... ೧೪

ಎ ಕಾರಕ್ಕೆ -

ಮ ॥ ಸ್ರ ॥ ತೊಜೆಯಂ ಪಾಯ್ದೆತ್ತಿ ಬಂದಂ ಗಡ ಮಸಗಿ ಜರಾಸಂಧಭೂಪಂ ೧೫

ಕಂ ॥ ಪಸೆಯಿರ್ದಂ ಗರುಡವೇಗನ್ರುಪನಂದನೆಯೊಳ್ ೧೬

ಕಂ ॥ ... ನಡೆ ನಡೆಯೆಂದೇಂ ನಡೆದುದೊ
ಪಡೆ ಪಡೆದಚ್ಚರಿಯನಾ ಸುರಾಪಗೆವರೆಗಂ ॥ ೧೭

(ಕಾವ್ಯಾವಲೋಕನಂ ೨೯೪)

ಏ ಕಾರಕ್ಕೆ -

ತೇಯಿಸಿದಂ, ಮೇಯಿಸಿದಂ

ಮ ॥ ಸ್ರ ॥ ... ಭೋಂ
ಕನೆ ದೇವಸ್ತ್ರೀಯರಾರಾತ್ರಿಕಮನುಫೆಯುಫೇಯೆಂದು ತಂದೆತ್ತುತಿರ್ದರ್... ೧೮

ಅವಧಾರಣೆಗೆ -

ಕಂ ॥ ಆತನಯೆ ತೋರದೊಡೆಗಳಿ
ವಾತನ ನಿಡುದೋಳೆ ನಡೆಯುಮಾತನ ನಡೆ ದಲ್ ... ೧೯

(ಕಾವ್ಯಾವಲೋಕನಂ ೪೩)

ಅವಳಯೆ; ಅದಜಿಯೆ.

**ಸೂತ್ರಂ॥** **ಸದಮಳ ಸಂಸ್ಕೃತ ಕರ್ಣಾ ।**
**ಟದದಂತಪ್ರಕೃತಿಗಳ್ಗಿಸುಪ್ರತ್ಯಯಮಿಂ ॥**
**ತಿದಿರಾಗೆ ಯತ್ವಮನುಕೃತಿ ।**
**ಪದಕಂ ಮುಂದನುಕೃತಿಸ್ವರಂ ನಿಲೆ ಯತ್ವಂ ॥ ೫೪ ॥**

**ಟೀಕೆ -** ಸತ್ = ಲೇಸಾದ, ಅಮಳ = ನಿರ್ಮಲವಾದ, ಸಂಸ್ಕೃತ = ಸಂಸ್ಕೃತದ, ಕರ್ಣಾಟದ = ಕನ್ನಡದ, ಅದಂತಪ್ರಕೃತಿಗಳ್ಗೆ = ಅಕಾರಂತವಾದ ಪ್ರಕೃತಿಗಳ್ಗೆ, ಇಸುಪ್ರತ್ಯಯಂ = ಇಸು ಎಂಬ ಪ್ರತ್ಯಯಂ, ಇಂತು = ಹೀಂಗೆ, ಇದಿರಾಗೆ = ಪರಮಾಗೆ, ಯತ್ವಂ = ಯಕಾರವಪ್ಪುದು; ಅನುಕೃತಿಪದಕಂ = ಅನುಕರಣ ಪದಕ್ಕೆಯುಂ, ಮುಂದೆ = ಮುಂದುಗಡೆಯಲ್ಲಿ, ಅನುಕೃತಿಸ್ವರಂ = ಅನುಕರಣವಂ ಪೇಳ್ವ ಸ್ವರಂ, ನಿಲೆ = ನೆಲಸೆ, ಯತ್ವಂ = ಯಕಾರವಪ್ಪುದು.

**ವೃತ್ತಿ -** ಅಮಳತರ ಸಂಸ್ಕೃತ ಕರ್ಣಾಟದಕಾರಾಂತ ಪ್ರಕೃತಿಗಳ್ಗೆ ಇಸು ಪ್ರತ್ಯಯಂ ಪರಮಾಗೆ, ನಡುವೆ ಯತ್ವಮಕ್ಕುಂ; ಅದಂತಮಪ್ಪನುಕೃತಿಪದಕ್ಕೆ ಅನುಕೃತಿಸ್ವರಂ ಪರಮಾಗೆ, ಯತ್ವಂ.

**ಪ್ರಯೋಗಂ -**

ಸಂಸ್ಕೃತಶಬ್ದದಲ್ಲಿ - ಶುದ್ಧ + ಇಸಿದಂ = ಶುದ್ಧಯಿಸಿದಂ; ತಾರ + ಇಸಿದಂ = ತಾರಯಿಸಿದಂ; ನಿರ್ಣ (?) + ಇಸಿದಂ = ನಿರ್ಣಯಿಸಿದಂ; ಪೂರ + ಇಸಿದಂ = ಪೂರಯಿಸಿದಂ.

ಕನ್ನಡಶಬ್ದದಲ್ಲಿ - [ಕೋರ] + ಇಸಿದಂ = [ಕೋರ]ಯಿಸಿದಂ; ತೇರಯಿಸಿದಂ; ತೆಲ್ಲಯಿಸಿದಂ; ಮೇಳಯಿಸಿದಂ.

ಅನುಕೃತಿಸ್ವರಕ್ಕೆ -

ಕಂ ॥ ... ಪಟಿಪಟಿಯೆಂದಾಲಿಕಲ್ಗಳುದಿರ್ದುವು ನಭದಿಂ ॥ ೧

ಕಂ ॥ ... ಗುಟುಗುಟುಗಟಿ
ಗಟಿಯೆನುತುಂ ಪರಿವ ಪರಿವೊನಲ್ ಸೊಗಯಿಸುಗುಂ ॥ ೨

**ಸೂತ್ರಂ॥** **ಅವತರಿಸಿರ್ಕುಮುವರ್ಣದ ।**
**ಋವರ್ಣದೋತ್ವೌತ್ವದಗ್ರದೊಳ್ ಸ್ವರಮಿರೆ ವ ॥**
**ತ್ವವಿಧಾನಂ ಬಹುಳತೆ ಯ ।**
**ತ್ವ ವತ್ವದೊಳ್ ಸಂಸ್ಕೃತಕ್ಕೆ ತಾನಿಲ್ಲೆಂದುಂ ॥ ೫೫ ॥**

**ಟೀಕೆ -** ಉವರ್ಣದ = ಉ ಊ ಎಂಬ ಸವರ್ಣದ, ಋವರ್ಣದ = ಋ ೠ ಎಂಬ ಸವರ್ಣದ, ಓತ್ವೌತ್ವದ = ಓಕಾರ ಔ ಕಾರದ, ಅಗ್ರದೊಳ್ = ಮುಂದೆ, ಸ್ವರಂ = ಸ್ವರಾಕ್ಷರಂ, ಇರೆ,ವತ್ವವಿಧಾನಂ = ವಕಾರದ ವಿಧಾನಂ, ಅವತರಿಸಿರ್ಕುಂ = ಹುಟ್ಟಿರ್ಪುದು. ಸಂಸ್ಕೃತಕ್ಕೆ = ಸಂಸ್ಕೃತಶಬ್ದಕ್ಕೆ, ಯತ್ವ ವತ್ವದೊಳ್ = ಯತ್ವಸಂಧಿ ವತ್ವಸಂಧಿಗಳಲ್ಲಿ, ಬಹುಳತೆ = ಬಹುಳತ್ವಂ, ತಾಂ, ಎಂದುಂ = ಆವಾಗಳುಂ, ಇಲ್ಲ =ಉಂಟಾಗದು.

**ವೃತ್ತಿ -** ಉ ಊ ಋ ೠ ಓ ಔ ಎಂಬಿವರ್ಕೆ ಸ್ವರಂ ಪರಮಾಗೆ ನಡುವೆ ವತ್ವಂ; ಸಂಸ್ಕೃತದೊಳ್ ಯತ್ವ ವತ್ವಂಗಳ್ಗೆ ಬಹುಳತ್ವಮಿಲ್ಲ, ನಿತ್ಯಂ*.

* ವಿಚಾರಂ - ಕನ್ನಡ ಶಬ್ದದಲ್ಲಿ ಯತ್ವವತ್ವಸಂಧಿಗಳಲ್ಲಿ ಬಹುಳತ್ವಮುಂಟೆಂಬುದರ್ಥಂ. ಆತ್ವದಿನಿವರ್ಣದಿಂ ವುತ್ತ್ವೋತ್ವದಿನ್ನೈತ್ವದಿನೆವರ್ಣದಿಂ ಮುಂದಕ್ಕುಂ ಯತ್ವಂ (ಸೂ ।। ೫೩।।); ಉವರ್ಣದ ಋವರ್ಣದೋತ್ವೌತ್ವದಗ್ರದೊಳ್ ಸ್ವರಮಿರೆ ವತ್ವವಿಧಾನವೆಂಬ ಈ ಯತ್ವಸಂಧಿ ವತ್ವಸಂಧಿಗಳಲ್ಲಿ ವಿಚಾರಮುಂಟು; ಆತ್ವಮದೆಂತೆಂದೊಡೆ - ಶಬ್ದಾನುಶಾಸನದಲ್ಲಿ (೧ನೆಯ ಪಾದದ ೩೮ನೆಯ ಸೂತ್ರಂ)।। ಆತ ಓಷ್ಠ್ಯೇ (ಸ್ವರೇ ಪರೇ ಆಕಾರಸ್ಯ ವಗ್ಭವತಿ)।। ಎಂದುದಾಗಿ ಆಕಾರಕ್ಕೆ ಓಷ್ಠ್ಯಸ್ವರಂ ಪರಮಾಗೆ, ವತ್ವಸಂಧಿಯಾಗುವುದು - ಆ + ಉದಕಂ = ಆವುದಕಂ; ಆ + ಊರ್ = ಆವೂರ್; ಆವೂಟಂ, ಆವೊಲೆ, ಆವೋಲೆ - ಎಂಬಂತೆ ಓಷ್ಠ್ಯಗ್ರಹಣದಿಂ ಕಂಠೌಷ್ಠ್ಯಮುಂ ಸಂಗ್ರಹಿಸಲ್ಪಟ್ಟುದು.[೧]

**ಪ್ರಯೋಗಂ -**

ಉ ಕಾರಕ್ಕೆ -

ಚಂ ।। ಮಾ ।। ಕುಡುವುದು ಕೂರ್ಮೆಯಲ್ಲ ಕಲೆಯಿಲ್ಲದೆ ಮನ್ನಿಪ ಸೂಳೆಗೇನನಾ
ದೊಡಂ ... ೧

(ಅನಂತನಾಥಪುರಾಣಂ ೮-೫೫)

ಕಂ ।। ಮನುವಿನ ಮಾರ್ಗಂ ಸುರಗುರು
ವಿನಱಿವು ಪವಮಾನಸೂನುವೊಂದಾಯತಿ ಪೆಂ
ಪಿನೊಳೆಸೆವ ಕರ್ಣನೊರ್ನುಡಿ
ತನಗವು ನಿಜಮಾಗೆ ನೆಗಳ್ದನಾ ವಿಭುವಿಳೆಯೊಳ್ ।। ೨

(ಕಾವ್ಯಾವಲೋಕನಂ ೧೧೩)

ಊ ಕಾರಕ್ಕೆ -

ಉ ।। ಮಾ ।। ಪೂವಿನ ಬಿಲ್ಲ ಕೊಪ್ಪನೊದೆದೇಱಿಸಿ ತಾವರೆನೂಲ ನಾರಿಯಂ
ಜೇವೊಡೆಗೆಯ್ದು ... ೩

(ಮಲ್ಲಿನಾಥಪುರಾಣಂ ೧೪-೪೧)

ಕಂ ।। ... ಲಲಿತ
ಭ್ರೂವಂಗಜನಿಕ್ಷುಚಾಪಸಹಚರಮಕ್ಕುಂ ।। ೪

ಋ ಕಾರಕ್ಕೆ -

ಕಂ ।। ಹೋತೃವೆನಾನಧ್ವರಿಯಯ್
ಭ್ರಾತೃವೆ ನೀನುಱುದ ಋತ್ವಿಜರ್ ... ೫

(ಕಾವ್ಯಾವಲೋಕನಂ ೧೭೭)

ಮ ।। ಸ್ರ ।। ... ಕರ್ತೃವಾದಂದಿನಿತತಿಶಯಮಂ ತಾಳ್ವುದೇ ಕನ್ನೆಯಿಂದಂ।। ೬

(ಕಾವ್ಯಾವಲೋಕನಂ ೪೨)

ೠ ಕಾರಕ್ಕೆ - ೠವೆಂದಂ; ೠವಿತ್ತಂ.

ಓ ಕಾರಕ್ಕೆ - ಗೋವಿನ ಹಿಂಡು; ಗೋವಂ (ಗೋ + ಅಂ); ಗೋವೀವಂ.

~~~~~~~~~~~~~~~~~~~~

೧. ಉ, ಊ = ಓಷ್ಠ್ಯಂಗಳ್; ಒ ಓ ಔ = ಕಂಠೌಷ್ಠ್ಯಂಗಳ್.
~~~~~~~~~~~~~~~~~~~~

ಔ ಕಾರಕ್ಕೆ - ನೌವನೇಱುದಂ; ಗೌವಂ ನೋಡಿದಂ; ಚೌವಿವಂ (?).

ಇ ಈ ಎಂಬಕ್ಕರಂಗಳನುಕರಿಸಿ ತೋಱುವಲ್ಲಿಯುಂ ನಡುವೆ ವತ್ವಂ - ಈವಿವು ಗ್ರಂಥಂಗಳ್; ಈವಿದು ಗ್ರಂಥಂ.

ಕನ್ನಡದೊಳ್ ಯತ್ವವತ್ವಂಗಳ್ಗೆ ಬಹುಳತೆಯಿಂ ಲೋಪಮುಂಟು - ಒತ್ತೆ + ಇಟ್ಟಂ = ಒತ್ತೆಯಿಟ್ಟಂ, ಒತ್ತಿಟ್ಟಂ.

ಕಂ ॥ ... ಒತ್ತಿ
ಟ್ಟಿರುಳೊರ್ವಳ ಕೆಯ್ತಕಂಜ ಪೊಱಮಟ್ಟಿರ್ದಂ ॥ ೭
(ಸೂಕ್ತಿಸುಧಾರ್ಣವಂ ೮-೪೪೯)

ತಗವೆ + ಅಪ್ಪೊಡೆ = ತಗವೆಯಪ್ಪೊಡೆ, ತಗವಪ್ಪೊಡೆ; ಮಾತು + ಎಲ್ಲಂ = ಮಾತುವೆಲ್ಲಂ, ಮಾತೆಲ್ಲಂ.

ಮಾತೆಲ್ಲಂ ಹೊಲೆಸೂರುಳ್... ೮

ಸೊವಡು + ಒಂದು = ಸೊವಡುವೊಂದು, ಸೊವಡೊಂದು.

ಸೊವಡೊಂದೊಯ್ಯನೆ ... ೯
(ಕಾವ್ಯಾವಲೋಕನಂ ೩೪)

ಸಂಸ್ಕೃತದ ನಿತ್ಯಕ್ಕೆ -

ಕಂ ॥ ನದಿಯೆಲ್ಲಂ ಸುರಸಿಂಧುವೆ . . . ೧೦

ಕಂ ॥ ವಿಧುವಿಲ್ಲದಿರುಳ್ ತನ್ನಯೆ ।
ವಧುವಿಲ್ಲದ ಲೀಲೆ ಮಧುರ ಮಧುವಿಲ್ಲದ ಪೂ ॥
ದಧಿಯಿಲ್ಲದುಣಿಸದೇವುದೊ ।
ಬುಧರಿಲ್ಲದ ಸಭೆ ಸರಸ್ವತೀಮುಖತಿಲಕಾ ॥ ೧೧
(ಕಾವ್ಯಾವಲೋಕನಂ ೪೧)

- ಇಂತಱುವುದು.

**ಸೂತ್ರಂ ॥ ಅವಿಕೃತಿಗಳೆವರ್ಣಮೊವ ।**
**ರ್ಣಮಂತ್ಯವೆನಿಸಿದ ನಿಪಾತಮವಧಾರಣೆ ತ ॥**
**ಳ್ತ ವಿಶಂಕೆಗಳೆಂಬಿವಱೊಳ್ ।**
**ವ್ಯವಹರಿಸದು ಸಂಧಿಯಾ ಪ್ಲುತಕ್ಕಮಭಾವಂ ॥ ೫೬ ॥**

**ಟೀಕೆ** - ಅವಿಕೃತಿಗಳ್ = ನಿರ್ವಿಕಾರಿಗಳಾದ, ಎವರ್ಣಂ = ಎ ಏ ಎಂಬ ಸವರ್ಣಂ, ಒವರ್ಣಂ =ಒ ಓ ಎಂಬ ಸವರ್ಣಂ, ಅಂತ್ಯಂ = ಕಡೆ, ಎನಿಸಿದ ನಿಪಾತಂ = ಎನಿಸಿದ ನಿಪಾತಾವ್ಯಯಂ, ಅವಧಾರಣೆ = ನಿರ್ಧಾರಣೆಯ ಎಕಾರಂ, ತಳ್ತ = ಪೊರ್ದುಗೆಯಾದ, ವಿಶಂಕೆಗಳ್, ಎಂಬಿವಱೊಳ್ = ಎಂಬಿವಱಲ್ಲಿ, ಸಂಧಿ = ಸಂಹಿತೆ, ವ್ಯವಹರಿಸದು = ಬಾರದು. ಆ ಪ್ಲುತಕ್ಕಂ = ಆ ಮೂರು ಮಾತ್ರೆಯನ್ನುಳ್ಳ ಪ್ಲುತಕ್ಕಂ, ಅಭಾವಂ = ಸಂಧಿಯಿಲ್ಲ.

**ವೃತ್ತಿ** - ನಿರ್ವಿಕಾರಿಗಳಪ್ಪ ಎ ಏ, ಒ ಓ ಎಂಬಿವು ಕಡೆಯಾದ ನಿಪಾತಮುಂ ಅವಧಾರಣೆಯುಂ ವಿಶಂಕೆಯುಂ ಎಂಬಿವರ್ಕೆ ಸ್ವರಂ ಪರಮಾಗೆ, ಸಂಧಿಯಿಲ್ಲ; ಪ್ಲುತಕ್ಕಮಂತ ಸಂಧಿಯಿಲ್ಲ.

**ಪ್ರಯೋಗಂ -**

ನಿಪಾತಕ್ಕೆ -

ಮ ॥ ವಿ ॥ ... ಎಲೇ ಇದಲ್ತೆ ತುಹಿನಕ್ಷೋಣೀಧ್ರದುತ್ತುಂಗಸಾ
ನುಗಳೊಳ್... ೧
(ಕಾವ್ಯಾವಲೋಕನಂ ೪೮)

ಚಂ ॥ ಮಾ ॥ ಅರೆ ಎಡೆ ಹಸ್ತಿಶಿಕ್ಷಣವಿಚಕ್ಷಣರಿಂದರೆ ಅಶ್ವಶಿಕ್ಷೆಯಿಂ . . . ೨
(ಕಾವ್ಯಾವಲೋಕನಂ ೫೧)

ಕಂ ॥ ಓಹೋ ಇರಲಿಂ ಪೆಱವಱ
ಮಾಹಾತ್ಮ್ಯಮುಂ ... ೩
(ಕಾವ್ಯಾವಲೋಕನಂ ೫೦)

ಕಂ ॥ ಅರಮೆ ಅರಲ್ದ ಬಯಲ್ದಾ ।
ವರೆಗಳ ಪೊದಱುಗಳೊಳ್ ಅರಮೆ ಎಳದಳಿರ ಲತಾಂ ॥
ತರದೊಳವಿದವಿದು ಕಾಡುಗು ।
ಮಿರುಳಪ್ಪಿನಮಱಿಸುವಿನಿಯಳಂ ಚಕ್ರಾಹ್ವಂ ॥ ೪
(ಕಾವ್ಯಾವಲೋಕನಂ ೪೭)

ಅವಧಾರಣೆಗೆ -

ಕಂ ॥ ನುಡಿದನೆ ಕಾವುದನೇ ಏರ್ದೆ ।
ಗಿಡದಿರು ಜನವನಿಟ್ಟ ರಕ್ಕೆ ನಿನಗೀವುದನೇಂ ॥
ನುಡಿದನೆ ಅದು ಕಯ್ಯದು ಮೇಣ್ ।
ನುಡಿದುದು ತಪ್ಪುಗಮೆ ಗಂಗಚೂಡಾಮಣಿಯಾ ॥ ೫
(ಕಾವ್ಯಾವಲೋಕನಂ ೪೯, ಎಕ.ii - ೭೪)

ಉ ॥ ಮಾ ॥ ..... ಧನಮುಳ್ಳನಾವನಂ
ತಾತನೆ ಶೂರನಾತನೆ ಕುಲೋದ್ಭವನಾತನೆ ಶುದ್ಧವೃತ್ತನಂ
ತಾತನೆ ಇಂದ್ರನಾತನೆ ಗುಣೋನ್ನತನಾತನೆ ಅಂಬುಜೋದ್ಭವಂ ॥ ೬
(ಕಾವ್ಯಾವಲೋಕನಂ ೫೩)

ವಿಶಂಕೆಗೆ -

ಚಂ ॥ ಮಾ ॥ ಇನಿಯನೆ ಬೆಲ್ಲದಿಂದಿನಿಯನೀವನೆ ಅಃ ಪಿರಿದೀವನಿತ್ತುದಂ
ನೆನೆವನೆ ಚಿಃ ಅದಂ ನೆನೆಯಂ ॥ ೭
(ಕಾವ್ಯಾವಲೋಕನಂ ೫೨)

ಆನೆಯೊ ಅದ್ರಿಯೊ ... ೮

ಚಂ ॥ ಮಾ ॥ ... ಎನ್ನಿರೆ ಎನ್ನನಿಯಂ ಕವಿರಾಜಕುಂಜರಂ ॥ ೯

ಪ್ಲುತಕ್ಕೆ -

ಕಂ ॥ ... ಕು ಕ್ಕೂ ಕೂ ಎಂದು ಕೋೞಿ ಕೂಗಿದುವಾಗಳ್ ॥ ೧೦
(ಕಾವ್ಯಾವಲೋಕನಂ ೧೧)

ಕಂ ॥ ... ಹಾ ರಾಮಾ ಎಂದು ಸೀತೆ ಬಾಯಬಿಡುದಟ್ಟಿಳ್ ॥ ೧೧

**ಸೂತ್ರಂ॥ ಮೆಚ್ಚಿನೊಳಾಕ್ಷೇಪಕದೊಳ್ ।**
**ಬೆಚ್ಚೋವಭ್ಯುಪಗಮಾರ್ಥದೆಮಶಬ್ದಂ ಕ ॥**
**ಟ್ಟಚ್ಚರಿಯ ಗಡಾರ್ಥಾತ್ವಂ ।**
**ಬಿಚ್ಚಿರ್ಕುಂ ಸ್ವರಮವಿದಿರೊಳಿರೆ ಖೇದದೊಳಂ॥ ೫೭ ॥**

**ಟೀಕೆ** - ಮೆಚ್ಚಿನೊಳ್ = ಮೆಚ್ಚಿನಲ್ಲಿ; ಆಕ್ಷೇಪಕದೊಳ್ = ಆಕ್ಷೇಪಕದಲ್ಲಿ, ಬೆಚ್ಚೋ = ಬೆಚ್ಚು ಬೆಸುಗೆಯಾದ ಓಕಾರಂ, ಅಭ್ಯುಪಗಮಾರ್ಥದ = ಅಂಗೀಕಾರಾರ್ಥದ, ಎಮಶಬ್ದಂ =ಎಮ ಎಂಬ ಶಬ್ದಂ, ಕಟ್ಟಚ್ಚರಿಯ = ಕಡಿದಾದಾಶ್ಚರ್ಯದ, ಗಡಾರ್ಥಾತ್ವಂ = ಗಡಾರ್ಥದ ಆಕಾರಂ, ಸ್ವರಂ = ಸ್ವರಾಕ್ಷರಂ, ಅವು, ಇದಿರೊಳ್ = ಮುಂದೆ, ಇರೆ, ಖೇದದೊಳಂ = ದುಃಖದಲ್ಲಿಯುಂ, ಬಿಚ್ಚಿರ್ಕುಂ = ಸಂಧಿ ಬಿಚ್ಚಿರ್ಪುದು.

**ವೃತ್ತಿ** - ಮೆಚ್ಚಿನೊಳ್ ಆಕ್ಷೇಪಕದೊಳ್ ನೆಲಸಿರ್ದ ಓಕಾರಕ್ಕಂ, ಅಂಗೀಕಾರಾರ್ಥದ ಎಮಶಬ್ದಕ್ಕಂ, ಗಡಾರ್ಥಕ್ಕಾದೇಶಮಾದಾಕಾರಕ್ಕಂ, ಸ್ವರಂ ಪರಮಾಗೆ ಸಂಧಿಯಿಲ್ಲ; ಖೇದದೊಳಮಂತೆ ಸಂಧಿಯಿಲ್ಲ.

**ಪ್ರಯೋಗಂ** -

ಮೆಚ್ಚಿಂಗೆ -

ಎಂತೆಂತೋ ಅಃ ಕಬ್ಬಮೊಳ್ಪಿತ್ತಾಯ್ತು ... ೧
ಏನೇನೋ ಓದಿನ ಪರಿ ಲೇಸು ಲೇಸು ॥ ೨

ಆಕ್ಷೇಪಕ್ಕೆ -

ಎಡಱುದನೋ ಅವನ ನೊಸಲಕ್ಕರವಂ ತೊಡೆದುದಕ್ಕುಂ ॥ ೩
ಕಂ ॥ ... ಮುತ್ತಿದನೋ ಇಂದೆ ಕೋಂಟೆ ಧೂಳೀಪಟ್ಟಂ ॥ ೪

ಎಮಶಬ್ದಕ್ಕೆ -

ಕಂ ॥ ನಿಮಗಕ್ಕೆಮ ಅಬ್ಜಗರ್ಭನಾಯುಂ ಶ್ರೀಯುಂ ॥ ೫
ಸಿಂಗಮಕ್ಕೆಮ ಅಂಜೆಂ ೬

ಗಡಾರ್ಥದಾಕಾರಕ್ಕೆ -

ಕಂ ॥ ... ಪಾಲಾ ಅಮರ್ದಾ
ಪಿರಿದು ಗಡ ... ೭
(ಅಜಿತನಾಥಪುರಾಣಂ ೫-೭೭)

ಶಾ ॥ ವಿ ॥ ಆನಾ ನಿಮ್ಮಡಿಯಾ ಎರಟ್ಟುದುರೆಯಾ ಇರ್ಬರ್ಗೆರಟ್ಟೈದುವಾ ॥ ೮

ಖೇದಕ್ಕೆ -

ಅಯ್ಯೋ ಅಕ್ಕಟಾ ಇಂದ್ರಂಗೆ ಕೇಡಾಯ್ತೇ ॥ ೯

**ಸೂತ್ರಂ॥ ಪೊಱಗೊಳಗು ಪೊಸತು ಪಱದೆಳ ।**
**ದಱುಕೆಯದಂತತೆಯನಾ ಸಮಾಸಾಂತರದೊಳ್ ॥**
**ನೆಱೆ ತಾಳ್ದು ಸಂಧಿಯಾನವು ।**
**ತಱುಸಂದಿದಿರೊಳ್ ಸ್ವರಂಗಳಾವುವು ನಿಲೆಯುಂ ॥ ೫೮ ॥**

**ಟೀಕೆ** - ಪೊಱಗು = ಪೊಱಗೆಂಬ ಶಬ್ದಂ, ಒಳಗು = ಒಳಗೆಂಬ ಶಬ್ದಂ, ಪೊಸತು = ಪೊಸತೆಂಬ ಶಬ್ದಂ, ಪಱದು = ಪಱದೆಂಬ ಶಬ್ದಂ, ಎಳದು = ಎಳದೆಂಬ ಶಬ್ದಂ, ಅಱುಕೆಯ = ಉಪಾಂತದ ಅಕ್ಷರಕ್ಕೆ ಲೋಪಮಾಗಿ ಅಕಾರವಂ ಪಡೆವುದೆಂಬ ಅಱುಕೆಯ, ಅದಂತತೆಯಂ = ಅಕಾರಾಂತತ್ವಮಂ, ಆ ಸಮಾಸಾಂತರದೊಳ್ = ಆ ಸಮಾಸಮಧ್ಯದಲ್ಲಿ, ನೆಱೆ = ಚೆನ್ನಾಗಿ, ತಾಳ್ದು = ಧರಿಸಿ, ಇದಿರೊಳ್ = ಮುಂದುಗಡೆಯಲ್ಲಿ, ತಱುಸಂದು = ಚೆನ್ನಾಗಿ ಸಂದು, ಸ್ವರಂಗಳ್ = ಸ್ವರಾಕ್ಷರಂಗಳ್, ಆವುವು, ನಿಲೆಯುಂ = ನೆಲೆಗೊಂಡಿರೆಯುಂ, ಸಂಧಿಯಾನವು = ಸಂಹಿತೆಯಂ ಪಡೆಯವು.

**ವೃತ್ತಿ** - ಪೊಱಗು ಒಳಗು ಪೊಸತು ಪಱದು ಎಳದು ಎಂಬಿವರ್ಕೆ ಸಮಾಸವಿಷಯದೊಳುಪಾಂತಾಕ್ಷರಕ್ಕೆ ಲೋಪಮಾಗಿ, ಅಕಾರಾಂತತೆಯನ್ನೆದಿ, ನಿಪಾತದಂತೆ ಪರದೊಳ್ ಸ್ವರಮಾವುವಿರ್ದೊಡಂ, ಸಂಧಿ ಇಲ್ಲ.

**ಪ್ರಯೋಗಂ** -

ಪೊಱ ಅಡಿ, ಒಳ ಅಟ್ಟಂ, ಪೊಸ ಅಡಕೆ, ಪಱ ಅಲಗು, ಎಳ ಅಂಚೆ.

**ಸೂತ್ರಂ ॥ ಪರಪದಪೂರ್ವಂ ದ್ವಿತ್ವಾ ।**
**ಕ್ಷರಮಾಗಿರೆ ಪೂರ್ವಪದದ ಚರಮಂ ಹ್ರಸ್ವಾ ॥**
**ಕ್ಷರಮಾಗೆ ಸಂಧಿದೋಷಂ ।**
**ಸರೇಫಮಿದಿರಾಗೆ [1]ಶಿಥಿಲಮೆಂದನುಸರಿಪರ್ ॥ ೫೯ ॥**

**ಟೀಕೆ** - ಪರಪದ =ಮುಂದಣ ಪದದ, ಪೂರ್ವಂ = ಮೊದಲಕ್ಷರಂ, ದ್ವಿತ್ವಾಕ್ಷರಂ = ಒತ್ತಿನಕ್ಷರಂ, ಆಗಿ, ಇರೆ, ಪೂರ್ವಪದದ = ಮೊದಲ ಪದದ, ಚರಮಂ = ಅಂತ್ಯಂ, ಹ್ರಸ್ವಾಕ್ಷರಂ = ಹ್ರಸ್ವವಾದಕ್ಷರಂ, ಆಗೆ, ಸಂಧಿದೋಷಂ = ಸಂಧಿದೋಷವಪ್ಪುದು ; ಸರೇಫಂ = ರೇಫೆಯೊಡನೆ ಕೂಡಿದಕ್ಷರಂ, ಇದಿರಾಗೆ = ಮುಂದಾಗೆ, ಶಿಥಿಲಮೆಂದು = ಶಿಥಿಲವಾಗುವುದೆಂದು, ಅನುಸರಿಪರ್= ಅಂಗೀಕರಿಸುವರ್.

**ವೃತ್ತಿ** - ಪರಪದದ ಮೊದಲಕ್ಕರಂ ದ್ವಿತ್ವಮಾಗಿರೆ, ಪೂರ್ವಪದದ ಕಡೆಯಕ್ಕರಂ ಲಘುವಾಗಿರೆ, ಸಂಧಿದೋಷಮಕ್ಕುಂ. ಛಂದೋವಿಷಯದೊಳ್ ಪರಪದದ ಪೂರ್ವಾಕ್ಷರಂ ರೇಫೆವೆರಸಿ ದೊರ್ಡಂ, ಶಿಥಿಲಮಾಗಲಾರ್ಪುದೆಂದು ಕೆಲಂಬರದನಂಗೀಕರಿಸುವರ್.

**ಪ್ರಯೋಗಂ** -

ಸಂಧಿದೋಷಕ್ಕೆ -

ಕಂ ॥ ಬರಿಸಿ ಪ್ರಧಾನರಂ ಕು ।
ಳ್ಳಿರಿಸಿ ಪ್ರಿಯಕುಶಲವಾರ್ತೆಯಂ ನೆಱೆ ಕೇಳ್ದು ॥
ಸ್ಥಿರಮಿರ್ದು ಪ್ರಭು ನುಡಿಯೆ ।
ಪ್ರರೂಢಮುದನಾದನಾತನೆಂಬುದಮಾರ್ಗಂ ॥ ೧

~~~~~~~~~~~~~~~~~~~~

೧. (ಶಿಥಿಲಮೆಂದನುಕರಿಪರ್)
~~~~~~~~~~~~~~~~~~~~

ಸರೇಫಸಂಯೋಗಕ್ಕೆ -

ಮ ॥ ವಿ ॥ ... ಮಿಱುಗುತಿರ್ಪ ತ್ರಿಶೂಲದಿಂ ... ೨

(ತ್ರೈಲೋಕ್ಯಚೂಡಾಮಣೀ ಸ್ತೋತ್ರಂ ೯)

ಕಂ ॥ ಪ್ರಣಯದೆ ತ್ರಿಪಥಗೆ ನಡೆತರೆ
ತ್ರಿಣೇತ್ರನೊಲವಿಂದೆ ತಾಳ್ದಿದಂ ಮಸ್ತಕದೊಳ್ ... ೩

**ಸೂತ್ರಂ॥ ಬಗೆಯದೆ ಸತೃಣಾಭ್ಯವಹಾ ।**
**ರಿಗಳುಸಿರ್ವರ್ಗದ್ಯಕಾವ್ಯದೊಳ್ ನಿರ್ಬಂಧಂ ॥**
**ಪುಗದೆಂದರೋಚಿಗಳದಂ ।**
**ತೆಗಟಿಂದಾ ಗದ್ಯಪದ್ಯಕಾವ್ಯದೊಳಿಕ್ಕರ್ ॥ ೬೦ ॥**

**ಟೀಕೆ** - ಸತೃಣ = ತೃಣದೊಡನೆ ಕೂಡಿದ, ಅಭ್ಯವಹಾರಿಗಳ್ = ಆಹಾರವನುಳ್ಳ ಕವಿಗಳ್, ಗದ್ಯಕಾವ್ಯದೊಳ್ = ಗದ್ಯಕಾವ್ಯದಲ್ಲಿ, ನಿರ್ಬಂಧಂ = ಬಲಾತ್ಕಾರಂ, ಪುಗದೆಂದು = ಪ್ರವೇಶವಾಗದೆಂದು, ಬಗೆಯದೆ = ವಿಚಾರಿಸದೆ, ಅದಂ = ಆ ಸರೇಫಮಿದಿರಾಗೆ ಶಿಥಿಲಮಪ್ಪುದೆಂಬ ಸಂಧಿಯಂ, ಉಸಿರ್ವರ್ = ಪೇೞ್ವರ್; ಅರೋಚಿಗಳ್ = ಹೇಯ ಬುದ್ಧಿಯುಳ್ಳವರ್, ಅದಂ = ಆ ಸಂಧಿಯಂ, ತೆಗಟಿಂದು = ನಿಂದೆ ಬರ್ಪುದೆಂದು, ಆ ಗದ್ಯಪದ್ಯ ಕಾವ್ಯದೊಳ್ = ಆ ಗದ್ಯಕಾವ್ಯ ಪದ್ಯಕಾವ್ಯಂಗಳಲ್ಲಿ, ಇಕ್ಕರ್ = ಪೇೞರ್.

**ವೃತ್ತಿ*** - ಸರೇಫಮಿದಿರಾಗೆ ಶಿಥಿಲಮಪ್ಪುದೆಂಬ ಸಂಧಿಯುನಜ್ಞರ್ ಗದ್ಯಕಾವ್ಯದೊಳೈಚ್ಛಿಕಮೆಂಬರ್; ಪ್ರಾಜ್ಞರದಂ ದೂಷ್ಯಮೆಂದು ಪದ್ಯಕಾವ್ಯದೊಳೆಂತಂತೆ ಗದ್ಯಕಾವ್ಯದೊಳಂ ಪ್ರಯೋಗಿಸರ್.

**ಸೂತ್ರಂ ॥ ಕರೆಗತ್ವದಿರ್ಗೆಯಲ್ಲದೆ ।**
**ಪರಮಿರೆ ಪದ್ಯಾರ್ಥ ವಾಕ್ಯವೇಷ್ಟನದೆಡೆಗಂ ॥**
**ಸ್ಫುರದನುಕೃತಿಗಂ ಸ್ವರಮವು ।**
**ಪರಮಿರೆ ಋತ್ವಕ್ಕಮಂತೆ ಸಂಧಿವಿಕಲ್ಪಂ ॥ ೬೧ ॥**

**ಟೀಕೆ** - ಕರೆಗೆ = ಕರೆಯೆಂಬ ಧಾತುವಿಂಗೆ, ಅತ್ವದ = ಅಕಾರದ, ಇರ್ಗೆ = ಇರೆಂಬ ಧಾತುವಿಂಗೆ, ಅಲ್ = ಅಲ್ ಎಂಬುದು, ಅದೆ = ಅದೆ ಎಂಬುದು, ಪರಮಿರೆ = ಪರಮಾಗಿರೆ, ಪದ್ಯ = ಪದ್ಯಂಗಳ, ಅರ್ಥ = ಅರ್ಥದ, ವಾಕ್ಯವೇಷ್ಟನದ = ಸಂಸ್ಕೃತದ ವಾಕ್ಯವೇಷ್ಟನದ, ಎಡೆಗಂ = ಸ್ಥಾನಕ್ಕೆಯುಂ, ಸ್ಫುರತ್ = ಪ್ರಕಾಶಿಸುವ, ಅನುಕೃತಿಗಂ = ಅನುಕರಣಶಬ್ದಕ್ಕೆಯುಂ, ಸ್ವರಂ = ಸ್ವರಾಕ್ಷರಂಗಳ್, ಅವು, ಪರಮಿರೆ = ಪರದಲ್ಲಿರೆ, ಋತ್ವಕ್ಕಂ = ಋಕಾರಂ ಪರಮಾದುದರ್ಕೆಯುಂ, ಅಂತೆ = ಹಾಂಗೆ, ಸಂಧಿ = ಸಂಹಿತೆ, ವಿಕಲ್ಪಂ = ವಿಕಲ್ಪವಪ್ಪುದು.

**ವೃತ್ತಿ** - ಕರೆಯೆಂಬ ಶಬ್ದಕ್ಕೆ ಅಲ್ ಪರಮಾದೊಡಂ, ಅದಂತಮಾದ ಇರ್ಗೆ ಅದೆ ಪರಮಾದೊಡಂ, ಪದ್ಯಾರ್ಥಕ್ಕಂ ವಾಕ್ಯವೇಷ್ಟನಕ್ಕಂ ಅನುಕರಣೆಗಂ ಸ್ವರಂ ಪರಮಾದೊಡಂ, ಸಂಧಿವಿಕಲ್ಪಂ; ಋಕಾರಂ ಪರಮಾದೊಡಮಂತೆ ಕ್ರಮಂ.

~~~~~~~~~~~~~~~~~~

\* **ಸೂಚನೆ** - ಈ ಸೂತ್ರಕ್ಕೆ ವೃತ್ತಿಯು ಮುದ್ರಿತವಾದ ಪ್ರತಿಗಳಲ್ಲಿಯೂ ನಮಗೆ ದೊರೆತಿರುವ ಓಲೆಯ ಪ್ರತಿಗಳಲ್ಲಿಯೂ ಕಾಣುವುದಿಲ್ಲ. ಇಲ್ಲಿ ಕೊಟ್ಟಿರುವುದು ನಾವು ಹೊಸದಾಗಿ ಬರೆದ ವೃತ್ತಿ. (ಸಂ ॥ ಕ ॥ ಸಾ ॥ ಪ ॥)
~~~~~~~~~~~~~~~~~~

ಅಲ್ ಅದೆಗಳ ವಿಸಂಧಿಗೆ -

ಕರೆ + ಅಲ್ = ಕರೆಅಲ್; ಇರ + ಅದೆ = ಇರಅದೆ.

ಕಂ ॥ ಬಗೆವೊಡಮಿನಿಸಿನಿಸಿರಅದೆ ... ೧

ಅವಱ ಸಂಧಿಗೆ -

ಕಂ ॥ ಮೈಗರೆಯಲ್ ಪಾಂಡವರ್ಗೆ ನೆಱಿದುವು ಬರಿಸಂ ॥ ೨

ತರಲ ॥ ಇರದೆ ಗರ್ಜಿಸಿ ಬೊಪ್ಪಲಂ ತಳರ್ದಂ ಜವಂ ತಳರ್ವಂದದಿಂ ॥ ೩

ಪದ್ಯಾರ್ಧಕ್ಕೆ ವಿಸಂಧಿಯಾದುದರ್ಕೆ -

ಕಂ ॥ ಅಲ್ಲಿಯಿದುಂಟೆಂಬರ್ಥದೊ ।
ಳೆಲ್ಲಿಯುಮುಳ್ಳೊಡೆಯ ವಂತ ಶಬ್ದಮುಮಕ್ಕುಂ ॥
ಎಲ್ಲಂದದೊಳಂ ಪೋಲಿಸು ।
ವಲ್ಲಿ ಗುಣಾಧಿಕರೊಳಂತೆ ವೋಲೆನಲಕ್ಕುಂ ॥ ೪

(ಕಾವ್ಯಾವಲೋಕನಂ ೩೩೬)

ಪದ್ಯಾರ್ಧ ಸಂಧಿಗೆ -

ಕಂ ॥ ಬನದೊಳಗೆ ಪೋಗಿ ಪೊಸ ಪೂ ।
ವಿನ ಗೊಂಚಲನಕ್ಕ ನಿನಗೆ ತಂದಪ್ಪೆಂ ನೀ ॥
ನಿನಿತೊಂದು ಬೇಗದಿಂ ನಿ ।
ನ್ನಿನಿಯನ ಪಟ್ಕೆಯೊಳಿರೆಂದು ಸಖಿ ತೊಲಗುವುದುಂ ॥ ೫

(ಕಾವ್ಯಾವಲೋಕನಂ ೬೨೨)

ವಾಕ್ಯವೇಷ್ಟನವಿಸಂಧಿಗೆ -

ಸ್ರ ॥ ... ಕಃ
ಕೇನಾರ್ಥೀ ಕೋ [1]ದರಿದ್ರಃ ಎನುತುಮನಿತುಮಂ [2]ಧರ್ಮಜಂ ಸೂಱಿಗೊಟ್ಟಂ ॥ ೬

(ವಿಕ್ರಮಾರ್ಜುನವಿಜಯಂ ೬-೪೦)

ವಾಕ್ಯವೇಷ್ಟನ ಸಂಧಿಗೆ -

ಪೃಥ್ವಿ ॥ ... ನ ದೇವಚರಿತಂ ಚರೇತೆನಿಸಿದಯ್ ತ್ರಿಲೋಕೇಶ್ವರಾ ॥ ೭

(ಆದಿಪುರಾಣಂ ೧೩-೮೪)

ಅನುಕರಣವಿಸಂಧಿಗೆ -

ಕವಕವ ಎಲೆ ... ೮

ಮ॥ ವಿ॥ ... ಉ ಊ ಪೋ ಪುಗಲ್
ಪುಗಲೆಂದೊಚ್ಚತಮೂಳ್ವ ಕೋಗಿಲೆಯುಂ ... ೯

---

೧. ದರಿದ್ರೋ ಎನುತು. ೨. ಸೂಸಿದಂ ಧರ್ಮಪುತ್ರಂ.

ಅನುಕರಣಸಂಧಿಗೆ -

ಛಮ್ಮೆಂಬ, ಛಟಚ್ಛಟೆಂಬ

ಋಕಾರ ವಿಸಂಧಿಗೆ -

ಮ॥ ಸ್ರ॥ ಎಸೆಗುಂ ಋಜ್ವಾಗತಂ ಕಣ್ಗೊಳಿಸುಗುಮಳವಟ್ಟರ್ಧಋಜ್ವಾಗತಂ ... ೧೦
(ಅಜಿತನಾಥಪುರಾಣಂ ೨-೪೫)

ಋಕಾರ ಸಂಧಿಗೆ -

ಕಂ ॥ ಸರಸಮೃಜುವೀರನೆಂದಾ ।
ತರುಣಿಯನೊಸೆದಿತ್ತಂ ... ೧೧

ವಾಕ್ಯವೇಷ್ಟನಶಬ್ದಮುಂ ಅನುಕರಣಶಬ್ದಮುಮಿರ್ದಂತಿರ್ಪುವು; ಕನ್ನಡ ವಿಭಕ್ತಿಯಂ ಮಾಡಬೇಡ. "ನವೋ ನವೋ ಭವತಿ ಜಾಯಮಾನೋಹ್ನಾ" ಎಂಬ ಸಂಸ್ಕೃತವಾಕ್ಯಾಂತಮಂ ಜಾಯಮಾನೋಹ್ನಮೆಂದು ಉಪಸಂಹರಿಸಲಾಗದು; ಧಗಧಗ ಎಂಬುದಂ ಧಗಧಗಂ ಎನಲಾಗದು.

**ಸೂತ್ರಂ॥ ಪದಯುಗದ ಸಂಧಿಯಂ ಬೇ ।**
**ಱದೊಂದಸಹ್ಯೋಕ್ತಿ ಪುಟ್ಟೆ ಮಾಡುವುದುಂ ಮಾ ॥**
**ರ್ಗದೊಳುಳ್ಳ ಸಂಧಿಯಂ ಕಿಡಿ ।**
**ಪುದುಮಾಗದು ತಾಂ ಯಥೇಷ್ಟಮೆಂದಱಿವುಳ್ಳರ್ ॥ ೬೨ ॥**

**ಟೀಕೆ** - ಅಱಿವುಳ್ಳರ್ = ವಿಚಾರವುಳ್ಳ ಕವಿಗಳ್, ತಾಂ, ಯಥೇಷ್ಟಮೆಂದು = ಸಂಧಿ ಯಥೇಷ್ಟಮೆಂದು (ಇಚ್ಛೆ ಬಂದ ಹಾಂಗೆ ಎಂಬರ್ಥಂ), ಪದಯುಗದ = ಪದವೆರಡಱ, ಸಂಧಿಯಂ = ಸಂಹಿತೆಯಂ, ಬೇಱೆ = ಅನ್ಯವಾಗಿ, ಅದೊಂದು = ಅದು ತಾನೊಂದು, ಅಸಹ್ಯೋಕ್ತಿ = ಅಸಹ್ಯವಾದ ಪ್ರತೀತಿ, ಪುಟ್ಟೆ = ಹುಟ್ಟೆ, ಮಾಡುವುದುಂ = ಸಂಧಿ ಮಾಡುವುದುಂ, ಮಾರ್ಗದೊಳ್ = ಕವಿಮಾರ್ಗದಲ್ಲಿ, ಉಳ್ಳ ಸಂಧಿಯಂ = ರೂಢಮಾಗಿ ಉಳ್ಳ ಸಂಧಿಯಂ, ಕಿಡಿಪುದುಂ = ಸ್ವರಲೋಪಸಂಧಿಯಂ ಮಾಡಿ ಕಿಡಿಸುವುದುಂ, ಆಗದು = ಸಲುವಳಿಯಾಗದು.

**ವೃತ್ತಿ** - ಎರಡು ಪದಂಗಳ ನಡುವೆ ಬೇಱೊಂದು ದುಷ್ಪ್ರತೀತಿ ಪುಟ್ಟುವೊಡೆ ಸಂಧಿಯಂ ಮಾಡಲಾಗದು; ಸಂಧಿ ಯಥೇಷ್ಟಮೆಂದು ರೂಢಮಪ್ಪ ಸಂಧಿಯಂ ಕಿಡಿಸಿ ಸ್ವರಲೋಪ ಸಂಧಿಯಂ ಮಾಡಲಾಗದು.

**ಪ್ರಯೋಗಂ[೧]** -

ಸಂಧಿದೋಷದ ಲಕ್ಷ್ಯಂ -

ಕಂ ॥ ಬನ್ನಿಯ ತರು ಡಕ್ಕೆಗೆ ಸುರ ।
ಹೊನ್ನೆಯ ತರು ಡಮರುಗಕ್ಕೆ ಕರುವಿಡಿದಿರ್ಪಾ ॥
ಚೆನ್ನಂಗಿಯ ತರು ಡಾಣೆಗೆ ।
ಹೊನ್ನಂ ಕುಡುವೆಡೆಗೆ ಕಲ್ಪತರು ಡಾಕರಸಾ ॥ ೧

~~~~~~~~~~~~~~~~~~~~

೧. (ಸೂತ್ರ ೬೨ರ ಪ್ರಯೋಗಗಳು ನ್ಯಾಯವಾಗಿ ಸಂಧಿಗತರೂಪದಲ್ಲಿರಬೇಕಾಗಿತ್ತು; ಅಲ್ಲದೆ ಒಂದೆರಡು ಬಿಡಿಮಾತುಗಳನ್ನು ಲೋಪಿಸಿದೆ.)
~~~~~~~~~~~~~~~~~~~~

ಸಂಧಿದೋಷದ ಅಸಹ್ಯೋಕ್ತಿಗೆ -

ಆಸೆ ಗಣಿತಾ; ಪೂ ಸಲೆಸೊಗಸು; ಹೇ ಲತಾಕೋಮಲಾಂಗೀ.

* * *

ವಿಸಂಧಿ ದೋಷಕ್ಕೆ -

ಕಂ ॥ ಅಸಿಯ ಒಱಿ ಬೆಸದ ಪೆಟ್ಟಿಗೆ ।
ಮಿಸುಗುವ ಆರಂ ತೊಳಪ್ಪ ಕನ್ನವುರಂ ಚೆ ॥
ಲ್ವೆಸೆದಿರೆ ಬಲವರ್ಪ ವಿಟರ್ ।
ಕುಸುಮೇಷುವ ಮೇಳದವರ್ಗಳೆನಿಸಿದರದಱಿೊಳ್ ॥ ೨

(ಕಾವ್ಯಾವಲೋಕನಂ ೪೪೦)

'ಪೊನ್ನ ಅಂದಳಂ' ಎಂದಿಂತು ಸಂಧಿಯಂ ಕಿಡಿಸಲಾಗದು.

**ಸೂತ್ರಂ॥ ಎರಡುಂ ರೇಫೆಗಳಂ ತಂ ।**
**ದುರವಣೆಯಿಂ ಕೂಡಿದಂತೆವೋಲ್ ಶ್ರುತಿಕಷ್ಟಂ ॥**
**ಬರೆ ಸಂಧಿ ಮಾಡಲಾಗದು ।**
**ಕರಡೆಯ ಗಿರ್ಗಟದ ದನಿವೊಲಮರವವೆಂದುಂ ॥ ೬೩ ॥**

**ಟೀಕೆ** - ಎರಡುಂ ರೇಫೆಗಳಂ = ಪೂರ್ವಪದದ ಕಡೆಯಲ್ಲಿ, ಪರಪದದ ಮೊದಲಲ್ಲಿ ಇರ್ದ ಎರಡು ರೇಫೆಗಳಂ, ತಂದು = ತಂದುಕೊಂಡು, ಉರವಣೆಯಿಂ = ಶೀಘ್ರದಿಂದೆ, ಕೂಡಿದಂತೆವೋಲ್ = ಕೂಡಿದ ಹಾಗೆ, ಶ್ರುತಿಕಷ್ಟಂ = ಕರ್ಣಕಠೋರತ್ವಂ, ಬರೆ, ಸಂಧಿ ಮಾಡಲ್ = ಸಂಧಿಯಂ ಮಾಡಲ್ಕೆ, ಆಗದು = ಸಲುವಳಿಯಾಗದು; ಅವು, ಎಂದುಂ = ಆವಾಗಳುಂ, ಕರಡೆಯ = ಕರಡೆಯೆಂಬ ವಾದ್ಯದ, ಗಿರ್ಗಟದ = ಗಿರ್ಗಟೆಯೆಂಬ ವಾದ್ಯದ, ದನಿವೊಲ್ = ಧ್ವನಿಯ ಹಾಗೆ, ಅಮರವು = ಪೊರ್ದುಗೆಯಾಗವು.

**ವೃತ್ತಿ** - ಪದಂಗಳೆರಡಱಂತರಾಳರೇಫೆಗಳಂ ಕೂಡಿದಂತೆ ಶ್ರುತಿಕಷ್ಟಮಾಗೆ ಸಂಧಿಯಂ ಮಾಡಲಾಗದು; ಕರಡೆಯ ಗಿರ್ಗಟದ ಧ್ವನಿಯಂತಿರವು ನೇರ್ಪಡವು.

**ಪ್ರಯೋಗಂ** -

ರೇಫದ್ವಿತಯ ಸಂಧಿದೋಷಕ್ಕೆ -

ಬಂದರ್ರಾಮೆರ್; ದೇವರ್ರಕ್ಷಿಸುಗೆ.

ಕಂ ॥ ... ಮೂವರ್ರಾಯರನೆ ಮಾಱುವಂತೆಸೆದಿರ್ಕುಂ ॥

(ಗಿರಿಜಾಕಲ್ಯಾಣಂ ೨-೯೪)

ಶ್ರುತಿಕಷ್ಟಕ್ಕೆ -

ವಿದ್ವಿಟ್ಸ್ತ್ರೀಯರೆಂದು ಮಾಡಲಾಗದು.

**ಸೂತ್ರಂ॥ ಅವಧಾರಣೆಯನಿಯೋಗ ।**
**ವ್ಯವಹೃತಿಯಿಂದಿರೆ ನಿಪಾತವಿಷಯದೊಳಲ್ಪಾ ॥**
**ರ್ಥವನಾಳ್ದರೆ ವಸ್ತುವಿನ ।**
**ರ್ಥವನುಸಿರುತ್ತಿರೆ ತಗುಳ್ಚುವುದು ಸಂಹಿತೆಯಂ ॥ ೬೪ ॥**

**ಟೀಕೆ** - ಅವಧಾರಣೆ = ಅವಧಾರಣೆಯ ಏಕಾರಂ, ಅನಿಯೋಗ ವ್ಯವಹೃತಿಯಿಂದೆ = ತನ್ನ ನಿಯತಾರ್ಥವಂ ಬಿಟ್ಟು ಅನಿಯೋಗ ವ್ಯವಹಾರದಿಂದೆ, ಇರೆ, ನಿಪಾತ ವಿಷಯದೊಳ್ = ನಿಪಾತಾವ್ಯಯ ವಿಷಯದಲ್ಲಿ, ಅಲ್ಪಾರ್ಥವಂ = ಕಿಱುದೆಂಬಲ್ಪಾರ್ಥವಂ, ಆಳ್ದ = ತಾಳ್ದ, ಅರೆ = ಅರೆಯೆಂಬ ಶಬ್ದಂ, ವಸ್ತುವಿನ = ಒಂದು ವಸ್ತುವಿನ, ಅರ್ಧವಂ = ಸರಿಭಾಗವಂ, ಉಸಿರುತ್ತಿರೆ = ಹೇೞುತ್ತಿರೆ, ಸಂಹಿತೆಯಂ = ಸಂಧಿಯಂ, ತಗುಳ್ಚುವುದು = ಮಾಡುವುದು.

**ವೃತ್ತಿ** - ಅವಧಾರಣೆಯ ಏಕಾರಂ ತನ್ನ ನಿಯತಾರ್ಥಮಂ ಬಿಟ್ಟು ಅನಿಯೋಗಮಾದಲ್ಲಿಯುಂ, ಕಿಱುದೆಡೆಯಂ ಪೇೞ್ವ ನಿಪಾತಾರ್ಥದರೆಯೆಂಬ ಶಬ್ದಮೊಂದು ವಸ್ತುವಿನ ಸಮಭಾಗಮಂ ಪೇೞ್ವಲ್ಲಿಯುಂ ಸಂಧಿಯುಂಟು.

**ಪ್ರಯೋಗಂ** -

ಅನಿಯೋಗಸಂಧಿಗೆ -

ಉ ॥ ಮಾ ॥ ಮಾಮರನಲ್ಲದಿಲ್ಲ ತನಿಗಂಪಿನ ಮಲ್ಲಿಗೆಯಲ್ಲದಿಲ್ಲ ... ೧
(ಸೂಕ್ತಿಸುಧಾರ್ಣವಂ ೪-೯)

ನಿಯೋಗವಿಸಂಧಿಗೆ -

ಮಾಮರನದೆ ಇನಿದಪ್ಪ ತನಿವಣ್ಣನೀಗುಂ ೨

ಅರೆಯ ಸಂಧಿಗೆ -

ಕುರುಪತಿಯಂ ವಿಷ್ಣು ಬೇಡಿದಂ ಧರೆಯರೆಯಂ ೩

## ೨. ವ್ಯಂಜನ ಸಂಧಿ

**ಸೂತ್ರಂ॥ ಇರೆ ವರ್ಗಪ್ರಥಮಂಗಳ್ ।**
**ಪರದೊಳ್ ಚ ಟ ವರ್ಗಮುೞಿಯೆ ತಮ್ಮ ತೃತೀಯಾ ॥**
**ಕ್ಷರಮಕ್ಕುಂ ಪದವಿಧಿಯೊಳ್ ।**
**ಪರಿಹರಿಸಲ್ಬಾರದಲ್ಲಿ ಬಹುಳಸ್ಥಿತಿಯಂ ॥ ೭೫ ॥**

**ಟೀಕೆ** - ಪದವಿಧಿಯೊಳ್ = ಸಮಾಸವಿಧಿಯಲ್ಲಿ, ಚಟವರ್ಗಂ = ಚವರ್ಗ ಟವರ್ಗಂಗಳ್, ಉೞಿಯೆ = ಹೊಱತಾಗೆ, ವರ್ಗ = ವರ್ಗಂಗಳ, ಪ್ರಥಮಂಗಳ್ = ಕ ತ ಪ ಎಂಬ ಮೊದಲಕ್ಷರಂಗಳ್, ಪರದೊಳ್ = ಪರಪದದಾದಿಯಲ್ಲಿ, ಇರೆ, ತಮ್ಮ, ತೃತೀಯಾಕ್ಷರಂ = ಗ ದ ಬ ಎಂಬ ಮೂಱನೆಯಕ್ಷರಂಗಳ್, ಅಕ್ಕುಂ = ಅಪ್ಪುವು ; ಅಲ್ಲಿ = ಆ ತೃತೀಯಾಕ್ಷರವಾಗುವಲ್ಲಿ, ಬಹುಳಸ್ಥಿತಿಯಂ = ಬಹುಳದ ಸ್ಥಿತಿಯಂ, ಪರಿಹರಿಸಲ್ಬಾರದು = ಬಿಡಬಾರದು.

**ವೃತ್ತಿ** - ಚಟವರ್ಗದಿಂ ಪಿಂಗಿದ ಕ ತ ಪಂಗಳ್ ಪರಪದದಾದಿಯೊಳಿರ್ದು, ಸಮಾಸ ವಿಷಯದೊಳ್ ತಮ್ಮ ತಮ್ಮ ತೃತೀಯಾಕ್ಷರಂಗಳಂ ಬಹುಳತೆಯಿನೆಯ್ದುಗುಂ.

**ಪ್ರಯೋಗಂ** -

ಕಕಾರದ ತೃತೀಯತ್ವಕ್ಕೆ -

ಕಂ ॥ ಪಟಗನ್ನಡಂ ಪುದುಂಗೊಳೆ ।
ಕೊಟಿಸಕ್ಕದಮಂ ತಗುಳ್ಚಿ ಜಾಣ್ಕಡೆ ಮುತ್ತಂ ॥
ಮೆಟಿಸಂ ಕೋದಂತಿರೆ ಪೇ ।
ಱ್ವಿಟುಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ ॥ ೧
(ಕಾವ್ಯಾವಲೋಕನಂ ೫೫)

ಮ ॥ ವಿ ॥ ಗಟಿಗೂಸಾಡುವರಿಂದ್ರನಂ ಗಿರಿಶನಂ ಸರ್ವಸ್ವಮಂ ಕೊಂಡು ಮು
ನ್ನುಟುವರ್ ... ೨
(ಸೂಕ್ತಿಸುಧಾರ್ಣವಂ ೪-೧೩೧)

ತಕಾರದ ತೃತೀಯತ್ವಕ್ಕೆ -

ಕಣ್ದೆಱವು; ಮೇಲ್ದುಡುಗೆ

ಕಂ॥ ಮಣಿಯುಡೆದೊವಲುಂ ಪೀಲಿಯ
ಪಣೆಗಟ್ಟುಂ ... ೩

ಚಂ ॥ ಮಾ ॥ ನಿಱುದಲೆ ನೀಳ್ದುವೆತ್ತ ನಗೆಗಣ್ ಬೆಳರ್ಗೆಂಪಿನ ಸೊಂಪನಾಳ್ದ ಬಾ
ಯ್ದೆಱೆ ... ೪

ಪಕಾರದ ತೃತೀಯತ್ವಕ್ಕೆ -

ಚಂ॥ ಮಾ॥ ... ಕಣ್ಬರಿ ಕಣ್ಬನಿ ... ೫
(ಅನಂತನಾಥಪುರಾಣಂ ೫-೩೯)

ಹರಿಣಿ ॥ ... ತ
ಣ್ಬುಟುಲ ತಳದೊಳ್ ರುದ್ರಂ ಕಂಡಲ್ಲಿ ಕಣ್ಬೊಲನಾಗಿ ॥ ೬
(ಕಾವ್ಯಾವಲೋಕನಂ ೫೭)

ಬಹುಳಮೆಂಬುದಱಿಂದೆ ಕಿಱಿದೆಡೆಯೊಳಿಲ್ಲ -

ತಲೆಕಟ್ಟು; ಬೆಸೆಕೋಲ್; ಏದುಪಂದಿ

ಕಂ ॥ ಒಳಕೆಯ್ಯೊಳಿರ್ದು ಪಲ್ಗಿರಿ
ದೊಳವಾಲಂಗೊಂಡು ... ೭
(ಕಾವ್ಯಾವಲೋಕನಂ ೨೪೪)

ಚ ಟ ವರ್ಗಕ್ಕೆ ತೃತೀಯತ್ವಮೆಂದುಮಿಲ್ಲದುದರ್ಕೆ -

ಕಡುಚಾಗಿ; ಕಣ್ಚಲ್ಲಂ; ಚಿಕ್ಕಚೋಜಿಗಂ; ಬಱುಚೆನ್ನಂ; ಕಡುಟಕ್ಕು ; ಮಾಣಿಕಟಕ್ಕೆ ; ಪೊಸಟೊಪ್ಪಿಗೆ; ಕಳ್ಳಟಿಪ್ಪಣಂ.

**ಸೂತ್ರಂ॥ ಒಂದೆರಡರ್ಕೆ ಱಕಾರ ।**
**ಕ್ಕಂದಾದಾದೇಶರೇಫೆಗಂ ಡತ್ವಕ್ಕಂ ॥**
**ಬಂದಾದೇಶ ಱಟಿಕ್ಕಂ ।**
**ಸಂಧಿಸದು ತೃತೀಯವೃತ್ತಿ ಕತಪಕ್ಕೆಂದುಂ ॥ ೬೬ ॥**

**ಟೀಕೆ** - ಇಲ್ಲಿ ಅನುವರ್ತನೆ - 'ಪದವಿಧಿಯೊಳ್ ವರ್ಗಪ್ರಥಮಂಗಳ್ ಪರದೊಳಿರೆ' (ಸೂ. ೬೫); ಒಂದೆರಡರ್ಕೆ = ಒಂದೆರಡೆಂಬಿವರ್ಕೆ, ಱಕಾರಕ್ಕೆ = ಱತ್ವಕ್ಕೆ, ಅಂದು = ಆ ಸಮಾಸಮಾಡುವಂದು,

ಆದಾದೇಶರೇಫೆಗಂ = ಆದ ಆದೇಶದ ರೇಫೆಗೆಯುಂ, ಡತ್ವಕ್ಕಂ = ಡಕಾರಕ್ಕೆಯುಂ, ಬಂದ ಆದೇಶ ೞಟಿಕ್ಕಂ = ಬಂದ ಆದೇಶದ ೞಟಿಕ್ಕೆಯುಂ, ಕತಪಕ್ಕೆ = ಪರಮಾದ ಕತಪಂಗಳ್ಗೆ, ತೃತೀಯವೃತ್ತಿ = ಮೂಱನೆಯಕ್ಷರದ ವೃತ್ತಿ, ಎಂದುಂ = ಆವಾಗಳುಂ, ಸಂಧಿಸದು = ಸಂಘಟನೆಯಾಗದು, ಬಾರದೆಂಬುದರ್ಥಂ.

**ವೃತ್ತಿ** – ಒಂದೆರಡೆಂಬಿವರ್ಕಂ ೞಕಾರಕ್ಕಮಾದೇಶಮಾದ ರೇಫೆಗಂ, ಡಕಾರಕ್ಕಾದೇಶಮಾದ ೞಟಿಕ್ಕಂ, ಪರಮಾದ ಕ ತ ಪಂಗಳ್ಗೆಂದುಂ ತೃತೀಯತ್ವಮಿಲ್ಲ.

**ಪ್ರಯೋಗಂ** –

ಒಂದರ್ಕೆ -

ಕಂ ॥ ಒರ್ಕೈಸಿ ಬಿಲ್ಲುಮಂಬುಮ ।
ನುರ್ಕಾಳ್ಗಳ್ ಸುರಿಗೆಗಿಟ್ಟು ಮಾಣ್ದಿರದಾ ಗೋ ॥
ವರ್ಕಳಿದಿರ್ಚಿದ ಘೋೞಾ ।
ಯ್ತರ್ಕಳೊಳೆಕ್ಕತುಳಮಿಱಿದು ಕುಱಿದಱಿಯಾದರ್ ॥ ೧

(ಕಾವ್ಯಾವಲೋಕನಂ ೫೮)

ಮ ॥ ವಿ ॥ ... ಒರ್ತುತ್ತೆಂಬಿನಂ ತುತ್ತಿ ದೇ
ವಗಣಕ್ಕಚ್ಚರಿಯಾಗೆ ಪಾಱೆ ... ೨

(ಕಾವ್ಯಾವಲೋಕನಂ ೫೯)

ಕಂ ॥ ಒರ್ಪಿಡಿಗೂೞುಂ ಸಿತಗನ
ಕರ್ಪಡಮುಂ ರಾಜಸೇವೆಯಿಲ್ಲದೆ ... ೩

ಎರಡರ್ಕೆ -

ಮ ॥ ವಿ ॥ ... ಇರ್ಕೋಡಿಯಂ ತೀವಿ ನಾಲ್
ದೆಸೆಗಂ ಸೂಸಿ ... ೪

ಕಂ ॥ ... ಇರ್ತಲೆಗೋಜಂ ॥ ೫

(ಕಾವ್ಯಾವಲೋಕನಂ ೨೧೧)

ಸ್ರ ॥ ಪೇಱರ್ದಿರ್ಪತ್ತು ತೋಳುಂ ದಶಮುಖಮುಖರಾಟೋಪಮುಂ ... ೬

(ಕಾವ್ಯಾವಲೋಕನಂ ೩೦೧)

ೞಕಾರಕ್ಕಾದೇಶಮಾದ ರೇಫೆಗೆ -

ಮಾ [ರ್ಕೋ] ಲ ಭೈರವಂ; ಮಾರ್ಕಟ್ಟೆ; ಮಾರ್ತಲೆ

ಕಂ ॥ ಮಾರ್ತಾಪ ತೆರೆಗಳಿಂ ತರ
ಲಾರ್ತುದು ತನ್ನದಿಗೆ ಸುರನದೀವಿಭ್ರಮಮಂ ... ೭

ಬೇರ್ಪಟ್ಟಂ

ಮ ॥ ವಿ ॥ ... ಏರ್ಪೆತ್ತರೇರ್ಪೆತ್ತರಂ
ಪದುಳಂ ಮಾಟ್ಟುದು ಚಿತ್ರಮೆಂದು ... ೮

ಡಕಾರಕ್ಕಾದೇಶಮಾದ ೞಟಿಕ್ಕೆ -

ಕಂ ॥ ಕಾಟ್ಕಿಚ್ಚು ತಗುಳೆ ತಮ್ಮೊಳ್
ಕೋಟ್ಕುಟ್ಟಿ ವನದ್ವಿಪೇಂದ್ರವತಿಭಯವಶದಿಂ ... ೯
(ಕಾವ್ಯಾವಲೋಕನಂ ೨೯೮)

ಕಾಟ್ತುಱು ಮಸಗಿದವೊಲೊಡ್ಡಿದುದು ಕುರುಸೈನ್ಯಂ ೧೦
ನಾಟ್ಪಿಗರಣಂ, ನಾಟ್ತುಡುಗುಣಿ

ಉ ॥ ಮಾ ॥ ಕಾಟ್ಪುರಮಾಗೆ ಕಾವ್ಯರಸಮರ್ಥಮುಮಕ್ಕರಮುಂ ಪ್ರತೀತಿಯಂ
ಮಾಟ್ಪೆನೆಗಂ ... ೧೧
(ಕಾವ್ಯಾವಲೋಕನಂ ೨೯೯)

ಸಮುಚ್ಚಯವಶದಿಂದೆ ಕೆಳಗಣ್ಣಾದೇಶಮಾದ ಱಟಕ್ಕಂ ತೃತೀಯತ್ವಮಿಲ್ಲ - ಕಿಟ್ಕೆಱಿ ಎಂಬಂತೆ.

**ಸೂತ್ರಂ॥ ವಿದಿತಸ್ವರದಿನನಾದೇ ।**
**ಶದ ಸಹಜವ್ಯಂಜನಂಗಳಿಂ ಪರದ ಪವ ॥**
**ರ್ಗದ ನೆಲೆಗಕ್ಕುಂ ವತ್ವಂ।**
**ಪದವಿಧಿಯೊಳ್ ಬಹುಳವೃತ್ತಿಯಿಂ ವಾಕ್ಯದೊಳಂ ॥ ೬೭ ॥**

**ಟೀಕೆ -** ಪದವಿಧಿಯೊಳ್ = ಸಮಾಸದ ವಿಧಿಯಲ್ಲಿ, ಬಹುಳ ವೃತ್ತಿಯಿಂ = ಬಹುಳದ ವರ್ತನೆಯಿಂದೆ, ವಾಕ್ಯದೊಳಂ = ವಾಕ್ಯದಲ್ಲಿಯುಂ, ವಿದಿತಸ್ವರದಿಂ = ಪ್ರಸಿದ್ಧಮಾದ ಸ್ವರಾಕ್ಷರಂಗಳಿಂದೆ, ಅನಾದೇಶದ = ಆದೇಶವಲ್ಲದ, ಸಹಜವ್ಯಂಜನಂಗಳಿಂ = ಸಹಜವಾದ ವ್ಯಂಜನಾಕ್ಷರಂಗಳಿಂದೆ, ಪರದ = ಮುಂದಣ, ಪವರ್ಗದ = ಪ ಬ ಮ ಎಂಬ ಪವರ್ಗದ, ನೆಲೆಗೆ = ಸ್ಥಾನಕ್ಕೆ, ವತ್ವಂ = ವಕಾರಂ, ಅಕ್ಕುಂ = ಅಪ್ಪುದು.

**ವೃತ್ತಿ -** ಸ್ವರಂಗಳಿಂದನಾದೇಶದ ಸಹಜವಾದ ವ್ಯಂಜನಂಗಳಿಂ ಪರದೊಳಿರ್ದ ಪವರ್ಗಕ್ಕೆ ಸಮಾಸವಿಷಯದೊಳ್ ವತ್ವಮಕ್ಕುಂ; ಬಹುಳಮೆಂಬುದಱಿಂ ಕೆಲವಱೊಳಿಲ್ಲ ; ವಾಕ್ಯದೊಳಂ ವತ್ವಮುಂಟು.

**ಪ್ರಯೋಗಂ -**

ಸ್ವರಂಗಳ್ಗೆ -

ಪಕಾರಕ್ಕೆ -

ಚಂ ॥ ಮಾ ॥ ಎಳವೆಱೆ ದಾಡೆ ಕೆಂದಳಿರೆ ನಾಲಗೆ ಮಾಮರದಳ್ಗೆಗೊಂಬಿನೊಳ್।
ಮಿಳಿರ್ವೆಳವಳ್ಳಿ ಬಾಲಮಲರ್ದೊಂಗಲೆ ಕೇಸರಮೆಂಬಿನಂ ಮನಂ ॥
ಗೊಳೆ ಮಧುಮಾಸಕೇಸರಿ ವಿಯೋಗಿಗಳೆಂಬ ಮೃಗಂಗಳಂ ಭಯಂ ।
ಗೊಳಿಸಿದುದುದ್ಧಕೀರ ಮದಕೋಕಿಲ ಗರ್ಜಿತ ತರ್ಜಿತಂಗಳಿಂ ॥ ೧

(ಅಜಿತನಾಥಪುರಾಣಂ ೬-೨೩; ಕಾವ್ಯಾವಲೋಕನಂ ೬೪)

ಚಂ ॥ ಮಾ ॥ ಬೆಳೆವೊಲನೆತ್ತಲುಂ ಕಿಱಿದೆ ಪರ್ಬಿದ ಪೆರ್ವೆಳೆ... ೭

ಬಕಾರಕ್ಕೆ -

ಕಂ॥ ನಡುವೆಣ ಕರ್ಪುಂ ಕಡೆಯಣ ।
ಕಡುವೆಳ್ಪುಂ ತುದಿಯ ಕೂರ್ಪುಮೆಸೆದಿರೆ ವಿಟರಂ ॥
ಬಿಡದಿಸಲೆ ತೆಗೆದ ಮದನನ ।
ನಿಡಿಯಲರ್ಗಣೆಗಳನೆ ಪೋಲ್ತುವಾಕೆಯ ಕಣ್ಗಳ್ ॥ ೭

(ಕಾವ್ಯಾವಲೋಕನಂ ೧೫೦)

ಮಕಾರಕ್ಕೆ -

ಕಂ ॥ ಮರವಣೆಗಂ ಬೀಣೆಗಮಂ ।
ತರಮಾವುದೊ ದೋಷರಹಿತ ಮೃದುಲಲಿತಪದ ॥
ಸ್ಫುರಿತಸರಸೋಕ್ತಿಗಂ ನಿ ।
ಷ್ಠುರ ಕುಕವಿಕಟೂಕ್ತಿಗಳ್ಗಮೇನಂತರಮೋ ॥ ೪

(ಕಾವ್ಯಾವಲೋಕನಂ ೬೫)

ಕಂ ॥ ಕಳೆಯಲ್ಕಾಗದು ನರಪತಿ
ಕುಳಚಳಬಳದನುವನೞಿವ ಪಟಿವಾನಸನಂ ... ೫

ಸಹಜವ್ಯಂಜನದ ಪರದ ಪವರ್ಗಕ್ಕೆ ವತ್ವ ಪ್ರಯೋಗಂ -

ಪಕಾರಕ್ಕೆ -

ಕಂ ॥ ... ಮರುಳ ಬಾಯ್ವೞಿ ಪೞಿಯಾ
ಗಿರೆ ... ೬

(ಕಾವ್ಯಾವಲೋಕನಂ ೬೬)

ಉ ॥ ಮಾ ॥ ಮೆಯ್ವಸವೊಂದೆ ಪೂವಿನೊಳೆ ಪೋಗೆ ಮುರಿದಳ್ಗೆಗೊಂಬಿನೊಳ್
ಪಾಯ್ವುದು ... ೭

(ಶಾಂತಿಪುರಾಣಂ ೧-೬೩)

ಕಂ ॥ ಬೇರ್ವಿಡಿದು ಕಾಯ್ತ ಪಲಸೆಳ
ನೀರ್ವೊನಲಂ ಕೞಿವ ತೆಂಗು ... ೮

(ರಾಮಚಂದ್ರಚರಿತಪುರಾಣಂ ೧-೧೧೨)

ಚಂ ॥ ಮಾ ॥ ... ಬೇಟಮಂ
ಪಡೆವನೆ ಬಾೞ್ಗೆ ಬಾೞ್ವೊಡಿಸಿತಿಲ್ಲದ ಬಾೞ್ತೆಣನೇಕೆ ಬೞ್ಪಂ ॥ ೯

ಬಕಾರಕ್ಕೆ -

ಕಂ ॥ ಬೇರ್ವೆರಸು ಕಿೞ್ತು ಪಲವುಂ
ನೀರ್ವೂಗಳನೊಟ್ಟಿಕೊಂಡು ಬರ್ಪ ಗಜೇಂದ್ರಂ ... ೧೦

(ಕಾವ್ಯಾವಲೋಕನಂ ೭೧)

ಮ ॥ ವಿ ॥ ... ಗೇಣ್ವಾಯ್ಗೆ ಬೀ
ೞದೆ ಕೂರಾಳ್ತನವಣ್ಮು ಮಣ್ಮುೞ್ಕೆಯಿಂ ... ೧೧

ಆಳ್ವಲ್ಮೆ, ತೋಳ್ವಲೆ

ಮಕಾರಕ್ಕೆ -

ಕಂ ॥ ಸಾತಿಶಯಾರ್ಥಮುಮಂ ಮೆ
ಲ್ವಾತುಮನೊಸೆದಿತ್ತರೊಲಿದು ತಮಗಿಲ್ಲದುದಂ ... ೧೨
(ಲೀಲಾವತೀಪ್ರಬಂಧಂ. ೧-೭೮)

ಆದೇಶವ್ಯಂಜನಕ್ಕೆ ವತ್ವಮಿಲ್ಲ -

ಪಕಾರಕ್ಕೆ -

ಚಂ ॥ ಮಾ ॥ ... ಕಿ
ಬಿಪ್ಪೊಡೆ ರಸಭಾವಮಿರ್ಪೆಡೆ ಮುಖಂ ಸುರತೋತ್ಸವಗೋಮಿನೀಮುಖಂ ೧೩

ಬಕಾರಕ್ಕೆ -

ಕಂ ॥ [1]ಇರ್ಬಾಳ್ ಮೂವಾಳಿಕ್ಕಿ
ದುರ್ವಾರರೆಯೊಳ್ ... ೧೪
(ಕಾವ್ಯಾವಲೋಕನಂ ೨೦೭)

ಮಕಾರಕ್ಕೆ -

ಕಂ ॥ ಧರೆಯೊಳ್ವೀರದ ಪೆಂಪಿನ ।
ನರನಿಂದಿರ್ಮಡಿ ಬಕಾರಿಯಿಂ ಮೂವಡಿ ಭಾ ॥
ಸ್ಕರಸುತನಿಂ ನಾಲ್ವಡಿ ಮುರ ।
ಹರನಿಂದೈವಡಿ ನೆಗಟ್ತೆಯದಟರ ಭೀಮಂ ॥ ೧೫
(ಕಾವ್ಯಾವಲೋಕನಂ ೭೦)

ಬಹುಳಮೆಂಬುದಱಿಂ ಕೆಲವಱೊಳ್ವತ್ವಮಿಲ್ಲ -

ಪಕಾರಕ್ಕೆ -

ಕಯ್ಪುಱಿಗುಟ್ಟಿಯಾಡಿದರ್; ಪೂಪುಣುಂಬು; ಪಲ್ಪುಱಿಗುಟ್ಟಿದಂ.

ಬಕಾರಕ್ಕೆ -

ಕಂ ॥ ಆ ನಾಡು ಸಿರಿಯ ಕಣ್ಬೇ
ಡಾ ನಾಡು ... ೧೬
(ಸೂಕ್ತಿಸುಧಾರ್ಣವಂ ೪- ೬)

ಕಂ ॥ ಕರ್ಬೇಡರ್ ಕಯ್ಪುಱಿಗುಟ್ಟಿಯಾಡಿದರ್ ... ೧೭

ಕಣ್ಬೇಟಂ; ಸುಡುಬಾಡು

ಮಕಾರಕ್ಕೆ -

ಬಾಳ್ಮೊನೆ; ಪಾಟ್ಮೆನೆ; ಕತ್ತುರಿಮಿಗಂ.

ಕಂ ॥ ಕತ್ತುರಿಮಿಗಮೆ ಮಿಗಂಗಳ್ ... ೧೮
(ಸೂಕ್ತಿಸುಧಾರ್ಣವಂ ೩-೧೩)

~~~~~~~~~~~~~~~

೧. ಈ ಉದ್ಧೃತಿಯ ಆಯ್ಕೆ ಉದಾಹರಣೆಗಳು ತೃಪ್ತಿಕರವಲ್ಲ.
~~~~~~~~~~~~~~~

ವಾಕ್ಯಕ್ಕೆ ವತ್ವಂ -

ಪ್ರಮಿತಾಕ್ಷರ ॥ ...
... ತಮರೂರ್ಗೆ ವೋಪ ಕುಲಜಾಂಗನೆಯರ್ ।
ಕಮಲೋದರಂಗೆ ಪಡೆದರ್ ಮುದಮಂ ॥ ೧೯
(ಕಾವ್ಯಾವಲೋಕನಂ ೭೨)

ಕಂ ॥ ದಿವದಿಂ ಭರದಿಂ ಕೆಲಸ
ಕ್ಕೆ ವರ್ಪ ದೇವಾಂಗನಾಜನಂ ಕರಮೆಸೆಗುಂ ೨೦

ಕಂ ॥ ... ಕಾಮನ
ಗರವಟಿವರ್ಪಂತೆ ಸುತ್ತಿವರ್ಪುವು ಗಿಳಿಗಳ್ ॥ ೨೧
(ಸೂಕ್ತಿಸುಧಾರ್ಣವಂ ೩-೪೬)

ಬೆಂಗೆ ವಂದಂ; ನೆಲೆಗೆ ವಂದಂ; ತರವೇಟ್ಟಿಂ

**ಸೂತ್ರಂ ॥ ಇರೆ ಯ ಲ ರಹಿತ ವ್ಯಂಜನ ।**
**ಪರಮಾಗಿ ಸಕಾರಮಲ್ಲಿ ಬಹುಳಂ ಚತ್ವಂ ॥**
**ಅರೆಎಡೆಯೊಳ್ ಜತ್ವಂ ಮೇ ।**
**ಣರೆಎಡೆಯೊಳ್ ಸಂಖ್ಯೆಯಾಗೆ ನಿಯತಂ ಛತ್ವಂ ॥ ೬೮ ॥**

**ಟೀಕೆ** - ಯ ಲ ರಹಿತ = ಯಕಾರ ಲಕಾರಂಗಳಿಂ ವಿರಹಿತಂಗಳಾದ, ವ್ಯಂಜನ = ವ್ಯಂಜನಂಗಳ್ಗೆ, ಪರಂ = ಮುಂದಣಕ್ಷರಂ, ಆಗಿ, ಸಕಾರಂ = ಸತ್ವಂ, ಇರೆ, ಅಲ್ಲಿ = ಆ ಸ್ಥಾನದಲ್ಲಿ, ಬಹುಳಂ = ಬಹುಳವಾಗಿ, ಚತ್ವಂ = ಚಕಾರವಪ್ಪುದು; ಅರೆಎಡೆಯೊಳ್ = ಕೆಲವೆಡೆಯಲ್ಲಿ, ಜತ್ವಂ = ಜಕಾರವಪ್ಪುದು ; ಮೇಣ್ = ಅದಲ್ಲದೆ, ಅರೆಎಡೆಯೊಳ್ = ಕಿಱಿದೆಡೆಯಲ್ಲಿ, ಸಂಖ್ಯಾ = ಸಂಖ್ಯಾವಾಚಿ, ಆಗೆ, ನಿಯತಂ = ಕಟ್ಟಾಗಿ, ಛತ್ವಂ = ಛಕಾರವಪ್ಪುದು.

**ವೃತ್ತಿ** - ಯಕಾರ ಲಕಾರಂಗಳಂ ಕಳೆದುಟೆದ ವ್ಯಂಜನಂಗಳ್ಗೆ ಪರಮಾಗಿ ನಿಂದ ಸಕಾರಂ ಬಹುಳತೆಯಿಂ ಚತ್ವಮಕ್ಕುಂ ; ಕೆಲವೆಡೆಯೊಳ್ ಜತ್ವಮಕ್ಕುಂ; ಕಿಱಿದೆಡೆಯೊಳ್ ಸಂಖ್ಯೆಯಾಗೆ ಛತ್ವಮಕ್ಕುಂ.

**ಪ್ರಯೋಗಂ -**

ಚತ್ವಕ್ಕೆ -

ದ್ರುತಪದ ॥ ... ನು
ಣ್ಚರದ ತಿಣ್ಪು ಘನಘೋಷಗಭೀರಂ ॥ ೧
(ಕಾವ್ಯಾವಲೋಕನಂ ೭೪)

ಚಂ ॥ ಮಾ ॥ ... ಈಂಚರದಿನಾಣತಿಮಾಡಿದುವುನ್ಮದಾಳಿಗಳ್ ೨

ಜತ್ವಕ್ಕೆ -

ಕಂ ॥ ... ಕಟ್ಟಿದ ಪೊಂ
ಜುರಿಗೆಯೊಳಂ ಜನಮನೇಂ ಮನಂಗೊಳಿಸಿದುದೋ ॥ ೩
(ಆದಿಪುರಾಣಂ ೪-೩೬; ಕಾವ್ಯಾವಲೋಕನಂ ೭೬)

ಮುಂಜೂರ್; ಮುಂಜೆಱಂಗು; ತಣ್ಜೂಡರ್

ಛತ್ವಕ್ಕೆ -

ಮ ॥ ವಿ ॥ ಪದಿನೆಣ್ಬಾಸಿರಲೋಹವಕ್ಕರೆಯ ಜಾತ್ಯಶ್ವಂಗಳಿರ್ಛಾಸಿರಂ
ಮದಮಂ ಮುಕ್ಕುಳಿಸಿರ್ದ ದಂತಿಘಟೆಗಳ್ ... ೪
(ಕಾವ್ಯಾವಲೋಕನಂ ೭೭)

ಮಣಿವಿಭೂಷಣ ॥ ... ನೂ ।
ಛ್ಛಾಸಿರಂಗಳವೊಲಾಯ್ತು ರಥಂ ಕಡುವೇಗದಿಂ ॥ ೫
(ಕಾವ್ಯಾವಲೋಕನಂ ೨೭)

ಬಹುಳಮೆಂಬುದಱಿಂ ಕೆಲವೆಡೆಯೊಳಿಲ್ಲ -

ಕಂ ॥ ಕಣ್ಸೋಲಮನಱಿಯಂ ಪರ
ವೆಣ್ಸುರವಧುಗೆಣೆಗೆ ವರ್ಪೊಡಂ ತೊಡರ್ದಾತಂ ॥
ಮೇಣ್ಸುರನಕ್ಕೆಮ ಚಲದ ಪ ।
ವಣ್ಸರಿ ಕೀೞ್ಸರಿಗೆ ವಾರನಹಿತಕೃತಾಂತಂ ॥ ೬
(ಕಾವ್ಯಾವಲೋಕನಂ ೭೫)

ಸೋನೆಯ ಕೆಸರ್ಗಳಲರ್ದಲರ ಬೆಳ್ಸರಿ ... ೭

ಕಂ ॥ ಕಳ್ಸವಿಗೆ ಕುಡಿದು ಧನಮಂ ... ೮

ಯ ಲ ರಹಿತಕ್ಕೆ -

ಚಂ ॥ ಮಾ ॥ ... ಬಾಯ್ಸವಿಗೆ ಮೆಯ್ಸವಿ ಕಣ್ಸವಿಯಪ್ಪ ರೂಪು ... ೯

ಚಂ ॥ ಮಾ ॥ ... ಕಯ್ಸುರಗಿಯಂ ಪಿಡಿ ಗೂರ್ಜರ ಕೆರ್ಪನಾಗಳುಂ ... ೧೦

ಚಂ ॥ ಮಾ ॥ ... ಮಾವಿನೊಳ್ ।
ಮಿಸುಗುತುಮಿರ್ಪ ಬಲ್ಸೊನೆಯ ಸನ್ನೆಗೆ ಕಾಂಚನಕೇತಕೀವನ
ಪ್ರಸವದಳಂಗಳೋಲೆಗುಡೆ ... ೧೧
(ಸೂಕ್ತಿಸುಧಾರ್ಣವಂ ೪-೩೪)

ಕಲ್ಸೆಱೆ ; ಮೆಲ್ಸರಂ.

ಬಹುಳಮೆಂಬುದಱಿಂ ಸ್ವರಂಗಳ ಪರದಲ್ಲಿರ್ದ ಸಕಾರಕ್ಕಂ ಕಿಱಿದೆಡೆಗಳಲ್ಲಿ ಚಕಾರ ಜಕಾರಂಗಳಪ್ಪುವು -

ಮುಚ್ಚೇರೆ; ಮುಚ್ಚಾಲ್; ತುಡುಜೊಡರ್.

**ಸೂತ್ರಂ ॥ ಮೊದಲೊಳ್ ಹ್ರಸ್ವೈಕಸ್ವರ ।**
**ಮೊದವೆ ಪರಂ ಸ್ವರಮದಾಗೆ ನ ಣ ಲ ಯ ಳಂಗ ॥**
**ಳ್ಗುದಯಿಸುಗುಂ ದ್ವಿತ್ವಂ ಪೂ ।**
**ರ್ವದೀರ್ಘಕವ್ಯಯಕೆ ವರ್ಣತತಿಗದ್ವಿತ್ವಂ ॥ ೬೯ ॥**

**ಟೀಕೆ** - ಮೊದಲೊಳ್ = ಆದಿಯಲ್ಲಿ, ಹ್ರಸ್ವ = ಹ್ರಸ್ವವಾದ, ಏಕ = ಒಂದು, ಸ್ವರಂ = ಸ್ವರಾಕ್ಷರಂ, ಒದವೆ = ಬರೆ, ಸ್ವರಂ = ಸ್ವರಾಕ್ಷರಂ, ಅದು, ಪರಂ = ಮುಂದು, ಆಗೆ, ನ ಣ ಲ ಯ ಳಂಗಳ್ಗೆ = ನಕಾರ ಣಕಾರ ಲಕಾರ ಯಕಾರ ಳಕಾರಂಗಳ್ಗೆ, ದ್ವಿತ್ವಂ = ದ್ವಿರ್ಭಾವಂ, ಉದಯಿಸುಗುಂ = ಹುಟ್ಟುವುದು; ಪೂರ್ವದೀರ್ಘಕೆ

= ಆದಿದೀರ್ಘಕ್ಕೆ , ಅವ್ಯಯಕೆ = ಅವ್ಯಯ ಶಬ್ದಂಗಳ್ಗೆ, ವರ್ಣತತಿಗೆ = ಅನೇಕಾಕ್ಷರಕ್ಕೆ , ಅದ್ವಿತ್ವಂ = ದ್ವಿತ್ವಮಿಲ್ಲ.

**ವೃತ್ತಿ** - ಹ್ರಸ್ವಮಪ್ಪೇಕಸ್ವರಂ ಪೂರ್ವಮಾಗೆ, ಸ್ವರಂ ಪರಮಾಗೆ, ನ ಣ ಲ ಯ ಳ ಕಾರಂಗಳ್ಗೆ ದ್ವಿತ್ವಮುಂಟು; ಪೂರ್ವದೀರ್ಘಮಾದೊಡಂ ಅವ್ಯಯಮಾದೊಡಂ ಅನೇಕಾಕ್ಷರಮಾದೊಡಂ ದ್ವಿತ್ವಮಿಲ್ಲ.

**ಪ್ರಯೋಗಂ -**

ಆದಿಹ್ರಸ್ವಮಾಗೆ ನಕಾರ ದ್ವಿರ್ಭಾವಕ್ಕೆ -

ಕಂ ॥ ಪೊನ್ನುಳ್ಳವನೆ ಕುಲೀನಂ ।
ಚೆನ್ನಂ ಕಲಿ ಸತ್ಯವಾದಿಯೆನಿಸುಗುಮದಱಿಂ ॥
ದಿನ್ನುಂ ಪೊನ್ನನೆ ಪಡೆವುದು ।
ಪೊನ್ನಿಂ ಸಮನಿಸುಗುಮಲ್ತೆ ಪೆಣ್ಣುಂ ಮಣ್ಣುಂ ॥ ೧
(ಕಾವ್ಯಾವಲೋಕನಂ ೮೦)

ಚಂ ॥ ಮಾ ॥ ಬಿಡುಮುಡಿ ಬೆನ್ನನಪ್ಪಳಿಸೆ ... ೨

ಣಕಾರಕ್ಕೆ -

ಕಂ ॥ ಕಣ್ಣಂ ಕವಿಯಳ್ ಚಿತ್ರದ
ಪೆಣ್ಣಂತಿರೆ ನುಡಿಯಳ್ ... ೩
(ಸೂಕ್ತಿಸುಧಾರ್ಣವಂ ೭-೫೫)

ಕಂ ॥ ಮನದೊಳ್ ದಯೆಯಿಲ್ಲದವನ ಕಣ್ಣೇಂ ಪುಣ್ಣೇಂ ೪

ಕಂ ॥ ಎಣ್ಣೆಯೊಳರನೇಱುಲ ತನಿ ।
ವಣ್ಣಂ ನುಣ್ಣಿಸಿದನಬ್ಜಭವನೆನಿಸಿದ ಮೆ ॥
ಯ್ವಣ್ಣದ ಶಬರಿ ತಮಾಲದ ।
ತಣ್ಣೆಟಿಲೊಳ್ ಕಣ್ಣ ಬೆಳಗೆ ಬೆಳಗಾಗಿರ್ದಳ್ ॥ ೫
(ಸೂಕ್ತಿಸುಧಾರ್ಣವಂ ೩-೨೦೪)

ಲಕಾರಕ್ಕೆ -

ಕಂ ॥ ಕಲ್ಲೆಲ್ಲಂ [1]ಸಸಿಗಲ್ ಮರ ।
ನೆಲ್ಲಮವಿಮ್ಮಾವು ಬಳ್ಳಿಯೆಲ್ಲಂ ಲತೆ ಮು ॥
ಳ್ಳೆಲ್ಲಂ ಕೇದಗೆ ಬೆಳಗೆ ।
ಯ್ಯೆಲ್ಲಂ ಫಲಶಾಲಿಯೆಂದೊಡೇವೊಗಟ್ವುದದಂ ॥ ೬
(ಕಾವ್ಯಾವಲೋಕನಂ ೮೧)

ಕಂ ॥ ನೆಲ್ಲುಂ ಕೌಂಗುಂ ಮಾವುಂ ।
ಮಲ್ಲಿಗೆಯುಂ ಬೆಳೆವುವಲ್ಲಿ ಕರ್ವಿನ ರಸದಿಂ ... ೭
(ಸೊಕ್ತಿಸುಧಾರ್ಣವಂ ೪-೫೧)

~~~~~~~~~~~~~~~~~~~~

೧. ಕಿಸುಗಲ್
~~~~~~~~~~~~~~~~~~~~

ಕಂ ॥ ಹುಲ್ಲುಂ ಹುಟ್ಟುಗೆಯುಂ ಬೆಳೆ ।
ದೆಲ್ಲೆಲ್ಲಿಯುಮವನ ಬೀಡಿನೊಳ್ ... ೮

ಯಕಾರಕ್ಕೆ -

ಕಂ ॥ ಮೆಯ್ಯ ಮಸಿ ಕೊರಲ ಬಕ್ಕಳೆ
ಪೊಯ್ಯೆ ಘರಿಲ್ಲಗರೆವ ಕೆಯ್ಯ ... ೯

(ಕಾವ್ಯಾವಲೋಕನಂ ೩೦೯)

ಳಕಾರಕ್ಕೆ -

ಮುಳ್ಳಾಗಿ; ಕಳ್ಳಾಟಂ

ಕಂ ॥ ... ಒಳ್ಳಾಳೆಡೆಗೋದನೊದಱ ಜಟ್ಟನೊಳೊವಜಂ ... ೧೦

(ಕಾವ್ಯಾವಲೋಕನಂ ೨೨೪)

ಸ್ರ ॥ ... [1]ಬೇಟ್ಟುರಳ್ಳಂ ಕೊದಳಿವೆರಸು ತಿಂದಂತೆ ಮುನ್ನಾಗದೇ[ವಂ] ... ೧೧

ಪೂರ್ವದೀರ್ಘಮಾಗೆ [ದ್ವಿರ್ಭಾವಮಿಲ್ಲ] -

ನಕಾರಕ್ಕೆ -

ಕಂ ॥ ತಾನೆ ಗಡಳಿಪಂ ಮೂರ್ಖಂ ... ೧೨

(ಕಾವ್ಯಾವಲೋಕನಂ ೧೫೪)

ಕಂ ॥ ಮೀನಾಗಿಯುಮೆಸಡಿಯಾಗಿಯೇನಾಗಿರೆಯುಂ ... ೧೩

ತಾನೆಲ್ಲಂ; ಬಾನುದ್ದಂ; ಏನಾಯ್ತು.

ಣಕಾರಕ್ಕೆ -

ಕಂ ॥ ನಾಣಂ ಪಿಂಗಿಸಿ ಮುಗ್ಧೆಗೆ
ಜಾಣಂ ಕೈಕೊಳಿಸುವಂತೆ ... ೧೪

ಏಣುಂಟು

ಲಕಾರಕ್ಕೆ -

ಕಂ ॥ ಕೇಲಂ ಮಾಡುವ ತಿಗುರಿಯ
ಕೋಲಂತೆವೊಲಿರ್ದುದಿಟ್ಟಿ ತನು ಕಡೆವಿನೆಗಂ ೧೫

(ಸೂಕ್ತಿಸುಧಾರ್ಣವಂ ૩-೧૩೦)

ಮ ॥ ವಿ ॥ ... ಜಂ
ತ್ರದ ಕೀಲಂ ಕಳೆದಂತಿರಾಯ್ತು ... ೧೬

ಯಕಾರಕ್ಕೆ -

ಸ್ರ ॥ ತಾಯೊರ್ವಳ್ ತಂದೆ ಬೇಱೆ ... ೧೭

ಕಂ ॥ ... ಬಾಯೊಳ್ ಪದಿನಾಲ್ಕು ಲೋಕಮಿರ್ದುದ ಕಂಡೆಂ ೧೮

---

೧. ಸೋಟ್ಟೊಡೆಳ್ಳಂ

ಕಂ ॥ ಈಯಲಿಱಿಯಲ್ ಶರಣ್ಬುಗೆ
ಕಾಯಲ್ ... ೧೯

(ಸಾಹಸಭೀಮವಿಜಯಂ ೨-೧೬)

ೞಕಾರಕ್ಕೆ -

ಶಾ ॥ ವಿ ॥ ಆೞಾೞೋೞಿಯ ಮಾನಸಂಗೆ ಬಡವಂಗೆ ... ೨೦

ತೋೞಾಟಂ; ಬಾೞೊಪ್ಪಂ

ಅವ್ಯಯಕ್ಕೆ -

ನವನಲಿನ ॥ ... ಒ
ಳ್ಗಲಿ ದಲಿವಂ ಜವನಲ್ಲಿಯುಂಡಿಗೆದಂದನೋ ॥ ೨೧

(ಕಾವ್ಯಾವಲೋಕನಂ ೮೨)

ಅನೇಕಾಕ್ಷರಕ್ಕೆ -

ಕಂ ॥ ಸರಣಾರುಮೊಳರೆ [1]ಖಳಸಂ
ಸರಣದೊಳ್ ... ೨೨

(ಕಾವ್ಯಾವಲೋಕನಂ ೮೩)

ಲಕಾರಕ್ಕೆ -

ಕಂ ॥ ಪರಲೆಲ್ಲಂ ಮುತ್ತುಮಾಣಿಕಂ ಪಾಸಱೆಗಳ್
ಪರುಸಂಗಳ್ ... ೨೩

(ಸೂಕ್ತಿಸುಧಾರ್ಣವಂ ೩-೧೨)

ಳಕಾರಕ್ಕೆ -

ಕಂ ॥ ... ಎನ್ನ ಮಾತಿನೊಳ್ ತೊದಳುಂಟೇ ॥ ೨೪

ಪವಣೆಲ್ಲಂ

ಅವ್ಯಯಕ್ಕೆ ಕೆಲವು ಶಬ್ದಂಗಳೊಳ್ ದ್ವಿತ್ವಮುಂಟು -

ಉ ॥ ಮಾ ॥ ... ೞ
ನ್ನಾವುದು ಕಜ್ಜಮೆಂದು ತೊಲೆಯಂ ಜನರಂಜನೆಗೇಱ ... ೨೫
(ಮಲ್ಲಿನಾಥಪುರಾಣಂ ೮-೮೦; ರಾಮಚಂದ್ರಚರಿತಪುರಾಣಂ ೬-೧೬೬)

ಇನ್ನೇನಂ ಪೇೞ್ವೆಂ ... ೨೬

**ಸೂತ್ರಂ ॥ ಧಾತುಗಲುಂ ಪರಮಾದೊಡ ।**
**ಜಾತಂ ದ್ವಿತ್ವಂ ಯಕಾರದಲ್ಲಿ ವಿಕಲ್ಪಂ ॥**
**ಮಾತೇನುಯ್ನೆಯ್ಸುಯ್ಬ ।**
**ಯ್ಧಾತುಗಳೊಳ್ ದ್ವಿತ್ವಮಲ್ಲದಿಲ್ಲ ವಿಕಲ್ಪಂ ॥ ೭೦ ॥**

---

೧. ಖಳಸಂಹರಣದೊಳ್. ಕ.ಖ.

**ಟೀಕೆ** – (ಅನುವರ್ತನೆ - ನ ಣ ಲ ಯ ಳ ಕಾರಂಗಳಂತ್ಯವಾದ) ಧಾತುಗೆ = ಧಾತುಗಳ್ಗೆ, ಅಲುಂ = ಅಲ್ ಎಂಬುದುಂ, ಉಂ ಎಂಬ ಸಮುಚ್ಚಯದಿಂದೆ ಎಕಾರಾದಿ ಸ್ವರಂಗಳುಂ, ಪರಂ = ಮುಂದು, ಆದೊಡೆ = ಆದರೆ, ದ್ವಿತ್ವಂ = ದ್ವಿರ್ಭಾವಂ, ಅಜಾತಂ = ಹುಟ್ಟದು; ಯಕಾರದಲ್ಲಿ = ಯಕಾರಾಂತ ಧಾತುವಿನಲ್ಲಿ, ವಿಕಲ್ಪಂ = ವಿಕಲ್ಪವಾಗಿ ಬರ್ಪುದು; ಮಾತೇಂ = ಹೇೞ್ವುದೇಂ, ಉಯ್ನೆಯ್ಸುಯ್ಬಯ್ಧಾತುಗಳೊಳ್ = ಉಯ್, ನೆಯ್, ಸುಯ್, ಬಯ್ ಎಂಬ ಧಾತುಗಳಲ್ಲಿ, ದ್ವಿತ್ವವಲ್ಲದೆ - ದ್ವಿರ್ಭಾವಮಲ್ಲದೆ, ವಿಕಲ್ಪಂ, ಇಲ್ಲ = ಉಂಟಾಗದು.

**ವೃತ್ತಿ** – ನ ಣ ಲ ಯ ಳ ಕಾರಂಗಳಂತ್ಯಮಾದ ಧಾತುಗೆ ಅಲ್ಪರಮಾದೊಡಂ ದ್ವಿತ್ವಮಿಲ್ಲ; ಯಕಾರಾಂತದಲ್ಲಿ ವಿಕಲ್ಪಂ; ಉಯ್ ನೆಯ್ ಸುಯ್ ಬಯ್ ಎಂಬಿವರ್ಕೆ ಅಲ್ಪರಮಾದೊಡಂ ವಿಭಕ್ತಿಸ್ವರಂ ಪರಮಾದೊಡಂ ದ್ವಿತ್ವಂ ನಿತ್ಯಂ.

**ಪ್ರಯೋಗಂ** –

ಅದ್ವಿತ್ವಕ್ಕೆ -

ಎನಲ್ತಕ್ಕಂ; ತಿನಲ್ಕೊಂಡಂ; ಉಣಲ್ಬಂದಂ; ಮೆಲಲ್ವೋದಂ;

ಕೊಲಲ್ಬಗೆವಂ; ಕೊಳಲ್ಸಾರ್ದಂ; ಕಳಲ್ನೋಡಿದಂ.

ಯತ್ವಕ್ಕೆ - ಪೊಯಲುಂ - ಪೊಯ್ಯಲುಂ; ಕೊಯಲುಂ - ಕೊಯ್ಯಲುಂ.

ಆದಿದೀರ್ಘಮಾದೊಡಂ ಅನೇಕಾಕ್ಷರಮಾದೊಡಂ ವಿಭಕ್ತಿಸ್ವರಮುಂ ಪರಮಾದೊಡಂ ಆರಯ್ ಎಂಬ ಧಾತುಗೆ ದ್ವಿತ್ವವಿಕಲ್ಪಂ - ಆರಯಲುಂ, ಆರಯ್ಯಲುಂ; ಆರಯಿಂ, ಆರಯ್ಯಿಂ; ಆರಯೆ, ಆರಯ್ಯೆ - ಎಂಬಂತೆ.

ಉಯ್ಯಾದಿ ನಿತ್ಯದ್ವಿತ್ವಕ್ಕೆ - ಉಯ್ಯಂ; ನೆಯ್ಯರ್; ಸುಯ್ಯಯ್; ಬಯ್ಯೆವು; ಉಯ್ಯಲುಂ; ನೆಯ್ಯಲುಂ - ಎಂಬಂತೆ.

ಸಮುಚ್ಚಯವಶದಿಂದೆಕಾರಾದಿಸ್ವರಂ ಪರಮಾದೊಡೆ ದ್ವಿತ್ವಮಿಲ್ಲ - ಎನೆ; ಕೊಲೆ; ಉಣೆ.

**ಸೂತ್ರಂ ॥ ಪ್ರತಿಷೇಧದ [1]ಧಾತುಗೆ ಮುಂ ।**
**ದೆ ತಱುಂಬೆ ವಿಭಕ್ತಿ ಪೂರ್ವಕಾಲಕ್ರಿಯೆಯೊಳ್ ॥**
**ಪ್ರತಿಷೇಧದದೆಂಬುದು ಮುಂ ।**
**ದೆ ತೋಱೆ ಮೇಣ್ ದ್ವಿತ್ವವೃತ್ತಿ ನಿತ್ಯಮೆನಿಕ್ಕುಂ ॥ ೭೧ ॥**

**ಟೀಕೆ** - (ಅನುವರ್ತನೆ - ನ ಣ ಲ ಯ ಳ ಕಾರಂಗಳಂತ್ಯವಾದ) ಪ್ರತಿಷೇಧದ = ಪ್ರತಿಷೇಧಾರ್ಥದ, ಧಾತುಗೆ = ಧಾತುಗಳ್ಗೆ, ಮುಂದೆ = ಮುಂದುಗಡೆಯಲ್ಲಿ, ವಿಭಕ್ತಿ = ಪ್ರತ್ಯಯಂ, ತಱುಂಬೆ = ನಿಂದಿರೆ, ಮೇಣ್ = ಅದಲ್ಲದೆ, ಪೂರ್ವಕಾಲಕ್ರಿಯೆಯೊಳ್ = ಭೂತಕಾಲಕ್ರಿಯೆಯಲ್ಲಿ, ಪ್ರತಿಷೇಧದ = ಪ್ರತಿಷೇಧಾರ್ಥದ, ಅದೆ ಎಂಬುದು, ಮುಂದೆ = ಮುಂಗಡೆಯಲ್ಲಿ, ತೋಱೆ = ಕಾಣಿಸೆ, ದ್ವಿತ್ವವೃತ್ತಿ = ದ್ವಿರ್ಭಾವದ ವೃತ್ತಿ, ನಿತ್ಯಂ, ಎನಿಕ್ಕುಂ = ಎನಿಸುವುದು.

~~~~~~~~~~~~~~~~~~~~

೧. (ಧಾತುವ)
~~~~~~~~~~~~~~~~~~~~

**ವೃತ್ತಿ** - ಪ್ರತಿಷೇಧದರ್ಥದೊಳ್ ಧಾತುವಿಂಗೆ ವಿಭಕ್ತಿ ಪರಮಾದೊಡಂ ಭೂತಕಾಲಕ್ರಿಯೆಯೊಳ್ ಪ್ರತಿಷೇಧಮನುಸಿರ್ವ ಅದ ಎಂಬುದು ಪರಮಾದೊಡಂ ನ ಣ ಲ ಯ ಳಂಗಳ್ಗೆ ದ್ವಿತ್ವವೃತ್ತಿ ನಿತ್ಯಂ.

**ಪ್ರಯೋಗಂ** -

ವಿಭಕ್ತಿಗೆ -

ಎನ್ನಂ, ಎನ್ನರ್; ಉಣ್ಣಂ, ಉಣ್ಣರ್; ಮೆಲ್ಲಯ್, ಮೆಲ್ಲಿರ್; ಬಯ್ಯೆನ್, ಬಯ್ಯೆವು, ಕೊಳ್ಳೆನ್, ಕೊಳ್ಳೆವು.

ಅದೆಗೆ -

ಎನ್ನದೆ, ತಿನ್ನದೆ, ಉಣ್ಣದೆ, ಒಲ್ಲದೆ, ಬಯ್ಯದೆ, ಕೊಳ್ಳದೆ.

ಮೇಣೆಂಬುದಱಿಂ ಕಳ್ ಎಂಬ ಧಾತುವಿಂಗೆಲ್ಲಿಯುಂ ದ್ವಿತ್ವಮಿಲ್ಲ - ಕಳಲ್ಪೋದಂ, ಕಳಲ್ಬಂದಂ, ಕಳದೆ ಬಂದಂ - ಇಂತಱಿವುದು.

ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಶಲ್ಯ
ಚಾರುಚುಂಬಕಾಯಮಾನಾನೂನ ಕರ್ಣಾಟಕಲಕ್ಷಣಶಿಕ್ಷಾಚಾರ್ಯ ಸುಕವಿ
ಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಸಂಧಿಕಾರ್ಯಮೆಂಬ
ಪ್ರಥಮಸಂಧಿ ಸಂಪೂರ್ಣಂ

# ಎರಡನೆಯ ಸಂಧಿ

## ನಾಮಪ್ರಕರಣಂ

**ಸೂತ್ರಂ॥** **ಕ್ರಿಯೆಯಂ ನುಡಿಯದುದು ವಿಭ ।**
**ಕ್ತಿಯನಿಲ್ಲದುದರ್ಥಮುಳ್ಳುದಂತದು ಲಿಂಗಂ ॥**
**ನಿಯತ ಚತುರ್ಭೇದಮದಾ ।**
**ರಯ ಕೃತ್ತದ್ಧಿತ ಸಮಾಸ ನಾಮ ಸ್ಥಿತಿಯಿಂ ॥ ೭೨ ॥**

**ಟೀಕೆ -** ಕ್ರಿಯೆಯಂ = ಕ್ರಿಯಾರ್ಥವಂ, ನುಡಿಯದುದು = ಹೇಳದುದು, ವಿಭಕ್ತಿಯಂ =ಸಪ್ತವಿಭಕ್ತಿಗಳಂ, ಇಲ್ಲದುದು = ಇಲ್ಲದೆ ಇರ್ದುದು, ಅರ್ಥಂ = ಪುರುಳ್, ಉಳ್ಳುದು = ಉಂಟಾದುದು, ಅಂತು = ಹಾಗೆ, ಅದು, ಲಿಂಗಂ = ಲಿಂಗವೆನಿಸುವುದು: ಅದು = ಆ ಲಿಂಗಂ, ಆರಯೆ = ವಿಚಾರಿಸೆ, ಕೃತ್ತದ್ಧಿತ ಸಮಾಸ ನಾಮ = ಕೃಲ್ಲಿಂಗಮೆಂಬ, ತದ್ಧಿತಲಿಂಗಮೆಂಬ. ಸಮಾಸಲಿಂಗಮೆಂಬ, ನಾಮಲಿಂಗಮೆಂಬ, ಸ್ಥಿತಿಯಿಂ = ಇರ್ಕೆಯಿಂದೆ, ನಿಯತ = ನಿಶ್ಚಿತವಾದ, ಚತುರ್ಭೇದಂ = ನಾಲ್ಕು ಭೇದವಾಗಿರ್ಪುದು.

**ವೃತ್ತಿ** - ಕ್ರಿಯಾವಾಚಕಮಾಗಿ ಸಲ್ಲದುದು, ಸಪ್ತವಿಭಕ್ತಿಗಳನಿಲ್ಲದುದು, ನಿರರ್ಥಕಮಾಗಿ ಸಲ್ಲದುದು ಲಿಂಗಮೆನಿಸುಗುಂ; ಆ ಲಿಂಗಂ ಕೃತ್ತೆಂದು, ತದ್ಧಿತಮೆಂದು, ಸಮಾಸಮೆಂದು, ನಾಮಮೆಂದು ನಾಲ್ಕು ತೆಱನಕ್ಕುಂ.

**ಪ್ರಯೋಗಂ -** ನಾಮವಿಭಕ್ತಿ ಪತ್ತಿಸುವುದು.

ಕೃತ್ತಿಂಗೆ - ಮಾಡಿದ, ಬೇಡಿದ, ನೋಡಿದ, ಕೂಡಿದ ಎಂದಿರಿಸಿ, ಕೃತ್ತನಱಿವುದು; ತಱುವಾಯಿಂ ಮಾಡಿದಂ, ಮಾಡಿದನಂ, ಮಾಡಿದನಿಂ, ಮಾಡಿದಂಗೆ, ಮಾಡಿದನತ್ತಣಿಂ, ಮಾಡಿದನ, ಮಾಡಿದನೊಳ್ ಎಂದೀ ಪರಿ ವಿಭಕ್ತಿಮಾಲೆಯಕ್ಕುಂ.

ಮ ॥ ವಿ ॥ ... ತನ್ನ ನೀಳ್ದ ಜಸದಿಂ ಬೆಳ್ದಿಂಗಳಂ ಮಾಡಿದಂ ... ೧

ಚಂ ॥ ಮಾ ॥ ಎರಳೆಯ ಭಾವಮಂ ನೃಪತಿ ಕಂಡಿಸಲಾಱದೆ ನಿಂದು ನೋಡಿದಂ ॥ ೨

(ಸೂಕ್ತಿಸುಧಾರ್ಣವಂ ೩-೧೨೮)

ಮ ॥ ವಿ ॥ ... ಬೇಡಿದನಿಷ್ಟಮಂ ಸಲಿಪುದುಂ ಕರ್ಣಂಗೆ ಜನ್ಮವ್ರತಂ ೩

ಮ ॥ ವಿ ॥ ... ಕೂಡಿದಂ
ಗೆರಡಂ ತಾಂ ಬಗೆವಾತನುಂ ನರಕದೊಳ್ ಬೀೞ್ವಲ್ಲಿಗೇಂ ಸಂದೆಯಂ ... ೪

ತದ್ಧಿತಕ್ಕೆ - ಅಡಪವಳ, ಮಡಿವಳ ಎಂದಿರಿಸಿ, ತದ್ಧಿತಮನಱಿವುದು; ತಱುವಾಯಿಂ - ಅಡಪವಳಂ. ಅಡಪವಳನಂ, ಅಡಪವಳನಿಂ, ಅಡಪವಳಂಗೆ, ಅಡಪವಳನತ್ತಣಿಂ, ಅಡಪವಳನ, ಅಡಪವಳನೊಳ್ ಇಂತಕ್ಕುಂ.

ಕಂ॥ ಅಡಪವಳಂ ಪಡೆವಳ್ಳಂ
ಮಡಿವಳ್ಳಂ ಸೆಜ್ಜೆವಳ್ಳನಜ್ಜಂ ಬೆಜ್ಜಂ ... ೫

(ಕಾವ್ಯಾವಲೋಕನಂ ೩.೨೬)

ಷಟ್ಸಮಾಸಂಗಳ್ಗಂ ಸಪ್ತವಿಭಕ್ತಿಯಂ ಪತ್ತಿಸುವುದು -

ಕನ್ನಡ ಸಮಾಸಕ್ಕೆ -

ತೆಂಗಾಳಿ, ತೆಂಗಾಳಿಯಂ, ತೆಂಗಾಳಿಯಿಂ, ತೆಂಗಾಳಿಗೆ, ತೆಂಗಾಳಿಯತ್ತಣಿಂ, ತೆಂಗಾಳಿಯ, ತೆಂಗಾಳಿಯೊಳ್.

ಇಮ್ಮಾವು; ಈರೈದು; ಮರಗಿಡುಬಳ್ಳಿಪುಲ್ಲೊಪ್ಪದಜುಪಕ್ಕಿಮಿಗಂಗಳ್; ಮುಂಗಯ್; ಕುಡುವಿಲ್ಲಂ[೧]

... ತೆಂಗಾಳಿ ಭೃಂಗಾಳಿ ಪುಂಸ್ಕೋಕಿಲನಾದಂ ವೇದನಾದಂ ೬

ಕಂ॥ ... ಇಮ್ಮಾವು ಬಳ್ಳಿಯೆಲ್ಲಂ ಲತೆ ಮು
ಳ್ಳೆಲ್ಲಂ ಕೇದಗೆ ಬೆಳೆಗೆ
ಯ್ಯೆಲ್ಲಂ ಫಲಶಾಲಿಯೆಂದೊಡೇವೊಗಟ್ಟುದದಂ ॥ ೭

(ಕಾವ್ಯಾವಲೋಕನಂ ೮೧)

ಕಂ॥ ಈರಯ್ದು ಗತಿಯೊಳಯ್ದುಂ
ಧಾರೆಯೊಳೆ ... ೮

ಚಂ॥ಮಾ॥ ಮರಗಿಡುಬಳ್ಳಿಪುಲ್ಲೊಪ್ಪದಜುಪಕ್ಕಿಮಿಗಂಗಳ ಜೇನ ಪುಟ್ಟು ... ೯

... ಉರದ ಬಲಂ ಮುಂಗಯ್ಗೆಂಬಂತಿದಿರಾಂತನಾ ಬಲಂ ... ೧೦

ಕಂ॥ ಕುಡುವಿಲ್ಲನೆಚ್ಚ ಸರಲುಂ
ನಡದು ದಲಂದೊರ್ವನೆರ್ದೆಯನ್ ... ೧೧

(ಕಾವ್ಯಾವಲೋಕನಂ ೨೦೯)

ಸಂಸ್ಕೃತ ಸಮಾಸದಲ್ಲಿ -

ಪುರವನ, ನೀಲೋತ್ಪಲ, ತ್ರಿಶೂಲ, ತರುಲತೆ, ಸದಯ, ಜಿತಮದನ ಎಂಬಿವುಮವಱಂತೆ ಸಮಾಸಲಿಂಗಂಗಳಪ್ಪುವು; ಇವರ್ಕಂ ವಿಭಕ್ತಿಯಂ ಪತ್ತಿಸುವುದು- ಪುರವನಂ, ಪುರವನಮಂ, ಪುರವನದಿಂ, ಪುರವನಕ್ಕೆ, ಪುರವನದತ್ತಣಿಂ, ಪುರವನದ, ಪುರವನದೊಳ್.

'ಆದ ವಿಷ್ಣು' ಎಂಬ (ಕನ್ನಡದ) ಗಮಕ ಸಮಾಸಮುಂ 'ಪಿರಿದೀವಂ' ಎಂಬ (ಕನ್ನಡದ) ಕ್ರಿಯಾಸಮಾಸಮುಂ ಕೃತ್ತ್ರಿವಿಷ್ಟಲಿಂಗಂಗಳ್; ಇವುಮವಱಂತೆ ಸಲ್ವುವು.

ಕಂ॥ ... ಜಲದನಿ
ಭೋರಃಸ್ಥಲನಾದ ವಿಷ್ಣು ವಿಜಯಾದಿತ್ಯಂ ೧೨

ಕಂ॥ ಪಿರಿದೀವಂ ನಿಲೆ ನುಡಿವಂ
ಸೆರಗಂ ಬೆರಗಂ ಪ್ರತಾಪಿ ... ೧೩

~~~~~~~~~~~~~~~~~~~~

೧. (ಪ್ರಚಲಿತಪರಿಷ್ಕರಣಗಳಲ್ಲಿಯ ಕೆಲವು ಲಕ್ಷ್ಯಗಳು ಪ್ರಥಮಪರಿಷ್ಕರಣದಲ್ಲಿಲ್ಲ. ಅವನ್ನು ಇಲ್ಲಿ ಉದ್ಧರಿಸಿದೆ).
~~~~~~~~~~~~~~~~~~~~

ನಾಮಲಿಂಗಕ್ಕೆ -

ಅರಸ, ಇಂದ್ರ, ಮೊಲ, ವರಾಹ, ಹರಿಣ, ಮೂಷಕ - ಎಂದಿರಿಸಿ ಸಪ್ತವಿಭಕ್ತಿಯಂ ಪತ್ತಿಸುವುದು; ಅರಸಂ, ಅರಸನಂ, ಅರಸನಿಂ, ಅರಸಂಗೆ, ಅರಸನತ್ತಣಿಂ, ಅರಸನ, ಅರಸನೊಳ್ - ಈ ಪರಿಯಿನಱಿವುದು.

ಕಂ॥ ಅರಸಂ ಮೂರ್ಖಂ ಸಚಿವರ್
ಸರಸ್ವತೀದ್ರೋಹರ್ ... ೧೪

ಮ ॥ ವಿ ॥ ... ಆಡಿದನಿಂದ್ರನಿಂದ್ರರೆ ಗಡಂ ಕೈವಾರಮಂ ಮಾಡಿದರ್ ೧೫
(ಅನಂತನಾಥ ಪುರಾಣಂ ೫-೫೯)

ಚಂ ॥ ಮಾ ॥ ... ಇಂದುಬಿಂಬದ ಮೊಲಂ ಕಲಿಮೂಕವರಾಹನಗ್ನಿಮಿ
ತ್ರನ ಹರಿಣಂ ವಿನಾಯಕನ ಮೂಷಕ ... ೧೬
(ಸೂಕ್ತಿಸುಧಾರ್ಣವಂ ೩-೧೨೩)

ಅರಸನೆಂಬುದರ್ಕೆ ಅರಸು ಎಂದುಮುಂಟು.

ಕ್ರಿಯಾರ್ಥಮಂ ನುಡಿವ ಧಾತು ಲಿಂಗಮಲ್ಲದು -ತೀಡು, ನೋಡು, ಬೇಡು, ಇಸು, ಪಸು - ಎಂಬಿವು ಮೊದಲಾದುವು.

**ಸೂತ್ರಂ ॥ ಭೂತ ಭವಿಷ್ಯತ್ಕ್ರಿಯೆಗಳು ।**
**ಪೇತ ವಿಭಕ್ತಿಗಳನುಱಿಯೆ ಕೃತ್ತಪ್ಪುವಸಂ ॥**
**ಭೂತಂ ಸಂಪ್ರತಿ ವಿಧಿಗಳೊ ।**
**ಳಾ ತೆಱದಿಂ ಮಧ್ಯಮೋತ್ತಮ ಕ್ರಿಯೆಗಳೊಳಂ ॥ ೭೩ ॥**

**ಟೀಕೆ** - ಭೂತ = ಭೂತಕಾಲದ, ಭವಿಷ್ಯತ್ = ಭವಿಷ್ಯತ್ಕಾಲದ, ಕ್ರಿಯೆಗಳ್ = ಕ್ರಿಯಾಪದಂಗಳ್, ಉಪೇತ = ತಮ್ಮಲ್ಲಿ ಕೂಡಿರ್ದ, ವಿಭಕ್ತಿಗಳಂ = ಕ್ರಿಯಾವಿಭಕ್ತಿಗಳಂ; ಉಱಿಯೆ = ಕಳೆಯೆ, ಕೃತ್ತು = ಕೃಲ್ಲಿಂಗಂ, ಅಪ್ಪುವು = ಆಗುವುವು; ಸಂಪ್ರತಿ = ವರ್ತಮಾನ ಕಾಲಕ್ರಿಯೆಗಳಲ್ಲಿ, ವಿಧಿಗಳೊಳ್ = ವಿಧಿಕ್ರಿಯೆಗಳಲ್ಲಿ, ಆ ತೆಱದಿಂ = ಆ ರೀತಿಯಿಂದೆ, ಮಧ್ಯಮ = ಮಧ್ಯಮ ಪುರುಷದ, ಉತ್ತಮ = ಉತ್ತಮ ಪುರುಷದ, ಕ್ರಿಯೆಗಳೊಳಂ = ಕ್ರಿಯೆಗಳಲ್ಲಿಯುಂ, ಅಸಂಭೂತಂ = ಕೃತ್ತು ಹುಟ್ಟದು.

**ವೃತ್ತಿ** - ಭೂತಕಾಲ ಕ್ರಿಯೆಯುಂ ಭವಿಷ್ಯಂತಿಯ ಕ್ರಿಯೆಯುಂ ತಮ್ಮತಮ್ಮಂತರ್ಗತಾಗಮಂಗಳಂ ಬೆರಸಿರ್ದು, ವಿಭಕ್ತಿಮಾತ್ರಮಂ ಕಳೆಯೆ, ಕೃಲ್ಲಿಂಗಮಪ್ಪುವು; ವರ್ತಮಾನಕ್ರಿಯೆಯುಂ ವಿಧಿಕ್ರಿಯೆಯುಂ ಮಧ್ಯಮಪುರುಷಕ್ರಿಯೆಯುಂ ಉತ್ತಮ ಪುರುಷಕ್ರಿಯೆಯುಂ ಕೃಲ್ಲಿಂಗಮಾಗವು; ಅವರ್ಕೆ (ನಾಮ)ವಿಭಕ್ತಿಯಂ ಪತ್ತಿಸಲಾಗದು.

**ಪ್ರಯೋಗಂ** -

ಭೂತವತಿಯ ಕೃತ್ತಿಂಗೆ -

ನಲಿದಂ ಎಂಬಲ್ಲಿ ಅಮ್ ಎಂಬ ವಿಭಕ್ತಿಯಂ ಕಳೆದು, ನಲಿದ ಎಂಬ ಕೃತ್ತನಿರಿಸಿ, ನಾಮವಿಭಕ್ತಿಯಂ ಪತ್ತಿಸಿ, ನಲಿದಂ, ನಲಿದನಂ, ನಲಿದನಿಂ ಎಂದು ಮಾಱ್ಪುದು.

ಚಂ ॥ ಮಾ ॥ ... ಬಾಱ್ದನೆಂದು ಮದನಂ ನಲಿದಂ ನಡೆ ನೋಡಿ ಚೂತಮಂ ೧

ಕಂ ॥ ಮದಗಜವೆರಡಱ ಬಾಲದ ।
ಮೊದಲಂ ಪಿಡಿದೆತ್ತಿಯೊತ್ತಿ ನುರ್ಗುತ್ತಿರೆಯಾ ॥
ಸ್ಯದಿನುಗುವ ರಕ್ತಮುರಿಯೆನೆ ।
ತಿದಿಯೊತ್ತುವ ಕಮ್ಮಱಂಬೊಲಿರ್ದಂ ಭೀಮಂ ॥ ೨

(ಕರ್ನಾಟಕ ಭಾಷಾಭೂಷಣಂ ೧೮೭)

ಮ ॥ ಸ್ರ ॥ ... ಬಂದನೀಗಳ್
ಪೞಿಸಲ್ಲಂ ದುರ್ಜಯಂ ಕೌರವಕುಳನಳಿನೀಕುಂಜರಂ ಭೀಮಸೇನಂ ॥ ೩

(ವಿಕ್ರಮಾರ್ಜುನ ವಿಜಯಂ ೧೩-೭೭)

ಭವಿಷ್ಯಂತಿಯ ಕೃತ್ತಿಂಗೆ - ಬೇಡುವಂ, ಪೊಯ್ವಂ.

ಮ ॥ ವಿ ॥ ... ಬಾ
ಲವಣಂ ಬೇಡುವನೊಂದೆ ಗೊಂದೆಗಮನಂಗಾರಾತಿಯಂ ಪೈಪಯಂ ॥ ೪

ಸ್ರ ॥ ... ಆ ವೇಶ್ಯಾವಾಟದೊಳ್ ಧೂರ್ಜಟಿಯ ನೊಸಲ ಕಣ್ಣಂ ಸ್ಮರಂ ನಂದೆ ಪೊಯ್ವಂ ॥ ೫

(ಮಲ್ಲಿನಾಥಪುರಾಣಂ ೨ - ೪೪)

ಕೃತ್ತಾಗದವರ್ಕೆ - ನೋಡಿದಪಂ, ಮಾಡಿದಪಂ; ಕುಡು, ತುಡು; ಬೇಡಿದಯ್, ಬೇಡಿದಿರ್; ಪಾಡುವೆನ್, ಪಾಡುವೆವು - ಎಂಬಂತೆ.

**ಸೂತ್ರಂ ॥ ವಿನುತ ಕ್ರಿಯಾತ್ಮಕಂಗಳು ।**
**ಮೆನಿಸುವ ಸಂಸ್ಕೃತದ ಭಾವವಚನಂಗಳನಾ ॥**
**ಯ್ದನಿತರ್ಕಮಿಸು ಪ್ರತ್ಯಯ ।**
**ವನೆ ಪತ್ತಿಸಿ ನಿಱಿಸೆ ಬರ್ಕುಮಾ ಕೃಲ್ಲಿಂಗಂ ॥ ೭೪ ॥**

**ಟೀಕೆ** - ವಿನುತ = ಕೊಂಡಾಡಲ್ಪಟ್ಟ, ಕ್ರಿಯಾತ್ಮಕಂಗಳುಂ = ಕ್ರಿಯಾಸ್ವರೂಪಂಗಳುಂ, ಎನಿಸುವ, ಸಂಸ್ಕೃತದ = ಸಕ್ಕದದ, ಭಾವವಚನಂಗಳಂ = ಭಾವವಾಚಿಗಳಂ, ಆಯ್ದು = ಆಯ್ದುಕೊಂಡು, ಅನಿತರ್ಕಂ = ಅಷ್ಟರ್ಕೆಯುಂ, ಇಸು ಪ್ರತ್ಯಯವನೆ = ಇಸು ಎಂಬ ಪ್ರತ್ಯಯವನೆ, ಪತ್ತಿಸಿ = ಪೊರ್ದುಗೆಯಂ ಮಾಡಿ, ನಿಱಿಸೆ = ನಿಱುಗೆ ಮಾಡೆ, ಆ ಕೃಲ್ಲಿಂಗಂ = ಆ ಹಿಂದೆ ಪೇೞ್ದ ಕೃಲ್ಲಿಂಗಂ, ಬರ್ಕುಂ = ಬರ್ಪುದು. ಅದೆಂತೆಂದೊಡೆ -*

*__ವಿಚಾರ__ - ಭಾವ, ಭಂಗ, ಭಾಗ, ಭೋಗ, ಧ್ಯಾನ - ಎಂಬಿವಾದಿಯಾದ ಭಾವವಾಚಿಗಳ ಮೇಲೆ ಇಸು ಪ್ರತ್ಯಯಂ ಪತ್ತೆ, ಭಾವಿಸು, ಭಂಗಿಸು, ಭಾಗಿಸು, ಭೋಗಿಸು, ಧ್ಯಾನಿಸು - ಎಂದು ಕನ್ನಡಕ್ಕೆ ಧಾತುವಾದಲ್ಲಿ, ಆಖ್ಯಾತದಲ್ಲಿ ಕ್ರಿಯಾಪದಂಗಳಾಗೆ, ಭೂತಭವಿಷ್ಯತ್ಕ್ರಿಯೆಗಳುಪೇತವಿಭಕ್ತಿಗಳನುೞಯೆ ಕೃತ್ತಪ್ಪುವೆಂದಱಿವುದು.

**ವೃತ್ತಿ** - ಕನ್ನಡಕ್ಕೆ ಕ್ರಿಯಾತ್ಮಕಂಗಳಪ್ಪ ಸಂಸ್ಕೃತದ ಭಾವವಚನಂಗಳನಾಯ್ದುಕೊಂಡು, ಇಸುಪ್ರತ್ಯಯಮಂ ಪತ್ತಿಸಿ, ಕೃಲ್ಲಿಂಗಮಂ ಮಾೞ್ಪುದು.

**ಪ್ರಯೋಗಂ** - ಭಾವಿಸಿದಂ, ಭಂಗಿಸಿದಂ, ಭಾಗಿಸಿದಂ, ರಂಗಿಸಿದಂ, ರಾಗಿಸಿದಂ, ಭೋಗಿಸಿದಂ, ಪ್ರೇರಿಸಿದಂ, ವರ್ಣಿಸಿದಂ, ವರ್ತಿಸಿದಂ, ತರ್ಜಿಸಿದಂ; ಚರಿಸಿದಂ, ಚರಿಯಿಸಿದಂ; ಧರಿಸಿದಂ, ಧರಿಯಿಸಿದಂ.[೧]

~~~~~~~~~~~~~~~~~~~

೧. (ಮುಂದಿನ ಪ್ರಯೋಗವನ್ನು ಪ್ರಚಲಿತ ಪರಿಷ್ಕರಣಗಳಿಂದ ಉದ್ಧರಿಸಿದೆ.)
~~~~~~~~~~~~~~~~~~~

ಕಂ ॥ ... ಜಳನಿಧಿ ಜಳ

ಚರಚಯಮಂ ರತ್ನಚಯಮುಮಂ ಧರಿಯಿಪವೊಲ್ ॥ ೧

(ಕಾವ್ಯಾವಲೋಕನಂ ೨೪೯)

**ಸೂತ್ರಂ ॥ ಸಮುಪಾತ್ತಕ್ರಿಯೆಯುಂ ವಾ ।**
**ಕ್ಯಮಾಲೆಯುಂ ಸುಕವಿರಚಿತನಾಮಮದಾದಂ ॥**
**ದಮರ್ಗುಂ ಲಿಂಗಂ ಮಾರ್ಗ ।**
**ಕ್ರಮಮಂ ಕಾಣಲ್ಕೆ ಬರ್ಪುದಾದ್ಯರ ಕೃತಿಯೊಳ್ ॥ ೭೫ ॥**

**ಟೀಕೆ** - ಸಂ = ಲೇಸಾಗಿ, ಉಪಾತ್ತ = ಎಯ್ದಲ್ಪಟ್ಟ, ಕ್ರಿಯೆಯುಂ, ವಾಕ್ಯಮಾಲೆಯುಂ = ವಾಕ್ಯಂಗಳ ಸಮೂಹಮುಂ, ಸುಕವಿ = ಸತ್ಕವೀಶ್ವರರಿಂದೆ, ರಚಿತ = ರಚಿಸಲ್ಪಟ್ಟ, ನಾಮಂ = ಪೆಸರ್, ಅದು, ಆದಂದು = ಆದ ಕಾಲದಲ್ಲಿ, ಲಿಂಗಂ = ಲಿಂಗವೆಂಬ ಸಂಜ್ಞೆ, ಅಮರ್ಗುಂ = ಪೊರ್ದುಗೆಯಪ್ಪುದು; ಮಾರ್ಗಕ್ರಮಮಂ = ಅವಱ ಮಾರ್ಗದ ರೀತಿಯಂ, ಆದ್ಯರ = ಪೂರ್ವಕವಿಗಳ, ಕೃತಿಯೊಳ್ = ಕಾವ್ಯಂಗಳಲ್ಲಿ, ಕಾಣಲ್ಕೆ = ಕುಱುಹಿಡಲ್ಕೆ, ಬರ್ಪುದು.

**ವೃತ್ತಿ** - ಎಯ್ದಲ್ಪಟ್ಟ ಕ್ರಿಯೆಯುಂ ವಾಕ್ಯಮಾಲೆಯುಂ ಕವೀಶ್ವರರಿಂ ರಚಿತಮಾಗಿ ನಾಮಮಾದಲ್ಲಿ ಲಿಂಗಮಪ್ಪುವು; ಅವಱ ತೆಱನಂ ಪುರಾತನಕೃತಿಗಳಲ್ಲಿ ಕಾಣಬರ್ಪುದು.

**ಪ್ರಯೋಗಂ** -

ಕ್ರಿಯೆಗೆ -

ನಮೋಸ್ತುಗಳಿರ್ಪಂದದಿನಿರ್ದಂ ೧

(ನಮೋಸ್ತುಗಳೆಂದು ಸವಣರ್ಗೆ ಪೆಸರಾಯ್ತು)

ವಾಕ್ಯಮಾಲೆಗೆ -

ಮ ॥ ವಿ ॥ ... ಅಹಿಂಸಾ ಪರಮೋ ಧರ್ಮಮೆಂ

ಬುದನೀ ತತ್ವವಿತುರ್ವರೇಣ್ಯರಱಿದರ್ ತ್ರೈಲೋಕ್ಯಚೂಡಾಮಣೇ ॥ ೨

(ತ್ರೈಲೋಕ್ಯಚೂಡಾಮಣೇಸ್ತೋತ್ರಂ ೨೦)

(ತತ್ವವಿತುರ್ವರೇಣ್ಯರೆಂದು ಶ್ರೌತರ್)

ಕಂ ॥ ... ತೋಳ್ಗೊ

ಪ್ಪುವನಾಳ್ದನ ಕೈದು ಕೈದುವೊತ್ತರ ದೇವಂ ... ೩

ಗುಣಕ್ಕೆ ನಲ್ಲ ಗಣೇಶಂ; ಸೊರ್ಕಾನೆಗಳಂಕಂ.

**ಸೂತ್ರಂ ॥ ಕ್ಷಿತಿಯೊಳೆ ರೂಢಾನ್ವರ್ಥಾಂ ।**
**ಕಿತಮೆಂದಾ ನಾಮಮಱಿಗೆ ಮೂದೆಱನಸಮಾ ॥**
**ಸತೆಯೊಳ್ ನೆಲಸಿರ್ಪುದು ನಿ ।**
**ಶ್ಚಿತನಾಮಂ ಪಂಚವರ್ಣಕೃತ ಪರಿಮಾಣಂ ॥ ೭೬ ॥**

**ಟೀಕೆ** - ಕ್ಷಿತಿಯೊಳೆ = ಭೂಲೋಕದಲ್ಲಿ, ರೂಢ = ರೂಢನಾಮಮೆಂದು, ಅನ್ವರ್ಥ = ಅನ್ವರ್ಥನಾಮಮೆಂದು, ಅಂಕಿತಂ = ಅಂಕಿತನಾಮಮೆಂದು, ಆ ನಾಮಂ = ಆ ಪಿಂದೆ ಪೇಟ್ದ ನಾಮಲಿಂಗಂ, ಮೂದೆಱಂ = ಮೂಱು ತೆಱನೆಂದು, ಅಱಿಗೆ = ತಿಳಿಗೆ; ನಿಶ್ಚಿತನಾಮಂ = ರೂಢನಾಮಂ, ಪಂಚವರ್ಣ = ಐದಕ್ಷರದಿಂದೆ, ಕೃತ =

ಮಾಡಲ್ಪಟ್ಟ , ಪರಿಮಾಣಂ = ಪ್ರಮಾಣವನುಳ್ಳುದಾಗಿ, ಅಸಮಾಸತೆಯೊಳ್ = ಸಮಾಸವಲ್ಲದುದಱಿಲ್ಲಿ, ನೆಲಸಿರ್ಪುದು = ನೆಲೆಗೊಂಡಿರ್ಪುದು.

**ವೃತ್ತಿ** - ರೂಢನಾಮಮೆಂದುಂ, ಅನ್ವರ್ಥನಾಮಮೆಂದುಂ, ಅಂಕಿತನಾಮಮೆಂದುಂ ನಾಮಂ ಮೂದೆಱನಾಗಿರ್ಪುದು. ರೂಢನಾಮಂ ಪ್ರಸಿದ್ಧತರನಾಗಿರ್ಪುದು. ಅನ್ವರ್ಥನಾಮಂ ಗುಣಾನುರೂಪಮೆಂದುಂ, ಅರ್ಥಾನುರೂಪಮೆಂದುಮಿರ್ತೆಱನಾಗಿರ್ಪುದು. ಅಂಕಿತನಾಮಂ ಪೆಸರನಿಡುವನಿಷ್ಟದಿನೆಂತಾದೊಡಮಿರ್ಪುದು. ದಿಟದ ನಾಮಂ ಸಮಾಸಮಿಲ್ಲದೊಂದಕ್ಕರಂ ಮೊದಲಾಗಿ ಅಯ್ದಕ್ಕರಂಬರಮುಂಟು.

**ಪ್ರಯೋಗಂ** -

ರೂಢನಾಮಕ್ಕೆ -

ನೆಲಂ, ಪೊಲಂ, ಜಲಂ - ಎಂಬಂತೆ.

ಗುಣಾನುರೂಪಾನ್ವರ್ಥಕ್ಕೆ -

ಕಂ ॥ ದಾನಿ ದಯಾಪರನತ್ಯಭಿ ।
ಮಾನಿ ಪರಾಕ್ರಮಿ ಯಶೋರ್ಥಿ ನೀತಿಜ್ಞಂ ವಿ ॥
ದ್ಯಾನಿಲಯನೆನಿಪ್ಪ ನೃಪಂ ... ೧

ಅರ್ಥಾನುರೂಪಾನ್ವರ್ಥಕ್ಕೆ -

ಹೆಟಿಗಾಲಂ, ನಿಡುಮೂಗಂ, ಕುಸಿಗೊರಲಂ, ಸವಟೆವಾಯಂ, ಗುಳ್ಳೆಗಣ್ಣಂ, ಹಱುದಲೆಯಂ - ಎಂಬಂತೆ

ಅಂಕಿತನಾಮಕ್ಕೆ -

ಕಾಟಂ, ಕಸವಂ, ದೂಡಿಗಂ, ಮಾಚಂ, ಮಾರಂ - ಎಂಬಿವು ಮೊದಲಾದುವು. ಸಾರ್ಥಕಮಲ್ಲದುದೆಲ್ಲಾ ಭಾಷೆಗಮೀ ತೆಱದೆ ಸಲ್ವುದು.

ದಿಟದ ನಾಮಂಗಳ ಅಕ್ಷರವೃತ್ತಿಗೆ -

ಪೂ, ಮರಂ, ಹೊತ್ತಗೆ , ಕವಳಿಗೆ, ಕಟ್ಟವತ್ತಿಗೆ.

**ಸೂತ್ರಂ ॥ ಒಳ್ಳಿತು ಮೆಲ್ಲಿತು ಬೆಟ್ಟಿತು ।**
**ತೆಳ್ಳಿತು ಬಸಿದಸಿದು ಕಡಿದು ನಿಡಿದಿನಿದೆಂಬಂ ॥**
**ತುಳ್ಳುವು ತು ದು ಕಡೆಯೆನೆ ಕೈ ।**
**ಕೊಳ್ಳಿಂ ಗುಣವಾಚಿ ಮೇಣ್ ತುಕಾರಂ ದ್ವಿತ್ವಂ ॥ ೭೭ ॥**

**ಟೀಕೆ** - ಒಳ್ಳಿತು, ಮೆಲ್ಲಿತು, ಬೆಟ್ಟಿತು, ತೆಳ್ಳಿತು, ಬಸಿದು, ಅಸಿದು, ಕಡಿದು, ನಿಡಿದು, ಇನಿದು, ಎಂಬಂತೆ = ಎಂಬ ಹಾಂಗೆ, ಉಳ್ಳುವು = ಉಂಟಾದ ಶಬ್ದಂಗಳ್, ತು ದು ಕಡೆಯೆನೆ = ತುಕಾರಾಂತ ದುಕಾರಾಂತವೆನೆ, ಗುಣವಾಚಿ = ಗುಣವಚನಂಗಳೆಂದು, ಕೈಕೊಳ್ಳಿಂ = ಒಡಂಬಡಿಂ; ಮೇಣ್ = ವಿಕಲ್ಪದಿಂದೆ, ತುಕಾರಂ = ತುಕಾರಾಂತಂ, ದ್ವಿತ್ವಂ = ದ್ವಿರ್ಭಾವಂ.

**ವೃತ್ತಿ** - ತುಕಾರ ದುಕಾರಂಗಳೆ ಕಡೆಯಾಗಿ ಪಲವು ಗುಣವಚನಂಗಳೊಳವು; ಅವಱೊಳ್ ತುಕಾರಾಂತಕ್ಕೆ ವಿಕಲ್ಪದಿಂ ದ್ವಿತ್ವಮುಂಟು.

**ಪ್ರಯೋಗಂ -**

ಬೆಟ್ಟಿತು, ಬೆಟ್ಟಿತ್ತು ; ದಟ್ಟಿತು, ದಟ್ಟಿತ್ತು ; ಒಳ್ಳಿತು, ಒಳ್ಳಿತ್ತು ; ಮೆಲ್ಲಿತು, ಮೆಲ್ಲಿತ್ತು ; ತೆಳ್ಳಿತು, ತೆಳ್ಳಿತ್ತು ; ತೋರಿತ್ತು ; ನೇರಿತ್ತು ; ಕೂರಿತ್ತು ; ಉದ್ದಿತ್ತು ; ನುಣ್ಣಿತ್ತು ; ತಣ್ಣಿತ್ತು ; ಬಿಣ್ಣಿತ್ತು ; ಗುಂಡಿತ್ತು; ಅಗಲಿತ್ತು ; ದೊಡ್ಡಿತ್ತು ; ಬಲ್ಲಿತ್ತು - ಎಂಬಂತೆ ನೋಡಿಕೊಳ್ವುದು.

ದುಕಾರಾಂತಕ್ಕೆ - ಬಸಿದು, ಅಸಿದು, ಕಡಿದು, ನಿಡಿದು, ಕರಿದು, ಬಿಳಿದು ಎಂಬಂತಱುವುದು.

**ಸೂತ್ರಂ ॥ ಅದುಇದುವುದುವಾವುದುವೆ ।**
**ಲ್ಲದು ಪೆಱತೇನ್ವೆಱದೆನಿಪ್ಪ ಶಬ್ದಂಗಳ್ ತ ॥**
**ಪ್ಪದೆ ಸರ್ವನಾಮಮಕ್ಕುಂ ।**
**ವಿದಗ್ಧರಿವನಱಿದು ನಿಱಿಕೆ ಲಿಂಗಸ್ಥಿತಿಯೊಳ್ ॥ ೭೮ ॥**

**ಟೀಕೆ** - ಅದು, ಇದು, ಉದು, ಆವುದು, ಎಲ್ಲದು, ಪೆಱತು, ಏನ್, ಪೆಱದು, ಎನಿಪ್ಪ ಶಬ್ದಂಗಳ್ = ಎನಿಸುವ ಶಬ್ದಂಗಳ್, ತಪ್ಪದೆ = ತೊಲಗದೆ, ಸರ್ವನಾಮಂ = ಸರ್ವನಾಮಂಗಳ್, ಅಕ್ಕುಂ = ಅಪ್ಪುವು; ವಿದಗ್ಧರ್ = ವಿದ್ವಾಂಸರ್, ಇವಂ = ಈ ಸರ್ವನಾಮಂಗಳಂ, ಅಱಿದು = ತಿಳಿದು, ಲಿಂಗಸ್ಥಿತಿಯೊಳ್ = ತ್ರಿವಿಧ ಲಿಂಗಸ್ಥಿತಿಯೊಳ್, ನಿಱಿಕೆ = ನಿಱುಗೆ ಮಾಡುಗೆ.

**ವೃತ್ತಿ** - ಅದು, ಇದು, ಉದು, ಆವುದು, ಎಲ್ಲದು, ಪೆಱತು, ಏನ್, ಪೆಱದೆಂಬಿವಾದಿಯಾದುವು ಸರ್ವನಾಮಂಗಳ್.

**ಸೂತ್ರಂ ॥ ಏನೆಂಬ ಸರ್ವನಾಮಂ**
**ತಾನದು ದಲ್ಲಿಂಗದೇಕವಚನಂ ನಿಜದಿಂ ॥**
**ಪೀನಂ ಬಹುವಚನಾರ್ಥಮ ।**
**ನಾನಲ್ ಸಾಲ್ದತ್ತು ಮತ್ತೆ ಕೃತಿಪದ್ಧತಿಯೊಳ್ ॥ ೭೯ ॥**

**ಟೀಕೆ** - ಏನ್ = ಏನೆಂದು, ಎಂಬ ಸರ್ವನಾಮಂ = ಎಂಬ ಸರ್ವನಾಮಶಬ್ದಂ, ತಾನದು = ಅದು ತಾಂ, ದಲ್ = ನಿಶ್ಚಯವಾಗಿ, ನಿಜದಿಂ = ಸ್ವಭಾವದಿಂದೆ, ಲಿಂಗದ = ಲಿಂಗತ್ರಯದ, ಏಕವಚನಂ = ಏಕವಚನಮೆನಿಪುದು; ಮತ್ತೆ = ಬೞಿಕಂ, ಕೃತಿಪದ್ಧತಿಯೊಳ್ = ಕಾವ್ಯಪದ್ಧತಿಯಲ್ಲಿ, ಪೀನಂ = ವಿಶೇಷವಾಗಿ, ಬಹುವಚನಾರ್ಥಮಂ, ಆನಲ್ = ಧರಿಸಲ್, ಸಾಲ್ದತ್ತು = ಸಲುವಳಿಯಾಯ್ತು.

***ವೃತ್ತಿ** - ಏನ್ ಎಂಬ ಸರ್ವನಾಮಂ ಸ್ವಭಾವದಿಂ ಲಿಂಗತ್ರಯದೇಕವಚನಂ; ಇದರ್ಕೆ ಬಹುವಚನದೊಳಂ ಬಹುಳದಿಂ ಕಾವ್ಯಮಾರ್ಗದೊಳ್ ಪ್ರಯೋಗಮುಂಟು.[೧]

* (ಸಂ ॥ ಕ ॥ ಸಾ ॥ ಪ ॥)

**ಪ್ರಯೋಗಂ -**

ಏಕವಚನಕ್ಕೆ - ಅವನೇನ್, ಅವಳೇನ್, ಅದೇನ್.

~~~~~~~~~~~~~~~~~~~~

೧. (ಪ್ರಚಲಿತ ಪರಿಷ್ಕರಣಗಳಲ್ಲಿ : ಏನ್ ಎಂದೆಂಬ ಸರ್ವನಾಮಲಿಂಗಂ ಏಕವಚನದೊಳೇಕವಚನಮಪ್ಪುದು; ಬಹುವಚನದೊಳ್ ಬಹುವಚನಮಪ್ಪುದು. ಲಿಂಗತ್ರಯದಲ್ಲಿಯುಂ ಸಮಾನಮಾಗಿರ್ಪುದು.)
~~~~~~~~~~~~~~~~~~~~

ಬಹುವಚನಾರ್ಥಕ್ಕೆ -

ಶಾ ॥ ವಿ ॥ ... ತತ್ತರಿಜನಾಲಾಪಂಗಳೇನ್ ... ೧

(ಕರ್ಣಾಟಕ ಕಾದಂಬರಿ ೭-೧೦-೨೦೦)

**ಸೂತ್ರಂ ॥ ಸಮುದಿತ ಸಂಖ್ಯಾವ್ಯಯ ರಹಿ ।**
**ತಮೆನಿಸಿ ವರ್ತಿಪ ನಿಘಂಟುವಿನ ನಾಮಪದೋ ॥**
**ತ್ತಮ ವರ್ಣಪ್ರಕೃತಿಗಳಂ ।**
**ಸಮಸಂಸ್ಕೃತವೆಸರನಿಟ್ಟು ಲಿಂಗಂ ಮಾೞ್ಪರ್ ॥ ೮೦ ॥**

**ಟೀಕೆ** - ಸಂ = ಲೇಸಾಗಿ, ಉದಿತ = ಉಂಟಾದ, ಸಂಖ್ಯಾ = ಸಂಖ್ಯಾವಾಚಿಗಳಿಂದೆ, ಅವ್ಯಯ = ಅವ್ಯಯ ಶಬ್ದಗಳಿಂದೆ, ರಹಿತಂ = ವಿರಹಿತಂ, ಎನಿಸಿ, ವರ್ತಿಪ = ವರ್ತಿಸುವ, ನಿಘಂಟುವಿನ = ಅಮರಸಿಂಹ ಮೊದಲಾದವರ ಸಂಸ್ಕೃತ ನಿಘಂಟುಗಳ, ನಾಮಪದ = ಅಭಿಧಾನ ಪದಂಗಳಾದ, ಉತ್ತಮವರ್ಣ = ಸುಲಲಿತಾಕ್ಷರಂಗಳಾದ, ಪ್ರಕೃತಿಗಳಂ = ವಿಭಕ್ತಿರಹಿತಮಾದ ಶಬ್ದಂಗಳಂ, ಸಮಸಂಸ್ಕೃತವೆಸರನಿಟ್ಟು = ಸಮಸಂಸ್ಕೃತವೆಂಬ ಹೆಸರಿಟ್ಟು, ಲಿಂಗಂ ಮಾೞ್ಪರ್ = ಶಬ್ದಜ್ಞರ್ ಲಿಂಗವಂ ಮಾಡುವರ್

**ವೃತ್ತಿ** - ಸಂಖ್ಯಾವ್ಯಯಂಗಳಂ ಕಳೆದುೞಿದ ನಿಘಂಟುವಿನ ಸುಲಲಿತಾಕ್ಷರಂಗಳಪ್ಪ ನಾಮಪ್ರಕೃತಿಗಳಂ ಕನ್ನಡಕ್ಕೆ ಸರಿಮಾಡಿ, ಸಮಸಂಸ್ಕೃತಮೆಂಬ ಪೆಸರನಿಟ್ಟು, ಶಬ್ದಜ್ಞರ್ ಲಿಂಗಮಂ ಮಾೞ್ಪರ್.

**ಪ್ರಯೋಗಂ** -

(ಕಾಮ) ಕಾಮಂ, (ಭೀಮ) ಭೀಮಂ, (ರಾಮ) ರಾಮಂ, (ಸೋಮ) ಸೋಮಂ, (ನಾರದ) ನಾರದಂ, (ನಾರಾಯಣ) ನಾರಾಯಣಂ - ಎಂಬಂತೆ.

ಆ ಸಮಸಂಸ್ಕೃತಂಗಳನಚ್ಚಗನ್ನಡದೊಳ್ ಬೆರಸಿ ಸಮಾಸಮಂ ಮಾಡಲಾಗದು; ಅದರ್ಕುದಾಹರಣೆ - ಮುಖತಾವರೆ, ಕಣ್ಕಮಲಂ ಎಂಬಂತೆ.

*ಕಂ ॥ ಅರಸುಕುಮಾರನನಾಯತ ।
ತರ ಕಡೆಗಣ್ಣಿಂದೆ ನೋಡಿ ಕೆಳದಿಸಮೇತಂ ॥
ಪರಿಗತನಗೆಯಿಂದಿರ್ದಂ ।
ಗುರುನಾಣ್ಭರದಿಂದಮೆೞಗಿ ಮುಖತಾವರೆಯಂ ೧

(ಕವಿರಾಜಮಾರ್ಗಂ ೧-೫೯)

**ಸೂತ್ರಂ ॥ ವಿದಿತಮೆನಿಪ್ಪವ್ಯಯಮುಂ ।**
**ತ್ಯದಾದಿಯುಂ ಶತೃಙಂತಮುಂ ಸಂಸ್ಕೃತದೊಳ್ ॥**
**ಪದವಿಧಿಯಂ ನೆಱೆ ತಳೆದ ।**
**ಲ್ಲದೆ ಕನ್ನಡದಲ್ಲಿ ಲಿಂಗಮಾಗವು ನಿಜದಿಂ ॥ ೮೧ ॥**

~~~~~~~~~~~~~~~~~

*ಕಂ ॥ ನರಪತಿತನಯನನಾಯತ ।
ತರಳಾಪಾಂಗದೊಳೆ ನೋಡಿ ಕೆಳದಿಯರೊಡನಾಂ ॥
ಪರಿಗತಹಾಸ್ಯದೊಳಿರ್ದ್ದಂ ।
ಗುರುಲಜ್ಜಾಭರದಿನೆೞಗಿ ಮುಖಸರಸಿಜಮಂ ॥

(ಕವಿರಾಜಮಾರ್ಗಂ ೧-೫೯)
~~~~~~~~~~~~~~~~~

**ಟೀಕೆ** - ವಿದಿತಂ = ಪ್ರಸಿದ್ಧಂ, ಎನಿಪ್ಪ = ಎನಿಸುವ, ಅವ್ಯಯಮುಂ = ಅವ್ಯಯ ಶಬ್ದಂಗಳುಂ, ತ್ಯದಾದಿಯುಂ = ತ್ಯತ್ ಎಂಬುದಾದಿಯಾದ ಸರ್ವನಾಮಶಬ್ದಂಗಳುಂ, ಶತೃಙಂತಮುಂ = ಶತೃಙಂತಶಬ್ದಮುಂ, ಸಂಸ್ಕೃತದೊಳ್ = ಸಂಸ್ಕೃತದಲ್ಲಿ, ಪದವಿಧಿಯಂ = ಸಮಾಸವಿಧಿಯಂ, ನೆಱೆ = ಚೆನ್ನಾಗಿ, ತಳೆದಲ್ಲದೆ = ಧರಿಸಿದಲ್ಲದೆ, ಕನ್ನಡದಲ್ಲಿ = ಕರ್ಣಾಟಕದಲ್ಲಿ, ನಿಜದಿಂ = ಸ್ವಭಾವದಿಂದೆ, ಲಿಂಗಂ = ಲಿಂಗಂಗಳ್, ಆಗವು = ಸಲುವಳಿಯಾಗವು.

**ವೃತ್ತಿ** - ಪ್ರಸಿದ್ಧಮಪ್ಪವ್ಯಯಂಗಳುಂ ತ್ಯದಾದಿಯುಂ ಶತೃಙಂತಮುಂ ಸಂಸ್ಕೃತದೊಳ್ ಸಮಾಸಮಂ ಪಡೆದಲ್ಲದೆ ಕನ್ನಡದೊಳ್ ಸ್ವಭಾವದಿಂ ಲಿಂಗಮಾಗವು.

**ಪ್ರಯೋಗಂ** -

ಅವ್ಯಯಕ್ಕೆ -

ಅಂತರ್, ಬಹಿರ್, ಉಚ್ಚೈಸ್, ನೀಚೈಸ್, ಮುಹುರ್, ಪುನರ್, ಪ್ರಾತರ್, ಅಪಸ್, ಈಷತ್, ಯುಗಪತ್, ಪೃಥಕ್ - ಇವು ಮೊದಲಾದ ಸಹಜಾವ್ಯಯಂಗಳಂ ನಿಱಿಸಿ ವಿಭಕ್ತಿಯಂ ಪತ್ತಿಸಲಾಗದು.

ಅವ್ಯಯಸಮಾಸಕ್ಕೆ - ಅಂತರ್ಮುಖ, ಬಹಿರಂಗ, ಉಚ್ಚೈರ್ಧ್ಯಾನ, ನೀಚೈರ್ಗತ, ಮುಹುರ್ನಿರೀಕ್ಷಣ, ಪುನಃಪಾಕ, ಪ್ರಾತಃಕಾಲ, ಅಪರ್ನಿಶ, ಈಷದ್ಭೇದ, ಯುಗಪತ್ಸಂಭ್ರಮ, ಪೃಥಕ್ಚರಿತ್ರ - ಎಂದು ಸಮಾಸಮಂ ಮಾಡಿ, ಅಂತರ್ಮುಖಂ, ಅಂತರ್ಮುಖನಂ, ಅಂತರ್ಮುಖನಿಂ, ಅಂತರ್ಮುಖಂಗೆ, ಅಂತರ್ಮುಖನತ್ತಣಿಂ, ಅಂತರ್ಮುಖನ, ಅಂತರ್ಮುಖನೊಳ್ ಎಂಬಂತೆಲ್ಲಕ್ಕಂ ವಿಭಕ್ತಿಯಂ ಪತ್ತಿಸುವುದು.

ತ್ಯದಾದಿಯಾದ ಸರ್ವನಾಮಂಗಳ್ಗೆ -

ತ್ಯದ್, ತದ್, ಯದ್, ಏತದ್, ಇದಮ್, ಅದಸ್, ಯುಷ್ಮದ್, ಅಸ್ಮದ್, ಭವತ್, ಕಿಂ - ಎಂದೀ ತ್ಯದಾದಿಶಬ್ದಂಗಳಂ ನಿಱಿಸಿ ವಿಭಕ್ತಿಯಂ ಕುಡದೆ, ತ್ವತ್ಕಥನ, ತದ್ವಚನ, ಯತ್ಸೌಖ್ಯ, ಏತನ್ನಿಹಿತ, ಇದಂ ದೇವ (ಇದಂ ದೇವನೆಂದೀತನೆ ದೇವನೆಂದರ್ಥಂ), ಅದಃಪುತ್ರ (ಅದಃಪುತ್ರನೆಂದೀತನ ಪುತ್ರನೆಂಬುದರ್ಥಂ), ಯುಷ್ಮದ್ಗುಣ, ಅಸ್ಮದ್ದೌಹಿತ್ರ, ಭವದ್ರಾಜ್ಯ, ಕಿಂ ವಾರ್ತೆ (ಕಿಂ ವಾರ್ತೆಯೆಂದಾರ ವಾರ್ತೆಯೆಂಬರ್ಥಂ) ಈ ತೆಱದಿಂ ನಿಱಿಸಿ, ಸಮಾಸಮಂ ಮಾಡಿ, ವಿಭಕ್ತಿಯಂ ಪತ್ತಿಸುವುದು; ತ್ವತ್ಕಥನಂ, ತ್ವತ್ಕಥನಮಂ, ತ್ವತ್ಕಥನದಿಂ ಎಂಬಂತಱಿವುದು

ಶತೃಙಂತಕ್ಕೆ - ಕ್ವಣತ್, ಝಣತ್, ಭ್ರಮತ್, ರಟತ್, ಚಳತ್, ದಳತ್, ಮಿಳತ್, ಲಸತ್, ಮುಂಚತ್, ಚಂಚತ್, ಘೋಷತ್ - ಎಂಬೀ ಶತೃಙಂತಂಗಳ್ಗೆ ವಿಭಕ್ತಿಯಂ ಪತ್ತಿಸದೆ, ಕ್ವಣತ್ಕಂಕಣ, ಝಣನ್ನೂಪುರ, ಭ್ರಮದ್ಭ್ರಮರ, ರಟತ್ಕೋಕಿಲ, ಚಳತ್ಕುಂತಳ, ದಳತ್ಕೈರವ, ಮಿಳದ್ವಿಷ್ಕಿರ, ಲಸದ್ವಚನ, ಮುಂಚತ್ಕಂಚುಕ, ಚಂಚದ್ರೂಪ, ಗರ್ಜನ್ಮೇಘ, ಘೋಷದರ್ಣವ ಎಂದಿರಿಸಿ, ಸಮಾಸಮಂ ಮಾಡಿ, ಎಲ್ಲಕ್ಕಂ ವಿಭಕ್ತಿಯಂ ಪತ್ತಿಸುವುದು; ಕ್ವಣತ್ಕಂಕಣಂ, ಕ್ವಣತ್ಕಂಕಣಮಂ, ಕ್ವಣತ್ಕಂಕಣದಿಂ, ಕ್ವಣತ್ಕಂಕಣಕ್ಕೆ, ಕ್ವಣತ್ಕಂಕಣದತ್ತಣಿಂ, ಕ್ವಣತ್ಕಂಕಣದ, ಕ್ವಣತ್ಕಂಕಣದೊಳ್.

**ಸೂತ್ರಂ ॥ ಏಕದ್ವಿತ್ರ್ಯಾದಿ ಸಮಾ ।**
**ಸಾಕೃತಿಯಿಂ ಪ್ರತ್ಯಯಾಂತದಿಂದಿರೆ ಲಘುವ ॥**
**ಪ್ಪೇಕಾರಮನತ್ವಮನಿರ ।**
**ದಾಕಾರಂ ಬಹುಳದಿಂದೆ ತಳೆದಿರೆ ಲಿಂಗಂ ॥ ೮೨ ॥**

**ಟೀಕೆ** - ಏಕದ್ವಿತ್ರ್ಯಾದಿ = ಏಕ, ದ್ವಿ, ತ್ರಿ ಎಂಬಿವಾದಿಯಾದ ಸಂಖ್ಯಾವಾಚಿ ಶಬ್ದಂ, ಸಮಾಸಾಕೃತಿಯಿಂ = ಸಮಾಸಾಕಾರದಿಂದೆ, ಪ್ರತ್ಯಯಾಂತದಿಂದೆ = ತಯ ಪ್ರತ್ಯಯಂ ಮೊದಲಾದ ಪ್ರತ್ಯಯಾಂತದಿಂದೆ, ಇರೆ, ಲಿಂಗಮಪ್ಪುವು; ಆಕಾರಂ = ಆಕಾರಾಂತ ಶಬ್ದಂ, ಲಘುವಪ್ಪೇಕಾರಮಂ = ಲಘುವಾದೇಕಾರಮಂ, ಅತ್ವಮಂ = ಅಕಾರಮಂ, ಇರದೆ = ನಿಲ್ಲದೆ, ಬಹುಳದಿಂದೆ, ತಳೆದು = ಧರಿಸಿ, ಇರೆ, ಲಿಂಗಂ = ಕನ್ನಡಕ್ಕೆ ಲಿಂಗಮಪ್ಪುವು.

**ವೃತ್ತಿ** - ಏಕ, ದ್ವಿ, ತ್ರಿ, ಚತುರ್, ಪಂಚ, ಷಟ್, ಸಪ್ತ, ಅಷ್ಟ, ನವ, ದಶ - ಎಂಬಿವು ಸಹಜದಿಂ ಲಿಂಗಮಾಗವು; ಸಮಾಸಮಂ ಮೇಣ್ ಪ್ರತ್ಯಯಾಂತಮಂ ಮಾಡೆ ಲಿಂಗಮಕ್ಕುಂ. ಆಕಾರಾಂತಂ ಹ್ರಸ್ವಮಪ್ಪೇತ್ವಮಂ ಪಡೆದೊಡಂ ಅಕಾರಾಂತತೆಯಂ ಪಡೆದೊಡಂ ಲಿಂಗಮಕ್ಕುಂ.

**ಪ್ರಯೋಗಂ** -

ಏಕಾಂಗ, ದ್ವಿಮುಖ, ತ್ರಿಲೋಕ, ಚತುರ್ವೇದ, ಪಂಚಭೂತ, ಷಟ್ಕರ್ಮ, ಸಪ್ತದ್ವೀಪ, ಅಷ್ಟಭುಜ, ನವನಿಧಿ, ದಶವ್ಯಾಕರಣ - ಎಂದು ಸಂಖ್ಯಾವಾಚಕಂಗಳ್ಗೆ ಸಮಾಸಮಾಗಲೊಡಂ, ಮೇಣ್ ದ್ವಿತಯ, ತ್ರಿತಯ, ಚತುಷ್ಕ, ಪಂಚಕ, ಷಟ್ಕ, ಸಪ್ತಕ, ಅಷ್ಟಕ, ನವಮ, ದಶಮ ಎಂದು ಪ್ರತ್ಯಯಂ ಪತ್ತಲೊಡಂ ಎಲ್ಲಕ್ಕಂ ವಿಭಕ್ತಿಯಂ ಪತ್ತಿಸುವುದು.

ಆಕಾರಮೆಕಾರಮಾದುದರ್ಕೆ - ಮಾಲಾ, ಬಾಲಾ, ಶಾಲಾ, ಏಲಾ, ಲೀಲಾ, ಜ್ವಾಲಾ, ಅಳಕಾ, ಕಳಿಕಾ, ತ್ರೇತಾ, ಸೀತಾ, ಯಾತ್ರಾ, ಮಾತ್ರಾ, ನಿದ್ರಾ, ಮುದ್ರಾ, ಕಶಾ, ಶಾಖಾ, ವೇಳಾ, ಜ್ವಾಲಾ, ರೇಖಾ, ಭಾಷಾ, ಮೂಷಾ, ದ್ರಾಕ್ಷಾ, ಲಾಕ್ಷಾ ಎಂಬಿವು ಮೊದಲಾದುವು ಎಕಾರಾಂತಮಂ ಪಡೆಯಲೊಡಂ ವಿಭಕ್ತಿ ಪತ್ತುಗುಂ: ಮಾಲೆ, ಬಾಲೆ, ಲೀಲೆ, ಭಾಷೆ, ಯಾತ್ರೆ - ಎಂಬಂತೆ.

ಆಕಾರಮೆಕಾರಮುಂ ಅಕಾರಮುಮಾದುದರ್ಕೆ - ಗ್ರೀವಾ, ಭಿಕ್ಷಾ ಎಂಬೆರಡು ಶಬ್ದಂಗಳ್ಗೆ ಗ್ರೀವ, ಗ್ರೀವೆ; ಭಿಕ್ಷ, ಭಿಕ್ಷೆ ಎಂದು ನಿಱಿಸುವುದು.

ಆಕಾರಂ ಅಕಾರಮಾದುದರ್ಕೆ - ಕಂಧರಾ, ಉಪತ್ಯಕಾ, ಕರುಣಾ, ಅಧಿತ್ಯಕಾ, ದಂಷ್ಟ್ರಕಾ, ವಾಲುಕಾ - ಎಂಬಿವು ಮೊದಲಾದುವು, ಕಂಧರ, ಉಪತ್ಯಕ, ಕರುಣ ಎಂದು ಅಕಾರಾಂತಮಂ ಪಡೆಯಲೊಡಂ ಲಿಂಗಮಾಗಿ ವಿಭಕ್ತಿ ಪತ್ತುಗುಂ.

**ಸೂತ್ರಂ ॥ ಆದಂ ಹ್ರಸ್ವೈದಂತಮ ।**
**ದಾದತ್ವಂ ಹ್ರಸ್ವಮೆನಿಸಿದೀದೂದಂತಂ ॥**
**ಜ್ಯಾದಿ ಸಮಸ್ತೈಕಾಕ್ಷರ ।**
**ಮಾದವಿಕೃತಿಶಬ್ದಮುಕ್ತಿವಿದರಿಂ ಲಿಂಗಂ ॥ ೮೩ ॥**

**ಟೀಕೆ** - ಆದಂ = ಪೀನ ಗ್ರಹಣದಿಂದೆ, ಹ್ರಸ್ವೈದಂತಂ = ಕನ್ನಡಕ್ಕೆ ಹ್ರಸ್ವವಾದ ಏಕಾರಾಂತಮುಂ, ಅಮು, ಆದತ್ವಂ = ಆದಕಾರಾಂತ ಶಬ್ದಮುಂ, ಹ್ರಸ್ವಂ = ಕನ್ನಡಕ್ಕೆ ಹ್ರಸ್ವಂ, ಎನಿಸಿದೀದೂದಂತಂ = ಎನಿಸಿದ ಈಕಾರಾಂತ ಊಕಾರಾಂತಂ, ಜ್ಯಾದಿ = ಜ್ಯಾ ಎಂಬ ಶಬ್ದವಾದಿಯಾದ, ಸಮಸ್ತ = ಬಹುಳವಾದ,

ಏಕಾಕ್ಷರಮಾದ = ಏಕಾಕ್ಷರವಾದ, ಅವಿಕೃತಿಶಬ್ದಂ = ವಿಕಾರವಿಲ್ಲದ ಶಬ್ದಂಗಳ್, ಉಕ್ತಿವಿದರಿಂ = ವಾಕ್ಯವಿದರಿಂದೆ, ಲಿಂಗಂ = ಲಿಂಗಮಪ್ಪುವು.

**ವೃತ್ತಿ** - ಆದಮೆಂಬ ಬಹುಳಗ್ರಹಣದಿಂದಾಕಾರಾಂತಮಲ್ಲದಕಾರಾಂತಮುಂ ಹ್ರಸ್ವಮಪ್ಪೇತ್ವಮಂ ಪಡೆದೊಡಂ ಲಿಂಗಮಕ್ಕುಂ; ಈಕಾರಾಂತ ಊಕಾರಾಂತಂಗಳ್ ಹ್ರಸ್ವಮಾದೊಡಂ ಲಿಂಗಮಕ್ಕುಂ; ಜ್ಯಾಶಬ್ದಂ ಮೊದಲಾದೇಕಾಕ್ಷರಶಬ್ದಂಗಳಿರ್ದ ತೆಱದಿಂ ಲಿಂಗಮಪ್ಪುವು.

**ಪ್ರಯೋಗಂ -**

ಅಕಾರಾಂತಕ್ಕೆ -

ವಧ, ಅಭಿಲಾಷ, ಉದಾಹರಣ, ದರ್ಭ, ಪ್ರಶ್ನ, ಊಹ, ಅಳಕ ಎಂಬಿವು ವಧೆ, ಅಭಿಲಾಷೆ ಎಂಬಂತೆ ಎತ್ವಮಂ ಪಡೆದೊಡಂ ಲಿಂಗಮಪ್ಪುವು.

ಈಕಾರಾಂತಕ್ಕೆ -

ಲಕ್ಷ್ಮೀ, ಗೌರೀ, ಸರಸ್ವತೀ, ಶಚೀ, ಭಾಮಿನೀ, ಗೋಮಿನೀ, ಕಾಮಿನೀ, ನಾರೀ, ಕುಮಾರೀ, ಕಾವೇರೀ, ಗೋದಾವರೀ, ಗಾಂಧಾರೀ ಎಂಬೀಕಾರಾಂತಕ್ಕೆ ಲಕ್ಷ್ಮಿ, ಗೌರಿ, ಸರಸ್ವತಿ ಎಂಬಂತೆ ಹ್ರಸ್ವಮಾದೊಡಂ,

ಊಕಾರಾಂತಕ್ಕೆ -

ಸರಯೂ, ಕಂಡೂ, ಖರ್ಜೂ, ಕುಹೂ, ಜಂಬೂ, ಸ್ವಯಂಭೂ, ಖಲಪೂ, ಅಲಾಬೂ, ಅಭ್ರಮೂ, ಚಮೂ ಎಂಬೂಕಾರಂತಂಗಳ್ ಸರಯು, ಕಂಡು ಎಂಬಂತೆ ಹ್ರಸ್ವಮಾದೊಡಂ ಲಿಂಗಮಕ್ಕುಂ.

ಏಕಾಕ್ಷರಕ್ಕೆ -

ಜ್ಯಾ, ಮಾ, ಶ್ರೀ, ಸ್ತ್ರೀ, ಭೀ, ಭ್ರೂ, ಕೂ ಎಂಬಿವು ಮೊದಲಾದ ಏಕಾಕ್ಷರಶಬ್ದಂಗಳಿರ್ದ ತೆಱದಿಂ ವಿಭಕ್ತಿಯಂ ಪಡೆವುವು.[೧]

**ಸೂತ್ರಂ ॥ ಅತ್ವಾಂತಮುಮಿತ್ವಾಂತಮು ।**
**ಮುತ್ವಾಂತಮುಮಾ ಋದಂತಮುಂ ನಿಜಲಿಂಗಂ ॥**
**ಋತ್ವಕ್ಕಾರಾದೇಶಂ ।**
**ತತ್ವಂ ಪೀನಂ ವಿಧಾತೃಶಬ್ದಂ ರಾಂತಂ ॥ ೮೪ ॥**

**ಟೀಕೆ.**- ಅತ್ವಾಂತಮುಂ = ಅಕಾರಾಂತ ಶಬ್ದಮುಂ, ಇತ್ವಾಂತಮುಂ=ಇಕಾರಾಂತ ಶಬ್ದಮುಂ, ಉತ್ವಾಂತಮುಂ= ಉಕಾರಾಂತ ಶಬ್ದಮುಂ, ಆ ಋದಂತಮುಂ= ಆ ಋಕಾರಾಂತ ಶಬ್ದಮುಂ, ನಿಜಲಿಂಗಂ= ನಿಜದಿಂ ಲಿಂಗಮಪ್ಪುವು, ಇರ್ದ ಹಾಂಗೆ ಲಿಂಗವಪ್ಪುವೆಂಬರ್ಥಂ; ಋತ್ವಕ್ಕೆ=ಋಕಾರಾಂತಕ್ಕೆ, ಆರಾದೇಶಂ= ಆರ ಎಂಬಾದೇಶವಪ್ಪುದು; ತತ್ವಂ = ತಕಾರಾಂತವಪ್ಪುದು; ಪೀನಂ= ವಿಶೇಷವಾಗಿ, ವಿಧಾತೃಶಬ್ದಂ= ವಿಧಾತೃವೆಂಬ ಶಬ್ದಂ, ರಾಂತಂ= ರೇಫಾಂತವಪ್ಪುದು.

~~~~~~~~~~~~~~~~

೧. (ಪ್ರಚಲಿತ ಪರಿಷ್ಕರಣಗಳಲ್ಲಿ ಪ್ರಯೋಗಪಾಠಕ್ರಮ ಬೇರೆ.)
~~~~~~~~~~~~~~~~

ಪ್ರಾಂಚಂ, ಸಮ್ಯಂಚಂ, ಪ್ರತ್ಯಂಚಂ ಎಂದಕ್ಕುಂ. ಮಹತ್, ಬೃಹತ್, ಪ್ರಾಚ್, ಅವಾಚ್, ಪ್ರತ್ಯಚ್, ಉದಚ್, ತಿರ್ಯಚ್, ವಿಷ್ವಚ್, ನ್ಯಚ್, ಅಮುಮುದ್ರ್ಯಚ್, ಅದದ್ರ್ಯಚ್, ಅಮುಮುಯಚ್, ಅದಮುಯಚ್, ಸಧ್ರ್ಯಚ್, ಸಮ್ಯಚ್ - ಇವಾದಿಯಾದುವು ಮಹದಾದ್ಯಾಕೃತಿಗಣಂ.

**ವೃತ್ತಿ** - ಸಂಸ್ಕೃತದ ವ್ಯಂಜನಾಂತ ಲಿಂಗಂಗಳತ್ವಮಂ ಪಡೆದುಂ ದ್ವಿತ್ವಂ ಬೆರಸಿದುತ್ವಮಂ ಪಡೆದುಂ ಅಂತ್ಯಲೋಪಮಂ ಮೇಣ್ಪಡೆದುಂ ಲಿಂಗಮಕ್ಕುಂ.

**ಪ್ರಯೋಗಂ** -

ದಿವ್, ಸ್ರಜ್, ಚತುರ್, ಮರುತ್, ಬುಧ್, ಕಕುಭ್, ವೇದವಿದ್, ಮುದ್, ಸಮವಯಸ್, ಗುಣಭಾಜ್, ವಿಹಾಯಸ್, ಸಂಪದ್ - ಇವು ಮೊದಲಾದ ವ್ಯಂಜನಾಂತಕ್ಕೆ ದಿವ, ಸ್ರಜ, ಚತುರ ಎಂಬಂತತ್ವಮಾದೊಡಂ; ಅಪ್, ಕ್ಷುತ್, ಪ್ರತಿಪತ್, ಋಕ್, ಯಜುಸ್, ವಿದ್ಯುತ್, ದ್ವಿಟ್, ಪ್ರಾವೃಟ್, ವಾಕ್ - ಇವು ಮೊದಲಾದುವರ್ಕೆ ಉತ್ವಂ ಬೆರಸಿ ದ್ವಿರ್ಭಾವಮಾಗಿ ಅಪ್ಪು, ಕ್ಷುತ್ತು ಎಂಬಂತಾದೊಡಂ; ರಾಜನ್, ಮೂರ್ಧನ್, ಪೂಷನ್, ಅರ್ಯಮನ್, ಮಘವನ್, ಕರಿನ್, ಧಾಮನ್, ಸೀಮನ್, ಊಷ್ಮನ್, ಕರ್ಮನ್, ಚರ್ಮನ್, ಬ್ರಹ್ಮನ್, ಪುರೂರವಸ್, ಅಧ್ವನ್, ಯುವನ್ - ಇವು ಮೊದಲಾದ ಶಬ್ದಂಗಳಂತ್ಯಲೋಪಮಾಗಿ ರಾಜ, ಮೂರ್ಧ, ಪೂಷ ಎಂಬಂತಾದೊಡಂ ಲಿಂಗಮಪ್ಪುವು; ಸೀಮೋಷ್ಮಂಗಳದಂತತೆಗೆ ಸೀಮೆ, ಊಷ್ಮೆ ಎಂದು ಎತ್ವಮುಮುಂಟು.

ಮೇಣೆಂಬ ವಿಕಲ್ಪಾರ್ಥದಿಂ ಸಕಾರಾಂತದಲ್ಲಿ - ಯಶ, ಯಶಸ್ಸು; ತೇಜ, ತೇಜಸ್ಸು ; ವಯ, ವಯಸ್ಸು ; ಪಯ, ಪಯಸ್ಸು ; ಮನ, ಮನಸ್ಸು ; ಶ್ರೇಯ, ಶ್ರೇಯಸ್ಸು ಎಂದು ಸಲ್ವುದು.

ಮೇಣೆಂಬುದಱಿಂ ಸಹಜವ್ಯಂಜನಮಾಗಿಯೆ ಕೆಲವಿರ್ಪುವು - ವಾಕ್, ಗೀರ್, ಯುಗಪದ್.

ಕಂ ॥ ಶ್ರುತದೇವಿ ವಾಣಿ ವಾಕ್ ಭಾ
ರತಿ ವಚನಂ ಭಾಷೆ ವಾಚಿ ಗೀರ್ ಬ್ರಾಹ್ಮಿ ... ೧

(ಅಭಿಧಾನ ವಸ್ತುಕೋಶಂ ೧-೧-೭)

ಮೇಣೆಂಬುದಱಿಂ ಗೀರ್ ಎಂಬುದರ್ಕೆ ಗಿರೆ ಎಂದೆತ್ವಮುಮುಂಟು.

**ಸೂತ್ರಂ ॥ ಪ್ರಚುರತೆಯಿಂ ಪ್ರಥಮಾ ಬಹು ।**
**ವಚನಂಗಳವೇಕವಚನಕೃತಲಿಂಗಂಗಳ್ ॥**
**ನಿಚಿತ ವಿಸರ್ಗಮನುಱಿದಂ ।**
**ದುಚಿತಜ್ಞರ್ ತಿಳಿವುದಿವನುದಾಹೃತಿಮುಖದಿಂ ॥ ೮೭ ॥**

**ಟೀಕೆ** - ಪ್ರಚುರತೆಯಿಂ = ಪ್ರಸಿದ್ಧಿಯಿಂದೆ, ಪ್ರಥಮಾಬಹುವಚನಂಗಳ್ = ಸಂಸ್ಕೃತದ ಪ್ರಥಮಾ ವಿಭಕ್ತಿಯ ಬಹುವಚನಂಗಳ್, ಅವು, ನಿಚಿತ ವಿಸರ್ಗಮಂ = ನಿಶ್ಚಯಿಸಲ್ಪಟ್ಟ ವಿಸರ್ಜನೀಯವಂ, ಉಱಿದಂದು = ಬಿಟ್ಟಂದು, ಏಕವಚನ = ಏಕವಚನವಾಗಿ, ಕೃತ = ಮಾಡಲ್ಪಟ್ಟ, ಲಿಂಗಂಗಳ್ = ಲಿಂಗಂಗಳೆನಿಸುವುವು; ಉಚಿತಜ್ಞರ್ = ಇಂಗಿತಜ್ಞರ್, ಇವಂ = ಈ ಶಬ್ದಂಗಳಂ, ಉದಾಹೃತಿಮುಖದಿಂ = ಉದಾಹರಣೆಯ ಮುಖದಿಂದೆ, ತಿಳಿವುದು = ಅಱಿವುದು.

ವೃತ್ತಿ - ಸಂಸ್ಕೃತದ ಪ್ರಥಮಾ ಬಹುವಚನಂಗಳ್ ತಮ್ಮ ವಿಸರ್ಗಮಂ ಕಳೆಯೆ ನ್ನಡದೊಳೇಕವಚನಮಾಗಿ ಲಿಂಗಮಪ್ಪುವು.

ಪ್ರಯೋಗಂ -

ಶ್ವಾನ, ಯುವಾನ, ಅಧ್ವಾನ, ಸಖಾಯ, ಜ್ಯಾಯಾಂಸ, ಕನೀಯಾಂಸ, ವಿದ್ವಾಂಸ, ಾಸ್ವಂತ, ಶ್ರೀಮಂತ, ಹನುಮಂತ - ಇವು ಮೊದಲಾದುವು.

**ೂತ್ರಂ ॥ ನೀನಱಿ ಕರ್ಣಾಟಕದೊಳ್ ।**
**ಪೀನಂ ಸ್ತ್ರೀ ಪುಂ ನಪುಂಸಕೋಭಯ ಪುಂಸ್ತ್ರೀ ॥**
**ಸ್ತ್ರೀನಪ್ಸಮಸ್ತ ವಾಚ್ಯಾ ।**
**ನ್ಯೂನಾವ್ಯಯಮೆಂದು ಲಿಂಗಮೊಂಬತ್ತು ತೆಱಂ ॥ ೮೮ ॥**

ೀಕೆ - ಕರ್ಣಾಟಕದೊಳ್ = ಕನ್ನಡದಲ್ಲಿ, ಪೀನಂ = ವೆಗ್ಗಳವಾಗಿ, ಸ್ತ್ರೀ = ಸ್ತ್ರೀಲಿಂಗವೆಂದು, ಪುಂ = ಪುಲ್ಲಿಂಗವೆಂದು, ನಪುಂಸಕ = ನಪುಂಸಕಲಿಂಗವೆಂದು, ಉಭಯ = ಪುಂನಪುಂಸಕ ಲಿಂಗವೆಂದು, ಪುಂಸ್ತ್ರೀ = ುಂಸ್ತ್ರೀಲಿಂಗವೆಂದು, ಸ್ತ್ರೀನಪ್ = ಸ್ತ್ರೀನಪುಂಸಕ ಲಿಂಗವೆಂದು, ಸಮಸ್ತ = ತ್ರಿವಿಧ ಲಿಂಗವೆಂದು, ವಾಚ್ಯ = ಿಶೇಷ್ಯಾಧೀನ ಲಿಂಗವೆಂದು, ಅನ್ಯೂನ = ಕೊರತೆಯಿಲ್ಲದ, ಅವ್ಯಯಂ = ಅವ್ಯಯಲಿಂಗವೆಂದು, ಲಿಂಗಂ = ಿಂಗಂಗಳ್, ಒಂಬತ್ತು ತೆಱಂ = ಒಂಬತ್ತು ಪ್ರಕಾರವೆಂದು, ನೀಂ, ಅಱಿ = ತಿಳಿ.

ವೃತ್ತಿ - ಕನ್ನಡದೊಳ್ ಪಿರಿದುಂ ಸ್ತ್ರೀಲಿಂಗಮೆಂದುಂ, ಪುಲ್ಲಿಂಗಮೆಂದುಂ, ನಪುಂಸಕ ಿಂಗಮೆಂದುಂ, ಪುಂಸ್ತ್ರೀ ಲಿಂಗಮೆಂದುಂ, ಸ್ತ್ರೀನಪುಂಸಕ ಲಿಂಗಮೆಂದುಂ, ಪುಂನಪುಂಸಕ ಿಂಗಮೆಂದುಂ, ತ್ರಿವಿಧ ಲಿಂಗಮೆಂದುಂ, ವಿಶೇಷ್ಯಾಧೀನ ಲಿಂಗಮೆಂದುಂ, ಅವ್ಯಯಲಿಂಗಮೆಂದುಂ ಲಿಂಗಮೊಂಬತ್ತು ತೆಱಂ.

ಪ್ರಯೋಗಂ -

ಸ್ತ್ರೀಲಿಂಗಕ್ಕೆ -

ಅರಸಿ, ದೇವಿ.

ಪುಲ್ಲಿಂಗಕ್ಕೆ -

ಅರಸಂ, ದೇವಂ, ನರಂ, ಸುರಂ.

ನಪುಂಸಕ ಲಿಂಗಕ್ಕೆ -

ಕನ್ನಡಿ, ಕಳಸಂ, ಜೆಡೆ, ಕೊಡೆ.

ಪುಂನಪುಂಸಕ ಲಿಂಗಕ್ಕೆ -

ರವಿ ಮೂಡಿದಂ, ರವಿ ಮೂಡಿದುದು; ವಿಧುವಿವಂ, ವಿಧುವಿದು; ಇವಱಂತೆ ುಂಗಳ, ಬುಧ, ಬೃಹಸ್ಪತ್ಯಾದಿ ನವಗ್ರಹಂಗಳೆಲ್ಲಂ ಪುಂನಪುಂಸಕ ಲಿಂಗಂಗಳ್; ಆಳಿವಂ, ಳಿದು; ಬಸಂತಂ ಬಂದಂ, ಬಸಂತಂ ಬಂದುದು; ಮಲಯಾನಿಲಂ ತೀಡಿದಂ, ಮಲಯಾನಿಲಂ ೀಡಿದುದು; ಕಾಮಂಗೆಯುಂ ಕಾಮಕ್ಕಮೇಕತ್ವಮುಳ್ಳುದಱಿಂ ಕಾಮನೆಚ್ಚಂ, ಕಾಮಂ ರ್ಚಿದುದು - ಇವೆಲ್ಲಂ ಪುಂನಪುಂಸಕಂ.

ಪುಂಸ್ತ್ರೀಲಿಂಗಕ್ಕೆ -

ಇವರ್ ಪುರುಷರ್, ಇವರ್ ಸ್ತ್ರೀಯರ್; ಅವರ್ ಗಂಡರ್, ಅವರ್ ಪೆಂಡಿರ್; ಉವರ್ ದೇವರ್, ಉವರ್ ದೇವಿಯರ್. ತೊೞ್ತೆಂಬುದುಮಂತೆ - ಇವಂ ದೇವರ ತೊೞ್ತು, ಇವಳ್ ದೇವರ ತೊೞ್ತು.

ಸ್ತ್ರೀನಪುಂಸಕಕ್ಕೆ - ಆ ಪೆಣ್ಬಾಜಣೆ, ಆ ಪೆಣ್ಬಂದುದು; ಆ ಕನ್ನಿಕೆ ಸಲಕ್ಷಣೆ, ಆ ಕನ್ನಿಕೆ ಪೊಲ್ಲದು. ಸಿರಿ, ಸರಸ್ವತಿ, ದೇವತೆ - ಎಂಬಿವುಮಂತೆ.

ಚಂ ।। ಮಾ ।। ... ಸಿರಿಯೊಲ್ವಳೆ ಹೃದ್ಯವಿದ್ಯರಂ ೧

ಕಂ ।। ... ಸಿರಿಯೊಂದಾಗದೊಡಮೇನೊ ಸುಜನೋತ್ತಂಸಾ ೨

(ನೀತಿಕಂದಂ ?)

ಚಂ ।। ಮಾ ।। ... ಸರಸ್ವತಿ ಕಯ್ನೆರವಾಗೆ ಪೇೞ್ದಪಳ್ ೩

ಚಂ ।। ಮಾ ।। ಪರಮಜಿನೇಂದ್ರವಾಣಿಯೆ ಸರಸ್ವತಿ ಬೇಱದು ಪೆಣ್ಣ ರೂಪಮಂ
ಧರಿಯಿಸಿ ನಿಂದುದಲ್ತದುವೆ ... ೪

(ಆದಿಪುರಾಣಂ ೧ - ೯)

ಕಂ ।। ದೇವತೆಯರ್ ಮೆಚ್ಚಿ ಬರಮನರಸಂಗಿತ್ತರ್ ೫

ಕಂ ।। ... ಬಾರಿಸಿದುವು ಬಿಡದೆ ಜಡಿದು ವನದೇವತೆಗಳ್ ೬

(ಆದಿಪುರಾಣಂ ೯-೯೩)

ಅವಳ್ ಸಜ್ಜನವೆಣ್; ಅದು [ಸಜ್ಜನಂ ].

ತ್ರಿಲಿಂಗಕ್ಕೆ -

ನೀನರಸಂ, ನೀನರಸಿ, ನೀಂ ಪಶು; ತಾನ್, ಆನ್, ಏನ್, ಏತರ್ಕೆ, ಅದರ್ಕೆ, ಶಿಶು, ಹಸುಳೆ, ಮಗು, ಕೂಸು, ಸೊಂದಿ, ಪಗೆ, ಕೆಳೆ, ಅರಸು, ತರುವಲಿ - ಎಂಬಿವೆಲ್ಲಮಂತೆ.

ವಾಚ್ಯಲಿಂಗಮೆಂದು ವಿಶೇಷ್ಯಾಧೀನಲಿಂಗಕ್ಕೆ -

ನೇರಿದನಿವಂ, ನೇರಿದಳಿವಳ್, ನೇರಿತ್ತಿದು; ಅಭಿಮಾನಿ, ದಾನಿ, ಸಾಧು, ಪಟು, ಹಡಣ, ಚಂಡಿ, ರಾಗಿ, ಭೋಗಿ, ಸುಖಿ, ಹೇಡಿ, ಕಲಿ, ಗುರು, ಲಘು - ಇವುಮಾ ತೆಱದೆ ಸಲ್ವುವು.

ಅವ್ಯಯಲಿಂಗಕ್ಕೆ -

ಕಮ್ಮಿದಂ, ಕಮ್ಮಿದಳ್, ಕಮ್ಮಿತು; ಭೋಂಕನೆ ಬಂದಂ, ಭೋಂಕನೆ ಬಂದಳ್, ಭೋಂಕನೆ ಬಂದುದು; ತೊಟ್ಟನೆ, ಮೆಲ್ಲನೆ, ಕಮ್ಮನೆ, ಇಮ್ಮನೆ, ಸುಮ್ಮನೆ, ಸಿಯ್ಯನೆ, ಕೆಚ್ಚನೆ, ಪಚ್ಚನೆ, ಪೆಳ್ಳನೆ, ತೆಳ್ಳನೆ, ಬೆಳ್ಪಳಂ, ಬೆಚ್ಚೆರಂ, ನಿರ್ನೆರಂ, ಸೋಡಂಬಾಡಂ (ಎಂದು ಪಿರಿದೆಂಬರ್ಥಂ), ಅಂತೆವೋಲ್, ಮಿಗೆ, ದಲ್, ವಲಂ, ತೆಱಂ, ಕೆನ್ನಂ, ಮತ್ತೆ, ಬಲ್ಲೆ - ಇವಾದಿಯಾಗಱುವುದು.

**ಸೂತ್ರಂ ॥ ಬಗೆ ನೀನಾನ್ತಾನೆಂಬು ।**
**ಕ್ತಿಗಳುಂ ಗುಣವಚನ ಸರ್ವನಾಮ ಬಹುವ್ರೀ ॥**
**ಹಿಗಳುಂ ಕೃತ್ತದ್ಧಿತ ಸಂ ।**
**ಖ್ಯೆಗಳುಂ ಸಲೆ ವಾಚ್ಯಲಿಂಗಮೆಂದೀ ಕ್ರಮದಿಂ ॥ ೮೯ ॥**

**ಟೀಕೆ** - ನೀಂ, ಆಂ, ತಾಂ, ಎಂಬುಕ್ತಿಗಳುಂ = ಎಂಬ ವಾಕ್ಯಂಗಳುಂ, ಗುಣವಚನ = ಗುಣವಚನಂಗಳುಂ, ಸರ್ವನಾಮ = ಸರ್ವನಾಮಂಗಳುಂ, ಬಹುವ್ರೀಹಿಗಳುಂ = ಬಹುವ್ರೀಹಿ ಶಬ್ದಂಗಳುಂ, ಕೃತ್ = ಕೃತ್ತುಗಳುಂ, ತದ್ಧಿತ = ತದ್ಧಿತಂಗಳುಂ, ಸಂಖ್ಯೆಗಳುಂ = ಸಂಖ್ಯಾವಾಚಿಗಳುಂ, ಸಲೆ = ಚೆನ್ನಾಗಿ, ವಾಚ್ಯಲಿಂಗಂ = ವಿಶೇಷ್ಯಾಧೀನಲಿಂಗಮೆಂದು, ಈ ಕ್ರಮದಿಂ = ಈ ರೀತಿಯಿಂದೆ, ಬಗೆ = ಭಾವಿಸು.

**ವೃತ್ತಿ** - ನೀನ್, ಆನ್, ತಾನ್ ಎಂಬಿವುಂ, ಗುಣವಚನಮುಂ, ಸರ್ವನಾಮಮುಂ, ಬಹುವ್ರೀಹಿಯುಂ, ಕೃತ್ತುಂ, ತದ್ಧಿತಮುಂ, ಸಂಖ್ಯೆಯುಂ, ವಿಶೇಷ್ಯಾಧೀನ ಲಿಂಗಮೆಂದಱಿವುದು.

**ಪ್ರಯೋಗಂ** -

ನೀನ್, ಆನ್, ತಾನ್ ಎಂಬಿವರ್ಕೆ -

ನೀಂ ಕಾಮಂ, ನೀಂ ರತಿ, ನೀಂ ಗಿಳಿ; ಆಂ ಶಿವಂ, ಆಂ ಗೌರಿ, ಆಂ ನಂದಿ; ತಾನವಂ, ತಾನವಳ್, ತಾನದು.

ಗುಣವಚನಕ್ಕೆ -

ಇನಿಯಂ, ಇನಿಯಳ್, ಇನಿದು.

ಸರ್ವನಾಮಕ್ಕೆ -

ಪೆಱಂ, ಪೆಱಳ್, ಪೆಱತು.

ಬಹುವ್ರೀಹಿಗೆ -

ಅವಂ ವಿಮಲಮತಿ, ಅವಳ್ ವಿಮಲಮತಿ, ಅದು ವಿಮಲಮತಿ; ಅವಂ ಕುಸಿಗೊರಲಂ, ಅವಳ್ ಕುಸಿಗೊರಲಿ, ಅದು ಕುಸಿಗೊರಲ್.

ಕೃತ್ತಿಂಗೆ -

ಪಾಡಿದಂ, ಪಾಡಿದಳ್, ಪಾಡಿದುದು.

ತದ್ಧಿತಕ್ಕೆ -

ಓದಾಳಿ ಇವಂ, ಓದಾಳಿ ಇವಳ್, ಓದಾಳಿ ಇದು.

ಸಂಖ್ಯೆಗೆ -

ಸಾಸಿರ ಗಂಡರ್, ಸಾಸಿರ ಪೆಂಡಿರ್, ಸಾಸಿರ ಮನೆಗಳ್.

**ಸೂತ್ರಂ ॥ ದೊರೆವಡೆದವ್ಯಯಲಿಂಗಂ ।**
**ಸರಿ ಸರ್ವವಿಭಕ್ತಿಗಂ ತ್ರಿಲಿಂಗಕ್ಕಂ ತಾಂ ॥**
**ಸರಿ ವಚನತ್ರಿತಯಕ್ಕಂ ।**
**ಸರಿಯೆನಿಸಿ ವಿಕಾರಮಿಲ್ಲದರ್ಥಮನೀಗುಂ ॥ ೯೦ ॥**

**ಟೀಕೆ** - ದೊರೆವಡೆದ = ಪ್ರಸಿದ್ಧಿವಡೆದ, ಅವ್ಯಯಲಿಂಗಂ = ಅವ್ಯಯಲಿಂಗಂಗಳ್, ಸರ್ವವಿಭಕ್ತಿಗಂ = ಸಪ್ತವಿಭಕ್ತಿಗೆಯುಂ, ಸರಿ = ಸಮಾನಂ ; ತ್ರಿಲಿಂಗಕ್ಕಂ = ಮೂಱು ಲಿಂಗಕ್ಕೆಯುಂ, ತಾಂ, ಸರಿ = ಸಮಾನಂ; ವಚನತ್ರಿತಯಕ್ಕಂ = ಏಕವಚನ ದ್ವಿವಚನ ಬಹುವಚನಂಗಳ್ಗೆಯುಂ, ಸರಿಯೆನಿಸಿ = ಸಮಾನವೆನಿಸಿ, ವಿಕಾರಮಿಲ್ಲದೆ = ರೂಪಾಂತರವನೆಯ್ದದೆ, ಅರ್ಥಮಂ, ಈಗುಂ = ಕುಡುವುವು.

**ವೃತ್ತಿ** - ಅವ್ಯಯಲಿಂಗಂ ಸಪ್ತವಿಭಕ್ತಿಗಂ ಲಿಂಗತ್ರಯಕ್ಕಂ ವಚನತ್ರಯಕ್ಕಂ ಸರಿಯಾಗಿರ್ದ ತೆಱದಿನರ್ಥಮಂ ಕುಡುಗುಂ.

**ಪ್ರಯೋಗಂ** -

ಪ್ರಥಮಾವಿಭಕ್ತಿಗೆ -

ನಿರ್ನೆರಂ ಬಂದನೆಂಬಲ್ಲಿ ನಿರ್ನಿಮಿತ್ತಂ ಬಂದನೆಂಬ ಪ್ರಥಮೆಯನಱಿವುದು.

ಚಂ ॥ ಸುರತರುನಂದನಂಗಳಿರ ರತ್ನಪಿನದ್ಧವಿಮಾನಕುಟ್ಟಿಮಾಂ ।
ತರ ಸುರತಾಲಯಂಗಳಿರ ಚಾರುವಿಲೋಲಕಟಾಕ್ಷಪಾತಸುಂ ॥
ದರಪರಿವಾರದೇವಿಯರಿರಾ ಕಡುಕೈದು ಕೃತಾಂತನಿಂತು ನಿ ।
ರ್ನೆರಮೆಱೆದುಯ್ಯೆ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪಿರೇ ೧

(ಆದಿಪುರಾಣಂ ೩-೪; ಕಾವ್ಯಾವಲೋಕನಂ ೧೩೦)

ದ್ವಿತೀಯಾವಿಭಕ್ತಿಗೆ -

ಚೆಚ್ಚರಂ ನುಡಿದನೆಂಬಲ್ಲಿ ಚೆಚ್ಚರಮಂ ನುಡಿದನೆಂಬ ದ್ವಿತೀಯೆಯನಱಿವುದು.

ತೃತೀಯಾವಿಭಕ್ತಿಗೆ -

ಆವರ್ಕೆ ಅಂತಱಿಂದೆಂಬವಱಲ್ಲಿ ಪರಿವಿಡಿಯಿಂ ಅದಱಿಂದೆ ಎಂಬ ತೃತೀಯೆಯನಱಿವುದು.

ಶಾ ॥ ವಿ ॥ ಆವರ್ಕೆಯ್ದೆ ಕವಲ್ ಕವಲ್ತು ಪಲವುಂ ಕೊಂಬಾದುವೊಳ್ಗೊಂಬುಮಂ ... ೨

(ಆದಿಪುರಾಣಂ ೧೧-೯೭; ಕಾವ್ಯಾವಲೋಕನಂ ೨೬೬)

ಸ್ವಾಗತ ॥ ಅಂತಱಿಂದವರನಾ ಪೊೞಲೊಳ್ ಕಾ
ಣ್ಬಂತು ಚಿಂತಿಸಿಮುಱುಪಾಯಮಂ ... ೩

ಚತುರ್ಥಿಗೆ -

ಪಚ್ಚನೆ ಕೆಚ್ಚನೆ ಬಗೆಯನೆಂಬಲ್ಲಿ ಚತುರ್ಥಿಯನಱಿವುದು.

ಷಷ್ಠಿಗೆ -

ಮತ್ತಿನ ಎಂಬಲ್ಲಿ ಷಷ್ಠಿ

ಕಂ ॥ ... ಮತ್ತಿನ ಮತ್ತಿನ ಬೇರ್ಗಳ
ಬಿತ್ತುಗಳಾ ನದಿಯೊಳೇನೊ ಸುಜನೋತ್ತಂಸಾ ೪

(ನೀತಿಕಂದಂ ?)

ತ್ರಿಲಿಂಗಕ್ಕೆ -

ಮಿಗೆ ಬೞಲ್ದಂ, ಮಿಗೆ ಬೞಲ್ದಳ್, ಮಿಗೆ ಬೞಲ್ದುದು; ಮತ್ತೆ ನೋಡಿದಂ, ಮತ್ತೆ ನೋಡಿದಳ್, ಮತ್ತೆ ನೋಡಿದುದು.

ವಚನತ್ರಯಕ್ಕೆ -

ಭೋಂಕನೊರ್ವಂ ಬಂದಂ, ಮೆಲ್ಲನಿರ್ವರ್ ನುಡಿದರ್, ನೆಟ್ಟನೆಲ್ಲರುಂ ಪೋದರ್.

**ಸೂತ್ರಂ ॥ ಪುರುಷರೆ ಪುಲ್ಲಿಂಗಂ ಸ್ತ್ರೀ ।**
**ಯರೆ ತಾಂ ಸ್ತ್ರೀಲಿಂಗಮುೞಿದುವೆಲ್ಲಂ ನಪ್ಪಾ ॥**
**ಗಿರೆ ಸಲ್ಗುಂ ಕನ್ನಡದೊಳ್ ।**
**ಪರಿವರ್ತಿಸವುೞಿದ ಲಿಂಗಮೊಳವಾಗಿರ್ದುಂ ॥ ೯೧ ॥**

**ಟೀಕೆ -** ಪುರುಷರೆ = ಪುರುಷರಂ ಪೇೞ್ವ ಶಬ್ದಂಗಳೆ, ಪುಲ್ಲಿಂಗಂ = ಪುಲ್ಲಿಂಗವೆನಿಪುವು; ಸ್ತ್ರೀಯರೆ = ಸ್ತ್ರೀಯರಂ ಪೇೞ್ವ ಶಬ್ದಂಗಳೆ, ತಾಂ, ಸ್ತ್ರೀಲಿಂಗಂ = ಸ್ತ್ರೀಲಿಂಗವೆನಿಪುವು; ಉೞಿದುವು = ಪುರುಷರಂ ಸ್ತ್ರೀಯರಂ ಪೇೞದೆ ಉೞಿದ ಶಬ್ದಂಗಳ್, ಎಲ್ಲಂ = ಎಲ್ಲವು, ನಪ್ಪಾಗಿರೆ = ನಪುಂಸಕಲಿಂಗವಾಗಿರೆ, ಸಲ್ಗುಂ = ಸಲ್ವುವು; ಕನ್ನಡದೊಳ್ = ಕರ್ಣಾಟಕದಲ್ಲಿ, ಉೞಿದ ಲಿಂಗಂ = ಮಿಕ್ಕ ಲಿಂಗಂಗಳ್, ಒಳವಾಗಿರ್ದುಂ = ಉಂಟಾಗಿರ್ದುಂ, ಪರಿವರ್ತಿಸವು = ಪ್ರವರ್ತಿಸವು.

**ವೃತ್ತಿ -** ಪುರುಷರಂ ಪೇೞ್ವ ಶಬ್ದಂಗಳ್ ಪುಲ್ಲಿಂಗಂಗಳ್; ಸ್ತ್ರೀಯರಂ ಪೇೞ್ವ ಶಬ್ದಂಗಳ್ ಸ್ತ್ರೀಲಿಂಗಂಗಳ್; ಉೞಿದುವೆಲ್ಲಂ ನಪುಂಸಕ ಲಿಂಗಂಗಳ್.

**ಪ್ರಯೋಗಂ -**

ಪುಲ್ಲಿಂಗಕ್ಕೆ -

ಶಿವ, ಶಂಕರ, ಭೀಮ, ರಾಮ, ಅರಸ - ಇವು ಮೊದಲಾದುವು.

ಸ್ತ್ರೀಲಿಂಗಕ್ಕೆ -

ಗೌರಿ, ಪಾರ್ವತಿ, ಲಕ್ಷ್ಮಿ, ಸರಸ್ವತಿ, ಶಚಿ, ರೋಹಿಣಿ, ಕಾಮಿನಿ, ಭಾಮಿನಿ, ರಮಣಿ - ಇವು ಮೊದಲಾದುವು.

ನಪುಂಸಕ ಲಿಂಗಕ್ಕೆ -

ಮರ, ಗಿಡು, ಬಳ್ಳಿ, ಪುಲ್, ಪೊದಱ್, ಪುಲಿ, ಕರಡಿ, ಗಟ್ಟ, ಬೆಟ್ಟ, ಜೆಡೆ, ಕೊಡೆ, ಕನ್ನಡಿ, ಕಳಸ - ಇಂತಪ್ಪ ಚೇತನಾಚೇತನ ವಸ್ತುಗಳೆಲ್ಲಂ ನಪುಂಸಕಮೆ.

ಇಂತು ಲಿಂಗತ್ರಯಂ ಕನ್ನಡದೊಳ್ ಪಿರಿದುಂ ಪ್ರಸಿದ್ಧಂ; ಮಿಕ್ಕ ಲಿಂಗಂಗಳೆಲ್ಲಂ ಕ್ವಚಿತ್ಪ್ರಯೋಗಂಗಳೆ.

**ಸೂತ್ರಂ ॥ ಜನಶಬ್ದಮದು ನಪುಂಸಕ ।**
**ಮೆನಿಕುಂ ದುಸ್ಸತ್ಸುಕಾರಮವು ಪೆಱಗಿರೆ ನೆ ॥**
**ಟ್ಟನೆ ಪುಲ್ಲಿಂಗಂ ಮತ್ತಾ ।**
**ಜನಂ ಮಹಚ್ಛಬ್ದಮಿರೆ ನಪುಂಸಕಮಕ್ಕುಂ ॥ ೯೨ ॥**

**ಟೀಕೆ -** ಜನಶಬ್ದಂ = ಜನಮೆಂಬ ಶಬ್ದಂ, ಅದು, ನಪುಂಸಕಂ = ನಪುಂಸಕ ಲಿಂಗಂ, ಎನಿಕುಂ = ಎನಿಸುವುದು; ದುಸ್, ಸತ್, ಸುಕಾರಂ = ದುಃ ಎಂಬುದುಂ, ಸತ್ ಎಂಬುದುಂ, ಸು ಎಂಬುದುಂ, ಅವು, ಪೆಱಗೆ = ಪಿಂದೆ, ಇರೆ, ನೆಟ್ಟನೆ = ವ್ಯಕ್ತವಾಗಿ, ಪುಲ್ಲಿಂಗಂ ಎನಿಸುವುದು; ಮತ್ತೆ = ಅದಲ್ಲದೆ, ಆ ಜನಂ = ಆ ಜನಶಬ್ದಂ, ಮಹಚ್ಛಬ್ದಂ = ಮಹತ್ ಎಂಬ ಶಬ್ದಂ, ಇರೆ = ಪಿಂದಿರೆ, ನಪುಂಸಕಂ = ನಪುಂಸಕ ಲಿಂಗಂ, ಅಕ್ಕುಂ = ಅಪ್ಪುದು.

**ವೃತ್ತಿ** - ಜನಶಬ್ದಂ ನಿಜದಿಂ ನಪುಂಸಕಂ; ದುಸ್ ಎಂಬುದುಂ, ಸತ್ ಎಂಬುದುಂ, ಸು ಎಂಬುದುಂ ಪಱಗಿರೆ ಪುಲ್ಲಿಂಗಮಕ್ಕುಂ. ಮಹಚ್ಛಬ್ದಂ ಪೆಱಗಿರ್ದೊಡಂ ಮಹಾಜನಮೆಂದು ನಪುಂಸಕಮಕ್ಕುಂ.

**ಪ್ರಯೋಗಂ** -

ಪುಲ್ಲಿಂಗಕ್ಕೆ - ದುರ್ಜನಂ, ಸಜ್ಜನಂ, ಸುಜನಂ

ನಪುಂಸಕಕ್ಕೆ - ಜನಂ, ಮಹಾಜನಂ

**ಸೂತ್ರಂ** ॥ **ಸಂದಿಸಿ [1]ಮಮಿಂಕೆಯದದೊಳೆ ।**
**ಯೆಂದಿರ್ಪುವು ಸಪ್ತವಿಧ ವಿಭಕ್ತಿಗಳವು ಮಾ ॥**
**ರ್ಗಂದಪ್ಪದರ್ಥವಶದಿಂ ।**
**ಪಿಂದೆಣಿಸಿದ ವಿವಿಧ ವಿಧದ ಲಿಂಗಕ್ಕೆಲ್ಲಂ ॥ ೯೩ ॥**

**ಟೀಕೆ** - ಪಿಂದೆ = ಹಿಂದೆ, ಎಣಿಸಿದ ವಿವಿಧ ವಿಧದ = ಹೇೞಿದ ನಾನಾಪ್ರಕಾರದ, ಲಿಂಗಕ್ಕೆ = ಲಿಂಗಂಗಳ್ಗೆ, ಸಪ್ತವಿಧ = ಏೞು ತೆಱನಾದ, ವಿಭಕ್ತಿಗಳ್ = ಪ್ರತ್ಯಯಂಗಳ್, ಅವು, ಎಲ್ಲಂ = ಎಲ್ಲವು, ಮಾರ್ಗಂದಪ್ಪದೆ = ಕವಿಮಾರ್ಗಂ ತಪ್ಪದೆ, ಅರ್ಥವಶದಿಂ = ಅರ್ಥವಶದಿಂದೆ, ಸಂದಿಸಿ = ಪೊರ್ದುಗೆಯಾಗಿ, ಮಮಿಂಕೆಯದದೊಳೆ = ಮ್, ಅಮ್, ಇಮ್, ಕೆ, ಅತ್, ಅತ್, ಒಳ್ ಎಂಬಿವೆ, ಎಂದು = ಹೀಗೆಂದು, ಇರ್ಪುವು.

**ವೃತ್ತಿ** - ಪಿಂತೆ ಪೇೞ್ದ ನಾನಾ ತೆಱದ ಲಿಂಗಂಗಳ್ಗೆ ಪರಮಾಗಿ ನಾಮ ವಿಭಕ್ತಿಗಳ್, ಮ್(ಸೂ.೧೦೫), ಅಮ್(ಸೂ.೧೦೪, ೧೦೬), ಇಮ್(ಸೂ.೧೦೭), ಕೆ(ಸೂ.೧೧೩, ೧೧೪), ಅತ್ (ಸೂ. ೧೦೬, ೧೧೬), ಅತ್ (ಸೂ. ೧೦೬, ೧೧೭), ಒಳ್ (ಸೂ. ೧೧೯) ಎಂದು ಪ್ರಥಮೆಗಂ, ದ್ವಿತೀಯೆಗಂ, ತೃತೀಯೆಗಂ, ಚತುರ್ಥಿಗಂ, ಪಂಚಮಿಗಂ, ಷಷ್ಠಿಗಂ, ಸಪ್ತಮಿಗಂ ಏೞಾಗಿ, ಕಾರಕವಶದಿಂ ಪತ್ತುಗುಂ. ಆ ಕಾರಕಮೆಂಬುದು ಕ್ರಿಯಾನಿಮಿತ್ತಂ; ಅದು ಕರ್ತೃವೆಂದುಂ, ಕರ್ಮಮೆಂದುಂ, ಕರಣಮೆಂದುಂ, ಸಂಪ್ರದಾನಮೆಂದುಂ, ಅಪಾದಾನಮೆಂದುಂ, ಅಧಿಕರಣಮೆಂದುಂ ಷಡ್ವಿಧಮಾಗಿರ್ಪುದು; ಷಷ್ಠಿಯೆಂದು ಸಂಬಂಧಾರ್ಥಂ.

**ಪ್ರಯೋಗಂ** -

ಮರಂ, ಮರನಂ, ಮರದಿಂ, ಮರಕ್ಕೆ, ಮರದತ್ತಣಿಂ, ಮರದ, ಮರದೊಳ್(ಮರನೇ, ಸಂ.) ಇಂತರ್ಥವಶದಿಂ ವಿಭಕ್ತಿ ಪರಿಣಮಿಪುವು. ವಿಭಕ್ತಿ ಕಾರಕಮನೆಯ್ದುವುದಱಿಂ ಪದಂ ನಾನಾರೂಪಮಪ್ಪುದು.

ಕಂ ॥ ಮರನಿರ್ದುದು ಮರನಂ ಕಡಿ ।
ಮರದಿಂ ಮಾಡಾನೆಯಂ ಮರಕ್ಕೆಱೆ ನೀರಂ ॥
ಮರದತ್ತಣಿನೆಲೆಯುದಿರ್ದುದು ।
ಮರದದು ಪಣ್ ಮರದೊಳಿರು ತಳಿರ್ತಿರು ಮರನೇ ॥

~~~~~~~~~~~~~~~~~~~~

೧. (ಮಮಿಂಕೆಯದದೊ । ಳೆಂದಿರ್ಪುವು)
~~~~~~~~~~~~~~~~~~~~

**ಸೂತ್ರಂ ॥ ಏಕ ದ್ವಿತ್ವ ಬಹುತ್ವಮ ।**
**ನೇಕ ದ್ವಿ ಬಹುತ್ವ ವಸ್ತುಗಳೊಳಾಚರಿಪರ್ ॥**
**ಸ್ವೀಕಾರ್ಯಂ ಕನ್ನಡದೊಳ ।**
**ಗೇಕ ಬಹುತ್ವಂ ದ್ವಿವಚನಮುಚಿತದೆ ಬರ್ಕುಂ ॥ ೯೪ ॥**

**ಟೀಕೆ** - ಏಕ ದ್ವಿ ಬಹುತ್ವ ವಸ್ತುಗಳೊಳ್ = ಏಕವಸ್ತು , ದ್ವಿವಸ್ತು , ಬಹುವಸ್ತುಗಳಲ್ಲಿ, ಏಕ ದ್ವಿತ್ವ ಬಹುತ್ವಮಂ = ಏಕವಚನ, ದ್ವಿವಚನ, ಬಹುವಚನಮಂ, ಆಚರಿಪರ್ = ಪೇೞ್ವರ್; ಕನ್ನಡದಲ್ಲಿ = ಕರ್ಣಾಟ ಭಾಷೆಯಲ್ಲಿ , ಏಕಬಹುತ್ವಂ = ಏಕವಚನ ಬಹುವಚನಂಗಳ್, ಸ್ವೀಕಾರ್ಯಂ = ಅಂಗೀಕಾರ್ಯಂ; ದ್ವಿವಚನಂ, ಉಚಿತದೆ = ಉಚಿತದಿಂದೆ, ಬರ್ಕುಂ = ಬರ್ಪುದು.

**ವೃತ್ತಿ** - ಒಂದೆರಡು ಮೂಱಿಂದು ಪದಾರ್ಥಮನೆಣಿಸುವೆಡೆಯೊಳ್ ಏಕವಚನ, ದ್ವಿವಚನ, ಬಹುವಚನಂಗಳಂ ಸ್ವೀಕರಿಸುವರ್ ; ಏಕವಚನ ಬಹುವಚನಂಗಳ್ ಕನ್ನಡದೊಳತಿವ್ಯಕ್ತಂಗಳ್; ದ್ವಿವಚನಮನೌಚಿತ್ಯದಿನಱಿವುದು.

**ಪ್ರಯೋಗಂ** -

ಏಕ ದ್ವಿ ಬಹುತ್ವಂಗಳ್ಗೆ -

ಮೇರುವಿದು; ಕಣ್ಗಳಿವು; ಕುರುಳ್ಗಳಿವು.

[ಏಕ ಬಹುತ್ವಂಗಳ್ಗೆ ] - ಕವಿಯಿವಂ; ಕವಿಗಳಿವರ್.

ಔಚಿತ್ಯದ ದ್ವಿವಚನಕ್ಕೆ - ಭೀಮಾರ್ಜುನರ್, ರಾಮ ಲಕ್ಷ್ಮಣರ್, ನಕುಲ ಸಹದೇವರ್ ಎಂಬಂತಱಿವುದು.

**ಸೂತ್ರಂ ॥ ಸಮನಿಸುಗುಮಾ ವಿಭಕ್ತಿಗ ।**
**ಳ ಮೊದಲೊಳಾದಂ ಗಳಾಗಮಂ ದ್ವಿತ್ವ ಬಹು ॥**
**ತ್ವಮದಾಗೆ ಗಳಾಗಮಕವು ।**
**ಸಮನಿಸುಗುಂ ಸರ್ವನಾಮ ಗುಣವಚನದೊಳಂ ॥ ೯೫ ॥**

**ಟೀಕೆ** - ದ್ವಿತ್ವಬಹುತ್ವಂ = ದ್ವಿವಚನ ಬಹುವಚನಂ, ಅದು, ಆಗೆ, ಆ ವಿಭಕ್ತಿಗಳ = ಆ ಸಪ್ತವಿಭಕ್ತಿಗಳ, ಮೊದಲೊಳ್ = ಆದಿಯಲ್ಲಿ, ಆದಂ = ಆದಮೆಂಬ ವಿಶೇಷದಿಂದೆ, ಗಳಾಗಮಂ = ಗಳ್ ಎಂಬಾಗಮಂ, ಸಮನಿಸುಗುಂ = ಬರುವುದು; ಸರ್ವನಾಮ ಗುಣವಚನದೊಳಂ = ಸರ್ವನಾಮ ಗುಣವಚನಂಗಳಲ್ಲಿ, ಗಳಾಗಮಕೆ = ಗಳೆಂಬಾಗಮಕ್ಕೆ , ಅವು = ಅವು (ಇವು, ಉವು) ಎಂಬಾಗಮಂ, ಸಮನಿಸುಗುಂ = ಬರುವುದು.

**ವೃತ್ತಿ** - ದ್ವಿವಚನ ಬಹುವಚನ ವಿವಕ್ಷೆಯಾದೊಡೆ ವಿಭಕ್ತಿಗಳ ಮೊದಲೊಳ್ ಗಳಾಗಮಮಕ್ಕುಂ; ಸರ್ವನಾಮ ಗುಣವಚನಂಗಳೊಳ್ ಗಳಾಗಮಕ್ಕಾದೇಶಮಾಗವುಮಕ್ಕುಂ.

**ಪ್ರಯೋಗಂ** -

ದ್ವಿವಚನಕ್ಕೆ -

ತೊಡೆಗಳ್, ಕಣ್ಗಳ್, ತೋಳ್ಗಳ್.

ಕಂ ॥ ತೊಡೆಗಳ್ ರಂಭಾಸ್ತಂಭದ ।
ಗೆಡೆಗಳ್ ಕಣ್ಗಳ್ ಮನೋಜವೀರನ ಗೇಣ್ಗಳ್ ॥
ನಿಡುದೋಳ್ಗಳ್ ದಿಕ್ಕರಿಕರ ।
ದೊಡನಾಡಿಗಳೆನಿಸಿ ಮೆಱೆವುದಾತನ ರೂಪಂ ॥ ೧

ಬಹುವಚನಕ್ಕೆ -

ಕಂ ॥ ಕೊಳಗಳ್ ದಳಿತಾಬ್ಜಂಗಳ್ ।
ದಳಿತಾಬ್ಜಂಗಳ್ ಸಮೃದ್ಧಮಧುಗಳ್ ಮಧುಗಳ್ ॥
ಚಳದಳಿಕುಳಾಕುಳಂಗಳ್ ।
ವಿಳಸದಳಿಪ್ರಕರಮಧುರವಿರುತಿಯೆ ಬನದೊಳ್ ॥ ೨
(ಕಾವ್ಯಾವಲೋಕನಂ ೬೨೩)

ಸರ್ವನಾಮದ ಅವುವಿಂಗೆ - ಅವು, ಇವು, ಉವು.

ಕಂ ॥ ಅವು ಪಿರಿಯವು ಭಾವಿಪೊಡಿಂ ।
ತಿವು ಕಿಱಿಯವೆನಿಪ್ಪುದಿದುವೆ ಭೇದಂ ನಿಮಗಾ ॥
ವುವು ಮನಕೇಱುವುವಟ್ಟಿಱಿ ।
ನವನಾಯ್ಕುಳಿಗೊಳ್ಳಿಮೆಂದು ನವರತ್ನಮುಮಂ ॥ ೩

ಗುಣವಚನಂಗಳ್ಗೆ - ಇನಿಯವು, ಮೆಲ್ಲಿದುವು, ಬೆಟ್ಟಿದುವು.

ಕಂ ॥ ಇನಿಯವು ವಿಷಯಸುಖಂ ನಂ
ಜಿನ ಸವಿವೋಲ್ ... ೪
(ಕಾವ್ಯಾವಲೋಕನಂ ೧೦೨)

ಉ ॥ ಮಾ॥ ಮೆಲ್ಲಿದುವಪ್ಪ ಪಾದತಳಮುಂ ಕಡುವೆಟ್ಟಿದುವಪ್ಪ ಹಸ್ತಮುಂ ... ೫

**ಸೂತ್ರಂ ॥ ಸಂಗಡಿಸಿ ಸರ್ವನಾಮದ ।**
**ಲಿಂಗಾಂತ್ಯಾಕ್ಷರಕಮವುವಿನಾದ್ಯಕ್ಷರಕಂ ॥**
**ಪಿಂಗದೆ ಲೋಪಂ ಗುಣವಚ ।**
**ನಂಗಳೊಳಂತ್ಯಂ ದುಕಾರಮಾದೊಡೆ ಲೋಪಂ ॥ ೯೬ ॥**

ಟೀಕೆ - ಸರ್ವನಾಮದ = ಸರ್ವನಾಮಶಬ್ದದ, ಲಿಂಗ = ಲಿಂಗದ, ಅಂತ್ಯ = ಕಡೆಯಣ, ಅಕ್ಷರಕಂ = ಅಕ್ಕರಕ್ಕೆಯುಂ, ಅವುವಿನ = ಅವು ಎಂಬಾದೇಶದ, ಆದಿ = ಮೊದಲ; ಅಕ್ಷರಕಂ = ಅಕ್ಕರಕ್ಕೆಯುಂ, ಸಂಗಡಿಸಿ = ಒಂದಾಗಿ; ಪಿಂಗದೆ = ತೊಲಗದೆ, ಲೋಪಂ = ಅದರ್ಶನಮಪ್ಪುದು; ಗುಣವಚನಂಗಳೊಳ್ = ಗುಣವಚನಂಗಳಲ್ಲಿ, ಅಂತ್ಯಂ = ಕಡೆಯಕ್ಕರಂ, ದುಕಾರಂ = ದುತ್ವಂ, ಆದೊಡೆ, ಲೋಪಂ = ಅದರ್ಶನಮಪ್ಪುದು.

ವೃತ್ತಿ - ಸರ್ವನಾಮಶಬ್ದದ ಲಿಂಗದ ಕಡೆಯಕ್ಕರಕ್ಕಂ ಪರದ ಅವುವಿನ ಮೊದಲಕ್ಕರಕ್ಕಂ ಸಂಗಡದಿಂ ಲೋಪಮಕ್ಕುಂ; ದುಕಾರಾಂತಮಾದ ಗುಣವಚನದ ಕಡೆಗೆ ಲೋಪಂ.

ಪ್ರಯೋಗಂ -

ಸರ್ವನಾಮಕ್ಕೆ - ಪೆಱವಱ, ಪೆಱವಱೊಳ್, ಎಲ್ಲವಱ.

ಕಂ ॥ ಪೆಱವಱ ಧರ್ಮಂಗಳನೇ ।
ತೆಱದಿಂದಂ ತಂದು ಪೆಱವಱೊಳ್ ಪತ್ತಿಸಿ ಕ ॥
ಣ್ದೆಱೆಯೆ ಚತುರೋಕ್ತಿ ಕೃತಿಯೊಳ್ ।
ನೆಱೆದಿರೆ ಪೇೞ್ವುದು ಸಮಾಧಿಯೆನೆ ಪೆಸರ್ವಡೆಗುಂ ॥ ೧
(ಕಾವ್ಯಾವಲೋಕನಂ ೫೧೯)

ಚಂ ॥ ಮಾ ॥ . .. ಮಾಲೆವೂಗಳೆ
ಲ್ಲವಱ ಕದಂಬಗಂಪನಣಮೊಲ್ಲದೆ ... ೨

ಗುಣವಚನಕ್ಕೆ - ಕರಿಯವು, ಪಿರಿಯವು, ಅಸಿಯವು, ಬಿಳಿಯವು.

ಕಂ ॥ ಬಿರಯಿಗಳ ಸುಯ್ಗಳೊಡನೆಯೆ ।
ಪಿರಿಯವು ದಿವಸಂಗಳಾದುವವರವರ ಪರಿ ॥
ಸ್ಫುರಿತಂಗಳೊಡನೆ ಕುಂದಿದು ।
ವಿರುಳ್ಗಳುಂ ಮುಂಚಿ ಬಂದ ಜಲದಾಗಮದೊಳ್ ॥ ೩
(ಶ್ರೀವೀರವರ್ಧಮಾನಪುರಾಣಂ ೯-೪೧; ಕಾವ್ಯಾವಲೋಕನಂ ೬೧೫)

**ಸೂತ್ರಂ ॥ ಅಕ್ಕುಂ ಕೂಡೆ ತುಕಾರಾಂ ।**
**ತಕ್ಕೆ ತೃತೀಯತ್ವಮವುವಿನಾದಿಗೆ ಲೋಪಂ ॥**
**ಮಿಕ್ಕಾ ಸ್ತ್ರೀಪುಲ್ಲಿಂಗದೊ ।**
**ಳಕ್ಕುಮಿರರ್ದಿರ್ವಿರೆಂದು ಲೋಕೋಕ್ತಿಗಳೊಳ್ ॥ ೯೭ ॥**

**ಟೀಕೆ** - ತುಕಾರಾಂತಕ್ಕೆ = ಗುಣವಚನಂಗಳಲ್ಲಿ ತುಕಾರಾಂತಕ್ಕೆ, ತೃತೀಯತ್ವಂ = ಮೂಱನೆಯಕ್ಷರದ ಭಾವಂ, ಅವುವಿನ = ಅವಾದೇಶದ, ಆದಿಗೆ = ಮೊದಲಕ್ಷರಕ್ಕೆ, ಲೋಪಂ = ಅದರ್ಶನಂ, ಕೂಡೆ = ಒಡನೆ (ಆಗುವುದು); ಮಿಕ್ಕ = (ನಪುಂಸಕ ಲಿಂಗದ) ಸರ್ವನಾಮ ಗುಣವಚನಂಗಳಲ್ಲದುೞಿದ, ಆ, ಸ್ತ್ರೀ ಪುಲ್ಲಿಂಗದೊಳ್ = ಸ್ತ್ರೀ ಪುಲ್ಲಿಂಗಗಳಲ್ಲಿ, ಇರರ್ದಿರ್ವಿರೆಂದು = ಇರ್, ಅರ್, ದಿರ್, ವಿರ್ ಎಂದು, ಲೋಕೋಕ್ತಿಗಳೊಳ್ = ಜನವಾಕ್ಯಂಗಳಲ್ಲಿ, ಅಕ್ಕುಂ = ಅಪ್ಪುದು.

**ವೃತ್ತಿ** - ಗುಣವಚನದ ತುಕಾರಾಂತಕ್ಕೆ (ವರ್ಗದ) ತೃತೀಯತ್ವಮುಮವುವಿನಾದಿಗೆ ಲೋಪಮುಮಕ್ಕುಂ. (ಪಿಂತೆ ಸೂಚಿಸಿರ್ಪ ನಪುಂಸಕಲಿಂಗದ) ಸರ್ವನಾಮ ಗುಣವಚನಂಗಳಲ್ಲದ ಸ್ತ್ರೀಲಿಂಗ ಪುಲ್ಲಿಂಗದೊಳ್ ಗಳ್ ಎಂಬುದರ್ಕಾದೇಶಮಾಗಿ ಇರ್ ಅರ್ ದಿರ್ ವಿರ್ ಎಂದಕ್ಕುಂ.

**ಪ್ರಯೋಗಂ** -

ತೃತೀಯತ್ವಕ್ಕಂ ಅವುವಿನ ಲೋಪಕ್ಕಂ -

ಒಳ್ಳಿದುವು, ತೆಳ್ಳಿದುವು, ದಟ್ಟಿದುವು, ಬೆಟ್ಟಿದುವು.

ಕಂ ॥ ಬೆಟ್ಟಿದುವುಮೆನಿಪ್ಪ ಲೋಹಖುರವಳಯಂಗಳ್ ... ೧

ಇರ್ಗೆ -

ಪೆಂಡಿರ್, ತೊೞ್ತಿರ್

---

೧. (ಈ ಪ್ರಯೋಗ ಪ್ರಥಮಮುದ್ರಣದಲ್ಲಿಲ್ಲ.)

ಕಂ ॥ ತುಱುಗಳ ಪೆಂಡಿರ ಪಾರ್ವರ
ಮಱೆವೊಕ್ಕರ ಕಾವುದು ... ೨

ಶಾ ॥ ವಿ ॥ ... ತದ್ಧಾರಾಪುರಸ್ತ್ರೀಯರಂ
ತೊೞ್ತುರ್ ಮಾಡಿದ ... ೩

ಅರ್ಗೆ -

ದೇವರ್, ನಂಟರ್, ನಲ್ಲರ್

ಪುಸಿಯಾದೊಡೆ ದೇವರ ಪಾದದಾಣೆ ... ೪

ಚಂ ॥ ಮಾ ॥ ... ನಂಟರ ನಲ್ಲರ ಮಾತುಗೇಳದೋ
ಪನೆ ಪರಮಾತ್ಮಂ ... ೫

(ಸೂಕ್ತಿಸುಧಾರ್ಣವಂ ೮-೩೯೨)

ದಿರ್ಗೆ -

ಇವಳ್ದಿರ್, ಇವಂದಿರ್, ಅವಂದಿರ್

ಪೃಥ್ವಿ ॥ ಇವಳ್ದಿರೊಳಿವಂದಿರಂ ವಿಕೃತರೂಪರಂ ... ೬

(ಕಾವ್ಯಾವಲೋಕನಂ ೯೪)

ವಿರ್ಗೆ -

ತಂದೆವಿರ್, ತಾಯ್ವಿರ್, ಸೊಸೆವಿರ್

ಚಂ ॥ ಮಾ॥ ಅವನತನಾಗಿ ತಂದೆವಿರ ತಾಯ್ವಿರ ಕಲ್ಪಿಸಿದುಕ್ತಿ ಕೇಳ್ದು ... ೭

**ಸೂತ್ರಂ ॥ ಬರೆ ಪುಂ ಸ್ತ್ರೀ ಲಿಂಗಮುಮಮ ।**
**ರ್ದಿರೆ ಸಂಖ್ಯಾ ಸರ್ವನಾಮ ಕೃದ್ಗುಣವಚನ ॥**
**ಸ್ಫುರದುರು ತದ್ಧಿತಮುಂ ಮುಂ ।**
**ದರುವಕ್ಕುಮದಂತಲಿಂಗದೊಳ್ ವಿಧಿಲೋಪಂ ॥ ೯೮ ॥**

**ಟೀಕೆ** - ಪುಂಸ್ತ್ರೀಲಿಂಗಮುಂ = ಪುಲ್ಲಿಂಗ ಸ್ತ್ರೀಲಿಂಗಂಗಳುಂ, ಬರೆ, ಸಂಖ್ಯಾ = ಸಂಖ್ಯಾವಾಚಿಗಳುಂ, ಸರ್ವನಾಮ = ಸರ್ವನಾಮಂಗಳುಂ, ಕೃತ್ = ಕೃತ್ತುಗಳುಂ, ಗುಣವಚನ = ಗುಣವಚನಂಗಳುಂ, ಸ್ಫುರತ್ = ಪ್ರಕಾಶಿಸುವ, ಉರು = ಉನ್ನತವಾದ, ತದ್ಧಿತಮುಂ = ತದ್ಧಿತಂಗಳುಂ, ಅಮರ್ದಿರೆ = ಆ ಪುಂ ಸ್ತ್ರೀ ಲಿಂಗಂಗಳಲ್ಲಿ ಪೊರ್ದುಗೆಯಾಗಿರೆ, ಮುಂದೆ = ಅಗ್ರದಲ್ಲಿ, ಅರು = ಗಳಾಗಮಕ್ಕಾದೇಶವಾಗಿ ಅರ್ ಎಂಬಾಗಮಂ, ಅಕ್ಕುಂ = ಆಗುವುದು; ಅದಂತಲಿಂಗದೊಳ್ = ಅಕಾರಾಂತ ಲಿಂಗಂಗಳಲ್ಲಿ, ವಿಧಿಲೋಪಂ = ಹಿಂದೆ ಪೇೞ್ದ ವಿಧಿಗೆ ಲೋಪಂ ಅಕ್ಕುಂ.

**ವೃತ್ತಿ** - ಪುಲ್ಲಿಂಗಮುಂ ಸ್ತ್ರೀಲಿಂಗಮುಂ ಪೆಱಗೆ ವರೆ ಅರುವಕ್ಕುಂ; ಆ ಪುಂ ಸ್ತ್ರೀಲಿಂಗದೊಳಮರ್ದ ಸಂಖ್ಯೆಯುಂ ಸರ್ವನಾಮಮುಂ ಕೃತ್ತುಂ ಗುಣವಚನಮುಂ ತದ್ಧಿತಮುಮಿರ್ದೊಡಂ ಪರದೊಳರುವಕ್ಕುಂ.[೧]

~~~~~~~~~~~~~~~~~~~~

೧. "ಮುಂದರಕ್ಕುಮತ್ವಾಂತಲಿಂಗದೊಳ್ವಿಧಿಲೋಪಂ" ಎಂದು ಪಾಠಾಂತರಂ. ಅರ್=ಅರಾಗಮಂ ಅಕ್ಕುಂ =ಆಗುವುದು; ಅತ್ವಾಂತಲಿಂಗದೊಳ್=ಅಕಾರಾಂತಲಿಂಗದಲ್ಲಿ, ವಿಧಿಲೋಪಂ=ಹಿಂದೆ ಪೇೞ್ದ ವಿಧಿಗೆ ಲೋಪಂ ಅಕ್ಕುಂ.
~~~~~~~~~~~~~~~~~~~~

ಪ್ರಯೋಗಂ -

ಪುಲ್ಲಿಂಗಕ್ಕೆ - ಅರಸರ್, ಸಾಮಂತರ್, ಕೋವಿದರ್, ನಂದನರ್.[೧]

ಕಾರ್ಯವಿಚಾರಕೋವಿದರಿರ್ದು ಪೇೞ್ದೊಡೇಂ
ಬೇಸಱಿಲಾಗದು ನೀತಿಮಾರ್ಗದೊಳ್ ... (?) ೧

ತರಳ ॥ ... ಪೇೞಿವೆ ಧರ್ಮನಂದನರಿರ್ದರೆಂಬುದನೆಲ್ಲಿಯುಂ ೨

ಸ್ತ್ರೀಲಿಂಗಕ್ಕೆ - ದೇವಿಯರ್, ಕಾಂತೆಯರ್.

ಸಂಖ್ಯೆಗೆ -

ಶಾ ॥ ವಿ ॥ ಒರ್ವಂ ಜಿನ್ನಣೆಯಪ್ಪ ಬಡ್ಡಗಿಯ ಪಾಂಗಿಂದೆಲ್ಲರ್ ಮಾಳ್ಪರ್ (?) ... ೩

ಮ ॥ ವಿ ॥ ... ತಮ್ಮಿರ್ವರುಂ ಕೆಯ್ದುವಂ
ಬಿಸುಟರ್ ... ೪
(ಸಾಹಸಭೀಮ ವಿಜಯಂ ೨-೧೧; ಕಾವ್ಯಾವಲೋಕನಂ ೧೪೬)

ಮ ॥ ವಿ ॥ ... ಪಯಿಂಛಾಸಿರ್ವರಂ ಯುದ್ಧದೊಳ್ ॥ ೫
(ವಿಕ್ರಮಾರ್ಜುನ ವಿಜಯಂ ೧೦-೨೫; ಕಾವ್ಯಾವಲೋಕನಂ ೨೭೯)

ಸರ್ವನಾಮಕ್ಕೆ -

ತರಳ ॥ ಪೆಱರುಮನ್ನರಿನಿನ್ನುಮಾರಯಿಸಿಂ ವಿದಗ್ಧರಿಂ ... ೬
(ಕಾವ್ಯಾವಲೋಕನಂ ೯೫)

ಕಂ ॥ ... ಅವರಿವರುವರಳವೆ ಕಾವ್ಯವಿ(ಧಿ)ಗಳ್ ಸುಜನೋತ್ತಂಸಾ ॥ ೭
(ನೀತಿಕಂದಂ ?)

ಕೃತ್ತಿಂಗೆ -

ಮಾಡಿದರ್, ಬೇಡಿದರ್.

ಕಂ ॥ ಕೊಂದರ್ ಕೀಚಕರಂ ಸುರ
ರೆಂದಱಿಯದೆ ನುಡಿವರ್ ... ೮

ಕಂ ॥ ನುಡಿಗೆಲ್ಲಂ ಸಲ್ಲದ ಕ ।
ನ್ನಡದೊಳ್ ಚತ್ತಾಣಮುಂ ಬೆದಂಡೆಯುಮೆಂದೀ ॥
ಗಡಿನ ನೆಗಟ್ತೆಯ ಕಬ್ಬದೊ ।
ಳೊಡಂಬಡಂ ಮಾಡಿದರ್ ಪುರಾತನಕವಿಗಳ್ ॥ ೯
(ಕವಿರಾಜಮಾರ್ಗಂ ೧-೩೨)

ಗುಣವಚನಕ್ಕೆ -

ಒಳ್ಳಿದರ್, ಬಲ್ಲಿದರ್

~~~~~~~~~~~~~~~~~~~

೧. (ಈ ಮುಂದಿನ ೧, ೨ನೆಯ ಪ್ರಯೋಗಗಳು ಪ್ರಥಮಮುದ್ರಣದಲ್ಲಿಲ್ಲ.)
~~~~~~~~~~~~~~~~~~~

ಉ ॥ ಮಾ ॥ ಆದ್ಯರುಮಕ್ಕುಮದ್ಯತನರೊಳ್ಳಿದರಪ್ಪವರೆಂದುಮೊಳ್ಳಿದರ್ ... ೧೦

ತರಳ ॥ ಎನಗೆ ಬಲ್ಲಿದರಾಗಲಾರ್ಪರೆ ಗಾವಿಲರ್ ... ೧೧

ತದ್ಧಿತಕ್ಕೆ - ಮಣಿಗಾಱರ್, ಕಂಚಗಾಱರ್, ಒಱೆಗಾಱರ್.

ಕಂ ॥ ... ಮಣಿಗಾಱರ ಕಂಚಗಾಱರೊಱೆಗಾಱರ ... ೧೨

(ಕಾವ್ಯಾವಲೋಕನಂ ೩೨೮)

ಪುಲ್ಲಿಂಗಮಪ್ಪದಂತಕ್ಕೆಲ್ಲಿಯುಂ ವಿಧಿಲೋಪಂ - ಸುರರ್, ನರರ್, ಚದುರರ್, ಪಾರ್ವರ್ ಎಂಬಂತೆ.

**ಸೂತ್ರಂ ॥ ಪವಣೊಳಮಾ ಸಂಖ್ಯೆಯೊಳಂ ।**
**ವ್ಯವಹರಿಕುಂ ವತ್ವಮಲ್ಲಿ ಬಶ್ರುತಿಯುಂ ಸಂ ॥**
**ಭವಿಕುಮದಂತಂ ನಿಲೆ ಬಿಂ ।**
**ದುವಿಕಲ್ಪಂ ಬತ್ವಮೊರ್ಮೆ ಲೋಪಮನಾಳ್ಗುಂ ॥ ೯೯ ॥**

**ಟೀಕೆ** - ಪವಣೊಳಂ = ಆ ಪುಂಸ್ತ್ರೀಲಿಂಗದೊಳಮರ್ದ ಪ್ರಮಾಣವಾಚಿಗಳಲ್ಲಿಯುಂ, ಆ ಸಂಖ್ಯೆಯೊಳಂ = ಆ ಸಂಖ್ಯಾವಾಚಿಗಳಲ್ಲಿಯುಂ, ವತ್ವಂ = ವಕಾರಂ, ವ್ಯವಹರಿಕುಂ = ವ್ಯವಹರಿಪುದು, ಬರ್ಪುದೆಂಬರ್ಥಂ; ಅಲ್ಲಿ = ಆ ಪುಂಸ್ತ್ರೀಲಿಂಗ ವಿಷಯವಾಗಿ ಬಂದ ವಕಾರದಲ್ಲಿ, ಬಶ್ರುತಿಯುಂ = ಬಕಾರದ ಶ್ರವಣಮುಂ, ಸಂಭವಿಕುಂ = ಹುಟ್ಟುವುದು; ಅದಂತಂ = ಅಕಾರಂತಂ, ನಿಲೆ = ನೆಲಸೆ, ಬಿಂದು = ಸೊನ್ನೆ, ವಿಕಲ್ಪಂ = ವಿಕಲ್ಪವಾಗಿ ಬರ್ಪುದು ; ಬತ್ವಂ = ಬಕಾರಂ, ಒರ್ಮೆ = ಒಂದು ಬಾರಿ, ಲೋಪಮಂ = ಅದರ್ಶನಮಂ, ಆಳ್ಗುಂ = ತಾಳ್ವುದು.

**ವೃತ್ತಿ** - [1]ಆ ಪುಂಸ್ತ್ರೀಲಿಂಗ ವಿಷಯಮಾದ ಪವಣೊಳಂ ಸಂಖ್ಯೆಯೊಳಂ ವತ್ವಮಕ್ಕುಂ; ಆ ವತ್ವಕ್ಕೊರ್ಮೆ ಬಕಾರಮಕ್ಕುಂ; ಅಕಾರಾಂತಮಾದೆಡೆಯೊಳ್ ಬಿಂದು ವಿಕಲ್ಪದಿಂದಕ್ಕುಂ; ಬಕಾರಕ್ಕೊರ್ಮೆ ಲೋಪಮಕ್ಕುಂ.

**ಪ್ರಯೋಗಂ** - ಪವಣೊಳ್ವಕಾರಕ್ಕೆ -

ಎಲ್ಲವರ್

ಉ ॥ ಮಾ ॥ ಎಲ್ಲವರಂತೆವೋಲ್ ನುಡಿವರಲ್ಲರವರ್ ಪೆಱರಿಚ್ಚೆಗುಳ್ಳುದಂ
ಸೊಲ್ಲಿಸುವರ್ ... ೧

ಸಂಖ್ಯೆಗೆ - ಮೂವತ್ತ ಮೂವರ್; ಇರ್ವರ್; ನೂರ್ವರ್.

ಕಂ ॥ ... ಮೂವತ್ತ ಮೂವರಾದರ್ ದೇವರ್ ... ೨

(ಕಾವ್ಯಾವಲೋಕನಂ ೯)

ಬಕಾರಕ್ಕೆ - ಅನಿಬರ್, ಇನಿಬರ್, ಎನಿಬರ್; ಒರ್ಬಂ, ಇರ್ಬರ್

~~~~~~~~~~~~~~~~~~~~

೧. ಪವಣಂ ಸಂಖ್ಯೆಯಂ ಪೇೞ್ವ ಪುಂಸ್ತ್ರೀಲಿಂಗ ವಿಷಯದೊಳ್ ಅಕಾರಾಂತಮಾದೆಡೆಯೊಳ್ ಬಿಂದು ವಿಕಲ್ಪದಿಂದಕ್ಕುಂ. ಕ. ಖ.
~~~~~~~~~~~~~~~~~~~~

ಕಂ ॥ ... ನೆರೆದರಸುಗ
ಳನಿಬರುಮಂ ಕಾದಿ ಗೆಲ್ದನೊರ್ಬನೆ ಪಾರ್ಥಂ ... ೩

ಸ್ರ ॥ ಒರ್ಬಂ ಬಂದೊಂದೆ ತೇರೊಳ್ ನೆರೆದ ಕುರುಬಲವ್ಯೂಹಮಂ ... (?) ೪

ಅಕಾರಾಂತ ಬಿಂದುಗೆ ವಿಕಲ್ಪಂ - ಪಲಂಬರ್ - ಪಲಬರ್; ಕೆಲಂಬರ್ - ಕೆಲಬರ್.

ಬಕಾರ ಲೋಪಕ್ಕೆ - ಪಲರ್, ಕೆಲರ್.

**ಸೂತ್ರಂ ॥ ಪವಣಂ ಸೂಚಿಪ ಸಂಖ್ಯೆಯ ।**
**ನವಿಶೇಷದಿನುಸಿರ್ವ ರೂಢಿಯನಿತಿನಿತೆನಿತೆ ॥**
**ಲ್ಲವು ಕೆಲವು ಪಲವು ತಾಮಂ ।**
**ತ್ಯವರ್ಣಲೋಪಮನೆ ವತ್ವಮೊದವಿರೆ ಪಡೆಗುಂ ॥ ೧೦೦ ॥**

**ಟೀಕೆ** - ವತ್ವಂ = ವಕಾರಂ, ಒದವಿರೆ = ಬಂದಿರೆ, ಪವಣಂ = ಪ್ರಮಾಣಮಂ, ಸೂಚಿಪ = ಸೂಚಿಸುವ, ಸಂಖ್ಯೆಯಂ = ಲೆಕ್ಕವಂ, ಅವಿಶೇಷದಿಂ = ಸಾಮಾನ್ಯದಿಂ, ಉಸಿರ್ವ = ಪೇೞ್ವ, ರೂಢಿಯ = ಪ್ರಸಿದ್ಧಿಯ, ಅನಿತು = ಅನಿತೆಂಬುದು, ಇನಿತು = ಇನಿತೆಂಬುದು, ಎನಿತು = ಎನಿತೆಂಬುದು, ಎಲ್ಲವು = ಎಲ್ಲವೆಂಬುದು, ಕೆಲವು = ಕೆಲವೆಂಬುದು, ಪಲವು = ಪಲವೆಂಬುದು, ತಾಂ, ಅಂತ್ಯ = ಕಡೆಯಣ, ವರ್ಣ = ಅಕ್ಷರದ, ಲೋಪಮನೆ = ಅದರ್ಶನವನೆ, ಪಡೆಗುಂ = ಪಡೆವುದು.

**ವೃತ್ತಿ** - ಅನಿತು, ಇನಿತು, ಎನಿತು ಎಂದು ಪವಣಂ ಪೇೞ್ವ, ನಿರ್ವಿಶೇಷದಿಂ ಸಂಖ್ಯೆಯಂ ಪೇೞ್ವ ಎಲ್ಲವು, ಕೆಲವು, ಪಲವು ಎಂಬ, ಶಬ್ದಂಗಳ್ ವತ್ವಮಿದಿರೊಳ್ ಇರ್ದೊಡಮಂತ್ಯಲೋಪಮಂ ಪಡೆವುವು.

**ಪ್ರಯೋಗಂ** -

ಅನಿಬರ್, ಇನಿಬರ್, ಎನಿಬರ್; ಎಲ್ಲವರ್, ಕೆಲವರ್, ಪಲವರ್.

**ಸೂತ್ರಂ॥ ವಿಕಲಂ [1]ಪೆೞವೞೊಳರುವಿಂ ।**
**ಗೆ ಕಳಾಗಮಮಂತೆ ಸರ್ವನಾಮದೊಳಂ ತಾಂ ॥**
**ಪ್ರಕಟಂ ಗಳಾಗಮಂ ತಿಳಿ ।**
**ವಿಕಲ್ಪದಿಂದಪ್ಪುದಲ್ತೆ ಗಳ್ದಿರ್ವಿರ್ಗಂ ॥ ೧೦೧ ॥**

**ಟೀಕೆ** - ಪೆೞವೞೊಳ್ = ಕೆಲವೞಲ್ಲಿ, ಅರುವಿಂಗೆ = ಅರಾಗಮಕ್ಕೆ, ಕಳಾಗಮಂ=ಕಳ್ ಎಂಬಾಗಮಂ, ವಿಕಲಂ = ವಿಕಲ್ಪವಾಗಿ ಬರ್ಪುದು; ಅಂತೆ = ಹಾಗೆ, ಸರ್ವನಾಮದೊಳಂ = ಪುಂಸ್ತ್ರೀಲಿಂಗ ವಿಷಯವಾದ ಸರ್ವನಾಮಂಗಳಲ್ಲಿಯುಂ, ಗಳಾಗಮಂ = ಗಳ್ ಎಂಬಾಗಮಂ, ತಾಂ, ಪ್ರಕಟಂ = ಪ್ರಸಿದ್ಧಂ; ದಿರ್ವಿರ್ಗಂ= ದಿರಾಗಮ ವಿರಾಗಮಂಗಳ್ಗೆ, ಗಳ್ = ಗಳಾಗಮಂ, ವಿಕಲ್ಪದಿಂದೆ, ಅಪ್ಪುದು= ಆಗುವುದು, ಅಲ್ತೆ = ಅಲ್ಲವೆ, ತಿಳಿ = ಅಱಿ.

**ವೃತ್ತಿ** - ಮತ್ತೆ ಕೆಲವೞೊಳರುವಿನ ಮೇಲೆ ಕಳಾಗಮಮಕ್ಕುಂ; ಪೆೞವೞೊಳರು ವಿಲ್ಲದೆಯುಂ ಕಳಾಗಮಮಕ್ಕುಂ; ಸರ್ವನಾಮದೊಳರುವಿನ ಮೇಲೆ ಗಳಾಗಮಮಕ್ಕುಂ; ದಿರ್ವಿರ್ಗೆ ವಿಕಲ್ಪದಿಂ ಗಳಾಗಮಮಕ್ಕುಂ.

~~~~~~~~~~~~~~~~~~~~

೧. (ಪ್ರಚಲಿತ ಪರಿಷ್ಕರಣಗಳಲ್ಲಿ ವೃತ್ತಿ ಪ್ರಯೋಗಗಳು ಪೆೞವೞೊಳರ್ವಿರ್ಗೆ ಎಂಬ ಪಾಠಕ್ಕೆ ಅನುಗುಣವಾಗಿವೆ.)
~~~~~~~~~~~~~~~~~~~~

ಪ್ರಯೋಗಂ-

ಅರುವಿನ ಮೇಲೆ ಕಳಾಗಮಕ್ಕೆ - ಬುಧರ್ಕಳ್, ಗೋವರ್ಕಳ್, ಘೋಟಿಕಾಯ್ಲರ್ಕಳ್.[೧]

ಕಂ ॥ ಸದಭಿಮತಕಾವ್ಯಪದವಿ(ಧಿ)
ವಿದೂರಗತಮಾಗೆ ಪರಿಹರಿಕ್ಕೆ ಬುಧರ್ಕಳ್ ॥ ೧

ಕಂ ॥ ... ಗೋ
ವರ್ಕಳಿದಿರ್ಚಿದ ಘೋಟಿಕಾ
ಯ್ಲರ್ಕಳೊಳಿಕ್ಕತುಳಮಿಱಿದು ಕುಱಿದಱಿಯಾದರ್ ॥ ೨

(ಕಾವ್ಯಾವಲೋಕನಂ ೫೮)

ಅರುವಿಲ್ಲದಲ್ಲಿ - ಕಳ್ - ಮಕ್ಕಳ್, ನಾಟ್ಕಳ್, ಕೋಟ್ಕಳ್.

ಅರುವಿನ ಮೇಲೆ ಸರ್ವನಾಮದೊಳ್ ಗಳಾಗಮಕ್ಕೆ - ಅವರ್ಗಳ್, ಇವರ್ಗಳ್, ಉವರ್ಗಳ್.

ದಿರ್ಗೆ - ಅಣ್ಣಂದಿರ್, ಅಣ್ಣಂಗಳ್; ಭಾವಂದಿರ್, ಭಾವಂಗಳ್; ಮಾವಂದಿರ್, ಮಾವಂಗಳ್; ಅಯ್ಯಂದಿರ್, ಅಯ್ಯಂಗಳ್; ಅಕ್ಕಂದಿರ್, ಅಕ್ಕಂಗಳ್.

ವಿರ್ಗೆ - ಅತ್ತೆವಿರ್, ಅತ್ತೆಗಳ್; ತಾಯ್ವಿರ್, ತಾಯ್ಗಳ್; ತಂದೆವಿರ್, ತಂದೆಗಳ್.

**ಸೂತ್ರಂ ॥ ಸವನಿಪುದಯತ್ನಕೃತ ಗೌ ।**
**ರವಮುಖದೊಳ್ ಗುರು ಮುನೀಶ್ವರಾದಿ ವಿಶಿಷ್ಟೋ ॥**
**ದ್ಭವ ವಿನಯದೊಳೊಂದಿದಸ ।**
**ಹ್ಯವೃತ್ತಿಯೊಳ್ ತಾಂ ಬಹುತ್ವಮೇಕತ್ವದೊಳಂ ॥ ೧೦೨ ॥**

**ಟೀಕೆ** - ಅಯತ್ನ = ಪ್ರಯತ್ನವಿಲ್ಲದೆ, ಕೃತ = ಮಾಡಲ್ಪಟ್ಟ, ಗೌರವಮುಖದೊಳ್ = ಗುರುತ್ವದ ಮುಖದಲ್ಲಿ, ಗುರು = ಗುರುಗಳ್, ಮುನೀಶ್ವರ = ಮುನೀಶ್ವರರ್, ಆದಿ = ಮೊದಲಾದ, ವಿಶಿಷ್ಟ = ಶ್ರೇಷ್ಠರಲ್ಲಿ, ಉದ್ಭವ = ಹುಟ್ಟುವ, ವಿನಯದೊಳ್ = ವಿನಯದಲ್ಲಿ, ಒಂದಿದಸಹ್ಯವೃತ್ತಿಯೊಳ್ = ಕೂಡಿದ ಅಸಹ್ಯವಾದ ವೃತ್ತಿಯಲ್ಲಿ, ಏಕತ್ವದೊಳಂ = ಏಕವಚನದಲ್ಲಿಯುಂ, ಬಹುತ್ವಂ = ಬಹುವಚನಂ, ತಾಂ, ಸವನಿಪುದು = ಬರ್ಪುದು.

**ವೃತ್ತಿ** - ಪಾತ್ರವಿಶೇಷಮಲ್ಲದೆಡೆಯೊಳ್ ಪ್ರಯತ್ನಮಲ್ಲದಿರ್ಪ ಗುರುತ್ವದೊಳಂ, ಗುರು ಮುನೀಶ್ವರಾದಿ ವಿಶೇಷತ್ವದೊಳಂ, ಅಸಹ್ಯವೃತ್ತಿಯೊಳಂ, ಏಕವಚನಕ್ಕೆ ಬಹುವಚನಮಪ್ಪುದು.

**ಪ್ರಯೋಗಂ -**

ಪ್ರಯತ್ನಮಲ್ಲದ ಗುರುತ್ವಕ್ಕೆ - ಎಮ್ಮ ತಂದೆಗಳ್, ಎಮ್ಮಯ್ಯಂಗಳ್, ಎಮ್ಮ ತಾಯ್ಗಳ್.

ಗುರು ಮುನಿಜನಂಗಳ್ಗೆ - ಗುರುಗಳ್.

~~~~~~~~~~~~~~~~~~~~

೧. (ಈ ಮುಂದಿನ ೧, ೨ನೆಯ ಪ್ರಯೋಗಗಳು ಪ್ರಥಮಮುದ್ರಣದಲ್ಲಿಲ್ಲ.)
~~~~~~~~~~~~~~~~~~~~

ಕಂ ॥ ಶ್ರೀಮತ್ಸಮಂತಭದ್ರ ।
ಸ್ವಾಮಿಗಳ ಜಗತ್ಪ್ರಸಿದ್ಧ ಕವಿಪರಮೇಷ್ಠಿ ॥
ಸ್ವಾಮಿಗಳ ಪೂಜ್ಯಪಾದ ।
ಸ್ವಾಮಿಗಳ ಪದಂಗಳೀಗೆ ಶಾಶ್ವತಪದಮಂ ॥ ೧

(ಆದಿಪುರಾಣಂ ೧-೧೧)

ಅಸಹ್ಯವೃತ್ತಿಗೆ -

ಕಂ ॥ ಬಡವಾದಿರರಸ ಕಾಲೊಳ್
ನಡೆದಪಿರೊಡನಾರುಮಿಲ್ಲ ಕಡಲೆಗಳೇಂ ನಿ ॥
ಮ್ಮುಡಿಯೊಳಗೆ ಪಡುವ ದೇಗುಲ ।
ದೆಡೆಯಾವುದು ಕುಡದ ನಿಮಗಮೀಯ ತಜಾಯ್ತೇ ॥ ೨

**ಸೂತ್ರಂ ॥ ಉದಯಿಸುಗುಂ ಗಳ್ದಿರ್ಗಳ ।**
**ಮೊದಲೊಳದಂತಕ್ಕೆ ಬಿಂದು ಪುಂಸ್ತ್ರೀಲಿಂಗ ॥**
**ಕ್ಕದು ನಪ್ಪಿನೊಳ್ ವಿಕಲ್ಪಂ ।**
**ಪುದಿದಿರೆ ಗಳ್ ಬಿಂದು ನಿಯತಮದು ಸಂಸ್ಕೃತದೊಳ್ ॥ ೧೦೩ ॥**

**ಟೀಕೆ** - ಪುಂಸ್ತ್ರೀಲಿಂಗಕ್ಕೆ = ಪುಲ್ಲಿಂಗ ಸ್ತ್ರೀಲಿಂಗಂಗಳಾದ, ಅದಂತಕ್ಕೆ = ಅಕಾರಾಂತಂಗಳ್ಗೆ, ಗಳ್ದಿರ್ಗಳ = ಗಳಾಗಮ ದಿರಾಗಮಂಗಳ, ಮೊದಲೊಳ್ = ಆದಿಯಲ್ಲಿ, ಬಿಂದು = ಸೊನ್ನೆ, ಉದಯಿಸುಗುಂ = ಪುಟ್ಟುವುದು; ಅದು = ಆ ಬಿಂದು; ನಪ್ಪಿನೊಳ್ = ಅಕಾರಾಂತ ನಪುಂಸಕ ಲಿಂಗದಲ್ಲಿ, ವಿಕಲ್ಪಂ = ವಿಕಲ್ಪವಾಗಿ ಜನಿಯಿಸುವುದು; ಸಂಸ್ಕೃತದೊಳ್ = ಸಂಸ್ಕೃತ ಶಬ್ದಂಗಳಲ್ಲಿ, ಗಳ್ = ಗಳಾಗಮಂ, ಪುದಿದಿರೆ = ಪ್ರವೇಶವಾಗಿರೆ, ಬಿಂದು = ಸೊನ್ನೆ, ಅದು, ನಿಯತಂ = ನಿತ್ಯವಾಗಿ ಬರ್ಪುದು.

**ವೃತ್ತಿ** - ಪುಲ್ಲಿಂಗ ಸ್ತ್ರೀಲಿಂಗದದಂತಕ್ಕೆ ಗಳ್ದಿರ್ಗಳ್ ಪರಮಾಗೆ ನಡುವೆ ಬಿಂದುವಕ್ಕುಂ; ಅಕಾರಾಂತ ನಪುಂಸಕಲಿಂಗದೊಳ್ ಗಳ್ಪರೆ ಆ ಬಿಂದು ವಿಕಲ್ಪಂ ; ಸಂಸ್ಕೃತದೊಳ್ ಬಿಂದು ನಿತ್ಯಂ.

**ಪ್ರಯೋಗಂ** -

ಪುಲ್ಲಿಂಗಕ್ಕೆ - ಅಣ್ಣಂಗಳ್, ಅಣ್ಣಂದಿರ್; ಭಾವಂಗಳ್, ಭಾವಂದಿರ್; ಮಾವಂಗಳ್, ಮಾವಂದಿರ್; ಅಯ್ಯಂಗಳ್, ಅಯ್ಯಂದಿರ್.

ಸ್ತ್ರೀಲಿಂಗಕ್ಕೆ - ಅಕ್ಕಂಗಳ್, ಅಕ್ಕಂದಿರ್.

ನಪುಂಸಕ ಲಿಂಗಕ್ಕೆ - ಮರಂಗಳ್, ಮರಗಳ್; ಪೊಲಂಗಳ್, ಪೊಲಗಳ್; ಪಯಂಗಳ್, ಪಯಗಳ್; ಕೆಲಂಗಳ್, ಕೆಲಗಳ್.

ಸಂಸ್ಕೃತಕ್ಕೆ - ಗುಣಂಗಳ್, ಮದಂಗಳ್, ದೇಶಂಗಳ್, ಕೋಶಂಗಳ್, ಪಾಶಂಗಳ್ ಎಂಬಂತೆ.

ದೋಷಕ್ಕೆ - ದೇಶಗಳ್.

**ಸೂತ್ರಂ ॥ ಪರದೊಳ್ ಸ್ವರಮಿರೆ ಬಿಂದುಗೆ ।**
**ದೊರೆಕೊಳ್ಗುಂ ನತ್ವ ಮತ್ವಮಾ ಮತ್ವಕ್ಕು ॥**
**ಚ್ಚರಿಪರ್ ವತ್ವಮನರೆಬರ್ ।**
**ನಿರವದ್ಯಂ ನಿಜಮಕಾರದೆಡೆಗಂ ವತ್ವಂ ॥ ೧೦೪ ॥**

**ಟೀಕೆ** - ಪರದೊಳ್ = ಮುಂದೆ, ಸ್ವರಂ = ಸ್ವರಾಕ್ಷರಂ, ಇರೆ, ಬಿಂದುಗೆ = ಸೊನ್ನೆಗೆ, ನತ್ವ ಮತ್ವಂ = ನಕಾರ ಮಕಾರಂ, ದೊರೆಕೊಳ್ಗುಂ = ಬರ್ಪುದು; ಆ ಮತ್ವಕ್ಕೆ = ಆ ಬಿಂದುವಿಂಗೆ ಬಂದ ಮಕಾರಕ್ಕೆ, ಅರೆಬರ್ = ಕೆಲಂಬರ್, ವತ್ವಮಂ = ವಕಾರಮಂ, ಉಚ್ಚರಿಪರ್ = ಉಚ್ಚರಿಸುವರ್; ನಿರವದ್ಯಂ = ದೋಷಮಿಲ್ಲದೆ, ನಿಜಮಕಾರದ = ಬಿಂದುವಿಂಗೆ ಬಂದುದಲ್ಲದ ನಿಜಮಕಾರದ, ಎಡೆಗಂ = ಸ್ಥಾನಕ್ಕೆಯುಂ, ವತ್ವಂ = ವಕಾರಮಪ್ಪುದು.

**ವೃತ್ತಿ** - ಸ್ವರಂ ಪರಮಾಗೆ ಬಿಂದುವಿಂಗೆ ನಕಾರ ಮಕಾರಂಗಳಕ್ಕುಂ ; ಆ ಮಕಾರಕ್ಕೊರ್ಮೆ ವಕಾರಮಕ್ಕುಂ ; ಸಹಜ ಮಕಾರಕ್ಕಂ ವಕಾರಮಕ್ಕುಂ.

**ಪ್ರಯೋಗಂ** -

ನಕಾರಕ್ಕೆ -

ಕಂ ॥ ಪೊಲನಱಿಯದ ನೆಲನಱಿಯದ
ಕೆಲನಱಿಯದ ಮಿಗದ ಮೂಱು ವಿಧಮಱಿಯದ ... ೧

ಮ ॥ ಸ್ರ ॥ ಇವಳಂ ಶೃಂಗಾರಸಾರಂ ಕುಸುಮಶರನೆ ಮೇಣ್ ಮಾಡಿದಂ ಪ್ರೋಲ್ಲಸತ್ಪ ।
ಲ್ಲವಪುಷ್ಪಂ ಮೇಣ್ ಬಸಂತಂ ಬಯಸೆ ಪಡೆದನೆತ್ತಂ ಸುಧಾಸಾರಮಂ ಸೂ ॥
ಸುವ ಚಂದ್ರಂ ತಾನೆ ಮೇಣ್ ಪುಟ್ಟಿಸಿದನತಿಜಡಂ ಛಾಂದಸಂ ಪದ್ಮಜಂ ನಿ ।
ಕ್ಕುವಮಲ್ಲಂ ಕರ್ತೃ ತಾನೆಂಬಿನಿತತಿಶಯಮಂ ತಾಳ್ದುದೀ ಕನ್ನೆಯಂದಂ ॥ ೨

(ಕಾವ್ಯಾವಲೋಕನಂ ೪೨)

ಮಕಾರಕ್ಕೆ -

ಕಂ ॥ ಕುಲಮಂ ಚಲಮಂ ವಿದ್ಯಾ
ಬಲಮಂ ಶೌರ್ಯಾವಲೇಪಮಂ ಪೊಗಟಿ ನೆಲಂ ... ೩

(ಕಾವ್ಯಾವಲೋಕನಂ ೧೯೬)

ಕಂ ॥ ಆಯಿರ್ದ ಮಾಟ್ಕೆಯೊಳೆ ಪರ ।
ಮಾಯುಷ್ಯಾಂತಂಬರಂ ನಿರಾಕುಳಮಾಗಿ ॥
ರ್ಪಾಯಿರವಿನ ಜೈನಾಭಿ ।
ಪ್ರಾಯಂ ಪ್ರಾಯೋಪಗಮನಮಂ ನೋಂನಿಸಿದಂ ॥ ೪

(ಆದಿಪುರಾಣಂ ೨-೫೩)

ವಕಾರಕ್ಕೆ -

... ಕಣ್ಣೊಳ್ ಕಾಣಂ
ಕಿವಿಯೊಳ್ ಕೇಳಂ ಕಾಣ್ಬಂ
ದವೆಂತು ಕೇಳ್ವಂದವೆಂತು ತಲೆಯಿಲ್ಲದನಂ ॥ ೫

(ಸಾಹಸಭೀಮ ವಿಜಯಂ ೫-೩೬)

ಉ ॥ ಮಾ ॥ ... ಶೌಚವಣ್ಮ ಪೆ
ಮ್ರ್ಗಾತು ಕುಲಂ ... ೬

(ಕಾವ್ಯಾವಲೋಕನಂ ೫೩)

ಕಂ ॥ ... ನಾಸಿಕವಡ್ಡಂ
ಬಂದಂದಮನೀಕ್ಷಿಸಿ ... ೭

(ಕವಿರಾಜಮಾರ್ಗಂ ೩-೨೩೪; ಲೀಲಾವತೀಪ್ರಬಂಧಂ ೩-೪೧)

ನಿಜ ಮಕಾರದ ವಕಾರಕ್ಕೆ -

ತಾಮರೆ - ತಾವರೆ; ಸಾಮಂತಂ - ಸಾವಂತಂ ; ತಿಮಿರ್ - ತಿವಿರ್ ; ತೆಮರ್ - ತೆವರ್ ; ಸಾಮಿ - ಸಾವಿ.

**ಸೂತ್ರಂ॥ ಬಿಂದುವದಂತಕ್ಕುೞಿದೆಡೆ ।**
**ಗೆಂದುಂ ಪ್ರಥಮೈಕವಚನದೊಳ್ ಲೋಪಮದಂ ॥**
**ತಂ ದೊರೆವಡೆದಿದಿರೊಳ್ ಸ್ವರ ।**
**ಮೊಂದಿರೆ ಪುಲ್ಲಿಂಗದಲ್ಲಿ ನಾಗಮಮಕ್ಕುಂ ॥ ೧೦೫ ॥**

**ಟೀಕೆ** - ಪ್ರಥಮೈಕವಚನದೊಳ್ = ಪ್ರಥಮಾವಿಭಕ್ತಿಯ ಏಕವಚನದಲ್ಲಿ, ಅದಂತಕ್ಕೆ = ಅಕಾರಾಂತ ಶಬ್ದಕ್ಕೆ, ಬಿಂದು = ಮಕಾರದ ಸೊನ್ನೆ ಅಪ್ಪುದು; ಉೞಿದೆಡೆಗೆ = ಅಕಾರಾಂತವಲ್ಲದುೞಿದೆಡೆಗೆ, ಎಂದುಂ = ಆವಾಗಲುಂ, ಲೋಪಂ = ಅದರ್ಶನಂ ಅಪ್ಪುದು; ಅದಂತಂ = ಅಕಾರಾಂತಂ, ದೊರೆವಡೆದು = ಪ್ರಸಿದ್ಧಿವಡೆದು, ಇದಿರೊಳ್ = ಮುಂದೆ, ಸ್ವರಂ = ವಿಭಕ್ತಿಸ್ವರಂ, ಒಂದಿರೆ = ಕೂಡಿರೆ, ಪುಲ್ಲಿಂಗದಲ್ಲಿ, ನಾಗಮಂ = ನಕಾರಾಗಮಂ, ಅಕ್ಕುಂ = ಅಪ್ಪುದು.

**ವೃತ್ತಿ** - ಪ್ರಥಮೈಕವಚನದೊಳಕಾರಾಂತಕ್ಕೆ ಬಿಂದುವಕ್ಕುಂ; ಅಕಾರಾಂತಮಲ್ಲದೆಡೆಯೊಳೆಲ್ಲಂ ಲೋಪಮಕ್ಕುಂ; ಅಕಾರಾಂತ ಪುಲ್ಲಿಂಗಕ್ಕೆ ಸ್ವರಾದಿ ವಿಭಕ್ತಿ ಪರಮಾಗೆ ನಕಾರಾಗಮಮಕ್ಕುಂ.

**ಪ್ರಯೋಗಂ -**

ಬಿಂದುವಿಂಗೆ -

ಕಂ ॥ ವೇದವಿದಂ ಕಾಲತ್ರಯ ।
ವೇದಿ ಬಹುಶ್ರುತನಥರ್ವಕುಶಲಂ ಶುಭವಂ ॥
ಶೋದಯನುತ್ತಮನಾಶೀ ।
ರ್ವಾದಪರಂ ಪರಹಿತಂ ಪುರೋಹಿತನಕ್ಕುಂ ॥ ೧

(ಸೂಕ್ತಿಸುಧಾರ್ಣವಂ ೧೬-೫೩)

ಬಿಂದುಲೋಪಕ್ಕೆ -

ಪುಲ್, ಪೊದಱ್, ಗಿಡು, ಬಳ್ಳಿ, ಪುಲಿ, ಕರಡಿ, ಎರಲೆ - ಇವು ಮೊದಲಾದುವು.

ಅಕಾರಾಂತ ಪುಲ್ಲಿಂಗದೊಳ್ ನಕಾರಾಗಮಕ್ಕೆ - ಅವನೊಳ್ದಿದಂ, ಅವನಂ, ಅವನಿಂ, ಅವನತ್ತಣಿಂ, ಅವನ, ಅವನೊಳ್.

ಸೂತ್ರಂ ॥ ವಿತತ ನಪುಂಸಕಲಿಂಗ ।
ದ್ವಿತೀಯೆಯೊಳ್ ನತ್ವ ಮತ್ವವಿಧಿ ಮತ್ವಮೆ ಸಂ ॥
ಗತಿವಡೆಗುಂ ಸಂಸ್ಕೃತದೊಳ್ ।
ತೃತೀಯೆ ಮೊದಲಾದುವರ್ಕೆ ದಾಗಮಮಕ್ಕುಂ ॥ ೧೦೬ ॥

**ಟೀಕೆ** - ಅದಂತಕ್ಕೆಂಬುದನುವರ್ತನೆ; ವಿತತ = ನಾನಾ ಪ್ರಕಾರವಾದ, ನಪುಂಸಕ ಲಿಂಗ = ನಪುಂಸಕ ಲಿಂಗದ, ದ್ವಿತೀಯೆಯೊಳ್ = ದ್ವಿತೀಯಾವಿಭಕ್ತಿಯಲ್ಲಿ, ನತ್ವಮತ್ವ ವಿಧಿ = ನಕಾರ ಮಕಾರಂಗಳ ವಿಧಿ ಅಪ್ಪುದು; ಸಂಸ್ಕೃತದೊಳ್ = ಸಂಸ್ಕೃತ ಶಬ್ದದಲ್ಲಿ, ಮತ್ವಮೆ = ಮಕಾರವೆ, ಸಂಗತಿವಡೆಗುಂ = ಸಂಬಂಧವಾಗುವುದು; ತೃತೀಯೆ ಮೊದಲಾದುವರ್ಕೆ = ತೃತೀಯಾವಿಭಕ್ತಿ ಮೊದಲಾದ ಸ್ವರಾದಿವಿಭಕ್ತಿಗೆ, ದಾಗಮಂ = ದಕಾರಾಗಮಂ, ಅಕ್ಕುಂ = ಅಪ್ಪುದು.

**ವೃತ್ತಿ** - ಕನ್ನಡದೊಳಕಾರಾಂತ ನಪುಂಸಕಲಿಂಗಕ್ಕೆ ಪರಮಾದ ದ್ವಿತೀಯೆಗೆ ನಕಾರ ಮಕಾರಂಗಳಪ್ಪುವು; ಸಂಸ್ಕೃತದೊಳ್ ಮಕಾರಮೆ ಅಕ್ಕುಂ; ತೃತೀಯೆ ಮೊದಲಾದ ವಿಭಕ್ತಿ ಪರಮಾಗೆ ದಕಾರಾಗಮಮಕ್ಕುಂ.

**ಪ್ರಯೋಗಂ** -

ನಕಾರಕ್ಕೆ -

ಪೊಲನಂ, ನೆಲನಂ, ಬಿಲನಂ, ಕೆಲನಂ

ಮತ್ವಕ್ಕೆ -

ಬೆಟ್ಟಮಂ, ಘಟ್ಟಮಂ, ಹಳ್ಳಮಂ, ಕೊಳ್ಳಮಂ, ಬಳ್ಳಮಂ, ಕೊಳಗಮಂ, ಬಳಗಮಂ.

ಸಂಸ್ಕೃತ ಮತ್ವಕ್ಕೆ -

ಕಂ॥ ಕುಲಮಂ ಚಲಮಂ ವಿದ್ಯಾ ।
ಬಲಮಂ ಶೌರ್ಯಾವಲೇಪಮಂ ಪೊಗಟಿ ನೆಲಂ ॥
ನೆಲಕೆಲ್ಲಂ ನೆಗಟ್ದಿಂ ದ್ವಿ ।
ಟ್ಕುಲ ಕುಲನಗದಳನಪಟುಪವಿಪ್ರತಿಮಭುಜಂ॥ ೧
(ಕಾವ್ಯಾವಲೋಕನಂ ೧೯೭)

ನೂಂಕಿದನೆಂಬೊಂದರ್ಥದೊಳ್ ಅರ್ಧಚಂದ್ರನನಿತ್ತನೆಂದು ನಕಾರಮುಪಚಾರಮಾಯ್ತು.

ದಕಾರಾಗಮಕ್ಕೆ -

ಮನದಿಂ, ಮನದತ್ತಣಿಂ, ಮನದ, ಮನದೊಳ್

ಕಂ ॥ ಮನದಿಂ ಬೇಗಂ ಮುಟ್ಟಿದ ।
ನನೂನ ಫಲ ಕುಸುಮ ಕಿಸಲಯ ಭ್ರಾಜಿತಮಂ ॥
ಬನದೊಳಗೆ ಪವನನಂದನ ।
ನನಿಂದ್ಯಗುಣನೆಸೆವಶೋಕಧಾತ್ರೀರುಹಮಂ ॥ ೨
(ಕಾವ್ಯಾವಲೋಕನಂ ೧೦೬)

**ಸೂತ್ರಂ ॥ ಸಮನಿಸಿ ತೋಱುಸುಗುಮಿಮಿಂ ।**
**ದಮಿಂದೆಯೆಂಬಿವು ತೃತೀಯೆಯೊಳ್ ಮತ್ತಮೆಕಾ ॥**
**ರಮದೊಂದೆ ಮೇಣ್ ತೃತೀಯೆಗೆ ।**
**ಸಮುಚಿತಮಾದೇಶಮಱಿದುಕೊಳ್ಗೀ ಕ್ರಮದಿಂ ॥ ೧೦೭ ॥**

**ಟೀಕೆ** - ತೃತೀಯೆಯೊಳ್ = ತೃತೀಯಾವಿಭಕ್ತಿಯಲ್ಲಿ, ಇಂ = ಇಂ ಎಂದು, ಇಂದಂ = ಇಂದಂ ಎಂದು, ಇಂದೆ = ಇಂದೆ ಎಂದು, ಎಂಬಿವು = ಎಂಬೀ ಮೂಱು ರೂಪಂಗಳ್, ಸಮನಿಸಿ = ಬಂದು; ತೋಱಿಸುಗುಂ = ಕಾಣಿಸುವುವು; ಮತ್ತಂ = ಬೞಿಕಂ, ಎಕಾರಂ = ಎತ್ವಂ, ಅದೊಂದೆ = ಅದು ತಾನೊಂದೆ, ಮೇಣ್ = ವಿಕಲ್ಪದಿಂದೆ, ತೃತೀಯೆಗೆ = ತೃತೀಯಾ ವಿಭಕ್ತಿಗೆ, ಸಮುಚಿತಂ = ಉಚಿತವಾದ, ಆದೇಶಂ = ಆದೇಶವೆಂದು, ಈ ಕ್ರಮದಿಂ = ಈ ರೀತಿಯಿಂದೆ, ಅಱಿದುಕೊಳ್ಗೆ = ತಿಳಿದುಕೊಳ್ಗೆ.

**ವೃತ್ತಿ** - ಇಂ, ಇಂದಂ, ಇಂದೆ ಎಂದು ತೃತೀಯೆ ಮೂದೆಱನಾಗಿರ್ಪುದು; ಇವರ್ಕಾದೇಶಮಾಗಿ ಬೇಱೊಂದೆಕಾರಮಪ್ಪುದು.*

* **ವಿಚಾರಂ** - ಅಕಾರಾಂತ ನಪುಂಸಕಲಿಂಗದಲ್ಲಿ ತೃತೀಯಾವಿಭಕ್ತಿಯ ಮೂಱು ರೂಪಿಂಗೆ ವಿಕಲ್ಪದಿಂದೆ ಎಕಾರಾದೇಶವಾಗುವುದೆಂದಱುವುದು. ಅಕಾರಾಂತಮಲ್ಲದಲ್ಲಿಯುಂ ನಪುಂಸಕಲಿಂಗಮಲ್ಲದಲ್ಲಿಯುಂ ಎಕಾರಾದೇಶಮಕ್ಕುಂ.

ಪ್ರಯೋಗಂ -

೧. ತನಿತು ತೊಡಂಬೆವಿಟ್ಟುದಿರ್ದ ಪಣ್ಗಳನಟ್ಟಿಯೆ ಮೆಲ್ದು ಸೋರ್ವ ತೆಂ ।
...

(ಚಂದ್ರಪ್ರಭ ಪುರಾಣಂ ೩-೧೫)

೨. ಪೊನ್ನಿಗನುಂ ಮಲ್ಲಪನುಂ ।    ೨
ಪೊನ್ನನಿನಟ್ಟಿಯೆ ಪುರಾಣಚೂಡಾಮಣಿಯಂ ॥
ಮುನ್ನಂ ಪೇೞಿಸಿದಂತೆ ಗು ।
ಣೋನ್ನತ ಕವಿರತ್ನನಿಂದಿದಂ ಪೇೞಿಸಿದಳ್ ॥

(ಅಜಿತನಾಥ ಪುರಾಣಂ ೧-೭೮)

**ಪ್ರಯೋಗಂ -**

ಇಮಾದಿಗಳ್ಗೆ -

ಕಂ ॥ ಗರುಡಿಯ ಬಳಸಿಂ ಬಿಜ್ಜೋ
ದರಗಳದಿಂದಾನೆ ಹೋರಲಿಕ್ಕಿದ ತೞಿಯಿಂ ...    ೮

ಕಂ ॥ ತುರಗದ ವಾಹಳಿಯಿಂ ...

ಕಂ ॥ ಭಯದಿಂದಂ ಮುಳಿಸಿಂದಂ
ಸ್ಮಯದಿಂದಂ ರಾಗದಿಂದಮಳಿಪಿಂದಂ ...

(ಕಾವ್ಯಾವಲೋಕನಂ ೧೧೦)

ಕಂ ॥ ತೊಡೆಸಂಕಲೆಯಿಕ್ಕಿದವೋಲ್
ಕುಡಿಯಳ್ಳೆಗಳಿಂದೆ ಸುರಿದುವಿರ್ಕೆಲಕೆ ಕರುಳ್ ...    ೬

ಆದೇಶದೆಕಾರಕ್ಕೆ -

ಕ್ರಮದೆ; ನಯದೆ; ಭಯದೆ

ಮ ॥ ವಿ ॥ ಬಗೆದಂತಾಗೆ ಸುರೇಂದ್ರರಿಂ ಕ್ರಮದೆ ಕಲ್ಯಾಣದ್ವಯಂ ಜೈನದೀ
ಕ್ಷೆಗೆ ಪೂಣ್ದ ... ೫

(ಆದಿಪುರಾಣಂ ೩-೮೦; ಕಾವ್ಯಾವಲೋಕನಂ ೧೧೧)

**ಸೂತ್ರಂ ॥ ವಿದಿತಮುವರ್ಣ ಋವರ್ಣೌ ।**
**ತ್ವದೊಳಂ ಹ್ರಸ್ವೈತ್ವದೊಳಮಿನಾಗಮವಿಧಿ ತ ॥**
**ಪ್ಪದು ವತ್ವಸಂಧಿಯೆಡೆಯೊಳ ।**
**ಮುದಿತ ತೃತೀಯೆಯೊಳಮಱಿ [1]ವಿಕಲ್ಪಸ್ಥಿತಿಯಂ ॥ ೧೦೮ ॥**

**ಟೀಕೆ** - ವಿದಿತ = ಪ್ರಸಿದ್ಧಮಪ್ಪ , ತೃತೀಯೆಯೊಳಂ = ತೃತೀಯಾ ವಿಭಕ್ತಿಯಲ್ಲಿ, ಉವರ್ಣ = ಉ ಊ ಎಂಬ ಸವರ್ಣದಲ್ಲಿ, ಋವರ್ಣ = ಋ ೠ ಎಂಬ ಸವರ್ಣದಲ್ಲಿ, ಔತ್ವದೊಳಂ = ಔಕಾರ ಓಕಾರಂಗಳಲ್ಲಿಯುಂ, ಹ್ರಸ್ವ = ಹ್ರಸ್ವದ, ಎತ್ವದೊಳಂ = ಎಕಾರದಲ್ಲಿಯುಂ, ವಿದಿತಂ = ಪ್ರಸಿದ್ಧವಾದ, ಇನಾಗಮವಿಧಿ = ಇನಾಗಮದ ವಿಧಿ, ತಪ್ಪದು = ತೊಲಗದು; ವತ್ವಸಂಧಿಯೆಡೆಯೊಳಂ = ವತ್ವಸಂಧಿಯ ಸ್ಥಾನದಲ್ಲಿಯುಂ, ಉದಿತ = ಉಂಟಾದ, ತೃತೀಯೆಯೊಳಂ = ತೃತೀಯೆಯಲ್ಲಿಯುಂ, ವಿಕಲ್ಪಸ್ಥಿತಿಯಂ = ವಿಕಲ್ಪದ ಸ್ಥಿತಿಯಂ, ಅಱಿ = ತಿಳಿ.

**ವೃತ್ತಿ** - ಪ್ರಸಿದ್ಧಮಪ್ಪುವರ್ಣದೊಳಂ ಋವರ್ಣದೊಳಂ ಔಕಾರಮೋಕಾರದೊಳಂ ಹ್ರಸ್ವಮಪ್ಪೆಕಾರದೊಳಂ ತೃತೀಯೆ ಮೊದಲಾದುವಱೊಳಿನಾಗಮಮಕ್ಕುಂ ; ತೃತೀಯೆಯೊಳಂ ವತ್ವಸಂಧಿಯೆಡೆಯೊಳಮಿನಾಗಮಂ ವಿಕಲ್ಪದಿಂದಕ್ಕುಂ.

**ಪ್ರಯೋಗಂ** -

ಉವಾದಿಗಳ್ಗೆ -

ಕಂ ॥ ತಳಿರ್ವಾಸಿನಿಂದೆ ಸೆಜ್ಜೆಗೆ
ಕೆಳದಿಯರೆಂತಕ್ಕೆ ಕೊಂಡುಪೋದರ್ ವಿರಹಾ
ಕುಳೆಯಂ ... ೧

ಉ ॥ ಮಾ ॥ ಪೂವಿನ ಬಿಲ್ಲ ಕೊಪ್ಪನೊದೆದೇಱಿಸಿ ತಾವರೆನೂಲ ನಾರಿಯಂ
ಜೇವೊಡೆಗೆಯ್ದು ... ೨

(ಮಲ್ಲಿನಾಥಪುರಾಣಂ ೧೪-೪೧)

ಪಿತೃವಿನ, ೠವಿನ, ಗ್ಲೌವಿನ, ಗೋವಿನ

ಕಂ ॥ ಮತ್ತಿನ ಮತ್ತಿನ ಬೇರ್ಗಳ
ಬಿತ್ತುಗಳಾ ನದಿಯೊಳೇನೊ ಸುಜನೋತ್ತಂಸಾ ॥ ೩

(ನೀತಿಕಂದಂ ?)

ನಿನ್ನಿನ, ಮೊನ್ನಿನ.

~~~~~~~~~~~~~~~~~~~

೧. (ವಿಕಲ್ಪಸ್ಥಿತಿಯಿಂ)
~~~~~~~~~~~~~~~~~~~

ವ್ಯಂಜನದೊಳುಂಟು -

ಈ ಸೂಱಿನ.

ತೃತೀಯೆಯೊಳ್ ವಿಕಲ್ಪಕ್ಕೆ -

ಮಾತಿಂ, ಮಾತಿನಿಂ; ಕಡುಪಿಂ, ಕಡುಪಿನಿಂ.

ವತ್ವಸಂಧಿಯೊಳ್ ವಿಕಲ್ಪಕ್ಕೆ -

ಮಡುವಿಂ, ಮಡುವಿನಿಂ; ಮಡುಗೆ, ಮಡುವಿಂಗೆ; ಮಡುವ, ಮಡುವಿನ; ಗುರುವಿಂ, ಗುರುವಿನಿಂ; ಗುರುಗೆ, ಗುರುವಿಂಗೆ; ಮನುವಿಂ, ಮನುವಿನಿಂ; ಗುರುವ, ಗುರುವಿನ; ಗುರುವೊಳ್, ಗುರುವಿನೊಳ್.

ಕಂ ॥ ಮನುವಿನ ಮಾರ್ಗಂ ಸುರಗುರು ।
ವಿನಱುವು ಪವಮಾನಸೂನುವೊಂದಾಯತಿ ಪೆಂ ॥
ಪಿನೊಳೆಸೆವ ಕರ್ಣನೊರ್ಱುಡಿ ।
ತನಗವು ನಿಜಮಾಗೆ ನೆಗಟ್ದನಾ ವಿಭುವಿಳೆಯೊಳ್ ೪

(ಕಾವ್ಯಾವಲೋಕನಂ ೧೧೩)

**ಸೂತ್ರ ॥ ಪಗಲಿರುಳೆಂಬಲ್ಲಿ ವಿಕ ।**
**ಲ್ಪಗತಿಯಿನಾ [1]ವ್ಯಂಜನಾಂತದೊಳೆ ಪೇೞ್ವರ್ ಸೂ ॥**
**ರಿಗಳಾಗಳೀಗಳೆಂಬೆಡೆ ।**
**ಗಗಲ್ಚರುೞಿದೆಡೆಗಿನಾಗಮಂ ದೋಷಕರಂ ॥ ೧೦೯ ॥**

**ಟೀಕೆ** - ಸೂರಿಗಳ್ = ವಿದ್ವಾಂಸರ್, ಆ ವ್ಯಂಜನಾಂತದೊಳೆ = ಆ ಪ್ರಸಿದ್ಧವಾದ ವ್ಯಂಜನಾಂತ ಶಬ್ದಗಳಲ್ಲಿಯೆ, ಪಗಲ್ = ಪಗಲೆಂದು, ಇರುಳ್ = ಇರುಳೆಂದು, ಎಂಬಲ್ಲಿ = ಎಂಬ ಶಬ್ದಂಗಳಲ್ಲಿ, ವಿಕಲ್ಪಗತಿಯಿಂ = ವಿಕಲ್ಪದ ಗತಿಯಿಂದೆ, ಪೇೞ್ವರ್ = ಇನಾಗಮಮಂ ಪೇೞ್ವರ್; ಆಗಳ್ = ಆಗಳೆಂದು, ಈಗಳ್ = ಈಗಳೆಂದು, ಎಂಬೆಡೆಗೆ = ಎಂಬ ಸ್ಥಾನಕ್ಕೆ, ಅಗಲ್ಚರ್ = ಇನಾಗಮಮಂ ತೊಲಗಿಸರ್; ಉೞಿದೆಡೆಗೆ = ಮಿಕ್ಕ ವ್ಯಂಜನಾಂತ ಸ್ಥಾನಕ್ಕೆ, ಇನಾಗಮಂ = ಇನ್ ಎಂಬಾಗಮಂ, ದೋಷಕರಂ = ದೋಷಕರವಪ್ಪುದು.

**ವೃತ್ತಿ** - ಪಗಲಿರುಳೆಂಬ ವ್ಯಂಜನಾಂತ ಶಬ್ದಗಳೊಳಿನಾಗಮಂ ವಿಕಲ್ಪದಿನಪ್ಪುದು; ಆಗಳೀಗಳೆಂಬ ವ್ಯಂಜನಾಂತದೊಳಿನಾಗಮಂ ನಿತ್ಯಂ; ಮಿಕ್ಕೆಡೆಯೊಳೆಲ್ಲಂ ದೋಷಂ.

**ಪ್ರಯೋಗಂ** -

ವಿಕಲ್ಪಕ್ಕೆ -

ಪಗಲ, ಪಗಲಿನ; ಇರುಳ, ಇರುಳಿನ.

ಮ ॥ ಸ್ರ ॥ ಪಗಲಂತಿರ್ದರ್ಚ್ಚವೆಳ್ದಿಂಗಳೊಳಿನಕಿರಣದ್ಯೋತಿಗೆತ್ತಾಗಳಾಗಳ್
ಮುಗಿದಿರ್ದ ... ೧

(ಆದಿಪುರಾಣಂ ೧೨-೯)

---

೧. (ವ್ಯಂಜನಾಂತದೊಳ್)

ಕಂ ॥ ಪಗಲಿನ ರವಿಕಿರಣಂಗಳೆ
ಮಗುಬ್ದೀಗಳ್ ... ೨

ಚಂ ॥ ಮಾ ॥ ಇರುಳ ಸರೋಜವಾದುದರಿರಾಯರ ಸಂಸಾರಂ (?) ೩

ಕಂ॥ ... ಇರುಳಿನ ಚ
ಕ್ರಾಹ್ವದವೋಲ್ ಮಱುಗದೇಂ ಸುಖಂಬಡೆದಪನೇ ॥ ೪
(ಆದಿಪುರಾಣಂ ೩-೬೮)

ನಿತ್ಯಕ್ಕೆ -

ಕಂ ॥ ಆಗಳಿನ ಕಜ್ಜಮಿನ್ನೆಗ
ಮೇಗೆಯ್ದಪುದೆಂದು ... ೫

ಉ ॥ ಮಾ ॥ ... ಆವ ನೀತಿ ಪೇ
ೞೆಂದೊಡೆ ಕೊಲ್ವರೀಗಳಿನ ದೇಸಿಗೆ ವಿಜ್ಜ ಮಸಾಕವೀಶ್ವರರ್ ॥ ೬
(ಸೂಕ್ತಿಸುಧಾರ್ಣವಂ ೧-೩೫)

ದೋಷಕ್ಕೆ -

ಬೆಮರಿನ, ಮಣಲಿನ, ಮುಗಿಲಿನ.

ಇವಱಂತೆ ಮಿಕ್ಕುವಂ ನೋಡಿಕೊಳ್ವುದು.

**ಸೂತ್ರಂ ॥ ಜನಿಯಿಪುದುದಂತ ಕೃತ್ಸ ।**
**ರ್ವನಾಮ ಗುಣವಚನ ಸಂಖ್ಯೆಗಳ್ಗೆ ಪವಣ್ಗಱ್[1] ॥**
**ವಿನಮಱ್ಕಾರಂ ದಿಗ್ವಾ ।**
**ಚಿ ನಿಲೆ ತೃತೀಯಾದಿಗಣ್ಪ್ರಯೋಗಿಸೆಪಡುಗುಂ ॥ ೧೧೦ ॥**

**ಟೀಕೆ** - ಉದಂತಕೃತ್ = ಉಕಾರಾಂತ ಕೃತ್ತುಗಳ್ಗೆ, ಸರ್ವನಾಮ = ಸರ್ವನಾಮಂಗಳ್ಗೆ, ಗುಣವಚನ = ಗುಣವಚನಂಗಳ್ಗೆ, ಸಂಖ್ಯೆಗಳ್ಗೆ = ಸಂಖ್ಯಾವಾಚಿಗಳ್ಗೆ, ಪವಣ್ಗೆ = ಪ್ರಮಾಣವಾಚಿಗಳ್ಗೆ, ಅಱುವಿನಂ = ತಿಳಿಯುತ್ತಿರೆ, ತೃತೀಯಾದಿಗೆ = ತೃತೀಯಾವಿಭಕ್ತಿ ಮೊದಲಾದುವರ್ಕೆ, ಅಱ್ ಎಂಬಾಗಮಮಂ, ಜನಿಯಿಪುದು = ಹುಟ್ಟುವುದು; ದಿಗ್ವಾಚಿ = ದಿಕ್ಕಂ ಪೇಳ್ವ ಶಬ್ದಂಗಳ್, ನಿಲೆ = ಇರೆ, ಅಣ್ = ಅಣೆಂಬಾಗಮಂ, ಪ್ರಯೋಗಿಸೆಪಡುಗುಂ = ಪ್ರಯೋಗಿಸಲ್ಪಡುವುದು.

**ವೃತ್ತಿ** - ಉಕಾರಾಂತಮಪ್ಪ ಕೃತ್ತಿಂಗಂ ಸರ್ವನಾಮಕ್ಕಂ ಗುಣವಚನಕ್ಕಂ ಸಂಖ್ಯೆಗಂ ಪವಣ್ಗಂ ತೃತೀಯೆ ಮೊದಲಾದುವಱೊಳಱಾಗಮಂ ಪುಟ್ಟುಗುಂ; ದಿಗ್ವಾಚಕದೊಳಂತೆ ಅಣಾಗಮಮಕ್ಕುಂ.

**ಪ್ರಯೋಗಂ** -

ಕೃತ್ತಿಂಗೆ -

ಮಾಡಿದುದಱಿಂ, ಕೂಡಿದುದಱಿಂ, ನೋಡಿದುದಱಿಂ, ಉಣ್ಬುದರ್ಕೆ.

ಸರ್ವನಾಮಕ್ಕೆ -

~~~~~~~~~~~~~~~~~~~~

೧. (ಲನೆಯ ಗಣ ಗುರ್ವಂತವಾಗಿಲ್ಲ.)
~~~~~~~~~~~~~~~~~~~~

ಕಂ॥ ಪೆಱವಱ ಧರ್ಮಂಗಳನೇ
ತೆಱದಿಂದಂ ತಂದು ಪೆಱವಱೊಳ್ ... ೧
(ಕಾವ್ಯಾವಲೋಕನಂ ೫೧೯)

ಕಂ॥ ಅದಱಲ್ಲಿ ಮೂಷೆಯಿಟ್ಟೆಱ
ಗಿದ ತೆಱದಿಂ ಸೊಕ್ಕಿದೆಕ್ಕಲಂ ... ೨
(ಸೂಕ್ತಿಸುಧಾರ್ಣವಂ ೩-೩೦)

ಅದಱನೆಂಬರ್ಥದೊಳ್ ಅಂತಱನೆಂದೊಂದು ಶಬ್ದಮುಂಟು.

ಗುಣವಚನಕ್ಕೆ -

ಕಂ॥ ಕಿಱಿದಱೊಳೆ ಪಿರಿದುಮರ್ಥಮ
ನಱಪಲ್ ನೆಱೆವಾತನಾತನಿಂದಂ ಜಾಣಂ ॥ ೩
(ಕವಿರಾಜಮಾರ್ಗಂ ೧-೧೫)

ಗುಣವಚನಮಲ್ಲದಲ್ಲಿಯುಂ ಅಱ್ಕಾರಂ ಒರ್ಮೆ ಕಾಣಲಕ್ಕುಂ -

ಚಂ॥ ಮಾ॥ ... ಮೇ
ಲುದಱ ಸೆಱಂಗನೋಸರಿಸುವಂತಿರೆ ... ೪

ಸಂಖ್ಯೆಗೆ -

ಮೂಱಱಂ, ನಾಲ್ಕಱಂ, ಅಯ್ದಱಂ.

ಪವರ್ಗ್ಗೆ -

ಅನಿತಱಂ, ಇನಿತಱಂ, ಎನಿತಱಂ, ಎಲ್ಲವಱಂ.

ದಿಗ್ವಾಚಿಯ ಅಣ್ಗೆ -

ಮೂಡಣ, ತೆಂಕಣ, ಪಡುವಣ - ಇತ್ಯಾದಿ; ಮೂಡಣಿಂ, ತೆಂಕಣಿಂ, ಪಡುವಣಿಂ, ಬಡಗಣಿಂ; ಮೇಗಣಿಂ, ಕೆಳಗಣಿಂ, ನಡುವಣಿಂ, ಕಡೆಯಣಿಂ; ಅತ್ತಣಿಂ, ಇತ್ತಣಿಂ, ಉತ್ತಣಿಂ, ಎತ್ತಣಿಂ; ಮುಂದಣಿಂ, ಪಿಂದಣಿಂ; ಮುಂತಣಿಂ, ಪಿಂತಣಿಂ; ಒಳಗಣಿಂ, ಪೊಱಗಣಿಂ; ಕಡೆಯ[ಣ], [ನಡುವಣ].

ನಡು ಎಂಬುದು ಶರೀರಮಧ್ಯಮಂ ಕುಱಿತು ದಿಗ್ವಾಚಕಮಲ್ತು, ಮಧ್ಯಮಂ ಕುಱಿತು ದಿಗ್ವಾಚಕಂ. ಎಡೆ ಎಂಬುದು ತೆಱಪಂ ಪೇೞ್ವಲ್ಲಿ ದಿಗ್ವಾಚಕಂ; ಆವೆಡೆಯಣಿಂ ಎಂದಣ್ಪತ್ತುವುದು.

**ಸೂತ್ರಂ॥ ಪುರುಷಪರಮಾದೊಡತ್ವಂ ।**
**ದೊರೆಕೊಳ್ಗುಮದಣ್ಗುಳ್ಳ ದಿಗ್ವಾಚಕದೊಳ್ ॥**
**ಪರದಿಗ್ವಾಚಕದೊಳ್ ಸಂ ।**
**ಚರಿಸುವುದಾ ತೆಱದೆ ದತ್ವವಿಧಿ ಶಾಬ್ದಿಕರಿಂ ॥ ೧೧೧ ॥**

**ಟೀಕೆ** - ಅಣ್ಗುಳ್ಳ ದಿಗ್ವಾಚಕದೊಳ್ = ಅಣಾಗಮಂ ಪತ್ತಿದ ದಿಗ್ವಾಚಕಂಗಳಲ್ಲಿ, ಪುರುಷಪರಂ = ಪುಲ್ಲಿಂಗಪರಂ, ಆದೊಡೆ = ಆಗೆ, ಅತ್ವಂ = ಅಕಾರಂ, ಅದು, ದೊರೆಕೊಳ್ಗುಂ = ಬರ್ಪುಧು;

ಪರದಿಗ್ವಾಚಕದೊಳ್ = ಅಣ್ಪತ್ತದ ಮಿಕ್ಕ ದಿಗ್ವಾಚಕಂಗಳಲ್ಲಿ, ಆ ತೆಱದೆ = ಆ ರೀತಿಯಿಂದೆ, ದತ್ವವಿಧಿ = ದಕಾರದ ವಿಧಿ, ಶಾಬ್ದಿಕರಿಂ = ಶಬ್ದಜ್ಞರಿಂದೆ, ಸಂಚರಿಸುವುದು = ವರ್ತಿಸುವುದು.

**ವೃತ್ತಿ** - ಅಣ್ಪತ್ತಿದ ದಿಗ್ವಾಚಕಂ ಪುಲ್ಲಿಂಗಮಪ್ಪೆಡೆಯೊಳ್ ಅಕಾರಮಂ ಕೈಕೊಳ್ಗುಂ; ಅಣ್ಪತ್ತದ ಮಿಕ್ಕ ದಿಗ್ವಾಚಕದೊಳ್ ದಕಾರಾಗಮಮಕ್ಕುಂ.

**ಪ್ರಯೋಗಂ -**

ಅಕಾರಕ್ಕೆ -

ಮೂಡಣಂ, ತೆಂಕಣಂ; ಬಡಗಣಂ, ಪಡುವಣಂ; ಮೇಗಣಂ, ಕೆಳಗಣಂ; ನಡುವಣಂ, ಕಡೆಯಣಂ, ಎಡೆಯಣಂ; ಒಳಗಣಂ, ಪೊಱಗಣಂ; ಮುಂತಣಂ, ಪಿಂತಣಂ; ಅತ್ತಣಂ, ಇತ್ತಣಂ.

ದಕಾರಕ್ಕೆ -

ಕೆಲದಂ, ಬಲದಂ; ಅಲ್ಲಿದಂ, ಇಲ್ಲಿದಂ, ಎಲ್ಲಿದಂ.

ಉ॥ ಮಾ॥ ಅತ್ತಣನಿತ್ತಣಂ ಕೆಲದನಲ್ಲಿದನಿಲ್ಲಿದನೀಗಳೆಂಬಿನಂ ।
ಮುತ್ತಿದನೊಂದೆ ತೇರೊಳಮರೇಂದ್ರಸುತಂ ಕುರುವೃಂದವೆಲ್ಲವಂ ॥ ೧

ಚಂ॥ ಮಾ॥ ... ವಿನೋ ॥
ದದ ಮೊದಲೆಲ್ಲಿದಂ ಸೊಬಗಿನಾಗರಮೆಲ್ಲಿದನಿಚ್ಚೆಯಾಣ್ಮನೆ ।
ಲ್ಲಿದನೆರ್ದೆಗಾಣ್ಮನೆನ್ನರಸನೆಲ್ಲಿದನೋ ಲಲಿತಾಂಗವಲ್ಲಭಂ ॥ ೨
(ಆದಿಪುರಾಣಂ ೩-೧೫)

**ಸೂತ್ರಂ॥ ಏನೇತಱೆನಿಕುಮಾದಿಯೊ ।**
**ಳಾ ನೆಗಲ್ದ ಚತುರ್ಥಿಗಕ್ಕುಮೇತರ್ಕೇಕೆಂ ॥**
**ಬೀ ನುಡಿಯೇತಱ್ ಪ್ರಕೃತಿಯೆ ।**
**ತಾನಕ್ಕುಂ ತತ್ತೃತೀಯೆ ಮೊದಲಾದುವಱೊಳ್ ॥ ೧೧೨ ॥**

**ಟೀಕೆ** - ಆದಿಯೊಳ್ = ಪ್ರಥಮಾವಿಭಕ್ತಿಯಲ್ಲಿ, ಏನ್ = ಏನೆಂದು, ಏತಱ್ = ಏತಱೆಂದು, ಎನಿಕುಂ = ಎನಿಸುವದು; ಆ ನೆಗಲ್ದ ಚತುರ್ಥಿಗೆ = ಆ ಪ್ರಸಿದ್ಧಿವಡೆದ ಚತುರ್ಥೀ ವಿಭಕ್ತಿಗೆ, ಏತರ್ಕೆ = ಏತರ್ಕೆ ಎಂದು, ಏಕೆ = ಏಕೆ ಎಂದು, ಎಂಬೀ ನುಡಿ = ಎಂಬೀ ಶಬ್ದಂ, ಅಕ್ಕುಂ = ಅಪ್ಪುದು; ತತ್ತೃತೀಯೆ = ಆ ತೃತೀಯೆ, ಮೊದಲಾದುವಱೊಳ್ = ಮೊದಲಾದ ವಿಭಕ್ತಿಗಳಲ್ಲಿ, ಏತಪ್ರಕೃತಿಯೆ = ಏತಱ್ ಎಂಬ ಪ್ರಕೃತಿಯೆ, ತಾಂ, ಅಕ್ಕುಂ = ಆಗುವದು.

**ವೃತ್ತಿ** - ಏನೆಂಬ ಸರ್ವನಾಮದ ಪ್ರಥಮೆಗೆ ಏನೆಂದುಂ ಏತಱೆಂದುಮಕ್ಕುಂ; ಚತುರ್ಥಿಯೊಳೇತರ್ಕೆಂದುಮೇಕೆಂದುಮಕ್ಕುಂ; ತೃತೀಯೆ ಮೊದಲಾದುವರ್ಕೆ ಏತಱೆಂದೆ ಪ್ರಕೃತಿಯಕ್ಕುಂ.

**ಪ್ರಯೋಗಂ -**

ಪ್ರಥಮೆಗೆ -

ಮ॥ ಸ್ರ॥ .... ಅಂದಿನ ನಿಜಭುಜವಿಕ್ರಾಂತಮೇನಾದುದಿಂತೀ ... ೧
(ಕಾವ್ಯಾವಲೋಕನಂ ೩೬೪)

ಉ॥ ಮಾ॥ ... ಏ

ನಾಗಿಯುಮೇನೊ ತೀರ್ದಪುದೆ ತೀರದೊಡಂ ಮಱುದುಂಬಿಯಾಗಿ ಮೇಣ್... ೨
(ವಿಕ್ರಮಾರ್ಜುನ ವಿಜಯಂ ೪-೨೯)

ಕಂ॥ ... ಚೆಃ

ಗತಿಯಂ ಪಡೆದೇತಱಾತನೇ ಗತಿಯೆಂದಳ್ ೩

ಚತುರ್ಥಿಗೆ -

ಏತರ್ಕೆ, ಏಕೆ.

ಏತರ್ಕೆ ಮುಳಿಸೆಂದು ನೊಂದು ನುಡಿದಂ ... ೪

ಕಂ ॥ ಏಕೆಂದಱುಯೆಂ ದಶಧ
ರ್ಮಾಕಳಿತಕರಾಗ್ರನಾದನೆನಗಿದು ಚೋದ್ಯಂ ೫
(ಆದಿಪುರಾಣಂ ೬-೩೦)

ತೃತೀಯಾದಿಗೆ -

ಏತಱುಂ, ಏತರ್ಕೆ, ಏತಱತ್ತಣಿಂ, ಏತಱ, ಏತಱೊಳ್

ಉ ॥ ಮಾ ॥ ಏತಜ ಮಾತೊ ಭೂತಳದೊಳರ್ಥವಿಹೀನನ ಶೌಚಮಣ್ಮು ... ೬
(ಕಾವ್ಯಾವಲೋಕನಂ ೫೩)

**ಸೂತ್ರಂ ॥ ಒದವುವುದದಂತಪುಲ್ಲಿಂ ।**
**ಗದೊಳ್ ಗೆಯೆಂದಾದಿಬಿಂದುವಿಂ ದ್ವಿತ್ವಂ ಮೇ ॥**
**ಣೊದವುವುದು ನಪುಂಸಕಲಿಂ ।**
**ಗದೊಳ್ ಚತುರ್ಥಿಗೆ ಗೆಯಕ್ಕುಮುೞಿದೆಡೆಗೆಲ್ಲಂ ॥ ೧೧೩ ॥**

**ಟೀಕೆ** - ಚತುರ್ಥಿಗೆ = ಕೆ ಎಂಬ ಚತುರ್ಥೀವಿಭಕ್ತಿಗೆ, ಅದಂತ = ಅಕಾರಾಂತವಾದ, ಪುಲ್ಲಿಂಗದೊಳ್ = ಪುಲ್ಲಿಂಗವಲ್ಲಿ, ಆದಿಬಿಂದುವಿಂ = ಆದಿಯಲ್ಲಿ ಬಿಂದುವಿನೊಡನೆ ಗೆ ಎಂದು, ಒದವುವುದು = ಬರ್ಪುದು; ನಪುಂಸಕಲಿಂಗದೊಳ್ = ಅಕಾರಾಂತವಾದ ನಪುಂಸಕಲಿಂಗದಲ್ಲಿ, ದ್ವಿತ್ವಂ = ದ್ವಿರ್ಭಾವಂ, ಮೇಣ್ = ವಿಕಲ್ಪದಿಂದೆ, ಒದವುವುದು = ಬರ್ಪುದು; ಉೞಿದೆಡೆಗೆ = ಅಕಾರಾಂತವಲ್ಲದುೞಿದೆಡೆಗೆ, ಎಲ್ಲಂ = ಸ್ತ್ರೀಪುಂನಪುಂಸಕಲಿಂಗಂಗಳಲ್ಲಿಯೆಲ್ಲಂ, ಗೆ = ಗೆಯೆಂದು, ಅಕ್ಕುಂ = ಆಗುವುದು.

**ವೃತ್ತಿ** - ಅಕಾರಾಂತಪುಲ್ಲಿಂಗದೊಳ್ ಪರಮಾದ ಚತುರ್ಥಿ(ಗೆ) ಬಿಂದುವೆರಸುಗೆಯೆಂದಕ್ಕುಂ; ಅಕಾರಾಂತ ನಪುಂಸಕಲಿಂಗದೊಳ್ ಪರಮಾದ ಚತುರ್ಥಿಗೆ ವಿಕಲ್ಪದಿಂ ದ್ವಿತ್ವಮಕ್ಕುಂ; ಅಕಾರಾಂತಮಲ್ಲದುೞಿದ ಸ್ವರವ್ಯಂಜನಾಂತಂಗಳ್ಗೆ ಪರಮಾದ ಚತುರ್ಥಿಗೆ ಲಿಂಗವಚನವ್ಯವಸ್ಥೆಯಿಲ್ಲದೆ ಗೆಯೆಂದಕ್ಕುಂ.

**ಪ್ರಯೋಗಂ** -

ಪುಲ್ಲಿಂಗಕ್ಕೆ -

ಅರಸಂಗೆ, ಆತಂಗೆ.

ಕಂ ॥ ಅರಸಂಗಮರಸಿಗಂ ಪು
ಟ್ಟಿ ರಾಜಸುತನೆನಿಸಿ ಹಂದೆಯುಂ ಲೋಭಿಯುಂ ... ೧

ಕಂ ॥ ಆತಂಗಮಾಕೆಗಂ ವಿ ।
ಖ್ಯಾತಯಶಂ ಪುಟ್ಟಿದಂ ಕುಲಕ್ಕಂ ಚಲಕಂ ॥
ಭೂತಳದೊಳಾರ್ಗಮಧಿಕಂ ।
ನೀತಿಪರಂ ಪರಬಲಾಬ್ಧಿಗೌರ್ವಪ್ರತಿಮಂ ॥ ೨

(ಕಾವ್ಯಾವಲೋಕನಂ ೧೧೬)

ನಪುಂಸಕಲಿಂಗ ದ್ವಿತ್ವವಿಕಲ್ಪಕ್ಕೆ -

ಬನಕೆ - ಬನಕ್ಕೆ, ಪೊಲಕೆ - ಪೊಲಕ್ಕೆ.

ಕುಲಕ್ಕಂ ಚಲಕಂ ಭೂತಳದೊಳಾರ್ಗಮಧಿಕಂ ... ೩

ಸ್ವರ ವ್ಯಂಜನಾಂತಂಗಳ್ಗೆ -

ಕವಿಗೆ ಕೇಡಿಲ್ಲೆಂತುಂ ೪

ಆಕೆಗೆ ಕಡಿಲೆಂದಾತಂ ನುಡಿದಂ ೫

ಕಂ ॥ ... ತನುಗೆ ಭೂಷಣಂ ಪೊಱೆಯಲ್ತೇ ೬

ಪೆಣ್ಗೆ; ಕಣ್ಗೆ; ಕುರುಳ್ಗೆ; ಬೆರಲ್ಗೆ; ಅರಲ್ಗೆ; ಬೆಂಗೆ; ಕಳ್ಗೆ; ಮುಳ್ಗೆ; ಬಿಲ್ಗೆ; ಆವಲ್ಗೆ; ನೆಗಟ್ಗೆ; ಪೊಱವಾರ್ಗೆ.

ವಚನತ್ರಯಕ್ಕೆ -

ಉ ॥ ಮಾ ॥ ಆವುದು ಸಂಕಟಂ ನಿನಗೆ ನಿಲ್ಲಜ ನಿಲ್ಲಜ ... ೭

ಕಂ ॥ ಸೈತಿರು ಕಿವಿಗಳ್ಗೆ ಕರ್ಣಪೂರಮನಿಡುವೆಂ ... ೮

ಕಂ ॥ ಅವಳ ಕುರುಳ್ಗಳ್ಗೆ ಮಾಲೆದುಂಬಿಗಳೆಣೆಯೇ ... ೯

**ಸೂತ್ರಂ ॥ ಅಮರ್ದಿರದು ತೃತೀಯತ್ವಂ ।**
**ಸಮಾಸವದ್ಭಾವಮಾದ ತಾಣದೊಳೆಲ್ಲಂ ॥**
**ಸಮಸಂದ ಚತುರ್ಥಿಗೆ ಕಾ ।**
**ವ್ಯಮಾರ್ಗದೊಳ್ ಲಕ್ಷ್ಯಮುಂಟು ತಾನೀ ತೆಱದಿಂ ॥ ೧೧೪ ॥**

**ಟೀಕೆ -** ಸಮಾಸವದ್ಭಾವಂ = ಸಮಾಸದಂತಪ್ಪ ಭಾವಂ, ಆದ, ತಾಣದೊಳ್ = ತಾವಿನಲ್ಲಿ, ಎಲ್ಲಂ = ಸರ್ವಂ, ಸಮಸಂದ ಚತುರ್ಥಿಗೆ = ಸಮಾನವಾಗಿ ಸಂದ ಚತುರ್ಥೀ ವಿಭಕ್ತಿಗೆ, ತೃತೀಯತ್ವಂ = ಮೂಱನೆಯಕ್ಷರದ ಭಾವಂ, ಅಮರ್ದಿರದು = ಪೊರ್ದುಗೆಯಾಗಿರದು; ಕಾವ್ಯಮಾರ್ಗದೊಳ್ = ಕಾವ್ಯಂಗಳ ಮಾರ್ಗದಲ್ಲಿ, ಈ ತೆಱದಿಂ = ಈ ರೀತಿಯಿಂದೆ, ಲಕ್ಷ್ಯಂ = ಉದಾಹರಣೆ, ತಾಂ, ಉಂಟು = ಉಂಟಾಗಿರ್ಪುದು.

**ವೃತ್ತಿ** - ಸಮಾಸಮಿಲ್ಲದೆಯುಂ ಸಮಾಸಲಕ್ಷಣಮಂ ಪೊಕ್ಕ ಚತುರ್ಥಿಗೆ ತೃತೀಯತ್ವಮಿಲ್ಲ.

**ಪ್ರಯೋಗಂ** -

ಕಾಟ್ಕೆ, ಕೋಟ್ಕೆ, ನಾಟ್ಕೆ; ಏತರ್ಕೆ, ಅದರ್ಕೆ, ಅನಿತರ್ಕೆ; ಏತಕೆಂದುಮುಂಟು.

ಚಂ ॥ ಮಾ ॥ ... ಬಯಲ್ಗೆ ವಂದಪರೊ ಪೇೞನಿತರ್ಕಮೊಳಂ ಮುರಾಂತಕಂ ... ೧

ಚಂ ॥ ಮಾ ॥ ... ಶರೀರಭೋಗಮಂ
ತೊಱೆದನದರ್ಕವಂಗೆ ಕುಡಲಾಗದನಲ್ಪನಿತಂಬಬಿಂಬೆಯಂ ... ೨

**ಸೂತ್ರಂ ॥ ಪಿರಿದುಂ ಚತುರ್ಥಿ ಸಂಸ್ಕೃತ ।**
**ಪುರುಷ ಸ್ತ್ರೀ ವಿಷಯವಿಹಿತಬಹುವಚನದೊಳೊಂ ॥**
**ದಿರೆ ಶಿಥಿಲವೃತ್ತಿ ತಾನು ।**
**ಚ್ಚರಿಪರ್ಗೆ ಯಥೇಷ್ಟಮೆಂದು ತಿಳಿಗೀ ಕ್ರಮದಿಂ ॥ ೧೧೫ ॥**

**ಟೀಕೆ** - ಪಿರಿದುಂ = ವಿಶೇಷವಾಗಿ, ಸಂಸ್ಕೃತ = ಸಂಸ್ಕೃತದ, ಪುರುಷಸ್ತ್ರೀ = ಪುಲ್ಲಿಂಗ ಸ್ತ್ರೀಲಿಂಗಂಗಳ, ವಿಷಯ = ವಿಷಯದಲ್ಲಿ, ವಿಹಿತ = ಕೂಡಲ್ಪಟ್ಟ, ಬಹುವಚನದೊಳ್ = ಬಹುವಚನದಲ್ಲಿ, ಚತುರ್ಥಿ = ಚತುರ್ಥೀವಿಭಕ್ತಿ, ಒಂದಿರೆ = ಕೂಡಿರೆ, ಶಿಥಿಲವೃತ್ತಿ = ಶಿಥಿಲದ ವರ್ತನೆ, ತಾಂ, ಉಚ್ಚರಿಪರ್ಗೆ = ಓದುವರ್ಗೆ, ಯಥೇಷ್ಟಮೆಂದು = ಇಚ್ಛೆಬಂದ ಹಾಗೆ ಎಂದು, ಈ ಕ್ರಮದಿಂ = ಈ ರೀತಿಯಿಂದೆ, ತಿಳಿಗೆ = ಅಱಿಗೆ.

**ವೃತ್ತಿ** - ಸಂಸ್ಕೃತ ಪುಲ್ಲಿಂಗ ಸ್ತ್ರೀಲಿಂಗದ ಬಹುವಚನದೊಳಂ ಪಿರಿದುಮೆಂಬುದಱಿಂ ಕನ್ನಡದ ಪುಂಸ್ತ್ರೀಲಿಂಗದೊಳಂ ಚತುರ್ಥಿಗೆ ದ್ವಿತ್ವವಿಕಲ್ಪಂ.

**ಪ್ರಯೋಗಂ** -

ಸಂಸ್ಕೃತಕ್ಕೆ - ಬುಧರ್ಗೆ, ಬುಧರ್ಗ್ಗೆ; ಬಾಂಧವರ್ಗೆ, ಬಾಂಧವರ್ಗ್ಗೆ; ಕಾಂತೆಯರ್ಗೆ, ಕಾಂತೆಯರ್ಗ್ಗೆ ; ಸ್ತ್ರೀಯರ್ಗೆ, ಸ್ತ್ರೀಯರ್ಗ್ಗೆ.

ಕನ್ನಡಕ್ಕೆ - ಎರೆವವರ್ಗೆ, ಎರೆವವರ್ಗ್ಗೆ; ಸೂಳೆಯರ್ಗೆ, ಸೂಳೆಯರ್ಗ್ಗೆ.

**ಸೂತ್ರಂ ॥ ಅತ್ತಣೆನೆಂದು ನಿಮಿರ್ಚುವ ।**
**ರತ್ತೆಂದಾಗಿರ್ದ ಪಂಚಮಿಯನಲ್ಲಿ ಕೆಲರ್ ॥**
**ಪತ್ತಿಸುವರ್ ಮೂದೆಱನಂ ।**
**ಪೆತ್ತ ತೃತೀಯೆಯನೆಕಾರಮಂ ಪರಿಹರಿಪರ್ ॥ ೧೧೬ ॥**

**ಟೀಕೆ** - ಅತ್ತೆಂದು = ಅತ್ ಎಂದು, ಆಗಿರ್ದ ಪಂಚಮಿಯಂ = ಆಗಿರ್ದ ಪಂಚಮೀ ವಿಭಕ್ತಿಯಂ, ಅತ್ತಣೆಂ = ಅತ್ತಣೆಂ ಎಂದು, ನಿಮಿರ್ಚುವರ್ = ನಿರ್ಮಿಸುವರ್ ; ಅಲ್ಲಿ = ಅತ್ ಎಂಬ ರೂಪಿನಲ್ಲಿ, ಕೆಲರ್ = ಕೆಲಂಬರ್, ಮೂದೆಱನಂ = ಇಂ, ಇಂದಂ, ಇಂದೆ ಎಂಬ ಮೂಱು ಪ್ರಕಾರವಂ, ಪೆತ್ತ = ಪಡೆದ, ತೃತೀಯೆಯಂ = ತೃತೀಯಾವಿಭಕ್ತಿಯ ರೂಪಂ, ಪತ್ತಿಸುವರ್ = ಪೊರ್ದುಗೆಯಂ ಮಾಡುವರ್; ಎಕಾರಮಂ = ಉಚಿತವಾಗಿ ಬಂದ ಎಕಾರಮಂ, ಪರಿಹರಿಪರ್ = ಬಿಡುವರ್.

**ವೃತ್ತಿ** - ಅತ್ ಎಂಬ ಪಂಚಮಿಯನತ್ತಣೆನೆಂದು ಪೇೞಲಕ್ಕುಂ; ಆ ಪಂಚಮಿಯೊಳ್ ಇಂ, ಇಂದಂ, ಇಂದೆ ಎಂಬ ತೃತೀಯೆಯ ಮೂಱು ರೂಪಮಂ ಕೆಲಂಬರ್ ಪತ್ತಿಸುವರ್; ಆ ಮೂದೆಱಕ್ಕಾದೇಶಮಾದೆಕಾರಮಂ ಬಿಡುವರ್.

ಪಂಚಮಿಯ ನಿಜರೂಪಕ್ಕೆ -

ಚಂ ॥ ಮಾ ॥ ... ಆಳ್ದನ ನಂಟರತ್ತಣಿಂ
ದವದಳಮಾಯ್ತು ಪೋಯ್ತು ರವಣಂ ... ೧
(ಕಾವ್ಯಾವಲೋಕನಂ ೧೧೮)

ತೃತೀಯಾ ರೂಪಕ್ಕೆ -

ಕೆಱೆಯತ್ತಣಿಂ, ಕೆಱೆಯತ್ತಣಿಂದಂ, ಕೆಱೆಯತ್ತಣಿಂದೆ; ಕೆಱೆಯತ್ತಣೆ ಎನಲಾಗದು.

ಪಂಚಮ್ಯರ್ಥದ ತೃತೀಯೆಗೆ -

ಮಣಿವಿಭೂಷಣ ॥ ಮತ್ತಹಸ್ತಿಗಳ ಮಸ್ತಕದಿಂ ಬಿದಿರಿಂ ಫಣೀಂ
ದ್ರೋತ್ತಮಾಂಗದಿನಗುರ್ವಿಪ ಪಂದಿಯ ಕೋಟ್ಕಳಿಂ
ಪತ್ತುವಿಟ್ಟಗನಿಕುಂಜದೊಳೊಕ್ಕೆಳಮುತ್ತನಾ
ಯುತ್ತುಮಿರ್ಪ ಶಬರಪ್ರಿಯಕಾಮಿನಿಯರ್ಕಳಂ ॥ ೨
(ಕಾವ್ಯಾವಲೋಕನಂ ೧೧೯)

ಉ ॥ ಮಾ ॥ ... ಆಲಿವರಲ್ಗಳುಮಿಂದ್ರಗೋಪಮುಂ
ಸೂಸಿದುವಭ್ರದಿಂ ... ೩

ಚಂ ॥ ಮಾ ॥ ... ತಿಳಿಗೊಳದಿಂದೆ ಪಾಱುದುವು ಹಂಸಕುಳಂ ೪

**ಸೂತ್ರಂ ॥ ಆದರಿಪರ್ ಕೆಲಬರ್ ದೀ ।**
**ರ್ಘಾದೇಶಮನಗ್ರದಲ್ಲಿ ಷಷ್ಠಿಯಕಾರ ॥**
**ಕ್ಕಾ ದೀರ್ಘಮನಿರದರೆಬರ್ ।**
**ಖೇದದ ಸಂಭ್ರಮದ ಮೆಯ್ಯೊಳುತ್ಪಾದಿಸುವರ್ ॥ ೧೧೭ ॥**

**ಟೀಕೆ** - ಕೆಲಬರ್, ಷಷ್ಠಿಯ = ಷಷ್ಠೀವಿಭಕ್ತಿಯ, ಅಕಾರಕ್ಕೆ = ಅತ್ವಕ್ಕೆ, ಅಗ್ರದಲ್ಲಿ = ತುದಿಯಲ್ಲಿ, ದೀರ್ಘಾದೇಶಮಂ = ದೀರ್ಘದ ಆದೇಶಮಂ, ಆದರಿಪರ್ = ಪೇೞ್ವರ್; ಆ ದೀರ್ಘಮಂ, ಇರದೆ = ನಿಲ್ಲದೆ, ಅರೆಬರ್ = ಕೆಲಂಬರ್, ಖೇದದ = ದುಃಖದ, ಸಂಭ್ರಮದ, ಮೆಯ್ಯೊಳ್ = ಸ್ವರೂಪದಲ್ಲಿ, ಉತ್ಪಾದಿಸುವರ್ = ಪ್ರತಿಪಾದಿಸುವರ್.

**ವೃತ್ತಿ** - ಅ ಎಂಬ ಷಷ್ಠಿಯಕಾರಕ್ಕೆ ಕೆಲಬರ್ ದೀರ್ಘಾದೇಶಮನೊಡಂಬಡುವರ್; ಆ ದೀರ್ಘಮಂ ಕೆಲರ್ ಖೇದದೊಳಂ ಸಂಭ್ರಮದೊಳಂ ಪ್ರಯೋಗಿಪರ್.

**ಪ್ರಯೋಗಂ** -

ಷಷ್ಠಿಯ ದೀರ್ಘಾದೇಶಕ್ಕೆ -

ಮ ॥ ಸ್ರ ॥ ಮೃಡನಾ ಗಂಗಾಂಬುಧಾರಾಜಟಿಲಿತಜಟನಾ ... ೧
(ಕಾವ್ಯಾವಲೋಕನಂ ೧೩೭)

ಚಂ ॥ ಮಾ॥ ದೊರೆಯನಿಸಿತ್ತು ಭಾರತಕೆ ಗೆಲ್ದ ರಣಂ ಕುಮರಾಂಕರಾಮನಾ ॥ ೨
(ಸಾಹಸಭೀಮವಿಜಯಂ ೧೦-೨)

ಕಂ ॥ ... ಕಾಲಾ
ಗ್ನಿರುದ್ರನೆನಿಸಿದುದು ತೋಳ ಬಾಳ್ ತೈಲಪನಾ ೩

ಖೇದಕ್ಕೆ -

ಉ ॥ ಮಾ ॥ ... ಅಕ್ಕಟಾ ಮರು
ಳ್ದುಂಬಿಗಳೇಕೆ ಸಂಪಗೆಗಳೊಳ್ ಪಗೆಗೊಂಡುವೊ ನಿರ್ನಿಮಿತ್ತದಿಂ ॥ ೪
(ಕಾವ್ಯಾವಲೋಕನಂ ೧೩೮)

ಸಂಭ್ರಮಕ್ಕೆ -

ಬೇಡ ಗಡಾ ಬೇಡ ಗಡಾ ನಿನಗಾತನೊಳ್ ಚಲಂ ೫

ವಿಧಿಯೊಳಮುಂಟು -

ಮ ॥ ವಿ ॥ ... ಸತ್ಯಮಂ ನುಡಿ ಗಡಾ ನೀನಾತನೊಳ್ ೬

**ಸೂತ್ರಂ ॥ ಅವಿಶೇಷದಿನಾ ದೀರ್ಘ ।**
**ವ್ಯವಹೃತಿ ಶಬ್ದಾಂತರಾಳದೊಳ್ ಪಕ್ಷದಿನು ॥**
**ದ್ಭವಿಕುಂ ದ್ವಿತೀಯೆಗಂ ಮುಂ ।**
**ದವತರಿಸಲೊಡಂ ಸ್ವರಪ್ರಪೂರ್ವಪದಂಗಳ್ ॥ ೧೧೮ ॥**

**ಟೀಕೆ** - ಅವಿಶೇಷದಿಂ = ಸಾಮಾನ್ಯದಿಂದೆ, ಆ ದೀರ್ಘವ್ಯವಹೃತಿ = ಆ ದೀರ್ಘವ್ಯವಹಾರಂ, ಶಬ್ದ = ಶಬ್ದದ, ಅಂತರಾಳದೊಳ್ = ಮಧ್ಯದಲ್ಲಿ, ಪಕ್ಷದಿಂ = ಕೆಲಂಬರ ಪಕ್ಷದಿಂದೆ, ಉದ್ಭವಿಕುಂ = ಹುಟ್ಟುವುದು; ದ್ವಿತೀಯೆಗಂ = ದ್ವಿತೀಯಾ ವಿಭಕ್ತಿಗೆಯುಂ, ಮುಂದೆ = ಮುಂದುಗಡೆಯಲ್ಲಿ, ಸ್ವರ = ಸ್ವರಂಗಳ್, ಪ್ರಪೂರ್ವ = ಆದಿಯಾದ, ಪದಂಗಳ್, ಅವತರಿಸಲೊಡಂ = ಹುಟ್ಟಲೊಡನೆ, ಆ ದೀರ್ಘವ್ಯವಹೃತಿ ಹುಟ್ಟುವುದು.

**ವೃತ್ತಿ** - ಆ ದೀರ್ಘಂ ಶಬ್ದಾಂತರಾಳದೊಳಂ ದ್ವಿತೀಯಾವಿಭಕ್ತಿಗೆ ಸ್ವರಂ ಪರಮಾಗೆಯುಂ ವಿಕಲ್ಪದಿನಕ್ಕುಂ.

**ಪ್ರಯೋಗಂ** -

ಶಬ್ದಾಂತರಾಳಕ್ಕೆ - ಇಂದೊಳಂ - ಇಂದೋಳಂ; ಆರೊಗಿಸಿದಂ - ಆರೋಗಿಸಿದಂ; ಎಣಗೊಣಂ - ಎಣಗೋಣಂ; [ಮೆಯ್ವೊಗಂ - ಮೆಯ್ವೋಗಂ].

ಕಂ ॥ ... ಮೆಯ್ವೋಗಕೆ ತಾನೆ ಸೋಲ್ವನೆಟ್ಟುವೊಜಂಗಂ ೧

(ಕಾವ್ಯಾವಲೋಕನಂ ೬೭)

ದ್ವಿತೀಯೆಗೆ - ಕಲ್ಲನೇಱುದಂ - ಕಲ್ಲಾನೇಱುದಂ; ಬಿಲ್ಲನದಂ - ಬಿಲ್ಲಾನದಂ.

ವಂಶಸ್ಥಂ ॥ ಎನಿತ್ತೆನಿತ್ತಂಬುಜಪತ್ರನೇತ್ರೆಯಾ ।
ಘನಸ್ತನಂಗಳ್ ಬಳೆಗುಂ ಕಿರಾತೆಯಾ ॥
ಅನಿತ್ತನಿತ್ತಂ ವನದೊಳ್ ವನೇಚರಂ ।
ತನತ್ತು ಬಿಲ್ಲಾನದನಂತು ಕೀಸುವಂ ॥ ೨

(ಕಾವ್ಯಾವಲೋಕನಂ ೩೪೯)

ವೊಲ್ ಪರಮಾದಲ್ಲಿಯುಂ ದೀರ್ಘಮುಂಟು - ಈಂದ ಪುಲಿಯಾ ವೊಲಿರ್ದಳೆಂದು ಗುಣವರ್ಮನ ಹರಿವಂಶಪ್ರಯೋಗಂ.

**ಸೂತ್ರಂ ॥ ಅಲ್ಲಿಯೊಳೆಂಬಿವು ಮಿಕ್ಕೆಡೆ ।**
**ಗೆಲ್ಲಂ ದಿಗ್ವಾಚಿಯಪ್ಪದಂತಕ್ಕಲ್ಮ ॥**
**ತ್ತಲ್ಲಿಯುದಂತಕ್ಕೆತ್ವಂ ।**
**ಬಲ್ಲರ ಮತದಿಂ ವಿಕಲ್ಪವಿಧಿ ಸಪ್ತಮಿಯೊಳ್ ॥ ೧೧೯ ॥**

**ಟೀಕೆ** - ಸಪ್ತಮಿಯೊಳ್ = ಒಳ್ ಎಂದಾಗಿರ್ದ ಸಪ್ತಮಿಾವಿಭಕ್ತಿಯಲ್ಲಿ, ದಿಗ್ವಾಚಿಯಪ್ಪದಂತಕ್ಕೆ = ದಿಗ್ವಾಚಿಗಳಾದ ಅಕಾರಾಂತಕ್ಕೆ, ಅಲ್ = ಅಲ್ ಎಂದಾಗುವುದು; ಮತ್ತೆ = ಬಱಿಕಂ, ಅಲ್ಲಿ = ಆ

ದಿಗ್ವಾಚಕಂಗಳಲ್ಲಿ, ಉದಂತಕ್ಕೆ = ಉಕಾರಾಂತಕ್ಕೆ, ಎತ್ವಂ = ಹ್ರಸ್ವದ ಎಕಾರವಾಗುವುದು; ಬಲ್ಲರ ಮತದಿಂ = ಬಲ್ಲವರ ಮತದಿಂದೆ, ವಿಕಲ್ಪವಿಧಿ = ವಿಕಲ್ಪವಿಧಿಯಾಗುವುದು; ಮಿಕ್ಕೆಡೆಗೆ = ದಿಗ್ವಾಚಕಂಗಳಲ್ಲದುಳಿದೆಡೆಗೆ, ಎಲ್ಲಂ = ಎಲ್ಲವುಂ, ಅಲ್ಲಿ = ಅಲ್ಲಿ ಎಂದು, ಒಳ್ = ಒಳೆಂದು, ಎಂಬಿವು = ಎಂಬೀ ಎರಡು ರೂಪುಗಳ್ ಸಾಮಾನ್ಯದಿಂದೆಯಾಗುವುವು.

**ವೃತ್ತಿ** - ಅಲ್ಲಿ ಎಂದುಂ ಒಳ್ ಎಂದುಂ ಸಪ್ತಮಿಗೆ ಸಾಮಾನ್ಯದಿನಕ್ಕುಂ; ದಿಗ್ವಾಚಿಯಪ್ಪಕಾರಾಂತದ ಮೇಲೆ ವಿಕಲ್ಪದಿಂದಲ್ ಅಕ್ಕುಂ; ಉಕಾರಾಂತ ದಿಗ್ವಾಚಕಂಗಳ್ಗೆ ತ್ವಮಕ್ಕುಂ.

**ಪ್ರಯೋಗಂ** -

ಒಳ್ ಅಲ್ಲಿ ಎಂಬವರ್ಕೆ - ಕೊಳದೊಳ್ - ಕೊಳದಲ್ಲಿ ; ಬಸದೊಳ್, ಬಸದಲ್ಲಿ ; ಸಭೆಯೊಳ್ - ಸಭೆಯಲ್ಲಿ.

ಚಂ ॥ ಮಾ ॥ ... ಸಭೆಯೊಳ್ ನುಡಿದಂ ನವಮೇಘನಾದದಿಂ ೧

ಅಲ್ಲಿ ಇಲ್ಲಿ ಉಲ್ಲಿ ಎಲ್ಲಿ ಎಂದು ಸ್ಥಳವಿಶೇಷದೊಳಮೀ ಶಬ್ದಮೊಳವು-

ಚಂ ॥ ಮಾ ॥ ಸಿರಿ ನೆಲೆಗೊಂಡುದಲ್ಲಿ ಮದನಂ ಮನೆಗಟ್ಟಿದನಲ್ಲಿ ಸೌಖ್ಯಮಂ
ಕುರಿಸಿ ಮಡಲ್ತುದಲ್ಲಿ ... ೨
(ಸೂಕ್ತಿಸುಧಾರ್ಣವಂ ೪-೨೬)

ಚಂ ॥ ಮಾ ॥ ... ಅಲ್ಲಿಯ ಪೆಂಡಿರನಗ್ನಿ ಸುತ್ತಿದಂ ೩

ಪ್ರಥಮೆಗಂ ಸಪ್ತಮಿಗಂ ಅಲ್ ಎಂದೇಕರೂಪಮಕ್ಕುಂ.

ಅದಂತದ ವಿಕಲ್ಪದಲ್ಗೆ - ಪಡುವ, ಮೂಡ, ತೆಂಕ, ಬಡಗ; ಅತ್ತ, ಇತ್ತ, ಉತ್ತ, ಎತ್ತ; ಪಡುವಲ್, ಮೂಡಲ್, ತೆಂಕಲ್, ಬಡಗಲ್; ಅತ್ತಲ್, ಇತ್ತಲ್, ಉತ್ತಲ್, ಎತ್ತಲ್.

ಉತ್ಸಾಹ ॥ ಪಡುವ ಮೂಡ ತೆಂಕ ಬಡಗ ಪೊಡವಿಪತಿಗಳಿಲ್ಲೆನಲ್ ।
ನಡೆದು ಗೆಲ್ದು ... ೪

ಕಂ ॥ ಎತ್ತಿದ ಕಯ್ಯೊಳ್ ಮುತ್ತಿದ
ನತ್ತಿತ್ತುತ್ತೆತ್ತ ಸಾರ್ವರಿನ್ನಹಿತರ್ಕಳ್.... ೫

ಮ ॥ ವಿ ॥ ... ಮೂಡಲಿರ್ದ ಪದದೊಳ್ ತಾರಾಮನೋವಲ್ಲಭಂ ೬
(ಸೂಕ್ತಿಸುಧಾರ್ಣವಂ ೮-೨೧೨)

ಕಂ॥ ಅತ್ತಲ್ ದೇವೇಂದ್ರಂ ಮ ।
ತ್ತಿತ್ತಲ್ ಭುಜಗೇಂದ್ರನುತ್ತಲಾಶಾಧಿಪರೊಳ್ ॥
ಮುತ್ತಿರೆ ಭೇರೀಧ್ವನಿ ಪ ।
ರ್ವಿತ್ತೆತ್ತಲ್ ಮಸಗಿ ಘೋಷಶಿಕ್ಷಾದಕ್ಷಂ ॥ ೭

ಉದಂತಕ್ಕೆತ್ವವಿಕಲ್ಪಂ -

ಒಳಗು - ಒಳಗೆ; ಪೊಱಗು - ಪೊಱಗೆ; ಪೆಱಗು - ಪೆಱಗೆ; ಮೇಗು - ಮೇಗೆ; ಕೆಳಗು-ಕೆಳಗೆ.

ಕಂ|| ಕವಿ ಪೊಱಗಿರೆ ಕೀಱೊಳಗಿರೆ ।
ಯವಿರಳಮಾ ತುರಗಮುಖಮೊ ನೃಪಮಂದಿರಮೋ ॥ ೮

ನಡುವೆಯೆಂಬಲ್ಲಿ ನಾಮಮಱದಪ್ಪುದಾಗಿ ವತ್ವಂ ಪೊಕ್ಕುದು.

**ಸೂತ್ರಂ ॥ ಸವನಿಪುದು ಮುಂದು ಪಿಂದೆಂ।**
**ಬಿವಱಂತ್ಯಕ್ಕಱ್ ವಿಕಲ್ಪದಿಂದೆ ತುಕಾರಂ ॥**
**ವ್ಯವಹರಿಪುದೆತ್ವವಿಧಿ ಬ ।**
**ಲ್ಲವರಿಂ ಮೇಲೆಂದು ಪೇಳ್ವ ಬೀಱಕ್ಕರಕಂ ॥ ೧೨೦ ॥**

**ಟೀಕೆ** - ಮುಂದು = ಮುಂದು ಎಂದು, ಪಿಂದು = ಪಿಂದು ಎಂದು, ಎಂಬಿವಱ = ಎಂಬೀ ಶಬ್ದಂಗಳ, ಅಂತ್ಯಕ್ಕೆ = ತುದಿಯ ದುಕಾರಕ್ಕೆ, ವಿಕಲ್ಪದಿಂದೆ, ತುಕಾರಂ= ತುತ್ವಂ, ಸವನಿಪುದು = ಬರ್ಪುದು; ಅಱ್= ತಿಳಿ; ಮೇಲೆಂದು ಪೇಳ್ವ ಬೀಱಕ್ಕರಕಂ= ಮೇಲ್ ಎಂದು ಪೇಳ್ವ ವ್ಯಂಜನಾಕ್ಷರಕ್ಕೆಯುಂ, ಎತ್ವವಿಧಿ = ಏಕಾರದ ವಿಧಿ, ಬಲ್ಲವರಿಂ= ವಿದ್ವಾಂಸರಿಂದೆ, ವ್ಯವಹರಿಪುದು= ವ್ಯವಹರಿಸುವುದು.

**ವೃತ್ತಿ**- ಮುಂದು ಪಿಂದೆಂಬಿವಱಂತ್ಯಕ್ಕೆ ವಿಕಲ್ಪದಿಂ ತುಕಾರಾದೇಶಮಾಗಿ ಪಿಂದಣಂತೆತ್ವಮಕ್ಕುಂ. ಮೇಲ್ ಎಂಬ ವ್ಯಂಜನಾಂತಕ್ಕಮೆತ್ವಮಕ್ಕುಂ.

**ಪ್ರಯೋಗಂ** -

ತುಕಾರಕ್ಕೆ -

ಮುಂದು - ಮುಂತು, ಪಿಂದು - ಪಿಂತು; ಮುಂದೆ - ಮುಂತೆ, ಪಿಂದೆ - ಪಿಂತೆ.

ಮೇಲೆಂಬುದರ್ಕೆ -

ಚಂ ॥ ಮಾ ॥ ... ಆನೆಯ ಮೇಲೆಯುಂ ಆಳ ಮೇಲೆಯುಂ
ಕುದುರೆಯ ಮೇಲೆಯುಂ ಪರಿದುದೊಂದೆ ಗಜಂ ಭುವನೈಕರಾಮನಾ ೧

(ಭುವನೈಕರಾಮಾಭ್ಯುದಯಂ ? )

**ಸೂತ್ರಂ ॥ ಮೊದಲೆರಡು ವಿಭಕ್ತಿಯೊಳಂ ।**
**ಪೊದಱ್ಗುಮಲ್ ಕಾಲವಾಚಿಯಂದಿಂದುಂದೆಂ ॥**
**ಬುದುಮೇಕರೂಪಮಾಗಿ ।**
**ರ್ಪುದು ಮೊದಲೆರಡುಂ ವಿಭಕ್ತಿಗಂ ಸಪ್ತಮಿಗಂ ॥ ೧೨೧ ॥**

**ಟೀಕೆ** - ಅಲ್ = ಸಪ್ತಮಿಗೆ ಬಂದ ಅಲ್ ಎಂಬುದು, ಮೊದಲ = ಆದಿಯ, ಎರಡು ವಿಭಕ್ತಿಯೊಳಂ= ಪ್ರಥಮೆ ದ್ವಿತೀಯೆ ಎಂಬೆರಡು ವಿಭಕ್ತಿಯೊಳಂ, ಪೊದಱ್ಗುಂ = ಪೊರ್ದುಗೆಯಪ್ಪುದು; ಕಾಲವಾಚಿಯ= ಕಾಲವಾಚಿಶಬ್ದದ, ಅಂದು = ಅಂದೆಂದು, ಇಂದು = ಇಂದೆಂದು, ಉಂದು= ಉಂದೆಂದು, ಎಂಬುದುಂ= ಎಂಬ ರೂಪಂ, ಮೊದಲೆರಡುಂ ವಿಭಕ್ತಿಗಂ = ಆದಿಯ ಎರಡು ವಿಭಕ್ತಿಗೆಯುಂ, ಸಪ್ತಮಿಗಂ = ಸಪ್ತಮಿ ವಿಭಕ್ತಿಗೆಯುಂ, ಏಕರೂಪಂ = ಒಂದೆ ರೂಪಂ, ಆಗಿರ್ಪುದು.

**ವೃತ್ತಿ** - [1]ಸಪ್ತಮಿಗೆ ಬಂದ ಅಲ್ ಎಂಬುದು ಪ್ರಥಮೆಗಂ ದ್ವಿತೀಯೆಗಂ ಪತ್ತುಗುಂ; ಕಾಲವಾಚಕಂಗಳಪ್ಪ ಅಂದು ಇಂದು ಉಂದು ಎಂದು - ಎಂಬ ಶಬ್ದಂಗಳಲುವಿನಂತೆ ಪ್ರಥಮೆಗಂ ದ್ವಿತೀಯೆಗಂ ಸಪ್ತಮಿಗಂ ಸರಿ.

~~~~~~~~~~~~~~~~~~~~

೧. ದಿಗ್ವಾಚಕಂಗಳಲ್ಲಿ ಎಂಬುದನುವೃತ್ತಿ.
~~~~~~~~~~~~~~~~~~~~

**ಪ್ರಯೋಗಂ -**

ಪ್ರಥಮೆ ದ್ವಿತೀಯೆ ಸಪ್ತಮಿಗಳಲುವಿಂಗೆ - ಮೂಡಲ್, ಮೂಡಲ್, ಮೂಡಣಿಂ, ಮೂಡಣ್ಗೆ, ಮೂಡಣತ್ತಣಿಂ, ಮೂಡಣ, ಮೂಡಲ್.

ಅಂದು ಮೊದಲಾದುವರ್ಕೆ - ಅಂದು, ಅಂದು, ಅಂದಿಂ, ಅಂದಿಂಗೆ, ಅಂದಿಸತ್ತಣಿಂ, ಅಂದಿನ, ಅಂದು; ಉೞಿದುವರ್ಕಂ ಈ ಪರಿ.

**ಸೂತ್ರಂ ॥ [೧]ಪುದಿಗುಮದಂತಕೆ ಪುಲ್ಲಿಂ ।**
**ಗದವೋಲ್ ಕೆಱದೆಡೆಗಳಲ್ಲಿಯೆಲ್ಲಂ ಸ್ತ್ರೀಲಿಂ ॥**
**ಗದೊಳಂ ಪುಂ ನಪ್ಪಿನೊಳಂ ।**
**ಪುದಿಗುಂ ತಿಳಿ ಬಹುಳಮಾದುದಾಹರಣೆಗಳಿಂ ॥ * ॥**

**ಟೀಕೆ** - ಸ್ತ್ರೀಲಿಂಗದೊಳಂ = ಸ್ತ್ರೀಲಿಂಗದಲ್ಲಿಯುಂ, ಕೆಱದೆಡೆಗಳಲ್ಲಿ = ಕೆಱದು ತಾಣಂಗಳಲ್ಲಿ , ಅದಂತಕೆ = ಅಕಾರಂತಕ್ಕೆ, ಪುಲ್ಲಿಂಗದವೋಲ್= ಅಕಾರಾಂತ ಪುಲ್ಲಿಂಗದ ಹಾಗೆ, ಎಲ್ಲಂ=ಸಪ್ತವಿಭಕ್ತಿಗಳಾಗಮಂಗಳೆಲ್ಲಂ, ಪುದಿಗುಂ=ಪ್ರವೇಶವಾಗುವುದು; ಪುಂನಪ್ಪಿನೊಳಂ= ಪುಂನಪುಂಸಕಲಿಂಗದಲ್ಲಿಯುಂ ಕೆಱದು ತಾಣಂಗಳಲ್ಲಿ ಅಕಾರಾಂತ ಪುಲ್ಲಿಂಗದ ಹಾಗೆ, ಸಪ್ತ ವಿಭಕ್ತಿಗಳೆಲ್ಲಂ, ಪುದಿಗುಂ = ಪೊರ್ದುಗೆಯಾಗುವುದು; ಬಹುಳಮಾದುದಾಹರಣೆಗಳಿಂದೆ, ತಿಳಿ = ಅಱಿ

**ವೃತ್ತಿ** - ಸ್ತ್ರೀಲಿಂಗದೊಳಂ ಕಿಱುದೆಡೆಗಳಲ್ಲಿ ಅಕಾರಾಂತಕ್ಕೆ ಪುಲ್ಲಿಂಗದಂತೆ ಸಪ್ತ ವಿಭಕ್ತಿಗಳೆಲ್ಲಂ ಪತ್ತುಗುಂ; ಪುಂನಪುಂಸಕ ಲಿಂಗದಲ್ಲಿಯುಂ ಕೆಱದು ಶಬ್ದಂಗಳಲ್ಲಿ , ಅಕಾರಾಂತ ಪುಲ್ಲಿಂಗದಂತಿರೆ ಸಪ್ತವಿಭಕ್ತಿಗಳೆಲ್ಲಂ ಪುದಿಗುಂ. ಇವಂ ಬಹುಳಮಾದುದಾಹರಣೆಗಳಿಂ ತಿಳಿವುದು.

**ಪ್ರಯೋಗಂ** - ಅದಂತ ಸ್ತ್ರೀಲಿಂಗಕ್ಕೆ - ಅಕ್ಕಂ, ಅಕ್ಕನಂ, ಅಕ್ಕನಿಂ, ಅಕ್ಕಂಗೆ, ಅಕ್ಕನತ್ತಣಿಂ, ಅಕ್ಕನ, ಅಕ್ಕನೊಳ್; ಅವ್ವಂ, ಅಮ್ಮಂ ಎಂಬಿವರ್ಕಮಿಂತಱುವುದು.

ಅಕಾರಾಂತಮಾದ ಪುಂನಪುಂಸಕಕ್ಕೆ - ಹರಿಣಂ, ಹರಿಣನಂ, ಹರಿಣನಿಂ, ಹರಿಣಂಗೆ, ಹರಿಣನತ್ತಣಿಂ, ಹರಿಣನ, ಹರಿಣನೊಳ್; ಕೋಣಂ, ಹಂಗಂ, ಹಸುಬಂ, ಸರ್ಪಂ, ಗರುಡಂ, ಕೂರ್ಮಂ, ಕಮಠಂ, ವೃಷಭಂ, ಬಸವಂ - ಎಂಬಿವಾದಿಯಾದುವರ್ಕಮಿಂತಱುವುದು.

ಕಿಱುದೆಡೆಗಳಲ್ಲಿ ಎಂಬುದಱಂ ಭೃಂಗ, ತುರಂಗ, ಹಯ, ಗಜ ಮೊದಲಾದ ಶಬ್ದಂಗಳ್ಗೆ ನಪುಂಸಕರೂಪಮೆ ಪತ್ತುಗುಂ - ಭೃಂಗದಿಂ, ತುರಂಗಕ್ಕೆ, ಹಯದತ್ತಣಿಂ, ಗಜದ ಎಂಬಂತಱುವುದು.

ವರಾಹ ಶಬ್ದದೊಳ್ ವಿಕಲ್ಪಂ-ವರಾಹದಿಂ, ವರಾಹನಿಂ; ವರಾಹಂಗೆ, ವರಾಹಕ್ಕೆ - ಎಂಬಂತೆ.

ಹೆಣ್ಣಾದೊಡಂ ಗಂಡಾದೊಡಂ ಹಂಗಂ ಹಸುಬಂ ಸರ್ಪನೆಂಬಿವಾದಿಯಾದುವರ್ಕೆ ಪುಲ್ಲಿಂಗದಂತೆ ರೂಪು ಪತ್ತುಗುಂ-ಹಂಗನಂ, ಹಸುಬನಿಂ, ಸರ್ಪಂಗೆ, ಗರುಡನತ್ತಣಿಂ ಎಂಬಂತಱುವುದು.

~~~~~~~~~~~~~~~~~~~

೧. ಈ ಸೂತ್ರ ವೃತ್ತಿ ಪ್ರಯೋಗಗಳು ಕ. ಖ. ಪ್ರತಿಗಳಲ್ಲಿ ಕಾಣಬರುವುದಿಲ್ಲ. ಗ. ಪುಸ್ತಕದಲ್ಲಿ ಮಾತ್ರವಿದೆ. (ಈ ಸೂತ್ರ ವೃತ್ತಿ ಪ್ರಯೋಗಗಳು ಬಹುಶಃ ಪ್ರಕ್ಷಿಪ್ತಗಳು)
~~~~~~~~~~~~~~~~~~~

**ಸೂತ್ರಂ ॥ ಅಮುಮೆಂದುಸಿರ್ವ ಸಮುಚ್ಚಯ ।**
**ದುಮುವಿಧಿ ನಿರುತಂ [1]ದ್ವಿತೀಯೆಯೊಳವೊಕ್ಕಿರ್ಕುಂ ॥**
**ಸಮನಿಸವೆಂದುಂ ಷಷ್ಠಿಯೊ ।**
**ಳಮುಮವು ಮಿಕ್ಕಿನ ವಿಭಕ್ತಿಗಳ ಮೇಲಿರ್ಕುಂ ॥ ೧೨ ॥**

**ಟೀಕೆ** - ಅಮ್ ಎಂದು, ಉಮ್ ಎಂದು, ಉಸಿರ್ವ=ಪೇಳ್ವ, ಸಮುಚ್ಚಯದ= ಸಮುಚ್ಚಯಾರ್ಥದ, ಉಮುವಿಧಿ=ಉಂಕಾರವಿಧಿ, ನಿರುತಂ=ನಿಯತವಾಗಿ, ದ್ವಿತೀಯೆಯ=ದ್ವಿತೀಯಾವಿಭಕ್ತಿಯ, ಒಳವೊಕ್ಕು= ಒಳಗಂ ಪೊಕ್ಕು, ಇರ್ಕುಂ = ಇರ್ಪುದು; ಷಷ್ಠಿಯೊಳ್ = ಷಷ್ಠೀವಿಭಕ್ತಿಯಲ್ಲಿ , ಎಂದುಂ=ಆವಾಗಳುಂ, ಅಮ್ ಉಮ್ ಎಂಬ, ಅವು, ಸಮನಿಸವು= ಬರುವುದಿಲ್ಲ; ಮಿಕ್ಕಿನ=ಉಳಿದ, ವಿಭಕ್ತಿಗಳ= ಪ್ರತ್ಯಯಂಗಳ, ಮೇಲೆ= ಅಗ್ರದಲ್ಲಿ, ಇರ್ಕುಂ= (ಅನುರೂಪಮಾಗಿ) ಇರ್ಪುವು.

**ವೃತ್ತಿ** - ಅಮ್, ಉಮ್ ಎಂದು ಪೇಳ್ವ ಸಮುಚ್ಚಯದ ಉಮ್ ಎಂಬುದು [2]ದ್ವಿತೀಯೆಯ ನಡುವೆ ಪೊಕ್ಕಿರ್ಕುಂ; ಷಷ್ಠಿಯೊಳ್ ಸಮುಚ್ಚಯಂ ಪತ್ತದು; ಅಮ್ ಉಮ್‌ಗಳ್ ಮಿಕ್ಕ ವಿಭಕ್ತಿಗಳ ಮೇಲೆಯನುರೂಪಮಾಗಿ ಪತ್ತುಗುಂ.

**ಪ್ರಯೋಗಂ** -

ದ್ವಿತೀಯೆಯೊಳಗಣ ಅಮುವಿಂಗೆ -

ಕಂ ॥ ಅವರುಮನಂತಕನೊಯ್ಯನೆ
ಸವಿನೋಟ್ಪುದುಂ ... ೧

(ಆದಿಪುರಾಣಂ ೩-೩೫)

ಕಂ ॥ .... ಒಂ
ದೆಡೆಯೊಳ್ ಕಟ್ಟುವುದೆ ಪುಲಿಯುಮಂ ಕವಿಲೆಯುಮಂ ... ೨

ಮಿಕ್ಕ ವಿಭಕ್ತಿಗಳ ಮೇಗಣ ಸಮುಚ್ಚಯಕ್ಕೆ -

ಕಂ ॥ ನರನುಂ ನರನಂದನನುಂ
ಗುರುವುಂ ಗುರುಸುತನುಂ ... ೩

(ಸಾಹಸಭೀಮವಿಜಯಂ ೩-೫೦)

ಕಾಲಿಂದೆಯುಂ ಕಯ್ಯಿಂದೆಯುಂ ಘಟ್ಟಿಸಿದಂ ... ೪

ಚತುರ್ಥಿಯೊಳೆರಡುಂ ಪತ್ತುಗುಂ -

ಕಂ ॥ ದ್ರೋಣಂಗಂ ನಿನಗಂ ಬಿ
ಲ್ಲಾಣಿಕೆಯದು ಸಕ್ಕಸಮನೆ ... ೫

ಚಂ ॥ ಮಾ ॥ ... ವಂ
ಚಿಸುವುದವಂಗೆಯುಂ ನಿನಗೆಯುಂ ಸಹಜಂ ಬಿಡಿಸಲ್ಕೆ ಬರ್ಕುಮೇ ೬

[ ಪಂಚಮಿಯೊಳ್-]

ಜಾದಿಯತ್ತಣಿಂದೆಯುಂ ಕೇದಗೆಯತ್ತಣಿಂದೆಯುಂ ಕಂಪು ಬಂದುದು ... ೭

~~~~~~~~~~~~~~~~~~~

೧. (ದ್ವಿತೀಯೆಯೊಳ್ ಪೊಕ್ಕಿರ್ಕುಂ) ೨. ದ್ವಿತೀಯಾಂತಮಾದ ಪದದ ನಡುವೆ. ಕ. ಖ.
~~~~~~~~~~~~~~~~~~~

ಸಪ್ತಮಿಗೆ ಅಮ್ ಪತ್ತುವುದು -

ಕಂ ॥ ಚಲದೊಳಮಾಚಾರದೊಳಂ
ಕಲಿತನದೊಳಂ ... ೮

ಅಲ್ಲಿಯೆಂಬುದಱ ಮೇಲೆ ಉಂ ಪತ್ತುಗುಂ -

ಚಂ ॥ ಮಾ ॥ ... ಅಲ್ಲಿಯುಮಿಲ್ಲಿಯುಮೆಲ್ಲಿಯುಂ ನರಂ ... ೯

**ಸೂತ್ರಂ ॥ ಎಲ್ಲಿಯುಮಾಮಂತ್ರಣದೊಳ್ ।**
**ಬಲ್ಲರ್ ಪ್ರಥಮೈಕವಚನಮಂ ಲೋಪಿಸುವರ್ ॥**
**ನಿಲ್ಲದೆ ವಿಕಲ್ಪಮುಖದಿಂ ।**
**ಸೊಲ್ಲಿಸುವರ್ ಹ್ರಸ್ವ ದೀರ್ಘ ಕಾಕುಗಳೆರಡಂ ॥ ೧೨೩ ॥**

**ಟೀಕೆ** - ಆಮಂತ್ರಣದೊಳ್ = ಸಂಬುದ್ಧಿಯಲ್ಲಿ, ಎಲ್ಲಿಯುಂ = ಆವೆಡೆಯಲ್ಲಿಯುಂ, ಬಲ್ಲರ್ = ವಿದ್ವಾಂಸರ್, ಪ್ರಥಮೈಕವಚನಮಂ = ಪ್ರಥಮಾವಿಭಕ್ತಿಯ ಏಕವಚನಮಂ, ಲೋಪಿಸುವರ್ = ಲೋಪಮಂ ಮಾಡುವರ್; ನಿಲ್ಲದೆ = ತಡೆಯದೆ, ವಿಕಲ್ಪಮುಖದಿಂ = ವಿಕಲ್ಪಮುಖದಿಂದೆ, ಹ್ರಸ್ವದೀರ್ಘ ಕಾಕುಗಳ್, ಎರಡಂ, ಸೊಲ್ಲಿಸುವರ್ = ಪೇೞ್ವರ್.

**ವೃತ್ತಿ** - ಆಮಂತ್ರಣದೊಳ್ [1]ಸ್ವರಾಂತಂಗಳ ಪ್ರಥಮೈಕವಚನಕ್ಕೆಲ್ಲಿಯುಂ ಲೋಪಂ, ಆ ಸಂಬುದ್ಧಿಯೊಳ್ ಹ್ರಸ್ವದೀರ್ಘಮೆಂಬೆರಡು ಕಾಕುಗಳಂ ವಿಕಲ್ಪದಿಂ ಪೇೞ್ವರ್.

ಆಮಂತ್ರಣಕ್ಕೆ -

ಮಲ್ಲಿಕಾಮಾಲೆ ॥ ದೇವ ಬಿನ್ನಪ ... ೧

(ವಿಕ್ರಮಾರ್ಜುನವಿಜಯ ೫-೯೪)

ಉ ॥ ಮಾ ॥ ... ಬೆಸೆಯದಿರ್ ಕುಸುಮಾಯುಧ ನಿನ್ನ ಬಲ್ಪು ಪೆ
ಣ್ಮಕ್ಕಳೊಳಲ್ಲದಿಲ್ಲ ... ೨

ಸ್ವಾಗತ ॥ ಕೇಳ ಮಾಧವ ... ೩

(ಕಾವ್ಯಾವಲೋಕನಂ ೧೩೨)

ಹ್ರಸ್ವಕಾಕುವಿಂಗೆ -

ಕಂ ॥ ಎಲೆ[ಲೆ] ಗಟಿಪ ಎಂಬ ಮಾತು ಬಂದಪುದೀಗಳ್ ೪

ಚಂ ॥ ಮಾ ॥ ಎಲೆ ಎಲೆ ರಂಭೆಯೂರ್ವಶಿ ತಿಲೋತ್ತಮೆ ಮೇನಕೆ ಮಂಜುಘೋಷೆ ... ೫

ದೀರ್ಘಕಾಕುವಿಂಗೆ -

ಕಂ ॥ ... ಸುಖ
ಸಂಪದಮಂ ಮಾೞ್ಪುದೆಮಗೆ ಪರಮಜಿನೇಂದ್ರಾ ೬

---

೧. ಸ್ವರಾಂತ ವ್ಯಂಜನಾಂತ ಲಿಂಗಗಳ ಪ್ರಥಮೈಕವಚನಕ್ಕೆ. ಕ. ಖ. ಗ.

ಸ್ವಾಗತ ॥ ... ತಡವಲ್ತೇ
ಕಾರಣಂ ಕುರುಪತೀ ಎಮಗೀಗಳ್ ೭
(ಕಾವ್ಯಾವಲೋಕನಂ ೧೩೩)

**ಸೂತ್ರಂ ॥ [1]ಅವಿಶೇಷದಿಂದದಂತ ।**
**ಕ್ಕೆವರ್ಣಮೊದವುವುದೆವರ್ಣಮೊದವಿದದಂತ ॥**
**ಕ್ಕವತರಿಕುಂ ಬಿಂದುವಬಿಂ ।**
**ದುವಾಗಿ [2]ಬಹುವಚನದರುವನಡರ್ವುದೆವರ್ಣಂ ॥ ೧೨೪ ॥**

**ಟೀಕೆ** - ಇಲ್ಲಿ ಆಮಂತ್ರಣದೊಳ್ ಎಂಬುದನುವರ್ತನೆ; ಆಮಂತ್ರಣದೊಳ್ = ಸಂಬುದ್ಧಿಯಲ್ಲಿ, ಅವಿಶೇಷದಿಂ = ಸಾಮಾನ್ಯವಾಗಿ, ಅದಂತಕ್ಕೆ = ಅಕಾರಾಂತಶಬ್ದಕ್ಕೆ, ಎವರ್ಣಂ = ಎ ಏ ಎಂಬ ಸವರ್ಣಂ, ಒದವುವುದು = ಬರ್ಪುದು; ಎವರ್ಣಂ = ಎ ಏ ಎಂಬ ಸವರ್ಣಂ, ಒದವಿದ = ಬಂದ; ಅದಂತಕ್ಕೆ = ಅಕಾರಾಂತಕ್ಕೆ, ಬಿಂದು = ಸೊನ್ನೆ, ಅವತರಿಕುಂ = ಹುಟ್ಟುವುದು; ಅಬಿಂದುವಾಗಿ = ಬಿಂದುವಿಲ್ಲದುದಾಗಿ, ಎವರ್ಣಂ = ಎ ಏ ಎಂಬ ಸವರ್ಣಂ, ಬಹುವಚನದ, ಅರುವಂ = ಅರಾಗಮವಂ, ಅಡರ್ವುದು = ಪತ್ತುವುದು.

**ವೃತ್ತಿ** - ಲಿಂಗತ್ರಯಮೆನ್ನದೆ ವಚನತ್ರಯಮೆನ್ನದೆ ಸ್ವರಾಂತ ವ್ಯಂಜನಾಂತಂಗಳೆನ್ನದೆ ಸಾಮಾನ್ಯದಿಂ ಸಂಬೋಧನೆಯ ಕಡೆಯೊಳ್ ವಿಕಲ್ಪದಿಂ ಎ ಏ ಎಂಬಿವಕ್ಕುಂ; ಅಕಾರಾಂತದ ಮೇಲೆ ಎ ಏ ಎಂಬಿವು ಪರಮಾಗೆ ನಡುವೆ ಬಿಂದುವಕ್ಕುಂ; ಬಿಂದುವಿಲ್ಲದೆ ಬಹುವಚನದರುವಿನ ಮೇಲೆ ಎ ಏ ಎಂಬಿವಕ್ಕುಂ.

**ಪ್ರಯೋಗಂ** -

ಸ್ವರಾಂತ ವ್ಯಂಜನಾಂತಂಗಳ್ಗೆ -

ಚಂ ॥ ಮಾ ॥ ಅಳಿಕುಳನೀಳಕುಂತಳೆಯೆ ಕೋಕಿಲನಾದೆಯೆ ಹಂಸಯಾನೆಯೇ ೧

ಕಂ ॥ ಮನುವೇ ನಿನ್ನಯ ಮಾರ್ಗಂ
ಜನಶಿಕ್ಷಾ ಸೂತ್ರಮಾಯ್ತು ... ೨

ಮ ॥ ವಿ ॥ ಎಳಮಾವೇ ತಳಿರುಯ್ಯಲೇ ... ೩
(ಕಾವ್ಯಾವಲೋಕನಂ ೧೨೯)

ಬಿಂದುವಿಂಗೆ -

ಮ ॥ ವಿ ॥ ... ಚಂದ್ರನೇ
ಕೊಳನೇ ನಂದನಮೇ ಲತಾಭವನಮೇ ... ೪
(ಕಾವ್ಯಾವಲೋಕನಂ ೧೨೯)

ಅರುವಿನ ಮೇಲಣ ಎವರ್ಣಕ್ಕೆ -
ಭಟ್ಟರೆ! ಬಂದಿರೇಂ ಮನೆಗೆ? ೫

ದೇವರೇ ಕರುಣಿಸಿದಿರೇ ೬

~~~~~~~~~~~~~~~~~~~

೧. (ಅವಿಶೇಷದೆ ಲಿಂಗಾತ್ಯ) ೨. (ಬಹುವಚನದರ್ವನಡರ್ವುದೆವರ್ಣಂ)
~~~~~~~~~~~~~~~~~~~

ಏಕವಚನದೊಳೆತ್ವಂ ವಿಕಲ್ಪಂ -

ಎಲೆ ಅಭಿಮನ್ಯು, ಎಲೆ ಅಭಿಮನ್ಯುವೆ; ಅಭಿಮನ್ಯೂ ಎಂದುಮುಂಟು.

ಎಲೆ ತುಂಬಿ, ಎಲೆ ತುಂಬಿಯೆ

**ಸೂತ್ರಂ ॥ ಪಿರಿದುಂ ದ್ವಿತ್ವಬಹುತ್ವಂ ।**
**ಬರೆ ಗಳ್ಕಳ್ಗುಂಟಿರಾಗಮಂ ಬಹುವಚನ ॥**
**ಸ್ಫುರಿತ ಕ್ರಿಯೆಗೇಕತೆ ನಿಜ ।**
**ಪರಿಣತಿ ಮೇಣ್ ಧಾತುಗೇಕವಚನದೊಳತ್ವಂ ॥ ೧೨೫ ॥**

**ಟೀಕೆ** - ಇಲ್ಲಿ ಆಮಂತ್ರಣದೊಳ್ ಎಂಬುದು ಅನುವರ್ತನೆ. ಪಿರಿದುಂ = ವಿಶೇಷವಾಗಿ, ದ್ವಿತ್ವಬಹುತ್ವಂ = ದ್ವಿವಚನ ಬಹುವಚನಂಗಳ್, ಬರೆ, ಗಳ್ಕಳ್ಗೆ = ಗಳಾಗಮ ಕಳಾಗಮಂಗಳ್ಗೆ, ಇರಾಗಮಂ = ಇರ ಎಂಬಾಗಮಂ, ಉಂಟು = ಉಂಟಾಗಿರ್ಪುದು; ಬಹುವಚನ = ಬಹುವಚನದಲ್ಲಿ, ಸ್ಫುರಿತ = ಪ್ರಕಾಶಿಸಲ್ಪಟ್ಟ, ಕ್ರಿಯೆಗೆ, ಏಕತೆ = ಏಕವಚನಂ ಉಂಟಾಗಿರ್ಪುದು; ಧಾತುಗೆ = ಧಾತುಗಳ್ಗೆ, ಏಕವಚನದೊಳ್ = ಏಕವಚನದಲ್ಲಿ, ನಿಜ ಪರಿಣತಿ = ಇರ್ದ ಹಾಗೆ ಪರಿಣಮಿಸುವುದು ಉಂಟಾಗಿರ್ಪುದು; ಮೇಣ್ = ವಿಕಲ್ಪದಿಂದೆ, ಅತ್ವಂ = ಅಕಾರಂ ಉಂಟಾಗಿರ್ಪುದು.

**ವೃತ್ತಿ** - ಆಮಂತ್ರಣದೊಳ್ ದ್ವಿವಚನ ಬಹುವಚನಂಗಳಾದ ಗಳ್ಗಂ ಕಳ್ಗಂ ಇರಾಗಮಮುಂಟು; ಪಿರಿದುಮೆಂಬುದಱಿಂದರುವಿನ ಮೇಲೆಯುಮುಂಟು. ಪಿರಿದುಮೆಂಬ ಪ್ರಚುರಗ್ರಹಣದಿಂ ಗಳ್ ಎಂಬುದಱ ಮೇಲೆ ಆ ಇರಾಗಮಂ ಕಿಱಿದೆಡೆಯೊಳ್ಮಾಣ್ದುದು. ಬಹುವಚನಕ್ರಿಯೆಯೊಳೆ ಏಕವಚನಮುಂಟು. ನಿಜಧಾತುವೇಕವಚನದೊಳಿರ್ದಂತೆ ಸಲ್ಗುಂ. ವಿಕಲ್ಪದಿನಾ ಧಾತುವತ್ವಮುಂ ಪಡೆಗುಂ.

**ಪ್ರಯೋಗಂ -**

ಗಳ್ಗೆ ಇರಾಗಮಂ -

ದೆಸೆಗಳಿರ, ಮುಗಿಲ್ಗಳಿರ

ಚಂ ॥ ಮಾ ॥ ಸುರತರುನಂದನಂಗಳಿರ ... ೧

(ಆದಿಪುರಾಣಂ ೩-೪; ಕಾವ್ಯಾವಲೋಕನಂ ೧೩೦)

- ಸ್ತ್ರೀಪುರುಷವಾಚಕದೊಳಮದುವೆ.

ಕಳ್ಗೆ -

ದೇವಿಯರ್ಕಳಿರ, ಬುಧರ್ಕಳಿರ

ಚಂ ॥ ಮಾ ॥ ... ಬುಧರ್ಕಳಿರ ನಿಮ್ಮ ಗುಣಸ್ತುತಿ ಕಾವ್ಯಮಾರ್ಗದೊಳ್ ೨

ಅರ್ಗೆ -

ನಂಟರಿರ, ನಲ್ಲರಿರ, ದೇವಿಯರಿರ

ಕಿಱಿದೆಡೆಯೊಳಿಲ್ಲಮದರ್ಕೆ -

ಮ ॥ ಸ್ರ ॥ ಜಲಧಿದ್ವೀಪಾಂತರಾಳಂಗಳನಿರದೆ ಪುಗಿಂ ಪೋಗಿಮುಗ್ರಾರಿಗಳ್ ... ೩
(ಆದಿಪುರಾಣಂ ೧೩-೪೪)

ಬಹುವಚನಕ್ರಿಯೆಯೊಳೇಕವಚನಕ್ಕೆ -

ಮ ॥ ವಿ ॥ ... ವಿಹಂಗಮಮಿದೆಂದೇಕಬ್ಬ ನೀಮೇಳಿಪಿರ್ ೪
(ಕಾವ್ಯಾವಲೋಕನಂ ೩೧೮)

ಕಂ ॥ ದೇವಾಸುರಮಂ ಕೇಳ್ದಿರೆ
ದೇವ ... ೫

ಚಂ ॥ ಮಾ ॥ ಅಱಿಯಿರೆ ನೀಮುಮಾಮುಮೊಡನೋದಿದೆವೆಂಬುದನಣ್ಣ ... ೬
(ವಿಕ್ರಮಾರ್ಜುನ ವಿಜಯಂ ೨-೪೮)

ನಿಜಧಾತುಗೆ -

ಉ ॥ ಮಾ ॥ ಪಾಡೆಲೆ ತುಂಬಿ ಬಗ್ಗಿಸೆಲೆ ಕೋಗಿಲೆ ತೀಡೆಲೆ ಗಂಧವಾಹ ... ೭

ಧಾತುವಿನತ್ವಕ್ಕೆ -

ಉ ॥ ಮಾ ॥ ಬಾರ ಮರಾಳಿಕಾಗಮನೆ ನೋಡ ಚಕೋರವಿಲೋಲನೇತ್ರೆ ನಿಂ ।
ದಾರಯ ಪೀವರಸ್ತನನಿತಂಬಭರಾಲಸೆ ಕೇಳ ಕಾಮಕಾ ॥
ಳೋರಗ ಕೇಶಪಾಶೆ ಎನಗುತ್ತರಮಂ ಕುಡ ಚಾರುವೇಣುವೀ ।
ಣಾರವೆ ನೀನದಾರ ಮಗಳೆಲ್ಲಿಗೆ ಪೋದಪಯಾವುದಾಶ್ರಯಂ ॥ ೮

**ಸೂತ್ರಂ ॥ ಅಭಿರೂಪದಿನಾ ಪ್ರಥಮಾ ।**
**ವಿಭಕ್ತಿ ಲಿಂಗಾರ್ಥವಚನಸಂಬೋಧನದೊಳ್ ॥**
**ಪ್ರಭವಿಪ್ಪುದಾ ದ್ವಿತೀಯಾ ।**
**ವಿಭಕ್ತಿ ಕರ್ಮದೊಳನಾಕುಳಂ ವರ್ತಿಸುಗುಂ ॥ ೧೨೬ ॥**

**ಟೀಕೆ -** ಅಭಿರೂಪದಿಂ = ಅಭಿವ್ಯಕ್ತವಾದ ರೂಪದಿಂದೆ, ಆ ಪ್ರಥಮಾವಿಭಕ್ತಿ = ಆ ಪ್ರಥಮೆಯೆಂಬ ವಿಭಕ್ತಿ, ಲಿಂಗ = ಲಿಂಗದಲ್ಲಿ, ಅರ್ಥ = ಅರ್ಥದಲ್ಲಿ, ವಚನ = ವಚನದಲ್ಲಿ, ಸಂಬೋಧನದೊಳ್ = ಸಂಬುದ್ಧಿಯಲ್ಲಿ, ಪ್ರಭವಿಪ್ಪುದು = ಹುಟ್ಟಿರ್ಪುದು; ಆ ದ್ವಿತೀಯಾ ವಿಭಕ್ತಿ = ಆ ದ್ವಿತೀಯೆಯೆಂಬ ವಿಭಕ್ತಿ, ಕರ್ಮದೊಳ್ = ಕರ್ಮದಲ್ಲಿ, ಅನಾಕುಳಂ = ವ್ಯಾಕುಳವಿಲ್ಲದುದಾಗಿ, ವರ್ತಿಸುಗುಂ = ವರ್ತಿಸುವುದು.

**ವೃತ್ತಿ -** ಲಿಂಗದೊಳಂ ಅರ್ಥದೊಳಂ ವಚನಮಾತ್ರದೊಳಂ ಸಂಬೋಧನೆಯೊಳಂ ಪ್ರಥಮಾವಿಭಕ್ತಿಯಕ್ಕುಂ. ಲಿಂಗಮೆಂಬುದು ವಸ್ತುವಿನ ಕುಱುಪಂ ಪೇೞ್ವುದು; ಅರ್ಥಮೆಂಬುದು ಭಾವವಿಶೇಷಮಂ ಪೇೞ್ವುದು; ವಚನಮಾತ್ರಮೆಂಬುದು ಗಣನೆಯಂ ಪೇೞ್ವುದು; ಸಂಬೋಧನೆಯೆಂಬುದು ಅಭಿಮುಖೀಕರಣಮಂ ಪೇೞ್ವುದು.

**ಪ್ರಯೋಗಂ -**

ಲಿಂಗಕ್ಕೆ -

ಇಂದ್ರಂ, ಚಂದ್ರಂ, ಮನುಷ್ಯಂ; ಗೋಮಿನಿ, ಕಾಮಿನಿ; ಆನೆ, ಕುದುರೆ, ಮರಂ, ಗಿಡು, ಪಕ್ಕಿ, ಮಿಗಂ.

ಅರ್ಥಕ್ಕೆ -

ನಿಡಿಯಂ, ಗುಜ್ಜಂ, ಕೆಂಚಂ, ಕರಿಯಂ, ಅಸಿಯಂ, ಇನಿಯಂ.

ವಚನಕ್ಕೆ -

ಒಂದು, ಎರಡು, ಮೂಱು; ಒರ್ವಂ, ಇರ್ವರ್, ಮೂವರ್.

ತೃತೀಯಾರ್ಥದ ಕರ್ತೃವಿನೊಳಂ ಪ್ರಥಮೆಯಕ್ಕುಂ -

ಅವಂ ಮಾಡಿದಂ, ಅವನಿಂ ಮಾಡೆಪಟ್ಟುದು.

ಸಂಬೋಧನೆಗೆ -

ಎಲೆ ದೇವ ರಕ್ಷಿಸು.

ಕಂ ॥ ನೀನುಳ್ಳೊಡುಂಟು ರಾಜ್ಯಂ ।
ನೀನುಳ್ಳೊಡೆ ಪಟ್ಟಮುಂಟು ಪೀಟಿಗೆಯುಂಟಯ್ ॥
ನೀನುಳ್ಳೊಡುಂಟು ಬೆಳ್ಗೊಡೆ ।
ನೀನಿಲ್ಲದಿವೆಲ್ಲಮೊಳವೆ ಭಾನುತನೂಜಾ ॥ ೧

(ಸಾಹಸಭೀಮವಿಜಯಂ ೫-೨೦)

ಉ ॥ ಮಾ ॥ ನಲ್ಲಳೆ ನಿನ್ನ ಕಾಲ್ವಿಡಿದಪೆಂ ತಿಳಿ ಮೋಸಮಿದೇಕೆ ... ೨

ಸ್ತಂಭ ಕುಂಭಾದಿ ಜಡವಸ್ತುಗಳೊಳಂ ದೇವತಾಪ್ರತಿಮೆಯೊಳಂ [1]ಲೋಕಾಂತರದೊಳಂ ಆತ್ಮೀಯಚಿತ್ತದೊಳಂ ಅಭಿಮುಖೀಕರಣಮುಪಚಾರಂ -

ಎಲೆ ಕನ್ನಡಿ ಕಳಸಮೆ ಕಥೆಯಂ ಕೇಳ್ದಿರೆ ೩

ಮ ॥ ವಿ ॥ ತಳಿರೇ ತಾವರೆಯೇ ಮದಾಳಿಕುಲಮೇ ಕರ್ನೆಯ್ದಿಲೇ ಮತ್ತಕೋ
ಕಿಳಮೇ ಕಂಡಿರೆ ಪಲ್ಲವಾಧರೆಯಂ ... ೪

(ರಾಮಚಂದ್ರಚರಿತಪುರಾಣಂ ೯-೧೧೮)

ಕಂ ॥ ... ಎಲೆ ಸರ್ವೇಶ ನಿನ್ನ ನಿಜಮಂ ತೋಱಾ ೫

ಮ ॥ ವಿ ॥ ... ಆವ ಜಗಮಂ ನೀಂ ಸಾಧಿಸಲ್ ಪೋದೆ ಪೇ
ೞೆಲೆ ವಿದ್ಯಾಧರಚಕ್ರವರ್ತಿ ... ೬

ಕಂ ॥ ಸೈರಿಸು ಹೃದಯಮೆ ಸೈರಿಸು ... ೭

ಆವುದು ಮಾಡಲ್ಪೇಡಿದುದದುವೆ ಕರ್ಮಂ; ಅದಱೊಳ್ ದ್ವಿತೀಯಾವಿಭಕ್ತಿ ವರ್ತಿಸುಗುಂ.

ಕರ್ತೃಕರ್ಮಕ್ಕುದಾಹರಣೆ -

ಮ ॥ ವಿ ॥ ಪಡೆದಂ ಪದ್ಮಜನೀ ಜಗತ್ತ್ರಿತಯಮಂ ... ೮

~~~~~~~~~~~~~~~~~~~

೧. (ಲೋಕಾಂತರಿತರೊಳಂ)
~~~~~~~~~~~~~~~~~~~

**ಸೂತ್ರಂ ॥ ಪ್ರವಿದಿತ ತತ್ಕರ್ಮಂ ಕ ।**
**ರ್ತೃವಿನೀಪ್ಸಿತತಮಪದಾರ್ಥಮದು ನಾಲ್ಕುಂ ಭೇ ।**
**ದವನಾಳ್ದಿರ್ಕುಂ [1]ನಿರ್ವ ।**
**ರ್ತ್ಯ ವಿಕಾರ್ಯಂ ಪ್ರಾಪ್ಯಮೆತ್ತಲುಂ ವೈಷಯಿಕಂ ॥ ೧೨೭ ॥**

**ಟೀಕೆ** - ಪ್ರ = ವಿಶೇಷವಾಗಿ, ವಿದಿತ = ಪ್ರಸಿದ್ಧವಾದ, ತತ್ಕರ್ಮಂ = ಆ ಕರ್ಮಂ, ಕರ್ತೃವಿನ = ಮಾಡುವಾತನ, ಈಪ್ಸಿತತಮ ಪದಾರ್ಥಂ = ಇಚ್ಛೈಸಲ್ಪಟ್ಟ ಪದಾರ್ಥಂ; ಅದು = ಆ ಕರ್ಮಂ, ನಿರ್ವರ್ತ್ಯ = ನಿರ್ವರ್ತ್ಯಮೆಂದು, ವಿಕಾರ್ಯಂ = ವಿಕಾರ್ಯಮೆಂದು, ಪ್ರಾಪ್ಯಂ = ಪ್ರಾಪ್ಯಮೆಂದು, ಎತ್ತಲುಂ = ಎಲ್ಲಿಯುಂ, ವೈಷಯಿಕಂ = ವೈಷಯಿಕಮೆಂದು, ನಾಲ್ಕುಂ ಭೇದವಂ = ನಾಲ್ಕೂ ಭೇದವಂ, ಆಳ್ದು = ತಾಳ್ದು, ಇರ್ಕುಂ = ಇರ್ಪುದು.

**ವೃತ್ತಿ** - ಆ ಕರ್ಮಂ ಮಾಡುವನ ಇಷ್ಟಮಪ್ಪ ವಸ್ತು; ಅದು ನಿರ್ವರ್ತ್ಯಮೆಂದುಂ ವಿಕಾರ್ಯಮೆಂದುಂ ಪ್ರಾಪ್ಯಮೆಂದುಂ ವೈಷಯಿಕಮೆಂದುಂ ನಾಲ್ಕು ತೆಱನಪ್ಪುದು. ನಿರ್ವರ್ತ್ಯಮೆಂದು ನಿರ್ವಾಹಮನೆಯ್ದುವುದು; ವಿಕಾರ್ಯಮೆಂದು ರೂಪಾಂತರಮನೆಯ್ದುವುದು; ಪ್ರಾಪ್ಯಮೆಂದು ಎಯ್ದಲ್‌ಪಡುವುದು; ವೈಷಯಿಕಮೆಂದು ನಯನಾದಿಗೆ ವಿಷಯಮಪ್ಪುದು.

**ಪ್ರಯೋಗಂ** -

ಕರ್ಮಕ್ಕೆ -

ತುಡುಗೆಯಂ ತೊಟ್ಟಂ; ಪೂವಂ ಮುಡಿದಂ.

ನಿರ್ವರ್ತ್ಯಕ್ಕೆ -

ಮನೆಯಂ ಮಾಡಿದಂ; ಕಾವ್ಯಮಂ ಪೇಟ್ದಂ.

ವಿಕಾರ್ಯಕ್ಕೆ -

ಪಱುವಂ ಕಡಿದಂ; ಕಾಯಂ ಪೋೞ್ದಂ.

ಪ್ರಾಪ್ಯಕ್ಕೆ -

ಊರನೆಯ್ದಿದಂ; ಮರನಂ ಸಾರ್ದಂ.

ವೈಷಯಿಕಕ್ಕೆ -

ನೇಸಱಂ ನೋಡಿದಂ; ಗೀತಮಂ ಕೇಳ್ದಂ; ನಲ್ಲಳನಪ್ಪಿದಂ; ರಸಮಂ ಪೀರ್ದಂ; ಪೂವಂ ಮೂಸಿದಂ.

**ಸೂತ್ರಂ ॥ ತೊಡರ್ದಿಪ್ಪಾನಿಷ್ಟದೊಳೆಡೆ ।**
**[2]ಯುಡುಗದ ಕಾಲಾಧ್ವದೊಳ್ ದ್ವಿತೀಯೆಯ ಮತ್ತಂ ॥**
**ನುಡಿಗುಂ ತೃತೀಯೆ [3]ಪೇೞ ।**
**ಲ್ಪಡುಗುಂ ಸಲೆ ಕರ್ತೃಕರಣಹೇತುಸ್ಥಿತಿಯೊಳ್ ॥ ೧೨೮ ॥**

~~~~~~~~~~~~~~~~~~~~

೧. (ನಿರ್ವ । ರ್ತ್ಯ ವಿಕಾರ್ಯ ಪ್ರಾಪ್ಯ ವೈಷಯಿಕಮೆಂದತ್ತಂ) ೨. (ಯುಡುಗದ)
೩. [illegible]
~~~~~~~~~~~~~~~~~~~~

**ಟೀಕೆ** – ಮತ್ತಂ = ಮತ್ತೆಯುಂ, ದ್ವಿತೀಯೆಯೆ = ದ್ವಿತೀಯಾ ವಿಭಕ್ತಿಯೆ, ಇಷ್ಟ = ಇಷ್ಟದಲ್ಲಿ, ಅನಿಷ್ಟ = ಅನಿಷ್ಟದಲ್ಲಿ, ತೊಡರ್ದು = ಪೊರ್ದುಗೆಯಾಗಿ, ಎಡೆಯುಡುಗದ = ಎಡೆಬಿಡದ, ಕಾಲ = ಕಾಲದಲ್ಲಿ, ಅಧ್ವದೊಳ್ = ಪಥದಲ್ಲಿ, ನುಡಿಗುಂ = ನುಡಿವುದು; ತೃತೀಯೆ = ತೃತೀಯಾ ವಿಭಕ್ತಿ, ಸಲೆ = ಚೆನ್ನಾಗಿ, ಕರ್ತೃ = ಕರ್ತೃವಿನಲ್ಲಿ, ಕರಣ = ಕರಣದಲ್ಲಿ , ಹೇತುಸ್ಥಿತಿಯೊಳ್ = ಹೇತುವಿನ ಸ್ಥಿತಿಯಲ್ಲಿ, ಪೇೞಲ್ಪಡುಗುಂ = ಪೇೞಲ್ಪಡುವುದು.

**ವೃತ್ತಿ** - ಇಷ್ಟದೊಳಂ ಅನಿಷ್ಟದೊಳಂ ಕಾಲದೊಳಂ ಅಧ್ವದೊಳಂ ಎಡೆವಱಿಯದೆ ದ್ವಿತೀಯೆಯಕ್ಕುಂ; ಕರ್ತೃವಿನೊಳಂ ಕರಣದೊಳಂ ಹೇತುವಿನೊಳಂ ತೃತೀಯೆಯಕ್ಕುಂ.

**ಪ್ರಯೋಗಂ** –

ಇಷ್ಟಕ್ಕೆ -

ನೇವಳಮಂ ತೆಗೆದಂ.

ಅನಿಷ್ಟಕ್ಕೆ -

ಪಾವಂ ದಾಂಟಿದಂ.

ಕಾಲಕ್ಕೆ -

ಅಱುದಿಂಗಳಂ ತಳ್ವಿದಂ, ಉಪವಾಸದಿಂ ತ್ರಿರಾತ್ರಮನಿರ್ದಂ, ಜಾವಮಂ ತೊೞಲ್ದಂ.

ಅಧ್ವಕ್ಕೆ -

ಅರೆಗಾವುದಮಂ ಪರಿದಂ, ಮೂಗಾವುದಮಂ ನಡೆದಂ.

ದೋಹನಾದಿಗಳೊಳ್ ದ್ವಿಕರ್ಮಕಮುಂಟು -

ಗುರುವಂ ಜ್ಞಾನಮಂ ಬೆಸಗೊಂಡಂ, ದಾನಿಯಂ ದಾನಮಂ ಬೇಡಿದಂ, ಪಶುವಂ ಪಾಲಂ ಕಱೆದಂ.

ತೃತೀಯೆಯ ಕರ್ತೃವಿಂಗೆ -

ಪದಕಮಕ್ಕಸಾಲೆಯಿಂ ಮಾಡೆಪಟ್ಟುದು. ಕಾವ್ಯಮೆನ್ನಿಂ ಪೇೞೆಪಟ್ಟುದು.

ಕರಣಕ್ಕೆ -

ಕೊಡಲಿಯಿಂ ಕಡಿದಂ, ಗದೆಯಿಂ ಮೋದಿದಂ, ಕಣ್ಣಿಂ ನೋಡಿದಂ.

ಹೇತುವಿಂಗೆ - ಓಲಗದಿಂ ಪಡೆದಂ, ತಗಹಿಂ ಸಿಲ್ಕಿದಂ, ದೈವದಿಂ ಬಟ್ಟಂ.

ಸಹಯೋಗದೊಳಮುಂಟು -

ಸಂಗಡದಿಂ ಬಂದಂ.

**ಸೂತ್ರಂ ॥ ನುತ ಸಂಪ್ರದಾನರೂಢಂ ।**
**ಚತುರ್ಥಿಯದು ರುಚಿಯೊಳೀರ್ಷ್ಯೆಯೊಳ್ ಮಚ್ಚರದೊಳ್ ॥**
**ಹಿತದೊಳ್ ಸಂಭೀತಿಯೊಳು ।**
**ನ್ನತಿಯೊಳ್ ಸ್ವಸ್ತ್ಯಾದಿಯೊಳ್ ಸ್ವಭಾವಸ್ಥಿತಿಯೊಳ್ ॥ ೧೨೯ ॥**

**ಪ್ರವಿದಿತ ಹೇತುವಿನೊಳ್ ಸಂ ।**
**ದವನತಿಯೊಳ್ ಪ್ರಾಣ್ಯನಾದರಸ್ಮರಣದೊಳು ॥**
**ದ್ಭವಿಸಿದನೀಪ್ಸಿತದೊಳ್ ಸದೃ ।**
**ಶವೃತ್ತಿಯೊಳ್ ಪ್ರತಿನಿಧಾನದೊಳಮಿಷ್ಟದೊಳಂ ॥ ೧೩೦ ॥**

**ಟೀಕೆ -** ನುತ = ಕೊಂಡಾಡಲ್ಪಟ್ಟ, ಸಂಪ್ರದಾನ = ಸಂಪ್ರದಾನ ಕಾರಕದಲ್ಲಿ, ರೂಢಂ = ರೂಢಿಯುಳ್ಳುದು, ಚತುರ್ಥಿ = ಚತುರ್ಥೀವಿಭಕ್ತಿಯೆನಿಸುವುದು; ಅದು = ಆ ಚತುರ್ಥಿ, ರುಚಿಯೊಳ್ = ರುಚಿಯಲ್ಲಿ, ಈರ್ಷ್ಯೆಯೊಳ್ = ಸೈರಣೆಯಿಲ್ಲದಲ್ಲಿ, ಮಚ್ಚರದೊಳ್ = ಮಚ್ಚರದಲ್ಲಿ, ಹಿತದೊಳ್ = ಹಿತದಲ್ಲಿ, ಸಂಭೀತಿಯೊಳ್ = ಲೇಸಾದ ಭೀತಿಯಲ್ಲಿ, ಉನ್ನತಿಯೊಳ್ = ಪೆರ್ಚುಗೆಯಲ್ಲಿ, ಸ್ವಸ್ತ್ಯಾದಿಯೊಳ್ = ಸ್ವಸ್ತಿಯೆಂಬುದು ಮೊದಲಾದುವಱಲ್ಲಿ, ಸ್ವಭಾವ ಸ್ಥಿತಿಯೊಳ್ = ಸ್ವಭಾವದ ಸ್ಥಿತಿಯಲ್ಲಿ, ಪ್ರ = ವಿಶೇಷವಾಗಿ, ವಿದಿತ = ಪ್ರಸಿದ್ಧವಾದ, ಹೇತುವಿನೊಳ್ = ಕಾರಣದಲ್ಲಿ, ಸಂದವನತಿಯೊಳ್ = ಸಲುವಳಿಯಾದ ನಮಸ್ಕಾರದಲ್ಲಿ, ಪ್ರಾಣಿ = ಪ್ರಾಣಿಗಳಲ್ಲಿ, ಅನಾದರ = ತಿರಸ್ಕಾರದ, ಸ್ಮರಣದೊಳ್ = ನೆನಹಿನಲ್ಲಿ, ಉದ್ಭವಿಸಿದ = ಹುಟ್ಟಿದ, ಅನೀಪ್ಸಿತದೊಳ್ = ಅನಿಚ್ಛೆಯಲ್ಲಿ, ಸದೃಶವೃತ್ತಿಯೊಳ್ = ಸಮಾನವರ್ತನೆಯಲ್ಲಿ, ಪ್ರತಿನಿಧಾನದೊಳಂ = ಪ್ರತಿನಿಧಿಯಲ್ಲಿಯುಂ, ಇಷ್ಟದೊಳಂ = ಇಷ್ಟದಲ್ಲಿಯುಂ ಬರ್ಪುದು.

**ವೃತ್ತಿ -** ಸಂಪ್ರದಾನವೆಂದಾವುದಾನೊಂದು ವಸ್ತುವನೀಯಿಸಿಕೊಳ್ವ ಪಾತ್ರಂ; ಅಲ್ಲಿ ಚತುರ್ಥಿಯಕ್ಕುಂ. ಅದು ರುಚಿ, ಈರ್ಷ್ಯೆ, ಮಚ್ಚರಂ, ಹಿತಂ, ಭೀತಿ, ಉನ್ನತಿ, ಸ್ವಸ್ತ್ಯಾದಿ, ಸ್ವಭಾವಂ, ಕಾರಣಂ, ನಮಸ್ಕಾರಂ, ಪ್ರಾಣ್ಯನಾದರ ಸ್ಮರಣಂ, ಅನಿಷ್ಟಂ, ಸಾದೃಶ್ಯಂ, ಪ್ರತಿನಿಧಿ, ಇಷ್ಟಂ - ಎಂಬಿನಿತಱೊಳ್ ವರ್ತಿಸುಗುಂ.

**ಪ್ರಯೋಗಂ -**

ಸಂಪ್ರದಾನಕ್ಕೆ -

ಬ್ರಾಹ್ಮಣಂಗೆ ಗೋವಂ ಕೊಟ್ಟಂ.

ರುಚಿಗೆ -

ಕೂಸಿಂಗೆ ಲಡ್ಡುಗೆಯಱ್ತು.

ಈರ್ಷ್ಯೆಗೆ -

ಕವಿಗೆ ಕವಿ ಮುನಿವಂ.

ಮಚ್ಚರಕ್ಕೆ -

ಸವತಿಗೆ ಸವತಿ ಪುರುಡಿಪಳ್; ಬಿರುದರ್ಗೆ ಬಿರುದರ್ ಸೆಣಸುವರ್.

ಹಿತಕ್ಕೆ -

ಪಶುವಿಂಗೆ ತೃಣಂ ಹಿತಂ; ರೋಗಿಗೌಷಧಂ ಹಿತಂ.

ಭೀತಿಗೆ -

ಪಾಪಕ್ಕಂಜುಗುಂ ತಕ್ಕಂ.

ವ ॥ [1]ಪುಲಿಗಂಜಿ ಪುತ್ತಮಂ ಪೊಕ್ಕಡರೆ ಪಾವು ಕೊಂದುದು

~~~~~~~~~~~~~~~~~~~

೧. (ಪ. ಪುಲಿಗಂಜಿ ಪುತ್ತನೇಱುದೊಡಲ್ಲಿಯುಮರವಾವು ಕೊಂಡುದು - ಜೀವಸಂಬೋಧನಂ ೨-೩೧ ಪ.)
~~~~~~~~~~~~~~~~~~~

ಉನ್ನತಿಗೆ -

ಲೋಕಕ್ಕೀತನಧಿಕಂ; ಮೇರುವಿಂಗೆ ಈತನಗ್ಗಳಂ.

ಸ್ವಸ್ತ್ಯಾದಿಗೆ -

ಕಂ ॥ ಸವನಿಸುಗೆ ಜಗಕ್ಕೆಲ್ಲಿಯು
ಮವಿಘ್ನಮುಂ ಕ್ಷೇಮವೃತ್ತಿ ಕುಶಲಂ ಭದ್ರಂ
ಭವಿಕಂ ಭವ್ಯಂ ಶ್ರೇಯಂ
ಶಿವಂ ಶುಭಂ ಸ್ವಸ್ತಿ ಮಂಗಳಂ ಕಲ್ಯಾಣಂ ॥ ೨

(ಅಭಿಧಾನವಸ್ತುಕೋಶಂ ೧)

ಸ್ವಭಾವಕ್ಕೆ -

ಸಿಂಹಕ್ಕೆ ಶೌರ್ಯಂ; ಕಪಿಗೆ ಚಪಲತೆ.

ಹೇತುವಿಂಗೆ -

ಸಿರಿಗುದ್ಯೋಗಂ; ಮೞೆಗೆ ಮುಗಿಲ್.

ನಮಸ್ಕಾರಕ್ಕೆ -

ದೇವರ್ಗೆ ಪೊಡಮಟ್ಟಂ; ಗುರುವಿಂಗೆಱಗಿದಂ.

ಪ್ರಾಣ್ಯನಾದರಸ್ಮರಣಕ್ಕೆ -

ಮಾನಸರಂ ಪುಲ್ಗೆ ಕಷ್ಟಮಾಗಿ ನೆನೆವಂ.

ಅನಿಷ್ಟಕ್ಕೆ -

ಆತಂಗೆ ವಿಷಮನಿಕ್ಕಿದಂ; [1]ಆತಂಗೆ ಕತ್ತಿಯಂ ಮಸೆದಂ.

ಸಾದೃಶ್ಯಕ್ಕೆ -

ಆತಂಗೀತಂ ತಕ್ಕಂ; ಐರಾವತಕ್ಕೆ ಸುಪ್ರತೀಕಮೋರಗೆ.

ಪ್ರತಿನಿಧಿಗೆ -

ಜೇನುತುಪ್ಪಕ್ಕೆ ಸಕ್ಕರೆ ಸಲ್ವುದು; ಆ ಕಬ್ಬಕ್ಕೀ ಕಬ್ಬಮಾಯ್ತು.

ಇಷ್ಟಕ್ಕೆ -

ಭಕ್ತಂಗೆ ವರಮನಿತ್ತಂ; ಕೆಳೆಯಂಗೆ ಸಂತಸಮಂ ಮಾಡಿದಂ.

**ಸೂತ್ರಂ ॥ ಆದಂ ಪಂಚಮಿಯಪ್ಪುದ ।**
**ಪಾದಾನಸ್ಥಲದೊಳದೆ ದಲೊದವುಗುಮಾತಂ ॥**
**ಕಾದಾನೇಪ್ಸಾನಿಷ್ಪಾ ।**
**[2]ಪಾದಿತ ಹೇತುವಿನೊಳುದಯದೊಳ್ ಗೌರವದೊಳ್ ॥ ೧೩೧ ॥**

**ಟೀಕೆ** - ಅಪಾದಾನ ಸ್ಥಲದೊಳ್ = ಅಪಾದಾನ ಕಾರಕಸ್ಥಲದಲ್ಲಿ, ಆದಂ = ಆದಮೆಂಬ ಪೀನಗ್ರಹಣದಿಂದೆ, ಪಂಚಮಿಾ = ಪಂಚಮೀ ವಿಭಕ್ತಿ, ಅಪ್ಪುದು = ಆಗುವುದು; ಅದೆ = ಆ ಪಂಚಮಿಯೆ, ದಲ್ = ನಿಶ್ಚಯವಾಗಿ, ಆತಂಕ = ಭಯದಲ್ಲಿ, ಆದಾನ = ಸ್ವೀಕಾರದಲ್ಲಿ, ಇಷ್ಟ = ಇಷ್ಟದಲ್ಲಿ, ಅನಿಷ್ಟ = ಇಷ್ಟವಲ್ಲದುದಱಲ್ಲಿ, ಆಪಾದಿತ = ಪ್ರತಿಪಾದಿಸಲ್ಪಟ್ಟ, ಹೇತುವಿನೊಳ್ = ಕಾರಣದಲ್ಲಿ, ಉದಯದೊಳ್ = ಜನನದಲ್ಲಿ, ಗೌರವದೊಳ್ = ಗುರುತ್ವದಲ್ಲಿ, ಒದವುಗುಂ = ಬರ್ಪುದು.

**ವೃತ್ತಿ** - ಅಪಾದಾನಮೆಂದಾವುದಾನುಮೊಂದಱಿಂ ತೊಲಗುವುದು; ಅಲ್ಲಿ ಪಂಚಮಿಯಕ್ಕುಂ. ಆ ಪಂಚಮಿ ಭಯಂ, ಸ್ವೀಕಾರಂ, ಇಷ್ಟಂ, ಅನಿಷ್ಟಂ, ಹೇತು, ಉದಯಂ, ಗುರುತ್ವವೆಂಬಿನಿತಱೊಳಂ ವರ್ತಿಸುಗುಂ.

**ಪ್ರಯೋಗಂ** -

ಅಪಾದಾನಕ್ಕೆ -

ಮರದತ್ತಣಿಂ ಪಣ್ಣುದಿರ್ದುದು. ಕೆಱೆಯತ್ತಣಿಂ ಬಂದಂ.

ಆತನಿಂ ಪಿರಿಯನೆಂಬಂತಪ್ಪವಱೊಳಪಾದಾನಮಂ ಮಱೆಮಾಡಿ ವಿಕಲ್ಪಿಸುವರ್-

ಕೃಷ್ಣನಿಂ ಪಿರಿಯಂ ಬಲಭದ್ರಂ; ದುರ್ಯೋಧನನಿಂ ಕಿಱಿಯಳ್ ದುಶ್ಶಳೆ ಎಂಬಂತೆ.

ಭಯಕ್ಕೆ -

ಅರಸನತ್ತಣಿಂ ದಾಱಿ ಬಂದುದು; ಹುಲಿಯತ್ತಣಿಂದಂಜಿದೆಂ.

ಸ್ವೀಕಾರಕ್ಕೆ -

ಸ್ವಾಮಿಯತ್ತಣಿಂ ನಿರ್ವಾಹಮಾದುದು.

ಇಷ್ಟಕ್ಕೆ -

ರಂಭೆಯತ್ತಣಿಂ ಸುಖಂ ಪ್ರಾಪ್ತಿಸಿದುದು.

ಅನಿಷ್ಟಕ್ಕೆ -

ಪಗೆಯತ್ತಣಿಂ ಬಂಧನಂ ಬಂದುದು.

ಹೇತುವಿಂಗೆ -

ಉದ್ಯೋಗದತ್ತಣಿಂ ಸಿರಿ ಬಂದುದು.

ಉದಯಕ್ಕೆ -

ಸದ್ವಂಶದತ್ತಣಿಂ ಪುಟ್ಟಿದಂ.

ಪೆರ್ಮೆಗೆ -

ಕೃಷ್ಣನತ್ತಣಿಂ ಬಲಭದ್ರಂ ಪಿರಿಯಂ.

**ಸೂತ್ರಂ ॥ ಪತಿ ಕುಲ ಜಾತ್ಯವಯವ ವಿ ।**
**ಶ್ರುತ ಲಕ್ಷಣ ಸನ್ನಿಧಾನ ಸಂಸ್ಪರ್ಶ ಸಮಾ ॥**
**ಗತ ಸಂಬಂಧದೊಳಂ ತ ।**
**ದ್ಗತ ಸಂಬಂಧದೊಳಮುಂಟು ಷಷ್ಠಿಗೆ ಯೋಗಂ ॥ ೧೩೨ ॥**

**ಟೀಕೆ** - ಪತಿ = ಸ್ವಾಮಿಯಲ್ಲಿ, ಕುಲ = ಕುಲದಲ್ಲಿ, ಜಾತಿ = ಜಾತಿಯಲ್ಲಿ, ಅವಯವ = ಅವಯವದಲ್ಲಿ, ವಿಶ್ರುತ = ಪ್ರಸಿದ್ಧವಾದ, ಲಕ್ಷಣ = ಲಕ್ಷಣದಲ್ಲಿ, ಸನ್ನಿಧಾನ = ಸನ್ನಿಧಿಯಲ್ಲಿ, ಸಂ = ಲೇಸಾದ, ಸ್ಪರ್ಶ = ಸ್ಪರ್ಶನದಲ್ಲಿ, ಸಂ = ಲೇಸಾಗಿ, ಆಗತ = ಬಂದುದಾದ, ಸಂಬಂಧದೊಳಂ = ಸಂಬಂಧದಲ್ಲಿಯುಂ, ತತ್ = ಆ ಸಂಬಂಧದಲ್ಲಿ, ಗತ = ಎಯ್ದಲ್ಪಟ್ಟ, ಸಂಬಂಧದೊಳಂ = ಸಂಬಂಧದಲ್ಲಿಯುಂ, ಷಷ್ಠಿಗೆ = ಷಷ್ಠೀವಿಭಕ್ತಿಗೆ, ಯೋಗಂ = ಕೂಟಂ, ಉಂಟು = ಉಂಟಾಗಿರ್ಪುದು.

**ವೃತ್ತಿ** - ಸಂಬಂಧದೊಳ್ ಷಷ್ಠಿಯಕ್ಕುಂ. ಅದು ಸ್ವಾಮಿಸಂಬಂಧಂ, ಕುಲಸಂಬಂಧಂ, ಜಾತಿಸಂಬಂಧಂ, ಅವಯವಸಂಬಂಧಂ, ಲಕ್ಷಣಸಂಬಂಧಂ, ಸನ್ನಿಧಾನಸಂಬಂಧಂ, ಸಂಸ್ಪರ್ಶಸಂಬಂಧಂ, ಸಂಬಂಧದ ಸಂಬಂಧವೆಂಬಿನಿತಱೊಳಮಕ್ಕುಂ.

**ಪ್ರಯೋಗಂ** -

ಸ್ವಾಮಿಸಂಬಂಧಕ್ಕೆ -

ಊರೊಡೆಯಂ; ನಾಡೆಱೆಯಂ.

ಕುಲಸಂಬಂಧಕ್ಕೆ -

ಎಮ್ಮ ಸೊಮ್ಮು; ಎಮ್ಮ ಮೊಱೆ; ಎಮ್ಮಳಿಯಂ; ಎಮ್ಮ ತಮ್ಮಂ.

ಜಾತಿಗೆ -

ಆನೆಯ ಘಟೆ; ಕುದುರೆಯ ಥಟ್ಟು; ಗಿಳಿಯ ಪಿಂಡು.

ಅವಯವಕ್ಕೆ - ಮರದ ಕೊಂಬು; ಪೂವಿನೆಸಳ್; ಕೊಡೆಯ ಕಾವು.

ಕುಱುಪಿಂಗೆ -

ಟೊಪ್ಪಿಗೆಯ ಮಾನಸಂ; ಕತ್ತಳದ ರಾವುತಂ; ಸಿಂದದ ಕುದುರೆ.

ಸನ್ನಿಧಾನಕ್ಕೆ -

ಕೆಱೆಯ ಕೋಡಿ; ಊರ ಮುಂದು; ಅದಱ ಕೆಲಂ.

ಸಂಸ್ಪಶಕ್ಕೆ -

ಕಳಸದ ತಳಿರ್; ನೀರ ಹಾವಸೆ; ತೋಳ ಬಂದಿ.

ಸಂಬಂಧದ ಸಂಬಂಧಕ್ಕೆ -

ನೊಸಲ ಕಣ್ಣ ದೇವಂ; ತೋಳ ಬಾಳ ಕಾಂತಿ; ಹರಿಯ ಪೊಕ್ಕುಳ ತಾವರೆ.

ಮತ್ತಂ ಶೇಷದೊಳಂ ವಸ್ತುವಿಕಾರದೊಳಮುಂಟು -

ಶೇಷಕ್ಕೆ -

ಬಳ್ಳದಱು; ಅದಱ [ಮು]ಱು

ವಸ್ತುವಿಕಾರಕ್ಕೆ -

ಪೊನ್ನ ಕೋಲ್.

ಎಲ್ಲಾ ವಿಭಕ್ತಿಗಳುಂ ಷಷ್ಠೀಗತಮಾದುವಾಗಿ ಸಂಬಂಧಮೆಂಬರ್.

**ಸೂತ್ರಂ ॥ ಧೀರರಿನಾವುದು ತಾನಾ ।**
**ಧಾರಮದಧಿಕರಣಮಲ್ಲಿ ಸಪ್ತಮಿ ತಿಳಿ ನಿ ॥**
**ರ್ಧಾರಣ ವಿಷಯ ವ್ಯಾಪಕ ।**
**ಸಾರ ವ್ಯವಹಾರ ಕಾಲ ಸತ್ಯರ್ಥಗತಂ ॥ ೧೩೩ ॥**

**ಟೀಕೆ** - ಧೀರರಿಂ = ವಿದ್ವಾಂಸರಿಂದೆ, ಆಧಾರಂ, ತಾಂ, ಆವುದು, ಅದು, ಅಧಿಕರಣಂ = ಅಧಿಕರಣ ಕಾರಕವೆನಿಸುವುದು; ಅಲ್ಲಿ = ಆ ಅಧಿಕರಣ ಕಾರಕದಲ್ಲಿ, ಸಪ್ತಮಿ = ಸಪ್ತಮೀವಿಭಕ್ತಿ ಬರ್ಪುದು; ತಿಳಿ = ಅಱಿ; ನಿರ್ಧಾರಣ = ನಿರ್ಧಾರಣದಲ್ಲಿ, ವಿಷಯ = ವಿಷಯದಲ್ಲಿ, ವ್ಯಾಪಕ = ವ್ಯಾಪಕದಲ್ಲಿ, ಸಾರ = ಶ್ರೇಷ್ಠವಾದ, ವ್ಯವಹಾರ = ವ್ಯವಹಾರದಲ್ಲಿ, ಕಾಲ = ಕಾಲದಲ್ಲಿ, ಸತ್ಯರ್ಥ = ಸತಿಸಪ್ತಮಿಯರ್ಥದಲ್ಲಿ, ಗತಂ = ಎಯ್ದಲ್ಪಡುವುದು.

**ವೃತ್ತಿ** - ಆವುದಾಧಾರಮದು ಅಧಿಕರಣಂ; ಅಲ್ಲಿ ಸಪ್ತಮಿಯಕ್ಕುಂ. ಅದು ನಿರ್ಧಾರಣದೊಳಂ ವಿಷಯದೊಳಂ ವ್ಯಾಪಕದೊಳಂ ವ್ಯವಹಾರದೊಳಂ ಕಾಲದೊಳಂ ಸತ್ಯರ್ಥದೊಳಂ ವರ್ತಿಸುಗುಂ.

**ಪ್ರಯೋಗಂ** -

ಅಧಿಕರಣಕ್ಕೆ -

ಪಾಸಿನೊಳ್ ನಿದ್ರೆಗೆಯ್ದಂ; ಪಱುಗೋಲೊಳ್ ಕುಳ್ಳಿರ್ದಂ.

ನಿರ್ಧಾರಣಮೆಂಬುದು ಗುಣಮೆಂಬ ಕ್ರಿಯೆಯೆಂಬ ಎರಡಱಿಂ ಜಾತಿಯತ್ತಣಿಂ ವಸ್ತುವಂ ಬೇರ್ಕೆಯ್ವುದು.

ಗುಣಕ್ಕೆ -

ದೇವರೊಳ್ ನಿರ್ದೋಷಿಯಾಪ್ತಂ; ರತ್ನಂಗಳೊಳ್ ಮಾಣಿಕ್ಯಮುತ್ತಮಂ.

ಕ್ರಿಯೆಗೆ -

ಪರಿಕಾಱರೊಳೀತಂ ಕಾಲ್ವಲ್ಲಿದಂ; ಕಾದುವರೊಳೀತಂ ಮೆಯ್ಗಲಿ.

ವಿಷಯಕ್ಕೆ -

ಕಿವಿಯೊಳ್ ಪರ್ಚಿದಂ; ಮೊಗದೊಳ್ ಮೆಲ್ದಂ.

ವ್ಯಾಪಕಕ್ಕೆ -

ಪೂವಿನೊಳ್ ಕಂಪು; ಕರ್ವಿನೊಳ್ ರಸಂ; ಎಳ್ಳೊಳ್ ಎಣ್ಣೆ.

ವ್ಯವಹಾರಕ್ಕೆ -

ತಪದೊಳ್ ನೆಗಟ್ದಂ; ವೀರದೊಳೆಸೆದಂ.

ಕಾಲಕ್ಕೆ -

ವಸಂತದೊಳ್ ಮಾವು ಬಂದುದು; ಶರದದೊಳ್ ದಿಗ್ವಿಜಯಮುಚಿತಂ.

ಸತ್ಯರ್ಥಕ್ಕೆ -

ಬರ್ಪ್ಪೆಡೆಯೊಳ್ಕಂಡಂ (ಬರೆ ಕಂಡಂ)

**ಸೂತ್ರಂ ॥ ಇಂತೀ ಪೇೞ್ದ ವಿಭಕ್ತಿಗ ।**
**ಳೆಂತುಂ ಪಲ್ಲಟಿಸುಗುಂ ಯಥೇಷ್ಟಂ ಪ್ರಥಮಾ ॥**
**ರ್ಥಂ ತೋಱೆಯುಂ ದ್ವಿತೀಯಾ ।**
**ರ್ಥಂ ತೋಱೆಯುಮಲ್ಲಿ ಷಷ್ಠಿ ದೊರೆಕೊಂಡಿರ್ಕುಂ ॥೧೩೪॥**

**ಟೀಕೆ** - ಇಂತು = ಹೀಗೆ, ಈ ಪೇೞ್ದ ವಿಭಕ್ತಿಗಳ್ = ಈ ಪೇೞ್ದ ಸಪ್ತವಿಭಕ್ತಿಗಳ್, ಯಥೇಷ್ಟಂ = ಇಚ್ಛೆ ಬಂದ ಹಾಗೆ, ಎಂತುಂ = ಹೇಗೆಯಾದೊಡಂ, ಪಲ್ಲಟಿಸುಗುಂ = ಪಲ್ಲಟವಾಗುವುವು; ಪ್ರಥಮಾರ್ಥಂ = ಪ್ರಥಮಾವಿಭಕ್ತಿಯರ್ಥಂ, ತೋಱೆಯುಂ = ಕಾಣಿಸೆಯುಂ, ದ್ವಿತೀಯಾರ್ಥಂ = ದ್ವಿತೀಯಾ ವಿಭಕ್ತಿಯರ್ಥಂ, ತೋಱೆಯುಂ = ಕಾಣಿಸೆಯುಂ, ಅಲ್ಲಿ = ಆ ಸ್ಥಾನದಲ್ಲಿ, ಷಷ್ಠಿ = ಷಷ್ಠೀವಿಭಕ್ತಿ, ದೊರೆಕೊಂಡಿರ್ಕುಂ = ಬಂದಿರ್ಪುದು.

**ವೃತ್ತಿ** - ಈ ಪೇೞ್ದ ವಿಭಕ್ತಿಗಳ್ ಯಥಾಸಂಭವದಿನೆಂತಾದೊಡಂ ಪಲ್ಲಟಿಪುವು; ಅಲ್ಲಿ ಪ್ರಥಮಾರ್ಥದೊಳಂ ದ್ವಿತೀಯಾರ್ಥದೊಳಂ ಷಷ್ಠಿಯಕ್ಕುಂ.

**ಪ್ರಯೋಗಂ** -

ಪ್ರಥಮಾರ್ಥದ ಷಷ್ಠಿಗೆ -

ಸ್ವಾಗತ ॥ ... ನಿ
ಶ್ಶಂಕೆಯಿಂ ನೃಪನ ಪೇೞೆ ... ೧
(ಕಾವ್ಯಾವಲೋಕನಂ ೧೨೨)

ಕಂ ॥ ... ಚಿತ್ತಭವಗ್ರಹದ ಸೋಂಕೆ ಸುಜನೋತ್ತಂಸಾ ॥ ೨
(ನೀತಿಕಂದಂ? )

ನೃಪಂ ಪೇೞೆ, ಗ್ರಹಂ ಸೋಂಕೆ - ಎಂದಿವರ್ಕರ್ಥಂ.

ದ್ವಿತೀಯಾರ್ಥದ ಷಷ್ಠಿಗೆ -

ಕಂ ॥ ... ಎಲವೋ ನೀನೆನ್ನ ಕೊಂದೆ ಕಾಲ್ವಿಡಿದಪೆಯೋ ... ೩

ಮ ॥ ವಿ ॥ ... ತೆಂಕನಾಡ ಮಱೆಯಲ್ಕೆಂದುಂ ಮನಂ ಬರ್ಕುಮೇ ॥ ೪
(ವಿಕ್ರಮಾರ್ಜುನ ವಿಜಯಂ ೪-೩೧)

ಎನ್ನಂ ಕೊಂದೆ, ನಾಡಂ ಮಱೆಯಲ್ಕೆಂದಿವರ್ಕರ್ಥಂ.

**ಸೂತ್ರಂ ॥ ಸ್ವಾರ್ಥಂ ಪ್ರಥಮಾರ್ಥ ತೃತೀ ।**
**ಯಾರ್ಥ ಚತುರ್ಥ್ಯರ್ಥದೊಳ್ ದ್ವಿತಿಯೆ ತೃತೀಯೋ ॥**
**ಕ್ತಾರ್ಥದೊಳಾ ಸಪ್ತಮಿಯೆ ಸ ।**
**ಮರ್ಥಂ ಪಂಚಮಿಯೊಳಂ ತೃತೀಯೆ ಸಮರ್ಥಂ ॥ ೧೩೫ ॥**

**ಟೀಕೆ** - ಪ್ರಥಮಾರ್ಥ = ಪ್ರಥಮಾವಿಭಕ್ತಿಯ ಅರ್ಥದಲ್ಲಿ, ತೃತೀಯಾರ್ಥ = ತೃತೀಯಾವಿಭಕ್ತಿಯ ಅರ್ಥದಲ್ಲಿ, ಚತುರ್ಥ್ಯರ್ಥದೊಳ್ = ಚತುರ್ಥೀವಿಭಕ್ತಿಯ ಅರ್ಥದಲ್ಲಿ, ದ್ವಿತೀಯೆ = ದ್ವಿತೀಯಾವಿಭಕ್ತಿ, ಸ್ವಾರ್ಥಂ = ತನ್ನರ್ಥವುಳ್ಳುದಾಗಿರ್ಪುದು: ತೃತೀಯಾ = ತೃತೀಯಾ ವಿಭಕ್ತಿಯಿಂದೆ, ಉಕ್ತ = ಹೇೞಲ್ಪಟ್ಟ, ಅರ್ಥದೊಳ್ = ಅರ್ಥದಲ್ಲಿ, ಆ ಸಪ್ತಮಿಯೆ = ಆ ಸಪ್ತಮೀ ವಿಭಕ್ತಿಯೆ, ಸಮರ್ಥಂ = ಸಮರ್ಥವಾಗಿರುವುದು; ಪಂಚಮಿಯೊಳಂ = ಪಂಚಮೀವಿಭಕ್ತಿಯಲ್ಲಿಯುಂ, ತೃತೀಯೆ = ತೃತೀಯಾವಿಭಕ್ತಿ, ಸಮರ್ಥಂ = ಸಮರ್ಥವಾಗಿರ್ಪುದು.

**ವೃತ್ತಿ** - ಪ್ರಥಮಾರ್ಥದೊಳಂ ತೃತೀಯಾರ್ಥದೊಳಂ ಚತುರ್ಥ್ಯರ್ಥದೊಳಂ ಸಮುಚ್ಚಯದಿಂ ಪಂಚಮ್ಯರ್ಥದೊಳಂ ದ್ವಿತೀಯೆಯಕ್ಕುಂ; ತೃತೀಯಾರ್ಥದೊಳ್ ಸಪ್ತಮಿಯಕ್ಕುಂ; ಪಂಚಮ್ಯರ್ಥದೊಳ್ ತೃತೀಯೆಯಕ್ಕುಂ.

**ಪ್ರಯೋಗಂ** -

ಪ್ರಥಮಾರ್ಥದ ದ್ವಿತೀಯೆಗೆ -

ನುಣ್ಪುಳ್ಳನೆಂಬಲ್ಲಿ ನುಣ್ಪನುಳ್ಳಂ ಎಂದಾಯ್ತು.

ತೃತೀಯಾರ್ಥದ ದ್ವಿತೀಯೆಗೆ -

ದೇವರಂ ಪೂವಿಂದರ್ಚಿಸಿದನೆಂಬಲ್ಲಿ ಪೂವನರ್ಚಿಸಿದಂ ಎಂದಾಯ್ತು.

ಚತುರ್ಥ್ಯರ್ಥದ ದ್ವಿತೀಯೆಗೆ -

ಪೊನ್ನಂ ಬಡ್ಡಿಗೆ ಕೊಟ್ಟನೆಂಬಲ್ಲಿ ಪೊನ್ನಂ ಬಡ್ಡಿಯಂ ಕೊಟ್ಟನೆಂದಾಯ್ತು.

ಪಂಚಮ್ಯರ್ಥದ ದ್ವಿತೀಯೆಗೆ -

ಮಾಣವಕನತ್ತಣಿಂ ಕಾರ್ಯಮಂ ಬೆಸಗೊಂಡನೆಂಬಲ್ಲಿ ಮಾಣವಕನಂ ಕಾರ್ಯಮಂ ಬೆಸಗೊಂಡನೆಂದಾಯ್ತು.

ತೃತೀಯಾರ್ಥದ ಸಪ್ತಮಿಗೆ -

ಕೊಡಲಿಯಿಂ ಕಡಿದನೆಂಬಲ್ಲಿ ಕೊಡಲಿಯೊಳ್ ಕಡಿದನೆಂದಾಯ್ತು; ಗದೆಯಿಂ ಪೊಯ್ದನೆಂಬಲ್ಲಿ ಗದೆಯೊಳ್ ಪೊಯ್ದನೆಂದಾಯ್ತು; ಕಿವಿಯಿಂ ಕೇಳ್ದನೆಂಬಲ್ಲಿ ಕಿವಿಯೊಳ್ ಕೇಳ್ದನೆಂದಾಯ್ತು.

ಪಂಚಮ್ಯರ್ಥದ ತೃತೀಯೆಗೆ -

ಕೆಱೆಯತ್ತಣಿಂ ಬಂದನೆಂಬಲ್ಲಿ ಕೆಱೆಯಿಂ ಬಂದನೆಂದಾಯ್ತು; ಕರಿಶಿರದತ್ತಣಿಂ ಮುತ್ತೊಕ್ಕುವೆಂಬಲ್ಲಿ ಕರಿಶಿರದಿಂ ಮುತ್ತೊಕ್ಕುವೆಂದಾಯ್ತು.

ಮಣಿವಿ ॥ ಮತ್ತಹಸ್ತಿಗಳ ಮಸ್ತಕದಿಂ ಬಿದಿರಿಂ ಫಣೀಂ ।
ದ್ರೋತ್ತಮಾಂಗದಿನಗುರ್ವಿಪ ಪಂದಿಯ ಕೋಟ್ಕಿಳಿಂ ॥
ಪತ್ತುವಿಟ್ಟಗನಿಕಾಯದೊಳೊಕ್ಕೆಳಮುತ್ತನಾ ।
ಯ್ದುತ್ತುಮಿರ್ಪ ಶಬರಪ್ರಿಯಕಾಮಿನಿಯರ್ಕಳಿಂ ॥ ೧

(ಕಾವ್ಯಾವಲೋಕನಂ ೧೧೯)

ಉ ॥ ಮಾ ॥ ... ಆಲಿವರಲ್ಗಳುಮಿಂದ್ರಗೋಪಮುಂ ೨
ಸೂಸಿದುವಭ್ರದಿಂ ...

ಚಂ ॥ ಮಾ ॥ ತಿಳಿಗೊಳದಿಂದೆ ಪಾಱುದುವು ಹಂಸಕುಳಂ ... ೩

**ಸೂತ್ರಂ ॥ ಕೃತಿಯುಕ್ತಂ ಷಷ್ಠಿಯೊಳಂ ।**
**ದ್ವಿತೀಯೆಯೊಳಮಾ ಚತುರ್ಥಿ [1]ಸಪ್ತಮಿಯೊಳೆ ಸಂ ॥**
**ಗತಮಾ ಪ್ರಥಮಾ ಷಷ್ಠೀ ।**
**ಚತುರ್ಥಿಗಳ್ ಪ್ರಥಮೆಯುಂ ದ್ವಿತೀಯೆಯೊಳಕ್ಕುಂ ॥ ೧೩೬ ॥**

**ಟೀಕೆ** - ಷಷ್ಠಿಯೊಳಂ = ಷಷ್ಠೀವಿಭಕ್ತಿಯಲ್ಲಿಯುಂ, ದ್ವಿತೀಯೆಯೊಳಂ = ದ್ವಿತೀಯಾವಿಭಕ್ತಿಯಲ್ಲಿಯುಂ, ಆ ಚತುರ್ಥಿ = ಆ ಪ್ರಸಿದ್ಧವಾದ ಚತುರ್ಥೀವಿಭಕ್ತಿ , ಕೃತಿಯುಕ್ತಂ = ಕಾವ್ಯಯುಕ್ತಂ ಅಪ್ಪುದು; ಸಪ್ತಮಿಯೊಳೆ = ಸಪ್ತಮೀವಿಭಕ್ತಿಯಲ್ಲಿಯೆ, ಆ ಪ್ರಥಮಾ ಷಷ್ಠೀ ಚತುರ್ಥಿಗಳ್ = ಆ ಪ್ರಥಮಾ ವಿಭಕ್ತಿ ಷಷ್ಠೀವಿಭಕ್ತಿ ಚತುರ್ಥೀವಿಭಕ್ತಿಗಳ್, ಸಂಗತಂ = ಸಂಗತಂಗಳ್ ಅಪ್ಪುವು; ದ್ವಿತೀಯೆಯೊಳ್ = ದ್ವಿತೀಯಾವಿಭಕ್ತಿಯಲ್ಲಿ , ಪ್ರಥಮೆಯುಂ = ಪ್ರಥಮಾವಿಭಕ್ತಿಯುಂ, ಅಕ್ಕುಂ = ಅಪ್ಪುದು.

**ವೃತ್ತಿ** - ಷಷ್ಠಿಯೊಳಂ ದ್ವಿತೀಯೆಯೊಳಂ ಚತುರ್ಥಿಯಕ್ಕುಂ; ಸಪ್ತಮಿಯೊಳ್ ಪ್ರಥಮೆ, ಷಷ್ಠಿ, ಚತುರ್ಥಿಯಕ್ಕುಂ; ದ್ವಿತೀಯೆಯೊಳ್ ಪ್ರಥಮೆಯಕ್ಕುಂ.

**ಪ್ರಯೋಗಂ** -

ಷಷ್ಠಿಯ ಚತುರ್ಥಿಗೆ -

ನಾಡೊಡೆಯಂ - ನಾಟ್ಕೊಡೆಯಂ; ಕೊಡೆಯೊಡೆಯಂ - ಕೊಡೆಗೊಡೆಯಂ; ಎರ್ದೆಯಾಣ್ಮಂ - ಎರ್ದೆಗಾಣ್ಮಂ.

ಚಂ ॥ ಮಾ ॥ ... ಎರ್ದೆಗಾಣ್ಮನೆನ್ನರಸನೆಲ್ಲಿದನೋ ಲಲಿತಾಂಗವಲ್ಲಭಂ ॥ ೧
(ಆದಿಪುರಾಣಂ ೩-೧೫; ಕಾವ್ಯಾವಲೋಕನಂ ೧೭೩)

ದ್ವಿತೀಯೆಯ ಚತುರ್ಥಿಗೆ -

ಶಿಷ್ಯನಂ ಕಲಿಸಿದನೆಂಬಲ್ಲಿ ಶಿಷ್ಯಂಗೆ ಕಲಿಸಿದಂ; ಆಕೆಯಂ ತಿಳಿಪಿದನೆಂಬಲ್ಲಿ ಆಕೆಗೆ ತಿಳಿಪಿದಂ.

ಸಪ್ತಮಿಯ ಪ್ರಥಮೆಗೆ -

ಒಂದು ದಿವಸದೊಳ್ ಬಂದನೆಂಬಲ್ಲಿ, ಒಂದು ದಿವಸಂ ಬಂದಂ.

ಸಪ್ತಮಿಯ ಷಷ್ಠಿಗೆ - ಚಾಗಿಗಳೊಳ್ ಬಲ್ಲಹಂ - ಚಾಗಿಗಳ ಬಲ್ಲಹಂ; ಈವರೊಳ್ದೇವಂ - ಈವರ ದೇವಂ; ರಸಿಕರೊಳ್ ಚಕ್ರವರ್ತಿ - ರಸಿಕರ ಚಕ್ರವರ್ತಿ.

ಸಪ್ತಮಿಯ ಚತುರ್ಥಿಗೆ -

ತಾವರೆಯೊಳ್ ಪುಟ್ಟಿದನೆಂಬಲ್ಲಿ ತಾವರೆಗೆ ಪುಟ್ಟಿದಂ; ಬಿಂಬದೊಳ್ ತೇಜಂ - ಬಿಂಬಕ್ಕೆ ತೇಜಂ; ಅಲರೊಳ್ ಬೆಳ್ಪೆಂಬಲ್ಲಿ ಅಲರ್ಗೆ ಬೆಳ್ಪು.

ದ್ವಿತೀಯೆಯ ಪ್ರಥಮೆಗೆ -

ಒಂದು ವರ್ಷಮನಿರ್ದಂ - ಒಂದು ವರ್ಷಮಿರ್ದಂ.

ಇಂತು ನುಡಿವ ಬಿನ್ನಣದಿಂ ಕಾರಕಮನಿಯತಾರ್ಥಮೆಂದಱುವುದು.

~~~~~~~~~~~~~~~~~~~

೧. (ಸಪ್ತಮಿಯೊಳ್)
~~~~~~~~~~~~~~~~~~~

**ಸೂತ್ರಂ ॥ ಅಕ್ಕುಂ ಜಾತಿಯೊಳೇಕ**
**ತ್ವಕ್ಕೆ ಬಹುತ್ವಂ ಬಹುತ್ವದೆಡೆಗೇಕತ್ವಂ ॥**
**ಪೊಕ್ಕು ವಿಶೇಷಣಮಕ್ಕುಂ ।**
**ಮೊಕ್ಕಳಮಾ ಜಾತಿಯಲ್ಲದಲ್ಲಿಯುಮೆಂಬರ್ ॥ ೧೩೭ ॥**

**ಟೀಕೆ –** ಜಾತಿಯೊಳ್ = ಜಾತಿಯಲ್ಲಿ; ಏಕತ್ವಕ್ಕೆ = ಏಕವಚನಕ್ಕೆ; ಬಹುತ್ವಂ = ಕ್ರಿಯಾಪದದ ಬಹುವಚನಂ, ಅಕ್ಕುಂ = ಅಪ್ಪುದು; ಮೊಕ್ಕಳಂ = ವೆಗ್ಗಳವಾಗಿ, ಆ ಜಾತಿಯಲ್ಲದಲ್ಲಿಯುಂ = ಆ ಜಾತಿಯಲ್ಲದ ಸ್ಥಾನದಲ್ಲಿಯುಂ, ಬಹುತ್ವದ = ಬಹುವಚನದ, ಎಡೆಗೆ = ಸ್ಥಾನಕ್ಕೆ, ಏಕತ್ವಂ = ಏಕವಚನಂ, ಪೊಕ್ಕು = ಪ್ರವೇಶವಾಗಿ, ವಿಶೇಷಣಂ, ಅಕ್ಕುಂ = ಅಪ್ಪುದು, ಎಂಬರ್ = ಪೇೞ್ವರ್.

**ವೃತ್ತಿ –** ಜಾತಿಯೊಳೇಕವಚನಮಿರ್ದುಂ ಬಹುವಚನಮಂ ಪೇೞ್ವುದು; ಅದು ಕಾರಣಂ ಕ್ರಿಯಾಪದಂ ಬಹುವಚನಮಾಗಲಾರ್ಪುದು. ಜಾತಿಯಲ್ಲದಲ್ಲಿಯುಂ ಬಹುವಚನಕ್ಕೇಕವಚನಂ ವಿಶೇಷಣಮಾಗಿ ಪೊಕ್ಕು ಬಹುವಚನಮಂ ಪೇೞ್ವುದು.

**ಪ್ರಯೋಗಂ –**

ಜಾತಿಗೆ –

ಆನೆ ನೂಂಕಿದುವು – ಆನೆಗಳ್ನೂಂಕಿದುವು. ಕುದುರೆ ಏಱಿದುವು – ಕುದುರೆಗಳೇಱಿದುವು. ಕಾಲಾಳ್ಕವಿದುವು – ಕಾಲಾಳ್ಗಳ್ ಕವಿದುವು.

ಜಾತಿಯಲ್ಲದಲ್ಲಿಗೆ –

ಮ ॥ ವಿ ॥ … ಮಹೇಂ
ದ್ರಮಹೈಶ್ವರ್ಯಮಿವೆಲ್ಲಮಧ್ರುವಂ ೧
(ಆದಿಪುರಾಣಂ ೧೦-೬೧)

(ಇವೆಲ್ಲಮಧ್ರುವಂಗಳ್)

ಮನಂ ಸಂಚಲಮಾದುವು (ಮನಂಗಳ್ ಸಂಚಲಂಗಳಾದುವು)

ತ್ರಿಭುವನಮಂ ಪೇೞ್ದೊಡಂ ಕನ್ನಡದೊಳ್ ತ್ರಿಭುವನಂಗಳ್ ಎನಲಕ್ಕುಂ.

**ಸೂತ್ರಂ ॥ ಏಕತೆಯೆ ತನಗೆ ಬಹುತೆಯ ।**
**ನಾಕರಿಸದು ಜಾತಿ ತಾಂ ವಿಶೇಷಣಮುಖದಿಂ ॥**
**ದಾ ಕಾರಕಮೇಕತ್ವಮ ।**
**ನೇಕತ್ವಮನಾ ಕ್ರಿಯಾಪದಂ ಪಡೆಯಲೊಡಂ ॥ ೧೩೮ ॥**

**ಟೀಕೆ –** ವಿಶೇಷಣಮುಖದಿಂದೆ = ವಿಶೇಷಣದ ಮುಖದಿಂದೆ, ಆ ಕಾರಕಂ = ಆ ಪ್ರಸಿದ್ಧವಾದ ಕಾರಕಪದಂ, ಏಕತ್ವಮಂ = ಏಕವಚನಮಂ, ಪಡೆಯಲೊಡಂ = ಪಡೆಯಲೊಡನೆ, ಆ ಕ್ರಿಯಾಪದಂ = ಆ ಪ್ರಸಿದ್ಧವಾದ ಕ್ರಿಯಾಪದಂ, ಏಕತ್ವಮಂ = ಏಕವಚನಮಂ, ಪಡೆಯಲೊಡಂ = ಪಡೆಯಲೊಡನೆ, ಜಾತಿ = ವಿಶೇಷ್ಯವಾದ ಜಾತಿ, ತಾಂ, ಏಕತೆಯೆ = ಏಕವಚನವೆ ಅಪ್ಪುದು; ತನಗೆ = ವಿಶೇಷ್ಯವಾದ ಜಾತಿ ತನಗೆ, ಬಹುತೆಯಂ = ಬಹುವಚನಮಂ, ಆಕರಿಸದು = ಅಂಗೀಕರಿಸದು.

**ವೃತ್ತಿ –** ವಿಶೇಷಣಮಾಗಿ ಕಾರಕಮೇಕವಚನದೊಳಿರ್ದೊಡಂ ಕ್ರಿಯಾಪದಮೇಕ ವಚನದೊಳಿರ್ದೊಡಂ ವಿಶೇಷ್ಯಮಪ್ಪ ಜಾತಿಗೇಕತ್ವಮಲ್ಲದೆ ಬಹುತ್ವಮಿಲ್ಲ.

**ಪ್ರಯೋಗಂ -**

ಕಾರಕಕ್ಕೆ -

ಇಂತುಟಾನೆ; ಇಂತುಟು ಕುದುರೆ.

ಕ್ರಿಯೆಗೆ -

ನಡೆದುದು ಹಂಸೆ; ಕೇಗಿದುದು ಸೋಗೆ; ಉಲಿದುದು ಕೋಗಿಲೆ; ಪಾಡಿದುದು ತುಂಬಿ.

ಅದು ಇದು ಎಂಬೇಕವಚನಕ್ಕೆ ಆ ಈ ಎಂಬಾದೇಶಮಾಗೆ ಜಾತಿಯ ಏಕವಚನಕ್ಕೆ ಬಹುಳತೆಯಿಂ ಬಹುವಚನಮುಂಟು -

ಆಯೆರಲೆ ಪೋದುವು; ಈ ಪುಲ್ಲೆ ಬಂದುವು.

**ಸೂತ್ರಂ ॥ ನೀನಱಿ ಸಂಖ್ಯೇಯದ ಸಂ ।**
**ಖ್ಯಾನದ ದೊರೆವೆತ್ತ ಭಾವದೇಕತೆ ಬಹುತಾ ॥**
**ಧೀನಂ ವಿಶೇಷಣಂ ಬಹು ।**
**ತಾನತಮೆ ವಿಶೇಷ್ಯಮೇಕವಚನಮೆಯಕ್ಕುಂ ॥ ೧೩೯ ॥**

**ಟೀಕೆ -** ಸಂಖ್ಯೇಯದ = ಸಂಖ್ಯಾವಸ್ತುಗಳ, ಸಂಖ್ಯಾನದ = ಸಂಖ್ಯಾವಾಚಿಗಳ, ದೊರೆವೆತ್ತ ಭಾವದ = ಪ್ರಸಿದ್ಧಿವಡೆದ ಭಾವದ, ಏಕತೆ = ಏಕವಚನಂ, ಬಹುತಾಧೀನಂ = ಬಹುವಚನದ ಅಧೀನಂ ಅಪ್ಪುದು; ನೀಂ, ಅಱಿ = ತಿಳಿ; ವಿಶೇಷಣಪದಂ, ಬಹುತಾನತಮೆ = ಬಹುವಚನದ ಅಧೀನವೆ, ವಿಶೇಷ್ಯಂ = ವಿಶೇಷ್ಯಪದಂ, ಏಕವಚನಮೆ = ಏಕವಚನವೆ, ಅಕ್ಕುಂ = ಅಪ್ಪುದು.

**ವೃತ್ತಿ** - ಸಂಖ್ಯಾವಸ್ತುವಿನೊಳಂ ಸಂಖ್ಯೆಯೊಳಂ ಭಾವದೊಳಂ ನೆಲಸಿದೇಕವಚನಂ ಬಹುವಚನಮಂ ಪೇೞ್ವುದು; ವಿಶೇಷಣಂ ಬಹುವಚನಮಾಗಲೊಡಂ ವಿಶೇಷ್ಯಮೇಕ ವಚನಮಾಗಲಕ್ಕುಂ.

**ಪ್ರಯೋಗಂ -**

ಸಂಖ್ಯೇಯಕ್ಕೆ - ಪತ್ತು ದೆಸೆ - ಪತ್ತು ದೆಸೆಗಳ್; ಮೂಲೋಕಂ - ಮೂಲೋಕಂಗಳ್; ನಾಲ್ಕು ಯುಗಂ - ನಾಲ್ಕು ಯುಗಂಗಳ್.

ಸಂಖ್ಯೆಗೆ - ಒಂದು ನಾಲ್ಕು - ಒಂದು ನಾಲ್ಕುಗಳ್; ಎರಡೈದು - ಎರಡೈದುಗಳ್; ಪತ್ತು ನೂಱು - ಪತ್ತು ನೂಱುಗಳ್.

ಭಾವಕ್ಕೆ - ಕಣ್ಗಳ ಕೂರ್ಪು - ಕಣ್ಗಳ ಕೂರ್ಪುಗಳ್; ಪೂಗಳ ಬೆಳ್ಪು - ಪೂಗಳ ಬೆಳ್ಪುಗಳ್; ಕುರುಳ್ಗಳ ಕರ್ಪು - ಕುರುಳ್ಗಳ ಕರ್ಪುಗಳ್.

ವಿಶೇಷ್ಯದೇಕವಚನಕ್ಕೆ - ನೇರಿದುವು ಬೆರಲ್; ತೋರಿದುವು ಜಘನಂ; ಬಟ್ಟಿದುವು ಮೊಲೆ.

**ಸೂತ್ರಂ ॥ ವಿದಿತ ವಿಶೇಷಣಪದಮವು ।**
**ಮೊದಲ [1]ವಿಭಕ್ತಿಗಳನಾಂತು ವಾಕ್ಯದ ಮೊದಲೊಳ್ ॥**
**ಪದವೆತ್ತುವಗ್ರಕಾರಕ ।**
**ಪದದ ವಿಭಕ್ತಿಯನೆ ತಳೆವುವನ್ವಯಮುಖದೊಳ್ ॥ ೧೪೦ ॥**

**ಟೀಕೆ -** ವಿದಿತ = ಪ್ರಸಿದ್ಧವಾದ, ವಿಶೇಷಣಪದಂ = ವಿಶೇಷಣ ಪದಂಗಳ್, ಮೊದಲ ವಿಭಕ್ತಿಗಳಂ = ಪ್ರಥಮಾವಿಭಕ್ತಿಗಳಂ, ಆಂತು = ತಾಳ್ದು , ವಾಕ್ಯದ = ವಾಕ್ಯಂಗಳ, ಮೊದಲೊಳ್ = ಆದಿಯಲ್ಲಿ, ಪದವೆತ್ತು = ಪದವಾಗಿ, ಉವು = ಆ ಪ್ರಥಮಾಂತವಾದ ಪದಂಗಳ್, ಅನ್ವಯಮುಖದೊಳ್ = ಅರ್ಥದ ಮುಖದಲ್ಲಿ , ಅಗ್ರ = ತುದಿಯ, ಕಾರಕಪದದ = ಕಾರಕವಾದ ಪದದ, ವಿಭಕ್ತಿಯನೆ = ವಿಭಕ್ತಿಯರ್ಥವನೆ, ತಳೆವುವು = ಧರಿಸುವುವು.

**ವೃತ್ತಿ -** ವಿಶೇಷಣಪದಂಗಳ್ ಪ್ರಥಮಾವಿಭಕ್ತಿಯಂ ಪಡೆದು ವಾಕ್ಯದ ಮೊದಲೊಳಿರ್ದು, ಅನ್ವಯಿಸುವಲ್ಲಿ ತುದಿಯ ಕಾರಕಪದದ ವಿಭಕ್ತಿಯನೆ ತಳೆವುವು.

**ಪ್ರಯೋಗಂ -**

ಕಂ ॥ ವೀರನುದಾರಂ ಶುಚಿ ಗಂ ।
ಭೀರಂ ನಯಶಾಲಿ ಕೈದುವೊತ್ತರ ದೇವಂ ॥
ಗಾರೆಜಿಗರ್ ನೃಪತುಂಗಂ ।
ಗೆ ... ೧

ಇಲ್ಲಿ ವೀರಂಗೆ ಉದಾರಂಗೆ ಶುಚಿಗೆ ಗಂಭೀರಂಗೆ ನಯಶಾಲಿಗೆ ಕೈದುವೊತ್ತರ ದೇವಂಗೆ ನೃಪತುಂಗಂಗೆ ಆರೆಜಿಗರೆಂಬುದನ್ವಯಂ.

ಕಂ ॥ ಸಂಗತಸತ್ತ್ವಂ ಕುರುರಾ
ಜಂಗಂ ಕರ್ಣಂಗಂ ... ೨

(ವಿಕ್ರಮಾರ್ಜುನವಿಜಯಂ ೩-೬೨; ಕಾವ್ಯಾವಲೋಕನಂ ೧೪೧)

ಸಂಗತಸತ್ವಂಗೆ ಕುರುರಾಜಂಗೆ ಕರ್ಣಂಗೆ - ಎಂದನ್ವಯಂ.

**ಸೂತ್ರಂ ॥ ಕೂಡಿ ನುಡಿವೆಡೆಯೊಳೆಂದುಂ ।**
**ಕೂಡದು ಲಿಂಗತ್ರಯಕ್ಕೆ ತರತಮಭಾವಂ ॥**
**ನೀಡುಂ ವಾಕ್ಯದ ಕಡೆಯೊಳ್ ।**
**ಕೂಡಿರ್ದುದದಾವುದದುವೆ ಮುಖ್ಯಮೆನಿಕ್ಕುಂ ॥ ೧೪೧ ॥**

**ಟೀಕೆ -** ಕೂಡಿ = ಒಂದಾಗಿ, ನುಡಿವೆಡೆಯೊಳ್ = ಪೇಟ್ವ ಸ್ಥಾನದಲ್ಲಿ , ಎಂದುಂ = ಆವಾಗಳುಂ, ಲಿಂಗತ್ರಯಕ್ಕೆ = ಸ್ತ್ರೀಪುಂನಪುಂಸಕಂಗಳೆಂಬ ಲಿಂಗತ್ರಯಕ್ಕೆ , ತರತಮಭಾವಂ = ತಾರತಮ್ಯಂ, ಕೂಡದು = ಪೊರ್ದುಗೆಯಾಗದು; ನೀಡುಂ = ವಿಶೇಷವಾಗಿ, ವಾಕ್ಯದ = ವಾಕ್ಯಂಗಳ, ಕಡೆಯೊಳ್ = ಅಂತ್ಯದಲ್ಲಿ , ಕೂಡಿರ್ದುದು= ಪೊರ್ದುಗೆಯಾಗಿರ್ದುದು, ಅದು, ಆವುದು, ಅದುವೆ = ಆ ಲಿಂಗವೆ, ಮುಖ್ಯಂ = ವಿಶೇಷಂ, ಎನಿಕ್ಕುಂ = ಎನಿಸುವುದು.

~~~~~~~~~~~~~~~~~~~~

೧. (ವಿಭಕ್ತಿಗಳನಾಳ್ದು)
~~~~~~~~~~~~~~~~~~~~

**ವೃತ್ತಿ** - ಕೂಡಿ ನುಡಿವೆಡೆಯೊಳ್ ಲಿಂಗತ್ರಯಕ್ಕೆ ತಮ್ಮೊಳ್ [1]ಮುಖ್ಯತೆಯಮುಖ್ಯತೆಯುಮಿಲ್ಲ; ವಾಕ್ಯದ ಕಡೆಯೊಳಾವ ಲಿಂಗಮಿರ್ದೊಡದುವೆ ಮುಖ್ಯಮಕ್ಕುಂ.

**ಪ್ರಯೋಗಂ** -

ಸೇನೆಯುಮರಸಿಯುಮರಸನುಂ ಬಂದರ್; ಆನೆಯುಮರಸನುಮರಸಿಯುಂ ಬಂದರ್; ಅರಸನುಂ ಅರಸಿಯುಂ ಚತುರಂಗಬಲಮುಂ ಬಂದುವು.

**ಸೂತ್ರಂ ॥ ವ್ಯವಹರಿಸುವಿನಂ ಪ್ರಥಮ್ಮೈ ।**
**ಕವಚನಮಂ ಪಲವನೋದಿ ವಾಕ್ಯದ ನಿರ್ವಾ ॥**
**ಹವನಳವಡಿಪೆಡೆಯೊಳ್ ಪುಗಿ ।**
**ಸುವರ್ ಕ್ರಿಯಾನೇಕವಚನಮಂ ಮಾರ್ಗವಿದರ್ ॥ ೧೪೨ ॥**

**ಟೀಕೆ** - ಪ್ರಥಮೈಕವಚನಮಂ = ಪ್ರಥಮಾವಿಭಕ್ತಿಯ ಏಕವಚನಮಂ, ಪಲವಂ = ಹಲವಂ, ಓದಿ = ಹೇೞ್ದು, ವ್ಯವಹರಿಸುವಿನಂ = ವ್ಯವಹರಿಸುವಾಗಳ್, ವಾಕ್ಯದ = ವಾಕ್ಯಂಗಳ, ನಿರ್ವಾಹವಂ = ಪೂರ್ಣತೆಯಂ, ಅಳವಡಿಪೆಡೆಯೊಳ್ = ಅಳವಡಿಸುವ ಸ್ಥಾನದಲ್ಲಿ, ಕ್ರಿಯಾ = ಕ್ರಿಯಾಪದದ, ಅನೇಕವಚನಮಂ = ಬಹುವಚನಮಂ, ಮಾರ್ಗವಿದರ್ = ವೈಯಾಕರಣ ಮಾರ್ಗವಿದರ್, ಪುಗಿಸುವರ್ = ಪ್ರವೇಶಮಂ ಮಾಡುವರ್.

**ವೃತ್ತಿ** - ಪ್ರಥಮೈಕವಚನಮಂ ಮೊದಲೊಳ್ ಪಲವಂ ಪೇೞ್ದು ವಾಕ್ಯನಿರ್ವಾಹದೊಳ್ ಕ್ರಿಯಾಬಹುವಚನಮಂ ಪುಗಿಸುವರ್.

**ಪ್ರಯೋಗಂ** -

ಮ ॥ ವಿ ॥ ಅವತಂಸೋತ್ಪಲತಾಡನಂ ಕನಕಕಾಂಚೀಬಂಧನಂ ನೂಪುರಾ ।
ರವಝುಂಕಾರಿತ ಚಾರುವಾಮಚರಣಾಘಾತಂ ಚಲದ್ಭ್ರೂಲತಾ ॥
ಗ್ರವಿಭಾಗೋತ್ಕಟತರ್ಜನಂ ತರಳತಾತಾಮ್ರಾಧರಂ ಚಕ್ರಿಗಿ ।
ತ್ತುವಲಂಪಂ ಪ್ರಣಯಪ್ರಕೋಪಸಮಯಪ್ರಾರಂಭದೊಳ್ ಕಾಂತೆಯಾ ॥ ೧

(ಆದಿಪುರಾಣಂ ೧೨-೪೭; ಕಾವ್ಯಾವಲೋಕನಂ ೭೯೧)

'ಚಕ್ರಿಗಿತ್ತುವು ಅಲಂಪಂ' ಎಂಬಲ್ಲಿ, ಇವೆಲ್ಲಮೆಂಬುದಧ್ಯಾಹಾರಮಾಗಿ ಬಹುವಚನಂ ಸಲ್ವುದು.

**ಸೂತ್ರಂ ॥ ಅವನವಳದೆಂಬಿವಿರ್ದಂ ।**
**ತೆವೊಲಿರ್ದಪುವಾವನಾವಳಾವುದು ತಾನೆಂ ॥**
**ಬಿವವಂ ಪಾರದೆ ನಿಲಲೞ್ ।**
**ಯವನ್ವಯಂ ತಾಗುವಲ್ಲಿ ವಾಕ್ಪ್ರೌಢವಿದರಿಂ ॥ ೧೪೩ ॥**

**ಟೀಕೆ** - ವಾಕ್ಪ್ರೌಢವಿದರಿಂ = ವಾಕ್ಪ್ರೌಢರಿಂದೆ, ಅನ್ವಯಂ, ತಾಗುವಲ್ಲಿ = ಸಂಘಟನೆಯಾಗುವಲ್ಲಿ, ಅವಂ = ಅವನೆಂದು, ಅವಳ್ = ಅವಳೆಂದು, ಅದು = ಅದೆಂದು, ಎಂಬಿವು = ಎಂಬೀ ಪದಂಗಳ್, ಇರ್ದಂತೆವೊಲ್

~~~~~~~~~~~~~~~~~~~~

೧. (ಮುಖ್ಯತೆಯುಮಮುಖ್ಯತೆಯುಮಿಲ್ಲ)
~~~~~~~~~~~~~~~~~~~~

= ಇರ್ದ ಹಾಗೆ, ಇರ್ದಪುವು = ಇರುತಿರ್ಪುವು; ಆವಂ = ಆವನೆಂದುಂ, ಆವಳ್ = ಆವಳೆಂದುಂ, ಆವುದು = ಆವುದೆಂದುಂ, ತಾಂ = ತಾನೆಂದುಂ, ಎಂಬಿವು = ಎಂಬೀ ಪದಂಗಳ್, ಅವಂ = ಆ ಪದಂಗಳಂ, ಪಾರದೆ = ಬಯಸದೆ, ನಿಲಲಱಿಯವು = ಇರಲಱಿಯವು.

**ವೃತ್ತಿ** – ಅವಂ ಅವಳ್ ಅದು ಎಂಬಿವು ಸ್ವತಂತ್ರಂಗಳ್; ಆವಂ ಆವಳ್ ಆವುದು ತಾನೆಂಬಿವು ಅವಂ ಅವಳ್ ಅದು ಎಂಬಿವಂ ಪಾರದೆ ಅನ್ವಯಿಸಿಕೊಳಲರಿಯವಾಗಿ, ಪರತಂತ್ರಂಗಳ್.

**ಪ್ರಯೋಗಂ** –

ಸ್ವತಂತ್ರಾನ್ವಯಕ್ಕೆ -

ಪೊನ್ನುಳ್ಳವನೆ ಕುಲೀನನೆಂದೊಡೆ, ಆವಂ ಪೊನ್ನುಳ್ಳವನೆ ಕುಲೀನನೆನವೇಡ; ಸೊಬಗುಳ್ಳವಳೆ ಪೆಣ್ಣೆಂದೊಡೆ, ಆವಳ್ ಸೊಬಗುಳ್ಳವಳೆ ಪೆಣ್ಣೆನವೇಡ; ಅದೆ ರೂಢಿಯೆಂದೊಡೆ, ಆವುದು ರೂಢಿಯನುಳ್ಳುದುವೆ ಲೇಸನವೇಡ.

ಪರತಂತ್ರಾನ್ವಯಕ್ಕೆ -

ಆವನಧಿಕಪುಣ್ಯನವನೆ ಸೇವ್ಯಂ; ಆವಳ್ ಪತಿವ್ರತೆಯವಳೆ ಮಾನ್ಯೆ; ಆವುದು ಚೆಲ್ವಾದುದದುವೆ ದರ್ಶನೀಯಂ. ತಾನವಂ ಚದುರಂ, ತಾನವಳ್ ಚದುರೆ, ತಾನದು ಪಿರಿದು - ಇದು ವಾಕ್ಯಾನ್ವಯಂ.

**ಸೂತ್ರಂ ॥ ಯುಗಳಾರ್ಥದ ಬಹುವಚನ ।**
**ಕ್ಕೊಗೆತಂದಾವಿಷ್ಟಲಿಂಗದೆಡೆಗೇಕತ್ವಂ ॥**
**ನೆಗಟ್ಟುಂ ಕ್ರಿಯಾವಿಶೇಷಣ ।**
**ಮಗಲದೆ ನಿಂದೆಡೆಗಮಱಿವರಿಂದೇಕತ್ವಂ ॥ ೧೪೪ ॥**

**ಟೀಕೆ** – ಯುಗಳಾರ್ಥದ = ಎರಡು ವಸ್ತುವಿನರ್ಥದ, ಬಹುವಚನಕ್ಕೆ, ಒಗೆತಂದ = ಹುಟ್ಟಿ ಬಂದ, ಆವಿಷ್ಟಲಿಂಗದ = ಆವಿಷ್ಟವೆಂಬ ಲಿಂಗದ, ಎಡೆಗೆ = ಸ್ಥಾನಕ್ಕೆ, ಏಕತ್ವಂ = ಏಕವಚನಂ, ನೆಗಟ್ಟುಂ = ಬರ್ಪುದು; ಕ್ರಿಯಾವಿಶೇಷಣಂ, ಅಗಲದೆ = ತೊಲಗದೆ, ನಿಂದೆಡೆಗಂ = ನೆಲೆಗೊಂಡ ಸ್ಥಾನಕ್ಕೆಯುಂ, ಅಱಿವರಿಂದೆ = ಬಲ್ಲವರಿಂದೆ, ಏಕತ್ವಂ = ಏಕವಚನಂ ಬರ್ಪುದು.

**ವೃತ್ತಿ** – ಯುಗಳಾರ್ಥದೊಳ್ ವರ್ತಿಸುವ ಬಹುವಚನಕ್ಕ[1]ಮಾವಿಷ್ಟಲಿಂಗಕ್ಕಂ ಕ್ರಿಯಾ ವಿಶೇಷಣಕ್ಕಂ ಬಲ್ಲರಿಂದೇಕವಚನಮಕ್ಕುಂ.

**ಪ್ರಯೋಗಂ** –

ಯುಗಳಾರ್ಥಕ್ಕೆ -

ಪದಯುಗಳಂಗಳ್ಗೆ - ಪದಯುಗಂ

ಆವಿಷ್ಟಲಿಂಗಕ್ಕೆ -

ವೇದಂಗಳ್ ಪ್ರಮಾಣಂ.

~~~~~~~~~~~~~~~~~~~~

೧. ಆವಿಷ್ಟಲಿಂಗಮೆಂದು ವಿಧೇಯ ವಿಶೇಷಣಂ.
~~~~~~~~~~~~~~~~~~~~

ಮ ॥ ಸ್ರ ॥ ಪ್ರತಿಭಾನಂ ಕಾವ್ಯವಿದ್ಯಾಪ್ರಚಯಪರಿಚಯಂ ವೃದ್ಧ ಸೇವಾನುರಾಗಂ
ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಂ ಕಾರಣಂ[೧]... ೧

(ಕಾವ್ಯಾವಲೋಕನಂ ೪೨೪)

ಕ್ರಿಯಾವಿಶೇಷಣಕ್ಕೆ -

ಕಂ ॥ ಏನೆಂಬ ಪೆಂಪೊ ಮನುವುಂ ।
ತಾನುಂ ಸಚ್ಚರಿತರಮರಕುಜಮುಂ ತಾನುಂ ॥
ದಾನಿಗಳಂಭೋನಿಧಿಯುಂ ॥
ತಾನುಂ ಗಂಭೀರರೆನಿಪನುದಯಾದಿತ್ಯಂ ॥ ೨

'ಏನೆಂಬ ಪೆಂಪೊ' ಎಂದರೆ ಎಂತಹವರ್ಗಳೆಂಬ ಪೆರ್ಮೆಯೊ ಎಂಬಲ್ಲಿ 'ಎಂಬ' ಎಂಬೀ ಕ್ರಿಯೆಗೆ 'ಏನ್' ಎಂಬ ಕಾರಕಂ [ಏಕವಚನ] ವಿಶೇಷಣಮಾಗಿ[ಯುಂ] ಬಹುವಚನಮಾಯ್ತು.

ತಿಬ್ಬಂ ಮಾಡಿದಂ = ತಿಬ್ಬವೆಹಗಹುದಹಗೆ ಮಾಡಿದಂ. ದೋಷರಹಿತಂ ಪೇೞ್ದಂ = ದೋಷರಹಿತವೆಹಗಹುದಹಗೆ ಪೇೞ್ದಂ. [೨]ಇದೀಗ ಕ್ರಿಯಾವಿಶೇಷಣಂ.

**ಸೂತ್ರಂ ॥ ಸಾರಮದಧ್ಯಾರೋಪಂ ।**
**ಕಾರಕಕಂ ಕ್ರಿಯೆಗಮಗಲೆ ನೇಯದ ದೋಷಂ ॥**
**ಧೀರರ್ಕಳಿಂ ವಿಶಂಕೆಯೆ ।**
**ಕಾರಕ್ಕಂ ಪೇೞ್ವುದಾ ಸಮುಚ್ಚಯದುಮುಗಂ ॥ ೧೪೫ ॥**

**ಟೀಕೆ -** ಕಾರಕಕಂ = ಕಾರಕಕ್ಕೆಯುಂ, ಕ್ರಿಯೆಗಂ = ಕ್ರಿಯೆಗೆಯುಂ, ಅಧ್ಯಾರೋಪಂ = ಅಧ್ಯಾಹಾರಂ, ಅದು, ಸಾರಂ = ಶ್ರೇಷ್ಠವಾಗಿರ್ಪುದು; ಅಗಲೆ = ಹೊಂದುಗೆಯಾಗದಿರೆ, ನೇಯದ ದೋಷಂ = ನೇಯದ ದೋಷಂ ಬರ್ಪುದು; ಧೀರರ್ಕಳಿಂ = ವಿದ್ವಾಂಸರಿಂದೆ, ವಿಶಂಕೆಯ = ವಿಶಂಕಾರ್ಥದ, ಎಕಾರಕ್ಕಂ = ಎತ್ವಕ್ಕೆಯುಂ, ಆ ಸಮುಚ್ಚಯದ = ಆ ಸಮುಚ್ಚಯಾರ್ಥದ, ಉಮುಗಂ = ಉಂಕಾರಕ್ಕೆಯುಂ, ಪೇೞ್ವುದು = ಅಧ್ಯಾಹಾರಮಂ ಪೇೞ್ವುದು.

**ವೃತ್ತಿ -** ಕಾರಕಕ್ಕಂ ಕ್ರಿಯೆಗಂ ನೇಯದ ದೋಷಮಿಲ್ಲದಂತಧ್ಯಾರೋಪಮಂ ಮಾೞ್ಪುದು; ವಿಶಂಕೆಯ ಎತ್ವಕ್ಕೆಯುಂ ಸಮುಚ್ಚಯದುಮುವಿಂಗಂ ಅಧ್ಯಾರೋಪ ಮುಂಟು. ತಾಂ ಮಾಡಿದಧ್ಯಾರೋಪಮಸಮರ್ಥಮಾ[ಗಿ] ಮತ್ತೆ ಕೆಲವರ್ಕೆ ಪತ್ತುವೊಡದು ನೇಯದ ದೋಷಂ.

**ಪ್ರಯೋಗಂ -**

ನೇಯಕ್ಕೆ -

ಕಂ ॥ ಆರಕ್ತಮಾಗಿ ನೇಱುಲ ।
ದೋರೆಯನನುಕರಿಪುದಾದುದಾಗಸಮೆನೆ ಸಂ ॥
ಧ್ಯಾರುಚಿಯಿನಕ್ಕುಮೆಂದವ ।
ಧಾರಿಸಿ ನೆಱೆಯಱುದುಕೊಳ್ವುದದು ನೇಯಾರ್ಥಂ ॥ ೧

(ಕಾವ್ಯಾವಲೋಕನಂ ೫೦೮)

~~~~~~~~~~~~~~~~~~~~

೧. (ಕಾವ್ಯಾವಲೋಕನದ ಪಾಠಕ್ಕೆ ಅನುಸಾರವಾಗಿ ತಿದ್ದಿದೆ.) ೨. (ಎಂಬುದೀಗಳ್)
~~~~~~~~~~~~~~~~~~~~

- [ಇಂತು] ಸಂಧ್ಯಾರುಚಿಯಿನೆಂದು ಬಗೆವುದು ನೇಯಂ, ಕೆಂದೂಳಿಯಿಂದಾಗಸಂ ಕೆಂಪಾದುದಾಗಿ.

ಕಾರಕಕ್ಕೆ -

ಮಲ್ಲಿಕಾಮಾಲೆ ॥ ಏಕೆ ನಿರ್ವಹಣಕ್ಕೆ ಸಲ್ಗುಮೊ ಪೂಣ್ದೊಡಂ ಕೃತಿಬಂಧಮಂ ೨

- ಎಂಬಲ್ಲಿ, ಕೃತಿಬಂಧಮೆಂಬುದಧ್ಯಾಹಾರ್ಯಂ -

ಕರ್ಣನುಂ ದಾನಿ ಮೇಣೇತನುಂ ಎಂಬಲ್ಲಿ, ದಾನಿಯೆಂಬುದ ಧ್ಯಾರೋಪಂ.

ಕ್ರಿಯೆಗೆ - ಪುರುಷೋತ್ತಮಂ ಮನುಷ್ಯಮಾತ್ರಮೆ ಎನೆ, ಅಲ್ಲಮೆಂಬುದಧ್ಯಾಹಾರ್ಯಂ.

ಮ ॥ ವಿ ॥ ಧೃತರಾಷ್ಟ್ರಂ ನುಡಿದಾರ್ತನೇ ಹರಿ ಭರಂಗೆಯ್ದಾರ್ತನೇ ... ೩

(ವಿಕ್ರಮಾರ್ಜುನವಿಜಯಂ. ೧೦-೧೦)

- ಎಂದೊಡೆ, ಆಱನೆಂಬುದಧ್ಯಾಹಾರ್ಯಂ.

ವಿಶಂಕೆಯ ಎತ್ವಕ್ಕೆ -

ಕಂ ॥ ಉಱಿಮಂಜಿಮೆ ಬೆರ್ಚಿಮೆ ಬೆಸ
ಕೆಱಿಗೆಮೆ ದೇವ ... ೪

- ಎಂಬಲ್ಲಿ, ಉಱಿಮೆ ಎಂದೆತ್ವಮಧ್ಯಾಹಾರ್ಯಂ.

ಸಮುಚ್ಚಯದುಮುವಿಂಗೆ -

ಮ ॥ ಸ್ರ ॥ ... ಆಯುಂ
ಸಿರಿ ತಾಯುಂ ತಂದೆ ಕಣ್ಣುಂ ಗತಿಯೆನಿಸಿದಪಂ ಸಿಂಹಸೇನ ಕ್ಷಿತೀಶಂ ೫

- ಎಂಬಲ್ಲಿ, ಕಡೆಯ ಸಮುಚ್ಚಯದುಮ್ ಅಧ್ಯಾಹಾರ್ಯಂ.

ವಾಕ್ಯದೀಪಕಂ ಪ್ರತ್ಯೇಕಸಂಬಂಧಂ -

ಆತನುಮವನುಂ ಬಂದನೆಂಬಲ್ಲಿ, ಆತನುಂ ಬಂದಂ, ಅವನುಂ ಬಂದನೆಂದು ಮಾಟ್ಪುದು.

ಕಾರಕಮುಖದಿಂ ವಿಭಕ್ತಿ [1]ವಿಪರಿಣಮಿಸುವುದಾಗಿ, ವಿಭಕ್ತಿ ವಿಪರಿಣಾಮಕ್ಕೆ-

ಕಂ ॥ ಕಡುಗಲಿ ಸೆಣಸುವ ಭಟರಾರ್ ।
ಒಡೆಯಂಗತಿಹಿತವರಾರ್ ಧುರಕ್ಕೊದಗುವರಾರ್ ॥
ತೊಡರ್ದೊಡೆ ಭಂಗಂ ಬರ್ಕುಂ ।
ಸಡಗರಮಿದು ಜಯಮೆ ಮೆಱಿವುದಱು ಬೊಪ್ಪಲನಂ ॥ ೬

ಕಡುಗಲಿಯೆಂಬಲ್ಲಿ ಆತನೆಂಬ ಪ್ರಥಮೆಯುಂ, ಸೆಣಸುವ ಭಟರಾರ್ ಎಂಬಲ್ಲಿ ಆತನನೆಂಬ ದ್ವಿತೀಯೆಯುಂ, ಒಡೆಯಂಗತಿಹಿತವರಾರ್ ಎಂಬಲ್ಲಿ ಆತನಿಂ ಎಂಬ ತೃತೀಯೆಯುಂ, ಧುರಕ್ಕೊದಗುವರಾರ್ ಎಂಬಲ್ಲಿ ಆತಂಗೆಂಬ ಚತುರ್ಥಿಯುಂ, ತೊಡರ್ದೊಡೆ ಭಂಗಂ

~~~~~~~~~~~~~~~~~~~~

೧. (ಪರಿಣಾಮಿಸುವುದಾಗಿ, ವಿಭಕ್ತಿಪರಿಣಾಮಕ್ಕೆ)
~~~~~~~~~~~~~~~~~~~~

ಬರ್ಕುಮೆಂಬಲ್ಲಿ ಆತನತ್ತಣಿಂದೆಂಬ ಪಂಚಮಿಯುಂ, ಸಡಗರಮಿದೆಂಬಲ್ಲಿ ಆತನ ಎಂಬ ಷಷ್ಠಿಯುಂ, ಜಯಮ ಮೆಱೆವುದೆಂಬಲ್ಲಿ ಆತನೊಳೆಂಬ ಸಪ್ತಮಿಯುಂ - ಈ ತೆಱದಿನಧ್ಯಾರೋಪಿಸಿಕೊಳ್ವುದು.

**ಸೂತ್ರಂ ॥ ಪೀನಂ ಪ್ರಥಮೆಗೆ ನೀನಾಂ ।**
**ತಾನೆಂದಱಿ ನಿನಗೆಯೆನಗೆ ತನಗೆಂದು ಚತು ॥**
**ರ್ಥೀ ನಿರ್ದೇಶಕ್ಕಿತರ ।**
**ಸ್ಥಾನಕ್ಕಸ್ವರದಿನಿರ್ಪ ನಿನ್ ಎನ್ ತಂಗಳ್ ॥ ೧೪೬ ॥**

**ಟೀಕೆ** - ಇತರ ಸ್ಥಾನಕ್ಕೆ = ಪ್ರಥಮೆ ಚತುರ್ಥಿಯಲ್ಲದುೞಿದ ವಿಭಕ್ತಿ ಸ್ಥಾನಕ್ಕೆ, ಅಸ್ವರದಿಂ = ವ್ಯಂಜನರೂಪದಿಂದೆ, ಇರ್ಪ ನಿನ್ ಎನ್ ತಂಗಳ್ = ಇರ್ಪ ನಿನ್ ಎನ್ ತನ್ ಎಂಬಿವು, ಪೀನಂ = ವಿಶೇಷವಾಗಿ, ಪ್ರಥಮಗೆ = ಪ್ರಥಮಾವಿಭಕ್ತಿಗೆ, ನೀಂ = ನೀನೆಂದು, ಆಂ = ಆನೆಂದು, ತಾಂ = ತಾನೆಂದು, ಅಱಿ = ತಿಳಿ; ಚತುರ್ಥೀನಿರ್ದೇಶಕ್ಕೆ = ಚತುರ್ಥೀವಿಭಕ್ತಿಯ ನಿರ್ದೇಶಕ್ಕೆ, ನಿನಗೆ, ಎನಗೆ, ತನಗೆ ಎಂದು ತಿಳಿ.

**ವೃತ್ತಿ** - ಪಿರಿದುಂ ಪ್ರಥಮೆಗೆ ನೀನ್ ಆನ್ ತಾನ್ ಎಂದಱಿವುದು; ಚತುರ್ಥಿಗೆ ನಿನಗೆ ಎನಗೆ ತನಗೆ ಎಂದಱಿವುದು; ಮಿಕ್ಕೆಡೆಯೊಳ್ ಸ್ವರರಹಿತಮಾಗಿ ನಿನ್ ಎನ್ ತನ್ ಎಂದು ಪ್ರಕೃತಿಯಪ್ಪುದು.

**ಪ್ರಯೋಗಂ** -

ಪ್ರಥಮೆಗೆ -

ಪ್ರ ॥ ನೀನಾರ್ಗಾನಾರ್ಗೆ ತಾನಾರ್ಗಿದನೆನಗುಸಿರಲ್ವೇಡ ... ೧

ಚತುರ್ಥಿಗೆ -

ಕಂ ॥ ನಿನಗೆನಗೆ ತನಗೆ ತೀರ್ಗುಮೆ
ಹನುಮಂತನ ಶಕ್ತಿಸಾಹಸಂ ರಿಪುವಿಜಯಂ ॥ ೨

ವಿಭಕ್ತಿಯೋಗಕ್ಕೆ -

ನಿನ್ನಂ, ನಿನ್ನಿಂ, ನಿನ್ನತ್ತಣಿಂ, ನಿನ್ನ, ನಿನ್ನೊಳ್

**ಸೂತ್ರಂ ॥ ನಿನತೆನತು [1]ತನತೆನಿಪ್ಪವು ।**
**ಜನಿಯಿಸುಗುಂ ನಿನ್ನದೆನ್ನದುಂ ತನ್ನದೆನಿ ॥**
**ಪ್ಪನಿತಱೊಳಂ ಮೇಣ್ ದ್ವಿತ್ವದಿ ।**
**ನನೇಕದೊಳ್ ನತ್ವದೆಡೆಗೆ ಮತ್ವಂ ಬರೆಯುಂ ॥ ೧೪೭ ॥**

**ಟೀಕೆ** - ನಿನ್ನದು, ಎನ್ನದು, ತನ್ನದು, ಎನಿಪ್ಪ = ಎನಿಸುವ, ಇನಿತಱೊಳಂ = ಇಷ್ಟಱಲ್ಲಿಯುಂ, ನಿನತು, ಎನತು, ತನತು, ಎನಿಪ್ಪ= ಎನಿಸುವ, ಇವು = ಈ ಶಬ್ದಂಗಳ್, ಮೇಣ್ = ವಿಕಲ್ಪದಿಂದೆ, ದ್ವಿತ್ವದಿಂ = ಒತ್ತಿನೊಡನೆ, ಜನಿಯಿಸುಗುಂ = ಹುಟ್ಟುವುವು; ಅನೇಕದೊಳ್ = ಬಹುವಚನದಲ್ಲಿ, ನತ್ವದ = ನಿನ್ನದೆನ್ನದು

~~~~~~~~~~~~~~~~~~~

೧. (ತನತೆನಿಪ್ಪುವು)
~~~~~~~~~~~~~~~~~~~

ತನ್ನದೆಂಬ ನಕಾರದ, ಎಡೆಗೆ = ಸ್ಥಾನಕ್ಕೆ, ಮತ್ವಂ = ನಿಮ್ಮದೆಮ್ಮದು ತಮ್ಮದೆಂದು ಮಕಾರಂ, ಬರೆಯುಂ = ಬಂದೊಡಂ, ವಿಕಲ್ಪದಿಂದೆ, ನಿಮತ್ತು ಎಮತ್ತು ತಮತ್ತು ಎಂದು, ದ್ವಿತ್ವದಿಂ ಹುಟ್ಟುವುದು.

**ವೃತ್ತಿ** - ನಿನ್ನದು ಎನ್ನದು ತನ್ನದು ಎಂಬಿವರ್ಕೆ ನಿನತು ಎನತು ತನತು ಎಂದಾದೇಶಮಕ್ಕುಂ; ಮೇಣೆಂಬ ವಿಕಲ್ಪದಿಂದವರ್ಕೆ ದ್ವಿತ್ವಮುಂಟು - ನಿನತ್ತು ಎನತ್ತು ತನತ್ತು ಎಂದು. ನಿನತು ಎನತು ತನತು ಎಂಬ ನಕಾರಕ್ಕೆ ಬಹುವಚನದೊಳ್ ಮತ್ವಮುಂಟು - ನಿಮತು ಎಮತು ತಮತು; ವಿಕಲ್ಪದಿಂದವಱ ದ್ವಿರ್ಭಾವಮುಮುಂಟು - ನಿಮತ್ತು ಎಮತ್ತು ತಮತ್ತು ಎಂದು.

**ಪ್ರಯೋಗಂ** -

ನಿನತಾದಿಗೆ -

ಕಂ ॥ ನಿನತು ಚಲಮೆನತು ಶೌರ್ಯಂ
ತನತು ಮಹಾಧೈರ್ಯಮವನಿಪತಿಗೆನೆ ... ೧

ಇವಱ ದ್ವಿರ್ಭಾವಕ್ಕೆ -

ಕಂ ॥ ಮುನಿಸಿದು ನಿನತ್ತು ಸ್ವೈರಣೆ
ಯೆನತ್ತು ಕೆಳದಿಗೆ ತನತ್ತು ಸಂದಿಸುವೆಸಕಂ ೨

**ಸೂತ್ರಂ ॥ ಇದಿರೊಳ್ ಸ್ವರಾದಿ ಸಂಖ್ಯೆಗ ।**
**ಳೊದವಿರೆ ನಿಮ್ಮೆಮ್ಮ ತಮ್ಮೆನಿಪ್ಪವು ಪಿಂತ ॥**
**ಣ್ಣೊದವಿರೆ ನಡುವಣ್ಗುತುವ ।**
**ಪ್ಪುದಿವಱ ಬಹುವಚನದಲ್ಲಿ ಪುಗಿಸದಿರೊಂದಂ ॥ ೧೪೪ ॥**

**ಟೀಕೆ** - ಇದಿರೊಳ್ = ಪರದಲ್ಲಿ, ಸ್ವರಾದಿ ಸಂಖ್ಯೆಗಳ್ = ಸ್ವರಾಕ್ಷರಂಗಳಾದಿಯಾದ ಸಂಖ್ಯಾವಾಚಿಗಳ್, ಒದವಿರೆ = ಬಂದಿರೆ, ನಿಮ್ಮ, ಎಮ್ಮ, ತಮ್ಮ, ಎನಿಪ್ಪ = ಎನಿಸುವ; ಇವು = ಈ ಪದಂಗಳ್, ಪಿಂತಣ್ಗೆ = ಹಿಂದುಗಡೆಗೆ, ಒದವಿರೆ = ಬಂದಿರೆ, ನಡುವಣ್ಗೆ = ಮಧ್ಯಕ್ಕೆ, ಉತು = ಉತು ಎಂದು, ಅಪ್ಪುದು = ಅಕ್ಕುಂ; ಇವಱ = ಈ ಪದಂಗಳ, ಬಹುವಚನದಲ್ಲಿ = ಬಹುತ್ವದಲ್ಲಿ, ಒಂದಂ = ಒಂದೆಂಬುದಂ, ಪುಗಿಸದಿರ್ = ಪ್ರವೇಶವಂ ಮಾಡದಿರ್.

**ವೃತ್ತಿ** - ಸ್ವರಾದಿ ಸಂಖ್ಯೆಗಳ್ ಪರಮಾಗೆ, ಮೊದಲೊಳ್ ನಿಮ್ಮ ಎಮ್ಮ ತಮ್ಮ ಎಂಬಿವು ಬರೆ, ಮಧ್ಯದೊಳುತುವಕ್ಕುಂ. ಒಂದೆಂಬುದದೇಕವಚನಮಾಗಿ, ಅದಾಗದು.

**ಪ್ರಯೋಗಂ** -

ನಿಮ್ಮುತ್ತಿರ್ವರುಂ, ಎಮ್ಮುತ್ತೈವರುಂ, ತಮ್ಮುತಱುವರುಂ; ಏೞ್ಬರುಂ, ಎಣ್ಬರುಂ ಎಂಬಿವರ್ಕಮಂತೆ. ಒಂಬತ್ತೆಂಬುದರ್ಕೆ ಲಕ್ಷಣಮುಂಟಾದೊಡಮುಚ್ಚಾರಣಂ ಸುಭಗಮಲ್ಲಾಗಿ ಮಾಣ್ಬುದು.

**ಸೂತ್ರಂ ॥ ಎತ್ತಣದೆಂಬೀ ಶಬ್ದಮ ।**
**ನೆತ್ತಣ್ತೆಂದಿಂತು ಕೂಡಿ ನುಡಿಯಲ್ಕಕ್ಕುಂ ॥**
**ಮತ್ತಾರದೆಂಬುದಂ ವಿಬು ।**
**ಧೋತ್ತಮರಾರ್ತೆಂದು ಕೂಡಿ ನುಡಿಯಲ್ಕಕ್ಕುಂ ॥ ೧೪೫ ॥**

**ಟೀಕೆ** - 'ಎತ್ತಣದು' ಎಂಬೀ ಶಬ್ದಮಂ, ಎತ್ತರ್ಣ್ತೆಂದು, ಇಂತು = ಹೀಗೆ, ಕೂಡಿ ನುಡಿಯಲ್ಕೆ = ಕೂಡಿ ನುಡಿವುದರ್ಕೆ, ಅಕ್ಕುಂ = ಅಪ್ಪುದು; ಮತ್ತೆ = ಬಳಿಕಂ, ಆರದೆಂಬುದಂ = ಆರದೆಂಬ ಶಬ್ದಮಂ, ವಿಬುಧೋತ್ತಮರ್ = ವಿದ್ವಚ್ಛ್ರೇಷ್ಠರ್, ಆರ್ತೆಂದು = ಆರ್ತು ಎಂದು, ಕೂಡಿ ನುಡಿಯಲ್ಕೆ = ಕೂಡಿ ನುಡಿವುದರ್ಕೆ, ಅಕ್ಕುಂ = ಅಪ್ಪುದು.

**ವೃತ್ತಿ** - ಎತ್ತಣದೆಂಬೀ ಶಬ್ದಕ್ಕೆ ಎತ್ತರ್ಣ್ತೆಂದುಂ, ಆರದೆಂಬ ಶಬ್ದಕ್ಕೆ ಆರ್ತೆಂದು ಮಾದೇಶಮಕ್ಕುಂ.

**ಪ್ರಯೋಗಂ** -

ಕಂ ॥ ದೆಸೆಯೆತ್ತರ್ಣ್ತೆತ್ತಣ್ತಾ
ಗಸಮೆತ್ತಣ್ತುರ್ವಿಯೆನಿಸೆ ಪರ್ಬಿದುದು ತಮಂ ೧

ಕಂ ॥ ಆರ್ತೀ ತುರಂಗಮಿಂತಿದ
ನಾರ್ತಂದರ್ ದಿವ್ಯವಸ್ತುವಂ ... ೨

**ಸೂತ್ರಂ ॥ ಅದುವಿದುವುದುವೆಂಬಿವಱಂ ।**
**ತ್ಯ ದುಕಾರಕ್ಕೊದವುಗುಂ ವಕಾರಂ ಪುಲ್ಲಿಂ ॥**
**ಗದೊಳಲ್ಲಿ ತಕಾರಂ ಮೇ ।**
**ಣೊದವಿರೆ [೧]ಬೆಚ್ಚರದೆ ಬರ್ಪುದಾದಿಗೆ ದೀರ್ಘಂ ॥ ೧೫೦ ॥**

**ಟೀಕೆ** - ಪುಲ್ಲಿಂಗದೊಳ್ = ಪುಲ್ಲಿಂಗದಲ್ಲಿ, ಅದು , ಇದು, ಉದು, ಎಂಬಿವಱ = ಎಂಬೀ ಶಬ್ದಂಗಳ, ಅಂತ್ಯ ದುಕಾರಕ್ಕೆ = ಕಡೆಯ ದುಕಾರಕ್ಕೆ, ವಕಾರಂ = ವತ್ವಂ, ಒದವುಗುಂ = ಬರ್ಪುದು; ಅಲ್ಲಿ = ಈ ಶಬ್ದಂಗಳ್ ಪುಲ್ಲಿಂಗವಾಗುವಲ್ಲಿ , ಮೇಣ್ = ವಿಕಲ್ಪದಿಂದೆ, ತಕಾರಂ, ಒದವಿರೆ = ಬಂದಿರೆ, ಬೆಚ್ಚರದೆ = ಶೀಘ್ರದಿಂದೆ, ಆದಿಗೆ = ಮೊದಲ ಅಕ್ಷರಕ್ಕೆ, ದೀರ್ಘಂ, ಬರ್ಪುದು.

**ವೃತ್ತಿ** - ಅದು ಇದು ಉದು ಎಂಬಿವಱ ಕಡೆಯ ದುಕಾರಕ್ಕೆ [ಪುಲ್ಲಿಂಗದೊಳ್] ವಕಾರಾದೇಶಮಕ್ಕುಂ; ಆ ದುಕಾರಕ್ಕೊರ್ಮೆ ಪೂರ್ವಕ್ಕೆ ದೀರ್ಘಂ ಬೆರಸು ತಕಾರಾ ದೇಶಮಕ್ಕುಂ.

**ಪ್ರಯೋಗಂ** -

ವಕಾರಾದೇಶಕ್ಕೆ - ಅವಂ, ಇವಂ, ಉವಂ.

ಬಹುವಚನಕ್ಕೆ - ಅವರ್, ಇವರ್, ಉವರ್.

ತಕಾರಾದೇಶಕ್ಕೆ - ಆತಂ, ಈತಂ, ಊತಂ.

ಕಂ ॥ ಆತಂ ದುರ್ಯೋಧನನಿಂ
ತೀತಂ ರವಿಜಾತನೂತನಶ್ವತ್ಥಾಮಂ ೧

ಬಹುವಚನಕ್ಕೆ - ಆತಂಗಳ್, ಈತಂಗಳ್, ಊತಂಗಳ್.

~~~~~~~~~~~~~~~~~~~

೧. (ಬೆಚ್ಚರದೆ ಬರ್ಕುಮಾದಿಗೆ)
~~~~~~~~~~~~~~~~~~~

**ಸೂತ್ರಂ ॥ ಆವುದೆನಿಪ್ಪೀ ಶಬ್ದ ।**
**ಕ್ಕಾವಂ ಬಹುವಚನದೆಡೆಯೊಳಾರೆಲ್ಲದೆನಿ ॥**
**ಪ್ಪಾ ವಚನಮುದೇಕತ್ವಮ ।**
**ನಾವರಿಸಿದೊಡೆಲ್ಲಮೆಂದೆ ಆಯ್ತಾದೇಶಂ ॥ ೧೫೧ ॥**

**ಟೀಕೆ –** ಪುಲ್ಲಿಂಗದೊಳ್ ಎಂಬುದು ಅನುವರ್ತನೆ; ಆವುದು = ಆವುದೆಂದು, ಎನಿಪ್ಪ = ಎನಿಸುವ, ಈ ಶಬ್ದಕ್ಕೆ = ಈ ಸರ್ವನಾಮಶಬ್ದಕ್ಕೆ, ಆವಂ = ಆವಂ ಎಂದಾಗುವುದು; ಬಹುವಚನದ = ಬಹುತ್ವದ, ಎಡೆಯೊಳ್ = ಸ್ಥಾನದಲ್ಲಿ, ಆರ್ = ಆರೆಂದಾಗುವುದು; ಎಲ್ಲದು = ಎಲ್ಲದೆಂದು, ಎನಿಪ್ಪ = ಎನಿಸುವ, ಆ ವಚನಂ = ಆ ಬಹುವಚನಂ, ಅದು, ಏಕತ್ವಮಂ = ಏಕವಚನಮಂ, ಆವರಿಸಿದೊಡೆ = ಪೊರ್ದುಗೆಯಾದೊಡೆ, ಎಲ್ಲಮೆಂದೆ = ಎಲ್ಲಂ ಎಂದೆ, ಆದೇಶಂ, ಆಯ್ತು.

**ವೃತ್ತಿ -** ಆವುದೆಂಬ ಶಬ್ದಕ್ಕೆ ಪುಲ್ಲಿಂಗದೇಕವಚನದೊಳಾವನೆಂದುಂ ಬಹುವಚನದೊಳಾರೆಂದುಮಾದೇಶಂ; ಎಲ್ಲದೆಂಬ ಶಬ್ದಕ್ಕೆ ಲಿಂಗತ್ರಯದಲ್ಲಿಯುಂ ಎಲ್ಲಮೆಂದಾದೇಶಂ.

**ಪ್ರಯೋಗಂ -**

ಆವುದೆಂಬುದರ್ಕೆ -

ಕಂ ॥ ಆವಂ ಮುರನಂ ಕೊಂದನ
ದಾವಂ ಬಕಕಂಸಕೇಶಿಗಳನದಟಲೆದಂ ೧

ಆರ್ಮೆಯ್ದೋರ್ಪರಾರ್ ಮಲೆವರಾರ್ ಪೊಣರ್ವರಾರ್
ತೂಳ್ದುವರಾರವಂ ಜವನೆ ದಲ್ ತಾನೆಂದು... ೨

ಎಲ್ಲದೆಂಬುದರ್ಕೆ - ಏಕವಚನಕ್ಕೆ -

ಕಂ ॥ ಎಲ್ಲಂಗಮೆಲ್ಲ ಧನಮುಮ
ನೆಲ್ಲೆಡೆಯೊಳಮೆಲ್ಲ ತೆಱದೊಳಂ ಕುಡುಗೆಮ ... ೩
(ಕಾವ್ಯಾವಲೋಕನಂ ೨೫೩)

[1]ಕಂ ॥ ... ಪರಲೆಲ್ಲಂ ಮುತ್ತುಮಾಣಿಕಂ ... ೪
(ಸೂಕ್ತಿಸುಧಾರ್ಣವಂ ೩-೧೨)

[2]ಉ ॥ ಮಾ ॥ ಮುತ್ತಿದನೊಂದೆ ತೇರೊಳಮರೇಂದ್ರಸುತಂ ಕುರುವೃಂದಮೆಲ್ಲಮಂ ... ೫

ಬಹುವಚನಕ್ಕೆ -

ಕಂ ॥ ಎಲ್ಲರುಮಾ ಕರ್ಣನಂತಿರೇಂ ಚಾಗಿಗಳೇ ... ೬

**ಸೂತ್ರಂ ॥ ಪೆಱತೆಂಬಿವಱಂತ್ಯಾಕ್ಷರ ।**
**ಮಱಿಗುಂ ಗುಣವಚನದಂತ್ಯ ದುತ್ವಕ್ಕತ್ವಂ ॥**
**ನೆಱಿಗುಂ ತುಕಾರಮಿರೆ ಬಂ ।**
**ದೆಱಗುಗುಮಾ ತಾಣದೊಳ್ ದಕಾರಾದೇಶಂ ॥ ೧೫೨ ॥**

~~~~~~~~~~~~~~~~~~~

೧, ೨. (ಈ ಪ್ರಯೋಗಗಳು ಪ್ರಥಮ ಪರಿಷ್ಕರಣದಲ್ಲಿಲ್ಲ.)
~~~~~~~~~~~~~~~~~~~

**ಟೀಕೆ** - ಪುಲ್ಲಿಂಗದೊಳ್ ಎಂಬುದು ಅನುವರ್ತನೆ; ಪೆಱತೆಂಬಿವಱ = ಪೆಱತು ಪೆಱದು ಎಂಬೀ ಶಬ್ದಂಗಳ, ಅಂತ್ಯಾಕ್ಷರಂ = ಕಡೆಯಣಕ್ಷರಂ, ಅೞಿಗುಂ = ಲೋಪವಾಗುವುದು; ಗುಣವಚನದ = ಗುಣವಚನಂಗಳ, ಅಂತ್ಯದುತ್ವಕ್ಕೆ = ಅಂತ್ಯದ ದುಕಾರಕ್ಕೆ, ಅತ್ವಂ = ಅಕಾರಂ, ನೆಱೆಗುಂ = ಬರ್ಪುದು; ತುಕಾರಂ, ಇರೆ, ಆ ತಾಣದೊಳ್ = ಆ ತಾವಿನಲ್ಲಿ, ದಕಾರಾದೇಶಂ, ಬಂದು, ಎಱಗುಗುಂ = ಪೊರ್ದುಗೆಯಾಗುವುದು.

**ವೃತ್ತಿ** - ಪೆಱತು ಪೆಱದು ಎಂಬ ಶಬ್ದಂಗಳ ಕಡೆಯಕ್ಕರಕ್ಕೆ ಲೋಪಂ; ಗುಣವಚನದ ಕಡೆಯ ದುಕಾರಕ್ಕಕಾರಾದೇಶಂ; ಆ ಗುಣವಚನಂ ತುಕಾರಾಂತಮಾಗಿರೆ ದಕಾರಾದೇಶಂ.

**ಪ್ರಯೋಗಂ** -

**ಅಂತ್ಯಾಕ್ಷರಲೋಪಕ್ಕೆ** -

ಕಂ ॥ ... ನರನೆಂ
ಬಾತಂ ಪೆಱನಲ್ಲನೀತನಾಗಲೆ ವೇೞ್ಕುಂ ೧

**ಬಹುವಚನಕ್ಕೆ** -

ತರಳಂ ॥ ಪೆಱರುಮನ್ನರಿನಿನ್ನುಮಾರಯಿಸಿಂ ವಿದಗ್ಧರಿಂ ... ೨
(ಕಾವ್ಯಾವಲೋಕನಂ ೯೫)

**ಅಕಾರಾದೇಶಕ್ಕೆ** -

ಚಂ ॥ ಮಾ ॥ ಇನಿಯನೆ ಬೆಲ್ಲದಿಂದಿನಿಯನೀವನೆ ಅಃ ಪಿರಿದೀವನಿತ್ತುದಂ
ನೆನೆವನೆ ಚೀ ಅದಂ ನೆನೆಯಂ ... ೩
(ಕಾವ್ಯಾವಲೋಕನಂ ೫೨)

ಪಿರಿಯಂ, ಕಿಱಿಯಂ; ಅಸಿಯಂ, ಬಿಸಿಯಂ; ಕಡಿಯಂ, ನಿಡಿಯಂ.

**ದಕಾರಾದೇಶಕ್ಕೆ** -

ಒಳ್ಳಿದಂ, ತೆಳ್ಳಿದಂ; ಮೆಲ್ಲಿದಂ, ಬೆಟ್ಟಿದಂ; ತೋರಿದಂ, ನೇರಿದಂ, ಕೂರಿದಂ.

ಕಂ ॥ ಕೂರಿದನುಂ ನೇರಿದನುಂ
ಕೂರಸಿಯಂತೆನಿಸಿ ಮೆಱೆವನಾ ನರನಾಥಂ ೪

**ಸೂತ್ರಂ ॥ ಎಳದು ಪಟಿದೆಂಬ ಶಬ್ದಂ ।**
**ಗಳ ಮಧ್ಯಕ್ಕುಂಟೆಕಾರಮುತ್ವಂ ಬೞ್ದೆಂ ॥**
**ದೊಳಱುವ ೞಕಾರದೊಳ್ ನೀಂ ॥**
**ತಿಳಿ ಪೊಸತಱ ಕಡೆಗೆ ಬಿಂದುವೆರಸು ಬಕಾರಂ ॥ ೧೫೩ ॥**

**ಟೀಕೆ** - ಗುಣವಚನಪುಲ್ಲಿಂಗದಲ್ಲಿ ಎಂಬುದು ಅನುವರ್ತನೆ, ಎಳದು ಪಟಿದು ಎಂಬ ಶಬ್ದಂಗಳ, ಮಧ್ಯಕ್ಕೆ = ನಡುವಣಕ್ಕರಕ್ಕೆ, ಎಕಾರಂ, ಉಂಟು; ಬೞ್ದು ಎಂದು, ಒಳಱುವ = ಧ್ವನಿಗೆಯ್ವ, ೞಕಾರದೊಳ್, ಉತ್ವಂ, ಉಂಟಾಗುವುದು; ಪೊಸತಱ = ಪೊಸತೆಂಬ ಶಬ್ದದ, ಕಡೆಗೆ = ಅಂತ್ಯಾಕ್ಷರಕ್ಕೆ, ಬಿಂದುವೆರಸು ಬಕಾರಂ = ಆದಿಯಲ್ಲಿ ಬಿಂದುಗೂಡಿದ ಬಕಾರಂ ಉಂಟಾಗುವುದು; ನೀಂ, ತಿಳಿ.

**ವೃತ್ತಿ** - ಎಳದು ಪಟಿದು ಎಂಬ ಶಬ್ದಂಗಳ್ಗೆ ಪುಲ್ಲಿಂಗದಕಾರಂ ಬರೆ ಮಧ್ಯಕ್ಕೆ ಹ್ರಸ್ವಮಪ್ಪೆತ್ವಮಕ್ಕು; ಬೞ್ದೆಂಬ ಶಬ್ದದ ೞಕಾರಕ್ಕೆ ಉಕಾರಾದೇಶಂ; ಪೊಸತೆಂಬುದಱ ತುಕಾರಕ್ಕೆ ಬಿಂದುವೆರಸು ಬಕಾರಾದೇಶಮಕ್ಕುಂ.

ಪ್ರಯೋಗಂ -

ಎಳದು ಪೞದೆಂಬುವರ್ಕೆ - ಎಳೆಯಂ, ಪೞೆಯಂ

ಸ್ತ್ರೀಲಿಂಗದ ಅಳ್ ಪರಮಾಗೆಯುಮಂತೆ - ಎಳೆಯಳ್, ಪೞೆಯಳ್.

ಕಂ ॥ ಎಳೆಯಳಿರುತೆನ್ನ ಪಕ್ಕದೊ
ಳೆಳಸಿ ಮನೋಜಾತರೂಪ ತಾಂ ... ೧

ಬೞದೆಂಬುದರ್ಕೆ - ಬೞುವಂ.

ಪೊಸತರ್ಕೆ - ಪೊಸಂಬಂ

ಉ ॥ ಮಾ ॥ ... ವಿಚಾರಿಸದುಂತೆ ಪೊಸಂಬರೊತ್ತೆಯಂ
ಕೊಳ್ವುದು ತಕ್ಕುದಲ್ತು ... ೨

**ಸೂತ್ರಂ ॥ ಅದುವಿದುವುದುವೆಂಬಿವಱಂ**
**ತ್ಯದೊಳ್ ವಳಾದೇಶವಿಧಿ ಕೆಕಾರಂ ಮೇಣ್ ಬಂ ॥**
**ದೊದವಿರೆ ಬರ್ಕುಂ ಸ್ತ್ರೀಲಿಂ ।**
**ಗದೊಳಂ ಪುಲ್ಲಿಂಗದಂತಿರಾದಿಗೆ ದೀರ್ಘಂ ॥ ೧೫೪ ॥**

**ಟೀಕೆ** - ಸ್ತ್ರೀಲಿಂಗದೊಳಂ = ಸ್ತ್ರೀಲಿಂಗದಲ್ಲಿಯುಂ, ಅದು, ಇದು, ಉದು, ಎಂಬಿವಱ = ಎಂಬೀ ಶಬ್ದಂಗಳ, ಅಂತ್ಯದೊಳ್ = ಕಡೆಯಕ್ಷರದಲ್ಲಿ, ವಳಾದೇಶವಿಧಿ = ವಳ್ ಎಂಬಾದೇಶದ ವಿಧಿ ಬರ್ಪುದು; ಮೇಣ್ = ವಿಕಲ್ಪದಿಂದೆ, ಕೆಕಾರಂ, ಬಂದು = ಆದೇಶವಾಗಿ ಬಂದು, ಒದವಿರೆ = ಬಂದಿರೆ, ಪುಲ್ಲಿಂಗದಂತಿರೆ = ಪುಲ್ಲಿಂಗದ ಹಾಗೆ ಸ್ತ್ರೀಲಿಂಗದಲ್ಲಿಯುಂ, ಆದಿಗೆ = ಮೊದಲಕ್ಷರಕ್ಕೆ, ದೀರ್ಘಂ, ಬರ್ಕುಂ = ಬರ್ಪುದು.

**ವೃತ್ತಿ** - ಅದು ಇದು ಉದು ಎಂಬಿವಱ ದುಕಾರಕ್ಕೆ ಸ್ತ್ರೀಲಿಂಗದೊಳ್ ವಳಾದೇಶಂ; ಆ ದುಕಾರಕ್ಕೆ ಮೇಣ್ ಕೆಕಾರಮುಂ, ಪುಲ್ಲಿಂಗದಂತಿರೆ ಆದಿಗೆ ದೀರ್ಘಮುಮಕ್ಕುಂ.

ಪ್ರಯೋಗಂ -

ವಳ್ಗೆ - ಅವಳ್, ಇವಳ್, ಉವಳ್.

ಕೆಕಾರಕ್ಕೆ - ಆಕೆ, ಈಕೆ, ಊಕೆ.

**ಸೂತ್ರಂ ॥ ಕೆಲಕೆಲವು ಸಕ್ಕದದ ಮೂ ।**
**ಱುಲಿಂಗಮುಂ ರೂಢಿವೆತ್ತ ಕರ್ಣಾಟಕದೊಳ್ ॥**
**ನಿಲೆ ನಪ್ಪುಱು ಸಜ್ಜನವದು ।**
**ಕುಲವಧುವೆಂಬಲ್ಲಿ ಕನ್ನಡಂ ನಪ್ಪದುವುಂ ॥ ೧೫೫ ॥**

**ಟೀಕೆ** - ಕೆಲಕೆಲವು = ಹಲವು ಕೆಲವು, ಸಕ್ಕದದ = ಸಂಸ್ಕೃತದ, ಮೂಱು ಲಿಂಗಮುಂ = ಸ್ತ್ರೀಪುಂನಪುಂಸಕಗಳೆಂಬ ಮೂಱು ಲಿಂಗಮುಂ, ರೂಢಿವೆತ್ತ ಕರ್ಣಾಟಕದೊಳ್ = ರೂಢಿಯಾದ ಕನ್ನಡದಲ್ಲಿ, ನಿಲೆ = ನೆಲಸೆ, ನಪ್ಪು = ನಪುಂಸಕಲಿಂಗಮಾಗುವುವು; ಅಱು = ತಿಳಿ; ಸಜ್ಜನಂ ಅದು = ಸಜ್ಜನವೆಂಬ ಶಬ್ದಂ, ಕುಲವಧು = ಕುಲವಧುವೆಂದು, ಎಂಬಲ್ಲಿ = ಎಂಬೆಡೆಯಲ್ಲಿ, ಕನ್ನಡಂ = ಕನ್ನಡವಾಗಿ, ಅದುವುಂ = ಆ ಶಬ್ದವುಂ, ನಪ್ಪು = ನಪುಂಸಕಲಿಂಗವಾಗುವುದು, ತಿಳಿ.

**ವೃತ್ತಿ** - ಕೆಲಕೆಲವು ಸಕ್ಕದದ ಮೂಱುಲಿಂಗಮುಂ ಕನ್ನಡಕ್ಕೆ ಬಂದಲ್ಲಿ ನಪುಂಸಕಮಕ್ಕುಂ; ಸಜ್ಜನಶಬ್ದಂ ಕುಲಸ್ತ್ರೀಯಂ ಪೇೞ್ವಲ್ಲಿ ಕನ್ನಡದೊಳೆಂದುಂ ನಪುಂಸಕಮೆ ಅಕ್ಕುಂ.

ಪ್ರಯೋಗಂ -

ಸಂಸ್ಕೃತ ಲಿಂಗತ್ರಯಂಗಳೊಳ್ -

ಪುಲ್ಲಿಂಗಕ್ಕೆ -

ವೃಕ್ಷಂ ತಳಿರ್ತುದು, ವಾಯು ತೀಡಿದುದು.

ಸ್ತ್ರೀಲಿಂಗಕ್ಕೆ -

ಪ್ರೀತಿಯಾದುದು, ಧರೆ ಬೆಳೆದುದು, ನದಿ ಬಂದುದು, ಮತಿ ಪೆರ್ಚಿದುದು.

ನಪುಂಸಕಕ್ಕೆ -

ಕುಲಂ ಮೇಲೆನಿಸಿದುದು.

ಸಜ್ಜನಶಬ್ದಕ್ಕೆ -

ಆ ಸತಿ ಸಜ್ಜನಮಾಟ್ಕೆಯಿನೆಂದುಂಟು.

ಸಮುಚ್ಚಯದಿಂ ಅಪತ್ಯ, ಕಳತ್ರ ಎಂಬ ಶಬ್ದಂಗಳ್ ಸ್ತ್ರೀವಾಚಕಮಾಗಿಯುಂ, ಜನಶಬ್ದ ಲೋಕಶಬ್ದಂಗಳ್ ಪುರುಷವಾಚಕಂಗಳಾಗಿಯುಂ ನಪುಂಸಕಂ -

ಇದು ಕಳತ್ರಂ; ಇದಪತ್ಯಂ; ಇದು ಜನಂ; ಇದು ಲೋಕಂ.

**ಸೂತ್ರಂ ॥ ನೆಲಸಿರ್ದ ವಿಶೇಷಣದಿ ।**
**ಷ್ಟಲಿಂಗಮೆನಿಪುದು ವಿಶೇಷ್ಯಮದಱಿಷ್ಟದಿನ ॥**
**ಗ್ಗಲಿಕುಂ ವಿಶೇಷಣದ ಲಿಂ ।**
**ಗಲಕ್ಷಣಂ ದೋಷರಹಿತಮಿದು ರೂಪಕದೊಳ್ ॥ ೧೫೬ ॥**

**ಟೀಕೆ** - ವಿಶೇಷ್ಯಂ = ವಿಶೇಷ್ಯಲಿಂಗಂ, ನೆಲಸಿರ್ದ, ವಿಶೇಷಣದ, ಇಷ್ಟಲಿಂಗಂ = ಇಷ್ಟವಾದ ಲಿಂಗಂ, ಎನಿಪುದು; ಅದಱ = ಆ ವಿಶೇಷ್ಯದ, ಇಷ್ಟದಿಂ, ವಿಶೇಷಣದ, ಲಿಂಗಲಕ್ಷಣಂ, ಅಗ್ಗಲಿಕುಂ = ಪೆರ್ಚುಗೆವಡೆವುದು; ಇದು = ಈ ಪ್ರಯೋಗಂ, ರೂಪಕದೊಳ್, ದೋಷರಹಿತಂ = ನಿರ್ದೋಷವಪ್ಪುದು.

**ವೃತ್ತಿ** - ವಿಶೇಷಣದ ಲಿಂಗದಿಷ್ಟದಿಂ ವಿಶೇಷ್ಯಮುಮನಾ ಲಿಂಗವಾಗಿ ಯೋಜಿಸಿಕೊಳ್ವುದು; ವಿಶೇಷ್ಯಲಿಂಗದಿಷ್ಟದಿಂ ವಿಶೇಷಣಮುಮನಾ ಲಿಂಗಮಾಗಿ ಯೋಜಿಸಿಕೊಳ್ವುದು. ರೂಪಕದೊಳಿದು ನಿರ್ದೋಷಂ.

**ಪ್ರಯೋಗಂ** -

ವಿಶೇಷಣಬಲಕ್ಕೆ -

ಮ ॥ ವಿ ॥ ಉದಯಾಸ್ತೋನ್ನತಶೈಲಸೇತುಹಿಮವತ್ಕುಕ್ಷಿಲಪರ್ಯಂತಸಂ ।
ಪದೆಯಂ ವಾರ್ಧಿತರತ್ತರಂಗನಿನದತ್ಕಾಂಚೀಕಲಾಪಾಂಚಿತಾ ॥
ಸ್ಪದೆಯಂ ಸಾಧಿಸಿ ಕಚ್ಚಿಗಂಗೆ ನೆಲನಂ ನಿರ್ವ್ಯಾಜದಿಂದಂ ನಿಮಿ ।
ರ್ಚಿದ ಗಲ್ಲಂ ಭುವನೈಕರಾಮಮಹಿಪಂಗಕ್ಕುಂ ಪೆಱರ್ಗಕ್ಕುಮೇ ॥ ೧
(ಕಾವ್ಯಾವಲೋಕನಂ ೧೭೩)

- ಎಂಬಲ್ಲಿ ನೆಲನೆಂಬುದು ನಪುಂಸಕಲಿಂಗಮದಂ ಬಿಟ್ಟು, ಧರಾವಸಿತೆಯೆಂದು ಸ್ತ್ರೀಲಿಂಗಮಾಗಿ ಯೋಜಿಸಿಕೊಳ್ವುದು.

ವಿಶೇಷ್ಯಬಲಕ್ಕೆ -

ಆತಂ ಜಗದ್ದರ್ಪಣಂ; ಆ ಪೆಣ್ ಜಗದ್ದರ್ಪಣಂ; ಅದು ಜಗದ್ದರ್ಪಣಂ.

**ಸೂತ್ರಂ ॥ ಪದಮಧ್ಯ ವತ್ವ ಯತ್ವ ।**
**ಕ್ಕೊದವುಗುಮೌತ್ವೈತ್ವವಿಧಿಯದಂತಕ್ಕೊತ್ವಂ ॥**
**ಪುದಿದಿರ್ಕುಂ ಹ್ರಸ್ವತೆಯಿಂ ।**
**ವಿದಿತವಿಕಲ್ಪಂ ತಗುಳ್ಗುಮೀ ಮೂಱಱೊಳಂ ॥ ೧೫೭ ॥**

**ಟೀಕೆ** - ಪದ = ಪದಂಗಳ, ಮಧ್ಯ = ನಡುವಣ, ವತ್ವಯತ್ವಕ್ಕೆ = ವಕಾರ ಯಕಾರಂಗಳ್ಗೆ, ಔತ್ವೈತ್ವವಿಧಿ = ಔಕಾರದ ಐಕಾರದ ವಿಧಿ, ಒದವುಗುಂ = ಬರ್ಪುದು; ಅದಂತಕ್ಕೆ = ಅಕಾರಾಂತಕ್ಕೆ, ಹ್ರಸ್ವತೆಯಿಂ = ಹ್ರಸ್ವತ್ವದಿಂದೆ, ಒತ್ವಂ, ಪುದಿದಿರ್ಕುಂ = ಪ್ರವೇಶವಾಗಿರ್ಪುದು; ಈ ಮೂಱಱೊಳಂ, ವಿದಿತ = ಪ್ರಸಿದ್ಧವಾದ, ವಿಕಲ್ಪಂ, ತಗುಳ್ಗುಂ = ಎಯ್ದುವುದು.

**ವೃತ್ತಿ** - ಪದಮಧ್ಯ ವಕಾರ ಯಕಾರಂಗಳ್ಗೆ ಔಕಾರಮುಂ ಐಕಾರಮುಮಕ್ಕುಂ ; ಪದಾಂತ್ಯದ ಅಕಾರಕ್ಕೆ ಹ್ರಸ್ವೋತ್ವಮಕ್ಕುಂ; ಇವಱೊಳ್ ವಿಕಲ್ಪಮುಂಟು.

**ಪ್ರಯೋಗಂ** -

ಔಕಾರಕ್ಕೆ -

ಕವುಂಗು - ಕೌಂಗು; ಕವುಂಕುಟ್ - ಕೌಂಕುಟ್; ಅವುಂಕಿದಂ - ಔಂಕಿದಂ; ಅವುಂಡು - ಔಂಡು; ಕವುಂಡೆ = ಕೌಂಡೆ; ತವುಂಕಲ್ - ತೌಂಕಲ್.

ಐಕಾರಕ್ಕೆ -

ತೇರಯಿಸಿದಂ - ತೇರೈಸಿದಂ; ಕೋರಯಿಸಿದಂ - ಕೋರೈಸಿದಂ; ತೆಲ್ಲಯಿಸಿದಂ - ತೆಲ್ಲೈಸಿದಂ; ಹೊಲ್ಲಯಿಸಿದಂ - ಹೊಲ್ಲೈಸಿದಂ; ಕಯ್ವಾರಂ - ಕೈವಾರಂ.

ಒತ್ವಕ್ಕೆ -

ಆವಂ - ಆವೊಂ; ನುಡಿದಂ - ನುಡಿದೊಂ; ಪಾಡಿದಂ - ಪಾಡಿದೊಂ.

**ಸೂತ್ರ ॥ ಅಸಮಾಸದೊಳಂ ದೊರೆವೆ ।**
**ತ್ತ ಸಮಾಸದೊಳಂ ಣಕಾರದಿಂ ಪರದೊಳ್ ಸಂ ॥**
**ದಿಸಿದ ನಕಾರಂ ಣತ್ವಂ ।**
**ಪ್ರಸಿದ್ಧಮುಚ್ಚರಿಸುವರ್ಗೆ ದುಷ್ಕರಮದುವುಂ ॥ ೧೫೮ ॥**

**ಟೀಕೆ** - ಅಸಮಾಸದೊಳಂ = ಸಮಾಸವಲ್ಲದಲ್ಲಿಯುಂ, ದೊರೆವೆತ್ತ = ಪ್ರಸಿದ್ಧಿವಡೆದ, ಸಮಾಸದೊಳಂ, ಣಕಾರದಿಂ, ಪರದೊಳ್, ಸಂದಿಸಿದ, ನಕಾರಂ, ಣತ್ವಂ = ಣಕಾರವಪ್ಪುದು, ಪ್ರಸಿದ್ಧಂ; ಅದುವುಂ = ಆ ಪ್ರಯೋಗವುಂ, ಉಚ್ಚರಿಸುವರ್ಗೆ = ಓದುವರ್ಗೆ, ದುಷ್ಕರಂ, ಆಗಿರ್ಪುದು.

**ವೃತ್ತಿ** - ಭಿನ್ನಪದದೊಳಂ ಸಮಾಸಪದದೊಳಂ ಣಕಾರಕ್ಕೆ ಪರಮಾದ ನಕಾರಂ ಣಕಾರಮನೆಯ್ದುಗುಂ; ಪ್ರಯೋಗಮುಂಟಾದೊಡಮಿಾಯುಚ್ಚಾರಣಂ ಸುಭಗಮಲ್ಲ.

**ಪ್ರಯೋಗಂ** -

ಭಿನ್ನಪದಕ್ಕೆ -

ಕಣ್ ನೊಂದಪುದು - ಕಣ್ಣೊಂದಪುದು; ಪುಣ್ ನಾಳಿವೋದಪುದು - ಪುಣ್ಣಾಳಿವೋದಪುದು; ಜಾಣ್ ನೆರೆದಪುದು - ಜಾಣ್ಣೆರೆದಪುದು.

ಸಮಾಸಕ್ಕೆ -

ತಣ್ + ನೆಟಿಲ್ = ತಣ್ಣೆಟಿಲ್; ಕಣ್ + ನೀರ್ = ಕಣ್ಣೀರ್; ಕಣ್ + ನೋಟಂ = ಕಣ್ಣೋಟಂ.

**ಸೂತ್ರಂ ॥ ಸಂದ ಪಕಾರಕ್ಕೆ ಹಕಾ ।**
**ರಂ ದೊರೆಕೊಳ್ಗುಂ ವಿಕಲ್ಪದಿಂ ಸಂಯೋಗಂ ॥**
**ಸಂದಿಸಿದೊಡೆ ದುಷ್ಕರಮದು ।**
**ಸುಂದರಮಾ ದೇಶಿಯಿಂದಮೆಂಬರ್ ವಿಬುಧರ್ ॥ ೧೫೫ ॥**

**ಟೀಕೆ** - ಸಂದ ಪಕಾರಕ್ಕೆ = ಕನ್ನಡದಲ್ಲಿ ಸಂದ ಪತ್ವಕ್ಕೆ, ಹಕಾರಂ, ವಿಕಲ್ಪದಿಂ, ದೊರೆಕೊಳ್ಗುಂ = ಬರ್ಪುದು; ಸಂಯೋಗಂ = ದ್ವಿತ್ವಾಕ್ಷರಂ, ಸಂದಿಸಿದೊಡೆ = ಬಂದೊಡೆ, ಅದು, ದುಷ್ಕರಂ = ಮಾಡಬಾರದು; ಆ ದೇಶಿಯಿಂದಂ = ಪ್ರಸಿದ್ಧವಾದ ದೇಶಿಯ ಭಾಷೆಯಿಂದಂ, ಸುಂದರಂ = ಸೌಂದರ್ಯವೆಂದು, ವಿಬುಧರ್ = ವಿದ್ವಾಂಸರ್, ಎಂಬರ್ = ಪೇೞ್ವರ್.

**ವೃತ್ತಿ** - ಕರ್ಣಾಟಕ ಶಬ್ದದ ಪಕಾರಕ್ಕೆ ವಿಕಲ್ಪದಿಂ ಹಕಾರಮಕ್ಕುಂ; ದ್ವಿತ್ವದೊಳ್ ಪಕಾರಕ್ಕೆ ಹಕಾರಮಿಲ್ಲ.

**ಪ್ರಯೋಗಂ** -

ಹಕಾರಕ್ಕೆ -

ಪಲಗೆ - ಹಲಗೆ; ಪಂದರ್ - ಹಂದರ್; ಪಾಸು - ಹಾಸು; ಪಂದಿ - ಹಂದಿ; ಪುಲಿ - ಹುಲಿ; ಪಲಸು - ಹಲಸು.

ಇದು ದೇಶಿಯೊಳ್ ಚೆಲ್ವು.

ದ್ವಿತ್ವಕ್ಕಿಲ್ಲದುದರ್ಕೆ -

ತಪ್ಪು, ಸೊಪ್ಪು, ಹೆಪ್ಪು, ಟೆಪ್ಪರಂ, ಮುಪ್ಪು, ಉಪ್ಪರಂ, ಟಿಪ್ಪಣಂ, ಮುಪ್ಪುರಿ, ಬಿಪ್ಪಂಡಂ, ಕಪ್ಪುರಂ ಎಂಬಂತೆ.

**ಸೂತ್ರಂ ॥ ಅಂತಹನಿಂತಹನುಂತಹ ।**
**ನೆಂತಹನೆಂದಿಂತು ಪದ್ವಿರುಕ್ತಿಗೆ ಹತ್ವಂ ॥**
**ಭ್ರಾಂತೇಂ ಗಡಾರ್ಥದೊಳ್ [1]ಮೇ ।**
**ಣಂತವಱಿಡೆಗನ್ನನಿನ್ನನುನ್ನಮುಮೆನ್ನಂ ॥ ೧೬೦ ॥**

**ಟೀಕೆ** - ಪದ್ವಿರುಕ್ತಿಗೆ = ಅಂತಪ್ಪನಿಂತಪ್ಪನುಂತಪ್ಪನೆಂತಪ್ಪನೆಂಬ ಪಕಾರದ ದ್ವಿರ್ಭಾವಕ್ಕೆ, ಅಂತಹಂ, ಇಂತಹಂ, ಉಂತಹಂ, ಎಂತಹಂ - ಎಂದು, ಇಂತು = ಹೀಗೆ, ಹತ್ವಂ = ಹಕಾರಮಪ್ಪುದು; ಭ್ರಾಂತೇಂ = ಭ್ರಮೆಯೇಂ; ಗಡಾರ್ಥದೊಳ್ = ಗಡ ಶಬ್ದದರ್ಥದಲ್ಲಿ , ಮೇಣ್ = ವಿಕಲ್ಪದಿಂದೆ, ಅಂತು = ಹಾಗೆ, ಅವಱ = ಅಂತಹಂ

~~~~~~~~~~~~~~~~~~~~

೧. (ಮೇ । ಣಂತವಱಿಡೆಗನ್ನನಿನ್ನನುನ್ನನುಮೆನ್ನಂ)
~~~~~~~~~~~~~~~~~~~~

ಗಡ ಇಂತಹಂ ಗಡ ಉಂತಹಂ ಗಡ ಎಂತಹಂ ಗಡ - ಎಂಬಾ ಶಬ್ದಂಗಳ, ಎಡೆಗೆ = ಸ್ಥಾನಕ್ಕೆ, ಅನ್ನಂ, ಇನ್ನಂ, ಉನ್ನಂ, ಎನ್ನಂ - ಎಂದು ಆಗುವುದು.

**ವೃತ್ತಿ** - ಪ್ರಕಾರಾರ್ಥದ ಅಂತಪ್ಪಂ ಇಂತಪ್ಪಂ ಉಂತಪ್ಪಂ ಎಂತಪ್ಪಂ ಎಂಬಿವರ್ಕೆ ಹಕಾರಮಕ್ಕುಂ; ಮೇಣೆಂಬುದಱಿಂದವರ್ಕೆ ಗಡಶಬ್ದಾರ್ಥಮಪ್ಪಲ್ಲಿ ಅನ್ನಂ, ಉನ್ನಂ, ಇನ್ನಂ, ಎನ್ನಂ ಎಂದುಮಕ್ಕುಂ.

**ಪ್ರಯೋಗಂ** -

ಅಂತಪ್ಪಂ ಮೊದಲಾದುವಱ ಹಕಾರಕ್ಕೆ -

ಅಂತಹಂ, ಇಂತಹಂ, ಉಂತಹಂ, ಎಂತಹಂ.

ಅನ್ನಮಾದಿ ವಿಕಲ್ಪಕ್ಕೆ -

ಮ ॥ ಸ್ರ ॥ ಸಿಡಿಲನ್ನಂ ಸಿಂಗದನ್ನಂ ಪುರಹರನುರಿಗಣ್ಣನ್ನನೀ ನಾರಸಿಂಹಂ ೧
(ಎ.ಕ. iv / vii ನಾಗಮಂ. ೧೫/೧೩೨)

ಚಂ ॥ ಮಾ ॥ ಮನಸಿಜನೆನ್ನನಿನ್ನನರುಣಪ್ರಿಯನಂದನನೆನ್ನನಿನ್ನನಾ
ದಿನಕರನೆನ್ನನಿನ್ನಂ ... ೨

**ಸೂತ್ರಂ ॥ ಮ ನ ಕಾರದ ಪರದೊಳ್ ವ್ಯಂ ।**
**ಜನಮಿರ್ದೊಡಮಿಲ್ಲದೊಡಮನುಸ್ವಾರಂ ಸಂ ॥**
**ಜನಿಯಿಪುದು ವರ್ಗಮಿದಿರಿರೆ ।**
**ತನಗೆ ವಿಕಲ್ಪದೆ ತದೀಯ ಪಂಚಮಮಕ್ಕುಂ ॥ ೧೬೧ ॥**

**ಟೀಕೆ** - ಮ ನ ಕಾರದ = ಮಕಾರ ನಕಾರಂಗಳ, ಪರದೊಳ್ = ಮುಂದೆ, ವ್ಯಂಜನಂ, ಇರ್ದೊಡಂ, ಇಲ್ಲದೊಡಂ, ಅನುಸ್ವಾರಂ = ಸೊನ್ನೆ, ಸಂಜನಿಯಿಪುದು = ಹುಟ್ಟುವುದು; ತನಗೆ = ಆ ಸೊನ್ನೆಯಾದ ತನಗೆ, ವರ್ಗಂ = ವರ್ಗಾಕ್ಷರಂ, ಇದಿರಿರೆ, ವಿಕಲ್ಪದೆ, ತದೀಯಪಂಚಮಂ = ಆ ವರ್ಗದೈದನೆಯಕ್ಷರಂ, ಅಕ್ಕುಂ = ಅಪ್ಪುದು.

**ವೃತ್ತಿ** - ಮ ನ ಕಾರಂಗಳ್ಗೆ ಪರಮಾಗಿ ವ್ಯಂಜನಮಿರ್ದೊಡಮಿಲ್ಲದೊಡಂ ಬಿಂದುವಕ್ಕುಂ. ಆ ಬಿಂದುವಿಂಗಿದಿರಾಗಿ ವರ್ಗಮಿರೆ ವಿಕಲ್ಪದಿನಾ ವರ್ಗದ ಪಂಚಮಮಕ್ಕುಂ.

**ಪ್ರಯೋಗಂ** -

ಮಕಾರಕ್ಕೆ -

ನೀಮ್ ಯೋಗ್ಯರ್ - ನೀಂ ಯೋಗ್ಯರ್; ಆಮ್ ಸುಖಿಗಳ್ - ಆಂ ಸುಖಿಗಳ್; ತಾಮ್ ಸೇವ್ಯರ್ - ತಾಂ ಸೇವ್ಯರ್.

ನಕಾರಕ್ಕೆ -

ಆನ್ ವಾದಿ - ಆಂ ವಾದಿ; ನೀನ್ ಶುಚಿ - ನೀಂ ಶುಚಿ; ತಾನ್ ಸುಜನಂ - ತಾಂ ಸುಜನಂ.

ವ್ಯಂಜನಶೂನ್ಯಕ್ಕೆ -

ನೀನ್, ಆನ್, ತಾನ್; ನೀಮ್, ಆಮ್, ತಾಮ್ - ನೀಂ, ಆಂ, ತಾಂ.

ವರ್ಗಪಂಚಮಕ್ಕೆ -

ಅವಂ ಕಡುಗಲಿ - ಅವಙ್ಕಡುಗಲಿ; ಅವಂ ಚಲವಾದಿ - ಅವಞ್ಚಲವಾದಿ; ಕರಂ ಟಕ್ಕಂ - ಕರಣ್ಟಕ್ಕಂ; ಕೆಂದಳಿರ್ - ಕೆನ್ದಳಿರ್; ಕೆಂಮಣ್ - ಕೆಮ್ಮಣ್; ಹೊಂಬಣ್ಣಂ - ಹೊಮ್ಬಣ್ಣಂ; ಪೊಂಮದಿಲ್ - ಪೊಮ್ಮದಿಲ್.

ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಶಲ್ಯ
ಚಾರುಚುಂಬಕಾಯಮಾನಾನೂನ ಕರ್ಣಾಟಕಲಕ್ಷಣಶಿಕ್ಷಾಚಾರ್ಯ ಸುಕವಿ
ಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ನಾಮನಿಯಾಮಲಕ್ಷಣಮೆಂಬ
ದ್ವಿತೀಯಸಂಧಿ ಸಂಪೂರ್ಣಂ.

# ಮೂರನೆಯ ಸಂಧಿ

## ಸಮಾಸಪ್ರಕರಣಂ

**ಸೂತ್ರಂ ॥ ಕಱು ತಾಯ ಬೞಿಯನುೞಿಯದ ।**
**ತೆಱದಿಂದಂ ನಾಮಪದಮದರ್ಥಾನುಗಮಾ ॥**
**ಗೆಱಗೆ ಸಮಾಸಂ ನೆಗಱ್ಗುಂ ।**
**ನೆಱೆ ಪೋಕುಂ ಮಧ್ಯಗತ ವಿಭಕ್ತಿಗಳವಱೊಳ್ ॥ ೧೬೨ ॥**

**ಟೀಕೆ** - ಕಱು, ತಾಯ ಬೞಿಯಂ, ಉೞಿಯದ ತೆಱದಿಂದಂ = ಬಿಡದ ರೀತಿಯಿಂದೆ, ನಾಮಪದಂ, ಅದು, ಅರ್ಥಾನುಗಂ = ಅರ್ಥದ ಬೆಂಬೞಿವಿಡಿದೆಯ್ದುವುದು, ಆಗಿ, ಎಱಗೆ = ಪೊರ್ದುಗೆಯಾಗೆ, ಸಮಾಸಂ = ಸಮಾಸಪದಂ, ನೆಗಱ್ಗುಂ = ಪ್ರಸಿದ್ಧಿವಡೆವುದು; ಅವಱೊಳ್ = ಆ ಸಮಾಸಂಗಳಲ್ಲಿ, ಮಧ್ಯಗತ ವಿಭಕ್ತಿಗಳ್ = ನಡುವಿರ್ದ ಪ್ರತ್ಯಯಂಗಳ್, ನೆಱೆ = ಚೆನ್ನಾಗಿ, ಪೋಕುಂ = ಲೋಪವಾಗಿ ಪೋಗುವುವು.

**ವೃತ್ತಿ** - ತಾಯ ಬೞಿಯ ಕಱುವಿನಂತೆ ನಾಮಪದಂಗಳರ್ಥಾನುಗತಂಗಳಾಗೆ ಸಮಾಸಂ ಘಟಿಸುಗುಂ; ಅವಱಂತರಾಳದೊಳಿರ್ದ ವಿಭಕ್ತಿಯೆಲ್ಲಂ ಪೋಕುಂ.

**ಪ್ರಯೋಗಂ** -

ತೋಱಿಯ ಮಾವು = ತೋಱಿಮಾವು; ತೊಡೆಯ ಸಕ್ಕಿ = ತೊಡೆಸಕ್ಕಿ; ಎಡೆಯ ನುಡಿ = ಎಡೆನುಡಿ; ನೀರಂ ಕುಡಿದಂ = ನೀರ್ಗುಡಿದಂ; ಮರನಂ ಪಾಯ್ದಂ = ಮರವಾಯ್ದಂ; ಪುಯ್ಯಲ್ಗೆ ಪೋದಂ = ಪುಯ್ಯಲ್ವೋದಂ; ಮೆಲ್ಲಿತ್ತು ಅಡಿ = ಮೆಲ್ಲಡಿ.

**ಸೂತ್ರಂ ॥ ಇರ್ದುದನೞಿಯದೆ ನಯದಿಂ**
**ಪೊರ್ದುವುವಾಗಮಮವೆಯ್ದೆ ಪೋಪುವು ಲೋಪಂ ॥**
**ಬೊರ್ದಿ ವಿಭಕ್ತಿಯ ಬೞಿವಿಡಿ ।**
**ದಿರ್ದುದನೞಿದಿರ್ಪುದರಿಯ ವೋಲಾದೇಶಂ ॥ ೧೬೩ ॥**

**ಟೀಕೆ** - ಇರ್ದುದಂ = ಶಬ್ದಂಗಳಲ್ಲಿರ್ದುದಂ, ಅೞಿಯದೆ = ಲೋಪವಂ ಮಾಡದೆ, ನಯದಿಂ = ಹಿತದಿಂದೆ, ಪೊರ್ದುವುವು = ಪೊರ್ದುಗೆಯಾಗುವುವು, ಆಗಮಂ = ಆಗಮವೆನಿಸುವುವು; ಅವು = ಆ ಆಗಮಂಗಳ್, ಎಯ್ದೆ = ಚೆನ್ನಾಗಿ, ವಿಭಕ್ತಿಯ ಬೞಿವಿಡಿದು = ವಿಭಕ್ತಿಗಳ ಬೆಂಬೞಿವಿಡಿದು, ಲೋಪಂಬೊರ್ದಿ = ಲೋಪವಂ ಪೊರ್ದಿ, ಪೋಪುವು = ಪೋಗುವುವು; ಇರ್ದುದಂ = ಮೊದಲಿರ್ದುದಂ, ಅೞಿದು = ಲೋಪಿಸಿ, ಇರ್ಪುದು, ಅರಿಯ ವೋಲ್ = ಪಗೆಯ ಹಾಗೆ, ಆದೇಶಂ = ಆದೇಶವೆನಿಸುವುದು.

**ವೃತ್ತಿ** - ಇರ್ದುದಂ ಕಿಡಿಸದೆ ಪತ್ತುವುವಾಗಮಂ; ಅವು ವಿಭಕ್ತಿಯೊಡನೆ ಲೋಪಮಪ್ಪುವು. ಪಗೆಯಂತೆ ಇರ್ಪುದಂ ಕಿಡಿಸಿ ಬರ್ಪುದಾದೇಶಂ.

**ಪ್ರಯೋಗಂ** -

ಆಗಮಕ್ಕೆ -

ಮಾತಿನ (= ಮಾತು + ಇನ್ + ಅ) ಬಲ್ಲಹಂ; ನೂಱಱ ಪತ್ತು; ತೆಂಕಣ ವಂಕಂ.

ಆಗಮವಿಭಕ್ತಿಗಳ ಲೋಪಕ್ಕೆ -

ಮಾತುವಲ್ಲಹಂ; ನೂಱಪತ್ತು; ತೆಂಕವಂಕಂ

ಸ್ವಾಗತ ॥ ತೆಂಕವಂಕದೊಳಸಂಖ್ಯಬಲಂ ನಿ
ಶ್ಯಂಕೆಯಿಂ... ೧

(ಕಾವ್ಯಾವಲೋಕನಂ ೧೨೨)

ಆದೇಶಕ್ಕೆ -

ಕಿಱುಕೊಂಬು; ಒರ್ಮೊದಲ್; ಇರ್ಮೆಯ್; ಕುತ್ತಡಿ.

ಕುತ್ತಡಿ ಸಿಲ್ಕುತ್ತಿರ್ಕೆ... ೨

**ಸೂತ್ರಂ ॥ ಪರಪದದೊಳರ್ಥವರ್ತನ ।**
**ಮಿರೆ ತತ್ಪುರುಷಂ ಸಮಂತದೇಕಾಶ್ರಯಮಾ ॥**
**ಗಿರೆ ಕರ್ಮಧಾರಯಂ ನೆಲ ।**
**ಸಿರೆ ಮೊದಲೊಳ್ ಸಂಖ್ಯೆಯದೆ ವಲಂ ದ್ವಿಗುವಕ್ಕುಂ ॥ ೧೬೪ ॥**

**ಟೀಕೆ** - ಪರಪದದೊಳ್ = ಮುಂದಣ ಪದದಲ್ಲಿ, ಅರ್ಥವರ್ತನಂ, ಇರೆ, ತತ್ಪುರುಷಂ =ತತ್ಪುರುಷಸಮಾಸಂ ಅಪ್ಪುದು; ಸಮಂತು = ಹಾಗೆ, ಅದು = ಆ ಸಮಾಸಂ, ಏಕಾಶ್ರಯಂ = ಸಮಾನಾಶ್ರಯಂ, ಆಗಿ, ಇರೆ, ಕರ್ಮಧಾರಯಂ = ಕರ್ಮಧಾರಯಸಮಾಸಂ ಅಪ್ಪುದು; ಮೊದಲೊಳ್ = ಮೊದಲಲ್ಲಿ, ಸಂಖ್ಯೆ = ಸಂಖ್ಯಾವಾಚಿ, ನೆಲಸಿರೆ, ಅದೆ, ವಲಂ = ನಿಶ್ಚಯವಾಗಿ, ದ್ವಿಗು = ದ್ವಿಗುಸಮಾಸಂ, ಅಕ್ಕುಂ = ಅಪ್ಪುದು.

**ವೃತ್ತಿ** - ಮುಂದಣ ಪದದೊಳರ್ಥಂ ಪ್ರವರ್ತಿಸೆ ತತ್ಪುರುಷಸಮಾಸಂ; ಆ ತತ್ಪುರುಷ ಮೇಕಾಶ್ರಯಮಾಗೆ ಕರ್ಮಧಾರಯಮಕ್ಕುಂ; ಅದು ಸಂಖ್ಯಾಪೂರ್ವಕಮಾಗೆ ದ್ವಿಗುವಕ್ಕುಂ.

**ಪ್ರಯೋಗಂ** -

ತತ್ಪುರುಷಕ್ಕೆ -

ಮಲ್ಲಿಗೆನನೆ, ಮಾಣಿಕಗೆಂಪು, ಅಲರ್ವಕ್ಕಿ, ಕನ್ನಡವಕ್ಕಿ, ಕಡೆಸೆಱಂಗು, ಉಡೆನೂಲ್.

ಕರ್ಮಧಾರಯಕ್ಕೆ -

ತೆಳ್ಗದಂಪು, ಒಳ್ಗನ್ನಡಂ, ಮೆಲ್ನುಡಿ, ಬಲ್ಮುಗುಳ್, ಕಿಱುಗೂಸು.

ಮ ॥ ವಿ ॥ ಕಿಱುಗೂಸಾಗಿ[1]ಯುಪಾಯಮಂ ಮಱೆದನೇ.... ೧

ದ್ವಿಗುವಿಂಗೆ -

ಎರಟಿಮ್ಮಾತು, ಎರಟ್ಟಿರಂ; ಇರ್ಪಂಡಿರ್, ಇರ್ವಾಳ್; ಮೂವಾಳ್.

ಕಂ ॥ ಇರ್ವಾಳ್ ಮೂವಾಳಿಕ್ಕಿ
ದುರ್ವಾರೆಯೊಳ್..... ೨

(ಕಾವ್ಯಾವಲೋಕನಂ ೨೦೭)

~~~~~~~~~~~~~~~~~~~~

೧. ಯುಮಾಯಮಂ
~~~~~~~~~~~~~~~~~~~~

**ಸೂತ್ರಂ ॥ [1]ಪದನೆರಡುಂ ಮೇಣ್ ಪಲವುಂ ।**
**ಪದಾರ್ಥಮಂ ಬಯಸುತಿರೆ ಬಹುವ್ರೀಹಿ ಪದಾ ॥**
**ರ್ಥದ ಗಡಣಂ ದ್ವಂದ್ವಮೆನಿ ।**
**ಪ್ಪುದವ್ಯಯಿಾಭಾವಮಾದಿಪದಮುಖ್ಯತೆಯಿಂ ॥ ೧೬೫ ॥**

**ಟೀಕೆ** - ಪದನೆರಡುಂ = ಎರಡು ಪದಂಗಳುಂ, ಮೇಣ್ = ಅದಲ್ಲದೆ, ಪಲವುಂ = ಪಲವಾದ ಪದಂಗಳುಂ, ಪದಾರ್ಥಮಂ = ಮತ್ತೊಂದು ಪದಾರ್ಥವಂ, ಬಯಸುತೆ = ಇಚ್ಛಿಸುತೆ, ಇರೆ, ಬಹುವ್ರೀಹಿ = ಬಹುವ್ರೀಹಿಸಮಾಸಂ ಎನಿಸುವುದು; ಪದಾರ್ಥದ = ಪದಾರ್ಥಂಗಳ, ಗಡಣಂ = ಸಮೂಹಂ, ದ್ವಂದ್ವಂ = ದ್ವಂದ್ವಸಮಾಸಂ, ಎನಿಪ್ಪುದು = ಎನಿಸುವುದು; ಆದಿಪದ = ಮೊದಲ ಪದದ, ಮುಖ್ಯತೆಯಿಂ = ಮುಖ್ಯತ್ವದಿಂದೆ, ಅವ್ಯಯಿಾಭಾವಂ = ಅವ್ಯಯಿಾಭಾವಸಮಾಸಂ ಎನಿಸುವುದು.

**ವೃತ್ತಿ** - . ಎರಡುಂ ಪದಂ ಮೇಣ್ ಪಲವುಂ ಪದಂ ಅನ್ಯಪದಾರ್ಥಮಂ ಬಯಸುತ್ತಿರೆ ಬಹುವ್ರೀಹಿಯಕ್ಕುಂ; ಪದಾರ್ಥಂಗಳ ಸಮುಚ್ಚಯಂ ದ್ವಂದ್ವಮಕ್ಕುಂ; ಪೂರ್ವಪದಂ ಪ್ರಧಾನಮಾದೊಡೆ ಅವ್ಯಯಿಾಭಾವಮಕ್ಕುಂ.

**ಪ್ರಯೋಗಂ.** -

ಬಹುವ್ರೀಹಿಗೆ -

ಕಡುಬಾಗಿ, ಚಲವಾದಿ, ಮೆಲ್ವಿನ್ನಣಿ, ಕಡುಗೇಡಿ, ನಿಡುಮೂಗಿ, ಹೆಟಿಗಾಲಿ.

ದ್ವಂದ್ವಕ್ಕೆ -

ಮರಗಿಡುಬಳ್ಳಿಪುಲ್ಪೊದಱುಪಕ್ಕಿಮಿಗಂಗಳ್; ಆಟಪಾಟಕೂಟಂಗಳ್.

ಆಟಪಾಟಕೂಟಂಗಳ ಕೇಳಿಗೆಯ್ದಿಸದು ಪೊಟ್ತು...... ೧

ಅವ್ಯಯೀಭಾವಕ್ಕೆ -

ಅಂಗಯ್, ಮೇಂಗಾಲ್, ಮೇಂಗಯ್, ಪಿಂತಿಲ್, ಪಿನ್ತೊಲೆ, ಕಿಟಿಸ್ತೊಡೆ, ಕಿಟಿಕ್ಕಿಱಿ, ಕಿಪ್ಪಿರೆ, ಬೆಂಬಿಸಿಲ್; ಬೆಂಗೊಡಂ, ಬಯ್ಗಿರುಳ್.

**ಸೂತ್ರಂ ॥ ಅಡಿ ಮೇಗುಗಳಂತ್ಯಾಕ್ಷರ ।**
**ದೆಡೆಗಕ್ಕುಂ ಬಿಂದು ಮುಂದು ಪಿಂದುಗಳಂತ್ಯ ॥**
**ಕ್ಕೊಡರಿಸುಗುಂ ಲೋಪಂ ನೋ ।**
**ಟಸ್ತೊಡವ್ಯಯೀಭಾವದೊಳ್ ಕಿಟಿಗು ಕಿಟಿನಿಕ್ಕುಂ ॥ ೧೬೬ ॥**

**ಟೀಕೆ** - ಅವ್ಯಯಿಾಭಾವದೊಳ್ = ಅವ್ಯಯಿಾಭಾವಸಮಾಸದಲ್ಲಿ, ನೋಟಸ್ತೊಡೆ = ನೋಡುವೊಡೆ, ಅಡಿಮೇಗುಗಳ = ಅಡಿ ಮೇಗು ಎಂಬ ಶಬ್ದಂಗಳ, ಅಂತ್ಯಾಕ್ಷರದ = ಕಡೆಯಣಕ್ಷರದ, ಎಡೆಗೆ = ಸ್ಥಾನಕ್ಕೆ, ಬಿಂದು = ಸೊನ್ನೆ, ಅಕ್ಕುಂ = ಅಪ್ಪುದು; ಮುಂದು ಪಿಂದುಗಳ = ಮುಂದು ಪಿಂದು ಎಂಬ ಶಬ್ದಂಗಳ, ಅಂತ್ಯಕ್ಕೆ = ಕಡೆಯಣಕ್ಷರಕ್ಕೆ, ಲೋಪಂ, ಒಡರಿಸುಗುಂ = ಬರ್ಪುದು; ಕಿಟಿಗು = ಕಿಟಿಗು ಎಂಬ ಶಬ್ದಂ, ಕಿಟಿ = ಕಿಟಿಂದು, ಎನಿಕ್ಕುಂ = ಎನಿಸುವುದು.

~~~~~~~~~~~~~~~~~~~

೧. (ಪದನೆರಡು ಪಲವು ಮೇಣ್ ಪರ)
~~~~~~~~~~~~~~~~~~~

**ವೃತ್ತಿ.** - ಅವ್ಯಯೀಭಾವದೊಳ್ ಅಡಿ ಮೇಗೆಂಬ ಶಬ್ದಂಗಳ ಕಡೆಯಕ್ಕರಕ್ಕೆ ಬಿಂದುವಕ್ಕುಂ; ಮುಂದು ಪಿಂದೆಂಬಿವಱ ಕಡೆಯಕ್ಕರಕ್ಕೆ ಲೋಪಮಕ್ಕುಂ; ಕೆೞಗೆಂಬುದರ್ಕೆ ಕಿೞ್ ಎಂದಾದೇಶಮಕ್ಕುಂ; ಪೆಱಗೆಂಬುದುಮಾ ತೆಱದಿಂ ಪಿಂತೆಂದಕ್ಕುಂ.

**ಪ್ರಯೋಗಂ.** -

ಅಂಗಯ್, ಅಂಗಾಲ್; ಮೇಂಗಯ್, ಮೇಂಗಾಲ್.

ಉದ್ದಮಾಗಿ ಬಿಗಿದ ಮೇಂಗಾಲ್... ೧

ಮುಂಗಯ್, ಮುಂಗಾಲ್, ಮುಂಜೂರ್, ಮುಂಬಗಲ್, ಮುಮ್ಮಾಗಿ; ಪಿಂಗಾಲ್, ಪಿಂಬೆದೆ, ಪಿಂಬೊೞ್ತು; ಕಿೞ್ಕಿಱಿ, ಕಿೞ್ತೊಡೆ, ಕಿೞ್ಬೆರೆ; ಪಿಂತಿಲ್, ಪಿಂತೊಲೆ.[1]

**ಸೂತ್ರಂ ॥ ವಿದಿತಂ ಕ್ರಿಯಾಸಮಾಸಂ ।**
**ಮೊದಲೊಳ್ ಕಾರಕಮುಮಗ್ರದೊಳ್ ಕ್ರಿಯೆಯುಂ ಸ ॥**
**ನ್ನಿದಮಾಗೆ ಬಿಂದು ಸಕ್ಕದ ।**
**ದದಂತದೊಳ್ ಕನ್ನಡಕ್ಕೆ ಮೇಣುತ್ವದೊಳಂ ॥ ೧೬೭ ॥**

**ಟೀಕೆ** - ಮೊದಲೊಳ್ = ಆದಿಯಲ್ಲಿ, ಕಾರಕಮುಂ = ಕಾರಕಪದಮುಂ, ಅಗ್ರದೊಳ್ = ಪರದಲ್ಲಿ, ಕ್ರಿಯೆಯುಂ = ಕ್ರಿಯಾಪದಮುಂ, ಸನ್ನಿದಂ = ಸಂಬಂಧಂ, ಆಗ, ವಿದಿತಂ = ಪ್ರಸಿದ್ಧವಾದ, ಕ್ರಿಯಾಸಮಾಸಂ = ಕ್ರಿಯಾಸಮಾಸವಪ್ಪುದು; ಸಕ್ಕದದ = ಸಂಸ್ಕೃತದ, ಅದಂತದೊಳ್ = ಅಕಾರಾಂತದಲ್ಲಿ, ಬಿಂದು = ಸೊನ್ನೆ ಬರ್ಪುದು; ಕನ್ನಡಕ್ಕೆ = ಕರ್ಣಾಟಕಶಬ್ದಕ್ಕೆ, ಮೇಣ್ = ವಿಕಲ್ಪದಿಂದ, ಉತ್ವದೊಳಂ = ಉಕಾರಾಂತದಲ್ಲಿಯುಂ, ಬಿಂದು = ಸೊನ್ನೆ ಬರ್ಪುದು. (ಅಂ ಎಂಬ ಸಮುಚ್ಚಯದಿಂದೆ ಅಕಾರಾಂತದಲ್ಲಿಯುಂ ಬಿಂದು ಬರ್ಪುದು.)

**ವೃತ್ತಿ** . - ಮೊದಲೊಳ್ ಕಾರಕಮುಂ ಪರದೊಳ್ ಕ್ರಿಯೆಯುಂ ಅರ್ಥ ವ್ಯಕ್ತಿಯಂ ಕುಡೆ, ಕ್ರಿಯಾಸಮಾಸಂ; ಅಲ್ಲಿ ಸಂಸ್ಕೃತದಕಾರಾಂತಕ್ಕೆ ಬಿಂದು ನಿತ್ಯಂ; ಕನ್ನಡದದಂತಕ್ಕಮುದಂತಕ್ಕಂ ಮೇಣೆಂಬುದಱಿಂ ಬಿಂದುವಿಕಲ್ಪಂ.

**ಪ್ರಯೋಗಂ** -

ಕ್ರಿಯಾಸಮಾಸಕ್ಕೆ -

ಬಳೆದೊಟ್ಟಂ; ಕೆಳೆಗೊಂಡಂ; [2]ತೆಱೆದೆತ್ತಂ; ಮಱೆವೊಕ್ಕಂ.

ಸಂಸ್ಕೃತದ ನಿತ್ಯಬಿಂದುಗೆ -

ಗುಣಂಗೊಂಡಂ; ಕಾಲಂಗಂಡಂ; ಪ್ರಿಯಂನುಡಿದಂ; ಧನಂಬಡೆದಂ; ರಂಗಂಬೊಕ್ಕಂ.

ಕಂ ॥ ... ರಂಗಂಬೊಕ್ಕಾಡುವಂತೆ ಪೆಂಡಿರೆ ಗಂಡರ್[3] ೧

(ವಿಕ್ರಮಾರ್ಜುನ ವಿಜಯಂ ೨-೮೦)

ಕನ್ನಡದ ಅತ್ವದೊಳ್ ವಿಕಲ್ಪಬಿಂದುವಿಂಗೆ -

~~~~~~~~~~~~~~~~~~~

೧. ೧೭೩ನೆಯ ಸೂತ್ರ ನೋಡಿ ೨. ತೞಿದೆತ್ತಂ ೩. (ಈ ಲಕ್ಷ್ಯ ಪ್ರಥಮ ಪರಿಷ್ಕರಣದಲ್ಲಿಲ್ಲ.)
~~~~~~~~~~~~~~~~~~~

ಮೊಗಂನೋಡಿದಂ - ಮೊಗನೋಡಿದಂ; ಪದಂಗೊಂಡಂ - ಪದಗೊಂಡಂ; ಬೆಸಂಬಡೆದಂ - ಬೆಸವಡೆದಂ; ಕೆಯ್ವೊಲಂಗಾದಂ - ಕೆಯ್ವೊಲಗಾದಂ; [ಮನಂ ಸಂದಂ -ಮನಸಂದಂ], ಕಡಂಗೊಂಡಂ - ಕಡಗೊಂಡಂ.

ಉ ॥ ಮಾ ॥ ಟೆಕ್ಕೆಯ ಕಲ್ಗಮೀ ಕವಿಲೆ ಕರ್ಬುನಕಂ ಮನಸಂದು ಬಂದನೇ ೨

ಉ ॥ ಮಾ॥ ...ಕಾ

ವೇರಿಯ ಕಾಲನಾ ತಿಗುಳನೇಂ ಕಡಗೊಂಡನೊ ಬಡ್ಡಿಗೊಂಡನೋ ೩

ಉತ್ವಕ್ಕೆ -

ಪುದುಂಗೊಳಿಸಿದಂ - ಪುದುಗೊಳಿಸಿದಂ; ಮಾತುಂಗುಟ್ಟಿದಂ - ಮಾತುಗುಟ್ಟಿದಂ; ಅಸುಂಗೊಡಂ - ಅಸುಗೊಂಡಂ.

ಶಾ ॥ ವಿ ॥ ಮಾತುಂಗುಟ್ಟದೆ ಮೂಗುವಟ್ಟಿರೆ ನೃಪರ್ ... ೪

ಕಂ ॥ ... ಬಱುವಾತುಗುಟ್ಟಿ ಪೋಪರೆ ಗಂಡರ್ ೫

ಅಸುಂಗೊಳೆ ಸುರರ್ ನೀನಸುಗೊಂಡೊಡೆ ದೋಸಮಾಗದೇ ೬

ಅರ್ಥವ್ಯಕ್ತಿ ಕಿಡುವೊಡೆ ಬಿಂದುವಂ ಕಳೆಯಲಾಗದು -

ಪಯಣಂಬೋದಂ; ಪಸರಂಬಡೆದಂ; ಗಡಣಂಗೊಂಡಂ; ಬಿಜಯಂಗೈದಂ; ಕೆಲಸಂಬೊಕ್ಕಂ; ಕರಗಂಬೊತ್ತಂ.

ಕಂ ॥ ... ಜವಂ ಮೃಡ

ನೊಳ್ ಕಾದುವ ಕಾಲಮಾನೆ ಕರಗಂಬೊತ್ತಂ ೭

ಇದಱೊಳರಿಪದಂ ( = ಅರಿಸಮಾಸಂ) ನಿರ್ದೋಷಂ -

ಕಂ ॥ ಸವಣಂ ಬಳಪಂಗೊಳೆ ಗಾಂ ।
ಡಿವಿ ಬಿಲ್ಗೊಳೆ ಬಲವಿರೋಧಿ ವಜ್ರಂಗೊಳೆ ದಾ ॥
ನವರಿಪು ಚಕ್ರಂಗೊಳೆ ಕೌ ।
ರವಾರಿ ಗದೆಗೊಳೆ ಪೊಣರ್ಕೆಗಾವಂ ನಿಲ್ವಂ ॥ ೮

**ಸೂತ್ರಂ ॥ ಜನಿಯಿಸುಗುಂ ಸಂಖ್ಯಾ ಸ ।**
**ರ್ವನಾಮ ಗುಣವಚನ ಕೃತ್ಪ್ರಪೂರ್ವಂ ಗಮಕಂ ॥**
**ತನಗತ್ವಂ ಪೆಱಗಿತ್ವಂ ।**
**ತನಗರಿಪದನಿಲ್ಲ ಕರ್ಮಧಾರಯಮದುವುಂ ॥ ೧೬೮ ॥**

**ಟೀಕೆ** - ಸಂಖ್ಯಾ = ಸಂಖ್ಯಾವಾಚಿಗಳ್, ಸರ್ವನಾಮ = ಸರ್ವನಾಮಂಗಳ್, ಗುಣವಚನ = ಗುಣವಚನಂಗಳ್, ಕೃತ್ = ಕೃತ್ತುಗಳ್, ಪ್ರಪೂರ್ವಂ = ಆದಿಯಾಗೆ, ಗಮಕಂ = ಗಮಕಸಮಾಸಂ, ಜನಿಯಿಸುಗುಂ = ಹುಟ್ಟುವುದು; ತನಗೆ = ಗಮಕಸಮಾಸವಾದ ತನಗೆ, ಅತ್ವಂ = ಮಧ್ಯಕ್ಕೆ ಅಕಾರಂ, ಪೆಱಗೆ = ಅತ್ವದ ಪಿಂದುಗಡೆಯಲ್ಲಿ, ಇತ್ವಂ = ಇಕಾರಂ ಹುಟ್ಟುವುದು; ತನಗೆ = ಗಮಕಸಮಾಸವಾದ ತನಗೆ, ಅರಿಪದಂ = ಅರಿಸಮಾಸಂ, ಇಲ್ಲ = ಉಂಟಾಗದು; ಅದುವುಂ = ಆ ಗಮಕಸಮಾಸವುಂ, ಕರ್ಮಧಾರಯಂ = ಕರ್ಮಧಾರಯಸಮಾಸವೆನಿಸುವುದು. ಉಂ ಎಂಬ ಸಮುಚ್ಚಯದಿಂದೆ ಎತ್ತಾನುಂ ತತ್ಪುರುಷಮುಮಪ್ಪುದು.

**ವೃತ್ತಿ.** - ಪರಪದದೊಳ್ ಕಾರಕಮುಂ ಪೂರ್ವಪದದೊಳ್ ಸಂಖ್ಯಾ ಸರ್ವನಾಮ ಗುಣವಚನ ಕೃತ್ಪದಂಗಳಾವುವಿರ್ದೊಡಂ ಗಮಕಸಮಾಸಮಕ್ಕುಂ. ಗುಣವಚನ ದೊಳಂತರಾಳಕ್ಕೆ ಒಂದಕಾರಂ (ಅಕ್ಕುಂ); ಪಿಂತಣ ಮೆಯ್ಯೊಳ್ ಇಕಾರಮಕ್ಕುಂ (ಮಿರ್ಕುಂ); ಇದಱೊಳ್ ಅರಿಸಮಾಸದೋಷಮಿಲ್ಲ ; ಅದು ಕರ್ಮಧಾರಯದ ಭೇದಂ; ಎತ್ತಾನುಂ ತತ್ಪುರುಷಮಪ್ಪುದು.

**ಪ್ರಯೋಗಂ** -

ಸಂಖ್ಯೆಗೆ -

ಇರ್ಪತ್ತೈದು, ನೂಱಪತ್ತು, ಮೂವತ್ತಾಱು.

ಸ್ರ ॥ ಮೂವತ್ತಾಱುಂ ಗುಣಂಗಳ್ ತಮಗಮರ್ದಿರೆ ... ೧

(ಆದಿಪುರಾಣಂ ೧-೩)

ಸರ್ವನಾಮಕ್ಕೆ -

ಆವ ಮಾತು, ಆವ ಕಾರ್ಯಂ, ಆವ ನಾಯಕಂ, ಆವ ಕಾಂತೆ

ಮಲ್ಲಿಕಾಮಾಲೆ ॥ ಆವ ರಾವುತರಾವ ವಾಜಿಗಳಾವುವಾನೆಗ
ಳಾವನಾಳಾವ ನಾಯಕರೋ ... ೨

ಗುಣವಚನಕ್ಕೆ -

ಕಂ ॥ ಅಸಿಯ ನಡು ಪಸಿಯ ಬಣ್ಣಂ
ಮಿಸುಪ ರದಂ ... ೩

ಬಿಳಿಯ ಕರ್ಬು, ನಿಡಿಯ ನಾಲಗೆ, ಕಿಱಿಯ ಮಗಂ

ಕೃತ್ತಿಂಗೆ -

ಉ ॥ ಮಾ ॥ ಪಾಡುವ ತುಂಬಿ ಕೋಡುವ ಪುಟಿಲ್ ...

(ವಿಕ್ರಮಾರ್ಜುನ ವಿಜಯಂ ೩-೩೭) ೪

ಕಂ ॥ ... ಆಡಿದ ಪೊಲನುಂಡ ಮರ್ದು ಕಂಡ ವಿಚಾರಂ ೫

(ಯಶೋಧರ ಚರಿತಂ ೧-೫೨)

ಅರಿಸಮಾಸದ ನಿರ್ದೋಷಕ್ಕೆ -

ಬೀಸುವ ಚಾಮರಂ, ಪೊಡೆವ ಭೇರಿ, ಪೂರೈಸುವ ಶಂಖಂ, ಪಿಡಿವ ಕಪಳೆ, ಪೂಸಿದ ಭಸ್ಮಪರಾಗಂ

ಕಂ ॥ ... ಜಲದನಿ
ಭೋರಃಸ್ಥಲನಾದ ವಿಷ್ಣು ವಿಜಯಾದಿತ್ಯಂ ೬

ಖಚರಪ್ಲುತ ॥ ಪಿಂಗೆ ಪೂಸಿದ ಭಸ್ಮಪರಾಗಂ ಪೊಣ್ಮುವ ಘರ್ಮಜಲಂಗಳಾ
ಪಾಂಗು ... ೭

(ಕಾವ್ಯಾವಲೋಕನಂ ೮೦೪)

**ಸೂತ್ರಂ ॥ ಅದುಇದುವುದುಗಾಯೀಯೂ ।**
**ವೊದವುಗುಮಾದೇಶಮಾಗಿ ಗಮಕದೊಳಾಯೆಂ ॥**
**ಬುದು ಪೂರ್ವಪರಾಮರ್ಶೆಗ ।**
**ಮೊದವುಗುಮಾ ರೂಢಿಗಂ ಕವೀಶ್ವರಮತದಿಂ ॥ ೧೬೯ ॥**

**ಟೀಕೆ** - ಗಮಕದೊಳ್ = ಗಮಕಸಮಾಸದಲ್ಲಿ, ಅದುಇದುವುದುಗೆ = ಅದು ಇದು ಉದು ಎಂಬ ಶಬ್ದಂಗಳ್ಗೆ, ಆಯೀಯೂ = ಆ ಎಂಬುದು, ಈ ಎಂಬುದು, ಊ ಎಂಬುದು, ಆದೇಶವಾಗಿ, ಒದವುಗುಂ = ಬರ್ಪುದು; ಕವೀಶ್ವರಮತದಿಂ = ಕವೀಶ್ವರ ಮತದಿಂದೆ, ಆಯೆಂಬುದು = ಆ ಎಂಬ ಶಬ್ದಂ, ಪೂರ್ವಪರಾಮರ್ಶೆಗಂ = ಪೂರ್ವಸ್ಮರಣಕ್ಕೆಯುಂ, ಆ ರೂಢಿಗಂ = ಆ ಪ್ರಸಿದ್ಧಿಗೆಯುಂ, ಒದವುಗುಂ = ಬರ್ಪುದು.

**ವೃತ್ತಿ.** - ಗಮಕಸಮಾಸದೊಳ್ ಅದು ಇದು ಉದು ಎಂಬ ಸರ್ವನಾಮಕ್ಕೆ ಆ ಈ ಊ ಎಂಬಿವಾದೇಶಮಕ್ಕುಂ; ಆ ಎಂಬುದು ಪೂರ್ವಸ್ಮರಣದೊಳಂ ಪ್ರಸಿದ್ಧಿಯೊಳಮುಂಟು.

ಆ ಈ ಊ ಎಂಬ ಆದೇಶಕ್ಕೆ -

ಕಂ ॥ ಆ ಮನೆ ಸಿರಿಯ ತವರ್ಮನೆ ... ೧

ಚಂ ॥ ಮಾ ॥ ಪಲದೆವಸಕ್ಕೆ ಕಂಡೆವಣವೀ ಮನೆಯತ್ತಲೆ ಸಾರಿರೀಕೆಗಿ
ನ್ನಲಸಿದಿರಕ್ಕುಂ ... ೨

ಚಂ ॥ ಮಾ ॥ ಕಜು ತಡೆದತ್ತು ಕಂಚನುಣಲೂ ಮನೆಯಾಕೆಗಳುಯ್ದರಕ್ಕ ... ೩
(ಸೂಕ್ತಿಸುಧಾರ್ಣವಂ ೮-೧೩೪)

ಕಂ ॥ ... ಆ ಬನವೀ ಬನ
ಮೂ ಬನವೆನ್ನದೆ ತೊಟಿಲ್ದು ಪೂಗೊಯ್ದರವರ್ ... ೪

ಸ್ಮರಣಕ್ಕೆ -

ಪೃಥ್ವಿ ॥ ... ನೆನೆ[ದಾ] ಹಿರಣ್ಯಕನದೊಂದು ಬಿಟ್ಟಿಂದಮಂ ॥ ೫
(ಕಾವ್ಯಾವಲೋಕನಂ ೭೧೬)

ಬೀದಿಗಾ ಪೊಟಲಿಚರ್ ಮಾನ್ಯದೊಕ್ಕಲತನುವ ಕೆಳೆಯರ್ ೬

ಪ್ರಸಿದ್ಧಿಗೆ -

ಗಜಹಯರೂಢಿಯೊಳಾ ಭಗದತ್ತನಿನಾ ನಳನಿಂ ಮಿಗಿಲಾದಂ ೭

**ಸೂತ್ರಂ ॥ ಗ ದ ಬ ಜಕಾರಮವಿದಿರಿರೆ ।**
**ಮೊದಲ ಪದಂ ತಾಂ ಕೃದಂತಮಾಗಿರೆ ದೊರೆಕೊ ॥**
**ಳ್ವುದನುಸ್ವಾರಮುದಂತದೊ ।**
**ಳಿದಂತದೊಳ್ ಕರ್ಮಧಾರಯಂ ಬರೆ ಬಹುಳಂ ॥ ೧೭೦ ॥**

**ಟೀಕೆ** - ಕರ್ಮಧಾರಯಂ = ಕರ್ಮಧಾರಯಸಮಾಸಂ, ಬರೆ, ಗ ದ ಬ ಜಕಾರಂ = ಗಕಾರ ದಕಾರ ಬಕಾರ ಜಕಾರಂಗಳ್, ಅವು, ಇದಿರಿರೆ = ಇದಿರಾಗಿರೆ, ಮೊದಲ ಪದಂ = ಆದಿಯ ಪದಂ, ತಾಂ, ಕೃದಂತಂ = ಕೃಲ್ಲಿಂಗಂ, ಆಗಿರೆ, ಉದಂತದೊಳ್ = ಉಕಾರಾಂತದಲ್ಲಿ, ಇದಂತದೊಳ್ = ಇಕಾರಾಂತದಲ್ಲಿ, ಬಹುಳಂ = ಬಹುಳವಾಗಿ, ಅನುಸ್ವಾರಂ = ಸೊನ್ನೆ, ದೊರೆಕೊಳ್ವುದು = ಬರ್ಪುದು.

**ವೃತ್ತಿ** - ಕರ್ಮಧಾರಯದೊಳ್ ಗ ದ ಬ ಜಕಾರಾದಿ ಪದಂಗಳ್ ಪರದೊಳಿರೆ ಪೂರ್ವಪದಂ ಕೃತ್ತಾಗಿ ಉಕಾರಾಂತಮಿಕಾರಾಂತಮಾಗಿರೆ ಬಿಂದುವಕ್ಕುಂ; ಬಹುಳದಿಂ ಕೆಲವಱೊಳಿಲ್ಲ.

**ಪ್ರಯೋಗಂ** -

ಉಕಾರಾಂತದೊಳ್ ಗಕಾರಂ ಪರಮಾದುದರ್ಕೆ -

ಎತ್ತುಂಗೋಲ್, ಕುತ್ತುಂಗಱು, ಪೊತ್ತುಂಗೊಱಡು, ಪುಟ್ಟುಂಗುರುಡಂ, ಸುರ್ಕುಂಗುರುಳ್, ಕರ್ಚುಂಗಲ್, ಚುರ್ಚುಂಗೊಳ್ಳಿ, ಇಕ್ಕುಂಗೂಟ್, ಇಡುಕುಂಗಬ್ಬಂ.

ಕಂ ॥ ಇಡುಕುಂಗಬ್ಬಂ ಮುಕ್ತಕ
ಮೊಡಂಬಡಲ್ ನೆಗಟೆ... ೧

(ಕಾವ್ಯಾವಲೋಕನಂ ೯೫೧)

ದಕಾರಕ್ಕೆ -

ಕುಡುಕುಂದಱು, ಉರ್ಕುಂದೊಱೆ, ತೂಗುಂದೊಟ್ಟಿಲ್, ಆಡುಂದೊಲೆ, ತೂಗುಂದಲೆ

ಉ ॥ ಮಾ॥ ... ಎತ್ತುವೇತದಾ
ಡುಂದೊಲೆಯಂತೆ ಕಣ್ಗೆಸೆದುದೇಱುದಿಭಂ ಕದನತ್ರಿಣೇತ್ರನಾ ೨

ಉ ॥ ಮಾ ॥
ಪಂದಲೆಯೋಳಿದೋರಣದ ಸೀಯದರಂ ಪೊಸದೂವೆದೂಪ ತೂ
ಗುಂದಲೆ ಬಾೞ್ವಿಣಂ ಪೊಡರೆ ಬಳ್ಳುವ ಸಮ್ಮಸ ಸೂಲಮಾಲದೊಳ್ ... ೩

(ಕಾವ್ಯಾವಲೋಕನಂ ೫೬)

ಬಕಾರಕ್ಕೆ -

ಬತ್ತುಂಬಯಂ, ಒತ್ತುಂಬಳ್ಳಿ, ಅಟ್ಟುಂಬರಿ, ಆಡುಂಬೊಲಂ, ಮಿಂಚುಂಬುೞು, ಪೆರ್ಚುಂಬುರುಳ್, ತೋಱುಂಬೊಣೆ, ಪಾಱುಂಬಳೆ.

ಕಂ ॥ ಪಾಱುಂಬಳೆ ನಾರಾಚಂ
ತೂಱುವ ಸರಲ್ ... ೪

ಜಕಾರಕ್ಕೆ -

ತೂಗುಂಜೊಡರ್, ಅಟ್ಟುಂಜಗಳಂ, ಕಟ್ಟುಂಜುರಿಗೆ, ಕಟ್ಟುಂಜೋಳಂ, ಏಱುಂಜವ್ವನಂ.

ಕಂ ॥ ಏಱುಂಜವ್ವನದೊಳ್ ಸೊ
ಕ್ಕೇಱುದ ನೀಱೆಯರ ... ೫

ಇಕಾರಾಂತದೊಳ್ -

ಸಿಡಿಯುಂದಲೆ, ಇಱುಯುಂಬೊಟ್ಟು.

- ಇಲ್ಲಿ ಉಕಾರಂ ಪೊಕ್ಕುದು.

ಬಹುಳದಿಂ ಕೃತ್ತಿಲ್ಲದಲ್ಲಿಯುಂ ಬಿಂದುಮುಂಟು - ಬೆಟ್ಟುಂಬೊಱೆ ಎಂದು.

**ಸೂತ್ರಂ ॥ ಸುಡುಗಾಡಿಡು**[೧]**ಗಿಚ್ಚಡುಗೂ ।**
**ೞುಡುಗೋೞಿಯುಂ ಮಾಱುದಾಂಟು ಬಿಡುಗಣ್ ಬಿಡುವಾಯ್ ॥**
**ತುಡುಜೊಡರಱುಗೆೞಿಯೆಂಬಿವು ।**
**ಪಡೆಯವು ಬಿಂದುವನುದಂತವೃತ್ತಿಯನಾಳ್ದುಂ ॥ ೧೭೧ ॥**

**ಟೀಕೆ** - ಸುಡುಗಾಡು, ಇಡುಗಿಚ್ಚು, ಅಡುಗೂೞ್, ಉಡುಗೋೞಿ, ಮಾಱುದಾಂಟು, ಬಿಡುಗಣ್, ಬಿಡುವಾಯ್, ತುಡುಜೊಡರ್, ಅಱುಗೆೞಿ ಎಂಬಿವು = ಎಂಬೀ ಸಮಾಸಪದಂಗಳ್, ಉದಂತವೃತ್ತಿಯಂ = ಉಕಾರಾಂತದ ವರ್ತನೆಯಂ, ಆಳ್ದುಂ = ತಾಳ್ದುಂ, ಬಿಂದುವಂ = ಸೊನ್ನೆಯಂ, ಪಡೆಯವು = ಪೊರ್ದವು.

**ವೃತ್ತಿ** - ಇದರ್ಕಿದೆ ವೃತ್ತಿ.

**ಸೂತ್ರಂ ॥ ಕೃತ್ತಿರದೆಯುಮುತ್ವಾತ್ವಾ ।**
**ಯತ್ತಮನುಸ್ವಾರಮಸ್ವರದ ನಣಕತ್ವಂ ॥**
**ಮತ್ತೆ ಳಕಾರಕ್ಕುತ್ವಂ ।**
**ಪತ್ತಲೊಡಂ ಬಿಂದು ಬಂದು ನೆಲೆಗೊಂಡಿರ್ಕುಂ ॥ ೧೭೨ ॥**

**ಟೀಕೆ** - ಕೃತ್ತು = ಕೃತ್ಪದಂ, ಇರದೆಯುಂ = ಇಲ್ಲದೆಯುಂ, ಅನುಸ್ವಾರಂ = ಸೊನ್ನೆ, ಉತ್ವ = ಉಕಾರದಲ್ಲಿ, ಅತ್ವ = ಅಕಾರದಲ್ಲಿ, ಆಯತ್ತಂ = ಸಂಬಂಧವಪ್ಪುದು; ಅಸ್ವರದ = ವ್ಯಂಜನದ, ನಣಕೆ = ನಕಾರ ಣಕಾರಂಗಳ್ಗೆ, ಅತ್ವಂ = ಅಕಾರಂ, ಮತ್ತೆ = ಬೞಿಕ, ಳಕಾರಕ್ಕೆ = ವ್ಯಂಜನದ ಳಕಾರಕ್ಕೆ, ಉತ್ವಂ = ಉಕಾರಂ, ಪತ್ತಲೊಡಂ = ಪತ್ತಲೊಡನೆ, ಬಿಂದು = ಸೊನ್ನೆ, ಬಂದು, ನೆಲೆಗೊಂಡು = ನೆಲಸಿ, ಇರ್ಕುಂ = ಇರ್ಪುದು.

**ವೃತ್ತಿ** - ಕೃತ್ತಿಲ್ಲದುದಂತಕ್ಕಂ ಅದಂತಕ್ಕಂ ಬಿಂದು ಸಂದಿಸುಗುಂ; ವ್ಯಂಜನ ನಕಾರ ಣಕಾರಂಗಳ್ಗೆ ಅತ್ವಮುಂ ಳಕಾರಕ್ಕುಕಾರಮುಂ ಪತ್ತಲೊಡಂ ಸೊನ್ನೆಯವತರಿಸುಗುಂ.

**ಪ್ರಯೋಗು** -

ಉದಂತಕ್ಕೆ -

ಕಬ್ಬುಂದಱು, ದಕ್ಕುಂದಲೆ, ತಾಱುಂಬೞಿ

ಉ ॥ ವಾ ॥ ... ತಾ
ಱುಂಬೞಿಯೆಟ್ಟಿ ಚಂಚು ಬೆಮರಿಂ ಕಡೆಗೆನ್ನೆಗೆ ಬಾನಲಾದ ಬೊ
ಟ್ಟೆಂಬಿವು ಕೂಟದೊಂದು ಸವಿಯೊಳ್ ಸವಿಯಾದುವು ಕಣ್ಗೆ ಕಾಂತನಾ ೧
(ಚಂದ್ರಪ್ರಭಪುರಾಣಂ ೮-೭೨; ಸೂಕ್ತಿಸುಧಾರ್ಣವಂ ೧೪-೭೦)

ಅದಂತಕ್ಕೆ -

ಬಕ್ಕಂಬಯಲ್, ಕಳ್ಳಂಗಡಲೆ, ಜಕ್ಕಂದೊೞಿಂ.

ಉ ॥ ಮಾ ॥ ... ಜವನೇಱುದೊಂದು ಜ
ಕ್ಕಂದೊೞಿ[ದಂ]ತೆ ಕಣ್ಗೆಸೆದುದೇಱುದಿಭಂ ಚಲದಂಕರಾಮನಾ ೨

ನಕಾರಕ್ಕೆ - ಮಾನಂಬುಱು, ಬಾನಂಗುಳಿಗೆ.

---

೧. (ಗಿರ್ಚ)

ಣತ್ವಕ್ಕೆ - ಕಣ್ಣಂದೊಬಿಲಿ.

ಳಕಾರಕ್ಕೆ - ಬೆಳ್ಳಂಬಟ್ಟೆ.

**ಸೂತ್ರಂ ॥ ಪೆಡವೆಂಬಾದೇಶಂ ಬಂ ।**
**ದೆಡೆಗೊಳ್ಗುಂ ಪೆಱಗೆನಿಪ್ಪ ಶಬ್ದದೊಳದು ತಾಂ ॥**
**ಪಡೆಗುಂ ಬಿಂದುವನರೆಬರ್ ।**
**ತಡಗಾಲೆಂಬಂತಬಿಂದುವುಮನಾಚರಿಪರ್ ॥ ೧೭೩ ॥**

**ಟೀಕೆ** - ಪೆಱಗು, ಎನಿಪ್ಪ ಶಬ್ದದೊಳ್ = ಎನಿಸುವ ಶಬ್ದದಲ್ಲಿ, ಪೆಡಂ ಎಂಬಾದೇಶಂ, ಬಂದು, ಎಡೆಗೊಳ್ಗುಂ = ಎಡೆಗೊಂಬುದು; ಅದು ತಾಂ = ತಾನದು, ಬಿಂದುವುಂ = ಸೊನ್ನೆಯುಂ, ಪಡೆಗುಂ = ಪಡೆವುದು; ಅರೆಬರ್ = ಕೆಲಂಬರ್, ತಡಗಾಲೆಂಬಂತೆ = ತಡಗಾಲೆಂಬ ಹಾಗೆ, ಅಬಿಂದುವುಮಂ = ಬಿಂದುವಿಲ್ಲದುದನಾಗಿಯುಂ, ಆಚರಿಪರ್ = ಪೇಳ್ವರ್.

**ವೃತ್ತಿ** - ಪೆಱಗೆಂಬುದರ್ಕೆ ಪೆಡವೆಂದಾದೇಶಮಾದುದರ್ಕೆ ಬಿಂದುವಕ್ಕುಂ; ಕೆಲರ್ ತಡಗಾಲೆಂಬವೊಲ್ ಅದರ್ಕೆ ಬಿಂದುವಿಲ್ಲದೆಯುಂ ಒಲ್ವರ್.

**ಪ್ರಯೋಗಂ** -

ಪೆಡಮಾದೇಶಕ್ಕೆ -

ಪೆಡಂಗಯ್, ಪೆಡಂದಲೆ, ಪೆಡಂಗಾಲ್, ಪೆಡಂಮೆಟ್ಟು.

ಉ ॥ ಮಾ ॥ ... ಪೆಡಂ
ಮೆಟ್ಟದೆ [ಸೂಟು]ಸೂಟುಱುದುದೇಱುದಿಭಂ ಭುವನೈಕರಾಮನಾ ॥ ೧
(ಭುವನೈಕರಾಮಾಭ್ಯುದಯಂ ?)

ಅಬಿಂದುವಿಂಗೆ -

ಪೆಡಗಯ್, ಪೆಡದಲೆ, ಪೆಡಮೆಟ್ಟು, ತಡಗಾಲ್.

ಮ ॥ ಸ್ರ ॥ ... ಪೆಡಮೆಟ್ಟಿಂ ಬರ್ಪ ದುರ್ಯೋಧನನಿಭಘಟೆಯಂ ೨

ಕಂ ॥ ... ತಡಗಾಲಿಂ ಪೊಯ್ದನಂದು ಮಲ್ಲಂ ರಯದಿಂ ೩

**ಸೂತ್ರಂ - ಪದವಿಧಿ ಕನ್ನಡಕಂ ಸ ।**
**ಕ್ಕದಕ್ಕಮಿಲ್ಲಾದ್ಯರಿಂದೆ ಸಂದುವನಱಿದಿ ॥**
**ರ್ಪುದು ಬಿರುದಾವಳಿಯೊಳ್ ಪೇ ।**
**ೞ್ವುದು ಪೆಱವಱೊಳಾಗದಿದು ವಿರುದ್ಧಸಮಾಸಂ ॥ ೧೭೪ ॥**

**ಟೀಕೆ** - ಕನ್ನಡಕಂ = ಕರ್ಣಾಟಕ ಶಬ್ದಕ್ಕೆಯುಂ, ಸಕ್ಕದಕ್ಕಂ = ಸಂಸ್ಕೃತಶಬ್ದಕ್ಕೆಯುಂ, ಪದವಿಧಿ = ಸಮಾಸವಿಧಿ, ಇಲ್ಲ = ಉಂಟಾಗದು; ಆದ್ಯರಿಂದೆ = ಪುರಾತನಕವಿಗಳಿಂದೆ, ಸಂದುವಂ = ಸಲುವಳಿಯಾದುವಂ, ಅಱಿದಿರ್ಪುದು = ತಿಳಿದಿರ್ಪುದು; ಬಿರುದಾವಳಿಯೊಳ್ = ಬಿರುದಾವಳಿಯಲ್ಲಿ, ಪೇೞ್ವುದು = ಹೇಳ್ವುದು ಪೆಱವಱೊಳ್ = ಅನ್ಯವಾದುವಱಲ್ಲಿ, ಆಗದು. ಇದು. ವಿರುದ್ಧ ಸಮಾಸಂ = ಅರಿಸಮಾಸವೆನಿಸುವುದು.

**ವೃತ್ತಿ** - ಕನ್ನಡಕ್ಕಂ ಸಂಸ್ಕೃತಕ್ಕಂ ಸಮಾಸಮಿಲ್ಲ. ಅರಿಮಾರ್ಗದಿನೆಂತಕ್ಕೆ ಕೆಲವಂ ಸಂದುವನಱಿದಿರ್ಪುದು; ಬಿರುದಾವಳಿಯೊಳ್ ಮೆಚ್ಚಿದಂತೆ ಪೇೞ್ವುದು; ಮಿಕ್ಕೆಡೆಯೊಳ್ ಮಾಣ್ಬುದು.

ಪ್ರಯೋಗಂ -

ಅರಿಸಮಾಸಕ್ಕೆ -

ಮುಖತಾವರೆ, ಅರಸುಕುಮಾರಂ, ಕೆಳದಿಸಮೇತಂ - ಇವು ಅರಿಸಮಾಸಂ.

ಮಾರ್ಗದೊಳುಳ್ಳುವರ್ಕೆ -

ಕಡುರಾಗಂ, ಮೊಗರಾಗಂ, ಅಱಕೆನಾಯಕಂ, ಗುಣಕಱುಗೊಂಡಂ, ಕಟ್ಟೇಕಾಂತಂ, ಕೂರಸಿ, ಮಾರ್ಬಲಂ, ಇರ್ಬಲಂ, ಪೆರ್ಬಲಂ, ಅಱಜನಂ, ತುರುಗದಱಂ, ಮಂಗಳಾರತಿ, ಮಂಗಳವಸದನಂ, ಮಂಗಳವಱಿ, ಅರಸುಗುಣಂ, ಕಡುದರ್ಪಂ, ಕಡುತಪಂ.

ಪೆಱವುಮನೀ ತೆಱದಿನಱವುದು; ಇವಱಂತೆ ಬೇಱೆ ಮಾಡಲಾಗದು.

ಬಿರುದಿಂಗೆ -

ಗಜದುಱು, ಗಜಪಾಱು, ನರಕಲೋಕದಲ್ಲಣಂ, ಮಾಸವಳ ಮದನಮಹೇಶಂ, ಅಂಕತ್ರಿಣೇತ್ರಂ, ಗುಣಕ್ಕೆ ನಲ್ಲಗಣೇಶಂ, ದಱಮುಖಧವಳಂ, ದಱಮುಖಾದಿತ್ಯಂ, ರಾಯಕೋಳಾಹಳಂ.

- ಈ ತೆಱದೆ ಬಿರುದಿನೊಳ್ ಎತ್ತಾನುಂ ಸಲ್ವುದು.

**ಸೂತ್ರಂ ॥ ಸವನಿಸುವುದೆಲ್ಲಶಬ್ದ ।**
**ಕ್ಕೆ ವಿಕಲ್ಪದೆ ದೀರ್ಘವಿಧಿ ಮಹಚ್ಛಬ್ದಕ್ಕು ॥**
**ದ್ಭವಿಕುಂ ಮಾದೇಶಂ ದೋ ।**
**ಷವಿಲ್ಲ ಸಂಸ್ಕೃತಪದಂ ಪರಕ್ಕೊದವಲೊಡಂ ॥ ೧೭೫ ॥**

**ಟೀಕೆ** - ಎಲ್ಲ ಶಬ್ದಕ್ಕೆ = ಎಲ್ಲ ಎಂಬ ಶಬ್ದಕ್ಕೆ, ವಿಕಲ್ಪದೆ, ದೀರ್ಘವಿಧಿ, ಸವನಿಸುವುದು = ಬರ್ಪುದು; ಮಹಚ್ಛಬ್ದಕ್ಕೆ = ಮಹತ್ ಎಂಬ ಶಬ್ದಕ್ಕೆ, ಮಾದೇಶಂ = ಮಾ ಎಂಬಾದೇಶಂ, ಉದ್ಭವಿಕುಂ = ಪುಟ್ಟುವುದು; ಸಂಸ್ಕೃತಪದಂ, ಪರಕ್ಕೆ = ಮುಂದುಗಡೆಗೆ, ಒದವಲೊಡಂ = ಬರಲೊಡನೆ, ದೋಷಂ = ಅರಿಸಮಾಸದ ದೋಷಂ, ಇಲ್ಲ = ಉಂಟಾಗದು.

**ವೃತ್ತಿ** ಎಲ್ಲ ಎಂಬ ಶಬ್ದಕ್ಕೆ ವಿಕಲ್ಪದಿಂ ದೀರ್ಘಮಕ್ಕುಂ; ಮಹಚ್ಛಬ್ದಕ್ಕೆ ಮಾ ಎಂಬಾದೇಶಮಕ್ಕುಂ. ಇವರ್ಕೆ ಸಂಸ್ಕೃತಪದಂ ಪರಮಾದೊಡಂ ದೋಷಮಿಲ್ಲ.

ಪ್ರಯೋಗಂ -

ದೀರ್ಘವಿಕಲ್ಪಕ್ಕೆ -

ಎಲ್ಲ ಕಾರ್ಯಂ - ಎಲ್ಲಾ ಕಾರ್ಯಂ; ಎಲ್ಲ ರತ್ನಂ - ಎಲ್ಲಾ ರತ್ನಂ; ಎಲ್ಲ ಧನಂ - ಎಲ್ಲಾ ಧನಂ;

ಮಂದಾಕ್ರಾಂತಾ ॥ ... ಎಲ್ಲಾ ರತ್ನಂಗಳುಮನೊಳಕೊಂಡೊಳ್ಪನಂಭೋಧಿ ಲೋಕ
ಕ್ಕೆಲ್ಲಂ ಬೀಱಲ್ ಪೊಱಗೆ ಕಸಮಂ ನಿಚ್ಚಮೀಡಾಡುತಿರ್ಕುಂ ೧
(ಕಾವ್ಯಾವಲೋಕನಂ ೨೫೨)

ಕ ॥ ಎಲ್ಲಂಗಮೆಲ್ಲ ಧನಮುಮ
ನೆಲ್ಲೆಡೆಯೊಳಮೆಲ್ಲ ತೆಱದೊಳಂ ಕುಡುಗೆಮ ... ೨
(ಕಾವ್ಯಾವಲೋಕನಂ ೨೫೩)

ಮಹಚ್ಛಬ್ದಕ್ಕೆ -

ಮಾದೇವಂ, ಮಾಕಾಳಿ, ಮಾಶೌರ್ಯಂ, ಮಾದಾನಿ.

ಕಂ ॥ ಮಾದಾನಿ ಶೌರ್ಯಧನನುದಿ
ತೋದಿತಪುಣ್ಯಂ ಹರಿಪ್ರಿಯಂ ನರನೆಂಬಂ ೩
(ಕಾವ್ಯಾವಲೋಕನಂ ೨೫೪)

ಕನ್ನಡಕ್ಕೆ -

ಮಾಸಾವಂತಂ, ಮಾಲಕುಮಿ, ಮಾನಾಮಿ

ಕಂ ॥ ... ಮಾನಾಮಿಯ ಸಾಣೆಯಾಯ್ತು ತನು ಧವಳುಕನಾ[1] ೪

**ಸೂತ್ರಂ ॥ ನೆಲೆಗೊಳ್ಗುಂ ಪೂರ್ವಪದಾಂ ।
ತ್ಯಲೋಪಮದು ಬಹುಳದಿಂದೆ ತತ್ಪುರುಷಕ್ಕ ॥
ಗ್ಗಲಿಪುದುಚಿತಾಕ್ಷರಾಗಮ ।
ಮೊಲೆಗುಂ ಕಿಱಿಗಣ್ಗೆ ಕಿಱ್ಕಿನೆಂಬಾದೇಶಂ ॥ ೧೭೬ ॥**

**ಟೀಕೆ** - ತತ್ಪುರುಷಕ್ಕೆ = ತತ್ಪುರುಷಸಮಾಸಕ್ಕೆ, ಪೂರ್ವಪದ = ಮೊದಲ ಪದದ, ಅಂತ್ಯ = ಕಡೆಯಣಕ್ಷರದ, ಲೋಪಂ, ಅದು, ಬಹುಳದಿಂದೆ, ನೆಲೆಗೊಳ್ಗುಂ = ನೆಲೆಗೊಂಬುದು; ಉಚಿತ = ಉಚಿತವಪ, ಅಕ್ಷರ = ಅಕ್ಷರದ, ಆಗಮಂ, ಅಗ್ಗಲಿಪುದು = ಬರ್ಪುದು; ಕಿಱಿಗಣ್ಗೆ = ಕಿಱಿಗೆಂಬ ಶಬ್ದಕ್ಕೆ, ಕಿಱ್‌ = ಕಿಱೆಂದು, ಕಿನ್ = ಕಿನೆಂದು, ಎಂಬಾದೇಶಂ, ಒಲೆಗುಂ = ಬರ್ಪುದು. (ಅಗ್ಗಲಿಪುದೆಂದೊಡೆ ಪೆಗ್ಗಳವಪ್ಪುದು; ಒಲೆಗುಂ ಎಂದೊಡೆ ಒಲೆವುದೆಂಬುದರ್ಥಂ, ಔಚಿತ್ಯದಿಂ ಬರ್ಪುದೆಂಬುದರ್ಥಂ.)

**ವೃತ್ತಿ** - ತತ್ಪುರುಷಕ್ಕೆ ಬಹುಳದಿಂ ಕೆಲವೆಡೆಯೊಳ್ ಮೊದಲ ಪದದ ಕಡೆಯಕ್ಕರಕ್ಕೆ ಲೋಪಂ; ಕೆಲವೆಡೆಯೊಳ್ ಲೋಪಂಬೆರಸುಚಿತಾಕ್ಷರಾಗಮಂ; ಕಿಱಿಗೆಂಬುದರ್ಕೆ ಕಿಱೆಂದಂ ಕಿನ್ ಎಂದುಮಾದೇಶಮಕ್ಕುಂ.

**ಪ್ರಯೋಗಂ** -

ಪದಾಂತ್ಯಲೋಪಕ್ಕೆ -

ಒಳಕೋಂಟೆ, ಪೊಱವೇಲಿ, ಜೇನೆಯ್, ತೆಂಗಾಳಿ, ಅರಮನೆ.

... ತೆಂಗಾಳಿ ಭೃಂಗಾಳಿ ಪುಂಸ್ಕೋಕಿಲನಾದಂ ವೇದನಾದಂ[2] ೧

ಉಚಿತಾಕ್ಷರಾಗಮಕ್ಕೆ -

ತೆಂಬೆಲರ್, ದಾಂಗುಡಿ, ಮಾಂಗಾಯ್, ಆಂಗೊಳಗು, ಕಮ್ಮಂಗಣೆ.

ಕಂ ॥ ಜಳಧಿಯ ನೀರನದೊಂದಾಂ
ಗೊಳಗಿನ ನೀರೆಂದು ಬಗೆದು ... ೨
(ಆದಿಪುರಾಣಂ ೧೩-೪)

~~~~~~~~~~~~~~~~~~~~

೧. (ಈ ಲಕ್ಷ್ಯ ಪ್ರಥಮ ಪರಿಷ್ಕರಣದಲ್ಲಿಲ್ಲ.) ೨. (ಈ ಲಕ್ಷ್ಯ ಪ್ರಥಮ ಪರಿಷ್ಕರಣದಲ್ಲಿಲ್ಲ.)
~~~~~~~~~~~~~~~~~~~~

ಕಂ ||  ಕಮ್ಮಂಗಣೆಯಿಂದೆಚ್ಚಪ
ನಿಮ್ಮಾವಿನ ಪೊದಱೊಳಿರ್ದು ವಿರಹಿವ್ರಜಮಂ ೩

- ಇಲ್ಲಿ ಬಿಂದು ಉಚಿತಾಗಮಂ.

ಲೋಪಮಿಲ್ಲದುಚಿತಾಕ್ಷರಾಗಮಕ್ಕೆ -

ನಟ್ಟೆಪಾಸ್, ನಟ್ಟೆವನೆ, ನಟ್ಟೆಗೊಂಬು, ನಟ್ಟೆವನಿ.

- ಇಲ್ಲಿ ಎಕಾರಮುಚಿತವರ್ಣಾಗಮಂ.

ಕಿಱಾದೇಶಕ್ಕೆ -

ಕಿಱುಗೊಂಬು, ಕಿಟ್ಟವಲ್, ಕಿಟ್ಟಣೆ, ಕಿಟ್ಟಿಟ್ಟು, ಕಿಟ್ಟಡಲ್.

ಕಿನಾದೇಶಕ್ಕೆ -

ಕಿನ್ನೀರ್, ಕಿನ್ನೆಲಂ.

**ಸೂತ್ರಂ || ಅಕ್ಕುಂ ಪದಾಂತ್ಯಲೋಪಂ |**
**ತಕ್ಕಂತಿರೆ ಕರ್ಮಧಾರಯಕ್ಕಂ ದ್ವಿಗುಗಂ ||**
**ಮಿಕ್ಕಾ ದ್ವಂದ್ವಕ್ಕಂ ಮೇ |**
**ಲಕ್ಕರಿಗರಿನಾ ಕ್ರಿಯಾಸಮಾಸೋಪೇತಂ || ೧೭೭ ||**

**ಟೀಕೆ** - ಕರ್ಮಧಾರಯಕ್ಕಂ = ಕರ್ಮಧಾರಯಸಮಾಸಕ್ಕೆಯುಂ, ದ್ವಿಗುಗಂ = ದ್ವಿಗುಸಮಾಸಕ್ಕೆಯುಂ, ಮಿಕ್ಕಂ = ಉಳಿದ ಆ, ದ್ವಂದ್ವಕ್ಕಂ = ದ್ವಂದ್ವಸಮಾಸಕ್ಕೆಯುಂ, ತಕ್ಕಂತಿರೆ = ತಕ್ಕ ಹಾಗೆ, ಪದಾಂತ್ಯಲೋಪಂ = ಪೂರ್ವಪದದ ಕಡೆಯಕ್ಷರದ ಲೋಪಂ, ಅಕ್ಕುಂ = ಅಪ್ಪುದು; ಮೇಲೆ = ಆ ಮೇಲೆ, ಅಕ್ಕರಿಗರಿಂ = ಅಕ್ಷರಜ್ಞರಿಂದೆ, ಆ ಕ್ರಿಯಾಸಮಾಸೋಪೇತಂ = ಆ ಕ್ರಿಯಾಸಮಾಸದಲ್ಲಿಯುಂ ಕೂಡಿರ್ಪುದು.

**ವೃತ್ತಿ** - ಕರ್ಮಧಾರಯಕ್ಕಂ ದ್ವಿಗುವಿಂಗಂ ದ್ವಂದ್ವಕ್ಕಂ ಕ್ರಿಯಾಸಮಾಸಕ್ಕಂ ಪೂರ್ವಪದಾಂತ್ಯ ಲೋಪಂ ಕೆಲವೆಡೆಯೊಳಕ್ಕುಂ.

**ಪ್ರಯೋಗಂ -**

ಕರ್ಮಧಾರಯಕ್ಕೆ -

ಬಡವು ನಡು - ಬಡನಡು; ಅರಸು ನೇಱಿಲ್ - ಅರನೇಱಿಲ್; ಪೊಲ್ಲಮು ಮೊಗಂ - ಪೊಲ್ಲಮೊಗಂ.

ಉ || ಮಾ || ... ಪೊಲ್ಲಮಾನಸರ ಪೊಲ್ಲಮೊಗಂಗಳಂ ... ೧

ದ್ವಿಗುವಿಂಗೆ -

ಪಲವು ದೆವಸಂ - ಪಲದೆವಸಂ; ಪಲವು ಪಣ್ - ಪಲವಣ್; ಪಲವು ಕಣ್ - ಪಲಗಣ್

ಕಂ||  ... ಪಾ
ದರಿಗಂ ಪಲಗಣ್ಣದೇವನೀವ[ನದೇನಂ] ೨

ದ್ವಂದ್ವಕ್ಕೆ -

ತಮ್ಮ ತಮ್ಮರಾಜ್ಯಂ - ತಂತಮ್ಮರಾಜ್ಯಂ; ತಂತಮ್ಮ ಮಹಾ ವಿಭೂತಿ; ತಂತಮ್ಮ ಬಲಂ.

ಕಂ ॥ ತಂತಮ್ಮ ರಾಜ್ಯಚಿಹ್ನಂ ।
ತಂತಮ್ಮ ಮಹಾವಿಭೂತಿ ತಂತಮ್ಮ ಬಲಂ ॥ ೩
(ವಿಕ್ರಮಾರ್ಜುನ ವಿಜಯಂ ೩-೪೩)

ಕ್ರಿಯಾಸಮಾಸಕ್ಕೆ -

ಪೋಗುತಂದಂ - ಪೋತಂದಂ; ಕೆಟಿಗುಸಾರ್ದಂ - ಕೆಟಿಸಾರ್ದಂ; ಎಯ್ದು [ವುದಂ] ತಂದಂ - ಎಯ್ತಂದಂ; ಕಳನಂ ಸುತ್ತಿದಂ - ಕಳಸುತ್ತಿದಂ; ಏನಂ ಪೇೞ್ವೆಂ - ಏವೇೞ್ವೆಂ.

ಏವೇೞ್ವೆನವನ ಚಾಗದ ಪೆಂಪಂ ೪

ಏತರ್ಕೆ ಬಂದಂ - ಏವಂದಂ; ಏತರ್ಕೆ ಪೋದಂ - ಏವೋದಂ.

ಏವಂದರೇವೋದರೆನ್ನದೆ ಕಾದಲ್ತಱಿಸಲ್ವಮೆಂದು ... ೫

**ಸೂತ್ರಂ ॥ ದೊರೆಕೊಳ್ವುದತ್ವವಿಧಿಯಂ ।**
**ತರಾಳದೊಳ್ ಬಹುಳಮಾಗಿ ಮಧ್ಯಪದಕ್ಕಂ ॥**
**ದೊರೆಕೊಳ್ವುದದರ್ಶನವಿಧಿ ।**
**ವಿರಳತೆಯಿಂ ಕರ್ಮಧಾರಯಕ್ಕಱಿವವರಿಂ ॥ ೧೭೮ ॥**

**ಟೀಕೆ** - ಕರ್ಮಧಾರಯಕ್ಕೆ = ಕರ್ಮಧಾರಯಸಮಾಸಕ್ಕೆ, ಅಂತರಾಳದೊಳ್ = ಮಧ್ಯದಲ್ಲಿ, ಅತ್ವವಿಧಿ = ಅಕಾರದ ವಿಧಿ, ಬಹುಳವಾಗಿ, ದೊರೆಕೊಳ್ವುದು = ಬರ್ಪುದು; ಅಱಿವವರಿಂ = ಬಲ್ಲವರಿಂದೆ, ಮಧ್ಯಪದಕ್ಕಂ = ನಡುವಣ ಪದಕ್ಕೆಯುಂ, ವಿರಳತೆಯಿಂ = ವಿರಳತ್ವದಿಂದೆ, ಅದರ್ಶನವಿಧಿ = ಲೋಪದ ವಿಧಿ, ದೊರೆಕೊಳ್ವುದು = ಬರ್ಪುದು.

**ವೃತ್ತಿ** - ಕರ್ಮಧಾರಯದೊಳೆತ್ತಾನುಂ ಮಧ್ಯದೊಳೊಂದಕಾರಮಕ್ಕುಂ; ಕೆಲವೆಡೆಯೊಳ್ ಮಧ್ಯಪದಕ್ಕೆ ಲೋಪಮಕ್ಕುಂ.

**ಪ್ರಯೋಗಂ** -

ಅತ್ವಕ್ಕೆ -

ಬಟ್ಟಿತ್ತು ತೊಡೆ - ಬಟ್ಟದೊಡೆ; ಬೆಟ್ಟವೇಸಗೆ, ದಟ್ಟವಳ್ಳಿ - ಇವುಮದಱಂತೆ.

ಚಂ ॥ ಮಾ ॥ ... ಬೆಟ್ಟವೇ
ಸಗೆಯ ಬಿಸಿಲ್ಗೆ ತೀಡಿದುದು ತಣ್ಣನೆ ಪಣ್ಣನೆ ಪಶ್ಚಿಮಾನಿಳಂ ॥ ೧
(ಮಲ್ಲಿನಾಥಪುರಾಣಂ ೮-೭೬; ರಾಮಚಂದ್ರಚರಿತಪುರಾಣಂ ೭-೧೩೯;
ಸೂಕ್ತಿಸುಧಾರ್ಣವಂ ೧೦-೧೪೭)

ಮಧ್ಯಪದ ಲೋಪಕ್ಕೆ -

ಅಲರಂತಪ್ಪ ಕಣ್ ಎಂಬಲ್ಲಿ ಅಂತಪ್ಪ ಎಂಬುದರ್ಕೆ ಲೋಪಮಾಗಿ ಅಲರ್ಗಣ್ ಎಂದಾಯ್ತು. ಪೆಱೆನೊಸಲ್, ತೊಂಗಲ್ಗುರುಳ್, ತುಂಬಿಗುರುಳ್ - ಇವುಮಂತೆ.

**ಸೂತ್ರಂ ॥ ಮುಂದಣ ಪದಂ ವಿಶೇಷ್ಯದೊ ।**
**ಳೊಂದಿರೆ ಪಿಂದಿರ್ದ ಪದದುಪಾಂತ್ಯಸ್ವರದಿಂ ॥**
**ಸಂದಿಪುದು ಲೋಪಮಾದಿಯೊ ।**
**ಳೊಂದಿದಿಕಾರಕ್ಕೆಕಾರವಿಧಿ ಬಹುಳತೆಯಿಂ ॥ ೧೭೯ ॥**

**ಟೀಕೆ** - ಮುಂದಣ = ಅಗ್ರದ, ಪದಂ, ವಿಶೇಷ್ಯದೊಳ್ = ವಿಶೇಷ್ಯದಲ್ಲಿ, ಒಂದಿರೆ = ಕೂಡಿರೆ, ಪಿಂದೆ = ಇರ್ದ ಪದದ, ಉಪಾಂತ್ಯಸ್ವರದಿಂ = ಉಪಾಂತ್ಯಸ್ವರದೊಡನೆ, ಲೋಪಂ, ಸಂದಿಪುದು; ಆದಿಯೊಳ್ = ಮೊದಲಲ್ಲಿ, ಒಂದಿದಿಕಾರಕ್ಕೆ = ಕೂಡಿದ ಇಕಾರಕ್ಕೆ, ಬಹುಳತೆಯಿಂ, ಎಕಾರವಿಧಿ ಸಂದಿಪುದು.

**ವೃತ್ತಿ** - ಪರಪದಂ ವಿಶೇಷ್ಯಮಾಗಿರೆ ಪೂರ್ವಪದದುಪಾಂತ್ಯಸ್ವರದಿಂ ಲೋಪಂ; ಪದದಾದಿಯಿಕಾರಕ್ಕೆ ಬಹುಳದಿಂದೆಕಾರಮಕ್ಕುಂ.

**ಪ್ರಯೋಗಂ** -

ಉಪಾಂತ್ಯಸ್ವರಲೋಪಕ್ಕೆ (ಸೂ. ೧೬೪) - ತೆಳ್ಳಿತು + ಬಸಿಱು = ತೆಳ್ಬಸಿಱು; ಒಳ್ಳಿತು + ನುಡಿ = ಒಳ್ನುಡಿ; ಬಲ್ಲಿತು + ಮುಗುಳ್ = ಬಲ್ಮುಗುಳ್; ಮೆಲ್ಲಿತು + ಅಡಿ = ಮೆಲ್ಲಡಿ.

ಎತ್ವಕ್ಕೆ -

ಪಿರಿದು + ಮೊಲೆ = ಪೆರ್ಮೊಲೆ; ಪೆರ್ಮರಂ, ಪೆರ್ಮಾತು. ಬಿಳಿದು + ತಿಂಗಳ್ = ಬೆಳ್ದಿಂಗಳ್; ಬೆಳ್ಮುಗಿಲ್, ಬೆಳ್ವಲೆ, ಬೆಳ್ವಯಲ್.

ಬಹುಳಕ್ಕೆ -

ಬಿಣ್ಣಿತು + ಕೊನೆ = ಬಿಣ್ಗೊನೆ; ಬಿಣ್ಪೊಱೆ. ಇನಿದು + ಮಾವು = ಇಮ್ಮಾವು.

**ಸೂತ್ರಂ ॥ ಅಗುರುಪದಾದಿಗೆ ದೀರ್ಘಂ ।**
**ನೆಗಳ್ಗುಂ ¹ಸ್ವರಮಿದಿರೊಳೊದವೆ ಬಹುಳತೆಯಿಂದಂ**
**ಪುಗೆ ಪೆಱತೇಂ ದ್ವಿರ್ಭಾವಂ ।**
**ನೆಗಳ್ಗುಂ ²ಮತ್ತಲ್ಲಿ ಬಂದು ಣ ಟ ಳ ನ ತಂಗಳ್ ॥ ೧೮೦ ॥**

**ಟೀಕೆ** - ಸ್ವರಂ = ಸ್ವರಾಕ್ಷರಂ, ಇದಿರೊಳ್ = ಪರದಲ್ಲಿ, ಒದವೆ = ಬರೆ, ಬಹುಳತೆಯಿಂದಂ = ಬಹುಳದಿಂದೆ, ಅಗುರು = ಲಘುವಾದ, ಪದ = ಪದಂಗಳ, ಆದಿಗೆ = ಮೊದಲ್ಗೆ , ದೀರ್ಘಂ, ನೆಗಳ್ಗುಂ = ಪ್ರಸಿದ್ಧಿವಡೆವುದು; ಮತ್ತೆ = ಆಮೇಲೆ, ಅಲ್ಲಿ = ಆ ಸ್ವರಾಕ್ಷರಂಗಳಿದಿರಾದಲ್ಲಿ , ಣ ಟ ಳ ನ ತಂಗಳ್ = ಣಕಾರ ಟಕಾರ ಳಕಾರ ನಕಾರ ತಕಾರಂಗಳ್, ಬಂದು, ಪುಗೆ = ಪ್ರವೇಶವಾಗೆ, ಪೆಱತೇಂ = ಅನ್ಯವೇಂ, ದ್ವಿರ್ಭಾವಂ = ದ್ವಿತ್ವಂ, ನೆಗಳ್ಗುಂ = ಪ್ರಸಿದ್ಧಿವಡೆವುದು.

**ವೃತ್ತಿ** - ಸ್ವರಂ ಪರಮಾಗೆ ಪದದಾದಿಯ ಹ್ರಸ್ವಕ್ಕೆ ಬಹುಳತೆಯಿಂ ದೀರ್ಘಮಕ್ಕುಂ; ಪೂರ್ವಪದಾಂತ್ಯದೊಳ್ ಣ ಟ ಳ ನ ತಂಗಳಿರೆ ದ್ವಿರ್ಭಾವಮಕ್ಕುಂ.

~~~~~~~~~~~~~~~~~~~~

೧, ೨. (೨, ೪ನೆಯ ಪಾದಗಳ ಈ ಮುಂದಿನ ಪಾಠದಲ್ಲಿ ೨ನೆಯದು ೪ರದಾಗಿಯೂ, ೪ರದು ೨ನೆಯದಾಗಿಯೂ ಪ್ರಚಲಿತ ಪರಿಷ್ಕರಣಗಳಲ್ಲಿದೆ.)
~~~~~~~~~~~~~~~~~~~~

**ಪ್ರಯೋಗಂ -**

ದೀರ್ಘಕ್ಕೆ -

ಪಿರಿದು + ಆನೆ = ಪೇರಾನೆ; ಪೇರಡವಿ, ಪೇರೊಕ್ಕಲ್, ಪೇರಡಿ, ಪೇರೊಡಲ್; ಓರೆಂಜಲ್; ಈರೈದು, ಈರೊತ್ತೆ.

ಬಹುಳದಿಂ ವ್ಯಂಜನಪರಮಾದಲ್ಲಿಯುಂ ದೀರ್ಘಮಾಯ್ತು -

ಇನಿದು + ಸರಂ = (ಇಂಚರಂ) ಈಂಚರಂ; ಈಂಬುಳಿ, ಈಂಗಡಲ್, ಈಂದೋಳ್, ಈಂದುಟಿ.

ಉ ॥ ಮಾ ॥ ಈಂಗಡಲೊಳ್ಪುವೆತ್ತ ಪಸೆ ಕನ್ನಡಿ ಚಂದ್ರಮಂ ... ೧

ದ್ವಿತ್ವಕ್ಕೆ -

ಪೆಣ್ + ಉಡೆ = ಪೆಣ್ಣುಡೆ; ನುಣ್ಣಿತು + ಅರಿಸಿನಂ = ನುಣ್ಣರಿಸಿನಂ; ತಣ್ಣೆಲರ್; ಕಟ್ಪಾಯಂ, ಕಟ್ಪೇಟ್ಗೆ, ಕಟ್ಪಳೆ, ಕಟ್ಪಳ್ಕೆ, ಕಟ್ಪುಬ್ಬಟೆ; ನಿಟ್ಪೆಯ್ದೆ, ನಿಟ್ಪೆಸಳ್; ಬೆಳ್ಳಾನೆ, ಒಳ್ಳುಣಿಸು, ಅಳ್ಳೇಱು, ಒಳ್ಳಾಳ್.

ಕಂ ॥ ... ಒಳ್ಳಾಳೆಡೆಗೋದನೊದಱ ಚಟ್ಪನೊಳೊವಜಂ ೨

(ಕಾವ್ಯಾವಲೋಕನಂ ೨೨೪)

ಇನ್ನುಣಿಸು; ಕಿತ್ತಡಿ, ಕಿತ್ತಾಚಂ, ಕಿತ್ತೀಳೆ, ಕುತ್ತಡಿ, ಕುತ್ತೇವಂ, ಕುತ್ತಳೆ, ಕುತ್ತೆಸಳ್.

**ಸೂತ್ರಂ ॥ ಕಡಿದು ನಿಡಿದೆಂಬ ನಡುವೆಂ ।**
**ಬ ಡಕಾರಂ ಟತ್ವಮಾಯ್ತು ಕಿಱುದರ್ಕೆ ಕುಱೆಂ ॥**
**ಬೆಡೆಯಲ್ಲಿ ತಕಾರಂ ಸ್ವರ ।**
**ಮಡಸೆ ಪರಕ್ಕುತ್ವಮಸ್ವರಂ ನಿಲೆ ಪರದೊಳ್ ॥ ೧೪೧ ॥**

**ಟೀಕೆ** - ಪರಕ್ಕೆ = ಮುಂಗಡೆಗೆ, ಸ್ವರಂ = ಸ್ವರಾಕ್ಷರಂ, ಅಡಸೆ = ಪೊರ್ದುಗೆಯಾಗೆ, ಕಡಿದು ನಿಡಿದೆಂಬ ನಡುವೆಂಬ ಡಕಾರಂ = ಕಡಿದು ನಿಡಿದು ನಡುವೆಂಬ ಶಬ್ದಂಗಳ ಡಕಾರಂ, ಟತ್ವಂ = ಟಕಾರಂ, ಆಯ್ತು; ಕಿಱುದರ್ಕೆ = ಕಿಱುದೆಂಬ ಶಬ್ದಕ್ಕೆ, ಕುಱೆಂಬೆಡೆಯಲ್ಲಿ = ಕುಱು ಎಂಬಾದೇಶಂ ಬಂದಲ್ಲಿ, ತಕಾರಂ = ತತ್ವಂ ಆಯ್ತು, ಪರದೊಳ್= ಮುಂದೆ, ಅಸ್ವರಂ = ವ್ಯಂಜನಂ, ನಿಲೆ = ನೆಲೆಗೊಳೆ, ಉತ್ವಂ = ಈ ಪೇಟ್ಟಿ ಶಬ್ದಂಗಳ ಕಡೆಯಣಕ್ಷರಕ್ಕೆ ಉಕಾರಂ ಆಯ್ತು.

**ವೃತ್ತಿ** - ಸ್ವರಂ ಪರಮಾಗೆ ಕಡಿದು ನಿಡಿದು ನಡುವೆಂಬ ಡಕಾರಕ್ಕೆ ಟಕಾರಮಕ್ಕುಂ; ಕಿಱುದೆಂಬ ಱಕಾರಕ್ಕಂ ಕುಱು ಎಂಬ ಱಕಾರಕ್ಕಂ ತಕಾರಮಕ್ಕುಂ; ವ್ಯಂಜನ ಪರಮಾದೆಡೆಯೊಳಿವರ್ಕೆ ಉಕಾರಮಕ್ಕುಂ.

**ಪ್ರಯೋಗಂ -**

ಟಕಾರಕ್ಕೆ -

ಕಟ್ಪಾಳ್, ಕಟ್ಪುಬ್ಬಸಂ; ನಿಟ್ಪಡಕಿಲ್, ನಿಟ್ಪರ್ಕೆ; ನಟ್ಪಡಪಿ, ನಟ್ಪಾಳಂ, ನಟ್ಪಿರುಳ್.

ತಕಾರಕ್ಕೆ -

ಕಿತ್ತಡಿ, ಕಿತ್ತೀಳೆ, ಕಿತ್ತನಿವಂ, ಕಿತ್ತೆಸಳ್, ಕುತ್ತಡಿ, ಕುತ್ತೆಸಳ್.

ಉಕಾರಕ್ಕೆ -

ಕಡುಗುದುರೆ, ಕಡುಗಾಳಿ; ನಿಡುದೋಳ್, ನಿಡುವಯಣಂ; ನಡುಸೆಱಂಗು, ನಡುಮಾಳಂ.

ಮ ॥ ಸ್ರ ॥ ನಡುಮಾಳಂ ಮುಂತೆ ನೀರಿಲ್ಲಣಮೆ ಮಗುಟ್ವೊಡಂ ಪಿಂತಣೂರ್ ಗೆಂಟು ... ೧

(ಸಮಯ ಪರೀಕ್ಷೆ ೧೫ - ೮೨)

ಕಿಱುಗೂಸು, ಕಿಱುನೆಲ್ಲಿ, ಕಿಱುವಿದಿರ್, ಕಿಱುವಲೆ, ಕಿಱುನಾಯ್; ಕುಱುವಡಿ, ಕುಱುಗಡ್ಡಂ.

ಕಂ ॥ ಪೆರ್ವಲೆ ಬಡಿಕೋಲ್ ಕಿಱುನಾಯ್ ... ೨

**ಸೂತ್ರಂ ॥ ಜನಿಯಿಸುಗುಂ ಪಚ್ಚನೆ ಕೆ ।**
**ಚ್ಚನೆ ಬೆಚ್ಚನೆಗಳ ಚಕಾರದೊಳ್ ಮತ್ವಂ ಕೆ ॥**
**ಚ್ಚನೆಯಾದಿಗೆ ಚತ್ವಂ ಮೇ ।**
**ಣನಿತಱ ಮತ್ವಂ ಸುಕಾರಮೆತ್ವಕ್ಕಿತ್ವಂ ॥ ೧೮೨ ॥**

**ಟೀಕೆ** - ಅಸ್ವರಂ ನಿಲೆ ಪರದೊಳೆಂಬುದನುವರ್ತನೆ. ಪಚ್ಚನೆ, ಕೆಚ್ಚನೆ, ಬೆಚ್ಚನೆಗಳ = ಪಚ್ಚನೆ ಕೆಚ್ಚನೆ ಬೆಚ್ಚನೆ ಎಂಬ ಶಬ್ದಂಗಳ, ಚಕಾರದೊಳ್ = ಚಕಾರದಲ್ಲಿ, ಮತ್ವಂ = ಮಕಾರಂ, ಜನಿಯಿಸುಗುಂ = ಹುಟ್ಟುವುದು; ಕೆಚ್ಚನೆಯ = ಕೆಚ್ಚನೆ ಎಂಬ ಶಬ್ದದ, ಆದಿಗೆ = ಮೊದಲ್ಗೆ, ಚತ್ವಂ = ಚಕಾರಂ ಜನಿಯಿಸುಗುಂ; ಮೇಣ್ = ವಿಕಲ್ಪದಿಂದೆ, ಅನಿತ ಱ = ಎಲ್ಲ ಶಬ್ದಗಳ, ಮತ್ವಂ = ಮಕಾರಂ, ಸುಕಾರಂ = ಸುಕಾರಮಪ್ಪುದು; ಎತ್ವಕ್ಕೆ = ಆದಿಯ ಎಕಾರಕ್ಕೆ, ಇತ್ವಂ = ಇಕಾರಂ ಬರ್ಪುದು.

**ವೃತ್ತಿ** - ಪಚ್ಚನೆ, ಕೆಚ್ಚನೆ, ಬೆಚ್ಚನೆಯೆಂಬಿವಱ ಚಕಾರಕ್ಕೆ ಮ್ ಎಂಬುದಕ್ಕುಂ; ಕೆಚ್ಚನೆಯಾದಿಯ ಕಕಾರಕ್ಕೊರ್ಮೆ ಚಕಾರಮಕ್ಕುಂ; ಈ ಶಬ್ದಂಗಳ ಕಡೆಯ ಮಕಾರಕ್ಕೆ ಸುಕಾರಮುಮಾದಿಯ ಎತ್ವಕ್ಕಿತ್ವಮುಮಕ್ಕುಂ.

**ಪ್ರಯೋಗಂ** -

ಮಕಾರಕ್ಕೆ-

ಪಂದೊವಲ್, ಪಂದಲೆ, ಪಂದಳಿರ್.

ಕಂ ॥ ಪಂದಳಿರ ತೋರಣಂ ತ ।
ಳ್ತೊಂದಿದ ಕೆಂಗುಡಿಯ ಪುದಿವು ಮುತ್ತಿನ ಕೊಡೆ ಬಿ ॥
ಳ್ವಿಂದೆಸೆವ ಮಂಗಳಾನಕ ।
ದೊಂದು ರವಂ ಬಗೆಗೆ ವಂದುದಂದರಮನೆಯೊಳ್ ॥ ೧

(ಕಾವ್ಯಾವಲೋಕನಂ ೨೩೪)

ಕೆಂಗಾಱಿ, ಕೆಂಗಱು, ಕೆಂಜೆಡೆ, ಕೆಂಗೊಡೆ, ಕೆಂದಳಿರ್, ಕೆಂಬಿಸಿಲ್, ಕೆಂಬಟ್ಟೆ.

ಕಂ ॥ ... ಕೆಂ
ಬಟ್ಟೆಯ ತಲೆಕಟ್ಟು ಪಾಙುವುರುವುರುಳಿಗಳಂ[೧] ೨

ಬೆಂಗಲಂ, ಬೆಂಗದಿರ್, ಬೆಂಬೊಳಲೆ, ಬೆನ್ನೀರ್.

ಕಂ ॥ ಎನಿತುಂ ಕಾಯ್ದುಂ ಬೆನ್ನೀರ್ ।
ಮನೆ ಸುಡದೆಂಬಂತೆ ನಿನಗವರ್ ನಿಲೆ ಕಾಯ್ದುಂ ॥
ಮನದೊಳ್ ಪೊಲ್ಲಮನೆಂದುಂ ।
ನೆನೆಯರದಂ ನಂಬು ಕುರುಕುಲಾನ್ವಯಭಾನೂ ॥ ೩
(ಕಾವ್ಯಾವಲೋಕನಂ ೨೩೫)

ಚಕಾರಕ್ಕೆ -

ಚೆಂಗಣಗಿಲೆ, ಚೆಂದೆಂಗು, ಚೆನ್ನೆಯ್ದಿಲ್, ಚೆಂಬೊನ್, ಚೆಂಗೋಲ್, ಚೆಂಬೋತಂ, ಚೆಂಗೊರಲ್, ಚೆಂದುಟಿ.

ಮ ॥ ವಿ ॥ ಅಲರ್ದಂಭೋರುಹಷಣ್ಡಮುಳ್ಳಲರ್ದ ಚೆನ್ನೆಯ್ದಿಲ್ಗೊಳಂ ... ೪
(ಆದಿಪುರಾಣಂ ೧-೯೭)

ಆದಿಯಿತ್ವಂ ಬೆರಸು ಸುಕಾರಕ್ಕೆ -

ಕಿಸುಗಣಗಿಲೆ, ಕಿಸುಗಲ್, ಕಿಸುಗಟ್ಟು, ಕಿಸುವೊನಲ್, ಕಿಸುವೊನ್, ಕಿಸುಸಂಜೆ.

ಕಂ ॥ ... ಪೋಲ್ತಂ ಕಿಸುಸಂಜೆ ಕವಿದ ನೀಲಾಚಲಮಂ ೫

ಬಿಸುಗದಿರ್, ಬಿಸುನೆತ್ತರ್, ಬಿಸುನೀರ್, ಬಿಸುಗಾಳಿ.

ಚಂ ॥ ಮಾ ॥ ... ಬಿಸುನೆತ್ತರ ಧಾರೆಗೆ ಬಾಯನೊಡ್ಡಿ ಮೆ
ಯ್ಮೆಣದೆ ... ೬

ಪಚ್ಚನೆ ಎಂಬುದರ್ಕೆ ಆದಿಯಿತ್ವಮಿಲ್ಲಾಗಿ ಪಸುಂಗಙು, ಪಸುರ್ವಂದರೆಂದಾಯ್ತು.

ಸ್ವರಂ ಪರಮಾಗೆ -

ಪಚ್ಚೋಲೆ, ಪಚ್ಚಡಕೆ, ಪಚ್ಚೆಲೆ.

ಮಣಿವಿಭೂಷಣ ॥ ... ಪ
ಚ್ಚೋಲೆವಚ್ಚದೊಳೊಡಂಬಡೆ ಬಂದು ವಿದಗ್ಧ ... ೭
(ಕಾವ್ಯಾವಲೋಕನಂ ೨೨೧)

ಕೆಚ್ಚನೆ ಎಂಬುದರ್ಕೆ ಮೇಣೆಂಬುದಙುಂ ಕೇಸಡಿ, ಕೇಸುರಿ, ಕೇಸಕ್ಕಿ ಎಂದಾಯ್ತು.

ಕಂ ॥ ಕೇಸುರಿಯನುಗುಟ್ಟುದೋ ನಿ
ಶ್ವಾಸದಿನವಳೆರ್ದೆಯ ಮದನಶಿಖಿಯೆನೆ ... ೮
(ಲೀಲಾವತೀ ಪ್ರಬಂಧಂ. ೧೧-೨೮)

---

೧. (ಈ ಲಕ್ಷ್ಯ ಪ್ರಥಮ ಪರಿಷ್ಕರಣದಲ್ಲಿಲ್ಲ.)

**ಸೂತ್ರಂ ॥ ಪದದ ಕಡೆಯಣ ಡಕಾರ ।**
**ಕ್ಕುದಯಿಪುದು ಟಕಾರಮಾ ೞಕಾರಕ್ಕೊದವಿ ॥**
**ರ್ಪುದು ರೇಫಂ ವ್ಯಂಜನಪದ ।**
**ಮಿದಿರೊಳ್ ಸಂದಿಸೆ ಸಮಾಸದೊಳ್ ಬಹುಳತೆಯಿಂ ॥ ೧೮೩ ॥**

**ಟೀಕೆ** - ಸಮಾಸದೊಳ್, ಬಹುಳತೆಯಿಂ = ಬಹುಳದಿಂದೆ, ವ್ಯಂಜನಪದಂ = ವ್ಯಂಜನಾದಿಯ ಪದಂ, ಇದಿರೊಳ್ = ಪರದಲ್ಲಿ, ಸಂದಿಸೆ = ಇದಿರಾಗೆ, ಪದದ = ಪದಂಗಳ, ಕಡೆಯಣ, ಡಕಾರಕ್ಕೆ, ಟಕಾರಂ, ಉದಯಿಪುದು = ಹುಟ್ಟುವುದು; ಆ ೞಕಾರಕ್ಕೆ = ಆ ಪದದ ಕಡೆಯಣ ೞಕಾರಕ್ಕೆ, ರೇಫಂ, ಒದವಿರ್ಪುದು = ಬರ್ಪುದು.

**ವೃತ್ತಿ** - ವ್ಯಂಜನಂ ಪರದೊಳಿರೆ ಸಮಾಸದೊಳ್ ಮೊದಲ ಪದದ ಕಡೆಯಣ ಡಕಾರಕ್ಕೆ ಟಕಾರಮಕ್ಕುಂ; ೞಕಾರಕ್ಕೆ ರೇಫೆಯಕ್ಕುಂ; ಬಹುಳದಿಂದೆ ಅಸಮಾಸದೊಳಮಂತೆ.

**ಪ್ರಯೋಗಂ** -

ಟಕಾರಕ್ಕೆ -

ಕಾಟ್ಕಿೞ್ಚು, ಕೋಟ್ಟುಕಟ್ಟು, ನಾಟ್ಕಡೆ, ನೀಟ್ಕರಿಸಿದಂ, ಎರಟ್ಕಿಡಿ, ಎರಟ್ಟಿರಂ, ಎರಟ್ಮಾೞು, ಎರಟ್ಮಾತು.

ಮ ॥ ವಿ ॥ ... ಎರಟ್ಮಾತಾಡಿ ಬಟ್ಟಿಂ ಜಗ
ದ್ವಲಯಕ್ಕೊರ್ನುಡಿಕಾಜಿನಾದಂ ... ೧
(ಕಾವ್ಯಾವಲೋಕನಂ ೨೬೧)

ರೇಫಕ್ಕೆ -

ಕೆಸರ್ಮಲ್ಲಿಗೆ, ನೇಸರ್ಮೞಯಣಂ, ಬೇಸರ್ನುಡಿ

ಮ ॥ ವಿ ॥ ... ಏರ್ಪೆತ್ತರೇರ್ಪೆತ್ತರಂ
ಪದುಳಂ ಮಾಟ್ಪುದು ಚಿತ್ರಮೆಂದು ... ೨

ಅಸಮಾಸದ ಟಕಾರಕ್ಕೆ -

ನೋಟ್ಪಿಂ, ಮಾಟ್ಪಿಂ, ಬೇಟ್ಪಿಂ, ಬಿಸುಟ್ಪಿಂ, ಬೆಗಟ್ಪಿಂ.

ಉ ॥ ಮಾ ॥ ನಿನ್ನ ಬೆಗಟ್ಪ ಭಂಗಿ ಕರಮುಕ್ಕಿವಮಾಗಿ ಮನಕ್ಕೆ ತೋಱುಗುಂ ೩

ಸ್ರ ॥ ... ಒಂದೆರಟ್ಮೂಱುನಾಲ್ಕೈ
ದಾಱೇಳೆಂಟೊಂಬತೆಂದಿಂತರಿಗುಮೆ ತಲೆಯೊಂಬತ್ತುಮಂ ದೈತ್ಯರಾಜಂ ॥ ೪
(ಕಾವ್ಯಾವಲೋಕನಂ ೩೦೧)

ರೇಫೆಗೆ -

ಕೆಸರ್ಮಸಗಿದುದು; ಏರ್ಮಾಣ್ದುದು; ಏರ್ಪೂತುದು, ನೇಸರ್ಮೂಡಿದುದು.

ಕಂ ॥ ... ನೇಸ
ರ್ಮೂಡಿದುದು ಬಕಂಗೆ ಮಿಟ್ತು ಮೂಡುವ ತೆಱದಿಂ ॥ ೫
(ವಿಕ್ರಮಾರ್ಜುನವಿಜಯಂ ೩-೨೭)

ಸೂತ್ರಂ ॥ ಕಿಱುದರ್ಕ್ಕಾದೇಶಂ ಕುಱು ।
[1]ಬಿಱುವೆಂಬುದು ಬೆಟ್ಟಿತರ್ಕ್ಕೆ ಕೊಂಕಂಗೆ ಕುಡೆಂ ॥
ದಱ ರೇಫೆ ತಳ್ತ ವರ್ಣ ।
ಕ್ಕೆಱಗಿರ್ಕ್ಕುಂ ದ್ವಿತ್ವವೃತ್ತಿಯಸಮಾಸದೊಳಂ ॥ ೧೮೪ ॥

ಟೀಕೆ - ಕಿಱುದರ್ಕ್ಕೆ = ಕಿಱುದೆಂಬ ಶಬ್ದಕ್ಕೆ, ಕುಱು ಎಂದು, ಆದೇಶಂ ಬರ್ಪುದು; ಬೆಟ್ಟಿತರ್ಕ್ಕೆ = ಬೆಟ್ಟಿತೆಂಬ ಶಬ್ದಕ್ಕೆ, ಬಿಱು ಎಂಬುದು ಆದೇಶಂ ಬರ್ಪುದು; ಕೊಂಕಂಗೆ = ಕೊಂಕೆಂಬ ಶಬ್ದಕ್ಕೆ, ಕುಡು ಎಂದು, ಅಱ = ತಿಳಿ; ಅಸಮಾಸದೊಳಂ = ಸಮಾಸವಲ್ಲದಲ್ಲಿಯುಂ, ರೇಫೆ ತಳ್ತ ವರ್ಣಕ್ಕೆ = ರೇಫೆಗೂಡಿದಕ್ಷರಕ್ಕೆ, ದ್ವಿತ್ವವೃತ್ತಿ, ಎಱಗಿರ್ಕ್ಕುಂ = ಬರ್ಪುದು.

ವೃತ್ತಿ - ಕಿಱುದರ್ಕ್ಕೆ ಕುಱು ಎಂದು, ಬೆಟ್ಟಿತರ್ಕ್ಕೆ ಬಿಱು ಎಂದು, ಕೊಂಕಂಗೆ ಕುಡು ಎಂದು ಆದೇಶಮಕ್ಕುಂ; ಸಮಾಸದೊಳಮಸಮಾಸದೊಳಂ ರೇಫೆಯಡರ್ದಕ್ಕರಕ್ಕೆ ದ್ವಿತ್ವಮಕ್ಕುಂ.

ಪ್ರಯೋಗಂ -

ಕುಱು, ಬಿಱು, ಕುಡು ಎಂಬಿವರ್ಕೆ -

ಕುಱುಗಡ್ಡಂ, ಕುಱುದಡ್ಡಿ, ಕುಱುಗಂಟು, ಕುಱುದಱು, ಕುಱುಗಯ್.

ಚಂ ॥ ಮಾ ॥ ... ಅಚ್ಚಡಿ ಕೀಲ್ ಕುಱುಗಯ್ ಮಡಂ ಮೊಗಂ ... ೧

ಬಿಱುವೊಯಿಲ್, ಬಿಱುಬಿದ್ದಂ, ಬಿಱುವಡಿ, ಬಿಱುಗಾಳಿ.

ಚಂ ॥ ಮಾ ॥ ... ಬೀ
ಸುವ ಬಿಱುಗಾಳಿ ಕೊಳ್ವ ಮಱಿ ಪೊಯ್ವ ಸಿಡಿಲ್ ಚಿಳಿಲೆಂಬ ಮಿಂಚು ... ೨

ಕುಡುವುರ್ಬು, ಕುಡುಗೋಲ್, ಕುಡುವೆಱಿ, ಕುಡುದಾಡೆ, ಕುಡುಮಿಂಚು.

ಚಂ ॥ ಮಾ ॥ ಕುಡುವೆಱಿಯಂತೆ ತೋರ್ಪ ಕುಡುದಾಡೆ ... ೩

ಮ ॥ ವಿ ॥ ಕುಡುಮಿಂಚಂ ಮಸೆದನ್ನರಪ್ಪ ಪಲರೊಳ್ಸ್ವಂಡಿರ್ ... ೪
(ಆದಿಪುರಾಣಂ ೩-೧೨)

ದ್ವಿತ್ವಕ್ಕೆ -

ನೀರ್ಗ್ಗಿಚ್ಚು, ಊರ್ವ್ವೇಲಿ, ನೀರ್ವ್ವಾನಸೆ, ಕಾರ್ಗ್ಗಾಲಂ.

ಕಂ ॥ ... ನೀರ್ವ್ವಾನಸೆಯಂತೆ ವಿಜಯವಧು ನೆಲಸಿರ್ಪಳ್ ೫
(ಚಂದ್ರಪ್ರಭ ಪುರಾಣಂ ೩-೨೦)

ಕಂ ॥ ... ಕಾರ್ಗ್ಗಾಲದ ಮಿಂಚಿನಂತೆ ಪೊಳೆದುವು ಬಾಳ್ಗಳ್ ೬

ಅಸಮಾಸಕ್ಕೆ -

ಬೇರ್ಪ್ಪಱಿದುದು, ತೇರ್ಪ್ಪರಿದುದು, ಕೇರ್ಕ್ಕಿಡೆದುದು, ನೀರ್ತ್ತಿಳಿದುದು.

ಕಂ ॥ ಬೆಳಗಿದುವೆಂಟುಂ ದೆಸೆ ನೀ
ರ್ತ್ತಿಳಿದುದು ... ೭

~~~~~~~~~~~~~~~~~~~

೧. (ಬಿಱುವೆಂಬಿದು)
~~~~~~~~~~~~~~~~~~~

**ಸೂತ್ರಂ ॥ ಇತರೇತರಕ್ರಿಯಾಸಂ ।**
**ಹತಮದು ತಾನಾವುದಲ್ಲಿ ಮತ್ತೆ ಬಹುವ್ರೀ ॥**
**ಹಿ ತಗುಳ್ಗುಮಾತ್ವವಿಧಿ ಸಂ ।**
**ಗತಮಾದಿಪದಾಂತ್ಯದಲ್ಲಿ ಚರಮಕ್ಕಿತ್ವಂ ॥ ೧೮೫ ॥**

**ಟೀಕೆ** - ಇತರೇತರ = ಅನ್ಯೋನ್ಯವಾದ, ಕ್ರಿಯಾ = ಕ್ರಿಯೆಯಿಂದೆ, ಸಂಹತಂ = ಕಾದುವುದು, ಅದು ತಾಂ, ಆವುದು = ಆವುದುಂಟು, ಅಲ್ಲಿ = ಆ ಯುದ್ಧದಲ್ಲಿ, ಮತ್ತೆ ಬಱಿಕಂ, ಬಹುವ್ರೀಹಿ = ಬಹುವ್ರೀಹಿಸಮಾಸಂ, ತಗುಳ್ಗುಂ = ಎಯ್ದುವುದು; ಆದಿ ಪದಾಂತ್ಯದಲ್ಲಿ = ಮೊದಲ ಪದದ ಕಡೆಯಲ್ಲಿ, ಆತ್ವವಿಧಿ = ಆಕಾರದ ವಿಧಿ, ಸಂಗತಂ = ಎಯ್ದಲ್ಪಡುವುದು; ಚರಮಕ್ಕೆ = ಕಡೆಯ ಪದದಂತ್ಯಕ್ಕೆ, ಇತ್ವಂ, ಎಯ್ದಲ್ಪಡುವುದು.

**ವೃತ್ತಿ** - ಓರೊಂದಱ ಕ್ರಿಯೆಯನೋರೊಂದು ಕೈಕೊಂಡು ಮಾಡುವೆಡೆಯೊಳ್ ನೆಱಿವಣಿಗೆಯಂ ಪಡೆವುದದುವುಂ ಮತ್ತೆ ಬಹುವ್ರೀಹಿಯಕ್ಕುಂ; ಅದಱ ಮೊದಲ ಪದದ ಕಡೆಗಾತ್ವಮುಂ ಪರಪದದ ಕಡೆಗಿತ್ವಮುಮಕ್ಕು.

**ಪ್ರಯೋಗಂ** -

ಖಡ್ಗದಿಂ ಖಡ್ಗದಿಂ ಮಾಡುವ ಯುದ್ಧಮಾವುದದು ಖಡ್ಗಾಖಡ್ಗಿ; ಮುಷ್ಟಿಯಿಂ ಮುಷ್ಟಿಯಿಂ ಮೈಯೊಡ್ಡಿ ಮಾಡುವ ಯುದ್ಧಮಾವುದದು ಮುಷ್ಟಾಮುಷ್ಟಿ; ಮುಟ್ಟಾಮುಟ್ಟಿ, ಹೆಲ್ಲಾಹೆಲ್ಲಿ, ದಾಟಾದಾಟಿ, ದೆಕ್ಕಾದೆಕ್ಕಿ, ಹಣಾಹಣಿ(ಹಾಣಾಹಾಣಿ). ಘಟ್ಟಾಘಟ್ಟಿ, ಮಲ್ಲಾಮಲ್ಲಿ - ಇವು ತತ್ಸಮಂಗಳ್.

**ಸೂತ್ರಂ ॥ ಅಡಸುವುದು ಬಹುವ್ರೀಹಿಯ ।**
**ಕಡೆಗತ್ವಂ ಬಹುಳಮಗ್ರಮಿಲ್ಲೆಂದಿರೆ ತಾಂ ॥**
**ಕಡೆಗಕ್ಕುಂ ಲಿತ್ವಂ ಕೊ ।**
**ಲ್ವೆಡೆಯೊಳ್ ಕುಲಿಯೆಂಬುದಕ್ಕುಮಂತ್ಯಾದೇಶಂ ॥ ೧೮೬ ॥**

**ಟೀಕೆ** - ಬಹುವ್ರೀಹಿಯ, ಕಡೆಗೆ = ಅಂತ್ಯಕ್ಕೆ, ಬಹುಳಂ = ಬಹುಳವಾಗಿ, ಅತ್ವಂ, ಅಡಸುವುದು = ಪೊರ್ದುಗೆಯಪ್ಪುದು; ಬಹುಳವೆಂಬುದಱಿಂದೆ ಇಕಾರವುಂ ಬರ್ಪುದೆಂಬುದರ್ಥಂ; ಅಗ್ರಂ = ಪದಾಂತ್ಯಂ, ಇಲ್ಲೆಂದು = ಇಲ್ಲವೆಂದು, ಇರೆ, ಕಡೆಗೆ = ಅಂತ್ಯಕ್ಕೆ, ಲಿತ್ವಂ = ಲಿಕಾರಂ, ತಾಂ, ಅಕ್ಕುಂ = ಆಗುವುದು; ಕೊಲ್ವೆಡೆಯೊಳ್ = ಕೊಲ್ವನೆಂಬೆಡೆಯಲ್ಲಿಂ, ಕುಲಿ ಎಂಬುದು, ಅಂತ್ಯಾದೇಶಂ = ಕಡೆಯಣ ಪದಕ್ಕಾದೇಶಂ, ಅಕ್ಕುಂ = ಅಪ್ಪುದು.

**ವೃತ್ತಿ** - ಬಹುವ್ರೀಹಿಯ ಕಡೆಯೊಳಕಾರಮುಂ ಬಹುಳದಿನಿಕಾರಮುಮಕ್ಕು; ಪರದೊಳಿಲ್ಲವೆಂದಿರೆ ಕಡೆಯಕ್ಕರಕ್ಕೆ ಲಿತ್ವಮಕ್ಕುಂ; ಪರದೊಳ್ ಕೊಲ್ವಂ ಎಂದಿರೆ ಕುಲಿ ಎಂದಾದೇಶಮಕ್ಕುಂ.

**ಪ್ರಯೋಗಂ** -

ಅತ್ವಕ್ಕೆ -

ಅಲರ್ಗಣ್ಣಂ, ಬಟ್ಟದೊಡೆಯಂ, ಕೇಸಡಿಯಂ, ಕುಡುವಿಲ್ಲಂ, ಬಲ್ದಲೆಯಂ, ಅಗಲ್ದುರದಂ.

ಕಂ ॥ ಕುಡುವಿಲ್ಲನೆಚ್ಚ ಕೋಲುಂ ।
ನಡದು ದಲನ್ದೊರ್ವನೆರ್ದೆಯನೊಳ್ಗಬ್ಬಮುಮೊ ॥
ಳ್ನುಡಿಯುಂ ಗೇಯಮುಮುರ್ಚದ ।
ಕಡುಗಲ್ಲೆರ್ದೆಯೆರ್ದೆಯನಂಬು ಮೇಣುರ್ಚುಗುಮೇ ॥ ೧.

(ಕಾವ್ಯಾವಲೋಕನಂ ೨೦೯)

ಇತ್ವಕ್ಕೆ -

ಕಡುಗೆಲಸಿ, ನಿಡುಮೂಗಿ, ಚಲವಾದಿ, ಕೃತ್ತನಾಸಿ, ಕಡುಚಾಗಿ.

ಲಿಕಾರಕ್ಕೆ -

ಪಲ್ಲಿಲಿ(ವಾಯ್), ಅಗಿಲಿಲಿ(ಗಂಧಂ), ಕೂರಿಲಿ(ಕುಡುಗೋಲ್), ಬೆಳಗಿಲಿ(ಗಣ್), ನಾಣಿಲಿ(ವೆಣ್).

ಕಂ ॥ ಸೊಗಯಿಸುಗುಮೆ ಪಲ್ಲಿಲಿವಾ ।
ಯಗಿಲಿಲಿಗಂಧಂ ಸಮಂತು ಕೂರಿಲಿಕುಡುಗೋಲ್ ॥
ಮಿಗೆ ನಾಣಿಲಿಯೆನಿಸುವ ವಧು ।
ನಗೆಗೆಡೆಯಕ್ಕುಂ ಸಮಸ್ತಜಗತೀತಳದೊಳ್ ॥ ೨

(ಕಾವ್ಯಾವಲೋಕನಂ ೨೫೭)

ಕುಲಿ ಎಂಬುದರ್ಕೆ -

ಮೀಂಗುಲಿ, ಅಱಿಗುಲಿ.

**ಸೂತ್ರಂ ॥ ದೊರೆಕೊಳ್ವುದಖಿಳ ವೈಯಾ ।**
**ಕರಣರಿನೊಂದೆಂಬುದರ್ಕೊರೆಂಬಾದೇಶಂ ॥**
**ಎರಡರ್ಕಮಿರಾದೇಶಂ ।**
**ದೊರೆಕೊಳ್ಗುಮದಲ್ಲದಂದುಕಾರಾಭಾವಂ ॥ ೧೪೭ ॥**

**ಟೀಕೆ** - ಅಖಿಳವೈಯಾಕರಣರಿಂ = ಸಮಸ್ತವ್ಯಾಕರಣಜ್ಞರಿಂದೆ, ಒಂದೆಂಬುದರ್ಕೆ = ಒಂದೆಂಬ ಶಬ್ದಕ್ಕೆ, ಒರ್ ಎಂಬಾದೇಶಂ, ದೊರೆಕೊಳ್ವುದು = ಬರ್ಪುದು; ಎರಡರ್ಕಂ = ಎರಡೆಂಬ ಶಬ್ದಕ್ಕೆಯುಂ, ಇರ್ ಎಂಬಾದೇಶಂ, ದೊರೆಕೊಳ್ಗುಂ = ಬರ್ಪುದು; ಅದಲ್ಲದಂದು = ಆ ಇರಾದೇಶಂ ಬಾರದಂದು, ಉಕಾರ = ಉಕಾರದ, ಅಭಾವಂ = ಲೋಪಂ, ಬರ್ಪುದು. ಉಕಾರಾಭಾವವೆಂಬುದು - ಉಕಾರಂ ಪೋಗೆ, ಪೂರ್ವಸೂತ್ರದಿಂ (ಸೂ. ೧೪೩) ಱಟಾದೇಶಂ ಬರ್ಪುದೆಂಬುದರ್ಥಂ.

**ವೃತ್ತಿ** - ಒಂದೆಂಬುದರ್ಕೊರಾದೇಶಂ; ಎರಡೆಂಬುದರ್ಕೆ ಇರಾದೇಶಂ; ಅದಲ್ಲದಂದುಕಾರಂ ಲೋಪಮಾಗೆ ಱಟಂ.

**ಪ್ರಯೋಗಂ** -

ಒರ್ನುಡಿ, ಒರ್ಪೆಸರ್, ಒರ್ಮೊದಲ್, ಒರ್ಪಿಡಿಗೂಟ್.

ಕಂ ॥ ಒರ್ಪಿಡಿಗೂಟುಂ ಸಿತಗನ
ಕರ್ಪಡಮುಂ ರಾಜಸೇವೆಯಿಲ್ಲದೆ ಬಾರಂ ... ೧

ಇರ್ಬೆನ್, ಇರ್ತೆಱಿ, ಇರ್ಕಟ್ಟು, ಇರ್ತಡಿ.

ಕಂ ॥ ಇರ್ತಡಿಯ ಪೂಮರಂಗಳ
ಪೋರ್ತಂ ಕಪಿಕುಲದೊಳಾದೊಡಲ್ಲೊಕ್ಕಲರಿಂ ... ೨

ಉಕಾರಲೋಪಕ್ಕೆ -

ಎರಟ್ಬುದುರೆ, ಎರಟ್ಬಾತ್ತು

ಮ ॥ ವಿ ॥ ... ಎರಟ್ಬಾತ್ರಾಡಿ ಬಟ್ಟಿಂ ಜಗ
ದ್ವಲಯಕ್ಕೊರ್ನುಡಿಕಾಱನಾದನಯಶಕ್ಕುಳ್ಳಿಕ್ಕಿ ಸಂಗ್ರಾಮದೊಳ್
ಕಲಿಯಾದಂ ವಿಪರೀತಜಾತಚರಿತಂ ಭೂಪಾಲರೊಳ್ ಕಾಮದಂ ॥ ೩

(ಕಾವ್ಯಾವಲೋಕನಂ ೨೬೧)

ಉಕಾರಾಭಾವಮೆಂಬುದು ಉಪಲಕ್ಷಣಮಾಗೆ ವ್ಯಂಜನ ಡಕಾರಕ್ಕೆಲ್ಲಕ್ಕೆಯುಂ ಟಕಾರಾದೇಶಂ ಬರ್ಪುದು -

ಮಾಟ್ಬುದು, ಬೇಟ್ಬುದು, ಬಿಸುಟ್ಬುದು ಎಂಬಂತೆ.

**ಸೂತ್ರಂ ॥ ಚರಮಕ್ಕದರ್ಶನಂ ಮೂ ।**
**ಱರೆ ಬರೆ ಕ ಪ ವರ್ಗಮಗ್ರದೊಳ್ ದ್ವಿರ್ಭಾವಂ ॥**
**ಪಿರಿದುಂ ಹ್ರಸ್ವಂ ಮೊದಲೊಳ್ ।**
**ಸ್ವರಮಿದಿರಿರೆ ಮೂಱಱಲ್ಲಿ ಮುಯ್ಯಾದೇಶಂ ॥ ೧೮೮ ॥**

**ಟೀಕೆ** - ಮೂಱು = ಮೂಱೆಂಬ ಶಬ್ದಂ, ಇರೆ; ಚರಮಕ್ಕೆ = ಅಂತ್ಯಕ್ಕೆ, ಅದರ್ಶನಂ = ಲೋಪಮಪ್ಪುದು; ಕ ಪ ವರ್ಗಂ = ಕವರ್ಗ ಪವರ್ಗಂಗಳ್, ಅಗ್ರದೊಳ್ = ಮುಂದುಗಡೆಯಲ್ಲಿ, ಬರೆ, ದ್ವಿರ್ಭಾವಂ = ದ್ವಿತ್ವವಪ್ಪುದು; ಪಿರಿದುಂ = ವಿಶೇಷವಾಗಿ, ಮೊದಲೊಳ್ = ಆದಿಯಲ್ಲಿ, ಹ್ರಸ್ವಂ = ಹ್ರಸ್ವಂ ಬರ್ಪುದು; ಸ್ವರಂ = ಸ್ವರಾಕ್ಷರಂ, ಇದಿರಿರೆ = ಮುಂದಿರೆ, ಮೂಱಱಲ್ಲಿ = ಮೂಱೆಂಬ ಸಂಖ್ಯಾವಾಚಕದಲ್ಲಿ, ಮುಯ್ಯಾದೇಶಂ = ಮುಯ್ಯೆಂಬಾದೇಶಂ ಬರ್ಪುದು.

**ವೃತ್ತಿ** - ವ್ಯಂಜನಂ ಪರಮಾಗೆ ಮೂಱೆಂಬುದಱ ಕಡೆಯಕ್ಕರಕ್ಕೆ ಲೋಪಂ; ಕವರ್ಗ ಪವರ್ಗಂಗಳ್ ಪರಮಾಗೆ ತಮಗೆ ದ್ವಿತ್ವಮುಂ ಮೊದಲ್ಗೆ ಹ್ರಸ್ವಮುಮಕ್ಕುಂ; ಸ್ವರಂ ಪರಮಾಗೆ ಮೂಱೆಂಬುದರ್ಕೆ ಮುಯ್ಯಾದೇಶಂ.

**ಪ್ರಯೋಗಂ** -

ಅಂತ್ಯಲೋಪಕ್ಕೆ -

ಮೂಗೊಂಕು, ಮೂವಿಟ್ಟಿ, ಮೂವಳಸು, ಮೂನೂಱು, ಮೂಲೋಕಂ, ಮೂದಲೆ.

ಮ ॥ ವಿ ॥ ... ಮೂಲೋಕಕ್ಕೆ ಪೆಂಪಿಂದಗುಂ
ದಲೆಯಾಗಿರ್ದುದು ... ೧

(ಆದಿಪುರಾಣಂ ೧-೫೦; ಕಾವ್ಯಾವಲೋಕನಂ ೨೬೩)

ಚಂ ॥ ಮಾ ॥ ... ಚೋ
ಟಿನ ತಲೆ ನಾಳೆ ಮೂದಲೆಗೆ ಬಾರದೆ ಮಾಣ್ಬುದೆ ದೇವ ... ೨

ಹ್ರಸ್ವದ್ವಿತ್ವಂಗಳ್ಗೆ -

ಮುಕ್ಕುಪ್ಪೆ, ಮುಗ್ಗುಡ್ಡೆ, ಮುಕ್ಕೊಡೆ, ಮುಪ್ಪುರಿ, ಮುಪ್ಪೊಱಲ್, ಮುಮ್ಮಾಱು.

ಉ ॥ ಮಾ ॥ ಮುಕ್ಕೊಡೆ ಪುಷ್ಪವೃಷ್ಟಿ ಸುರದುಂದುಭಿ ... ೩

(ಕಾವ್ಯಾವಲೋಕನಂ ೨೬೪)

ಪಿರಿದೆಂಬುದಱಿಂ ಕವರ್ಗ ಪವರ್ಗಮಲ್ಲದಲ್ಲಿಯುಮೀ ಲಕ್ಷಣಮಾಯ್ತು - ಮುಚ್ಚೋಟು, ಮುಚ್ಚವಡಿ, ಮುಚ್ಚೇರೆ, ಮುಚ್ಚಾಲ್.

ಪಿರಿದೆಂಬುದಱಿಂ ಕ ಪ ವರ್ಗಮಿರ್ದುಂ ಕೆಲವಱೊಳೀ ಮಾರ್ಗಮಿಲ್ಲ - ಮೂಗೇಣ್, ಮೂಗಾವುದಂ, ಮೂಗೋಱು, ಮೂಗಯ್.

ಕಂ ॥ ಕಿಡೆ ಮೂಗೋಱಂ ಬೋೞಿಸಿ
ನಡುದಲೆಯೊಳ್ ಮೆಟಿಸನೊಡೆದು ... ೪

ಶಾ ॥ ವಿ ॥ ... ಪಣೆಯುಂ ಮೂಗಯ್ಯ ಮೂಗಯ್ಯನಿ
ತ್ತಾವರ್ಕೆಯ್ದೆ ಕವಲ್ ಕವಲ್ತು ಪಲವುಂ ... ೫

(ಆದಿಪುರಾಣಂ ೧೧-೯೭; ಕಾವ್ಯಾವಲೋಕನಂ ೨೬೬)

ಮುಯ್ಯೆಂಬುದರ್ಕೆ -

ಮುಯ್ಯೀರಡಿ, ಮುಯ್ಯೆಂದಂ, ಮುಯ್ಯಡಿ, ಮುಯ್ಯೇೞುಸೂೞ್

ಮ ॥ ಸ್ರ ॥ ಚಲದಿಂ ಮುಯ್ಯೇೞುಸೂೞು ಕ್ಷತ್ರಿಯರನಱಿಸಿ ಕೊಂದಿಕ್ಕಿದಂ ಜಾಮದಗ್ನ್ಯಂ ॥ ೬

**ಸೂತ್ರಂ ॥ ಅಕ್ಕುಂ ಲೋಪಂ ನಾಲ್ಕೈ ।**
**ದರ್ಕಂತ್ಯಕ್ಕಾಱಱಾದಿಯೊಳ್ ಹ್ರಸ್ವಂ ತಾ ॥**
**ನಕ್ಕುಮದೇೞರ್ಕೇೞೆಂ ।**
**ದಕ್ಕುಂ ಚರಮಕ್ಕೆ ಲೋಪಮೆಂಟರ್ಕಕ್ಕುಂ ॥ ೧೪೯ ॥**

**ಟೀಕೆ** - ನಾಲ್ಕೈದರ್ಕೆ = ನಾಲ್ಕೈದು ಎಂಬ ಸಂಖ್ಯಾವಾಚಕಂಗಳ್ಗೆ, ಅಂತ್ಯಕ್ಕೆ = ಕಡೆಯಣಕ್ಷರಕ್ಕೆ, ಲೋಪಂ, ಅಕ್ಕುಂ = ಅಪ್ಪುದು; ಆಱಱ = ಆಱೆಂಬ ಸಂಖ್ಯಾವಾಚಕದ, ಆದಿಯೊಳ್ = ಮೊದಲಲ್ಲಿ, ಹ್ರಸ್ವಂ, ತಾನದು, ಅಕ್ಕುಂ = ಅಪ್ಪುದು: ಏೞರ್ಕೆ = ಏೞೆಂಬ ಸಂಖ್ಯಾವಾಚಕಕ್ಕೆ, ಏೞ್ ಎಂದು, ಅಕ್ಕುಂ = ಅಪ್ಪುದು; ಎಂಟರ್ಕೆ = ಎಂಟೆಂಬ ಸಂಖ್ಯಾವಾಚಕಕ್ಕೆ, ಚರಮಕ್ಕೆ = ಅಂತ್ಯಾಕ್ಷರಕ್ಕೆ, ಲೋಪಂ, ಅಕ್ಕುಂ = ಆಗುವುದು.

**ವೃತ್ತಿ** - ನಾಲ್ಕೈದೆಂಬಿವಱ ಕಡೆಯಕ್ಕರಕ್ಕೆ ಸ್ವರಂಬೆರಸು ಲೋಪಮಕ್ಕುಂ; ಆಱೆಂಬುದಱ ಆದಿಗೆ ಹ್ರಸ್ವಂ; ಏೞು ಎಂಬುದರ್ಕೆ ಏೞ್ ಎಂದಾದೇಶಂ; ಎಂಟಱ ಕಡೆಗೆ ಲೋಪಂ.

**ಪ್ರಯೋಗಂ -**

ನಾಲ್ಕರ್ಕೆ - ನಾಲ್ವಡಿ, ನಾಲ್ವತ್ತು, ನಾಲ್ವೆರಲ್.

ಕಂ ॥ ಉರಗಂ ಕೊಂಡಲ್ಲಿಂ ನಾ ।
ಲ್ವೆರಲನಿತಂ ಕಳೆದು ಕಟ್ಟೆ ಮೇಗಂ ಬೇಗಂ ॥
ಸೆರೆವಿಡುಗೆ ಸುಡುಗೆ ಕಡಿದಿರ ।
ದರಿದಿಕ್ಕುಗೆ ನೀವಿ ಕಳೆಗೆ ನಿರ್ವಿಷಮಕ್ಕುಂ ॥ ೧

(ಕಾವ್ಯಾವಲೋಕನಂ ೨೬೮)

ಐದರ್ಕೆ - ಅಯ್ವಡಿ, ಅಯ್ಗಂಡುಗಂ, ಅಯ್ಸಾಸಿರಂ.

ಕಂ ॥ ಕೀೞು ಪುಗಲೆನೆಯುಮೆಂತುಂ ।
ಮೀಱುದನಂ ಪೊಕ್ಕು ಶಾಲೆಯಂ ಶಾರ್ಙ್ಗಮನಂ
ದೇಱಿಸಿದನಹಿಪಶಯ್ಯೆಯ ।
ನೇಱುದನಯ್ವಾಯ ಶಂಖಮಂ ಪೂರಿಸಿದಂ ॥ ೨

(ಕಾವ್ಯಾವಲೋಕನಂ ೨೬೯)

ಆಱರ್ಕೆ - ಅಱುವಡಿ, ಅಱುವತ್ತು, ಅಱುನೂಱು, ಅಱುದಿಂಗಳ್.

ಕಂ ॥ ಅಱುದಿಂಗಳಾಯುವುಂಟೆನೆ ।
ಮಱುಗುವುದುಂ ನಲ್ಲರಲ್ಲಿ ತಮ್ಮಿಂ ಮುನ್ನಂ ॥
ಪಱಿಪಟ್ಟು ಬರೆ ಕನಲ್ವುದು ।
ಮಱಪ'ದೆ ನಾಲ್ವರ್ಗೆ ನರಕದುಃಖದ ತೆಱನಂ ॥ ೩

(ಆದಿಪುರಾಣಂ ೯-೫೦; ಕಾವ್ಯಾವಲೋಕನಂ ೨೭೦)

ಏೞರ್ಕೆ - ಏೞ್ಪತ್ತು, ಏೞ್ಕಡಲ್, ಏೞ್ಕೋಟಿ, ಏೞ್ಪೊರೆ.

ಕಂ ॥ ಪರಿಮರ್ದಿಸುವುದು ದುತ್ತೂ ।
ರರಸಮನಿಂಬಾಗಿ ಪಿೞಿದು ನೆಲದೊಳ್ ಲವಣಂ ॥
ಬೆರಸೊರಸಿಕೊಂಡು ಪೂಸುಗೆ ।
ಕರಗುಗುಮೇೞ್ಪೊರೆಯೆನಿಪ್ಪ ಕುರುವುಂ ಬೇಗಂ ॥ ೪

(ಕಾವ್ಯಾವಲೋಕನಂ ೨೭೧)

ಎಂಟರ್ಕೆ - ಎಣ್ದೆಸೆ, ಎಣ್ಬತ್ತು, ಎಣ್ಛಾಸಿರಂ.

ಉ ॥ ಮಾ ॥ ... ನಿಜಸೈನ್ಯಭಾರದಿಂ
ದೆಣ್ದೆಸೆಯಾನೆಗಳ್ ಕುಸಿದು ಕುರ್ಗಿದುವು ... ೫

**ಸೂತ್ರಂ ॥ ಪತ್ತು ಪರಮಾಗಲೊಡಮೊಂ ।**
**ಬತ್ತು ತೊಮೆಂದಕ್ಕುಮಗ್ರದೊಳ್ ನೂಱಿರೆ ಮೇಣ್ ॥**
**ಮತ್ತಂ ಸಾಸಿರಮಿರೆ ನೆಲ ।**
**ಸಿತ್ತೊಂಬಯ್ಯೆಂದು ವಿಬುಧರಿಂದಾದೇಶಂ ॥ ೧೯೦ ॥**

**ಟೀಕೆ** - ಪತ್ತು = ಪತ್ತೆಂಬ ಸಂಖ್ಯಾವಾಚಕಂ, ಪರಂ = ಮುಂದಣ ಪದಂ, ಆಗಲೊಡಂ, ಒಂಬತ್ತು = ಒಂಬತ್ತೆಂಬುದು, ತೊಮ್ ಎಂದು, ಅಕ್ಕುಂ = ಆಗುವುದು; ಮೇಣ್ = ಅದಲ್ಲದೆ, ಅಗ್ರದೊಳ್ = ಮುಂದೆ, ನೂಱು = ನೂಱೆಂಬ ಸಂಖ್ಯಾವಾಚಕಂ, ಇರೆ, ಮತ್ತಂ = ಅದಲ್ಲದೆ. ಸಾಸಿರಂ = ಸಾಸಿರವೆಂಬುದು, ಇರೆ = ಪರದಲ್ಲಿರೆ, ವಿಬುಧರಿಂದೆ = ವಿದ್ವಾಂಸರಿಂದೆ, ಒಂಬಯ್ ಎಂದು, ಆದೇಶಂ, ನೆಲಸಿತ್ತು = ನೆಲೆಗೊಂಡಿತ್ತು.

**ವೃತ್ತಿ** - ಪತ್ತೆಂಬುದು ಪರಮಾದೊಡೆ ಒಂಬತ್ತರ್ಕೆ ತೊಮ್ ಎಂದಾದೇಶಮಕ್ಕುಂ; ಪರದೊಳ್ ನೂಱಿರ್ದೊಡಂ ಮೇಣ್ ಸಾಸಿರಮಿರ್ದೊಡಂ ಒಂಬತ್ತರ್ಕೆ ಒಂಬಯ್ ಎಂದಾದೇಶಮಕ್ಕುಂ.

**ಪ್ರಯೋಗಂ** -

ತೊಂಬತ್ತು, ಒಂಬಯ್ನೂಱು, ಒಂಬಯ್ಸಾಸಿರಂ.

---

೧. ನೆ ಸುಜನರ್ಗೆ

ಕಂ ॥ ಸಾಸಿರ ಯೋಜನಮಟ್ಟು ಸು ।
ರಾಸುರ ಸಂಸೇವ್ಯಮಾಗಿ ತೊಂಬತ್ತೊಂಬ ॥
ಯ್ಸಾಸಿರ ಯೋಜನಮಂ ನೆಗೆ ।
ದೀ ಸುರಗಿರಿ ಪೆಂಪನೇಂ ಪುದುಂಗೊಳಿಸಿದುದೋ ॥ ೧

(ಕಾವ್ಯಾವಲೋಕನಂ ೨೭೪)

**ಸೂತ್ರಂ ॥ ಪತ್ತರ್ಕೆ ಪಯಿನ್ನೆಂದಾ**
**ದತ್ತಾದೇಶಂ ಸಮಂತು ಸಾಸಿರಮಿದಿರೊಳ್ ॥**
**ಪತ್ತುಗೆಗೊಳೆ ನೂಱರ್ಕಂ ।**
**ಮತ್ತಂ ಸಾಸಿರಕಮಂತ್ಯಲೋಪಂ ವಿರಳಂ ॥ ೧೯೧ ॥**

**ಟೀಕೆ** - ಸಾಸಿರಂ = ಸಾಸಿರವೆಂಬ ಶಬ್ದಂ, ಇದಿರೊಳ್ = ಮುಂತೆ, ಪತ್ತುಗೆಗೊಳೆ = ಪೊರ್ದುಗೆಗೊಳೆ, ಪತ್ತರ್ಕೆ = ಪತ್ತೆಂಬುದರ್ಕ್ಕೆ, ಪಯಿನ್ ಎಂದು, ಸಮಂತು = ಹಾಗೆ, ಆದೇಶಂ, ಆದತ್ತು = ಆಯಿತ್ತು; ನೂಱ ರ್ಕಂ = ನೂಱೆಂಬುದರ್ಕ್ಕಂ, ಮತ್ತಂ = ಬೞಿಕಂ, ಸಾಸಿರಕಂ = ಸಾಸಿರವೆಂಬುದರ್ಕ್ಕಂ, ಸ್ವರ ವ್ಯಂಜನಂಗಳಾವುವು ಪರಮಾದೊಡಂ, ವಿರಳಂ = ನೂಱು ಎಂಬುದಱ ಉಕಾರಂ ಸಾಸಿರವೆಂಬುದಱ ಅಕಾರಂ ವಿರಳವಾಗಿ, ಅಂತ್ಯಲೋಪಂ, ಆಯಿತ್ತು.

**ವೃತ್ತಿ** - ಸಾಸಿರಂ ಪರದೊಳಿರೆ ಪತ್ತರ್ಕೆ ಪಯಿನ್ನೆಂದು ಆದೇಶಂ; ನೂಱರ್ಕಂ ಮತ್ತಂ ಸಾ ಸಿರಕ್ಕಂ ಕಿಱುದೆಡೆಯೊಳ್ ಅಂತ್ಯಲೋಪಮಕ್ಕುಂ.

**ಪ್ರಯೋಗಂ** -

ಪತ್ತರ್ಕೆ - ಪಯಿಂಛಾಸಿರಂ.

ಮ ॥ ವಿ ॥ ಪಡಲಿಟ್ಟಂತಿರೆ ಮಾಟ್ಪನೋವದೆ ಪಯಿಂಛಾಸಿರ್ವರಂ ಯುದ್ಧದೊಳ್ ೧

ಅಂತ್ಯಲೋಪಕ್ಕೆ - ನೂರ್ಮಡಿ, ನೂರ್ಮಾತು, ನೂರ್ಛಾಸಿರಂ; ಸಾಸಿರ್ಮಡಿ, ಅಯ್ಸಾಸಿರ್ವರ್.

ಕಂ ॥ ಸಾಸಿರ್ವರ್ ವನಿತೆಯರ
ಯ್ಸಾಸಿರ್ವರ್ ಪ್ರಿಯತನೂಜರಱುಕೆಯ ಪದಿನೆ
ಣ್ಛಾಸಿರ್ವರರಸುಗಳ್ ... ೨

(ಆದಿಪುರಾಣಂ ೬-೫; ಕಾವ್ಯಾವಲೋಕನಂ ೨೪೧)

**ಸೂತ್ರಂ ॥ ಪತ್ತರ್ಕೆ ಪನ್ನೆನಿಕ್ಕುಮು ।**
**ದುತ್ತರಕೊಂದೆರಡು ನೆಲಸೆ ಪದಿಯೆಂದಕ್ಕುಂ ॥**
**ಮತ್ತೊದವಿ ಮೂಱು ನಾಲ್ಕಿರೆ ।**
**ಸುತ್ತೇಂ ಸ್ವರಮಿರೆ ನಕಾರವಿಧಿ ಮುಂದೆಲ್ಲಂ ॥ ೧೯೨ ॥**

**ಟೀಕೆ** - ಉತ್ತರಕೆ = ಮುಂದಣ್ಗೆ, ಒಂದು = ಒಂದೆಂಬ ಶಬ್ದಂ, ಎರಡು = ಎರಡೆಂಬ ಶಬ್ದಂ, ನೆಲಸೆ = ನೆಲಗೊಳೆ, ಪತ್ತರ್ಕೆ = ಪತ್ತೆಂಬುದರ್ಕೆ ಪನ್ = ಪನ್ ಎಂದು, ಅದು, ಎನಿಕ್ಕುಂ = ಎನಿಸುವುದು, ಮತ್ತೆ = ಬೞಿಕಂ. ಮೂಱು = ಮೂಱೆಂಬ ಶಬ್ದಂ, ನಾಲ್ಕು = ನಾಲ್ಕೆಂಬ ಶಬ್ದಂ, ಮುಂದಣ್ಗೆ, ಒದವಿರೆ = ಬರೆ, ಪದಿಯೆಂದು = ಪದಿ ಎಂದು, ಅಕ್ಕುಂ = ಅಪ್ಪುದು; ಸುತ್ತೇಂ = ಭ್ರಮಯೇಂ; ಸ್ವರಂ = ಸ್ವರಾದಿಸಂಖ್ಯೆಗಳ್, ಇರೆ = ಮುಂದಿರೆ, ಮುಂದೆ ಎಲ್ಲಂ, ನಕಾರವಿಧಿ = ಪದಿ ಎಂಬುದಱ ಮೇಲೆ ನಕಾರವಿಧಿ, ಅಪ್ಪುದು.

ವೃತ್ತಿ - ಒಂದೆಂಬುದುಮೆರಡೆಂಬುದುಂ ಪರಮಾಗೆ ಪತ್ತರ್ಕೆ ಪನ್ ಎಂದಾದೇಶಮಕ್ಕುಂ; ಮತ್ತೆ ಮೂಱು ಮೇಣ್ ನಾಲ್ಕು ಪರಮಾಗೆ ಪತ್ತರ್ಕೆ ಪದಿ ಎಂದು ಆದೇಶಂ; ಸ್ವರಂ ಪರಮಾಗೆ ಮುಂದೆಲ್ಲಂ ನಕಾರಾಗಮಮಕ್ಕುಂ.

ಪ್ರಯೋಗಂ -

ಪನ್ ಎಂಬುದರ್ಕೆ -

ಪನ್ನೊಂದು, ಪನ್ನೆರಡು.

ಶಾ ।। ವಿ ।। ಸಾರಲ್ ಸಲ್ಲದು ಪನ್ನೆರಟ್ಬರಿಸಮಂ ನಾಡಂತಡಂಗಿರ್ಪುದು ... ೧
(ಕಾವ್ಯಾವಲೋಕನಂ ೨೭೭)

ಪದಿ ಎಂಬುದರ್ಕೆ -

ಪದಿಮೂಱು, ಪದಿನಾಲ್ಕು.

ಕಂ ।। ... ಬಾಯಂ
ತೆಱೆದೊಡೆ ಪದಿನಾಲ್ಕು ಲೋಕಮಿರ್ದುವು ಬಸಿಱ ಕೊಳ್ ೨

ನಕಾರಕ್ಕೆ -

ಪದಿನೈದು, ಪದಿನಾಱು, ಪದಿನೇೞು, ಪದಿನೆಂಟು.

ಕಂ ।। ಪದಿನೆಂಟುಂ ಸ್ಥಲವರ್ಣನ
ಮಿದರ್ಕೆ ಮೆಯ್ವಚ್ಚಮೆನಿಸಿ ಪೇೞ್ದಿಂ ... ೩

ಎಲ್ಲಮೆಂಬುದಱೊಂದೊಂಬತ್ತರ್ಕಿಲ್ಲ[1].

**ಸೂತ್ರಂ ।। ಅತಿಶಯತರಾರ್ಥ ವೀಪ್ಸಾ ।**
**ನ್ವಿತ ನಾಂತಾವ್ಯಯಪದಕ್ಕಮನುಕೃತಿಪದಕಂ ।।**
**ಕೃತಮಂತ್ಯಲೋಪಮಿತರಾ ।**
**ಗತಮತ್ವಂ ನಡುವಿನಂತೆ ಕಡೆಗಂ ಟತ್ವಂ ।। ೧೯೩ ।।**

**ಟೀಕೆ** - ಅತಿಶಯತರ = ಅತ್ಯಂತಾತಿಶಯವಾದ, ಅರ್ಥ = ಅರ್ಥವನುಳ್ಳ, ವೀಪ್ಸಾ = ಇಚ್ಛೆಯೊಡನೆ, ಅನ್ವಿತ = ಕೂಡಿದ, ನಾಂತ = ನಕಾರಾಂತವಾದ, ಅವ್ಯಯಪದಕ್ಕಂ = ಅವ್ಯಯಪದಂಗಳ್ಗೆಯುಂ, ಅನುಕೃತಿಪದಕಂ = ಅನುಕರಣಪದಂಗಳ್ಗೆಯುಂ, ಅಂತ್ಯಲೋಪಂ = ಕಡೆಯಣಕ್ಷರದ ಲೋಪಂ, ಕೃತಂ = ಮಾಡಲ್ಪಡುವುದು; ಅತ್ವಂ = ದ್ವಿರುಕ್ತಿಯಾದ ನಡು ಕಡೆ ಎಂಬ ಶಬ್ದಂಗಳ ಮೊದಲ ಪದದ ಕಡೆಗೆ ಅಕಾರಂ, ಇತರ = ಅನ್ಯವಾಗಿ, ಆಗತಂ = ಬರ್ಪುದು; ನಡುವಿನಂತೆ = ನಡುವೆಂಬ ಶಬ್ದದ ಹಾಗೆ, ಕಡೆಗಂ = ಕಡೆಯೆಂಬ ಶಬ್ದದ ಡಕಾರಕ್ಕಂ, ಟತ್ವಂ = ಟಕಾರಂ ಬರ್ಪುದು.

ವೃತ್ತಿ - ಅತಿಶಯತರಾರ್ಥಮಂ ನುಡಿವ ವೀಪ್ಸೆಯ ನಾಂತಂಗಳಪ್ಪ ಅವ್ಯಯಂಗಳ್ಗಂ ಅನುಕೃತಿಪದಂಗಳ್ಗಂ ಮೊದಲ ಪದದ ಕಡೆಯಕ್ಷರಕ್ಕೆ ಲೋಪಂ; ಅವ್ಯಯಮನುಕರಣಮಲ್ಲದ

~~~~~~~~~~~~~~~~~~~

೧. (ಪತ್ತೊಂಬತ್ತೆಂಬುದರ್ಕೆ ನಕಾರಾಗಮಮಿಲ್ಲ; ಪತ್ತೊಂಬತ್ತೆಂದೆ ಆಯ್ತು.)
~~~~~~~~~~~~~~~~~~~

ಕೆಲವು ಪದಂಗಳೊಳಕಾರಮುಂ ಮುಂತೆ ಪೇೞ್ದ ನಡುವೆಂಬುದಱಂತೆ ಕಡೆಯೆಂಬುದಱ ಡಕಾರಕ್ಕೆ ಟಕಾರಮುಮಕ್ಕುಂ.

ಪ್ರಯೋಗಂ -

ಅವ್ಯಯ ಪದಾಂತಲೋಪಕ್ಕೆ -

ಕಮ್ಮಕಮ್ಮನೆ, ತಣ್ಣತಣ್ಣನೆ, ಮೆಲ್ಲಮೆಲ್ಲನೆ, ಸಪ್ಪಸಪ್ಪನೆ, ತೊಪ್ಪತೊಪ್ಪನೆ, ಸೊಪ್ಪಸೊಪ್ಪನೆ.

ಸಪ್ಪಸಪ್ಪನೆ ರಸಂ ... ೧
ತೊಪ್ಪತೊಪ್ಪನೆ ಪುರುಳ್ ... ೨
ಸೊಪ್ಪಸೊಪ್ಪನೆ ತೂಕವನೆ ಪೇೞಿದೆ ... ೩

ಅನುಕರಣಾಂತ್ಯಲೋಪಕ್ಕೆ -

[ತಟತಟನೆ, ಗಟಗಟನೆ, ಚಳಚಳನೆ]

ಕಂ ॥ ... ತಟತಟನೆ ನೇಸ
ಮೂಡಿದುದು ಬಕಂಗೆ ಮಿೞ್ತು ಮೂಡುವ ತೆಱದಿಂ ॥ ೪
(ವಿಕ್ರಮಾರ್ಜುನವಿಜಯಂ ೩ - ೨೭)

ಚಂ ॥ ಮಾ ॥ ... ಗಟಗಟ ಕಣ್ಣ ನೀರ್ ಸುರಿಯೆ ಚಿಂತಿಪ ಪಾರ್ವನ ... ೫
(ವಿಕ್ರಮಾರ್ಜುನವಿಜಯಂ ೩-೨೫)

ಕಂ ॥ ... ಚ
ಳಚಳನೆ ಮಿಂಚಿತ್ತು ಸಿಡಿಲ ಕೆಯ್ದೀವಿಗೆವೋಲ್ ೬

ಅತ್ವಂ ಬೆರಸಿದ ಟಕಾರಕ್ಕೆ -

ನಟ್ಟನಡು, ಕಟ್ಟಕಡೆ

ಕಟ್ಟಕಡಯ ಪೆರ್ವಟ್ಟೆ ಕರಂ ಗೆಂಟು ... ೭

**ಸೂತ್ರಂ ॥ ತುದಿ ಮೊದಲೆಂಬ ದಕಾರ ।
ಕ್ಕುದಯಿಸುಗುಂ ದ್ವಿತ್ವವೃತ್ತಿಯಿಂದೆ ತಕಾರಂ ॥
ಮೊದಲೆಂಬ ಲಕಾರಕ್ಕ ।
ಪ್ಪುದದರ್ಶನವಿಧಿ ವಿಶೇಷಮಂ ನುಡಿವೆಡೆಯೊಳ್ ॥ ೧೯೪ ॥**

ಟೀಕೆ - ವಿಶೇಷಮಂ ನುಡಿವೆಡೆಯೊಳ್, ತುದಿ ಮೊದಲ್ ಎಂಬ ದಕಾರಕ್ಕೆ, ದ್ವಿತ್ವವೃತ್ತಿಯಿಂದೆ = ದ್ವಿಭಾವದ ವರ್ತನೆಯಿಂದೆ, ತಕಾರಂ, ಉದಯಿಸುಗುಂ = ಹುಟ್ಟುವುದು; ಮೊದಲ್ ಎಂಬ ಲಕಾರಕ್ಕೆ, ಅದರ್ಶನವಿಧಿ = ಲೋಪದ ವಿಧಿ, ಅಪ್ಪುದು = ಆಗುವುದು.

ವೃತ್ತಿ - ವಿಶೇಷಿಸಿ ನುಡಿವೆಡೆಯೊಳ್ ತುದಿ ಮೊದಲೆಂಬಿವಱ ದಕಾರಕ್ಕೆ ದ್ವಿತ್ವಮಪ್ಪ ತಕಾರಾದೇಶಮುಂ ಮೊದಲೆಂಬುದಱ ಲಕಾರಕ್ಕೆ ಲೋಪಮುಮಕ್ಕುಂ.

ಪ್ರಯೋಗಂ - ತುತ್ತತುದಿ, ಮೊತ್ತಮೊದಲ್.

ಸೂತ್ರಂ ॥ ದೂರಾಭೀಕ್ಷಣ ವೀಪ್ಸೋ ।
ದಾರಾನುಕೃತಿ ಕ್ರಿಯಾಸಮಭಿಹಾರ ಸಮೀ ॥
ಪೋರುತರ ಚಾಪಳಾದಿಗೆ ।
ಸಾರಂ ಬುಧರಿಂ ಪದಕ್ಕೆ ಯುಗಳೋಚ್ಚರಣಂ ॥ ೧೯೫ ॥

**ಟೀಕೆ** - ದೂರ = ದೂರಕ್ಕೆ, ಅಭೀಕ್ಷಣ = ಅಭಿಮುಖವಾಗಿ ನೋಡುವುದರ್ಕೆ, ವೀಪ್ಸಾ = ಇಚ್ಚೆಗೆ, ಉದಾರ = ಉದಾರವಾದ, ಅನುಕೃತಿ = ಅನುಕರಣಕ್ಕೆ, ಕ್ರಿಯಾಸಮಭಿಹಾರ = ಕ್ರಿಯೆಯನಭಿಮುಖವಾಗಿ ಮಾಡಿಕೊಂಬುದರ್ಕೆ, ಸಮೀಪ = ಸಮೀಪಕ್ಕೆ, ಉರುತರಚಾಪಳಾದಿಗೆ = ದೊಡ್ಡಿತ್ತಾದ ಚಪಲತ್ವಂ ಮೊದಲಾದುದರ್ಕೆ, ಬುಧರಿಂ = ವಿದ್ವಾಂಸರಿಂದೆ, ಪದಕ್ಕೆ = ಪದಂಗಳ್ಗೆ, ಯುಗಳೋಚ್ಚರಣಂ = ಎರಡು ವೇಳೆಯುಚ್ಚರಿಸುವುದು, ಸಾರಂ = ಶ್ರೇಷ್ಠವಪ್ಪುದು.

**ವೃತ್ತಿ** - ದೂರದೊಳಂ ಪ್ರತಿಮುಖಾವಲೋಕನದೊಳಂ ವೀಪ್ಸೆಯೊಳಂ ಅನುಕರಣದೊಳಂ ಕ್ರಿಯೆಯನಭಿಮುಖಮಾಗಿ ತೆಗೆದುಕೊಳ್ವೆಡೆಯೊಳಂ ಸಮೀಪದೊಳಂ ಚಪಳತೆಯೊಳಂ ಪದಮನೆರಡು ಸೂೞುಚ್ಚರಿಪುದು.

**ಪ್ರಯೋಗಂ** -

ದೂರಕ್ಕೆ -

ಆ ತೋರ್ಪುದಾ ತೋರ್ಪುದೆ ಬಾನೊಳ್ ಧ್ವಜಪಟಂ. ೧

ಅಭೀಕ್ಷಣಕ್ಕೆ -

ಚಂ ॥ ಮ॥ ಗಿಳಿಯೊಡನೋದಿಯೋದಿ ನುಡಿಗಲ್ತು ಮದಾಲಸರಾಜಹಂಸಮಂ ।
ಡಳಿಯೊಡನಾಡಿಯಾಡಿ ನಡೆಗಲ್ತು ಕಳಾಪಿಗಳಾಟಮಂ ಮನಂ ॥
ಗೊಳೆ ನಡೆ ನೋಡಿನೋಡಿ ಕುಣಿಯಲ್ ನೆಱೆ ಕಲ್ತು ಕಳಾಗುಣಂ ಪೊದ ।
ೞ್ದಳವಡೆ ಬಾಲಭಾವಮೊಳೆ ಭಾವಕಿಯರ್ ಬಳೆವರ್ ನಿರಂತರಂ ॥ ೨

(ಕಾವ್ಯಾವಲೋಕನಂ ೨೯೦)

ವೀಪ್ಸೆಗೆ -

ಕಂ ॥ ಊರೂರೊಳ್ಕೇರಿಕೇರಿಯೊಳ್ಮನೆಮನೆಯೊಳ್ ... ೩

ಅನುಕರಣಕ್ಕೆ -

ಘಳ್ಘಳ್ಲೆನೆ, ಭೋರ್ಭೋರೆನೆ

ಕಂ ॥ ... ಭೋರ್ಭೋ
ರೆನೆ ಪಾಯ್ವುದು ಹಿಮನಗಕ್ಕೆ ಗಂಗಾಸ್ರೋತಂ ॥ ೪

(ಕಾವ್ಯಾವಲೋಕನಂ ೨೯೨)

ಕ್ರಿಯಾಸಮಭಿಹಾರಕ್ಕೆ -

ಕಂ ॥ ನಡೆನಡೆಯೆಂದೇಂ ನಡೆದುದೊ... ೫

(ಕಾವ್ಯಾವಲೋಕನಂ ೨೬೪)

ಕಂ ॥ ಇದಿರ್ಚಿದಿರ್ಚೆನೆ ಜಟಾಯು ರಾವಣನೆಂಗುಂ ೬

(ಕಾವ್ಯಾವಲೋಕನಂ ೨೮೮)

[illegible] -

ಶಾಂ ।। ಮಾ ।। ಇದೆ ಇದೆ ಸಾರ್ಕೆ ಸಾರ್ಕೆ ಗಣಿಕಾವಳಿ ಪೇೞ್ದು ಮುನಿಯೂರ್ಗಳ ೭

ಚಪಳತೆಗೆ -

ಒಪ್ಪಿಸೊಪ್ಪಿಸು, ಅಣ್ಣಣ್ಣು.

ಇವಕೆಲ್ಲಂ ತ್ರಿಪ್ರಯೋಗಮೊಳವು -

ಕಂ ।। ಬೆಳಗಿಂಯ್ಯೊಳೆರ್ದ್ದತ್ತಂ ।
ಕಳರವದಿಂ ಕಯ್ಯನೆತ್ತಿ ಹಯಲಲ್ಲೆನುತುಂ ।।
ಬಳಗಳ್ ಘಲ್ ಘಲ್ ಘಲ್ಲೆನೆ ।
ಗಿಳಿಸೋವಾಕೆಗಳಿನೊಪ್ಪುಗುಂ ಕೆಲವೆಡೆಗಳ್ ।। ೮

(ಕಾವ್ಯಾವಲೋಕನಂ ೨೯೩)

ಒಡೊಡ್ಡೊಡ್ಡೆನುತೊಡ್ಡಿ ಮೇಳದವಳ್ ಕುಂಕುಮವಾರಿ ಕುಪ್ಪಳಿಸೆ ಪೊಯ್ದಳ್ ೯

ಸೂತ್ರಂ ।। ಕವಿಮಾರ್ಗಗತ ಸಮಾಸಮ ।
ನಿವನೆನ್ನಱಿವನಿತನೆಯ್ದೆ ಪೇೞ್ದೆಂ ಲೋಕ ।।
ವ್ಯವಹಾರದಿಂದಮಿನ್ನುೞಿ ।
ದುವನಱಿವುದು ಶಬ್ದಪಾರಮಾರ್ಗಮಶಕ್ಯಂ ।। ೧೯೬ ।।

ಟೀಕೆ - ಕವಿ = ಕವಿಗಳ, ಮಾರ್ಗ = ಮಾರ್ಗದಲ್ಲಿ, ಗತ = ಐಯ್ದಲ್ಪಟ್ಟ, ಸಮಾಸಮುಂ = ಸಮಾಸಪದವಂ, ಇವಂ, ಎನ್ನಱಿವನಿತಂ = ಎನಗೆ ತಿಳಿವಷ್ಟಂ, ಎಯ್ದೆ = ಚೆನ್ನಾಗಿ, ಪೇೞ್ದೆಂ; ಲೋಕವ್ಯವಹಾರದಿಂದಂ = ಪ್ರಯೋಗಕರಣ ಲೋಕವ್ಯವಹಾರದಿಂದೆ, ಇನ್ನುೞಿದುವಂ = ಇನ್ನುಳಿದ ಸಮಾಸಂಗಳಂ, ಅಱಿವುದು = ತಿಳಿವುದು; ಶಬ್ದ = ಶಬ್ದಂಗಳ, ಪಾರಂ = ಕಡೆಯನೆಯ್ದುವುದು, ಅಗ್ರ್ಗಂ, ಅಶಕ್ಯಂ = ಶಕ್ಯಮಲ್ತು.

ಇದು ಸಮಸ್ತಶಾಬ್ದಿಕಜನಮನೋಜನಿತ ಶಬ್ದಸಂದೇಹಶಲ್ಯ
ಚಾರುಚುಂಬಕಾಯಮಾನಾನೂನ ಕರ್ಣಾಟಕಲಕ್ಷಣಶಿಕ್ಷಾಚಾರ್ಯ ಸುಕವಿ
ಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಸಮಾಸಭೇದವಿವರಣಮೆಂಬ
ತೃತೀಯಸಂಧಿ ಸಂಪೂರ್ಣಂ.

# ನಾಲ್ಕನೆಯ ಸಂಧಿ

## ತದ್ಧಿತ ಪ್ರಕರಣಂ

ಸೂತ್ರಂ ॥ ಪರಿನಿರ್ಮಿಪ ಮಾಱಾಡುವ ।
ದೊರೆವಡೆದ ನಿಯೋಗದನ್ನತದಱಿತದ ಋಣದಾ ॥
ಚರಣದ ಶಿಲ್ಪದ ಮೂಲದ ।
ನರನಂ ಪೇೞ್ವಲ್ಲಿ ಮಾೞ್ಕಿಗ ಪ್ರತ್ಯಯಮಂ ॥ ೧೯೭ ॥

ಟೀಕೆ - ಪರಿನಿರ್ಮಿಪ = ಆವುದನಾದೊಡಂ ಮಾಡುವ, ಮಾಱಾಡುವ = ಆವುದನಾದೊಡಂ ಮಾಱಿಯಾಡುವ, ದೊರೆವಡೆದ = ಪ್ರಸಿದ್ಧಿವಡೆದ, ನಿಯೋಗದ, ಅನ್ನತದ = ಸಟೆಯ, ಅಱಿತದ = ತಿಳಿವಳಿಕೆಯ, ಋಣದ = ಸಾಲದ, ಆಚರಣದ = ಆಚರಣೆಯ, ಶಿಲ್ಪದ, ಮೂಲದ, ನರನಂ = ಮನುಷ್ಯನಂ, ಪೇೞ್ವಲ್ಲಿ = ಪೇೞ್ವೆಡೆಯಲ್ಲಿ, ಇಗ ಎಂಬ, ಪ್ರತ್ಯಯಮಂ; ಮಾೞ್ಕೆ = ಮಾಡುಗೆ.

ವೃತ್ತಿ - ಮಾಡುವನೊಳಂ, ಮಾಱುವನೊಳಂ, ನಿಯೋಗಿಯೊಳಂ, ಅನ್ನತದಲ್ಲಿಯುಂ, ಅಱಿತದಲ್ಲಿಯುಂ, ಋಣಿಯೊಳಂ, ವರ್ತಕನೊಳಂ, ಶಿಲ್ಪಕನಲ್ಲಿಯುಂ, ಮೂಲದಲ್ಲಿಯುಂ ಇಗ ಪ್ರತ್ಯಯಮಕ್ಕುಂ.

ಪ್ರಯೋಗಂ -

ಮಾಡುವಂಗೆ -

ಕಬ್ಬಿಗಂ, ಸರವಂದಿಗಂ, ಪಟ್ಟಸಾಲಿಗಂ, ಸಿಂಗರಿಗಂ, ತೋಂಟಿಗಂ.

ಉ ॥ ಮಾ ॥ ... ಕಬ್ಬಿಗಗಳ್ವರೆಂದು ಜೂ
ಸಾಧಿಸಬಾರದಕ್ಷರದ ಕಾವ್ಯದೊಳೀ ಕವಿಚಕ್ರವರ್ತಿಯಾ ॥ ೧

(ಶಾಂತಿಪುರಾಣಂ ೧೨-೭೭)

ಮಾಱುವಂಗೆ - ಗಂದಿಗಂ, ದೂಸಿಗಂ, ತಂಬುಲಿಗಂ.

ಕಂ ॥ ಗಂದಿಗನೇರಣಿಗಂ ಸರ ।
ವಂದಿಗನಾ ಪಟ್ಟಸಾಲಿಗಂ ಬಾಣಸಿಗಂ ॥
ಮಾಂದುರಿಗಂ ಜೋಯಿಸಿಗಂ ।
ಸಂದಱಿಕೆಯ ಕಬ್ಬಿಗಂ ಸಮಂಜಸನೊಳನೇ ॥ ೨

(ಕಾವ್ಯಾವಲೋಕನಂ ೩.೨೩)

ನಿಯೋಗಕ್ಕೆ -

ಅಡಪಿಗಂ, ಚಾಮರಿಗಂ, [ಗರವ]ಟಿಗಂ.

ಅನ್ನತಕ್ಕೆ -

ಅಟಮಟಿಗಂ, ಮಾಳಿಗಂ, ಪ್ರಾಸಿಗಂ.

ಅಱಿತಕ್ಕೆ -

ಜೋಯಿಸಿಗಂ, ಲೆಕ್ಕಿಗಂ, ಪೊಲಂಬಿಗಂ.

ಕೃತಿಮಾರ್ಗದೊಳ್ ಪೊಲಂಬಿಗನೀತಂ[1] ೩

ಖಣಕ್ಕೆ -

ಸಾಲಿಗಂ, ಹಂಗಿಗಂ.

ಆಚರಣಕ್ಕೆ -

ದೇಗುಲಿಗಂ, ಅಕ್ಕರಿಗಂ, ಛಂದಸಿಗಂ.

ಶಿಲ್ಪಕ್ಕೆ -

ಚಿಪ್ಪಿಗಂ.

ಮೂಲಕ್ಕೆ -

ಮೂಲಿಗಂ.

**ಸೂತ್ರಂ ॥ ನಡೆಯಿಸುವನೀತನಿದನೆಂ ।**
**ಬೆಡೆಯೊಳ್ ವಳ ವಳ್ಳಮಕ್ಕುಮಾಯ್ತಮುಮಕ್ಕುಂ ॥**
**ವಡಿಗ ಪ್ರತ್ಯಯಮಕ್ಕುಂ ।**
**ಬಿಡದಿಕ್ಕುವನೀತನಿದನೆನಿಪ್ಪೊಂದೆಡೆಯೊಳ್ ॥ ೧೯೮ ॥**

**ಟೀಕೆ -** ಈತಂ, ಇದಂ = ಈ ನಿಯೋಗಮಂ, ನಡೆಯಿಸುವಂ = ನಡೆಯಿಸುವಾತಂ, ಎಂಬೆಡೆಯೊಳ್, ವಳವಳ್ಳಂ = ವಳಪ್ರತ್ಯಯ ವಳ್ಳಪ್ರತ್ಯಯಂಗಳ್, ಅಕ್ಕುಂ = ಅಪ್ಪುವು; ಆಯ್ತಮುಂ = ಆಯ್ತಪ್ರತ್ಯಯಮುಂ, ಅಕ್ಕುಂ = ಅಪ್ಪುದು; ಈತಂ, ಇದಂ ಬಿಡದೆ ಇಕ್ಕುವಂ, ಎನಿಪ್ಪ = ಎನಿಸುವ, ಒಂದೆಡೆಯೊಳ್ = ಒಂದು ತಾವಿನಲ್ಲಿ, ವಡಿಗ ಎಂಬ ಪ್ರತ್ಯಯಂ, ಅಕ್ಕುಂ = ಅಪ್ಪುದು.

**ವೃತ್ತಿ** - ಈ ನಿಯೋಗಮನೀತಂ ನಡೆಯಿಸುವನೆಂಬಲ್ಲಿ ವಳ ವಳ್ಳ ಆಯ್ತ ಪ್ರತ್ಯಯಂಗಳಕ್ಕುಂ; ಇದನಿವನಿಕ್ಕುವನೆಂಬೆಡೆಯೊಳ್ ವಡಿಗ ಪ್ರತ್ಯಯಮಕ್ಕುಂ.

**ಪ್ರಯೋಗಂ -**

ವಳಕ್ಕೆ -

ಅಡಪವಳಂ, ಮಾಸವಳಂ, ಮಡಿವಳಂ, ಪಡೆವಳಂ, ಸೆಜ್ಜೆವಳಂ, ಅಡುವಳಂ.

ವಳ್ಳಕ್ಕೆ -

ಅಡಪವಳ್ಳಂ, ಮಾಸವಳ್ಳಂ, ಮಡಿವಳ್ಳಂ, ಪಡೆವಳ್ಳಂ, ಸೆಜ್ಜೆವಳ್ಳಂ, ಅಡುವಳ್ಳಂ.

ಕಂ ॥ ಮಡಿವಳ್ಳನಡಪವಳ್ಳಂ ।
ಪಡೆವಳ್ಳಂ ಸೆಜ್ಜೆವಳ್ಳನಜ್ಜಂ ಬೆಜ್ಜಂ ॥
ಅಡುವಳನೆಂದಿಂತಿವರಂ ।
ಕಡಂಗಿ ಬಿಡೆ ಜಡಿಯದಿರ್ಕೆ ನಯಮಱುವರಸಂ ॥[2] - ೧

(ಕಾವ್ಯಾವಲೋಕನಂ ೩೨೬)

~~~~~~~~~~~~~~~~~~

೧. (ಈ ಲಕ್ಷ್ಯ ಪ್ರಥಮ ಪರಿಷ್ಕರಣದಲ್ಲಿಲ್ಲ.) ೨. (ಪ್ರಚಲಿತ ಪರಿಷ್ಕರಣಗಳ ಪಾಠ ಕಾವ್ಯಾವಲೋಕನದ ಪಾಠಕ್ಕೆ ಅನುಸಾರವಾದುದು.)
~~~~~~~~~~~~~~~~~~

ಆಯ್ತಕ್ಕೆ -

ಝಳಂಬಾಯ್ತರ್, ಸೂೞಾಯ್ತರ್, ಕಲ್ಲಾಯ್ತರ್, ಡಂಗಾಯ್ತರ್, ಅಚ್ಚುಳಾಯ್ತರ್.

ಕಂ ॥ ಆಯ್ತಬ್ಧಿಯೆ ಘೂರ್ಣಿಸುವಂ ।
ತಾಯ್ತರಮನೆಯೊಳಗೆ ಪುಗುವ ಪೊಱಮಡುವ ಝಳಂ ॥
ಬಾಯ್ತರ ಸೂೞಾಯ್ತರ ಕ ।
ಲ್ಲಾಯ್ತರ ಡಂಗಾಯ್ತರಚ್ಚುಳಾಯ್ತರ ರಭಸಂ ॥ ೨

ವಡಿಗಕ್ಕೆ -

ಕುಂಚವಡಿಗಂ, ಪುಲ್ಲವಡಿಗಂ, [1]ಕಳ್ವಡಿಗಂ.

**ಸೂತ್ರಂ ॥ ಇವಱಿಂದೊಳ್ ವ್ಯವಹರಿಪಂ ಮಾ ।**
**ಡುವನಿವನೆಂಬಲ್ಲಿ ಕಾಱ ಗಾಱಂಗಳ್ ಸಂ ॥**
**ಭವಿಕುಂ ಗಾಱಾದಿಗೆ ಲೋ ।**
**ಪವಾದಿಯೊಳ್ ಕಮ್ಮ ಕುಂಬ [2]ಜುಗಮೊದವಲೊಡಂ ॥ ೧೯೬ ॥**

**ಟೀಕೆ** - ಇವಱಿಂದೊಳ್ ವ್ಯವಹರಿಪಂ, ಇವಂ = ಈ ಕೆಲಸಂಗಳಂ, ಮಾಡುವಂ, ಎಂಬಲ್ಲಿ, ಕಾಱ ಗಾಱಂಗಳ್ = ಕಾಱಪ್ರತ್ಯಯ ಗಾಱಪ್ರತ್ಯಯಂಗಳ್, ಸಂಭವಿಕುಂ = ಹುಟ್ಟುವುವು; ಆದಿಯೊಳ್ = ಮೊದಲಲ್ಲಿ, ಕಮ್ಮ ಕುಂಬ ಜುಗಂ = ಕಂಮ ಕುಂಬವೆಂಬೆರಡು ಶಬ್ದಂಗಳ್, ಒದವಲೊಡಂ = ಬರಲೊಡನೆ, ಗಾಱಾದಿಗೆ = ಗಾಱ ಎಂಬ ಪ್ರತ್ಯಯದ ಮೊದಲಕ್ಷರಕ್ಕೆ, ಲೋಪಂ, ಬರ್ಪುದು.

**ವೃತ್ತಿ** - ಇವಱಿಂದೊಳಿವಂ ವ್ಯವಹರಿಪನೆಂಬಲ್ಲಿ ಕಾಱಪ್ರತ್ಯಯಮಕ್ಕುಂ; ಇದನೀತಂ ಮಾಡುವನೆಂಬಲ್ಲಿ ಗಾಱಪ್ರತ್ಯಯಮಕ್ಕುಂ; ಕಮ್ಮ ಕುಂಬ ಶಬ್ದಂಗಳ್ಪೆಱಗಿರೆ ಗಾಱ ಪ್ರತ್ಯಯದ ಗಕಾರಕ್ಕೆ ಲೋಪಮಕ್ಕುಂ.

**ಪ್ರಯೋಗಂ** -

ಕಾಱಕ್ಕೆ - ನಡೆವಳಿಕಾಱಂ, ನುಡಿವಳಿಕಾಱಂ, ಇಚ್ಚೆಕಾಱಂ, ಕೈದುಕಾಱಂ, ಬಂದಿಕಾಱಂ, ಗಟಿಕಾಱಂ, ಬೇಹುಕಾಱಂ.

ಕಂ॥ ನಗೆವಡಿಕಾಱಂ ನೀಱಂ
ಬಗೆಕಾಱಂ ಪಾಟಕಾಱನೊಳ್ನುಡಿಕಾಱಂ ... ೧

(ಕಾವ್ಯಾವಲೋಕನಂ ೩.೨೫)

ಗಾಱಕ್ಕೆ - ಮಾಲೆಗಾಱಂ, ಕಂಚಗಾಱಂ, ಬಳೆಗಾಱಂ, ಗೆಜ್ಜೆಗಾಱಂ, ಮಣಿಗಾಱಂ, ಒಱಟಿಗಾಱಂ.

ಕಂ ॥ ಅಣಿಯರಮೆಸೆದೊಪ್ಪಿರ್ಪುವು ।
ಮಣಿಗಾಱರ ಕಂಚಗಾಱರೊಱಟಿಗಾಱರ ತಿಂ ॥
ತಿಣಿಯೆನಿಪ ಮಾಲೆಗಾಱರ ।
ಗಣನಾತೀತಂಗಳಾಪಣಂಗಳೆ ಪೊೞಲೊಳ್ ॥ ೨

(ಕಾವ್ಯಾವಲೋಕನಂ ೩.೨೮)

---

೧. ಕಳಸವಡಿಗಂ. ಕ. ಖ. ೨. (ಯುಗಮೊದವಲೊಡಂ)

ಗಕಾರಲೋಪಕ್ಕೆ - ಕಮ್ಮಱಂ, ಕುಂಬಱಂ.

**ಸೂತ್ರಂ ॥ ಪರದೊಳ್ ಗಾಱಪ್ರತ್ಯಯ ।**
**ಮಿರೆ ಸಲ್ದುಂ ಬಿಂದು ಮೇಣಕಾರಮುದಂತ ॥**
**ಕ್ಕೊರೆವರಿಚ ಪ್ರತ್ಯಯಮಂ ।**
**ಪಿರಿದುಂ ತದ್ಭವನೊಳುಪಧೆಗಕ್ಕುಂ ಹ್ರಸ್ವಂ ॥ ೨೦೦ ॥**

ಟೀಕೆ - ಪರದೊಳ್ = ಮುಂದೆ, ಗಾಱಪ್ರತ್ಯಯಂ, ಇರೆ, ಉದಂತಕ್ಕೆ = ಉಕಾರಾಂತಕ್ಕೆ, ಬಿಂದು = ಸೊನ್ನೆ, ಸಲ್ದುಂ = ಸಲ್ವುದು; ಮೇಣ್ = ಅದಲ್ಲದೆ, ಅಕಾರಂ = ಅತ್ವಂ, ಸಲ್ವುದು; ತದ್ಭವನೊಳ್ = ಅದಱಿಂದ ಹುಟ್ಟಿದವನಲ್ಲಿ, ಇಚ (ಎಂಬ) ಪ್ರತ್ಯಯಮಂ, ಒರೆವರ್ = ಪೇೞ್ವರ್; ಪಿರಿದುಂ = ವಿಶೇಷವಾಗಿ, ಉಪಧೆಗೆ = ಅಂತ್ಯದ ಮೊದಲ್ಗೆ, ಹ್ರಸ್ವಂ, ಅಕ್ಕುಂ = ಅಪ್ಪುದು.

**ವೃತ್ತಿ** - ಗಾಱಪ್ರತ್ಯಯಂ ಪರದೊಳಿರೆ ಪೂರ್ವದುದಂತಕ್ಕೆ ಬಿಂದುವುಂ ಅಕಾರಮುಮಕ್ಕುಂ. ಅದಱಿಂದ ಪುಟ್ಟಿದನೆಂಬಲ್ಲಿ ಇಚಪ್ರತ್ಯಯಮಕ್ಕುಂ; ಕೆಲವೆಡೆಯೊಳುಪಧೆಗೆ ಹ್ರಸ್ವಮಕ್ಕುಂ.

**ಪ್ರಯೋಗಂ** -

ಬಿಂದುವಿಂಗೆ -

ಪಾಡುಂಗಾಱಂ, ಅಲಸುಂಗಾಱಂ, ಓದುಂಗಾಱಂ, ಜೂದುಂಗಾಱಂ.

ಅತ್ವಕ್ಕೆ -

ಕಂಚಗಾಱಂ.

ಇಚಪ್ರತ್ಯಯಕ್ಕೆ -

ಅಲರಿಚಂ, ಪೊಟಲಿಚಂ.

ಕೆಲವೆಡೆಯೊಳುಪಧೆಗೆ ಹ್ರಸ್ವಂ -

ಕಾಲುರಿಚಂ (ಕಾಲೂರ್ + ಇಚಂ).

**ಸೂತ್ರಂ ॥ ಘನಮಾಗಿ ವರ್ತಿಸುವನೀ ।**
**ತನಿವಱಿಂದೆಂಬಲ್ಲಿ ಕುಟಿಗ ಗ ಪ್ರತ್ಯಯಮುಂ ॥**
**ಟೆನಿಸುಗುಮುಳಿಗ ಪ್ರತ್ಯಯ ।**
**ಮನುಕೂಲಂ ಬಾೞ್ವನಿದಱಿಂದಿವನೆಂಬೆಡೆಯೊಳ್ ॥ ೨೦೧ ॥**

**ಟೀಕೆ** - ಈತಂ, ಇವಱಿಂದ್, ಘನಮಾಗಿ = ವೆಗ್ಗಳವಾಗಿ, ವರ್ತಿಸುವಂ, ಎಂಬಲ್ಲಿ = ಎಂಬರ್ಥದಲ್ಲಿ, ಕುಟಿಗ ಗ ಪ್ರತ್ಯಯಂ = ಕುಟಿಗ ಪ್ರತ್ಯಯ ಗ ಪ್ರತ್ಯಯಂಗಳ್, ಉಂಟೆನಿಸುಗುಂ = ಉಂಟಾಗುವುವು; ಇವಂ, ಇದಱಿಂದ್, ಅನುಕೂಲಂ = ಅನುಕೂಲವಾಗಿ, ಬಾೞ್ವಂ, ಎಂಬೆಡೆಯೊಳ್, ಉಳಿಗ (ಎಂಬ) ಪ್ರತ್ಯಯಂ, ಉಂಟೆನಿಸುವುದು.

**ವೃತ್ತಿ** - ಇವನಿದಱಿಂದ್ ಪಿರಿದು ವರ್ತಿಸುವನೆಂಬಲ್ಲಿ ಕುಟಿಗ ಗ ಪ್ರತ್ಯಯಮಕ್ಕುಂ; ಇದಱಿಂದಿವಂ ಬಾೞ್ವನೆಂಬಲ್ಲಿ ಉಳಿಗ ಪ್ರತ್ಯಯಮಕ್ಕುಂ.

**ಪ್ರಯೋಗಂ** -

ಕುಟಿಗ ಪ್ರತ್ಯಯಕ್ಕೆ -

ಕಲ್ಕುಟಿಗಂ, ನೀರ್ಕುಟಿಗಂ, ಮರಕುಟಿಗಂ, ಕಱುಕುಟಿಗಂ, ಕಟ್ಟಿಕುಟಿಗಂ.

ಗ ಪ್ರತ್ಯಯಕ್ಕೆ -

ಮಾತುಗಂ, ಬೂತುಗಂ, ಕಂತೆಗಂ, ಕತೆಗಂ, ಬೊಂತೆಗಂ, ಬೀದಿಗಂ, ಸಟೆಗಂ, ನವಸಿಗಂ, ಎಡಗಂ.

ಉಳಿಗ ಪ್ರತ್ಯಯಕ್ಕೆ -

ದೇವುಳಿಗಂ, ದಂಡುಳಿಗಂ, ಮಣ್ಣುಳಿಗಂ (ಮಣ್ಣೊಳ್ ಜೀವಿಸುವ ಪಾವು ಮಣ್ಣುಳಿಗಂ.)

**ಸೂತ್ರಂ ॥ ಒದವುವುದು ಗುಳಿ ಪ್ರತ್ಯಯ ।**
**ಮದು ಪೂರ್ವದ ಬಿಂದುವೆರಸು ಶೀಲಗ್ರಹಣಾ ॥**
**ರ್ಥದೊಳೆತ್ತಮುಣಿ ಪ್ರತ್ಯಯ ।**
**ಮೊದವುಗುಮನ್ವಿತದಿನುಣ್ಬನಿದನೆಂಬೆಡೆಯೊಳ್ ॥ ೨೦೨ ॥**

**ಟೀಕೆ** - ಶೀಲಗ್ರಹಣಾರ್ಥದೊಳ್ = ಆವುದಾನೊಂದು ಸ್ವಭಾವಾರ್ಥದಲ್ಲಿ, ಪೂರ್ವದ = ಆದಿಯ; ಬಿಂದುವೆರಸು = ಬಿಂದುಗೂಡಿದ, ಗುಳಿ ಪ್ರತ್ಯಯಂ = ಗುಳಿ ಎಂಬ ಪ್ರತ್ಯಯಂ, ಒದವುವುದು = ಬರುವುದು; ಇದಂ, ಅನ್ವಿತದಿಂ = ಹಿತದಿಂದೆ, ಉಣ್ಬಂ = ಊಟವಂ ಮಾಡುವಂ, ಎಂಬೆಡೆಯೊಳ್, ಎತ್ತಂ = ಆವ ದೆಸೆಯಲ್ಲಿಯುಂ, ಉಣಿ (ಎಂಬ) ಪ್ರತ್ಯಯಂ, ಒದವುಗುಂ = ಬರ್ಪುದು.

**ವೃತ್ತಿ** - ಶೀಲಗ್ರಹಣಾರ್ಥಂಗಳೊಳ್ ಬಿಂದುವೆರಸು ಗುಳಿ ಪ್ರತ್ಯಯಮಕ್ಕುಂ; ಈ ವಸ್ತುವನೀತನುಣ್ಬನೆಂಬಲ್ಲಿ ಉಣಿ ಪ್ರತ್ಯಯಮಕ್ಕುಂ.

**ಪ್ರಯೋಗಂ** -

ಗುಳಿ ಪ್ರತ್ಯಯಕ್ಕೆ -

ಆಟಂಗುಳಿ, ಸಾಲಂಗುಳಿ, ಲಂಚಂಗುಳಿ, ಕುತ್ತಂಗುಳಿ.

ಉಣಿ ಪ್ರತ್ಯಯಕ್ಕೆ -

ಅಮರ್ದುಣಿ, ಕಳ್ಳುಣಿ, ತುಡುಗುಣಿ.

**ಸೂತ್ರಂ ॥ ಉಕ ಕುಳಿಯಾಳಿ ಪ್ರತ್ಯಯ ।**
**ಮಿಕಮುಂ ಶೀಲಾದಿ ವಿಶ್ರುತಾರ್ಥದೊಳಡಿಗ ॥**
**ಪ್ರಕಟ ಪ್ರತ್ಯಯಮಕ್ಕುಂ ।**
**ಸುಕವಿಗಳಿಂ ತದನುಕೂಲವರ್ತನವಿಧಿಯೊಳ್ ॥ ೨೦೩ ॥**

**ಟೀಕೆ** - ಶೀಲಾದಿ = ಶೀಲ ಮೊದಲಾದ, ವಿಶ್ರುತಾರ್ಥದೊಳ್ = ಪ್ರಸಿದ್ಧವಾದರ್ಥದಲ್ಲಿ, ಉಕ ಕುಳಿಯಾಳಿ ಪ್ರತ್ಯಯಂ = ಉಕಪ್ರತ್ಯಯ ಕುಳಿಪ್ರತ್ಯಯ ಆಳಿಪ್ರತ್ಯಯಂಗಳ್, ಇಕಮುಂ = ಇಕ ಎಂಬ ಪ್ರತ್ಯಯಮುಂ (ಅಪ್ಪುದು); ಸುಕವಿಗಳಿಂ = ಕವೀಶ್ವರರಿಂದ, ತದನುಕೂಲ = ಆ ಶೀಲಾದಿ ವಿಶ್ರುತಾರ್ಥದೊಳನುಕೂಲವಾದ, ವರ್ತನವಿಧಿಯೊಳ್ = ವರ್ತನದ ವಿಧಿಯಲ್ಲಿ; ಅಡಿಗ = ಅಡಿಗ ಎಂಬ, ಪ್ರಕಟ = ಪ್ರಸಿದ್ಧವಾದ, ಪ್ರತ್ಯಯಂ, ಅಕ್ಕುಂ = ಆಗುವುದು.

**ವೃತ್ತಿ** - ಶೀಲಾದಿ ನಿಖಿಲಾರ್ಥಂಗಳೊಳ್ ಉಕ ಪ್ರತ್ಯಯಮುಂ ಕುಳಿ ಪ್ರತ್ಯಯಮುಂ ಆಳಿ ಪ್ರತ್ಯಯಮುಂ ಇಕ ಪ್ರತ್ಯಯಮುಂ ಅಕ್ಕುಂ; ತದನುಕೂಲ ವರ್ತನದೊಳ್ ಅಡಿಗ ಪ್ರತ್ಯಯಮಕ್ಕುಂ.

ಪ್ರಯೋಗಂ -

ಉಕ ಪ್ರತ್ಯಯಕ್ಕೆ -

ಕಟ್ಟುಕಂ, ತಟ್ಟುಕಂ, ಅಂಟುಕಂ, ಕಾರುಕಂ, ಸಣ್ಣುಕಂ, ಜೋಡುಕಂ, ಬೊಂದುಕಂ, ದಿಂಡುಕಂ.

ಕುಳಿ ಪ್ರತ್ಯಯಕ್ಕೆ -

ಪೋರ್ಕುಳಿ, ಓಡುಕುಳಿ, ಹಡುಕುಳಿ, ಪಾಡುಕುಳಿ, ಮಱುಕುಳಿ, ಪೇಂಕುಳಿ, ಇಱುಕುಳಿ, ಆಯ್ಕುಳಿ.

ಆಳಿ ಪ್ರತ್ಯಯಕ್ಕೆ -

ಓದಾಳಿ, ಜೂದಾಳಿ, ಮಾಱಾಳಿ, ಏಱಾಳಿ, ಪಡಪಾಳಿ, ಮಾತಾಳಿ, ಕೇಡಾಳಿ, ಸಿಗ್ಗಾಳಿ.

ಕಂ ॥ ಮಾಱಾಳಿಯುಮೋದಾಳಿಯು ।
ಮೇಱಾಳಿಯುಮಪ್ಪನಾಗಿ ಪಡಪಾಳಿಯೆ ಕೇಳ್ ॥
ನೀಱಿಂ ಜೂದಾಳಿ ಕರಂ ।
ನೀಱಿಂ ಮಾತಾಳಿ ಕರೆಯೆ ಸಿಗ್ಗಾಳಿಯಿವಳ್ ॥ ೧

(ಕಾವ್ಯಾವಲೋಕನಂ ೩೫೩)

ಇಕ ಪ್ರತ್ಯಯಕ್ಕೆ -

ಕರಿಕಂ, ಅಸಿಕಂ, ಹುಸಿಕಂ, ದಸಿಕಂ, ಬಾರಿಕಂ.

ಅಡಿಗ ಪ್ರತ್ಯಯಕ್ಕೆ -

ದೇವಡಿಗಂ, ಪಾವಡಿಗಂ, ಪೂವಡಿಗಂ.

**ಸೂತ್ರಂ ॥ ವ್ಯವಹರಣ ತದಾಚರಣ ।**
**ಪ್ರವಣನೊಳಕ್ಕುಂ ಸಮಂತುಗಪ್ರತ್ಯಯಮೊಂ ॥**
**ದುವುದಟಿಗ ಪ್ರತ್ಯಯಮಾ ।**
**ಡುವ ದೀವಿಗೆವಿಡಿವ ಹರದುಗೆಯ್ವನಿಬರೊಳಂ ॥ ೨೦೪ ॥**

**ಟೀಕೆ** - ವ್ಯವಹರಣ - ವ್ಯವಹಾರದಲ್ಲಿ, ತದಾಚರಣ = ಅದಱಾಚರಣೆಯಲ್ಲಿ, ಪ್ರವಣನೊಳ್ = ಪ್ರಸಿದ್ಧವಾದವನಲ್ಲಿ, ಸಮಂತು = ಹಾಗೆ, ಉಗ (ಎಂಬ) ಪ್ರತ್ಯಯಂ, ಅಕ್ಕುಂ = ಆಗುವುದು; ಆಡುವ = ಗಱಿವಿಡಿದಾಡುವ, ದೀವಿಗೆವಿಡಿವ = ದೀವಿಗೆಯಂ ಪಿಡಿವ, ಹರದುಗೆಯ್ವ = ಬೇಹಾರವಂ ಮಾಡುವ, ಅನಿಬರೊಳಂ = ಅನಿಬರಲ್ಲಿಯುಂ, ಅಟಿಗ ಪ್ರತ್ಯಯಂ = ಅಟಿಗ ಎಂಬ ಪ್ರತ್ಯಯಂ, ಒಂದುವುದು = ಪೊರ್ದುಗೆಯಾಗುವುದು.

**ವೃತ್ತಿ** - ವ್ಯವಹರಿಸುವನೊಳಂ ಅಲ್ಲಿ ವರ್ತಿಸುವನೊಳಂ ಉಗ ಪ್ರತ್ಯಯಮಕ್ಕುಂ; ಗಱಿವಿಡಿದಾಡುವ ದೀವಿಗೆವಿಡಿವ ಎಲೆವಿಡಿದಾಡುವನೊಳಂ ಅಟಿಗ ಪ್ರತ್ಯಯಮಕ್ಕುಂ.

ಪ್ರಯೋಗಂ -

ಉಗ ಪ್ರತ್ಯಯಕ್ಕೆ -

ನಾರುಗಂ, ಬೇರುಗಂ, ಊರುಗಂ, ಕಾರುಗಂ, ನೇಣುಗಂ, ಹೆಣ್ಣುಗಂ, ತಾಳುಗಂ, ಮಣ್ಣುಗಂ.

ಅಟಿಗ ಪ್ರತ್ಯಯಕ್ಕೆ -

ಕೊಲ್ಲಟಿಗಂ, ದೀವಟಿಗಂ, ಮಾವಟಿಗಂ.

**ಸೂತ್ರಂ ॥ ಏನಾನುಮೊಂದು ಭಾವಮು ।**
**ನಾನಲ್ ಸಲ್ವವನೊಳಱಿಗೆ ಕ ಪ್ರತ್ಯಯಮಮಂ ॥**
**ಪೀನಂ ತದ್ವರ್ತನಗತ ।**
**ಮಾನವನೊಳ್ ತಿಳಿಗೆ ಮತ್ತಿಲಪ್ರತ್ಯಯಮಮಂ ॥ ೨೦೫ ॥**

**ಟೀಕೆ** - ಏನಾನುಮೊಂದು = ಆವುದಾನೊಂದು, ಭಾವಮಂ, ಆನಲ್ = ಧರಿಸಲ್, ಸಲ್ವವನೊಳ್ = ಸಲ್ವವನಲ್ಲಿ, ಕ (ಎಂಬ) ಪ್ರತ್ಯಯಮಂ, ಅಱಿಗೆ = ತಿಳಿಗೆ; ಪೀನಂ = ವಿಶೇಷವಾಗಿ, ತದ್ವರ್ತನ = ಆ ವರ್ತನೆಯಲ್ಲಿ, ಗತ = ಎಯ್ದಲ್ಪಟ್ಟ, ಮಾನವನೊಳ್ = ಮನುಷ್ಯನಲ್ಲಿ, ಮತ್ತೆ = ಬೞಿಕಂ, ಇಲ (ಎಂಬ) ಪ್ರತ್ಯಯಮಂ; ತಿಳಿಗೆ = ಅಱಿಗೆ.

**ವೃತ್ತಿ** - ಆವುದಾನುಮೊಂದು ಭಾವಮಂ ತಳೆದಿರ್ಪವನೊಳ್ ಕ ಪ್ರತ್ಯಯಮಕ್ಕುಂ; ಅದಱೊಳೀತಂ ವರ್ತಿಪನೆಂಬಲ್ಲಿ ಇಲ ಪ್ರತ್ಯಯಮಕ್ಕುಂ.

**ಪ್ರಯೋಗಂ** -

ಕ ಪ್ರತ್ಯಯಕ್ಕೆ - ಬಡಕಂ, ನಿಡುಕಂ, ಕಿಡುಕಂ, ಒಣಕಂ, ಅೞುಕಂ, ಬೆಳುಕಂ, ತೊಟಕಂ, ಕೊಟಕಂ.

ಇಲ ಪ್ರತ್ಯಯಕ್ಕೆ - ಪಱ್ಚೆಯಿಲಂ, ಘೋಟಿಯಿಲಂ, ಪಡೆಯಿಲಂ, ಗಾವಿಲಂ.

**ಸೂತ್ರಂ ॥ ಇದಱೊಳಿದುಂಟೆಂಬರ್ಥದೊ ।**
**ಳುದಯಿಪುದುಳ್ಳೊಡೆಯ ವಂತ ಶಬ್ದಂ ಕೈಕೊ ॥**
**ಳ್ವುದು ವಣಿಗ ಪ್ರತ್ಯಯಮು ।**
**ಣ್ಬುದು ಜೀವಿತಮಾಗಿ ಬಱಿದೆ ತಿನುತಿರ್ಪವನೊಳ್ ॥ ೨೦೬ ॥**

**ಟೀಕೆ** - ಇದಱೊಳ್, ಇದು, ಉಂಟೆಂಬ ಅರ್ಥದೊಳ್, ಉಳ್ಳೊಡೆಯ ವಂತ ಶಬ್ದಂ = ಉಳ್ಳ ಒಡೆಯ ವಂತ ಎಂಬ ಶಬ್ದಂ, ಉದಯಿಪುದು = ಹುಟ್ಟುವುದು; ಉಣ್ಬುದು = ತಿಂಬುದು, ಜೀವಿತಮಾಗಿ = ಬಾೞ್ತೆಯಾಗಿ, ಬಱಿದೆ = ಸುಮ್ಮನೆ, ತಿನುತಿರ್ಪವನೊಳ್ = ತಿನುತಿರ್ಪವನಲ್ಲಿ, ವಣಿಗ (ಎಂಬ) ಪ್ರತ್ಯಯಂ; ಕೈಕೊಳ್ವುದು = ಸ್ವೀಕಾರವಪ್ಪುದು.

**ವೃತ್ತಿ** - ಇಲ್ಲಿ ಈ ವಸ್ತುವುಂಟೆಂಬರ್ಥದೊಳ್ ಉಳ್ಳ ಒಡೆಯ ವಂತ ಪ್ರತ್ಯಯಮಕ್ಕುಂ; ಊಟಮೇ ಜೀವಿತಮಾಗಿ ಬಾೞ್ವನೊಳ್ ವಣಿಗ ಪ್ರತ್ಯಯಮಕ್ಕುಂ.

**ಪ್ರಯೋಗಂ** - ಉಳ್ಳ ಪ್ರತ್ಯಯಕ್ಕೆ -

ಧನಮುಳ್ಳಂ, ಧಾನ್ಯಮುಳ್ಳಂ, ಗುಣಮುಳ್ಳಂ, ಓದುಳ್ಳಂ, ತೇಜಮುಳ್ಳಂ.

ಒಡೆಯ ಪ್ರತ್ಯಯಕ್ಕೆ -

ಪೆರ್ಮೆಯೊಡೆಯಂ, ಜಗದೊಡೆಯಂ, ನೆಲನೊಡೆಯಂ, ಕೂಡೆಯೊಡೆಯಂ, ಜಾಣೊಡೆಯಂ.

ವಂತ ಪ್ರತ್ಯಯಕ್ಕೆ -

ಸಿರಿವಂತಂ, ಜಯವಂತಂ, ಜಸವಂತಂ, ಹೂನ್ಯವಂತಂ.

ವಣಿಗ ಪ್ರತ್ಯಯಕ್ಕೆ -

ಕೂಟ್ವಣಿಗಂ.

ಮತ್ತೆ ಕೆಲವಱೊಳುಂಟು -

ಲಂಚವಣಿಗಂ, ಸಾಲವಣಿಗಂ, ಗಂಧವಣಿಗಂ

**ಸೂತ್ರಂ ॥ ಅನೆಯ ಪ್ರತ್ಯಯಮನಿತಿನಿ ।**
**ತೆನಿತೆಂಬ ಲಸತ್ಪ್ರಮಾಣಪೂರಣದೊಳ್ ನೆ ॥**
**ಟ್ಟನೆ ಸಂಖ್ಯಾಪೂರಣದೊಳ್ ।**
**ಜನಿಯಿಪುದು ಮೆಯೆಂಬುದಕ್ಕುಮೆಣಿಸುವ ಸೂಱೊಳ್ ॥ ೨೦೭ ॥**

**ಟೀಕೆ** - ಅನಿತು, ಇನಿತು, ಎನಿತು - ಎಂಬ, ಲಸತ್ = ಒಪ್ಪುವ, ಪ್ರಮಾಣ ಪೂರಣದೊಳ್, ನೆಟ್ಟನೆ = ವ್ಯಕ್ತವಾಗಿ, ಸಂಖ್ಯಾ = ಲೆಕ್ಕದ, ಪೂರಣದೊಳ್, ಅನೆಯ (ಎಂಬ) ಪ್ರತ್ಯಯಂ, ಜನಿಯಿಪುದು = ಹುಟ್ಟುವುದು; ಎಣಿಸುವ ಸೂಱೊಳ್, ಮೆ ಎಂಬುದು = ಮೆ ಎಂಬ ಪ್ರತ್ಯಯಂ, ಅಕ್ಕುಂ = ಆಗುವುದು.

**ವೃತ್ತಿ** - ಅನಿತಿನಿತೆನಿತೆಂಬ ಪ್ರಮಾಣಪೂರಣದೊಳಂ ಸಂಖ್ಯಾಪೂರಣದೊಳಂ ಅನೆಯ ಪ್ರತ್ಯಯಮಕ್ಕುಂ; ಎಣಿಸುವ ಸೂಱೊಳ್ ಮೆಯೆಂಬುದಕ್ಕುಂ.

**ಪ್ರಯೋಗಂ -**

ಅನೆಯ ಪ್ರತ್ಯಯಕ್ಕೆ -

ಅನಿತನೆಯಂ, ಇನಿತನೆಯಂ, ಎನಿತನೆಯಂ; ಒಂದನೆಯಂ, ಎರಡನೆಯಂ, ಮೂಱನೆಯಂ; ಪದಿನಾಱನೆಯಂ, ನೂಱನೆಯಂ, ಐನೂಱನೆಯಂ.

ಮೆ ಪ್ರತ್ಯಯಕ್ಕೆ -

ಒರ್ಮೆ, ಇರ್ಮೆ, ಮೂಮೆ, ಸಾಸಿರ್ಮೆ, ಪಲರ್ಮೆ.

**ಸೂತ್ರಂ ॥ ಕಾಂತಾವಿಷಯದೊಳಾದಮ ।**
**ದಂತಕ್ಕಿತಿಯುಂ ತದಾದಿಲೋಪಮುಮಕ್ಕುಂ ॥**
**ಭ್ರಾಂತೇನಳಂತಮುಂ ನೆಗ ।**
**ೞ್ದುಂ ತೋಱದದರ್ಕದಂತದಲ್ಲಿ ವಿಕಲ್ಪಂ ॥ ೨೦೮ ॥**

**ಟೀಕೆ** - ಕಾಂತಾವಿಷಯದೊಳ್ = ಸ್ತ್ರೀವಿಷಯಲ್ಲಿ, ಆದಂ = ಆದಂ ಎಂಬ ಪೀನ ಗ್ರಹಣದಿಂದ, ಅದಂತಕ್ಕೆ = ಅಕಾರಾಂತಕ್ಕೆ, ಇತಿಯುಂ = ಇತಿಯೆಂಬ ಪ್ರತ್ಯಯಮುಂ, ತದಾದಿಲೋಪಮುಂ = ಆ ಇತಿ ಪ್ರತ್ಯಯದಾದಿಗೆ ಲೋಪಮುಂ, ಅಕ್ಕುಂ = ಅಪ್ಪುದು; ಭ್ರಾಂತೇಂ = ಭ್ರಮೆಯೇಂ, ಅಳಂತಮುಂ = ಅಳ್ ಎಂಬ ಪ್ರತ್ಯಯಾಂತಮುಂ, ನೆಗೞ್ದುಂ = ಪ್ರಸಿದ್ಧಿವಡೆವುದು; ಅದರ್ಕೆ = ಆ ಅಳ್ ಎಂಬ ಪ್ರತ್ಯಯಕ್ಕೆ, ಅದಂತದಲ್ಲಿ = ಅಕಾರಾಂತದಲ್ಲಿ; ವಿಕಲ್ಪಂ, ತೋರದು = ಬಾರದು.

**ವೃತ್ತಿ** - ಸ್ತ್ರೀವಿಷಯದೊಳದಂತಕ್ಕೆ ಇತಿ ಪ್ರತ್ಯಯಮುಂ, ಆದಿಯಿತ್ವಕ್ಕೆ ಲೋಪಮುಂ [ಅಕ್ಕುಂ]; ಆದಮೆಂಬುದಱಿಂ ಕಱಿದೆಡೆಯೊಳಂ ಅದಂತಮಲ್ಲದಲ್ಲಿಯುಂ, [ಇತಿ

ಪ್ರತ್ಯಯಮಕ್ಕುಂ]; ಅದಂತಕ್ಕೆ ವಿಕಲ್ಪಮಿಲ್ಲದಳ್ ಪ್ರತ್ಯಯಮುಂ, ಆದಮೆಂಬುದಱಿಂದ-ದಂತಕ್ಕೆತ್ವಮುಮಕ್ಕುಂ.

**ಪ್ರಯೋಗಂ -**

ಇತಿಗೆ -

ಚಾಮರಿಗಿತಿ, ಮದ್ದಳಿಗಿತಿ, ಆವುಜಿಗಿತಿ, ಕನ್ನಡಿಗಿತಿ, ಲೇಪಾಳಿಗಿತಿ, ಪಂಚಮಿಗಿತಿ, ವೇರಡಿಗಿತಿ, ಕುಱುಂಬಿತಿ, ತೆಲುಂಗಿತಿ, ತೆಲ್ಲಿಗಿತಿ, ಚಿಪ್ಪಿಗಿತಿ, ಒಕ್ಕಲಿಗಿತಿ (ಒಕ್ಕಲಿತಿಯೆಂದುಮುಂಟು).

ಕಂ ॥ ಒಕ್ಕಲಿತಿ ಜೋಡೆಯಾದಂ ।
[ದ]ಕ್ಕುಮವಳ್ ಸಿತಗೆ ಪತಿಗೆ ಮಿಗೆ ಕಾಯ್ವಳ್ ನೋ ॥
ಟಕ್ಕೆ ಕಡುಸೊಂದಿ ನಾಣಿಲಿ ।
ಬಕ್ಕಂಬಯಲೊಳಮದಾರುಮಂ [1]ಬಂಚಿಸುವಳ್ ॥ ೧

(ಕಾವ್ಯಾವಲೋಕನಂ ೩೩೩)

ಇತ್ವಲೋಪಕ್ಕೆ -

ಮಣಿಗಾರ್ತಿ, ಮಾಲೆಗಾರ್ತಿ, ಕಂಚಗಾರ್ತಿ, ಗಾಡಿಕಾರ್ತಿ, ಬೇಟಕಾರ್ತಿ; ಘಟ್ಟಿವಳ್ತಿ, ಸೆಜ್ಜೆವಳ್ತಿ; ಪೊಲತಿ, ನರತಿ, ಎಡತಿ - ಎಂಬ ಮೂಱು ಶಬ್ದದೆತ್ವಕ್ಕೆ ಸಮಾಸದಂತಿರತ್ವಂ.

ಅದಂತಮಲ್ಲದಲ್ಲಿಯುಂ -

ಅಕ್ಕಸಾಲಿತಿ, ಒಕ್ಕಲಿತಿ.

ವಿಕಲ್ಪಮಿಲ್ಲದ ಅಳ್ ಪ್ರತ್ಯಯಕ್ಕೆ -

ಅವಳ್, ಇವಳ್, ಉವಳ್, ಆವಳ್, ಪೆಱಳ್; ಕಿಱಿಯಳ್, ಪಿರಿಯಳ್, ಅಸಿಯಳ್, ಇನಿಯಳ್, ಇಮ್ಮಿದ್ರಳ್, ಕಮ್ಮಿದ್ರಳ್.

ಕೃತ್ತಿನೊಳಮಪ್ಪುದರ್ಕೆ -

ಓಸರಿಸಿದಳ್, ರಾಗಿಸಿದಳ್, ಭೋಗಿಸಿದಳ್, ಪಾಡಿಸಿದಳ್, ನೋಡಿದಳ್, ಒಸೆದಳ್, ಬೆಸೆದಳ್.

ಎತ್ವಕ್ಕೆ -

ಜೋಡೆ, ಸಿತಗೆ, ಚದುರೆ, ಪಾಣ್ಬೆ.

**ಸೂತ್ರಂ ॥ ಚರಮಸ್ವರಕ್ಕೆ ಚರಮಾ ।**
**ಕ್ಷರಕಕ್ಕುಂ ಲೋಪಮಗ್ರುದೊಳ್ ತದ್ಧಿತಮೊಂ ॥**
**ದಿರೆ ತನ್ನೊಳಾ ಸಮಾಸಾಂ ।**
**ತರದಾಖ್ಯಾತಕದ ಲಕ್ಷಣಂ ವ್ಯವಹರಿಕುಂ ॥ ೨೦೯ ॥**

~~~~~~~~~~~~~~~~~~

೧. ಭಂಜಿಸುವಳ್.
~~~~~~~~~~~~~~~~~~

**ಟೀಕೆ** - ಅಗ್ರದೊಳ್ = ಮುಂದೆ, ತದ್ಧಿತಂ = ತದ್ಧಿತಪ್ರತ್ಯಯಂ, ಒಂದಿರೆ = ಕೂಡಿರೆ, ಚರಮಸ್ವರಕ್ಕೆ = ಅಂತ್ಯದ ಸ್ವರಕ್ಕೆ, ಚರಮಾಕ್ಷರಕ್ಕೆ = ಅಂತ್ಯದಕ್ಷರಕ್ಕೆ, ಲೋಪಂ, ಅಕ್ಕುಂ = ಅಪ್ಪುದು; ತನ್ನೊಳ್ = (ತದ್ಧಿತಮೊಂದಿದ ಪದಂ) ತನ್ನಲ್ಲಿ, ಆ ಸಮಾಸಾಂತರದ = ಆ ಸಮಾಸ ಪ್ರಕರಣ ಮಧ್ಯದ, ಆಖ್ಯಾತಕದ = ಆಖ್ಯಾತಪ್ರಕರಣದ, ಲಕ್ಷಣಂ = ಲಕ್ಷಣಮಾದ ಸೂತ್ರಂ, ವ್ಯವಹರಿಕುಂ = ವ್ಯವಹರಿಸುವುದು.

**ವೃತ್ತಿ** - ತದ್ಧಿತಪ್ರತ್ಯಯಂ ಪರದೊಳಿರೆ ಅಂತ್ಯಸ್ವರಕ್ಕಮಂತ್ಯಾಕ್ಷರಕ್ಕಂ ಲೋಪಂ; ಸಮಾಸಾಂತರಾಳಲಕ್ಷಣಮುಂ ಆಖ್ಯಾತಲಕ್ಷಣಮುಂ ತದ್ಧಿತದೊಳೆ ವ್ಯವಹರಿಸುಗುಂ.

**ಪ್ರಯೋಗಂ** -

ಸ್ವರಲೋಪಕ್ಕೆ -

ಘಟ್ಟಿವಳ್ತಿ, ಸೆಜ್ಜೆವಳ್ತಿ, ತೆಲುಂಗಿತಿ, ಬೋಸರಿಗಿತಿ, ದೇಸಿಗಿತಿ, ಕಮ್ಮಱಿತಿ, ನಾವಿದಿತಿ, ಹಾದರಿಗಿತಿ.

ಱು, ದು ಎಂಬ ಅಕ್ಷರಂಗಳ ಲೋಪಕ್ಕೆ -

ಏಱುತಕ್ಕೆ ಏತಂ; ಓದಿಂಗೆ ಓತಂ.

ಸಮಾಸಲಕ್ಷಣಕ್ಕೆ -

ಮಾಲೆಗಾಱನೆಂಬುದಱ ಱಕಾರಕ್ಕೆ ರೇಫಮಾದುದಾಗಿ ಮಾಲೆಗಾರ್ತಿ; ಕಂಚಗಾರ್ತಿ, ಪಂಚಗಾರ್ತಿ, ಓಲಗಗಾರ್ತಿ, ಜಾಲಗಾರ್ತಿ, ಬಳೆಗಾರ್ತಿ.

ಆಖ್ಯಾತಲಕ್ಷಣಕ್ಕೆ -

ಆಟಂ, ಪಾಟಂ, ನೋಟಂ, ಕೂಟಂ.

**ಸೂತ್ರಂ ॥ ಇತ್ವದೊಳುತ್ವದೊಳಾ ಹ್ರ ।**
**ಸ್ವೈತ್ವದೊಳೊಂದಿದ ವಕಾರಮಕ್ಕುಂ ಭಾವ ॥**
**ಕ್ಕತ್ವಂ ಪಿರಿದುಂ ಪೆಱಗುಂ ।**
**ಟತ್ವಂ ಹ್ರಸ್ವೈತ್ವ ತತ್ವಮದು ಕೆಲವೆಡೆಯೊಳ್ ॥ ೨೧೦ ॥**

**ಟೀಕೆ** - ಭಾವಕ್ಕೆ = ಭಾವಾರ್ಥಕ್ಕೆ, ಇತ್ವದೊಳ್, ಉತ್ವದೊಳ್, ಆ ಹ್ರಸ್ವೈತ್ವದೊಳ್ = ಆ ಹ್ರಸ್ವವಾದೆಕಾರದಲ್ಲಿ, ಒಂದಿದ = ಕೂಡಿದ, ವಕಾರಂ, ಅಕ್ಕುಂ = ಆಗುವುದು; ಅತ್ವಂ = ಅಕಾರಂ, ಪಿರಿದುಂ = ವಿಶೇಷವಾಗಿ, ಪೆಱಗೆ = ಪಿಂದೆ, ಉಂಟು = ಉಂಟಾಗುವುದು; ಕೆಲವೆಡೆಯೊಳ್ = ಕೆಲವು ತಾವಿನಲ್ಲಿ, ಅತ್ವಂ ಹ್ರಸ್ವೈತ್ವ ತತ್ವಂ = ಅಕಾರಮುಂ ಹ್ರಸ್ವವೆಕಾರಮುಂ ಕೂಡಿದ ತಕಾರಂ, ಅದು, ಆಗುವುದು.

**ವೃತ್ತಿ** - ಇಕಾರದೊಳಂ, ಉಕಾರದೊಳಂ, ಎಕಾರದೊಳಂ ಕೂಡಿದ ಭಾವಾರ್ಥದ ವಕಾರಮಿರ್ದೊಡೆ ಅದಱ ಪಿಂದೆ ಅಕಾರಮಕ್ಕುಂ; ಅತ್ವಮೆತ್ವಮಂ ತಳೆದ ತಕಾರಂ ಕೆಲವಡೆಯೊಳಕ್ಕುಂ.

**ಪ್ರಯೋಗಂ** -

ವಕಾರಕ್ಕೆ -

ತೊಱವಿ, ಅಳವಿ, ಬಳವಿ; ಪಟಿವು, ಕೆಳವು, ತೆಱವು, ಎರವು; ಮಱವೆ, ತೆಱವೆ, ಪಟಿವೆ, ಎಳವೆ.

ವ್ಯಂಜನದ ಮೇಲಣತ್ವಕ್ಕೆ -

ನಿಲವು, ಒಲವು, ಕಳವು, ಸಲವು, ಗೆಲವು, ಇರವು, ಬರವು.

ಪಿರಿದೆಂಬುದಱಿಂದತ್ವಮಿಲ್ಲದಲ್ಲಿಯುಂ ಇವಾದುವು -

ಉಱುವು, ಕಱಿವು, ತಿಳಿವು, ಅಱಿವು, ಪಱುವು.

ತಕಾರಕ್ಕೆ -

ಅಱಿತಂ, ಕಡಿತಂ, ಉರಿತಂ, ಏತಂ, ಓತಂ; ಏರ್ತಂ, ಪೋರ್ತಂ.

ತೆಕಾರಕ್ಕೆ -

ಅಗಱ್ತೆ, ಪೊಗಱ್ತೆ, ನೆಗಱ್ತೆ, ಪುಗುತೆ.

**ಸೂತ್ರಂ ॥ ಪ್ರಕಟಂ ಚೇತನಭಾವದೊ ।**
**ಳಿಕೆ ತನಮುಮೆಯಕ್ಕುಮುಱುದ ಭಾವದೊಳಮೆಯುಂ ॥**
**ಗೆ ಕೆ ಮೆಗಳುಮುತ್ವದಿತ್ವದ ।**
**ಪಕಾರಮುಂ ಮತ್ತುಕಾರಮುಂ ಸಮನಿಸುಗುಂ ॥ ೨೧೧ ॥**

**ಟೀಕೆ** - ಚೇತನಭಾವದೊಳ್ = ಚೈತನ್ಯ ಭಾವದಲ್ಲಿ, ಇಕೆ ತನಂ ಉಮೆ (ಎಂಬ), ಪ್ರತ್ಯಯಂ, ಪ್ರಕಟಂ = ಪ್ರಸಿದ್ಧಂ, ಅಕ್ಕುಂ = ಆಗುವುದು; ಉಱುದ ಭಾವದೊಳ್ = ಚೇತನಭಾವವಲ್ಲದುಱುದ ಭಾವದಲ್ಲಿ, ಅಮೆಯುಂ = ಅಮೆ ಎಂಬ ಪ್ರತ್ಯಯಮುಂ; ಗೆ ಕೆ ಮೆಗಳುಂ = ಗೆ ಪ್ರತ್ಯಯ, ಕೆ ಪ್ರತ್ಯಯ, ಮೆ ಪ್ರತ್ಯಯಂಗಳ್, ಉತ್ವದ = ಉಕಾರದ, ಇತ್ವದ = ಇಕಾರದ, ಪಕಾರಮುಂ = ಪತ್ವಮುಂ, ಮತ್ತೆ = ಬೞಿಕಂ, ಉಕಾರಮುಂ = ಉ ಪ್ರತ್ಯಯಮುಂ, ಸಮನಿಸುಗುಂ = ಬರ್ಪುವು.

**ವೃತ್ತಿ** - ಚೇತನಭಾವದೊಳಿಕೆಯೆಂಬುದುಂ ತನಮೆಂಬುದುಂ ಉಮೆಯೆಂಬುದುಂ ಅಕ್ಕುಂ; ಉಱುದ ಭಾವದೊಳ್ ಅಮೆ ಎಂದುಂ, ಗೆ ಎಂದುಂ, ಕೆ ಎಂದುಂ, ಮೆ ಎಂದುಂ, ಪು ಎಂದುಂ, ಪಿ ಎಂದುಂ, ಉ ಎಂದುಂ ಅಕ್ಕುಂ.

**ಪ್ರಯೋಗಂ -**

ಇಕೆಗೆ -

ಉನ್ನತಿಕೆ, ಉದ್ಧತಿಕೆ, ಆಯತಿಕೆ, ಪನ್ನತಿಕೆ, ಬಲ್ಗಂಡಿಕೆ, ಮಾನಸಿಕೆ, ಮಾಸರಿಕೆ.

ಇಕೆಗೆ ದ್ವಿತ್ವಮುಂಟು -

ಉನ್ನತಿಕ್ಕೆ, ಉದ್ಧತಿಕ್ಕೆ.

ವ್ಯಂಜನಾಂತದ ಮೇಲೆ ಇಕೆಯುಂ ಪತ್ತಿಸಲಾಗದು -

ಕಾಣಿಕೆ, ಪೂಣಿಕೆ, ಜಾಣಿಕೆ, ತೆರಳಿಕೆ - ಎಂದೊಡೆ ದೋಷಂ.

ಕಂ ॥ ದ್ರೋಣಂಗಂ ನಿನಗಂ ಬಿ
ಲ್ಜಾಣಿಕೆಯದು ಸಕ್ಕಸಮನೆ? ... ೧

~~~~~~~~~~~~~~~~~~

೧. (ಈ ಲಕ್ಷ್ಯ ಪ್ರಥಮ ಪರಿಷ್ಕರಣದಲ್ಲಿಲ್ಲ.)
~~~~~~~~~~~~~~~~~~

ತನಕ್ಕೆ -

ಕಲಿತನಂ, ಚದುರತನಂ, ಆಳ್ತನಂ, ಜಾಣತನಂ, ಎಗ್ಗತನಂ, ಮರುಳ್ತನಂ, ಪೆಣ್ತನಂ. ಸಂಸ್ಕೃತದೊಳಿದು ಸಲ್ಲದು : ಆರೋಹಕತನಮೆಂಬುದಬದ್ಧಂ.

ಉಮೆಗೆ -

ತಕ್ಕುಮೆ.

ಅಮೆಗೆ -

ತೀರಮೆ, ಅಟ್ಕಿಮೆ.

ಗೆಕಾರಕ್ಕೆ -

ಉಡುಗೆ, ಪಸುಗೆ, ಪೊಲ್ಗೆ, ಬಿಸುಗೆ, ಪಣ್ಣುಗೆ, ಪತ್ತುಗೆ.

ಕೆಕಾರಕ್ಕೆ -

ಮಡಿಕೆ, ಹಡಿಕೆ, ಕಾಣ್ಕೆ, ಪೂಣ್ಕೆ, ತೆರಳ್ಕೆ, ನಿಮಿರ್ಕೆ, ತೋರ್ಕೆ.

ಮೆಕಾರಕ್ಕೆ -

ಒಲ್ಮೆ, ಬಲ್ಮೆ, ಜಾಣ್ಮೆ, ಕಡುಮೆ, ಮೈಮೆ, ಕೂರ್ಮೆ, ಪೆರ್ಮೆ.

ಪುಕಾರಕ್ಕೆ -

ಪಡೆಪು, ಪರೆಪು, ಕಡುಪು, ಬಲ್ಪು, ಮೆಲ್ಪು, ತಣ್ಪು, ನುಣ್ಪು, ಕರ್ಪು, ಪಸುರ್ಪು, ಕೆಂಪು, ಪೆಂಪು, ಬಿಸುಪು.

ಪಿಕಾರಕ್ಕೆ -

ಕಲ್ಪಿ, ನೋಂಪಿ.

ಉಕಾರಕ್ಕೆ -

ಉಗ್ಗು, ಸಿಗ್ಗು, ಎಗ್ಗು, ಕಿವುಡು, ಕೆಂಚು, ಗುಜ್ಜು, ಬೆಜ್ಜು.

**ಸೂತ್ರಂ ॥ ಪಿರಿದೆಂಬೀ ರೇಫಕ್ಕಾ ।**
**ಚರಿಪರ್ ಭಾವಾರ್ಥಮಪ್ಪುದೊಂದು ಪುಕಾರಂ ॥**
**ಪರಮಾಗೆ ಬಿಂದುವಂ ವಾ ।**
**ಕ್ಪರಿಣತರಿಂ ಸಿದ್ಧಮಾಯ್ತು ಪೆಂಪೆಂಬ ಪದಂ ॥ ೨೧೨ ॥**

**ಟೀಕೆ -** ಭಾವಾರ್ಥಂ, ಅಪ್ಪುದು = ಆಗುವುದಾದ, ಒಂದು ಪುಕಾರಂ = ಒಂದು ಪು ಪ್ರತ್ಯಯಂ, ಪರಮಾಗೆ, ಪಿರಿದೆಂಬೀ ರೇಫಕ್ಕೆ = ಪಿರಿದು ಎಂಬ ಶಬ್ದದ ರೇಫೆಗೆ, ಬಿಂದುವಂ = ಸೊನ್ನೆಯಂ, ಅಚರಿಪರ್ = ಪೇಟ್ವಿರ್; ವಾಕ್ಪರಿಣತರಿಂ = ವಾಕ್ಪ್ರೌಢರಿಂದೆ, ಪೆಂಪೆಂಬ ಪದಂ = ಪೆಂಪು ಎಂಬ ಪದಂ. ಸಿದ್ಧಂ = ಪ್ರಸಿದ್ಧಂ, ಆಯ್ತು = ಆಯಿತ್ತು.

**ವೃತ್ತಿ** - ಭಾವಾರ್ಥದ ಪುಕಾರಂ ಪರಮಾಗೆ, ಪಿರಿದೆಂಬ ರೇಫಕ್ಕೆ ಬಿಂದುವುಂ ಪೆಜಿಗಣೆತ್ವಕ್ಕೆತ್ವಮುಮಕ್ಕುಂ.

**ಪ್ರಯೋಗಂ -**

ಪೆಂಪು.

ಭಾವದೊಳ್ ಕ ಪ್ರತ್ಯಯಮುಂಟು -

ಉಡುಕಂ, ನಡುಕಂ ಎಂಬಂತೆ.

**ಸೂತ್ರಂ ॥ ಮೊದಲಿತ್ವಕ್ಕೇತ್ವಮುಮು ।**
**ತ್ವದೊಳೋತ್ವಮುಮೆಸೆವ ದೀರ್ಘಮುಂ ಚರಮಕ್ಕ ॥**
**ತ್ವದ ವಿಧಿಯುಂ ಧಾತುಗೆ ಭಾ ।**
**ವದೊಳಕ್ಕುಂ ಧಾತು ನಿಜದೆ ಭಾವಮದಕ್ಕುಂ ॥ ೨೧೩ ॥**

**ಟೀಕೆ -** ಧಾತುಗೆ = ಧಾತುಗಳ್ಗೆ, ಭಾವದೊಳ್ = ಭಾವಾರ್ಥದಲ್ಲಿ, ಮೊದಲ = ಆದಿಯ, ಇತ್ವಕ್ಕೆ = ಇಕಾರಕ್ಕೆ, ಎತ್ವಮುಂ = ಎಕಾರಮುಂ, ಉತ್ವದೊಳ್ = ಉಕಾರದಲ್ಲಿ, ಒತ್ವಮುಂ = ಒಕಾರಮುಂ, ಎಸೆವ = ಒಪ್ಪುವ, ದೀರ್ಘಮುಂ, ಚರಮಕ್ಕೆ = ಅಂತ್ಯಕ್ಕೆ, ಅತ್ವದ ವಿಧಿಯುಂ = ಅ ಕಾರದ ವಿಧಿಯುಂ, ಅಕ್ಕುಂ = ಅಪ್ಪುದು; ಧಾತು, ನಿಜದೆ = ನಿಜದಿಂದೆ, ಭಾವಂ = ಭಾವಾರ್ಥಂ, ಅಕ್ಕುಂ = ಆಗುವುದು.

**ವೃತ್ತಿ -** ಭಾವದೊಳ್ ಧಾತುವಿನ ಮೊದಲಿಕಾರಕ್ಕೇಕಾರಮುಂ ಉತ್ವದೊಳೋತ್ವಮುಂ ಹ್ರಸ್ವಕ್ಕೆ ದೀರ್ಘಮುಮಕ್ಕುಂ; ಧಾತುವಿನ ಕಡೆಯೊಳತ್ವಮಕ್ಕುಂ; ಸಹಜಧಾತುವುಂ ಭಾವಮಕ್ಕುಂ.

**ಪ್ರಯೋಗಂ -**

ಏತ್ವಕ್ಕೆ -

ಕಿಡು, ಇಸು ಧಾತುಗಳ್ಗೆ ಕೇಡು, ಏಸು.

ಓತ್ವಕ್ಕೆ -

ಕೋಡು, ತೋಡು(ತೋಡೆಂಬುದು ಜೆಟ್ಟಿಯೊಳಮೆಣೆಯೊಳಮುಂಟು.)

ದೀರ್ಘಕ್ಕೆ -

ಈಡು, ಬೀಡು, ಸೂಡು.

ಕಡೆಯಣತ್ವಕ್ಕೆ -

ಆಟಂ, ಪಾಟಂ,ತೀಟಂ, ನೋಟಂ.

ನಿಜಧಾತುಗೆ -

ತಡೆ, ನಡೆ, ಬೀಸು, ಪೆರ್ಚು, ಮರ್ಚು, ಉರ್ಕು, ಸೊರ್ಕು, ದಾಂಟು, ಕೂಂಟು.

**ಸೂತ್ರಂ ॥ ವೋಲೆಂಬಂತೆಂಬೆರಡುಂ ।**
**ಪೋಲಿಸುವೆಡೆಗಾದುವಂತೆವೋಲೆನಲಕ್ಕುಂ ॥**
**ವೋಲೊಳ್ ಹ್ರಸ್ವಮುಮಕ್ಕುಂ ।**
**ಮೇಲತ್ವಕ್ಕುಂಟು ಬಿಂದು ವತ್ವಂ ಬತ್ವಂ ॥ ೨೧೪ ॥**

**ಟೀಕೆ -** ಪೋಲಿಸುವೆಡೆಗೆ = ಪೋಲಿಸುವ ತಾವಿಂಗೆ, ವೋಲೆಂಬಂತೆಂಬೆರಡುಂ = ವೋಲ್ ಎಂಬ ಅಂತೆ ಎಂಬ ಎರಡುಂ, ಆದುವು = ಸಲುವಳಿಯಾಮುವು; ಅಂತೆವೋಲೆನಲ್ = ಅಂತೆವೋಲ್ ಎಂದು ಪೇೞಲ್,

ಅಕ್ಕುಂ = ಆಗುವುದು; ವೋಲೊಳ್ = ವೋಲ್ ಎಂಬುದಱಲ್ಲಿ, ಹ್ರಸ್ವಮುಂ, ಅಕ್ಕುಂ = ಆಗುವುದು; ಮೇಲೆ = ಆ ಮೇಲೆ, ಅತ್ವಕ್ಕೆ = ಅಕಾರಾಂತಶಬ್ದಕ್ಕೆ, ಬಿಂದು = ಸೊನ್ನೆ, ಉಂಟು = ಉಂಟಾಗುವುದು; ಪತ್ವಂ = ವಕಾರಂ, ಬತ್ವಂ = ಬಕಾರಂ, ಆಗುವುದು.

**ವೃತ್ತಿ** - ವೋಲೆಂಬುದುಂ ಅಂತೆ ಎಂಬುದುಂ ಉಪಮೆಯೊಳ್ ಪ್ರತ್ಯೇಕಂ ಪತ್ತುಗುಂ; ಅಂತೆವೋಲೆಂಬೆರಡುಮನೊಂದುಮಾಡಿ ಪೇೞ್ದೊಡಂ ಪುನರುಕ್ತ ದೋಷಮಿಲ್ಲ; ವೋಲೆಂಬುದು ವಿಕಲ್ಪದಿಂ ಹ್ರಸ್ವಮುಮಕ್ಕುಂ; ಅದಂತಕ್ಕೆ ಮುಂದೆ ವಕಾರಂ ಬಿಂದುವೆರಸು ಬಕಾರಮಕ್ಕುಂ.

**ಪ್ರಯೋಗಂ -**

ಕಂ ॥ ಜಲನಿಧಿವೋಲ್ ಗಂಭೀರಂ ।
ಬಲವೈರಿಯ ವೋಲ್ ಸಮಗ್ರವಿಭವಸನಾಥಂ ॥
ಕುಲಗಿರಿವೋಲ್ ನಿಷ್ಕಂಪಂ ।
ಬಲಿಯಂತೆವೊಲಧಿಕದಾನಿ ದಾನವಿನೋದಂ ॥ ೧

(ಕಾವ್ಯಾವಲೋಕನಂ ೬೬೭)

ಕಂ ॥ ಗಿರಿಯಂತೆ ಬಿಣ್ಣದಂ ಸುರ ।
ಕರಿಯಂತೆ ಬಲಾಢ್ಯನಬ್ಧಿಯಂತೆ ಗಂಭೀರಂ ॥ ೨

ಚಂ ॥ ಮಾ ॥ ರವಿಸುತನಂತೆವೋಲಧಿಕದಾನಿ ಪರಾಕ್ರಮಿ ಸಿಂಗದಂತೆವೋಲ್ ... ೩

ಕಂ ॥ ... ಆ
ಮುನೀಶ್ವರಂ ಶಾಂತರಸದ ಕಡಲವೊಲಿರ್ದಂ. ೪

ಮ ॥ ಸ್ರ ॥ ನಿಜತೇಜಂ ನೀಳ್ದ ಕರ್ನೆಯ್ದಿಲವೊಲಿರೆ ತನುಚ್ಛಾಯೆಯಿಂ ... ೫

ಕಂ ॥ ... ಬಲಿಯಂತೆವೊಲಧಿಕದಾನಿ ದಾನವಿನೋದಂ. ೬

ಕಂ ॥ ಇಂದ್ರಂಬೋಲ್ ವಿಭವಯುತಂ ।
ಚಂದ್ರಂಬೋಲ್ ಕಾಂತಿವಂತನಾದಿತ್ಯಂಬೋಲ್ ॥
ಸಾಂದ್ರಪರಿಪೂರ್ಣತೇಜನು ।
ಪೇಂದ್ರಂಬೋಲ್ ನೀತಿನಿಪುಣನಾ ನರನಾಥಂ ॥ ೭

**ಸೂತ್ರಂ ॥ ಒದವಿರ್ಕುಂ ಸಂಸ್ಕೃತವೆ ।**
**ನ್ನದೆ ಕನ್ನಡವೆನ್ನದಾಯಿಲ ಪ್ರತ್ಯಯಮಂ ॥**
**ತದು [1]ತಾನಿವು ಮೊದಲಾಗಱಿ**
**ವುದನ್ವಿತರ್ ಮಿಕ್ಕ ತದ್ಧಿತಪ್ರತ್ಯಯಮಂ ॥ ೨೧೫ ॥**

**ಟೀಕೆ** - ಸಂಸ್ಕೃತವೆನ್ನದೆ = ಸಂಸ್ಕೃತ ಶಬ್ದವೆನ್ನದೆ, ಕನ್ನಡವೆನ್ನದೆ = ಕರ್ಣಾಟಕ ಶಬ್ದವೆನ್ನದೆ, ಆಯಿಲ (ಎಂಬ) ಪ್ರತ್ಯಯಂ, ಅಂತು, ಅದು ತಾಂ, ಒದವಿರ್ಕುಂ = ಬರ್ಪುದು; ಇವು ಮೊದಲಾಗಿ, ಅನ್ವಿತರ್ = ವಿದ್ವಾಂಸರ್, ಮಿಕ್ಕ, ತದ್ಧಿತಪ್ರತ್ಯಯಮಂ = ತದ್ಧಿತಪ್ರತ್ಯಯಂಗಳಂ, ಅಱಿವುದು = ತಿಳಿವುದು.

~~~~~~~~~~~~~~~~~~

೧. (ತಾವಿವು)
~~~~~~~~~~~~~~~~~~

**ವೃತ್ತಿ** - ಸಂಸ್ಕೃತವೆಂಬ ಕರ್ಣಾಟಕವೆಂಬ ವಿವರಣೆಯಿಲ್ಲದೆ ಆಯಿಲಪ್ರತ್ಯಯಮೆಲ್ಲಿಯುಂ ಪತ್ತುಗುಂ.

**ಪ್ರಯೋಗಂ** -

ಸಂಸ್ಕೃತಕ್ಕೆ -

ಗಾಢಾಯಿಲಂ, ರೇಖಾಯಿಲಂ.

ಕನ್ನಡಕ್ಕೆ -

ಓಜಾಯಿಲಂ, ಅಡ್ಡಾಯಿಲಂ, ಗೋಟಾಯಿಲಂ, ಪುಗ್ಗಾಯಿಲಂ.

ಈ ಪೇೞ್ದುವು ಮೊದಲಾಗಿ, ನಡೆವಳಿ, ನುಡಿವಳಿ, ಸಲ್ವಳಿ ಎಂಬಂತೆ, ವಳಿಪ್ರತ್ಯಯಂ ಮುಂತಾದುೞಿದ ಪ್ರತ್ಯಯಂಗಳಂ ಶಾಬ್ದಿಕರಿನನ್ವಿತರಱಿವುದು.

ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಶಲ್ಯ
ಚಾರುಚುಂಬಕಾಯಮಾನಾನೂನ ಕರ್ಣಾಟಕಲಕ್ಷಣಶಿಕ್ಷಾಚಾರ್ಯ ಸುಕವಿ
ಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ತದ್ಧಿತಪ್ರತ್ಯಯನಿರೂಪಣಮೆಂಬ
ಚತುರ್ಥಸಂಧಿ ಸಂಪೂರ್ಣಂ

# ಐದನೆಯ ಸಂಧಿ

## ಆಖ್ಯಾತಪ್ರಕರಣಂ

**ಸೂತ್ರಂ ॥ ಕ್ರಿಯೆಯರ್ಥದ ಮೂಲಂ ಪ್ರ ।**
**ತ್ಯಯರಹಿತಂ ಧಾತುವದನಭಾವಕ್ರಿಯೆಯೊಳ್ ॥**
**ನಿಯತಂ ನಿಶ್ಚಯಿಪುದು ಬುಧ ।**
**ಚಯಮಾ ಧಾತುಗೆ ವಿಭಕ್ತಿಯಾಱಾಗಿರ್ಕುಂ ॥ ೨೧೬ ॥**

**ಟೀಕೆ –** ಕ್ರಿಯೆಯ, ಅರ್ಥದ = ಅರ್ಥಕ್ಕೆ, ಮೂಲಂ = ಆದಿಯಾದ, ಪ್ರತ್ಯಯ = ವಿಭಕ್ತಿಯಿಂದೆ, ರಹಿತಂ = ವಿರಹಿತಮಾದುದು, ಧಾತು = ಧಾತುವೆನಿಸುವುದು; ಅದಂ = ಧಾತುವಂ, ಅಭಾವಕ್ರಿಯೆಯೊಳ್ = ಪ್ರತಿಷೇಧದ ಕ್ರಿಯೆಯಲ್ಲಿ, ನಿಯತಂ = ಕಟ್ಟಾಗಿ, ಬುಧಚಯಂ = ವಿದ್ವತ್ಸಮೂಹಂ, ನಿಶ್ಚಯಿಪುದು; ಆ ಧಾತುಗೆ = ಆ ಧಾತುಗಳ್ಗೆ, ವಿಭಕ್ತಿ = ಪ್ರತ್ಯಯಂ, ಆಱಾಗಿ = ಆರು ತೆಱನಾಗಿ, ಇರ್ಕುಂ = ಇರ್ಪುದು.

**ವೃತ್ತಿ –** ಕ್ರಿಯಾರ್ಥದ ಮೂಲಂ ವಿಭಕ್ತಿರಹಿತಂ ಧಾತುವೆಂಬುದು; ಆ ಧಾತುವಂ ಪ್ರತಿಷೇಧದ ಕ್ರಿಯೆಯ ವಿಭಕ್ತಿಯಂ ಕಳೆಯೆ ಕಾಣಲಕ್ಕುಂ; ಧಾತುಗಳ್ಗೆ ವಿಭಕ್ತಿಗಳಾಱಾಗಿರ್ಪುವು.

**ಪ್ರಯೋಗಂ –**

ಧಾತು ನಿರ್ಧಾರಣೆಗೆ –

ಮಾಡಿದಂ ಎಂಬ ಕ್ರಿಯೆಗೆ ಪ್ರತಿಷೇಧಮಾಗೆ, ಮಾಡಂ ಎಂದಿರ್ಪುದು; ಅಲ್ಲಿ ಅಮ್ ಎಂಬ ವಿಭಕ್ತಿಯಂ ಕಳೆಯೆ ಮಾಡು ಎಂದೆ ನಿಲ್ವುದು. ಈ ತೆಱದಿಂ ಕೂಡು, ನೋಡು, ತೀಡು, ಕಾಡು, ಸೂಡು ಎಂಬಿವಾದಿಯಾಗಱುವುದು.

**ಸೂತ್ರಂ ॥ ಅಮರಯಿರೆನೆವುಗಳಕ್ಕುಂ ।**
**ಕ್ರಮದೇಕಾನೇಕವಚನದೊಳ್ ಪ್ರತ್ಯೇಕಂ ॥**
**ಸಮನಿಸೆ ಯುಗಳತೆಯಾಖ್ಯಾ ।**
**ತಮಾರ್ಗದೊಳ್ ನೆಲಸಿ ನಿಂದ ಪುರುಷತ್ರಯಕಂ ॥ ೨೧೭ ॥**

**ಟೀಕೆ –** ಆಖ್ಯಾತಮಾರ್ಗದೊಳ್ = ಕ್ರಿಯಾಪದಸಿದ್ಧಿಯಂ ಮಾಡುವಾಖ್ಯಾತಮಾರ್ಗದಲ್ಲಿ, ನೆಲಸಿ = ನೆಲೆಗೊಂಡು, ನಿಂದ, ಪುರುಷತ್ರಯಕಂ = ಪ್ರಥಮಪುರುಷ ಮಧ್ಯಮಪುರುಷ ಉತ್ತಮಪುರುಷಂಗಳೆಂಬ ಪುರುಷತ್ರಯಕ್ಕೆಯುಂ, ಕ್ರಮದೆ, ಏಕಾನೇಕ ವಚನದೊಳ್ = ಏಕವಚನ ಬಹುವಚನಂಗಳಲ್ಲಿ, ಪ್ರತ್ಯೇಕಂ = ಬೇಱೆ ಬೇಱೆ, ಯುಗಳತೆ = ಎರಡೆರಡು, ಸಮನಿಸೆ = ಬರೆ, ಅಮರಯಿರೆನೆವುಗಳ್ = ಅಮ್ ಅರ್, ಅಯ್ ಇರ್, ಎನ್ ಎವು - ಎಂಬಾಱು ವಿಭಕ್ತಿಗಳ್, ಅಕ್ಕುಂ = ಅಪ್ಪುವು.

**ಪ್ರಯೋಗಂ -**

ಅಂಗೆ -

ಎಸೆದಂ, ಬೆಸೆದಂ, ಒಸೆದಂ, ಒಗೆದಂ, ಬಗೆದಂ, ನುಡಿದಂ, ನಡೆದಂ.

ಶಾ ॥ ವಿ ॥ ... ಬಗೆದಂ ಶ್ರೀ ಗಂಗಚಕ್ರಾಯುಧಂ ೧

ಶಾ ॥ ವಿ ॥ ... ಎತ್ತಿ ನಡೆದಂ ವೈರೀಭಕಂಠೀರವಂ ೨

ಅರ್ಗೆ -

ಆಡಿದರ್, ಪಾಡಿದರ್; ಕಟ್ಟಿದರ್, ಮುಟ್ಟಿದರ್, ಮೆಟ್ಟಿದರ್.

ಉ ॥ ಮಾ ॥ ... ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್
ಮುಟ್ಟಿದರಿಕ್ಕಿ ಮೆಟ್ಟಿದರಿದೇನಳವಗ್ಗಳಮೋ ಕವೀಂದ್ರರಾ ೩
(ಲೀಲಾವತೀ ಪ್ರಬಂಧಂ ೧-೧೧)

ಅಯ್ಗೆ -

ನೋಡಿದಯ್, ಪಾಡಿದಯ್, ಆಡಿದಯ್, ತೆಗೆದಯ್, ಪೊರ್ದಿದಯ್

ಮ ॥ ವಿ ॥ ತೆಗೆದಯ್ ಮೋಕ್ಷದ ಬಟ್ಟೆಯಂ ... ೪
(ಲೀಲಾವತೀ ಪ್ರಬಂಧಂ ೩-೮೫)

ಮ ॥ ವಿ ॥ ... ಭೀಮಭೀಮಗದೆಯಿಂ ಪಂಚತ್ವಮಂ ಪೊರ್ದಿದಯ್ ೫
(ಸಾಹಸಭೀಮ ವಿಜಯಂ ೫-೫)

ಇರ್ಗೆ -

ಪೊರ್ದುವಿರ್, ತಿರ್ದುವಿರ್, [ಏಳಿಪಿರ್].

ಮ ॥ ವಿ ॥ ... ವಿಹಂಗಮಮಿದೆಂದೇಕಬ್ಬೆ ನೀಮೇಳಿಪಿರ್ ೬
(ಕಾವ್ಯಾವಲೋಕನಂ ೩೧೮)

ಎನ್ಗೆ -

ಅಮರ್ಚಿದೆಂ, ನಿಮಿರ್ಚಿದೆಂ, ಒಡರ್ಚಿದೆಂ, [ಬಣ್ಣಿಪೆಂ].

ಉ ॥ ಮಾ ॥ ... ಜನೋದಯಂಗಿದಂ
ಪೇಟಲೊಡರ್ಚಿದೆಂ ... ೭
(ಶೂದ್ರಕಂ ?)

ಉ ॥ ಮಾ ॥ ... ಬಣ್ಣಿಪೆನಾಂ ಜಯದಂಕಕಾಜಿನಂ ೮

ಎವುಗೆ -

ಕೇಳ್ದೆವು, ಕಂಡೆವು, ಉಸಿರ್ದೆವು, ಆಂಪೆವು

ಕಂ ॥ ... ಕೃಪನುಂ ಸಂ
ಗ್ರಾಮದೊಳಾಂಪೆವರಾತಿಯಂ ... ೯
(ಕಾವ್ಯಾವಲೋಕನಂ ೨೮೫)

**ಸೂತ್ರಂ ॥ ಬೆಳೆಯೆಂಬ ಧಾತು ಸಸ್ಯಾ ।**
**ವಳಿಯೊಳ್ ಬಳೆಯೆಂಬ ಧಾತು ಮಿಕ್ಕೆಡೆಯೊಳ್ ಸಂ ॥**
**ಗಳಿಕುಂ ತಿಳಿಯಲ್ಬರ್ಪುದು ।**
**ಬೆಳೆ ಬಳವಿಗಳೆಂಬ ಭಾವವಚನದ್ವಯದೊಳ್ ॥ ೨೧೮ ॥**

**ಟೀಕೆ** - ಸಸ್ಯಾವಳಿಯೊಳ್ = ಸಸಿಗಳ ಸಮೂಹದಲ್ಲಿ, ಬೆಳೆ ಎಂಬ ಧಾತು, ಸಂಗಳಿಕುಂ = ಬರ್ಪುದು; ಮಿಕ್ಕೆಡೆಯೊಳ್ = ಸಸ್ಯಾವಳಿಯಲ್ಲದುಟುದ ತಾವಿನಲ್ಲಿ, ಬಳೆ ಎಂಬ ಧಾತು, ಬರ್ಪುದು; ಬೆಳೆ ಬಳವಿಗಳ್,

ಎಂಬ, ಭಾವವಚನದ್ವಯದೊಳ್ = ಭಾವವಚನಂಗಳೆರಡಱಲ್ಲಿ, ತಿಳಿಯಲ್ಬರ್ಪುದು = ಅಱಯಲ್ ಬರ್ಪುದು.

**ವೃತ್ತಿ** - ಸಸ್ಯಾದಿ ತರು ಲತಾವಳಿಯ ಪೆರ್ಚುಗೆಯಂ ಪೇೞ್ವ ಧಾತುವಿನೊಳ್ ಬೆಳೆಯೆನಲ್ವೇೞ್ಕುಂ; ಉಱಿದ ವಸ್ತುವಿನ ಪೆರ್ಚುಗೆಯಂ ಪೇೞ್ವ ಧಾತುವಿನೊಳ್ ಬಳೆಯೆಂದಕ್ಕುಂ. ಬೆಳೆಯೆಂಬ ಧಾತುವಿನ ಭಾವವಚನಂ ಬೆಳೆಯೆಂದುಂ ಬೆಳಸೆಂದುಮಿರ್ಪುದು; ಬಳೆಯೆಂಬ ಧಾತುವಿನ ಭಾವವಚನಂ ಬಳವಿಯೆಂದಿರ್ಪುದು.

**ಪ್ರಯೋಗಂ** -

ಬೆಳೆಯೆಂಬುದರ್ಕೆ -

ಕಂ ॥ ನೆಲ್ಲುಂ ಕೌಂಗುಂ ಮಾವುಂ ।
ಮಲ್ಲಿಗೆಯುಂ ಬೆಳೆವುವಲ್ಲಿ ಕರ್ಬ್ಬಿನ ರಸದಿಂ ॥ ೧
(ಸೂಕ್ತಿಸುಧಾರ್ಣವಂ ೪-೫೧)

ಕಂ ॥ ಬೆಳೆಗಳ್ಕಳನಂ ಪೊಕ್ಕುವು ... ೨

ಕಂ ॥ ಬೆಳಸುಂ ಕುಂದದು ಪೊದಟ್ದಿ ಪಾಱನೊಳೆಂದುಂ ೩

ಬಳೆಯೆಂಬುದರ್ಕೆ -

ಕಂ ॥ ... ಮೃದುಮುಗ್ಧಾ
ಲಾಪಂ ಬಳೆದಂ ಸರಸ್ವತೀಮಣಿಹಾರಂ ॥ ೪
(ಆದಿಪುರಾಣಂ ೮-೧)

ಕಂ ॥ ... ತನುಜನ ಬಳವಿಯನೆ ನೋಡಿ ಜನಕಂ ನಲಿದಂ ೫

**ಸೂತ್ರಂ ॥ ವಿನುತಗುಣವಚನದೊಳ್ ಸ ।**
**ರ್ವನಾಮದೊಳ್ ಸಂಖ್ಯೆಯೊಳ್ ಪ್ರವರ್ತಿಪುವಾಖ್ಯಾ ॥**
**ತ ನಿಯುಕ್ತ [1]ವಿಭಕ್ತಿಗಳಿವು ।**
**ಘನತರ ಸಂಸ್ಕೃತ ಗುಣೋಕ್ತಿಯೊಳಮಮರ್ದಿರ್ಕುಂ ॥೨೧೯॥**

**ಟೀಕೆ** - ವಿನುತ = ಕೊಂಡಾಡಲ್ಪಟ್ಟ, ಗುಣವಚನದೊಳ್ = ಗುಣವಚನಂಗಳಲ್ಲಿ, ಸರ್ವನಾಮದೊಳ್ = ಸರ್ವನಾಮಂಗಳಲ್ಲಿ, ಸಂಖ್ಯೆಯೊಳ್ = ಸಂಖ್ಯಾವಾಚಿಗಳಲ್ಲಿ, ಆಖ್ಯಾತ = ಆಖ್ಯಾತದಲ್ಲಿ, ನಿಯುಕ್ತ = ಕೂಡಲ್ಪಟ್ಟ, ವಿಭಕ್ತಿಗಳ್ = ಪ್ರತ್ಯಯಂಗಳ್, ಅವು, ಪ್ರವರ್ತಿಪುವು = ಪ್ರವರ್ತಿಸುವುವು; ಘನತರ = ದೊಡ್ಡಿತ್ತಾದ, ಸಂಸ್ಕೃತ = ಸಂಸ್ಕೃತದ, ಗುಣೋಕ್ತಿಯೊಳಂ = ಗುಣವಚನಂಗಳಲ್ಲಿಯುಂ, ಅಮರ್ದು = ಪೊರ್ದುಗೆಯಾಗಿ, ಇರ್ಕುಂ = ಇರ್ಪುವು.

**ವೃತ್ತಿ** - ಗುಣವಚನದೊಳಂ ಸರ್ವನಾಮದೊಳಂ ಸಂಖ್ಯೆಯೊಳಂ ಸಂಸ್ಕೃತಗುಣೋಕ್ತಿಯೊಳಂ ಆಖ್ಯಾತವಿಭಕ್ತಿಗಳ್ ವರ್ತಿಸುಗುಂ.

~~~~~~~~~~~~~~~~

೧. (ವಿಭಕ್ತಿಗಳವು)
~~~~~~~~~~~~~~~~

**ಪ್ರಯೋಗಂ** -

ಕನ್ನಡ ಗುಣವಚನಕ್ಕೆ -

ಒಳ್ಳಿದಂ, ಒಳ್ಳಿದರ್; ಒಳ್ಳಿದಯ್, ಒಳ್ಳಿದಿರ್, ಒಳ್ಳಿದರಿರ್; ಒಳ್ಳಿದೆನ್, ಒಳ್ಳಿದೆವು, ಒಳ್ಳಿದರೆವು.

ಸರ್ವನಾಮಕ್ಕೆ -

ಪೆಱಂ, ಪೆಱರ್; ಪೆಱಯ್, ಪೆಱಿರ್, ಪೆಱರಿರ್; ಪೆಱೆನ್, ಪೆಱನೆನ್; ಪೆಱೆವು, ಪೆಱರೆವು.

ಸಂಖ್ಯೆಗೆ -

ಒರ್ವಂ, ಒರ್ವರ್; ಒರ್ವಯ್, ಒರ್ವಿರ್, ಒರ್ವರಿರ್; ಒರ್ವೆನ್, ಒರ್ವನೆನ್; ಒರ್ವೆವು, ಒರ್ವರೆವು.[೧]

ಸಂಸ್ಕೃತ ಗುಣವಚನಕ್ಕೆ -

ಉದ್ಧತಂ, ಉದ್ಧತರ್; ಉದ್ಧತನಯ್, ಉದ್ಧತರಿರ್, ಉದ್ಧತನೆನ್, ಉದ್ಧತರೆವು.

ಸಮುಚ್ಚಯದಿಂ ಗುಣವಚನಮಲ್ಲದಲ್ಲಿಯುಮುಂಟು -

ಕವಿಕೇಶವನೆಂ; ಮಲ್ಲಿಕಾರ್ಜುನಸುತನೆಂ; ದೌಹಿತ್ರನೆಂ; ಪೆಂಡತಿಯೆಂ.

**ಸೂತ್ರಂ ॥ ಆದೇಶಮಾಗಿ ಮುಂ ಗ ।**
**ಳ್ಗಾದರುವದು ನಿಲ್ಕುಮಿರ್ಗಮೆವುಗಂ ಪೂರ್ವ ॥**
**ಕ್ಕಾದಿಗೆ ನತ್ವಮದೆನ್ವರ ।**
**ಮಾದೊಡೆ ಕೆಲರಿಂದೆ ಬಿಂದುವೆವುವಿನ ವತ್ವಂ ॥ ೨೨೦ ॥**

**ಟೀಕೆ** - ಮುಂ ಗಳ್ಗೆ = ಮುನ್ನಿನ ಗಳಾಗಮಕ್ಕೆ, ಆದೇಶಮಾಗಿ, ಆದರು = ಆದ ಅರು (ಅರ್) ಆಗಮಂ, ಅದು, ಇರ್ಗಂ = ಇರೆಂಬಾಖ್ಯಾತ ವಿಭಕ್ತಿಗಂ, ಎವುಗಂ = ಎವು ಎಂಬಾಖ್ಯಾತ ವಿಭಕ್ತಿಗಂ, ಪೂರ್ವಕ್ಕೆ = ಮೊದಲ್ಗೆ, ನಿಲ್ಕುಂ = ಆಗಮವಾಗಿ ನಿಲ್ವುದು; ಎನ್ = ಎನ್ ಎಂಬುದು, ಅದು, ಪರಮಾದೊಡೆ, ಆದಿಗೆ = ಮೊದಲ್ಗೆ, ನತ್ವಂ = ನಕಾರವಪ್ಪುದು; ಕೆಲರಿಂದೆ = ಕೆಲಂಬರಿಂದೆ, ಎವುವಿನ = ಎವು ವಿಭಕ್ತಿಯ, ವತ್ವಂ = ವಕಾರಂ, ಬಿಂದು = ಸೊನ್ನೆಯಾಗುವುದು.

**ವೃತ್ತಿ** - ಪುರುಷ ಸ್ತ್ರೀ ವಿಷಯದೊಳ್ ಬಹುವಚನದ ಗಳ್ಗಾದೇಶಮಾಗಿ ಬಂದ ಅರ್ ಎಂಬುದು ಮಧ್ಯಮಪುರುಷದ ಇರ್ ಎಂಬುದಱಾದಿಯೊಳಂ ಉತ್ತಮಪುರುಷದೆವುವಿನಾದಿಯೊಳಂ ಕನ್ನಡದೊಳ್ ವಿಕಲ್ಪದಿಂ ಪತ್ತುಗುಂ; ಸಂಸ್ಕೃತ ಗುಣವಚನದೊಳ್ ನಿತ್ಯಂ; ಉತ್ತಮಪುರುಷದೆನ್ ಎಂಬುದಱಾದಿಗೆ ನತ್ವಮಕ್ಕುಂ; ಎವುವಿನ ವುಕಾರಂ ಕೆಲರಿಂ ಬಿಂದುವಕ್ಕುಂ.

**ಪ್ರಯೋಗಂ** - ಕನ್ನಡದೊಳ್ ವಿಕಲ್ಪದ ಅರ್ಗೆ -

~~~~~~~~~~~~~~~~

೧. (ಪರ್ಯಾಯರೂಪಗಳಲ್ಲಿ ಒಳ್ಳಿದನಯ್, ಒಳ್ಳಿದನೆನ್, ಪೆಱನಯ್, ಒರ್ವನಯ್ ಇವು ಪ್ರತಿಕಾರರ ಅಜಾಗರೂಕತೆಯಿಂದ ಲುಪ್ತವಾಗಿರಬಹುದು.)
~~~~~~~~~~~~~~~~

ಕೂರಿದಿರ್, ಕೂರಿದರಿರ್; ನೇರಿದಿರ್, ನೇರಿದರಿರ್

ಕಂ ॥ ಕೂರಿದರಿರ್ ಕಾಳೆಗದೊಳೆ
ನೇರಿದರಿರ್ ಕೂಡಿದ[ರೊಳೆ] ... ೧

ಪಿರಿಯೆವು, ಪಿರಿಯರೆವು

ಚಂ ॥ ಮಾ ॥ ಪಿರಿಯರೆವೆಂದು ಧಿಕ್ಕರಿಸಿ ಬಯ್ವುದು ತಕ್ಕುದೆ ... ೨

ಸಂಸ್ಕೃತದೊಳ್ ನಿತ್ಯದ ಅರ್ಗೆ -

ಕಂ ॥ ಕುಲವೃದ್ಧರಿರಾಪ್ತರಿರತಿ
ಬಲರಿರ್ ನಯವಿದರಿರೆಂದು ... ೩

... ಸಹೋದರರರೆವೆಂದೊಸೆದಾಳ್ವುದು ಭೃತ್ಯವಿತಾನಮಂ ... ೪

ನಕಾರಕ್ಕೆ -

ಪಿರಿಯನೆನ್, ಅಸಿಯನೆನ್

ಕಂ ॥ ಅಸಿಯಂತೆವೊಲಸಿಯನೆನಾಂ
ವಿಸಸನದೆಡೆಗೆ ... ೫

ಕಂ ॥ ... ಆಂ ಪೆಱನೆನೆಂದು ಬಗೆಯಲಿಮೀಗಳ್ ... ೬

ಉ ॥ ಮಾ ॥ ... ಒರ್ವನೆನೊರ್ವನೆಂ ಸಮರಕೇಳಿಯೊಳ್ ... ೭

ಕಂ ॥ ಅತಿಚತುರನೆಂ ಕಲಾಪಂ
ಡಿತನೆಂ ಕೃತಿಲಕ್ಷಣಾವಧಾನನೆನ್ ... ೮

ಎವುವಿನೊಳ್ ಬಿಂದುವಿನ ವಿಕಲ್ಪಕ್ಕೆ -

ನೋಡುವೆವು - ನೋಡುವೆಂ; ಪಾಡುವೆವು - ಪಾಡುವೆಂ.

ಕಂ ॥ ... ಎ
ಮ್ಮಾಳ್ದನೆಡಱನಾಮೆ ತಿರ್ದುವೆಂ ... ೯

ಉತ್ತಮ ಪುರುಷದ ಏಕವಚನದ ಎನ್‌ಗಾದ ಬಿಂದುವುಂ, ಆ ಬಹುವಚನದೆವುಗಾದ ಬಿಂದುವುಂ, ತಮ್ಮೊಳ್ಳೇಕರೂಪಮಾಗಿರ್ಪ್ಪುವು; ಅವಂ ಕ್ರಮದಿನಱಿವುದು - ಕೋಂಟೆಯಂ ಪತ್ತುವೆಂ; ವ್ಯಾಕರಣಮನೆಲ್ಲರುಂ ಕೇಳ್ವೆಂ ತಿಳಿವಿನಂ ಎಂಬಂತೆ.

**ಸೂತ್ರಂ ॥ ದ ದಪ ವಕಾರಂಗಳ್ ತ ॥
ಪ್ಪದೆ ಕಾಲತ್ರಯ ವಿಭಕ್ತಿಮೂಲದೊಳಕ್ಕುಂ ॥
ದ ದಪಾದಿಗಿದಾಗಮಮ ॥
ಪ್ಪುದು ವತ್ವಕ್ಕಿಲ್ಲದುಂ ತ್ರಿವಚನಾನುಗತಂ ॥ ೨೨೧ ॥**

**ಟೀಕೆ** - ಕಾಲತ್ರಯ ವಿಭಕ್ತಿಮೂಲದೊಳ್ = ಭೂತಕಾಲ ವರ್ತಮಾನಕಾಲ ಭವಿಷ್ಯತ್ಕಾಲಂಗಳೆಂಬ ಕಾಲತ್ರಯದ ವಿಭಕ್ತಿಗಳ ಮೊದಲಲ್ಲಿ, ತಪ್ಪದೆ, ದ ದಪ ವ ಕಾರಂಗಳ್ = ದಕಾರ ದಪಕಾರ ವಕಾರಂಗಳ್, ಅಕ್ಕುಂ = ಅಪ್ಪುವು; ದ ದಪಾದಿಗೆ ದಕಾರ ದಪಕಾರಂಗಳ ಮೊದಲ್ಗೆ, ಇದಾಗಮಂ = ಇತ್ ಎಂಬಾಗಮಂ,

ಅಪ್ಪುದು = (ಉಕಾರಾಂತಧಾತುವಿಂಗೆ) ಆಗುವುದು; ವತ್ವಕ್ಕೆ = ಭವಿಷ್ಯಂತಿಯ ವಕಾರಕ್ಕೆ, ಇಲ್ಲ = ಇದಾಗಮಂ ಬಾರದು; ಅದುಂ = ಆ ಇದಾಗಮವುಂ, ತ್ರಿವಚನ = ಏಕವಚನ ದ್ವಿವಚನ ಬಹುವಚನಂಗಳೆಂಬ ತ್ರಿವಚನಂಗಳಲ್ಲಿ, ಅನುಗತಂ = ಎಯ್ದಲ್ಪಡುವುದು.

**ವೃತ್ತಿ** - ದ ದಪ ವ ಎಂಬಾಗಮಂಗಳ್ ಪೋದ, ವರ್ತಿಪ, ಬರ್ಪ ಕಾಲತ್ರಯಂಗಳ್ಗೆ ಸೂಚಕಂಗಳಾಗೆ, ಪುರುಷತ್ರಯಂಗಳ ವಿಭಕ್ತಿಗಳ ಮೊದಲೊಳಪ್ಪುವು; ದ ದಪಂ ಗಳ ಪೆಱಗೆ ವಚನತ್ರಯದ ಮೇರೆಯಿಲ್ಲದೆ ಉಕಾರಾಂತಕ್ಕೆ ಇದಾಗಮಮಕ್ಕುಂ; ಭವಿಷ್ಯಂತಿಯ ವಕಾರಕ್ಕೆಯುಂ ಎಕಾರಾಂತ ಇಕಾರಾಂತ ವ್ಯಂಜನಾಂತಂಗಳ್ಗೆ ಪರಮಾದ ದ ದಪಂ ಗಳ್ಗೆಯುಂ ಇದಾಗಮಮಿಲ್ಲ.

**ಪ್ರಯೋಗಂ** -

ದಕಾರಕ್ಕೆ -

ಪಡೆದಂ, ಗೆಲ್ದಂ

ಕಂ ॥ ಪಡೆದಂ ರಜೋಧಿಕಂ ವಿಧಿ
ಪೆಡೆವಣೆಯಂ ಫಣೆಯಂ... ೧

(ರಾಮಚಂದ್ರಚರಿತ ಪುರಾಣಂ ೧ - ೩೨)

ಕಂ ॥ .... ಒರ್ವನೆ ಗೆಲ್ದಂ ನಿವಾತಕವಚಾಸುರರಂ ... ೨

ದಪಕ್ಕೆ -

ಎತ್ತಿದಪಂ, ಒತ್ತಿದಪಂ

ಉ ॥ ಮಾ ॥ ... ಮನ್ಮಥಚಕ್ರವರ್ತಿಯೆ
ಯ್ತಂದಪನಿಂದು ನಾಳೆ ಬರ್ದುಕಿಲ್ಲ ವಿಯೋಗಿಗೆ ಪಂಕಜಾನನೇ ೩

(ಸೂಕ್ತಿಸುಧಾರ್ಣವಂ ೧೦-೪೫)

ಕಂ ॥ ಮಾಡಿದಪಂ ಖಳಸಮಿತಿಗೆ
ಕೇಡಂ ತಕ್ಕರಂ ... ೪

(ಕಾವ್ಯಾವಲೋಕನಂ ೩೮೮)

ವಕಾರಕ್ಕೆ -

ಕುಡುವಂ, ಉಡುವಂ, [ಪಿಡಿವಂ, ಪಡೆವಂ].

ಮ ॥ ವಿ ॥ ಅಱುದಿಬ್ಬಂಬಿಡಿವಂತೆ ಕಯ್ದುವಿಡಿವಂ ... ೫

ಮ॥ ವಿ ॥ ಬಹುತಾಪಕ್ಕೆ ಬಿಗುರ್ತು ವಿಷ್ಣು ಪಡೆವಂ ಮತ್ಸ್ಯಾವತಾರಕ್ಕೆ ... ೬

(ರಾಮಚಂದ್ರಚರಿತ ಪುರಾಣಂ ೭-೯೮; ಸೂಕ್ತಿಸುಧಾರ್ಣವಂ ೧೦-೧೨೧)

ಪೆಱಗಣ ಇದಾಗಮಕ್ಕೆ -

ನೋಡಿದಂ, ಬೇಡಿದಂ; ತೂಗಿದಂ, ಬಾಗಿದಂ

ಉ ॥ ಮಾ ॥ ಒರ್ವನೆ ಮತ್ಸ್ಯನಂ ತಳರೆ ತಾಗಿದನಾಜಿಯೊಳ್ ... ೭

ಕಂ ॥ ಆ ನೃಪತಿ ನಾಡೆ ಕಿಡಿಸಿದ
ನಾ ನಾಡ ವಿರಾಟನ ... ೮

ಮಾಡಿದಪಂ, ಎತ್ತಿದಪಂ, [ಅಂಜಿಸಿದಪಂ, ಸಾಧಿಸಿದಪಂ]

ಮ ॥ ವಿ ॥ .... ಅಂಜಿಸಿದಪಂ ಮೂಲೋಕಮಂ ತಾರಕಂ ೯

ಕಂ ॥ ... ಸಾಧಿಸಿದಪನಿಂತು ಕಂತು ವಿರಹಿವ್ರಜಮಂ ... ೧೦

ಭವಿಷ್ಯಂತಿಯ ವಕಾರಕ್ಕೆಯುಂ ಎಕಾರಾಂತ ಇಕಾರಾಂತ ವ್ಯಂಜನಾಂತಗಳೆ (ಯುಂ) ಇದಾಗಮಮಿಲ್ಲದುದರ್ಕೆ -

ಬಿಗಿವಂ, ಬಿರಿವಂ, ಮುಚ್ಚುವಂ

ಮ ॥ ವಿ ॥ ... ಇನಂ
ತುಹಿನಾದ್ರೀಂದ್ರಮನೊತ್ತುಗೊಂಡು ನಡೆವಂ ...
... ಮರುತ್ತರಂಗಿಣಿಯನಂದಾಲಿಂಗನಂ ಮಾಡುವಂ ॥ ೧೧
(ರಾಮಚಂದ್ರಚರಿತ ಪುರಾಣಂ ೭-೯೮; ಸೂಕ್ತಿಸುಧಾರ್ಣವಂ ೧೦-೧೨೧)

ಬಿಗಿವಂ ಕಣ್ಣುಮುಚ್ಚಿಂ ... ೧೨

ಪಡೆದಂ, ಪಡೆದಪಂ; ಸಿಡಿದಂ, ಸಿಡಿದಪಂ; ಕಟಿಲ್ದಂ, ಕಟಿಲ್ದಪಂ.

**ಸೂತ್ರಂ ॥ ಪರಿಭಾವಿಸೆ ಕಾಲತ್ರಯ ।**
**ಪರಿಣಾಮಿಗಳೆನಿಸಿ ನೆಗಟ್ದ ಮೂಱುಂ ಕ್ರಿಯೆಯೊಳ್ ॥**
**ನಿರುತಂ ಪ್ರತಿಷೇಧಕ್ರಿಯೆ ।**
**ಬರೆ ಭೂತಾರ್ಥದೊಳೆ ಸಲ್ವುದೆಂಬರ್ ಪಿರಿಯರ್ ॥ ೨೨೨ ॥**

**ಟೀಕೆ** - ಪರಿಭಾವಿಸೆ = ವಿಚಾರಿಸೆ, ಕಾಲತ್ರಯದ = ಕಾಲತ್ರಯದಲ್ಲಿ, ಪರಿಣಾಮಿಗಳ್ = ಪರಿಣಾಮವುಳ್ಳವು, ಎನಿಸಿ, ನೆಗಟ್ದ ಮೂಱುಂ ಕ್ರಿಯೆಯೊಳ್= ಪ್ರಸಿದ್ಧಿವಡೆದ ಮೂಱುಂ ಕ್ರಿಯೆಗಳಲ್ಲಿ, ನಿರುತಂ = ನಿಶ್ಚಯವಾಗಿ, ಪ್ರತಿಷೇಧಕ್ರಿಯೆ, ಬರೆ = ಬಂದೊಡೆ, ಪಿರಿಯರ್ = ವಿದ್ವಾಂಸರ್, ಭೂತಾರ್ಥದೊಳೆ = ಭೂತಕಾಲದರ್ಥದಲ್ಲಿಯೆ, ಸಲ್ವುದು = ಸಲ್ವುದೆಂದು, ಎಂಬರ್ = ಪೇಟ್ವರ್.

**ವೃತ್ತಿ** - ಕಾಲತ್ರಯಂಗಳಂ ಪೇಟ್ವ ಮೂಱು ಕ್ರಿಯಾಪದಂಗಳಲ್ಲಿ ಪ್ರತಿಷೇಧಕ್ರಿಯೆ ಬರೆ, ಭೂತವತಿಯಾಗಿಯೆ ಸಲ್ವುದು.

**ಪ್ರಯೋಗಂ** -

ಮಾಡಿದನೆಂಬುದರ್ಕೆ ಮಾಡಂ; ಮಾಡಿದಪನೆಂಬುದರ್ಕಂ ಮಾಡಂ; ಮಾಡುವನೆಂಬುದರ್ಕಂ ಮಾಡಂ

**ಸೂತ್ರಂ॥ [೧]ಪುರುಷತ್ರಯಮುಂ ಸ್ವಾರ್ಥೋ ।**
**ಚ್ಚರಿತಂಗಳ್ ಯುಗಪದುಕ್ತಿಗುತ್ತಮಪುರುಷಂ॥**
**ಪರಮದನುೞಿದಿರೆ ಮಧ್ಯಮ ।**
**ಪುರುಷಂ ಕ್ರಮಗಣನಮಿರೆಯುಮೊಲ್ದಂತಿರೆಯುಂ ॥ ೨೨೩ ॥**

---

೧. (ಪುರುಷತ್ರಯಮವು)

**ಟೀಕೆ -** ಪುರುಷತ್ರಯಮುಂ = ಪ್ರಥಮ ಮಧ್ಯಮೋತ್ತಮಂಗಳೆಂಬ ಪುರುಷತ್ರಯಮುಂ, ಸ್ವಾರ್ಥೋಚ್ಚರಿತಂಗಳ್ = ಸ್ವತಂತ್ರಂಗಳಾಗಿ ತಮ್ಮರ್ಥದಲ್ಲಿ ಉಚ್ಚರಿಸಲ್ಪಟ್ಟುವು; ಕ್ರಮಗಣನಂ = ಕ್ರಮದಿಂ ಗಣನೆಯಾಗಿ, ಇರೆಯುಂ = ಇರ್ದೊಡೆಯುಂ, ಒಲ್ದಂತೆ = ಪಲ್ಲಟವಾಗಿ, ಇಚ್ಛೆ ಬಂದಂತೆ, ಇರೆಯುಂ = ಇರ್ದೊಡೆಯುಂ, ಯುಗಪದುಕ್ತಿಗೆ = ಒಂದಾಗಿ ನುಡಿಯುವುದರ್ಕೆ, ಉತ್ತಮಪುರುಷಂ, ಪರಂ = ಮುಖ್ಯಂ; ಅದಂ = ಆ ಉತ್ತಮಪುರುಷಮಂ, ಉೞಿದಿರೆ = ಬಿಟ್ಟರೆ, ಮಧ್ಯಮಪುರುಷಂ = ಮಧ್ಯಮಪುರುಷಂ, ಮುಖ್ಯವಾಗುವುದು.

**ವೃತ್ತಿ** - ಪುರುಷತ್ರಯಂಗಳ್ ತಮ್ಮರ್ಥಂಗಳೊಳ್ ಸ್ವತಂತ್ರಂಗಳ್; ಪುರುಷತ್ರಯಂ ಕ್ರಮದಿನಿರ್ದೊಡಂ ವ್ಯತ್ಯಯಮಾಗಿರ್ದೊಡಂ ಕೂಡಿ ನುಡಿವೆಡೆಯೊಳ್ ಉತ್ತಮಪುರುಷಕ್ಕೆ ಮುಖ್ಯತ್ವಂ; ಉತ್ತಮಪುರುಷಂ ಕಳೆದುೞಿದ ಪ್ರಥಮ ಮಧ್ಯಮಪುರುಷಂಗಳನು ಕ್ರಮದಿನಿರ್ದೊಡಂ ವ್ಯತ್ಯಯದಿನಿರ್ದೊಡಂ ಮಧ್ಯಮಪುರುಷಕ್ಕೆ ಮುಖ್ಯತ್ವಂ; ಯುಗಪದುಕ್ತಿಯೊಳ್ ಪ್ರಥಮಪುರುಷಕ್ಕೆ ಮುಖ್ಯತ್ವಮಿಲ್ಲ.

**ಪ್ರಯೋಗಂ -**

ಸ್ವತಂತ್ರಾರ್ಥಕ್ಕೆ -

ತಾನಿರ್ದಂ, ತಾಮಿರ್ದರ್; ನೀನ್ ಕಂಡಯ್, ನೀಂ ಕಂಡಿರ್; ಆನ್ ಕೇಳ್ದೆಂ, ಆಂ ಕೇಳ್ದೆವು.

ಉತ್ತಮಪುರುಷ ಮುಖ್ಯತ್ವಕ್ಕೆ -

ಆತನುಂ ನೀನುಮಾನುಂ ಪೊೞಗಾಗಿರ್ದೆವವನಿಪತಿಗೆ ಪಿಸುಣರಿಂ ೧

ವ್ಯತ್ಯಯಕ್ಕೆ -

ನೀನುಮಾತನುಮಾನುಂ ಮಣಿಕೂಟನಗರಕ್ಕೆ ಪೋಪೆವು. ೨

ಆತನುಮಾನುಂ ನೀನುಂ ಕಜ್ಜದ ತೆಱನನಱುದು ಪೇೞ್ದೆವು. ೩

ಆನುಂ ನೀನುಮಾತನುಂ ಬೆಸಕೆಯ್ವೆವು. ೪

ಮಧ್ಯಮಪುರುಷ ಮುಖ್ಯತ್ವಕ್ಕೆ -

ಆತನುಂ ನೀನುಂ ಕೂಡಿದಿರಪ್ಪೊಡೆ ಆಹವಕ್ಕೆ
ಕಿಚ್ಚುಂ ಗಾಳಿಯುಂ ಕೂಡಿದಂತೆ. ೫

ವ್ಯತ್ಯಯಕ್ಕೆ -

ನಾಳಿನ ದಿನದೊಳ್ ನೀನುಮಾತನುಂ ಕೂಡಿದಪಿರ್. ೬

**ಸೂತ್ರಂ ॥ ತಿಳಿ ತಾಂ ನೀನಾನೆಂಬ ।**
**ರ್ಥಳಂಬಿಗಳ್ ಪ್ರಥಮ ಮಧ್ಯಮೋತ್ತಮ ಪುರುಷಂ ॥**
**ಗಳವೇಕವಚನಮೊರ್ವನ ।**
**ಬಳಕೆಗೆ ಬಹುವಚನಮೆಲ್ಲರಂ ಪೇೞ್ವೆಡೆಯೊಳ್ ॥ ೨೨೪ ॥**

**ಟೀಕೆ -** ತಾಂ, ನೀಂ, ಆಂ, ಎಂಬ, ಅರ್ಥ = ಅರ್ಥದಲ್ಲಿ , ಳಂಬಿಗಳ್= ಆಲಂಬಮುಳ್ಳ ಶಬ್ದಂಗಳ್, ಪ್ರಥಮ ಮಧ್ಯಮೋತ್ತಮ ಪುರುಷಂಗಳ್= ಪ್ರಥಮಪುರುಷ ಮಧ್ಯಮಪುರುಷ ಉತ್ತಮಪುರುಷಂಗಳೆಂದು, ತಿಳಿ, ಅವು

= ಆ ಪುರುಷತ್ರಯಂಗಳ್; ಒರ್ವನ, ಬಱಿಕೆಗೆ = ಹೇೞುವುದರ್ಕೆ, ಏಕವಚನಂ, ಬರ್ಪುದು; ಎಲ್ಲರಂ = ಸರ್ವರಂ, ಪೇೞ್ವೆಡೆಯೊಳ್ = ಹೇೞ್ವ ತಾವಿನಲ್ಲಿ, ಬಹುವಚನಂ, ಬರ್ಪುದು.

**ವೃತ್ತಿ** - ತಾನ್ ನೀನ್ ಆನ್ ಎಂಬರ್ಥಮನಾಶ್ರಯಿಸಿ ಪುರುಷತ್ರಯಂಗಳಿರ್ಪುವು; ಅಲ್ಲಿಯೊರ್ವನಂ ಪೇೞ್ ವ್ವೆಡೆಯೊಳೇಕವಚನಮಕ್ಕುಂ, ಪಲಂಬರಂ ಪೇೞ್ವೆಡೆಯೊಳ್ ಬಹುವಚನಮಕ್ಕುಂ.

**ಪ್ರಯೋಗಂ** -

ತಾಂ ಎಂಬುದರ್ಕೆ -

ಕಂ ॥ ... ತಾನೆಚ್ಚಂ ಪೊಚ್ಚಮಲ್ಲದರಿವಾಹಿನಿಯಂ. ೧

ಕಂ ॥ ... ತಾವಾಂಪರೆ ಸವ್ಯಸಾಚಿಯೊಳ್ ತೊಡರ್ದಿಱಿಯಲ್ ೨

ನೀಂ ಎಂಬುದರ್ಕೆ -

ಮ ॥ ವಿ ॥ ... ಮರಣಕ್ಕನ್ನಿಂದೆ ನೀಂ ಮುಂಚಿದಯ್
ಮೊನೆಯೊಳ್ ಸೂೞ್ ತಡವಾಯ್ತು ... ೩
(ಸಾಹಸಭೀಮವಿಜಯಂ ೫-೭)

ನೀಮಿರೆ ಮತ್ತವಾರಣಮುಮಂ ತಾರಕಚಕ್ರವರ್ತಿಗೆ... ೪

ದೇವಾಸುರಮಂ ಕೇಳಿರೆ ನೀಂ ದೇವಾ ... ೫

ಆಂ ಎಂಬುದರ್ಕೆ -

ಕಂ॥ ಆನಱಿವೆಂ ಪೃಥೆಯಱಿವಳ್ ।
ದಾನವರಿಪುವಱಿವನರ್ಕನಱಿವಂ ದಿವ್ಯ ।
ಜ್ಞಾನಿ ಸಹದೇವನಱಿವಂ।
ನೀನಾರ್ಗೆಂದಾರುಮಱಿಯರಂಗಾಧಿಪತೀ ॥ ೬

(ಸಾಹಸಭೀಮವಿಜಯಂ ೫ - ೧೮)

ಕಂ॥ ಆಮಱಿವೊಡಮುಸಿರಲಮ್ಮೆವಾಳ್ದನ ಗತಿಯಂ ... ೭

**ಸೂತ್ರಂ॥ ಉದುವುವುವೆಂಬಾದೇಶಂ ।**
**ಪುದಿದಿರ್ಕುಂ ಪ್ರಥಮಪುರುಷದೇಕಬಹುತ್ವ ॥**
**ಕ್ಕೊದವಿರ್ದ ನಪುಂಸಕ ಲಿಂ ।**
**ಗದೊಳುದು ಭಾವಾರ್ಥದಲ್ಲಿಯುಂ ಸಂಗಳಿಕುಂ॥ ೨೨೫ ॥**

**ಟೀಕೆ** - ಒದವಿರ್ದ= ಬಂದು ಇರ್ದ, ನಪುಂಸಕಲಿಂಗದೊಳ್, ಪ್ರಥಮಪುರುಷದ, ಏಕಬಹುತ್ವಕ್ಕೆ = ಏಕವಚನ ಬಹುವಚನಂಗಳ್ಗೆ, ಉದು ಉವು, ಎಂಬಾದೇಶಂ, ಪುದಿದು = ಪ್ರವೇಶವಾಗಿ, ಇರ್ಕುಂ = ಇರ್ಪುವು; ಭಾವಾರ್ಥದಲ್ಲಿಯುಂ, ಉದು (ಎಂಬುದು), ಸಂಗಳಿಕುಂ= ಸಂಬಂಧವಾಗುವುದು. ಉಂ ಎಂಬ ಸಮುಚ್ಚಯದಿಂ ವಿಧ್ಯರ್ಥದಲ್ಲಿಯುಂ ಬರ್ಪುದೆಂಬರ್ಥಂ.

**ವೃತ್ತಿ** - ಪ್ರಥಮಪುರುಷದೇಕವಚನ ಬಹುವಚನಕ್ಕಾದೇಶಮಾಗಿ ನಪುಂಸಕಲಿಂಗದೊಳುದುವೆಂಬುದುಂ ಉವುವೆಂಬುದುಮಪ್ಪುವು. ಭಾವಾರ್ಥದೊಳುದುವುಂಟು.

**ಪ್ರಯೋಗಂ** - ಏಕವಚನಕ್ಕೆ -

ಬರೆದುದು, ನೆರೆದುದು, ಕರೆದುದು.

ಚಂ ॥ ಮಾ ॥ ಕರೆದುದು ಕಣ್ಣ ಬೆಳ್ಪನಧರಂ ಕುರುಳೋಳಿಗೆ ಸುರ್ಕಿನೋಲಗಂ
ಪರೆದುದು ... ೧
(ಸೂಕ್ತಿಸುಧಾರ್ಣವಂ ೭-೨೭)

ಕಂ ॥ ಮುತ್ತುದು ನೇಸಱ ತೇಜಂ
ಸತ್ತುದು ದಾವಾಗ್ನಿ ... ೨
(ಸೂಕ್ತಿಸುಧಾರ್ಣವಂ. ೧೦-೧೪೮)

ಕಂ ॥ ನಿಮಿರ್ದುವು ಪೊಳೆದುವಳುಂಕಿದು ।
ವಮರ್ದುವು ಚುಂಬಿಸಿದುವಪ್ಪಿದುವು ಸಂಭ್ರಮದಿಂ ॥
ಸಮದೃಷ್ಟಿಯಾಗಿ ಸಿಲ್ಕಿದು ।
ವೆಮೆಯಿಕ್ಕಲ್ಮಱೆದುವವಳ ಧವಳಕಟಾಕ್ಷಂ ॥ ೩

ಭಾವಕ್ಕೆ -

ಕಂ ॥ ... ಈವುದು ಕರ್ಣಂಗೆ ಸಹಜಮಾರೋಪಿತಮೇ ೪

ಕೂರ್ಪುದು, ಇರ್ಪುದು, ಮಾಳ್ಪುದು.

ಸಮುಚ್ಚಯವಶದಿಂ ವಿಧ್ಯರ್ಥದೊಳುದುವುಂಟು -

ರಕ್ಷಿಪುದೆನ್ನಂ, ಅವಧರಿಪುದು ಬಿನ್ನಪಮಂ ಎಂಬಂತೆ.

**ಸೂತ್ರಂ ॥ ನೆಗಟ್ದಾ ನಪುಂಸಕೈಕೋ ।**
**ಕ್ತಿಗೆ ಕೆಲರಿತುವಿತ್ತುವತ್ತುವೆಂದುಸಿರ್ವರ್ ನೆ ॥**
**ಟ್ಟಗೆ ಪುಗಿಸುವರಂತೇಕೋ ।**
**ಕ್ತಿಗೆ ತಾಂ ಸ್ತ್ರೀವಿಷಯಮಾಗಳಂತಸ್ಥಿತಿಯಂ ॥ ೨೨೬ ॥**

**ಟೀಕೆ** - ನೆಗಟ್ದ = ಪ್ರಸಿದ್ಧಿವಡೆದ, ಆ ನಪುಂಸಕೈಕೋಕ್ತಿಗೆ = ಆ ಉದುವೆಂಬ ನಪುಂಸಕಲಿಂಗದ ಏಕವಚನಕ್ಕೆ, ಕೆಲರ್, ಇತು, ಇತ್ತು , ಅತ್ತು , ಎಂದು, ಉಸಿರ್ವರ್ = ಬಹುಳದಿಂ ಪೇಳ್ವರ್; ಸ್ತ್ರೀವಿಷಯಂ = ಸ್ತ್ರೀಲಿಂಗದ ವಿಷಯಂ, ಆಗೆ, ಅಂತು, ಏಕೋಕ್ತಿಗೆ = ಏಕವಚನಕ್ಕೆ, ಅಳಂತಸ್ಥಿತಿಯಂ = ಅಳ್ ಎಂಬ ಪ್ರತ್ಯಯಾಂತದ ಸ್ಥಿತಿಯಂ, ತಾಂ = ವಿದ್ವಾಂಸರ್ ತಾಂ, ನೆಟ್ಟಗೆ = ವ್ಯಕ್ತವಾಗಿ, ಪುಗಿಸುವರ್.

**ವೃತ್ತಿ** - ನಪುಂಸಕಲಿಂಗದೇಕವಚನಕ್ಕೆ ಇತುವೆಂದುಂ ಇತ್ತುವೆಂದುಂ ಅತ್ತುವೆಂದುಂ ಅಕ್ಕುಂ* ; ಪ್ರಥಮಪುರುಷದೇಕವಚನಕ್ಕೆ ಸ್ತ್ರೀವಿವಕ್ಷೆಯಾಗೆ ಅಳ್ ಎಂದಕ್ಕುಂ.

*ವಿಚಾರಂ - ನಪುಂಸಕಲಿಂಗದ ಭೂತಕಾಲದ ಪ್ರಥಮಪುರುಷದೇಕವಚನಕ್ಕೆ ಇತು ಇತ್ತು ಅತ್ತು ಎಂಬಿವರ್ಕೆ ಆ ಭೂತಕಾಲದ ದಕಾರಂ ಬಹುಳವಾಗಿ ಬರ್ಪುದು; ಅದೆಂತೆಂದೊಡೆ - ಈ, ಓ, ಕಾ, ಕೀ, ಕೇ, ಪೂ, ಬೇ, ಬಾ, ಮೇ ಎಂಬೇಕಾಕ್ಷರಧಾತುಗಳ್ಗೆ ಪರದಲ್ಲಿ ದಕಾರಂ ನಿತ್ಯಂ; ಎಕಾರಾಂತಂಗಳಲ್ಲಿ ಇತು ಇತ್ತು ಎಂಬೆರಡರ್ಕೆ ದತ್ವಮಿಲ್ಲ; ವರ್ಗತೃತೀಯಾಂತದ ವರ್ಗಪ್ರಥಮಂಗಳಾಗುವಲ್ಲಿ ನಿತ್ಯಂ; ಇಕಾರಾಂತಂಗಳಲ್ಲಿ ವಿಕಲ್ಪಂ; ವ್ಯಂಜನಾಂತಂಗಳಲ್ಲಿ ಬಹುಳಂ; ಸರ್ವಧಾತುಗಳಲ್ಲಿಯುಂ ಅತ್ತು ಎಂಬುದರ್ಕೆ ದತ್ವಂ ನಿತ್ಯವಾಗಿ ಬರ್ಪುದು. ಇವನುದಾಹರಣೆಯ ಮುಖದಿಂದಱವುದು.

ಪ್ರಯೋಗಂ -

ಇತುಗೆ -

ಮುಟ್ಟಿತು, ಮೆಟ್ಟಿತು.

ಕಂ ॥ ಮುಟ್ಟಿತು ಮುಟ್ಟದು ದಿವಮಂ ।
ಮೆಟ್ಟಿತು ಮೆಟ್ಟದು ರಸಾತಳಾಗ್ರಮನೆಂಬೊ ॥
ಳ್ಪಿಟ್ಟಳಮಾಗಿರೆ ದಿವಿಜರ ।
ದಿಟ್ಟಿಗೆ ಸೊಗಯಿಪುದು ಮುಂದೆ ಮಂದರಶೈಲಂ ॥ ೧

(ಕಾವ್ಯಾವಲೋಕನಂ ೩೯೫)

ಇತ್ತುಗೆ - ಅಲ್ಲಾಡಿತ್ತು, ಓಡಿತ್ತು

ಹರಿಣಿ ॥ ಉರಗರಗಿದರ್ ದೈತ್ಯರ್ ಬೆಳ್ಕುತ್ತರಳ್ಕಿದನಿಂದ್ರನೀ ।
ಶ್ವರನ ಮನಮಲ್ಲಾಡಿತ್ತೋಡಿತ್ತು ಕಿನ್ನರಸೈನ್ಯಮಾ ॥
ಸರಲ ಬರಮಂ ಕಂಡಿಂ ಕೆಟ್ಟತ್ತು ಭಾರತಮೆಂದು ತಾ ।
ವರೆಯೆಲೆಯ ನೀರಂತಾಯ್ತೆತ್ತಂ ಸುರಾಸುರಮಂಡಳಂ ॥ ೨

(ಕಾವ್ಯಾವಲೋಕನಂ ೩೯೬)

ಅತ್ತುಗೆ - ಇರ್ದತ್ತು, ಪಸರಿಸಿದತ್ತು.

ಶಾ ॥ ವಿ ॥ ... ಶಿರಃಕರೋಟಿ ನಗುವಂತಿರ್ದತ್ತು ರಾಗಾಧರಂ ... ೩

ಚಂ ॥ ಮಾ ॥ ಪಸರಿಸಿದತ್ತು ಮೂಡದೆಸೆಯೊಳ್ ಬೆಳರ್ಗೆಂಪುದಯಂ ಸಮೀಪಮಾ... ೪

ಅಳ್ಗೆ - ಕಡೆದಳ್, ತಡೆದಳ್, ಪಡೆದಳ್.

ಮ ॥ ವಿ ॥ ತಡೆದಳ್ ಬಾಸಿಗವಿಕ್ಕುವಾಕೆ ... ೫

ಕಂ ॥ ಅಱುವಳ್ ಪಾಂಡುತನೂಜರ ।
ತೆಱನೆಲ್ಲಮನೀಕೆ ನುಡಿವಳಲ್ಲಳ್ ... ೬

(ಕಾವ್ಯಾವಲೋಕನಂ ೩೯೩)

**ಸೂತ್ರಂ ॥ ಸವನಾಗಿ ಭೂತದೊಳ್ ಲಿಂ ।**
**ಗ ವಚನದೊಳ್ ತಳ್ತು ವರ್ತಮಾನ ಭವಿಷ್ಯ ॥**
**ದ್ವ್ಯವಹೃತಿಗಳ ಗುಂ ಕುಂ ಸ ।**
**ಲ್ವುವು ತಾವನ್ಯೈಕವಚನದೊಳ್ ನೆಲಸಿರ್ದುಂ ॥ ೨೨೭ ॥**

**ಟೀಕೆ** - ವರ್ತಮಾನ = ವರ್ತಮಾನಕಾಲದ, ಭವಿಷ್ಯತ್ = ಭವಿಷ್ಯತ್ಕಾಲದ, ವ್ಯವಹೃತಿಗಳ = ವ್ಯವಹಾರಂಗಳ, ಗುಂ = ಗುಂಕಾರಂ, ಕುಂ = ಕುಂಕಾರಂ, ತಾಂ, ಅನ್ಯ = ಪ್ರಥಮಪುರುಷದ, ಏಕವಚನದೊಳ್, ನೆಲಸಿರ್ದುಂ, ಭೂತದೊಳ್ = ಭೂತಕಾಲದಲ್ಲಿ, ಲಿಂಗವಚನದೊಳ್ = ಲಿಂಗತ್ರಯ ವಚನತ್ರಯಂಗಳಲ್ಲಿ, ಸವನಾಗಿ = ಸಮಾನವಾಗಿ, ತಳ್ತು = ಪೊರ್ದುಗೆಯಾಗಿ, ಸಲ್ವುವು = ಸಲುವಳಿಯಪ್ಪುವು.

**ವೃತ್ತಿ** -ಭೂತಕಾಲವೆನ್ನದೆ ಲಿಂಗತ್ರಯ ವಚನತ್ರಯವೆನ್ನದೆ ವರ್ತಮಾನ ಭವಿಷ್ಯತ್ಕಾಲಂಗಳೊಳ್ ವರ್ತಿಸುವ ಗುಂ ಕುಂ ಎಂಬಿವು ಪ್ರಥಮಪುರುಷದೇಕವಚನಕ್ಕಮಾದೇಶಮಪ್ಪುವು.

ಪ್ರಯೋಗಂ -

ಗುಮೆಂಬುದಱ ಭೂತಕಾಲಕ್ಕೆ -
ಅಂದು ಮಾಡುಗುಂ, ಅಂದು ಮಾೞ್ಕುಂ.

ಲಿಂಗತ್ರಯಕ್ಕೆ -

ತರಳ ॥ ... ಭೂವಳಯಾಧಿಪಂ ನುಡಿಗುಂ ಸ್ವಚಿತ್ತಗತಾರ್ಥಮಂ ೧
(ಕಾವ್ಯಾವಲೋಕನಂ ೮೭೯)

ಕಂ ॥ ಅಸವಸದಿಂ ಪಟಿಗೆಯ್ಯುಂ ।
ಕಸಮಂ ಸೋದಿಸದೆ ಬಿತ್ತಿದೊಕ್ಕಲಿಗನ ವೋಲ್ ॥
ಸಸಿಯಂ ನೋಡಿ ತಳೋದರಿ ।
ಬಿಸುಸುಯ್ಯುಗ್ಗಂ ಬಯ್ಯುಗ್ಗಮಿಂತು ಮಾಡಿದ ಬಿದಿಯಂ ॥ ೨
(ಕಾವ್ಯಾವಲೋಕನಂ ೪೫೪)

ಕೋಗಿಲೆಯುಲಿಗುಂ ನಯದಿಂದೆ ಬೀಸುಗುಂ ಗಂಧವಾಹಂ ... ೩

ವರ್ತಮಾನ ಭವಿಷ್ಯಂತಿಗಳ್ಗೆ -

ಕಂ ॥ ... ಎಮಗೀಗಳೆ ಸೂ
ಚಿಸುಗುಮವರ್ ನಾಳೆ ಕಾಣ್ಗುಂ ... ೪

ವಚನತ್ರಯಕ್ಕೆ -

ಕಂ ॥ ... ಒರ್ವನೆ ಗೆಲ್ಗುಂ ಕಿರೀಟಿ ಕೌರವಬಲಮಂ ೫

ಮ ॥ ವಿ ॥ ಬಲನಾರಾಯಣರಿರ್ವರುಂ ನುಡಿಗುಮಾ ದೂತಂಗೆ ... ೬

ಕಂ ॥ ... ಮೂ
ದೇವರುಮಂ ಮೂಱುಕೋಣೆವುಗಿಸುಗುಮಸುರರ್ ೭

ಕುಮಿಂಗೆ -

ಕಂ ॥ ... ಕೇ
ಳ್ವಾತನ ಕಿವಿಯುಂ ಕನಲ್ದು ಕರಿಮುರಿವೋಕುಂ ೮

ಕಂ ॥ ಅರ್ಕೇಂದುಗಳಂ ತವೆ ನುಂ ।
ಗಿರ್ಕುಂ ಕಟ್ಟಿಲೆ ಸಿಡಿಲ್ಗಳೆಱಗುಗುಮೆಂತುಂ ।
ಬರ್ಕುಂ ನಿನ್ನೊಪಳ್ ಭಯ ।
ಮಿರ್ಕುಮೆ ನೀನಿರ್ಪ ಮನದೊಳುಗ್ರತುಳಾರ್ಕಾ ॥ ೯
(ಕಾವ್ಯಾವಲೋಕನಂ ೩೯೯)

- ಇದುವುಮದಱಂತೆ ಸಲ್ವುದು.

ಶ್ರಾವ್ಯಮಾದೆಡೆಯೊಳ್ ಎರಡುಂ ಪತ್ತುಗುಂ -

ಸೂಚಿಸುಗುಂ, ಸೂಚಿಕುಂ; ಮಾಡುಗುಂ, ಮಾೞ್ಕುಂ.

**ಸೂತ್ರಂ ॥ ಇಸುವಿನ ಸುಕಾರಮಂ ಲೋ**
**ಪಿಸುವರ್ ಕುಂ ಪರದೊಳಾಗೆ ಕುಮ್ಮಿಂಗೆ ಕೆಲರ್ ॥**
**ಪೊಸಯಿಸುವರ್ ದ್ವಿರ್ಭಾವಮ ।**
**ನೆಸಗಲದಂ ಬೇಡ ಕಿವಿಗೆ ಸೊಗಯಿಸದೆಡೆಯೊಳ್ ॥ ೨೨೮ ॥**

**ಟೀಕೆ** - ಕುಂ = ಕುಂಕಾರಂ, ಪರದಲ್ಲಿ = ಧಾತುಗಳ ಪರದಲ್ಲಿ, ಆಗೆ = ಪೊರ್ದುಗೆಯಾಗೆ, ಇಸುವಿನ = ಇಸುಪ್ರತ್ಯಯದ, ಸುಕಾರಮಂ, ಲೋಪಿಸುವರ್ = ಲೋಪವಂ ಮಾಡುವರ್; ಕೆಲರ್, ಕುಂಮಿಂಗೆ = ಕುಂಕಾರಕ್ಕೆ, ದ್ವಿರ್ಭಾವಮಂ = ದ್ವಿತ್ವವಂ, ಪೊಸಯಿಸುವರ್ = ಪೊರ್ದುಗೆಯಂ ಮಾಡುವರ್; ಕಿವಿಗೆ, ಸೊಗಯಿಸದೆಡೆಯೊಳ್ = ಹಿತವಾಗದ ತಾವಿನಲ್ಲಿ, ಅದಂ = ಕುಂಕಾರದ ದ್ವಿತ್ವವಂ, ಎಸಗಲ್ ಬೇಡ = ಮಾಡಬೇಡ.

**ವೃತ್ತಿ** - ಹೇತುವಿನೊಳಾದ ಇಸುವಿನ ಸುಕಾರಕ್ಕೆ ಕುಂ ಪರಮಾಗೆ ಆ ಸುತ್ವಕ್ಕೆ ಲೋಪಮಕ್ಕುಂ; ಕೆಲರಾ ಕುಮ್ಮಿಂಗೆ ದ್ವಿತ್ವಮಂ ಪೇೞ್ವರ್; ಅದಂ ಶ್ರವಣಕ್ಕೆ ಶೋಭನವಾಗದ ತಾಣದೊಳ್ ಪೇೞಲಾಗದು.

**ಪ್ರಯೋಗಂ** -

ಸುಕಾರಲೋಪಕ್ಕೆ -

ಮಾಣಿಕುಂ, ಭಾವಿಕುಂ

ಕಂ ॥ ಈ ಯೋಗದೊಳಾವ ರೋಗ(ಮುಂ) ಪರಿಹರಿಕುಂ ೧

ಕಂ ॥ ಸವನಿಕುಮಾಕಾರಂ ಮೇ
ಣೆವರ್ಣಂ ... ೨

(ಕಾವ್ಯಾವಲೋಕನಂ ೩೭)

ಕಂ ॥ ... ಇಂ
ದಿನ ದಿನದೊಳ್ ರಂಭೆ ಕೇಳಿಕುಂ ಪೆಕ್ಕಣಮಂ ೩

ದ್ವಿತ್ವಕ್ಕೆ -

ಪುರುಡಿಕ್ಕುಂ, ಪೊಗೞಿಕ್ಕುಂ, ರಂಜಿಕ್ಕುಂ, ಪಾಲಿಕ್ಕುಂ

ಕಂ ॥ ... ಪಾಲಿಕ್ಕುಂ ಜಗಮನೆಲ್ಲಮಂ ಕಮಲಭವಂ ... ೪

ಶ್ರಾವ್ಯಮಲ್ಲದುದರ್ಕೆ -

ಒಂದಿಕ್ಕುಂ, ಬಿಡಿಕ್ಕುಂ, ಕೆಡಿಕ್ಕುಂ, ಸೊಪ್ಪಿಕ್ಕುಮೆನವೇಡ.

ಸಂಸ್ಕೃತದೊಳಿಂತಿದು ಮನೋಹರಂ.

**ಸೂತ್ರಂ ॥ ಸೊಗಯಿಪುವು ಗೆ ಕೆಗಳನ್ಯೋ ।**
**ಕ್ತಿಗೆ ವಿಧ್ಯರ್ಥಕ್ಕೆ ಮಧ್ಯಮೋತ್ತಮ ಪುರುಷ ॥**
**ಪ್ರಗತ ಬಹೂಕ್ತಿಯೊಳಿಮಮೆಂ ।**
**ದೊಗೆತರ್ಕುಂ ಯುಗಪದುಕ್ತಿಯೊಳ್ ಕ್ರಮದಿಂದಂ ॥ ೨೨೯ ॥**

**ಟೀಕೆ** - ವಿಧ್ಯರ್ಥಕ್ಕೆ = ವಿಧಿಯರ್ಥಕ್ಕೆ, ಅನ್ಯ = ಪ್ರಥಮಪುರುಷದ, ಉಕ್ತಿಗೆ = ಅಮ್ ಅರ್ ಎಂಬೇಕವಚನ ಬಹುವಚನಕ್ಕೆ, ಗೆ ಕೆಗಳ್ = ಗೆಕಾರ ಕೆ ಕಾರಂಗಳ್, ಸೊಗಯಿಪುವು = ಹಿತವಾಗುವುವು; ಯುಗಪದುಕ್ತಿಯೊಳ್ = ಒಂದಾಗಿ ನುಡಿವುದಾದ, ಮಧ್ಯಮ = ಮಧ್ಯಮಪುರುಷದಲ್ಲಿ , ಉತ್ತಮ = ಉತ್ತಮಪುರುಷದಲ್ಲಿ , ಪ್ರಗತ = ವಿಶೇಷವಾಗಿ ಎಯ್ದಲ್ಪಟ್ಟ, ಬಹೂಕ್ತಿಯೊಳ್ = ಇರ್ ಎವು ಎಂಬ ಬಹುವಚನದಲ್ಲಿ , ಕ್ರಮದಿಂದ = ತಱುವಾಯಿಂದೆ, ಇಂ ಅಂ ಎಂದು, ಒಗೆತರ್ಕುಂ = ಬರ್ಪುವು.

**ವೃತ್ತಿ** - ಪ್ರಥಮಪುರುಷದೇಕವಚನಕ್ಕಂ ಬಹುವಚನಕ್ಕಂ ವಿಧ್ಯರ್ಥದೊಳ್ ಗೆ ಎಂದುಂ ಕೆ ಎಂದುಮಕ್ಕುಂ; ಕೆಕಾರಕ್ಕೆ ಕುಮ್ಮಿನಂತೆ ದ್ವಿತ್ವವಿಕಲ್ಪಂ. ಮಧ್ಯಮೋತ್ತಮ ಪುರುಷಂಗಳ ಬಹುವಚನಕ್ಕೆ ಯುಗಪದುಕ್ತಿಯೊಳ್ ಪರಿವಿಡಿಯಿಂ ಇಮ್ ಅಮ್ ಎಂಬಿವಕ್ಕುಂ.

**ಪ್ರಯೋಗಂ** -

ಗೆಕಾರಕ್ಕೆ - ಅವಂ ಕುಡುಗೆ; ಅವಂ ಪಡೆಗೆ;

ಕೆಕಾರಕ್ಕೆ - ಅವಂ ತರ್ಕೆ; ಅವಂ ಬರ್ಕೆ.

ಉ ॥ ಮಾ ॥ ಪಾಳಿಸುತಿರ್ಕೆ ವಿಷ್ಣು ಪರಿಪಾಳಿಕೆ ಜಿಷ್ಣುವಲಂಕರಿಷ್ಣು ... ೧

ಬಹುವಚನಕ್ಕೆ - ಅವರ್ ಮಾಱ್ಕೆ; ಅವರ್ ತೋರ್ಕೆ.

ಕಂ ॥ ಅತಿರಥ ಮಹಾರಥರ್ಕಳ್
ಪ್ರತಿಮುಖಮಾಗೊಡ್ಡಿ ನಿಲ್ಕೆ ... ೨

ಕೆಕಾರಕ್ಕೆ ದ್ವಿತ್ವವಿಕಲ್ಪ -

ರಕ್ಷಿಕೆ, ರಕ್ಷಿಕ್ಕೆ; ಪೂಜಿಕೆ, ಪೂಜಿಕ್ಕೆ; ಪೆರ್ಚಿಕೆ, ಪೆರ್ಚಿಕ್ಕೆ.

ನರನಾಥನಾ ತೆಱದಿಂ ಪೆರ್ಚಿಕ್ಕೆ ದೇಶಂಗಳಂ ... ೩

ಇಂಗೆ -

ಇರಿಸಿಂ, ತರಿಸಿಂ, ಸಮಕಟ್ಟಿಂ.

ಸ್ವಾಗತ ॥ ... ವ್ಯಾಳದಂತಿಕುಲಮಂ ಸಮಕಟ್ಟಿಂ ... ೪
(ಕಾವ್ಯಾವಲೋಕನಂ ೩೧೮)

ಅಂಗೆ -

ಕಂ ॥ ಏಗೆಯ್ವಂ ಪೇೞಿಮೆಂದೊಡೆಂದರ್ಭೀಷ್ಮರ್ ... ೫

ಕಂ ॥ ನೆನೆಯದೆ ಕಜ್ಜದ ಬಿಣ್ಪಂ ।
ಮುನಿವಯ್ ನೀನೊರ್ಬನೆಂಬ ಹರಿಗಮಸಾಧ್ಯಂ ॥
ಮನುಜಪ್ರಾಕಾರಾಂಕನೊ ।
ಳಿನಿಬರುಮೊಂದಾಗಿ ತಾಗುವಂ ಫಲ್ಗುಣನೊಳ್ ॥ ೬
(ಕಾವ್ಯಾವಲೋಕನಂ ೪೦೪)

**ಸೂತ್ರಂ ॥ ಪರಿಣಮಿಸಿರ್ಕುಂ ಪ್ರಸವ**
**ಸ್ವರೂಪದಿಂ ಮಧ್ಯಮೈಕವಚನಂ ವಿಧಿಯೊಳ್ ॥**
**ದೊರೆಕೊಳ್ಳುಮುತ್ವಮಿರ್ಗಂ ।**
**ಕುರಿಪುದು ವಿಧಿಯಾ ಕ್ರಿಯಾಸಮಭಿಹಾರದೊಳಂ ॥ ೨೩೦ ॥**

**ಟೀಕೆ** - ವಿಧಿಯೊಳ್ = ವಿಧ್ಯರ್ಥದಲ್ಲಿ , ಮಧ್ಯಮೈಕವಚನಂ = ಅಯ್ ಎಂಬ ಮಧ್ಯಮಪುರುಷದೇಕವಚನಂ, ಪ್ರಕೃತಿಸ್ವರೂಪದಿಂ = ಧಾತುಸ್ವರೂಪದಿಂದೆ, ಪರಿಣಮಿಸಿರ್ಕುಂ; ಇರ್ಗೆ = ಇರ್ ಎಂಬ ಧಾತುವಿಂಗೆ, ಉತ್ವಂ = ಉಕಾರಂ, ದೊರೆಕೊಳ್ಗುಂ = ಬರ್ಪುದು; ಆ ಕ್ರಿಯಾಸಮಭಿಹಾರದೊಳಂ = ಆ ಕ್ರಿಯೆಯನಭಿಮುಖವಾಗಿ ಮಾಡಿಕೊಂಬಲ್ಲಿಯುಂ, ವಿಧಿ = ವಿಧ್ಯರ್ಥಂ, ಅಂಕುರಿಪುದು = ಅಂಕುರವಾಗುವುದು (ಬರ್ಪುದೆಂಬುದರ್ಥಂ).

**ವೃತ್ತಿ** - ಧಾತುಸ್ವರೂಪದಿಂ ಮಧ್ಯಮಪುರುಷದೇಕವಚನಂ ವಿಧ್ಯರ್ಥಮಾಗಿ ಪರಿಣಮಿಸುಗುಂ; ಇರ್ ಎಂಬ ಧಾತುವೊಂದರ್ಕಮುತ್ವಮಕ್ಕುಂ; ವಿಧ್ಯರ್ಥಂ ಕ್ರಿಯಾಸಮಭಿಹಾರದೊಳಮಕ್ಕುಂ.*

***ವಿಚಾರಂ** - ಇಲ್ಲಿ , ಮಾಡು (ಕರಣೇ) ಎಂದು ಧಾತುವಿರೆ, ಪ್ರಥಮಪುರುಷದೇಕವಚನ ಬಹುವಚನಂಗಳ್ಗೆ - ಅವಂ ಮಾಡುಗೆ, ಅವರ್ ಮಾಡುಗೆ, ಅವಂ ಮಾಟ್ಕೆ, ಅವರ್ ಮಾಟ್ಕೆ - ಎಂದಾಯ್ತು. ಮಧ್ಯಮಪುರುಷದೇಕ ಬಹುವಚನಕ್ಕೆ - ನೀಂ ಮಾಡು, ನೀವೆಲ್ಲರ್ ಮಾಡಿಂ - ಎಂದಾಯ್ತು.

ಉತ್ತಮ ಪುರುಷದೇಕವಚನಕ್ಕೆ ಪೇೞಲಿಲ್ಲಾಗಿ, ಬಹುವಚನಕ್ಕೆ ಭವಿಷ್ಯಂತಿಗೆ ಬರ್ಪ ವಕಾರದ ಮೇಲೆ ಅಂ ಎಂಬುದು ಪತ್ತಿ - ಆವೆಲ್ಲರ್ ಮಾಡುವಂ - ಎಂದು ಆಯ್ತು. ಏಕವಚನಕ್ಕೆ ಹೇಗೆಂದೊಡೆ - ಭವಿಷ್ಯಂತಿಯ ವಕಾರದ ಮೇಲೆ ಎನ್ ಎಂಬುದು ಪತ್ತಿದಂತೆ ಅನ್ ಮಾಡುವೆಂ ಎಂದಪ್ಪುದಾಗಿ ಪೇೞಲಿಲ್ಲೆಂದಱುವುದು.

ಶಬ್ದಾನುಶಾಸನದಲ್ಲಿ - ಆಶೀರ್ವಿಧಿ ನಿಮಂತ್ರಣಾಮಂತ್ರಣಾಧ್ಯೇಷಣ ಸಂಪ್ರಶ್ನ ಪ್ರೇಷಣ ವಿಜ್ಞಾಪನಾಜ್ಞಾಪನ ಪ್ರಾರ್ಥನೇ ಗೆತ್ ॥ ೪೬೫ ॥ ಆಶೀರಾದಿ ವಿವಕ್ಷಾಯಾಂ ಧಾತೋಃ ಪರಯೋಃ ಅಮ್ ಅರ್ ಇತ್ಯೇತಯೋಃ ಗೆತ್ ಇತ್ಯಾದೇಶೋ ಭವತಿ - ಎಂದುದಾಗಿ ಆಶೀರಾದಿವಿವಕ್ಷೆಯಲ್ಲಿ ಧಾತುವಿನತ್ತಣಿಂ ಪರಂಗಳಾದ ಅಮ್ ಅರ್ ಎಂಬಿವರ್ಕೆ ಗೆತ್ (ಗೆ) ಎಂಬಾದೇಶಂ ಬರ್ಪುದು. ತಕಾರಂ ಇತ್ತು , ಗೆ ಎಂದು ಉೞಿವುದು - ಅವಂ ಮಾಡುಗೆ, ಅವರ್ ಮಾಡುಗೆ.

॥ ಇರಶ್ಚ ಉದುಃ ॥ ೪೬೬ ॥ ಎಂದಾದಾಗಿ ಧಾತುವನತ್ತಣಿಂ ಪರಂಗಳಾದ ಅಮ್ ಅರ್ ಎಂಬಿವರ್ಕಂ ಅಯ್ ಇರ್ ಎಂಬಿವರ್ಕಂ ಉದು ಎಂಬಾದೇಶಂ ಆಶೀರಾದಿ ವಿಷಯದಲ್ಲಿ ಬರ್ಪುದು - ಅವಂ ಮಾಟ್ಟುದು, ಅವರ್ಮಾಟ್ಟುದು; ನೀಂ ಮಾಟ್ಟುದು, ನೀವೆಲ್ಲರ್ ಮಾಟ್ಟುದು. ಮಾಡುವುದು ಎಂದುಂ ವಿಕಲ್ಪಂ.

॥ ಇಮ್ ॥ ೪೬೭ ॥ ಧಾತೋಃ ಪರಸ್ಯ ಇರಃ ಇಮ್ ಇತ್ಯಾದೇಶೋ ಭವತ್ಯಾಶೀರಾದಿ ವಿಷಯೇ - ಎಂಬುದಾಗಿ ಧಾತುವಿನತ್ತಣಿಂ ಪರದ ಇರ್ ಎಂಬುದರ್ಕೆ ಇಮ್ ಎಂಬಾದೇಶಂ ಆಶೀರಾದಿ ವಿಷಯದಲ್ಲಿ ಅಕ್ಕುಂ - ನೀವೆಲ್ಲರ್ ಮಾಡಿಂ. ಗುರುಗಳಿರಾ, ಮುದದಿನೆಮಗೆ ಬೆಸಸಿಮಿಾ ಕಥೆಯಂ. ಶಿವಸುಖಮಂ ಮಾಡಿಮೆಮಗೆ.

॥ ಅಯೋಲ್ಲೋಪೌ ॥ ೪೬೮ ॥ ಧಾತೋಃ ಪರಸ್ಯ ಅಯಃ ಅಕಾರೋ ಲೋಪಶ್ಚಾದೇಶೌ ಭವತಃ ಆಶೀರಾದಿವಿಷಯೇ - ಎಂದುದಾಗಿ ಧಾತುವಿನತ್ತಣಿಂ ಪರದ ಅಯ್ ಎಂಬುದರ್ಕೆ ಅಕಾರಾದೇಶಮುಂ ಲೋಪಮುಮಕ್ಕುಂ - ನೀಂ ಮಾಡ, ನೀಂ ಮಾಡು.

॥ ಎವೋರ್ವಮ್ ॥ ೪೭೦ ॥ ಧಾತೋಃ ಪರಸ್ಯ ಎವು ಪ್ರತ್ಯಯಸ್ಯ ವಮ್ ಇತ್ಯಾದೇಶೋ ಭವತಿ ಆಶೀರಾದಿವಿಷಯೇ - ಎಂದುದಾಗಿ ಧಾತುವಿನತ್ತಣಿಂ ಪರದ ಎವು ಎಂಬುದರ್ಕೆ ನಮ್ ಎಂಬ ಆದೇಶಂ ಆಶೀರಾದಿವಿಷಯದಲ್ಲಿ ಬರ್ಪುದು - ಆಮೆಲ್ಲರೀಗಳಶ್ವಮೇಧವಂ ಮಾಡುವಂ.

॥ ಎನೋ ವೆನ್ ॥ ೪೭೧ ॥ ಧಾತೋಃ ಪರಸ್ಯ ಎನ್ಪ್ರತ್ಯಯಸ್ಯ ವೆನ್ ಇತ್ಯಾದೇಶೋ ಭವತಿ - ಎಂದುದಾಗಿ ಧಾತುವಿನತ್ತಣಿಂ ಪರಮಾದ ಎನ್ ಎಂಬುದರ್ಕೆ ವೆನ್ ಎಂಬಾದೇಶಂ ಆಶೀರಾದಿ ವಿಷಯದಲ್ಲಿ ಬರ್ಪುದು - ಆನಿದಂ ಮಾಟ್ಪೆಂ. ಆಂ ಶಿವನಂ ಪೂಜಿಸುವೆಂ.

ಇಂತು ಪೇೞ್ದುದಾಗಿ ಆಶೀರ್ವಿಧಿಗಳಾದಿಯಾದುವಱಲ್ಲಿ ಪ್ರಥಮೈಕವಚನಂ - ಆತಂ ಮಾಡುಗೆ, ಆತಂ ಮಾಟ್ಕೆ ; ಆತಂ ಮಾಡುವುದು, ಆತಂ ಮಾಟ್ಟುದು.

ಬಹುವಚನಂ - ಅವರ್ ಮಾಡುಗೆ, ಮಾಟ್ಕೆ ; ಅವರ್ ಮಾಡುವುದು, ಮಾಟ್ಟುದು.

ಮಧ್ಯಮೈಕವಚನಂ - ನೀಂ ಮಾಡ, ನೀಂ ಮಾಡು; ಮಾಡುವುದು, ಮಾಟ್ಟುದು.

ಬಹುವಚನಂ - ನೀವೆಲ್ಲರ್ ಮಾಡುವುದು, ಮಾಟ್ಪುದು, ಮಾಡಿಂ.

ಉತ್ತಮಪುರುಷೈಕವಚನಂ - ಆಂ ಮಾಡುವೆಂ, ಮಾಟ್ಪೆಂ.

ಬಹುವಚನಂ - ಆಮೆಲ್ಲರ್ ಮಾಡುವಂ, ಮಾಟ್ಪಂ - ಎಂದಿಂತಱಿವುದು.

**ಪ್ರಯೋಗಂ -**

ಧಾತುಸ್ವರೂಪಕ್ಕೆ -

ಚಂ ॥ ಮಾ ॥ ನುಡಿ ನುಡಿಯೆ[ಂ] ಚಲಂ ಮಗುೞ್ಚಿ ಬೇೞ್ಪುದು ಬೇೞ್ಪುದು ... ೧

ಉ ॥ ಮಾ ॥ ಪಾಡೆಲೆ ತುಂಬಿ ಬಗ್ಗಿಸೆಲೆ ಕೋಗಿಲೆ ತೀಡೆಲೆ ಗಂಧವಾಹ ... ೨

ಮ ॥ ವಿ ॥ ಹರಿ ಕೇಳ್ ಧೂಮಪತಾಕ ಕೇಳ್ ಯಮನೆ ಕೇಳ್ ನೈರುತ್ಯ ಕೇಳ್ ... ೩

(ಸೂಕ್ತಿಸುಧಾರ್ಣವಂ ೧೮-೧೪)

ಉ ॥ ಮಾ ॥ ವಾಯಸದಂತೆ ನೋಡು ಬಕನಂತಿರೆ ಮೆಲ್ಲನೆ ಮೆಟ್ಟು ಕಚ್ಚಪೋ ।
ಪಾಯದಡಂಗು ನಿಲ್ ಭ್ರಮರಿವೊಲ್ ಭ್ರಮಿಯಂತಿರೆ ಬೆಚ್ಚರಾಗು ಖ ॥
ಡ್ಗಾಯುಧ ಚಾಮರಂ ಪೊಳೆವ ಮಿಂಚನೆ ಪೋಲ್ತಿರೆ ಬೀಸು ನೀಂ ಖಳ ।
ನ್ಯಾಯದಿನೆಲ್ಲಮಂ ನೆಱಿಯೆ ಕಲ್ತುಪದೇಶಕನಾಗು ಲೋಕದೊಳ್ ॥ ೪

(ಕಾವ್ಯಾವಲೋಕನಂ ೪೦೨)

ಇರ್ಗೆ -

ಕಂ ॥ ಇರು ಮರುಳೆ ಶುಷ್ಕ ವೈಯಾ
ಕರಣಂಗಂ ... ೫

(ಆದಿಪುರಾಣಂ ೧-೨೪)

ಕ್ರಿಯಾಸಮಭಿಹಾರದ ವಿಧಿಗೆ -

ಬಿಡುಬಿಡೆಂದು ಬಿಡಿಸಿದಂ ... ೬

ಕಂ ॥ ನಡೆನಡೆಯೆಂದೇಂ ನಡೆದುದೊ
ಪಡೆ ಪಡೆದಚ್ಚರಿಯನಾ ಸುರಾಪಗೆವರೆಗಂ. ೭

(ಕಾವ್ಯಾವಲೋಕನಂ ೨೯೪)

ಕಂ ॥ ಕೊಳ್ಕೊಳ್ಳೆಂದೊಡನೊಡನೆಯೆ ।
ತುಳ್ಕುವ ಯುವತಿಯರ ಕರಪರಿಚ್ಯುತಸಲಿಲಂ ॥
ಗಳ್ಕೊಳೆ ಬಿಡೆ ಕೆದಱುವ ಕಿಂ ।
ಜಳ್ಕದಿನಾದುದು ಸರೋವರಂ ಕಪಿಶಜಳಂ ॥ ೮

(ಕಾವ್ಯಾವಲೋಕನಂ ೪೧೬)

**ಸೂತ್ರಂ ॥ ಧಾತುಗಿಸು ಕನ್ನಡಕ್ಕಾ ।**
**ಹೇತುವಿನೊಳ್ ಸ್ವ ಪರ ಕರ್ತೃವೊಳ್ ಸಂಸ್ಕೃತದಾ ॥**
**ಧಾತುಗನೇಕಾಕ್ಷರಕಿಸು ।**
**ಜಾತಂ ನಿಜಕರ್ತೃವೊಳ್ ಪ್ರಯೋಜನದೆಡೆಯೊಳ್ ॥ ೨೩೧ ॥**

**ಟೀಕೆ** - ಕನ್ನಡಕ್ಕೆ = ಕನ್ನಡವಾದ, ಧಾತುಗೆ = ಧಾತುಗಳ್ಗೆ, ಆ ಹೇತುವಿನೊಳ್ = ಆ ಕಾರಣದಲ್ಲಿ ಸ್ವ ಪರ ಕರ್ತೃವೊಳ್ = ಸ್ವಕರ್ತೃ ಪರಕರ್ತೃವಿನಲ್ಲಿ, ಇಸು = ಇಸುಪ್ರತ್ಯಯಂ, ಜಾತಂ = ಹುಟ್ಟುವುದು; ಸಂಸ್ಕೃತದ,

ಆ ಧಾತುಗೆ = ಆ ಧಾತುಗಳ್ಗೆ, ಅನೇಕಾಕ್ಷರಕೆ, ನಿಜಕರ್ತೃವೊಳ್ = ಸ್ವಕರ್ತೃವಿನಲ್ಲಿ, ಪ್ರಯೋಜನದೆಡೆಯೊಳ್ = ಪ್ರಯೋಜನದ ತಾವಿನಲ್ಲಿ, ಇಸು = ಇಸುವೆಂಬ ಪ್ರತ್ಯಯಂ (ಹುಟ್ಟುವುದು).

**ವೃತ್ತಿ** - ಕನ್ನಡದ ಧಾತುವಿಂಗೆ ಹೇತುವಿನೊಳಂ ಸ್ವಯಂಕರ್ತೃಕ ಪರಕರ್ತೃಕದೊಳಂ ಇಸುವಕ್ಕುಂ; ಸಂಸ್ಕೃತದನೇಕಾಕ್ಷರಧಾತುಗೆ ಸ್ವಯಂಕರ್ತೃವಿನೊಳಿಸುವಕ್ಕುಂ; ಪ್ರಯೋಜನವಸ್ತುವಿನೊಳ್ ಕರ್ತೃವಿವಕ್ಷೆಯಾಗೆ ಇಸುವಕ್ಕುಂ.

**ಪ್ರಯೋಗಂ -**

ಹೇತುಗೆ -

ಮಾತಿಂ ನಗಿಸಿದಂ.

ಕಂ ॥ ಮೃಗಗಣಮಂ ಪೋದ ಪಜ್ಜೆಯಿಂ ಕಾಣಿಸಿದಂ ೧

ಸ್ವಯಂಕರ್ತೃವಿವಕ್ಷೆಯಾಗೆ -

ನಿಟ್ಟಿಸಿದಂ, ಕಂಟಿಸಿದಂ, ತುಟ್ಟಿಸಿದಂ, [ಬೆಟ್ಟಿಸಿದಂ].

ಕಂ ॥ ... ಘೃ
ತಾಹುತಿವಡೆದನಲನಂತೆ ಮಿಗೆ ದಳ್ಳಿಸಿದಂ ೨

ಅನ್ಯಕರ್ತೃಗೆ -

ನುಡಿಯಿಸಿದಂ, ಮುಡಿಯಿಸಿದಂ, ಕಡೆಯಿಸಿದಂ.

ಕಂ ॥ ಕಡೆಯಿಸಿದಂ ಸುರರಿನಸುರರಿಂ ಪಾಲ್ಗಡಲಂ ೩

ಏಕಾಕ್ಷರದೊಳ್ ಅನ್ಯಕರ್ತೃಗೆ -

ಈಯಿಸಿದಂ, ತೇಯಿಸಿದಂ, ಮೇಯಿಸಿದಂ, ನೋಯಿಸಿದಂ.

ಕಂ ॥ ಜಗುನೆಯ ತಡಿಯಲ್ಲಿ ತುಱುಗಳಂ ಮೇಯಿಸಿದಂ ೪

ಸಂಸ್ಕೃತಧಾತುವಿನ ಸ್ವಯಂಕರ್ತೃಗೆ -

ಕಂ ॥ ಬರ್ಪಂಬಂ ನಿಶಿತವಿಶಿಖದಿಂ ಖಂಡಿಸಿದಂ. ೫

ಭಿನ್ನಕರ್ತೃವಿನೊಳಿಸುವಿಲ್ಲ.

ಪ್ರಯೋಜನವಸ್ತುವಿಂಗೆ ಸಂಸ್ಕೃತಕ್ಕೆ -

ಚಿತ್ರಿಸಿದಂ, ಮುದ್ರಿಸಿದಂ.

ಕನ್ನಡಕ್ಕೆ -

ಪೊಂಗಿಸಿದಂ, ಸೊಪ್ಪಿಸಿದಂ.

**ಸೂತ್ರಂ ॥ ನೆಗಬ್ದುರ್ದ ರೇಫ ಱ ೞ ನಾಂ ।**
**ತ ಗಾಂತ ಸಾಂ[ತೌ]ತ್ವದಿದಿರ ವತ್ವಂ ಪತ್ವಂ ॥**
**ಪುಗುಗುಂ ದ್ವಿತ್ವಂ ಮೇಣ್ ಸು ಗು ।**
**ಯುಗಕ್ಕೆ ಲೋಪೋಕ್ತಿ ನಾಂತ ಣಾಂತಂ ಬತ್ವಂ ॥ ೨೩೨ ॥**

**ಟೀಕೆ** - ನೆಗಟ್ದುರ್ದ = ಪ್ರಸಿದ್ಧಿವಡೆದಿರ್ದ, ರೇಫ = ರೇಫೆಯ, ಱ = ಱಕಾರದ, ಟ = ಟಕಾರದ, ನಾಂತ = ನಕಾರಾಂತದ, ಗಾಂತ = ಗಕಾರಾಂತದ, ಸಾಂತ = ಸಕಾರಾಂತದ, ಓತ್ವದ = ಓಕಾರದ, ಇದಿರ = ಮುಂದಣ, ವತ್ವಂ = ಭವಿಷ್ಯಂತಿಯ ವಕಾರಂ, ಪತ್ವಂ = ಪಕಾರವಪ್ಪುದು; ಮೇಣ್ = ವಿಕಲ್ಪದಿಂದೆ, ದ್ವಿತ್ವಂ = ದ್ವಿರ್ಭಾವಂ, ಪುಗುಗುಂ = ಪ್ರವೇಶವಾಗುವುದು; ಸುಗುಯುಗಕ್ಕೆ = ಸುಕಾರ ಗುಕಾರಂಗಳ್ಗೆ, ಲೋಪೋಕ್ತಿ = ಲೋಪದ ವಾಕ್ಯಂ ಬರ್ಪುದು; ನಾಂತ ಣಾಂತಂ = ನಕಾರಾಂತ ಣಕಾರಾಂತವಾಗೆ, ಬತ್ವಂ = ವಕಾರಂ ಬಕಾರಮಪ್ಪುದು.

**ವೃತ್ತಿ** - ರೇಫೆ ಱಕಾರ ಟಕಾರ ನಕಾರ ಗಕಾರ ಸಕಾರ ಓಕಾರಾಂತದ ಧಾತುವಿನ ಪರದ ಭವಿಷ್ಯಂತಿಯ ವಕಾರಕ್ಕೆ ಪಕಾರಮಕ್ಕುಂ; ಅದರ್ಕೆ ವಿಕಲ್ಪದಿಂ ದ್ವಿತ್ವಮುಮಕ್ಕುಂ; ಗಾಂತ ಸಾಂತ ಧಾತುವಿನ ಕಡೆಗೆಲ್ಲಿಯುಂ ಲೋಪಮಕ್ಕುಂ; ನಾಂತ ಣಾಂತಂಗಳ ಪರದ ವತ್ವಕ್ಕೆ ಬತ್ವಮಕ್ಕುಂ.

**ಪ್ರಯೋಗಂ** -

ರೇಫಕ್ಕೆ - ಕೂರ್ಪಂ, ಬರ್ಪಂ, ತರ್ಪಂ, ಇರ್ಪಂ.

ಕಂ ॥ ಆ ಪುರದೊಳಿರ್ಪನಿನಕುಲ
ದೀಪಂ ವಿಪುಲಪ್ರತಾಪಂ ... ೧

ಱಕಾರಕ್ಕೆ - ಆರ್ಪಂ, ತೋರ್ಪಂ,

ಕಂ ॥ ... ಮಾರ್ಪಡೆಗೆ ತೋಳ ಬಾಳ ಕೂರ್ಪಂ ತೋರ್ಪಂ ೨

ಟಕಾರಕ್ಕೆ - ಅಗಟ್ಪಂ, ಕೀಟ್ಪಂ.

ಡಕಾರಕ್ಕಾದೇಶಮಾದ ಟಕಾರಕ್ಕೆ - ಬೆಗಟ್ಪಂ, ಬಿಸುಟ್ಪಂ, ನೋಟ್ಪಂ, ಬೇಟ್ಪಂ, ಮಾಟ್ಪಂ.

ಚಂ ॥ ಮಾ ॥ ... ಎಳಿದಿಕೆಗಂಡು ಬಿಸುಟ್ಪಿನೆ ... ೩
(ಕಾವ್ಯಾವಲೋಕನಂ ೫೨)

ನಕಾರಕ್ಕೆ - ಆಂಪಂ, ನೋಂಪಂ, ಸೀಂಪಂ

ಮಲೆದು ನರನೊಳಾಂಪಂ ಗಾಮ್ಪಂ. ೪

ಗಾಂತಕ್ಕೆ - ಪೋಪಂ, ತಾಪಂ, ತೂಪಂ.

ತರಳ ॥ ತೊಳಪ ದಂತಮರೀಚಿಸಂತತಿ ಪರ್ವಿ ಬಳ್ವಳ ನೀಳ್ದು ... ೫
(ಕಾವ್ಯಾವಲೋಕನಂ ೮೭೯)

ಚಂ ॥ ಮಾ ॥ ... ಲಲಾಟದೊಳ್ ಮಿಱುಪ ಕಣ್ಣುರಿಯಂತೆ ... ೬

ಸಾಂತಕ್ಕೆ - ತರಿಪಂ, ಬರಿಪಂ, ಇರಿಪಂ, ಬೆಸಪಂ.

ನಿನ್ನೊಡನೊಂದು ಭಾಗಮಂ ಬರಿಪುದು ಕಾಪುಮಾಡುವುದು ... ೭

ಓಕಾರಕ್ಕೆ - ಓಪಂ.

ದ್ವಿತ್ವಕ್ಕೆ - ತೊಳಪ್ಪಂ, ಬೆಳಪ್ಪಂ, ಉದಯಿಪ್ಪಂ.

ಉದಯಿಪ್ಪಂ ಗಂಡಮಾರ್ತಾಂಡನಲರ್ಚುಗೆಮ್ಮಂ ... ೮

ಗೆಲ್ದು ಬೆಳಪ್ಪನೀಗೆ ಬರಂಗಳಂ ೯

ಗಕಾರ ಸಕಾರಂಗಳ ಲೋಪಕ್ಕೆ -

ಪೋಪಂ, ತಾಪಂ, ಮಿಱುಪಂ, ತರಿಪಂ, ಬರಿಪಂ, ಇರಿಪಂ.

ಬಕಾರಕ್ಕೆ -

ನಾಂಬಂ, ಎಂಬಂ, ತಿಂಬಂ.

ಕಂ ॥ ... ಅಡು ಪಣ್ಣೆಡು ಪೋಗು ನೀನುಮಾನುಂ ತಿಂಬಂ ೧೦

(ವಿಕ್ರಮಾರ್ಜುನ ವಿಜಯಂ ೩-೧೨)

ಉಣ್ಬಂ, ಕಾಣ್ಬಂ, ಮಾಣ್ಬಂ, ಪೂಣ್ಬಂ.

ಮ ॥ ವಿ ॥ ತಿರಿದುಣ್ಬಂ ಹರನಗ್ನಿ ಕಾಡ ಕಸವಂ ತಿಂದಿರ್ಪಂ ... ೧೧

**ಸೂತ್ರಂ ॥ ದಪದ ಪಕಾರಕ್ಕಂ ಸಂ ।**
**ದಿಪುದು ವಿಕಲ್ಪದೆ ಬುಧರ್ಕಳಿಂ ದ್ವಿತ್ವಂ ಸಂ ॥**
**ದಿಪುದು ನಕಾರಂ ನೋ ಧಾ ।**
**ತುಪರದೊಳಾ ದ ದಪಮೊದವೆ ನೋಗಂ ಹ್ರಸ್ವಂ ॥ ೨೩೩ ॥**

**ಟೀಕೆ** - ದಪದ - ದಪಕಾರದ, ಪಕಾರಕ್ಕಂ, ಬುಧರ್ಕಳಿಂ =ವಿದ್ವಾಂಸರಿಂದೆ, ದ್ವಿತ್ವಂ, ವಿಕಲ್ಪದೆ, ಸಂದಿಪುದು; ನೋಧಾತುಪರದೊಳ್ = ನೋ ಎಂಬ ಧಾತುವಿನ ಪರದಲ್ಲಿ , ಆ ದ ದಪಂ = ಆ ದಕಾರ ದಪಕಾರಂಗಳ್, ಒದವೆ = ಬರೆ, ನಕಾರಂ = ನಕಾರಾಗಮಂ, ಸಂದಿಪುದು = ಬರ್ಪುದು; ನೋಗಂ = ನೋ ಎಂಬುದರ್ಕಂ, ಹ್ರಸ್ವಂ = ಹ್ರಸ್ವಂ ಬರ್ಪುದು.

**ವೃತ್ತಿ** - ವಿಕಲ್ಪದಿಂ ದಪದ ಪಕಾರಕ್ಕಂ ದ್ವಿತ್ವಮಕ್ಕುಂ. ದ ದಪಂಗಳೊದವೆ ನೋ ಧಾತುವಿನ ಪರದೊಳ್ ನಕಾರಮುಂ ನೋಗೆ ಹ್ರಸ್ವಮುಂ ಅಕ್ಕುಂ. ಸಮುಚ್ಚಯದಿಂ ಬೇ ಎಂಬ ಧಾತುಗಮಂತೆ.

**ಪ್ರಯೋಗಂ** -

ದ್ವಿತ್ವವಿಕಲ್ಪಕ್ಕೆ -

ಬರೆದಪಂ, ಬರೆದಪ್ಪಂ; ಕರೆದಪಂ ಕರೆದಪ್ಪಂ; ನಿಲಿಸಿದಪಂ, ನಿಲಿಸಿದಪ್ಪಂ; ಇಱಿದಪಂ, ಇಱಿದಪ್ಪಂ.

ಮ ॥ ವಿ ॥ ನಿರಿದಪ್ಪಂ ಮಗಧೇಶನಂ ನಿಱಿಸಿದಪ್ಪಂ ಚೋಟಿನಂ ಭಾಷೆಯಂ
ಹರಿ ಕೇಳ್ ... ೧

(ಸೂಕ್ತಿಸುಧಾರ್ಣವಂ ೧೮-೧೪)

ನೋ ಬೇ ಧಾತುಗಳ್ಗೆ - ನೊಂದಂ, ನೊಂದಪಂ; ಬೆಂದಂ, ಬೆಂದಪಂ.

**ಸೂತ್ರಂ॥ ಸತತಂ ಮಧ್ಯಮಪುರುಷ ।**
**ಪ್ರತಿಷೇಧದ ವಿಧಿಯೊಳಂ ಪ್ರಯೋಜನ ವಸ್ತ್ವಾ ॥**
**ಶ್ರಿತ ಹೇತುಕ್ರಿಯೆಯೊಳಮ ।**
**ನ್ವಿತಮಲ್ಕ್ರಿಯೆ ತಾಂ ಕ್ರಿಯಾರ್ಥಮಪ್ಪೆಡೆಗಳೊಳಂ ॥ ೨೩೪ ॥**

**ಟೀಕೆ** - ಸತತಂ = ಆವಾಗಳುಂ, ಮಧ್ಯಮಪುರುಷದ, ಪ್ರತಿಷೇಧದ = ಪ್ರತಿಷೇಧಾರ್ಥದ, ವಿಧಿಯೊಳಂ = ವಿಧಿಯಲ್ಲಿಯುಂ, ಪ್ರಯೋಜನವಸ್ತು = ಪ್ರಯೋಜನವಸ್ತುವಿನಲ್ಲಿ, ಆಶ್ರಿತ = ಆಶ್ರಯಿಸಲ್ಪಟ್ಟ, ಹೇತುಕ್ರಿಯೆಯೊಳಂ = ಕಾರಣಕ್ರಿಯೆಯಲ್ಲಿಯುಂ, ಕ್ರಿಯೆ, ತಾಂ, ಕ್ರಿಯಾರ್ಥಂ = ಕ್ರಿಯಾಪ್ರಯೋಜನಂ, ಅಪ್ಪೆಡೆಗಳೊಳಂ = ಆಗುವೆಡೆಗಳಲ್ಲಿಯುಂ, ಅಲ್ = ಅಲ್ಲೆಂಬುದು, ಅನ್ವಿತಂ = ಕೂಡಲ್ಪಡುವುದು.

**ವೃತ್ತಿ** - ಮಧ್ಯಮಪುರುಷ ಪ್ರತಿಷೇಧದ ಕ್ರಿಯೆ ವಿಧ್ಯರ್ಥಮಾದಲ್ಲಿಯುಂ ಪ್ರಯೋಜನವಸ್ತುವಿಂಗೆ ನಿಮಿತ್ತಮಪ್ಪ ಕ್ರಿಯೆಯೊಳಂ ಕ್ರಿಯೆ ತಾಂ ಕ್ರಿಯಾರ್ಥಮಂ ಪೇೞ್ವೆಡೆಯೊಳಂ ಅಲ್ ಅಕ್ಕುಂ.

**ಪ್ರಯೋಗಂ -**

[೧]ವಿಧ್ಯರ್ಥಮಾದಲ್ಲಿ -

... ಬೇಱೊಂದನಣಂ
ಬಗೆಯಲ್ ಗಡ ನಿನಗೆ ಸುಮತಿ ಬೇಡಾಂ ಬೇಡೇ ॥ ೧
(ಕಾವ್ಯಾವಲೋಕನಂ ೪೧೨)

ಬನದೊಳ್ ಪುಗಲ್ ಪುಗಲೆಂಬ ಗಂಡುಗೋಗಿಲೆ ... ೨

ಆರಯ್ದಾರುಂ ಸಾರಲಿಂ ... ೩

ಬಿಲ್ಲೆಱೆಯನೆಂದುದೆ ಮಾತು ಮೀಱಲಿಂ ... ೪

ಏಳಿದಂಗೆಯಲಿಮೀಗಡೆ ನಮ್ಮೊ
ಳ್ಳಾಳಂ ... ೫
(ಕಾವ್ಯಾವಲೋಕನಂ ೩೧೪)

ಪ್ರಯೋಜನವಸ್ತುಕ್ರಿಯೆಗೆ -

ಮ ॥ ವಿ ॥ ಇಱಿಯಲ್ ತಕ್ಕಳವರ್ಥಿಗಳ್ಗೆ ಬಿಡದೀಯಲ್ ತಕ್ಕ ಸಂಪತ್ತಿ ಮಾ
ತಱಿಯಲ್ ತಕ್ಕ ವಿವೇಕಂ ... ೬

ಕ್ರಿಯೆಗೆ -

ಗೆಲಲ್ಬಗೆದಂ; ಪುಗಲ್ಬಂದಂ; ಮುತ್ತಲ್ವೇಟ್ಟಿಂ.

ಸ್ರ ॥ ಈಯಲ್ಬಂದತ್ತು ಕಲ್ಪಾಂಘ್ರಿಪಮಭಿಮತಮಂ ... ೭
(ಆದಿಪುರಾಣಂ ೯-೧೩೨; ಕಾವ್ಯಾವಲೋಕನಂ ೧೮೭)

~~~~~~~~~~~~~~~

೧. (ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಪರಿಷ್ಕರಣಕ್ಕೆ ಅನುಸಾರವಾಗಿ ತಿದ್ದಿದೆ.)
~~~~~~~~~~~~~~~

**ಸೂತ್ರಂ ॥ ಸಂದಿಪುದಲ್ವಿನ ಪರದೊಳ್ ।**
**ಬಂದು ಕೆಕಾರಮುಮದೊರ್ಮೆ ವೈಕಲ್ಪಿಕದಿಂ ॥**
**ಸಂದಿಪುದಲ್ಗಂ ಲೋಪಂ ।**
**ಬಂದಾ [1]ಪ್ರತಿಷೇಧವಿಧಿಯನೊದವದ ಪಕ್ಷಂ ॥ ೨೩೫ ॥**

**ಟೀಕೆ** - ಆ ಪ್ರತಿಷೇಧ ವಿಧಿಯಂ = ಆ ಮಧ್ಯಮಪುರುಷದ ಪ್ರತಿಷೇಧದ ವಿಧಿಯಂ, ಒದವದ ಪಕ್ಷಂ = ಪೊರ್ದದ ಪಕ್ಷದಲ್ಲಿ, ಅಲ್ವಿನ = ಅಲ್ ಎಂಬುದಱ, ಪರದೊಳ್ = ಮುಂದುಗಡೆಯಲ್ಲಿ, ಕೆಕಾರಮುಂ, ಅದು, ಒರ್ಮೆ = ಒಂದು ಬಾರಿ, ಬಂದು, ಸಂದಿಪುದು = ಸಂದಿಸುವುದು; ವೈಕಲ್ಪಿಕದಿಂ = ವಿಕಲ್ಪದಿಂದೆ, ಅಲ್ಗಂ = ಅಲ್ ಎಂಬುದಱ ಲಕಾರಕ್ಕಂ, ಲೋಪಂ, ಬಂದು, ಸಂದಿಪುದು = ಬರ್ಪುದು.

**ವೃತ್ತಿ** - ಪ್ರತಿಷೇಧದ ವಿಧಿ ಪೊರ್ದದೊಡಲುವಿನ ಮುಂದೊರ್ಮೆ ಕೆಕಾರಮಕ್ಕುಂ; ಆಯಲ್ಗೆ ವಿಕಲ್ಪದಿಂ ಲೋಪಂ.

**ಪ್ರಯೋಗಂ** -

ಕೆಕಾರಕ್ಕೆ -

ನುಡಿಯಲ್ಕೆ ಬಲ್ಲಂ; ಪೇೞಲ್ಕೆ ಕೇಳ್ದಂ; ಬೇಡಲ್ಕೆ ಬಂದಂ.

ಕಂ ॥ ... ಬಿ
ತ್ತರಿಸಲ್ಕೆ ವೇೞ್ ವರೂಥೋ
ತ್ಕರಮಂ ... ೧
(ಕಾವ್ಯಾವಲೋಕನಂ ೪೧೩)

ಅಲುವಿನ ಲೋಪಕ್ಕೆ - ಉಡಲ್ವೇೞ್, ಉಡವೇೞ್; ತರಲ್ವೇೞ್, ತರವೇೞ್.

ಕಂ ॥ ... ಬರವೇೞ್ ಸನ್ನದ್ಧವಾಜಿಸಾಧನಮಂ ... ೨
(ಕಾವ್ಯಾವಲೋಕನಂ ೪೧೩)

**ಸೂತ್ರಂ ॥ [2]ಪ್ರತಿಪಾದ್ಯಮುತ್ವಮಿತ್ವಂ ।**
**ಮತಿವಂತರಿನೆಯ್ದೆ ಪೂರ್ವಕಾಲ ಕ್ರಿಯೆಗಾ ॥**
**ಯುತುಮುತ್ತುಮುತ್ತೆಯುತೆಯೆಂ ।**
**ದು ತಗುಳ್ಗುಂ ವರ್ತಮಾನ ವಿಹಿತ ಕ್ರಿಯೆಯೊಳ್ ॥ ೨೩೬ ॥**

**ಟೀಕೆ** - ಮತಿವಂತರಿಂ = ಬುದ್ಧಿವಂತರಿಂದೆ, ಎಯ್ದೆ = ಚೆನ್ನಾಗಿ, ಪೂರ್ವಕಾಲ ಕ್ರಿಯೆಗೆ = ಭೂತಕಾಲದ ಕ್ರಿಯೆಗೆ, ಉತ್ವಂ, ಇತ್ವಂ, ಪ್ರತಿಪಾದ್ಯಂ = ಪ್ರತಿಪಾದಿಸಲ್ಪಡುವುದು; ವರ್ತಮಾನ = ವರ್ತಮಾನಕಾಲದಲ್ಲಿ, ವಿಹಿತ = ಕೂಡಲ್ಪಟ್ಟ, ಕ್ರಿಯೆಯೊಳ್, ಆಯುತುಂ = ಆ ಉತುಂ, ಉತ್ತುಂ, ಉತ್ತೆ, ಉತೆ, ಎಂದು, ತಗುಳ್ಗುಂ = ಎಯ್ದುವುದು.

**ವೃತ್ತಿ** - ಭೂತಕಾಲಕ್ರಿಯೆಯೊಳುಕಾರಮುಮಿಕಾರಮುಮಕ್ಕುಂ; ವರ್ತಮಾನಕ್ರಿಯೆಯೊಳ್ ಉತುಂ ಉತ್ತುಂ ಉತ್ತೆ ಉತೆ ಎಂದು ನಾಲ್ಕು ರೂಪಮಕ್ಕುಂ. *

~~~~~~~~~~~~~~~

೧. (ಪ್ರತಿಷೇಧವಿಧಿಯುಮೊದವದ) ೨. (ಪ್ರತಿಪಾದ್ಯಮಿತ್ವಮುತ್ವಂ)
~~~~~~~~~~~~~~~

*ವಿಚಾರಂ - ಈ, ಓ, ಕಾ, ಕೀ, ಕೇ, ನೋ, ಪೂ, ಬೇ, ಬಾ - ಎಂಬೇಕಾಕ್ಷರಧಾತುಗಳ್ಗಂ ಇಕಾರಾಂತಂಗಳ್ಗಂ ಏಕಾರಾಂತಂಗಳ್ಗಂ ಉಕಾರಂ ಪತ್ತುವುದು. ಉಕಾರಾಂತಂಗಳ್ಗೆ ಇಕಾರಂ ಪತ್ತುವುದು. ವ್ಯಂಜನಾಂತಂಗಳ್ಗೆ ಎರಡುಂ ಪತ್ತುಗುಂ. ಅಲ್ಲಿ ಉತ್ವಂ ಪತ್ತಿದಲ್ಲಿ ಭೂತಕಾಲದ ದಕಾರಂ ಪತ್ತುವುದು, ಇತ್ವಂ ಪತ್ತಿದಲ್ಲಿ ದತ್ವಂ ಬಾರದು; ಅವಂ ಪ್ರಯೋಗಂಗಳಲ್ಲಿ ನೋಡಿ ತಿಳಿವುದು. ಬಂದಂ ಪೋದಂ - ಎಂಬಲ್ಲಿ, ಬಂದು ಪೋದಂ; ಪೋದಂ ಬಂದನೆಂಬಲ್ಲಿ - ಪೋಗಿ ಬಂದಂ, ಎಂಬಂತೆ.

**ಪ್ರಯೋಗಂ -**

ಭೂತಕಾಲದುಕಾರಕ್ಕೆ - ಕುಸಿದು ನಡೆದಂ; ಒಸೆದು ಕೊಟ್ಟಂ; ನೆನೆದು ಪೇೞ್ದಂ.

ಕಂ ॥ ಮಿಂದುಂಡು ಕುಡಿದು ಮಗುೞ್ದು
ಬಂದಿರ್ಪೊಡಮಿರ್ಪಂ ... ೧
(ಆದಿಪುರಾಣಂ ೯-೯೦)

ಇಕಾರಕ್ಕೆ - ನಚ್ಚಿ ಬಂದಂ; ಮಚ್ಚಿ ಪೊಗೞ್ದಂ; ಎತ್ತಿ ನಡೆದಂ; ಮುತ್ತಿ ಬಿಟ್ಟಂ.

ಕಂ ॥ ತಿರ್ದಿ ನರನುದ್ದಮಿಸೆ ಜೀ
ಜೀೞ್ದಂ ... ೨

ವರ್ತಮಾನದೊಳ್ ಉತುಗೆ - ನಗುತುಂ ಬಂದಪಂ; ಪುಗುತುಮಿರ್ದಪಂ; ಕರೆಯುತುಂ ಪೋದಪಂ.

ಮ ॥ ವಿ ॥ ... ಸೂಸುತುಂ
ನದನದ್ಯಚ್ಛಜಲಂಗಳಂ ... ೩
(ಕಾವ್ಯಾವಲೋಕನಂ ೪೦೯)

ಉತ್ತುಗೆ - ಕಾದುತ್ತುಂ ಬಂದಂ; ಜಡಿಯುತ್ತುಂ ಪೋದಂ.

ಮ ॥ ವಿ ॥ ಕೆದಱುತ್ತುಂ ಮಣಲಂ ... ೪
(ಕಾವ್ಯಾವಲೋಕನಂ ೪೦೯)

... ಕಪಿಧ್ವಜಂ ನಿಳ್ಕಿ ನಿತ್ತರಿಸುತ್ತುಮಿರೆ ... ೫

ಉತ್ತೆಗೆ - ಕೆತ್ತುತ್ತೆ ಕಡಿದಂ; ಪರಸುತ್ತೆ ಬಂದಂ.

ಶಾ ॥ ವಿ ॥ ... ಪೋ ಪೋಗು ಕಾದುತ್ತೆ ಕ
ಣ್ಗುತ್ತಲ್ ಬಂದಪೆ ಸಲ್ಲವೆಮ್ಮೊಳಿವು ... ೬

ಉತೆಗೆ - ಮಿಱುಗುತೆ ಪೋದಂ; ಪಸುತೆ ನಿಂದಂ; ಈಸುತಿರ್ದಂ.

... ತನ್ನಂಬೆಗೆ ಪೇೞ್ದುದಂ ತಿಱುತಿರ್ಪ್ಪರ್ ೭

**ಸೂತ್ರಂ ॥ ದ ದಪಂಗಳ್ ಪರದೊಳ್ ತಾ ।**
**ಮೊದವಿರೆ ಮೀಯೆಂಬುದರ್ಕೆ ತರ್ಬರ್ಗಳ್ಗೊಂ ।**
**ದಿದ ಕೊಳ್ಸಲ್ಗಳ್ಗಮರ್ದಿ ।**
**ಪ್ರುದು ನತ್ವಂ ನಿಲ್ಗೆ ಬಲ್ಲರಿಂದೆ ವಿಕಲ್ಪಂ ॥ ೨೩೭ ॥**

**ಟೀಕೆ** - ಪರದೊಳ್ = ಧಾತುವಿನ ಪರದಲ್ಲಿ, ದ ದಪಂಗಳ್ = ದಕಾರ ದಪಕಾರಂಗಳ್, ತಾಂ, ಒದವಿರೆ = ಬಂದಿರೆ, ಮೀ ಎಂಬುದರ್ಕೆ = ಮೀ (ಸ್ನಪನೇ) ಎಂಬ ಧಾತುವಿಂಗೆ, ತರ್ಬರ್ಗಳ್ಗೆ = ತರ್ ಬರ್ ಎಂಬ ಧಾತುಗಳ್ಗೆ, ಒಂದಿದ ಕೊಲ್ಸಲ್ಗಳ್ಗೆ = ಕೂಡಿದ ಕೊಲ್ ಸಲ್ ಎಂಬ ಧಾತುಗಳ್ಗೆ, ನತ್ವಂ, ಅಮರ್ದಿರ್ಪುದು= ಪೊರ್ದುಗೆಯಾಗಿರ್ಪುದು; ನಿಲ್ಗೆ = ನಿಲ್ ಎಂಬುದರ್ಕ್ಕೆ, ಬಲ್ಲರಿಂದೆ = ವಿದ್ವಾಂಸರಿಂದೆ, ವಿಕಲ್ಪಂ = ವಿಕಲ್ಪವಾಗಿ ಬರ್ಪುದು.

**ವೃತ್ತಿ** - ದ ದಪಂಗಳ್ಪರಮಾಗೆ ಮೀ ಎಂಬುದರ್ಕಂ ತರ್ ಬರ್ಗಳ ರೇಫೆಗಂ ಕೊಲ್ ಸಲ್ಗಳ ಲತ್ವಕ್ಕಂ ನಕಾರಾದೇಶಂ; ನಿಲ್ ಎಂಬುದರ್ಕೆ ವಿಕಲ್ಪಂ. *

***ವಿಚಾರಂ** - ಶಬ್ದಾನುಶಾಸನದಲ್ಲಿ ಸೂತ್ರಂ - ॥ ಕೊಲ್ಸಲೋ ನಃ ॥ ೪೯೧ ॥ ಕೊಲ್ಸಲ್ ಇತ್ಯೇತಯೋರ್ಧಾತ್ವೋಃ ನಕಾರಾದೇಶೋ ಭವತಿ ದಕಾರಾದೌ ಪ್ರತ್ಯಯೇ ಪರೇ - ಎಂದುದಾಗಿ ಕೊಲ್ ಸಲ್ ಎಂಬ ಧಾತುಗಳ್ಗೆ ದಕಾರಾದಿ ಪ್ರತ್ಯಯಂ ಪರಮಾಗೆ ನಕಾರಾದೇಶಮಕ್ಕುಂ. ॥ ತರ್ಬರೋರಿಮಿಚ ॥ ೪೯೨ ॥ ತರ್ಬರ್ ಇತ್ಯೇತಯೋರ್ಧಾತ್ವೋಃ ನಕಾರಾದೇಶೋ ಭವತಿ ದಕಾರಾದೌ ಪ್ರತ್ಯಯೇ ಇಮಿಚ ಪರೇ - ಎಂದುದಾಗಿ, ದಕಾರಾದಿಪ್ರತ್ಯಯಂ ಪರಮಾಗೆಯುಂ ಮಧ್ಯಮಪುರುಷದ ವಿಧ್ಯರ್ಥದ ಬಹುವಚನವಾದ ಇಮ್ ಎಂಬುದು ಪರಮಾಗೆಯುಂ, ತರ್ ಬರ್ ಎಂಬ ಧಾತುಗಳ್ಗೆ ನಕಾರಾದೇಶಮಕ್ಕುಂ; ಅದೆಂತೆಂದೊಡೆ - ತಂದಂ, ತಂದಪಂ, ತಂದು, ತನ್ನಿಂ; ಬಂದಂ, ಬಂದಪಂ, ಬಂದು, ಬನ್ನಿಂ - ಎಂದಱಿವುದು.

**ಪ್ರಯೋಗಂ** -

ಕ್ರಮ ಪ್ರಯೋಗಕ್ಕೆ -

[ಮಿಂದಂ; ತಂದಂ, ಬಂದಂ; ಕೊಂದಂ, ಸಂದಂ]

ಪರಿಣೆ ॥ ಅಲರ ಮಱೆಯೊಳ್ ಮಿಂದಂ ಭೂಪಾಲ ಮನಸ್ಸನಾಜಿಯೊಳ್ ... ೧

ಕಂ ॥ ... ನಡೆತಂದಂ ಮೇರೆದಪ್ಪಿ ಕಪಿವಂಬುಧಿವೋಲ್ ... ೨

ಕಂ ॥ ... ಆವನ
ಬೀಡಿನ ಬೀರನ ಶಿರೋಬ್ಜವಾರ್ತಂದರಿದಂ ... ೩

ಶಾ ॥ ವಿ ॥ ಬಂದಂ ಫಲ್ಗುಣನಿಲ್ಲಿ ಸಂದೆಯಮಣಂ ತಾನಿಲ್ಲ ... ೪

ಶಾ ॥ ವಿ ॥ ... ಬಂದಂ ನರಂ ಕೊಂದನಿ
ನ್ನೇಗೊಂಡೆಂ ಗಳ ಗೆಯ್ವು[ದೆಂದು] ... ೫

ಕಂ ॥ ತಂತಮ್ಮನೆ ಕೊಂದರೆಂದು ಪಡೆಯಾ ಸಕಳಂ ... ೬

ಕಂ ॥ ಬೇಡರ ವೋಲ್ ಮಸಗಿ ತುಱುಗೊಳಲ್ ತಱಿಸಂದಂ. ೭

ಮಿಂದಪಂ; ತಂದಪಂ, ಬಂದಪಂ; ಕೊಂದಪಂ, ಸಂದಪಂ.

ನಿಲ್ಗೆ - ನಿಂದಂ, ನಿಲ್ತಂ

ಉ ॥ ಮಾ॥ ... ಮಂಡಲ
ವ್ಯೂಹಮನೊಡ್ಡಿ ನಿಂದನಿಱಿಯಲ್ ... ೮

ಸ್ರ ॥ ... ನೋಳ್ಪಿಕೊಂಡಂತೆ ಬೆನ್ನೊಳ್
ನಿಲ್ತಂ ಗಾಂಡೀವಿ ... ೯

ನಿಂದಪಂ, ನಿಲ್ತಪಂ

**ಸೂತ್ರಂ ॥ ಪ್ರಕೃತಿಯ ಪೂರ್ವದಿಕಾರದೊ ।
ಳುಕಾರದೊಳ್ ಹ್ರಸ್ವದೇತ್ವಮೋತ್ವಂ ಬಹುಳಂ ॥
ಪ್ರಕಟಂ ತರ್ಬರ್ಗಳ ಮೊದ ।
ಲಕಾರದೊಳ್ ದೀರ್ಘವಿಧಿ ವಿಲೋಮಕ್ರಿಯೆಯೊಳ್ ॥ ೨೩೮ ॥**

**ಟೀಕೆ** - ದ ದಪಂಗಳ್ಪರಮಾದ ಎಂಬುದನುವರ್ತನೆ. ಪ್ರಕೃತಿಯ = ದ ದಪಂಗಳ್ಪರಮಾದ ಧಾತುವಿನ, ಪೂರ್ವದ = ಮೊದಲ, ಇಕಾರದೊಳ್, ಉಕಾರದೊಳ್, ಹ್ರಸ್ವದ, ಎತ್ವಂ, ಒತ್ವಂ, ಬಹುಳಂ = ಬಹುಳವಾಗಿ ಬರ್ಪ್ಪುದು; ವಿಲೋಮಕ್ರಿಯೆಯೊಳ್ = ಪ್ರತಿಷೇಧದ ಕ್ರಿಯೆಯೊಳ್, ತರ್ಬರ್ಗಳ = ತರ್ ಬರ್ ಎಂಬ ಧಾತುಗಳ, ಮೊದಲ = ಆದಿಯ, ಅಕಾರದೊಳ್, ದೀರ್ಘವಿಧಿ = ದೀರ್ಘದ ವಿಧಿ, ಪ್ರಕಟಂ = ಸಿದ್ಧವಾಗುವುದು.

**ವೃತ್ತಿ** - ದ ದಪಂಗಳ್ಪರಮಾದ ಧಾತುವಿನ ಮೊದಲಿಕಾರದೊಳಮುಕಾರದೊಳಂ ಹ್ರಸ್ವಮಪ್ಪೇತ್ವಮುಮೋತ್ವಮುಮಕ್ಕುಂ; ತರ್ ಬರ್ ಎಂಬ ಧಾತುಗಳ ಮೊದಲ ಕಾರಕ್ಕೆ ಪ್ರತಿಷೇಧಕ್ರಿಯೆಯೊಳ್ ದೀರ್ಘಮಕ್ಕುಂ. *

*ವಿಚಾರಂ- ಇಸು, ಬಿಸು, ಗಿಱು, ತಿಱು, ಕಿಡು, ಉಗು, ಪುಗು, ಕುಡು, ತುಡು - ಎಂಬೀ ಹ್ರಸ್ವಾದಿ ದ್ವಿಸ್ವರಂಗಳಾದುಕಾರಾಂತ ಧಾತುಗಳ್ಗೆ ಕ್ರಮದಿಂದೆ ಆದಿಯ ಇಕಾರಕ್ಕೇಕಾರಂ ಉಕಾರಕ್ಕೊಕಾರಂ ಬರ್ಪುವೆಂದಱಿವುದು.

**ಪ್ರಯೋಗಂ –**

ಇತ್ವದೆತ್ವಕ್ಕೆ -

ಬಿಸು - ಬೆಚ್ಚಂ; ತಿಱು - ತೆತ್ತಂ; ಕಿಡು - ಕೆಟ್ಟಂ, ಕಿಱು - ಕೆತ್ತಂ; ಇಸು - ಎಚ್ಚಂ, ಗಿಱು - ಗೆತ್ತಂ.

ಕಂ ॥ ಮಱುಗುವಿನಂ ಮಾಣದೆಚ್ಚನರಿವಾಹಿನಿಯಂ. ೧

ಮ ॥ ಸ್ರ ॥ ಮುಗಿಲಂ ಮಾಱಾನೆಗೆತ್ತರ್ ... ೨

ಉತ್ವದೊತ್ವಕ್ಕೆ -

ಉಗು - ಒಕ್ಕಂ; ಪುಗು - ಪೊಕ್ಕಂ; ಕುಡು - ಕೊಟ್ಟಂ, ತುಡು - ತೊಟ್ಟಂ.

ಸ್ರ ॥ ... ಎನುತುಮನಿತುಮಂ ಧರ್ಮಜಂ ಸೂಱೆಗೊಟ್ಟಂ. ೩
(ವಿಕ್ರಮಾರ್ಜುನ ವಿಜಯಂ ೬-೪೦)

ಕಂ ॥ ತೊಟ್ಟಂ ಸಮ್ಮೋಹನಮಂ ... ೪
(ಕಾವ್ಯಾವಲೋಕನಂ ೩೮೦)

ದಪದೊಳಂ -

ಎಚ್ಚಪಂ, ಬೆಚ್ಚಪಂ, ತೊಟ್ಟಪಂ, ಕೊಟ್ಟಪಂ - ಎಂಬಂತೆಲ್ಲಕ್ಕಂ ಪತ್ತುಗುಂ.

ಬಹುಳದಿಂ ಕೆಲವಱೊಳೆತ್ವಮೊತ್ವಮಿಲ್ಲ -

ಇತ್ತಂ, ಇರ್ದಂ, ಇಟ್ಟಂ.

ಕಂ ॥ ಪಸೆಯಿರ್ದಂ ಗರುಡವೇಗನ್ನಪನಂದನೆಯೊಳ್ ೫

ಮ ॥ ವಿ ॥ ... ಬೇಟ್ಟಿರಿದಿರೊಳ್ ಚಕ್ರಾದಿಚಿಹ್ನಂಗಳಂ
ತರಿಸಿಟ್ಟಂ ೬

ಉಟ್ಟಂ, ಸುಟ್ಟಂ; ಉರ್ಕಿದಂ, ಸುರ್ಕಿದಂ

ಜವದಿಂದಗಮಲೆಯಂ ಸುಟ್ಟಂ ... ೭

ಕಟಿತ್ತಿಯಿಂದಮುಟ್ಟಿಂ ... ೮

ಕಂ ॥ ... ಆ
ಗಳೆ ಗಂಡುಡೆಯುಟ್ಟು ಬಿಟ್ಟು ಹಿಣಿಲಂ ತುಱುಬಂ ... ೯

- ದಪಕ್ಕಮಂತೆ.

ದೀರ್ಘಕ್ಕೆ -

ಶಾ ॥ ವಿ ॥ ... ಪತಿಗೆಂದುಂ ಯುದ್ಧದೊಳ್ ಬನ್ನಮಂ
ತಾರಂ ೧೦

ಶಾ ॥ ವಿ ॥ ಕೂರ್ತಳಿಪಿಂದಮಸ್ರವಧುವರ್ ಬೆಂಬಿಟ್ಟು ದೂದಟ್ಟಿಯುಂ
ಬಾರಂ ... ೧೧

ಬಹುಳದಿಂ ಪ್ರತಿಷೇಧಮಲ್ಲದಲ್ಲಿಯುಂ ದೀರ್ಘಮುಂಟು -

ಉ ॥ ಮಾ ॥ ಬಾರ ಮರಾಳಿಕಾಗಮನೆ ... ೧೨

**ಸೂತ್ರಂ ॥ [೧]ಧಾತುವಿನಂತ್ಯದ ವರ್ಗೋ॥**
**ಪೇತ ತೃತಿಯಾಕ್ಷರಕ್ಕೆ ತಾಂ ಪ್ರಥಮತ್ವಂ ॥**
**ಮಾತೇಂ ವ್ಯಂಜನರೂಪದಿ ।**
**ನೇತೆಱದಿಂ ಸ್ವಂತಧಾತುಗಕ್ಕುಂ ಚತ್ವಂ ॥ ೨೩೯ ॥**

**ಟೀಕೆ** -'ದ ದಪಂಗಳ್ಪರದೊಳೊದವಿರೆ' ಎಂಬುದನುವರ್ತನೆ. ಧಾತುವಿನ = ದ ದಪಂಗಳ್ಪರಮಾದ ಪ್ರಸ್ವಾದಿ ದ್ವಿಸ್ವರಂಗಳಾದುಕಾರಾಂತ ಧಾತುವಿನ, ಅಂತ್ಯದ = ಕಡೆಯಣ, ವರ್ಗ = ವರ್ಗಂಗಳಲ್ಲಿ, ಉಪೇತ = ಕೂಡಲ್ಪಟ್ಟ, ತೃತೀಯಾಕ್ಷರಕ್ಕೆ = ಮೂಱನೆಯಕ್ಷರಂಗಳ್ಗೆ, ಪ್ರಥಮತ್ವಂ = ಮೊದಲಕ್ಷರದ ಭಾವಂ, ತಾಂ, ಮಾತೇಂ = ಹೇೞ್ವುದೇಂ, ವ್ಯಂಜನರೂಪದಿಂ, ಅಕ್ಕುಂ = ಆಗುವುದು; ಏ ತೆಱದಿಂ = ಆವ ರೀತಿಯಿಂದೆಯುಂ, ಸ್ವಂತ ಧಾತುಗೆ = ಸುಕಾರಾಂತಧಾತುಗೆ, ಚತ್ವಂ = ಚಕಾರಂ ಆಗುವುದು.

**ವೃತ್ತಿ** - ದ ದಪಂಗಳ್ಪರಮಾದ ಧಾತುವಿನ ಕಡೆಯ ವರ್ಗತೃತೀಯಾಕ್ಷರಕ್ಕೆ ವ್ಯಂಜನರೂಪದಿಂ ತಂತಮ್ಮ ಮೊದಲಕ್ಕರಮಕ್ಕುಂ; ಸುಕಾರಾಂತ ಧಾತುವಿನ ಕಡೆಯ ಸುಕಾರಕ್ಕೆ ವ್ಯಂಜನ ಚಕಾರಮಕ್ಕುಂ. *

* **ವಿಚಾರಂ** - ಪುಗು, ನಗು, ಉಗು, ಮಿಗು ಎಂಬ ಗಾಂತಕ್ಕಂ ಅಡು, ಸುಡು, ಕುಡು, ತುಡು, ಬಿಡು, ಉಡು, ನಡು, ಪಡು,ಇಡು, ಕಿಡು, ಮಡು ಎಂಬ ಡಾಂತಕ್ಕಂ ಆಸೆವಡು, ಪಡಲಿಡು, ಮುಂಬಿಡು, ಪೊಲಬುಗಿಡು, ಒಡಂಬಡು, ಮೂಗುವಡು, ಅಟ್ಟಜಂಬಡು. ಕರುವಿಡು, ತಿಟ್ಟವಿಡು, ಉಬ್ಬಸಂಬಡು

~~~~~~~~~~~~~~~

೧. (ಧಾತುಗಳಂತ್ಯದ)
~~~~~~~~~~~~~~~

ಎಂಬಂತೆ ಬಹುಸ್ವರಯುಕ್ತಂಗಳಾದೊಡಂ ಇಡು, ಪಡು, ಮಡು, ಬಿಡು, ಕುಡು ಎಂಬ ಪ್ರಸ್ವಾದಿ ದ್ವಿಸ್ವರಂಗಳಾದುಕಾರಾಂತ ಧಾತುಗಳಂತ್ಯವಾಗಿರ್ಪುದಱಿಂದೆ ಈ ಕ್ರಿಯಾಸಮಾಸ ರೂಪಧಾತುಗಳ್ಗಂ ದಾಂತದಲ್ಲಿ 'ಮುದು' (ವೃದ್ಧೌ) ಎಂಬುದರ್ಕಂ ಪ್ರಥಮಾಕ್ಷರಂ ಬರ್ಕುಂ. ಇಸು, ಬಿಸು, ಪಸು - ಎಂಬ ಸುಕಾರಾಂತಕ್ಕೆ ಚತ್ವಂ ಬರ್ಕುಂ.

**ಪ್ರಯೋಗಂ -**

ಗಕಾರಕ್ಕೆ - ಉಗು -ಒಕ್ಕಂ; ಪುಗು - ಪೊಕ್ಕಂ; ನಗು - ನಕ್ಕಂ; ಮಿಗು - ಮಿಕ್ಕಂ.

ಕಂ ॥ ತಕ್ಕಿಂದಿಱುವೆಡೆಯೊಳ್ [ಪೋ]
ಮಿಕ್ಕಂ ಕರ್ಣಾರ್ಜುನರ್ಕಳಂ ... ೧

ಚಂ ॥ ಮಾ॥ ... ಪೊಕ್ಕನಂದು ನಿಜಮಂದಿರಮಂ ಪರಸೈನ್ಯಭೈರವಂ ... ೨

(ವಿಕ್ರಮಾರ್ಜುನ ವಿಜಯಂ ೫-೧೦೫)

ಡಕಾರಕ್ಕೆ - ನಡು - ನಟ್ಟಂ; ಮಡು - ಮಟ್ಟಂ; ಕಿಡು - ಕೆಟ್ಟಂ; ಕುಡು - ಕೊಟ್ಟಂ.

ಕಂ ॥ ... ಪಿಡಿಯೆಂದಸಿತಾಳಪತ್ರಮಂ ಯತಿ ಕೊಟ್ಟಂ ೩

ಗುರು ನೆಟಿಲೊಳೆ ಪೋರ್ವಂತೆವೊಲ್ ದೆಸೆಗೆಟ್ಟಂ ೪

ದಕಾರಕ್ಕೆ - ಮುದು - ಮುತ್ತಂ.

ಕಂ ॥ ಮುತ್ತುದು ನೇಸಱ ತೇಜಂ
ಸತ್ತುದು ದಾವಾಗ್ನಿ ... ೫

(ಸೂಕ್ತಿಸುಧಾರ್ಣವಂ ೧೦-೧೪೮)

ಸುಕಾರದ ಚತ್ವಕ್ಕೆ - ಪಸು - ಪಚ್ಚಂ; ಬಿಸು - ಬೆಚ್ಚಂ; ಇಸು - ಎಚ್ಚಂ.

ಕಂ ॥ ... ಕಳ್ಳ ಬೆಳ್ಳಿವಟ್ಟಲ್ ಬಾಯೊಳ್
ಬೆಚ್ಚಂತಿರೆ ಸತಿ ... ೬

(ಸೂಕ್ತಿಸುಧಾರ್ಣವಂ ೧೩-೬)

... ಮಾಱಾಂತೆಚ್ಚಂ ಮಹಾರಥರಂ ನರಂ ... ೭

- ದಪಕ್ಕಮಂತೆ.

**ಸೂತ್ರಂ ॥ ಱಾಂತದೊಳಂ ಮೃತಿದಾನಾ ।**
**ರ್ಥಾಂತದೊಳಂ ವ್ಯಂಜನದ ತಕಾರಂ ದೀರ್ಘಂ ॥**
**ಪಿಂತಿರೆ ಬರ್ಕುಂ ಹ್ರಸ್ವತೆ ।**
**ಱಾಂತಕ್ಕಂ ರೇಫಮೊರ್ಮೆ ತವುಗೆ ಪಕಾರಂ ॥ ೨೪೦ ॥**

**ಟೀಕೆ** – ದ ದಪಂಗಳ್ಪರದೊಳಿರೆ ಎಂಬುದನುವರ್ತನೆ. ಱಾಂತದೊಳಂ = ರೇಫಾಂತ ಧಾತುಗಳಲ್ಲಿಯುಂ, ಮೃತಿದಾನಾರ್ಥಾಂತದೊಳಂ = ಸಾ ಈ ಎಂಬ ಮರಣಾರ್ಥ ದಾನಾರ್ಥದ ಧಾತುಗಳಂತ್ಯದಲ್ಲಿಯುಂ, ವ್ಯಂಜನದ, ತಕಾರಂ, ಬರ್ಕುಂ = ಱಾಂತಕ್ಕಂ, ಸಾ ಎಂಬುದರ್ಕಂ ಆದೇಶವಾಗಿ, ಈ ಎಂಬುದರ್ಕಾಗಮವಾಗಿ ಬರ್ಪುದು; ಪಿಂತೆ = ಹಿಂದೆ, ದೀರ್ಘಂ, ಇರೆ, ಪ್ರಸ್ವತೆ, ಬರ್ಕುಂ = ಬರ್ಪುದು; ಱಾಂತಕ್ಕಂ = [ಶಕಟ] ರೇಫಾತಕ್ಕೆಯುಂ, ಒರ್ಮೆ = ಒಂದು ಬಾರಿ, ರೇಫಂ = ರೇಫೆ ಬರ್ಪುದು; ತವುಗೆ = ತವು (ಕ್ಷಯೇ) ಎಂಬ ಧಾತುಗೆ, ಪಕಾರಂ, ಬರ್ಪುದು.

**ವೃತ್ತಿ** - ದ ದಪಂಗಳ್ಪರಮಾದ ಧಾತುವಿನ ಕಡೆಯ ಱಕಾರಕ್ಕೆಯುಂ ಸಾ, ಈ ಎಂಬ ಧಾತುಗಳ ಕಡೆಯೊಳಂ ವ್ಯಂಜನ ತಕಾರಮಕ್ಕುಂ; ಸಾ, ಈ ಎಂಬವಱಾದಿ ದೀರ್ಘಕ್ಕೆ ಹ್ರಸ್ವಮಕ್ಕುಂ; ಱಕಾರಕ್ಕೊರ್ಮೆ ರೇಫಮಕ್ಕುಂ; ತವು ಎಂಬ ಧಾತುವಿನ ವಕಾರಕ್ಕೆ ಪಕಾರಮಕ್ಕುಂ. *

* ವಿಚಾರಂ - ಪೆಱು, ತೆಪ್ಪಱು, ಕಿಱು, ತಿಱು, ಗಿಱು, ಪೊಱು, ಎಟ್ಟಱು, ಆಸಱು, ಬೇಸಱು - ಎಂಬೀ ಱಾಂತಕ್ಕೆ ತಕಾರಂ ಬರ್ಪುದು; ಉೞಿದ ಱಾಂತಕ್ಕೆ ಒರ್ಮೆ ಎಂಬುದಱಿಂ ವಿಕಲ್ಪದಿಂ ರೇಫೆಯಕ್ಕುಂ.

**ಪ್ರಯೋಗಂ** -

ಱಕಾರದ ತಕಾರಕ್ಕೆ -

ಕಿಱು - ಕೆತ್ತಂ; ತಿಱು - ತೆತ್ತಂ; ಪೆಱು - ಪೆತ್ತಂ; ಗಿಱು - ಗೆತ್ತಂ.

ಸ್ರ ॥ ... ಜಾತವೇದಂ ಪಟುಕಪಟವಟುವ್ಯಾಜದಿಂ ಬೇಡಿ ಪೆತ್ತಂ ೧
ಸಾಳಭಂಜಿಕೆಗೆತ್ತು ನೋಡಿದಂ ಲತಾಕೋಮಳೆಯಂ ... ೨

ಸಾ, ಈ ಎಂಬಿವರ್ಕೆ -

ಸತ್ತಂ, ಇತ್ತಂ

ಶಾ ॥ ವಿ ॥ ... ಸತ್ತರ್ ಕಾದಿ ನಿನ್ನುಳ್ಳರುಂ
ಬೆನ್ನಿತ್ತರ್ ಕೆಲರ್ ... ೩

ಕಂ ॥ ... ನಗೆಮೊಗದೊಳುಗಿದು ಕವಚಮನಿಂದ್ರಂ
ಗಿತ್ತಂ ಕರ್ಣಂ ... ೪

ಸಾ, ಈ ಎಂಬವಱಂತೆ ಸಮುಚ್ಚಯವಶದಿಂ ಮತ್ತೆ ಕೆಲವಱಾದಿ ದೀರ್ಘಕ್ಕೆ ಹ್ರಸ್ವಮುಂಟು -

ಕಾಣ್ - ಕಂಡಂ; ಏೞ್ - ಎೞ್ದಂ; ಬೀೞ್ - ಬಿೞ್ದಂ; ಆೞ್ - ಅೞ್ದಂ ಇವು ಮೊದಲಾದುವು.

ಱಕಾರದ ರೇಫೆಗೆ -

ಅಱು ಎಂಬುದರ್ಕೆ ಅರ್ತಂ; ವಿಕಲ್ಪದಿಂ ಅಱುತನೆಂದುಮುಂಟು.

ಅರ್ತ ಕದಂಪು ಬತ್ತಿದ ಕಾಲುಂ ಹುರಿಯೞಿದೞಿಮಿಳಿಯೆಸಕದ ಸೆರೆಯುಂ(?) ೫

ಆಱು ಎಂಬುದರ್ಕೆ ಆರ್ತಂ -

ಕಂ ॥ ಮಾರ್ತಾಪ ತೆರೆಗಳಿಂ ತರ
ಲಾರ್ತುದು ತನ್ನದಿಗೆ ಸುರನದೀವಿಭ್ರಮಮಂ ೬

ತವುಗೆ -

ತಪ್ಪಂ, ತಪ್ಪಪಂ.

ಕಂ ॥ ... ತಪ್ಪಂ ತನ್ನೊಳ್
ಪಳಂಚಿ ಕಿಡಿಗುಟ್ಟಿ ತಪ್ಪುವಂಬುಗಳನವಂ ... ೭

ಸೂತ್ರಂ ॥ ನಿರುತಂ ಕ ಚ ಟ ತ ಪಂಗಳ ।
ಪರದ ದಕಾರಕ್ಕೆ ಪೂರ್ವರೂಪಮದಕ್ಕುಂ ॥
ಪರವರ್ಣಂ ಧಾತ್ವಂತ್ಯದೊ ।
ಳಿರೆ ಡತ್ವಂ ಮೇಣ್ [1]ತಕಾರಮೊರ್ಮೆಯಕಾರಂ ॥ ೨೪೧ ॥

**ಟೀಕೆ** - ನಿರುತಂ = ನಿಶ್ಚಯವಾಗಿ, ಕ ಚ ಟ ತ ಪಂಗಳ = ಕಕಾರ ಚಕಾರ ಟಕಾರ ತಕಾರ ಪಕಾರಂಗಳ, ಪರದ = ಮುಂದಣ, ದಕಾರಕ್ಕೆ, ಪೂರ್ವರೂಪಂ = ಮೊದಲಕ್ಷರದ ರೂಪು, ಅದು, ಅಕ್ಕುಂ = ಆಗುವುದು; ಪರವರ್ಣಂ = ಕ ಚ ಟ ತ ಪಂಗಳಲ್ಲದ ಅನ್ಯವರ್ಣಂ, ಧಾತ್ವಂತ್ಯದೊಳ್ = ಧಾತುಗಳ ಕಡೆಯಲ್ಲಿ, ಇರೆ, ಡತ್ವಂ; ಮೇಣ್ = ಅದಲ್ಲದೆ, ತಕಾರಂ, ಒರ್ಮೆ= ಒಂದುಬಾರಿ, ಅಕಾರಂ, ಆಗುವುದು.

**ವೃತ್ತಿ** -ಧಾತುವಿನ ಕಡೆಯ ಕ ಚ ಟ ತ ಪಂಗಳ ರೂಪಮಂ ಪರದ ದಕಾರಂ ಪಡೆಗುಂ; ಕ ಚ ಟ ತ ಪಂಗಳಲ್ಲದ ಪೆಱವಕ್ಕರಂಗಳ್ ಧಾತುವಿನ ಕಡೆಯೊಳಿರೆ ಪರದ ದಕಾರಕ್ಕೆ ಡಕಾರಮುಂ [2]ತಕಾರಮಕಾರಮುಮಕ್ಕುಂ. *

***ವಿಚಾರಂ** - ಉಣ್ ಕಾಣ್ ಎಂಬ ಣಕಾರದ, ಕೊಳ್ ಧಾತುವಿನ ಣಕಾರದ ಮುಂದೆ ದತ್ವಂ ಡಕಾರವಾಗುವುದು.

ಶಬ್ದಾನುಶಾಸನದಲ್ಲಿ ಸೂತ್ರಂ - ॥ ಕವಲಾದಿಭ್ಯಸ್ತಃ ॥ ೫೦೭ ॥ ಕವಲಾದಿಭ್ಯೋ ಧಾತುಭ್ಯಃ ಪರಸ್ಯ ದಕಾರಸ್ಯ ತಕಾರಾದೇಶೋ ಭವತಿ - ಎಂಬುದಾಗಿ, ಕವಲಾದಿ ಧಾತುಗಳತ್ತಣಿಂ ಪರದ ದಕಾರಕ್ಕೆ ತಕಾರಾದೇಶವಪ್ಪುದು. ಕವಲ್, ಮಡಲ್, ಬಲ್, ಕಲ್, ಪೋಲ್, ಸಾಲ್, ಸೋಲ್, ಪೇಲ್, ನೂಲ್, ಕೂರ್, ಕಸರ್, ಕನರ್, ಕೊನರ್, ತಳಿರ್, ಬೆಳರ್, ಚಿಗುರ್, ಬೆಮರ್,ಅಟ್, ಉಟ್, ಕೀಟ್, ಚಳಿ, ಮೊಳೆ, ಅಱೆ, ಅಱು, ಮಱೆ, ಕುಱು, ಬಾ, ಕೀ, ಪೂ, ಬೀ, ಓ, ಕೂನ್, ಸೀನ್, ಪೇನ್, ಆನ್, ನೋನ್, ಈನ್ - ಎಂಬಿವು ಕವಲಾದ್ಯಾಕೃತಿಗಣಂ. ಇವಱಲ್ಲಿ ಅಱು, ಮಱೆ, ಬೆಮರ್, ಬೆಳರ್, ಕೀಟ್ ಎಂಬಿವಾದಿಯಾದುವರ್ಕೆ ವಿಕಲ್ಪದಿಂ ತಕಾರಮಪ್ಪುದಾಗಿ, ಇವು ಪ್ರಯೋಗಗಮ್ಯಗಳೆಂದಱುವುದು.

**ಪ್ರಯೋಗಂ** -

ಕಕಾರಕ್ಕೆ -

ಒಕ್ಕಂ, ಒಕ್ಕರ್; ಮಿಕ್ಕಂ, ಮಿಕ್ಕರ್; ಪೊಕ್ಕಂ, ಪೊಕ್ಕರ್; ನಕ್ಕಂ, ನಕ್ಕರ್.

ಉ ॥ ಮಾ ॥ ... ತಕ್ಕರಂ
ಮಿಕ್ಕರದೇಕೆ ಮನ್ನಿಸುವರಕ್ಕರವೋದದ ಕಲ್ಲ ಪಾಪೆಗಳ್ ॥ ೧

ಕಂ ॥ ರಕ್ಕಸಿಯ ಮಾಡಮದಱೊಳ್ ।
ಪೊಕ್ಕವರುಱುವರೆ ಸರಸ್ವತೀಮಣಿಹಾರಾ ॥ ೨

ಚಕಾರಕ್ಕೆ -

ಎಚ್ಚಂ, ಎಚ್ಚರ್; ಬೆಚ್ಚಂ, ಬೆಚ್ಚರ್; ಪಚ್ಚಂ, ಪಚ್ಚರ್.

ಕಂ ॥ ... ಮಣಿಯದೆ ಕುಣಿದಿದಿರನದಿರೆ ಕೂಕಿಱುದೆಚ್ಚರ್ ೩

ಬೆಚ್ಚಾಡಿ ಘಾಯದಿಂ ಹಯಬಲಮಂ ... ೪

~~~~~~~~~~~~~~~

೧. (ತಕಾರಮೊರ್ಮೆ ಟಕಾರಂ) ೨. (ತಕಾರಮುಂ ಟಕಾರಮುಮಕ್ಕುಂ)
~~~~~~~~~~~~~~~

ಮಿಱುಗೆ ಮಾರಿಗೆ ಪಚ್ಚರ್ ... ೫

ಟಕಾರಕ್ಕೆ -

ತೊಟ್ಟಂ, ತೊಟ್ಟರ್; ಕೊಟ್ಟಂ, ಕೊಟ್ಟರ್; ಬಿಟ್ಟಂ, ಬಿಟ್ಟರ್; ನಟ್ಟಂ, ನಟ್ಟರ್.

ಬೆಕ್ಕಸಂಬಟ್ಟು ಬಾಯಂ ಬಿಟ್ಟರ್ ಭೀಷ್ಮರ್ ... ೬

ಮಂದಾಕ್ರಾಂತಾ ॥ ತೊಟ್ಟಂ ಸಂಮೋಹನಮನಭಯಂ ಪಾಂಡವಂ ... ೭

ತಕಾರಕ್ಕೆ -

ಪೆತ್ತಂ, ಪೆತ್ತರ್; ಕೆತ್ತಂ, ಕೆತ್ತರ್; ತೆತ್ತಂ, ತೆತ್ತರ್; ಗೆತ್ತಂ, ಗೆತ್ತರ್; ಪೊತ್ತಂ, ಪೊತ್ತರ್.

ಮ ॥ ಸ್ರ ॥ ಮುಗಿಲಂ ಮಾಱಾನೆಗೆತ್ತರ್ ... ೮

ಪಕಾರಕ್ಕೆ -

ತಪ್ಪಂ, ತಪ್ಪರ್.

ಕಂ ॥ ... ತಪ್ಪಂ ತನ್ನೊಳ್
ಪಳಂಚಿ ಕಿಡಿಗುಟ್ಟಿ ತಪ್ಪುವಂಬುಗಳನವಂ. ೯

ಡಕಾರಕ್ಕೆ -

ಉಂಡಂ, ಕಂಡಂ, ಕೊಂಡಂ.

ಕಂ ॥ ಮರದ ಹರಿಯಣದೊಳುಂಡಂ
ಮರದೊಳ್ ಸಮೆದಂಕವಣೆಯನೇಱಿದಂ ... ೧೦

ಮ ॥ ವಿ॥ ... ಕುರು
ಪ್ರಭು ಕಂಡಂ ಶರಜಾಲಜರ್ಜರಿತಗಾತ್ರತ್ರಾಣನಂ ದ್ರೋಣನಂ ೧೧
(ಸಾಹಸಭೀಮ ವಿಜಯಂ ೪-೪೮)

ಮ ॥ ವಿ ॥ ... ಭುವನತ್ರಿಣೇತ್ರರುಚಿಯಂ ಕೆಯ್ಕೊಂಡನಾ ಪಾಂಡವಂ ೧೨

ದಕಾರಕ್ಕಾದ ತಕಾರಕ್ಕೆ -

ಪೋಲ್ತಂ, ಸೋಲ್ತಂ, ನಿಲ್ತಂ; ಕಿಱ್ತಂ, ಉಱ್ತಂ.

ಶಾ ॥ ವಿ ॥ ಉಱ್ತಂ ಮಾಳವದೇಶಮಂ ಕಿಡಿಸಿ ತದ್ಧಾರಾಪುರಸ್ತ್ರೀಯರಂ
ತೊಱ್ತುರ್ ಮಾಡಿದಂ ... ೧೩

ಸ್ರ ॥ ... ಕಾದದಿರ್ದಂದು ಸೋಲ್ತಂ
ಕೌಂತೇಯಂ ಕೌರವಂಗೆಂದುಲಿಗುಂ ... ೧೪

ಕಂ ॥ ... ಮಱಸುಂದಿದ ಪುಲಿಯನಾಗಳಿನಿಸಂ ಪೋಲ್ತಂ ೧೫
(ಕಾವ್ಯಾವಲೋಕನಂ ೪೪೮)

ಸ್ರ ॥ ... ನೋಳ್ಪಿಕೊಂಡಂತೆ ಬೆನ್ನೊಳ್
ನಿಲ್ತಂ ಗಾಂಡೀವಿ ... ೧೬

ಒಂದು ಸೂಟಿ್ ದಕಾರಕ್ಕೆ ಟಕಾರಮಕ್ಕುಂ -

ಬೆರಲಂ[ಟು]ವು ಪೊಕ್ಕುಟಿನುಗುರಿಸಿದುವು ತುಱುಂಬಂ ೧೭

ಮೇಣೆಂಬುದಱುಂ ಕೆಲವಱೊಳಿರ್ದಂತೆ ದಕಾರಮೆ -

ಪೂಣ್ದಂ, ಮಾಣ್ದಂ, ಜೋಲ್ದಂ, ಎಟ್ದಂ, ನೇಲ್ದಂ, ಅಟ್ದಂ, ಬಿಟ್ದಂ, ಆರ್ದಂ, ನೇರ್ದಂ.

ಕಂ ॥ ... ಬಾ

ದುಂಟೆನೆ ಪತ್ತನೆಯ ತಲೆಯುಮಂ ನೇರ್ದಾಗಳ್ ೧೮

**ಸೂತ್ರಂ ॥ ನೆಗಟ್ಗುಂ ಲೋಪಂ ಪೋಗಾ ।**
**ಗುಗಳ ಗಕಾರಕ್ಕೆ ದ ದಪಮಿರೆಯುಂ ದತ್ವ ॥**
**ಕ್ಕೊಗೆದಸ್ವರಯತ್ವಂ ಪ ॥**
**ತ್ತುಗೆಗೊಂಡುದುಗಾದ ತುತ್ವದೊಳ್ ನೆಲಸಿರೆಯುಂ ॥ ೨೪೨ ॥**

**ಟೀಕೆ** - ದ ದಪಂ = ದ ದಪಕಾರಂ; ಇರೆಯುಂ = ಪರದಲ್ಲಿ ಇರ್ದೊಡೆಯುಂ, ದತ್ವಕ್ಕೆ = ಭೂತಕಾಲದ ದಕಾರಕ್ಕೆ, ಅಸ್ವರಯತ್ವಂ = ವ್ಯಂಜನದ ಯಕಾರಂ, ಒಗೆದು = ಹುಟ್ಟಿ, ಉದುಗೆ = ನಪುಂಸಕಲಿಂಗದ ಉದು ಎಂಬುದರ್ಕೆ, ಆದ ತುತ್ವದೊಳ್ = ಆದೇಶವಾದ ತುಕಾರದಲ್ಲಿ, ಪತ್ತುಗೆಗೊಂಡು = ಪೊರ್ದುಗೆಯಾಗಿ, ನೆಲಸಿರೆಯುಂ, ಪೋಗಾಗುಗಳ = ಪೋಗು ಆಗು ಎಂಬ ಧಾತುಗಳ, ಗಕಾರಕ್ಕೆ, ಲೋಪಂ, ನೆಗಟ್ಗುಂ = ಬರ್ಪುದು.

**ವೃತ್ತಿ** - ದ ದಪಂಗಳ್ ಪರಮಾಗೆಯುಂ ಪೋಗು ಆಗು ಎಂಬಿವಱ ಗಕಾರಕ್ಕೆ ಲೋಪಂ; ಭೂತವತಿಯ ದಕಾರಕ್ಕೆ ವ್ಯಂಜನ ಯಕಾರಂ ಬಂದು ಉದುಗಾದ ತುಕಾರದೊಳ್ ಪೊರ್ದೆಯುಂ ಗಕಾರಕ್ಕೆ ಲೋಪಮಕ್ಕುಂ.

**ಪ್ರಯೋಗಂ -**

ಪೋದಂ, ಪೋದಪಂ; ಆದಂ, ಆದಪಂ; ಪೋದುದು, ಆದುದು; ಪೋಯ್ತು, ಆಯ್ತು.

ಕಂ ॥ ಪೊಮ್ಮರೆವೋಲ್ ಪೊಳೆದು ಪಾಱುಪೋದಂ ಶ್ವೇತಂ ೧

ಮಾಲಿನಿ ॥ ... ಕೊಂ

ಬಿಟುಪಿದ ಮರದಿಂದಂದಗ್ಗಳಂ ತಿಣ್ಣಮಾದಂ ... ೨

ಉ ॥ ಮಾ ॥ ... ಕೆಂದಳಿರ್ ಮಿಸುಪ ಕೆಂಗಱುಯಾದುದು ಪೂದೊಡಂಬೆ ಪಿ

ಟ್ಕಾದುದು ... ೩

(ಪುಷ್ಪದಂತ ಪುರಾಣಂ ೮-೮೧)

ಕಂ ॥ ... ಅಬ್ಜಿನಿ

ಪೋದುದು ನುಣ್ದನಿ ನವಿಲ್ಗೆ ಸರದದ ಪುಗಿಲೊಲ್ ... ೪

... ಭೀಷಣಮಾಯ್ತು ಸೈನ್ಯಮಹಾರ್ಣವಂ ... ೫

ಕಂ ॥ ಆಯ್ತಬ್ಧಿಯೆ ಘೂರ್ಣಿಸುವಂ
ತಾಯ್ತರಮನೆಯೊಳಗೆ ... ೬

ಮ ॥ ವಿ ॥ ... ಬಗೆ ಪೋಯ್ತಿಗಳೆಲೇ ಇದಲ್ತೆ ತುಹಿನಕ್ಷೋಣೀಧ್ರದುತ್ತುಂಗಸಾ
ನುಗಳೊಳ್ ... ೭

(ಕಾವ್ಯಾವಲೋಕನಂ ೪೮)

ಮ ॥ ವಿ ॥ ... ಪುಂಸ್ಕೋಕಿಲ
ಧ್ವನಿ ತಾನೀರೆಲೆವೋಯ್ತು ... ೮

ಭವಿಷ್ಯಂತಿಯ ವಕಾರಕ್ಕಂ ಸಮುಚ್ಚಯವಶದಿಂ ಗಕಾರಕ್ಕೆ ಲೋಪಂ -

ಪೋಗಲೀಯದಡಸಿ ತಾಪಮೆಂದು ಜೋದರೆಲ್ಲಂ ... ೯

ಮ ॥ ವಿ॥ ... ಪೋಪಂಗೆ ಬರ್ಪಂಗನಾ
ಕುಳದಿಂ ... ೧೦

**ಸೂತ್ರಂ ॥ ಪರದೊಳ್ ವಿಧಿಯ ಕೆಕಾರಂ ।**
**ಬರೆ ಕುಂ ಬರೆ ಪೋಗೆನಿಪ್ಪ ಧಾತುವಿನಂತ್ಯಾ ॥**
**ಕ್ಷರಲೋಪಂ ಚರಮಂ ವಿ ।**
**ಸ್ವರಮಾದ್ಯಂ ಹ್ರಸ್ವಮಕ್ಕುಮಾಗೆಂಬುದಱೊಳ್ ॥ ೨೪೩ ॥**

**ಟೀಕೆ** - ಪರದೊಳ್, ವಿಧಿಯ = ವಿಧ್ಯರ್ಥದ, ಕೆಕಾರಂ, ಬರೆ, ಕುಂ, ಬರೆ, ಪೋಗೆನಿಪ್ಪ ಧಾತುವಿನ = ಪೋಗು ಎಂಬ ಧಾತುವಿನ, ಅಂತ್ಯಾಕ್ಷರಲೋಪಂ = ಕಡೆಯಕ್ಷರದ ಲೋಪಂ, ಆಗುವುದು; ಆಗೆಂಬುದಱೊಳ್ = ಆಗು ಎಂಬ ಧಾತುವಿನಲ್ಲಿ, ಚರಮಂ = ಅಂತ್ಯಂ, ವಿಸ್ವರಂ = ವ್ಯಂಜನದ ಕಕಾರಂ, ಆದ್ಯಂ = ಮೊದಲಕ್ಷರಂ, ಹ್ರಸ್ವಂ, ಅಕ್ಕುಂ = ಆಗುವುದು.

**ವೃತ್ತಿ** - ವಿಧಿಯ ಕೆಕಾರಮುಂ ಕುಂ ಎಂಬುದುಂ ಪರಮಾಗೆ ಪೋಗೆಂಬ ಗಕಾರಕ್ಕೆ ಲೋಪಂ; ಆಗೆಂಬುದಱ ಕಡೆಯ ಸ್ವರಕ್ಕೆ ಲೋಪಮುಂ ಮೊದಲ್ಗೆ ಹ್ರಸ್ವಮುಮಕ್ಕುಂ.

**ಪ್ರಯೋಗಂ** - ಪೋಕೆ, ಪೋಕುಂ; ಅಕ್ಕೆ, ಅಕ್ಕುಂ.

ಚಂ ॥ ಮಾ ॥ ... ಪೋಕೆ ಬರ್ಕೆ ಮುಳಿಸಿಲ್ಲೆಮಗಾತನೊಳಾವ ಪಾಂಗಿನಿಂ. ೧

ಕಂ ॥ ಪೊಱಮಾಱದೆ ಸಯ್ತು ಪೋಕುಮೇ ಪರಸೈನ್ಯಂ. ೨

ಉ ॥ ಮಾ ॥ ವೇದದೊಳೋದಿದಾಯು ನಿನಗಕ್ಕೆ ಸೊಗಂ ಕಲಿಕಾಲಸೂದನಾ ೩

(ಕಾವ್ಯಾವಲೋಕನಂ ೪೦೧)

ಕಂ ॥ ಪ್ರಾಯಂ ಕೂಸಾದೊಡಭಿ
ಪ್ರಾಯಂ ಕೂಸಕ್ಕುಮೇ ... ೪

**ಸೂತ್ರಂ ॥ ಅವತರಿಸಿರ್ಕುಮದುಳ್ಧಾ ।**
**ತುವಿನ ಳಕಾರಕ್ಕೆ ಣತ್ವಮುದುಗೆ ಟುಕಾರಂ ॥**
**ಪ್ರವಿಲೋಮಕ್ರಿಯೆಗದುವೆಂ ।**
**ದವೆಂದು ಬಂದಿರ್ಕುಮುದುಗಮುವುಗಂ ಪ್ರಚುರಂ ॥ ೨೪೪ ॥**

**ಟೀಕೆ** - ಉಳ್ಧಾತುವಿನ = 'ಉಳ್ ಸತ್ತಾಯಾಂ' ಎಂಬ ಸತ್ತಾರ್ಥದ ಧಾತುವಿನ, ಳಕಾರಕ್ಕೆ, ಣತ್ವಂ, ಅದು, ಉದುಗೆ = ನಪುಂಸಕ ಲಿಂಗದ ಉದು ಎಂಬುದರ್ಕೆ, ಟುಕಾರಂ, ಅವತರಿಸಿರ್ಕುಂ = ಹುಟ್ಟಿರ್ಪುದು; ಪ್ರವಿಲೋಮಕ್ರಿಯೆಗೆ = ಪ್ರತಿಷೇಧಕ್ರಿಯೆಗೆ, ಉದುಗಂ = ನಪುಂಸಕಲಿಂಗದ ಉದುವೆಂಬುದರ್ಕಂ, ಉವುಗಂ = ಉವು ಎಂಬುದರ್ಕಂ, ಅದು ಎಂದು, ಅವು ಎಂದು, ಪ್ರಚುರಂ = ಪ್ರಸಿದ್ಧವಾಗಿ, ಬಂದಿರ್ಕುಂ.

**ವೃತ್ತಿ** - ಉಳ್ ಎಂಬ ಧಾತುವಿನ ಳಕಾರಕ್ಕೆ ಣತ್ವಮುಂ ಅಲ್ಲಿ ಪರದ ಉದುವಿಂಗೆ ಟುಕಾರಾದೇಶಮುಮಕ್ಕುಂ. ನಪುಂಸಕಲಿಂಗದ ಉದುಗಮುವುಗಂ ಪ್ರತಿಷೇಧ ಕ್ರಿಯೆಯೊಳದುವೆಂದುಮವುವೆಂದುಂ ಆದೇಶಮಕ್ಕುಂ.

**ಪ್ರಯೋಗಂ** -

ಉಳ್ಳುದೆಂಬುದರ್ಕೆ -

ಉಣ್ಬು

ಉ ॥ ಮಾ ॥ ಉಂಟು ಭುಜಾಬಲಂ ಪಿರಿದು ಚಾಗದ ಸಂಪದಂ ... ೧

(ಸೂಕ್ತಿಸುಧಾರ್ಣವಂ ೫-೫)

ಕಂ ॥ ... ಸಿರಿಯುಂಟುಮಾಡಿದಂ ಕುರುಬಲದೊಳ್ ೨

ಪ್ರತಿಷೇಧಕ್ರಿಯೆಗೆ -

[ಅದುವಿಂಗೆ] -

ಕಂ ॥ ಉಱೆಯದು ವಿಭವಂ ಜವ್ವನ
ಮಿಱೆಯದು ನವವಿಧರತೋಪಚಾರದಿನೆಂದುಂ
ಪೞಿಸದು ಬೇಟಂ ... ೩

ಚಂ ॥ ಮಾ ॥ ವಿಪುಳಕಳಾಪಕೋಪಶಿಖಿ ಪುಟ್ಟದು ... ೪

ಅವುವಿಂಗೆ -

ಸಲ್ಲವು, ನಿಲ್ಲವು, ನೆಱೆಯವು.

ಕಂ॥ ... ಗಿರಿಯುಂ ಕರಿಯುಂ
ನಿಲ್ಲವು ಪವಿಮುಖದ ಕೋಳ್ಗಮಾತನ ಬಾಳ್ಗಂ ... ೫

ಕಂ ॥ ತುಱುಗಳ ಮೆಯ್ಗಳ ರೋಮಂ
ನೆಱೆಯವು ದಲ್ ... ೬

**ಸೂತ್ರಂ ॥ ಣತ್ವಂ ಕೊಳ್ಧಾತ್ವಂತ್ಯ ।**
**ಕ್ಕುತ್ವಕ್ಕುಳ್ಧಾತು ಪೂರ್ವದೊಳ್ ನೆಗಱ್ಗುಂ ಹ್ರ ॥**
**ಸ್ವೋತ್ವಂ ಪುರುಷತ್ರಯದೊಳ್ ।**
**ದತ್ವನಿಷೇಧಂ ಬಹುತ್ವದುವುಗವುಮಕ್ಕುಂ ॥ ೨೪೫ ॥**

**ಟೀಕೆ** - ದ ದಪಂಗಳ್ಪರಮಾದ ಎಂಬುದನುವರ್ತನೆ. ಕೊಳ್ಧಾತ್ವಂತ್ಯಕ್ಕೆ = ದ ದಪಂಗಳ್ಪರಮಾದ ಕೊಳೆಂಬ ಧಾತುವಿನಂತ್ಯಕ್ಕೆ, ಣತ್ವಂ = ಣಕಾರಾದೇಶಂ, ನೆಗಱ್ಗುಂ = ಪ್ರಸಿದ್ಧಿವಡೆವುದು; ಉಳ್ಧಾತು ಪೂರ್ವದೊಳ್ = ಸತ್ತಾರ್ಥದಲ್ಲಿ ಉಳ್ ಎಂಬ ಧಾತುವಿನ ಮೊದಲಲ್ಲಿ, ಉತ್ವಕ್ಕೆ, ಹ್ರಸ್ವೋತ್ವಂ = ಹ್ರಸ್ವದ ಒಕಾರಂ ಪ್ರಸಿದ್ಧಿವಡೆವುದು; ಪುರುಷತ್ರಯದೊಳ್, ದತ್ವನಿಷೇಧಂ = ಭೂತಕಾಲದ ದಕಾರಂ ಬಾರದು; ಬಹುತ್ವದ = ನಪುಂಸಕಲಿಂಗದ ಬಹುವಚನದ, ಉವುಗೆ = ಉವು ಎಂಬುದರ್ಕೆ, ಅವು ಎಂಬುದುಂ, ಅಕ್ಕುಂ.

**ವೃತ್ತಿ** - ದಕಾರಂ ಪರಮಾದ ಕೊಳ್ಧಾತುವಿನ ಳಕಾರಕ್ಕೆ ಣತ್ವಮಕ್ಕುಂ. ಪುರುಷತ್ರಯದೊಳ್ ಉಳ್ಧಾತುವಿನ ಮೊದಲುಕಾರಕ್ಕೆ ಹ್ರಸ್ವೋತ್ವಮಕ್ಕುಂ; ನಪುಂಸಕಲಿಂಗದ ಬಹುವಚನದುವುವಿಂಗೆ ಅವು ಎಂದಕ್ಕುಂ. *

*ವಿಚಾರಂ - ದತ್ವನಿಷೇಧವೆಂದು ಉಪಲಕ್ಷಣವಾಗಿ ಉಳ್ಥಾತುಗೆ ದ ದಪ ವಕಾರಂಗಳ್ ಮೂಱುಂ ನಿಷೇಧವೆಂಬುದರ್ಥಂ; ಭೂತಕಾಲವಾಗಿಯೆ ಸಲ್ವುದು.

**ಪ್ರಯೋಗಂ -**

ಕೊಳ್ಧಾತುಗೆ - ಕೊಣ್ಡಂ, ಕೊಣ್ಡರ್.

ಮ॥ ವಿ॥ ... ಭುವನತ್ರಿನೇತ್ರ ರುಚಿಯಂ ಕೈಕೊಣ್ಡನಾ ಪಾಂಡವಂ ೧

ಮ॥ ಸ್ರ॥ ... ತಮತಮಗೆ ಭಯಂಗೊಣ್ಡರಾಶಂಕೆಗೊಣ್ಡರ್. ೨

ಉಳ್ಧಾತುಗೆ - ಒಳಂ, ಒಳರ್; ಒಳಯ್, ಒಳಿರ್; ಒಳೆನ್, ಒಳೆವು.

ಉ॥ ಮಾ॥ ... ಪೇಟಿನಿತರ್ಕಮೊಳಂ ಮುರಾಂತಕಂ ೩

ಕಂ ॥ ಒಳರನ್ನೆವರಂ ಮಾರ್ಬಲ
ದೊಳಗಿಱಿಯಲ್ ಮಱುಗುವರಿಭಟರ್ ... ೪

ನಪುಂಸಕಕ್ಕೆ - ಒಳವು

ಕಂ ॥ ನೀನುಳ್ಳೊಡುಂಟು ರಾಜ್ಯಂ ।
ನೀನುಳ್ಳೊಡೆ ಪಟ್ಟಮುಂಟು ಪೀಟಿಗೆಯುಂಟಯ್ ॥
ನೀನುಳ್ಳೊಡುಂಟು ಬೆಳ್ಗೊಡೆ ।
ನೀನಿಲ್ಲದಿವೆಲ್ಲಮೊಳವೆ ಭಾನುತನೂಜಾ ॥ ೫
(ಸಾಹಸಭೀಮವಿಜಯಂ ೫-೨೦)

... ನುಂಗುವುವುಮೊಳವುದಧಿಯೊಳೆ ಮಹಾಮತ್ಸ್ಯಂಗಳ್. ೬

ಉಣ್ಟೆಂಬುದರ್ಕೆ ಎಲ್ಲವಱಂತೆ ಪ್ರತಿಷೇಧಮಾಗಿಲ್ಲೆಂದಾಯ್ತು -

ಶಾ॥ ವಿ॥ ನೀಲಗ್ರೀವನುಮಾರ್ತನಿಲ್ಲ ಗೆಲಲಿನ್ನಾರಾರ್ಪರೆಂದಂ ಕೃಪಂ ... ೭

**ಸೂತ್ರಂ ॥ ಇನೆಗಮುದುಮನ್ನಮನ್ನೆಗ ।**
**ಮಿನಮಲೊಡಂ ಸೊನ್ನೆವೆರಸು ಸತ್ಯರ್ಥದೆಕಾ ॥**
**ರ ನಿಜಸ್ಥಾನದೊಳಪ್ಪುವಿ ।**
**ವನುಕೂಲಂ ಮತ್ತೆಕಾರದಾದಿಯೊಳಲೊಡಂ ॥ ೨೪೭ ॥**

**ಟೀಕೆ** – ಸತ್ಯರ್ಥದ = ಸತಿಸಪ್ತಮಿಯರ್ಥದ, ಎಕಾರ ನಿಜಸ್ಥಾನದೊಳ್ = ಎ ಕಾರದ ನಿಜಸ್ಥಾನದಲ್ಲಿ; ಇನೆಗಂ, ಉದುಂ, ಅನ್ನಂ, ಅನ್ನೆಗಂ, ಇನಂ, ಅಲೊಡಂ ಎಂದು, ಇವು = ಈ ರೂಪಂಗಳ್, ಸೊನ್ನೆವೆರಸು = ಸೊನ್ನೆಗೂಡಿ, ಅಪ್ಪುವು = ಆದೇಶವಾಗುವುವು; ಮತ್ತೆ, ಎಕಾರದ = ಸತ್ಯರ್ಥದೆಕಾರದ, ಆದಿಯೊಳ್ = ಮೊದಲಲ್ಲಿ, ಅಲೊಡಂ ಎಂದು, ಅನುಕೂಲಂ = ಹಿತವಪ್ಪುದು.

**ವೃತ್ತಿ** - ಇನೆಗಂ ಉದುಂ ಅನ್ನಂ ಅನ್ನೆಗಂ ಇನಂ ಅಲೊಡಂ ಎಂಬಿವು ಸೊನ್ನೆವೆರಸಲ್ಲದಿರವು; ಇವು ಸತಿಸಪ್ತಮಿಯ ಎಕಾರಕ್ಕಾದೇಶಮಾಗಿ ಬಂದುವು; ಎಕಾರದ ಪೆಱಗೆ ಒರ್ಮೆ ಅಲೊಡಮೆಂಬುದೊಂದಾಗಮಮಾಗಿಯುಂ ಬರ್ಕುಂ.

**ಪ್ರಯೋಗಂ -**

ಸತಿಸಪ್ತಮಿಯ ಎಕಾರಕ್ಕೆ -

ಕಂ ॥ ನೆಲನದಿರೆ ನೋಟಕರ್ ಕ
ಣ್ಣಲಸೆ ಮನಂ ಕೊರಗೆ ... ೧

ಎಕಾರದ ಆದೇಶಂಗಳೊಳ್ ಇನೆಗಮೆಂಬುದರ್ಕೆ -

ಕಂ ॥ ಕಾಮಕರಂ ಕರಮಡಂಗಿ ನುರ್ಗಪ್ಪಿನೆಗಂ
ಕಾಮದನಡಂಗೆ ವೊಯ್ದಂ ... ೨

(ಶೂದ್ರಕಂ ?)

ಉದುವೆಂಬುದರ್ಕೆ -

ಮ॥ ವಿ॥ ಬರವೇೞ್ಪಿಂಬುದುಮಂಜನಾಚಲದ ವೋಲ್ ಕಣ್ಗೊಪ್ಪಿ ಬರ್ಪಂಬುಜೋ
ದರನಂ ... ೩

(ವಿಕ್ರಮಾರ್ಜುನವಿಜಯಂ ೯-೩೧)

ಅನ್ನಮೆಂಬುದರ್ಕೆ -

ಉದ್ದದೆ ನೆಗೆವನ್ನಂ ಪೊಯ್ಯಲೊದವ್ವಳಿಪುದು ... ೪

ಅನ್ನೆಗಂ ಇನಮೆಂಬುದರ್ಕೆ -

... ಒಲೆಯೊಡನೆ ಮುತ್ತುಂಗಾಲೊಳ್ ನರೆ ಬರ್ಪನ್ನೆಗಮಿರು ೫

ಕಂ ॥ ... ಗಂಗೆಯ
ಮಡುಗಳನಡಹಡಿಸಿ ಪುಗುವಿನಂ ಭಯವಶದಿಂ ೬

ಅಲೊಡಮೆಂಬುದರ್ಕೆ -

ಕುರುಕುಲಾಧಿಪಂ ನುಡಿಯಲೊಡಂ ... ೭

ಎಕಾರದ ಪೆಱಗೆ ಅಲೊಡಮಾಗಮಕ್ಕೆ -

... ಬರಲೊಡನೆ ಕೊಟ್ಟಂ ೮

**ಸೂತ್ರಂ ॥ ನೆಗಳ್ಗುಂ ಸಂಪ್ರತಿಗಂ ಭಾ ।**
**ವಿಗಮನ್ನೆಗಮನ್ನಮಿನೆಗಮಿನಮೆಂಬಿವು ಸೂ ॥**
**ರಿಗಳಿಂದುದುಮಲೊಡಂಗಳ್ ।**
**ನೆಗಳ್ಗುಂ ಭೂತಾರ್ಥದಲ್ಲಿ ಸತಿಸಪ್ತಮಿಯೊಳ್ ॥ ೨೪೭ ॥**

**ಟೀಕೆ** - ಸೂರಿಗಳಿಂದೆ = ವಿದ್ವಾಂಸರಿಂದೆ, ಸತಿಸಪ್ತಮಿಯೊಳ್, ಸಂಪ್ರತಿಗಂ = ವರ್ತಮಾನಕಾಲಕ್ಕಂ, ಭಾವಿಗಂ = ಭವಿಷ್ಯತ್ಕಾಲಕ್ಕಂ, ಅನ್ನೆಗಂ, ಅನ್ನಂ, ಇನೆಗಂ, ಇನಂ ಎಂಬಿವು = ಎಂಬೀ ರೂಪಂಗಳ್, ನೆಗಳ್ಗುಂ = ಬರ್ಪುವು; ಭೂತಾರ್ಥದಲ್ಲಿ, ಉದುಮಲೊಡಂಗಳ್ = ಉದುಂ ಅಲೊಡಂ ಎಂಬಿವು, ನೆಗಳ್ಗುಂ = ಬರ್ಪುವು.

**ವೃತ್ತಿ** – ಅನ್ನೆಗಂ, ಅನ್ನಂ, ಇನೆಗಂ, ಇನಂ ಎಂಬಿವು ವರ್ತಮಾನದೊಳಂ ಭವಿಷ್ಯಂತಿಯೊಳಂ ವರ್ತಿಪುವು; ಉದುಂ, ಅಲೊಡಂ ಎಂಬಿವು ಭೂತವತಿಯೊಳ್ ಸಲ್ಗುಂ.

**ಪ್ರಯೋಗಂ -**

ಸಂಪ್ರತಿಗೆ -

ನೆನೆವನ್ನೆಗಂ ಬಂದಂ; ಕೊಲ್ವನ್ನಂ ಇಕ್ಕಿ ಕೊಂದಂ; ಬಿನ್ನೈಸುವಿನೆಗಂ ಎಡೆಗೊಂಡಂ; ಇದಿರ್ವರ್ಪಿನಂ ಅಪ್ಪಿಕೊಂಡಂ.

ಭವಿಷ್ಯಂತಿಗೆ -

ಈವನ್ನೆಗಮಿರ್ದಂ; ವರಂಬಡೆವನ್ನಮಾರಾಧಿಸಿದಂ; ಅವಧಿ ಬರ್ಪಿನೆಗಂ ಸೈರಿಸಿದಂ; ಬೆಳಗಪ್ಪಿನಂ ಕೇಳಿಸಿದಂ.

ಭೂತವತಿಗೆ -

ಓಲಗಂ ಪರೆವುದುಮಾಲೋಚನೆಗೆ ಪೊಕ್ಕಂ; ಪಾವಸೆ ಕಿಡಲೊಡಂ ನೀರ್ತಿಳಿದುದು

- ಇವು ಸತಿಸಪ್ತಮಿಯ ಪ್ರಯೋಗಂಗಳ್.

**ಸೂತ್ರಂ ॥ ಅನ್ನೆಗಮಿನ್ನೆಗಮೆನ್ನೆಗ ।**
**ಮೆನ್ನದೆ ಕಡೆಗುಂಟು ಲೋಪಮಿದಿರೊಳ್ ಸೀಮೋ ।**
**ತ್ಪನ್ನಂ ವರಂ ವರೆಗಮಿರೆ ।**
**ಕೆನ್ನಂ ಪೆಱವರ್ಕೆ ಲೋಪವಿಧಿ ಮುಟ್ಟೆನೆಯುಂ ॥ ೨೪೮ ॥**

**ಟೀಕೆ -** ಇದಿರೊಳ್ = ಪರದಲ್ಲಿ, ಸೀಮಾ = ಎಲ್ಲೆಯಲ್ಲಿ, ಉತ್ಪನ್ನಂ = ಹುಟ್ಟಿದುವಾದ, ವರಂ, ವರೆಗಂ, ಇರೆ, ಅನ್ನೆಗಂ, ಇನ್ನೆಗಂ, ಎನ್ನೆಗಂ, ಎನ್ನದೆ, ಕಡೆಗೆ = ಅಂತ್ಯಕ್ಕೆ, ಲೋಪಂ, ಉಂಟು; ಮುಟ್ಟೆ ಎನೆಯುಂ, ಕೆನ್ನಂ = ವೆಗ್ಗಳವಾಗಿ, ಪೆಱವರ್ಕೆ = ಅನ್ಯವಾದುವರ್ಕೆ, ಲೋಪವಿಧಿ ಬರ್ಪುದು.

**ವೃತ್ತಿ** - ವರಂ ವರೆಗಮೆಂಬ ಸೀಮಾರ್ಥಶಬ್ದಂ ಪರದೊಳಿರೆ ಅನ್ನೆಗಂ ಇನ್ನೆಗಂ ಎನ್ನೆಗಂ ಎಂಬಿವಱ ಗಕಾರಕ್ಕೆ ಲೋಪಂ; ವರಂ ವರೆಗಮೆಂಬಿವು ಪರದೊಳಿರ್ದೊಡಂ ಮಿಕ್ಕಲ್ಲಿ ಲೋಪಮಿಲ್ಲ; ಮುಟ್ಟೆ ಎಂಬುದುಂ ಸೀಮಾರ್ಥಮಂ ಪೇೞ್ಗುಂ.

**ಪ್ರಯೋಗಂ -**

ಗಕಾರಲೋಪಕ್ಕೆ -

ಕಂ ॥ ಎನ್ನೆವರಂ ಸಿರಿ ತಮಗುಂ
ಟನ್ನೆವರಂ ಸೇವ್ಯರಲ್ತೆ ಖಳರುಂ ... ೧

ಚಂ॥ ಮಾ॥ ... ಇನ್ನೆವರಂ ಗುಱುಯಾದುದಿಲ್ಲ ಕಾ
ಮಕರ ವಿಮುಕ್ತ ಬಾಣಹತಿಗೆ ... ೨

(ಸೂಕ್ತಿಸುಧಾರ್ಣವಂ ೩-೯೪)

ಮುಟ್ಟೆಂಬುದರ್ಕೆ -

ದೆಸೆಮುಟ್ಟೆ; ವಾರ್ಧಿಮುಟ್ಟೆ; ಆತಂಮುಟ್ಟೆ

ಮ॥ ವಿ॥ ... ಆನಱಿಯೆನಾತಂಮುಟ್ಟೆ ಸಂಗ್ರಾಮಮಂ ೩

**ಸೂತ್ರಂ ॥ ವಿದಿತೋಭಯಕರ್ತೃಕಮೆನಿ ।**
**ಸಿದ ಸತಿಸಪ್ತಮಿಗೆಕಾರಮಪ್ಪುದದರ್ಕಂ ॥**
**ಜದೆ ಕೆಲರಲ್ವಂ ಪೇೞ್ವರ್ ।**
**ಚದುರರದಂ ಮೆಚ್ಚರಲೊಡಮೆಂದೊಡೆ ಶುದ್ಧಂ ॥ ೨೪೯ ॥**

**ಟೀಕೆ** -ವಿದಿತ = ಪ್ರಸಿದ್ಧವಾದ, ಉಭಯಕರ್ತೃಕಂ = ಇರ್ವರ್ ಕರ್ತೃಗಳನುಳ್ಳುದು ಎನಿಸಿದ ಸತಿಸಪ್ತಮಿಗೆ, ಎಕಾರಂ ಅಪ್ಪುದು; ಅದರ್ಕೆ = ಆ ಎಕಾರಕ್ಕೆ, ಅಂಜದೆ = ಹೆದರದೆ, ಕೆಲರ್, ಅಲ್ವಂ = ಅಲ್ ಎಂಬುದಂ, ಪೇೞ್ವರ್; ಚದುರರ್ = ಬಲ್ಲವರ್, ಅದಂ = ಆ ಪ್ರಯೋಗಮಂ, ಮೆಚ್ಚರ್; ಅಲೊಡಂ = ಅಲೊಡಂ ಎಂದು, ಎಂದೊಡೆ = ಪೇೞ್ದೊಡೆ, ಶುದ್ಧಂ = ಶುದ್ಧವಪ್ಪುದು.

**ವೃತ್ತಿ** – ಇರ್ಬರ್ಕರ್ತೃಗಳ್ಗೆ ನಿಮಿತ್ತಮಪ್ಪ ಸತಿಸಪ್ತಮಿಗೆ ಎಕಾರಮಕ್ಕುಂ; ಆ ಎಕಾರಕ್ಕೆ ಅಲುವಂ ಕೆಲರ್ ಅಂಜದೆ ಪೇೞ್ವರ್; ಅದುವುಮಾಗದು;[1] ಅಲೊಡಮೆಂದೊಡೆ ಶುದ್ಧಂ.

**ಪ್ರಯೋಗಂ** –

ಇರ್ಬರ್ ಕರ್ತೃಗಳ್ಗಪ್ಪ ಸತಿಸಪ್ತಮಿಗೆ -

ಗಾಯಕಂ ಪಾಡೆ ದೇವಂ ಮೆಚ್ಚಿದಂ; ಪಾತ್ರವಾಡೆ ವಾದಕಂ ಬಾಜಿಸಿದಂ; ವಂದಿ ಪೊಗೞೆ ಚಾಗಿ ಕೊಟ್ಟಂ.

ಅಲ್ಗೆ -

ಮ॥ ಸ್ರ॥ ... ಪಾದಪದ್ಮಂ
ಗಳನಂದೊತ್ತುತ್ತಿರಲ್ ಶೂದ್ರಕನೃಪತಿ ಸುಖಾಸೀನನಾಗಿರ್ದನಾಗಳ್ ॥ ೧
(ಕರ್ಣಾಟಕ ಕಾದಂಬರಿ ೧-೬೯)

ಕಂ ॥ ... ಬ
ಯ್ಗಿನ ಕೆಂಬಿಸಿಲಳುರಲೆಸೆದುವಾಶ್ರಮತರುಗಳ್ ॥ ೨
(ಕರ್ಣಾಟಕ ಕಾದಂಬರಿ ೧-೨೨೯)

- ಎಂಬಿವು ಅಬದ್ಧಂಗಳ್

ಅಲೊಡಮೆಂಬುದಱ ಶುದ್ಧಕ್ಕೆ -

ವಸಂತಂ ಬರಲೊಡಂ ಕೋಗಿಲೆಯುಲಿಗುಂ; ಗಾಳಿ ಬೀಸಲೊಡಮೆಲೆ ಕಱಲ್ದುವು.

**ಸೂತ್ರಂ ॥ ಪಿರಿದುಂ ಪಕ್ಷಾಂತರಮಂ ।**
**ನಿರವಿಪೆಕಾರಂ ನಿಜಾಂತಮಾದೊಡೆಶಬ್ದಂ ॥**
**ಪರಿಕಿಸೆ ಧಾತ್ವಂತ್ಯದೊಳಾ ।**
**ವರಿಸಿರ್ಕುಂ ಲಿಂಗ ವಚನ ಪುರುಷಾಯತ್ತಂ ॥ ೨೫೦ ॥**

**ಟೀಕೆ** – ಪಿರಿದುಂ = ವಿಶೇಷವಾಗಿ, ಪಕ್ಷಾಂತರಮಂ = ಬೇರೆ ಪಕ್ಷಮಂ, ನಿರವಿಪೆಕಾರಂ = ಪೇೞ್ವ ಎಕಾರಂ, ನಿಜಾಂತಂ = ತನ್ನಂತಂ, ಆದ, ಒಡೆ ಎಂಬ ಶಬ್ದಂ, ಪರಿಕಿಸೆ = ವಿಚಾರಿಸೆ, ಧಾತ್ವಂತ್ಯದೊಳ್ = ಧಾತುಗಳಂತ್ಯದಲ್ಲಿ, ಲಿಂಗ = ಲಿಂಗತ್ರಯದಲ್ಲಿ, ವಚನ = ವಚನತ್ರಯದಲ್ಲಿ, ಪುರುಷ = ಪುರುಷತ್ರಯದಲ್ಲಿ, ಆಯತ್ತಂ = ಕೂಡಿದುದಾಗಿ, ಆವರಿಸಿರ್ಕುಂ = ಪೊರ್ದುಗೆಯಾಗಿರ್ಪುದು.

~~~~~~~~~~~~~~~~~~

೧. ಈ 'ಅದುವುಂ' ಎಂಬಲ್ಲಿ ಸಮುಚ್ಚಯ ಸಮರ್ಥನೀಯವಲ್ಲ.
~~~~~~~~~~~~~~~~~~

ವೃತ್ತಿ - ಪಕ್ಷಾರ್ಥಮಂ ಪೇೞ್ವಿಕಾರಂ ಕಡೆಯಾಗುಳ್ಳೊಡೆಶಬ್ದಂ ಲಿಂಗತ್ರಯ ವಚನತ್ರಯ ಪುರುಷತ್ರಯಾನ್ವಿತಮಾಗಿ ಧಾತುವಿನ ಕಡೆಯೊಳ್ ಪತ್ತುಗುಂ.

**ಪ್ರಯೋಗಂ -**

ಲಿಂಗತ್ರಯಕ್ಕೆ -

ನೋೞ್ಪೊಡವಳ್ ಕಿಱಿಯಳ್; ಸತ್ಯಮಂ ನುಡಿವೊಡವಂ ಪಿರಿಯಂ; ತೀಡುವೊಡಲ್ಲಿ ಕಮ್ಮೆಲರ್ತೀಡುಗುಂ.

ವಚನತ್ರಯಕ್ಕೆ -

ಕಾದುವೊಡೊರ್ವನೆ ಬಲ್ಲಿದಂ; ಪೋಲಿಸುವೊಡಿರ್ವರುಂ ತಕ್ಕರ್; ನುಡಿವೊಡೆಲ್ಲರುಂ ಮಾತಱಿಯರ್.

ಪುರುಷತ್ರಯಕ್ಕೆ -

ಪೊರ್ದುವೊಡವನೊಳ್ಳಿದಂ, ತಿರ್ದುವೊಡವರೊಳ್ಳಿದರ್; ಬೇೞ್ಪೊಡೆ ನೀನೊಳ್ಳಿದಯ್, ಈವೊಡೆ ನೀಮೊಳ್ಳಿದಿರ್; ಭಾವಿಪೊಡಾನೊಳ್ಳಿದೆಂ, ಸೇವಿಪೊಡಾಮೊಳ್ಳಿದೆವು.

ಪಿರಿದೆಂಬುದಱಿಂ ಕಾಲತ್ರಯಕ್ಕೆ -

ಪುಸಿದೊಡೆ ಬಿಟ್ಟಂ; ಪಳಂಚಿದಪೊಡೆ ಕೊಂದಪಂ; ಚಿತ್ರಿಪೊಡೆ ತೂಳಿಕೆಯಂ ತರಿಸುವಂ.

**ಸೂತ್ರಂ ॥ ಧಾತುಗಳವು ನಾನಾರ್ಥೋ |**
**ಪೇತಂಗಳ್ ಲಕ್ಷ್ಯಸಿದ್ಧಿವಿಡಿದುವನಱಿದ ॥**
**ನ್ವಿತರೆ ಕ್ರಿಯಾನುಕೂಲಂ |**
**ಮಾತೇಂ ಪೂರಿಸುಗೆ ಮತ್ತಮುೞಿದುವನಿದಱೊಳ್ ॥ ೨೫೧ ॥**

**ಟೀಕೆ –** ಧಾತುಗಳ್, ಅವು, ನಾನಾರ್ಥೋಪೇತಂಗಳ್ = ನಾನಾರ್ಥದೊಡನೆ ಕೂಡಲ್ಪಟ್ಟುವು; ಲಕ್ಷ್ಯಸಿದ್ಧಿವಿಡಿದುವಂ = ಉದಾಹರಣೆಗಳಲ್ಲಿ ಸಿದ್ಧಿವಡೆದುವಂ, ಅಱಿದು = ತಿಳಿದು, ಅನ್ವಿತರೆ = ಬಲ್ಲವರೆ, ಕ್ರಿಯಾನುಕೂಲಂ = ಕ್ರಿಯೆಗೆ ಅನುಕೂಲವಾಗಿ, ಮಾತೇಂ = ಹೇೞ್ವುದೇಂ, ಮತ್ತಂ = ಇನ್ನುಂ, ಉೞಿದುವಂ = ಉೞಿದ ಧಾತುಗಳಂ, ಇದಱೊಳ್ = ಈ ಆಖ್ಯಾತಪ್ರಯೋಗದಲ್ಲಿ, ಪೂರಿಸುಗೆ = ಪೂರಣವಂ ಮಾಡುಗೆ.

ವೃತ್ತಿ - ಧಾತುಗಳ್ ಪಲವರ್ಥಂಗಳಂ ನುಡಿಯಲ್ ಸಮರ್ಥಂಗಳಾಗಿರ್ಪುವು; ಪ್ರಮಾಣಪುರುಷರ ಮಾರ್ಗೋದಾಹರಣಂಗಳ ಬೞಿವಿಡಿದು ವಾಕ್ಯಾನ್ವಯಸಿದ್ಧಿಯುಳ್ಳರ್ ಕ್ರಿಯಾನುಕೂಲಮಾಗಿ ಮತ್ತಂ ಈ ಆಖ್ಯಾತಪ್ರಕರಣದೊಳ್ ತಿಳಿದು ಪೂರಿಸುಗೆ.

***ಸೂತ್ರಂ ॥ ಕ್ರಿಯೆಯ ಪದಂ ತಾಂ ಕರ್ತೃ |**
**ಪ್ರಯುಕ್ತಮಾಗೆಲ್ಲಿಯೇನದೆಂಬಿಚ್ಚೆಯನಾ ॥**
**ಶ್ರಯಿಪುದು ಸಕರ್ಮಕಮದಲ್ |**
**ಪ್ರಯುಕ್ತ ಪಡುಧಾತು ಸರ್ವಧಾತುಗೆಯಕ್ಕುಂ ॥ * ॥**

~~~~~~~~~~~~~~~~~~~~

\* ಇದು ನಮಗೆ ದೊರೆತಿರುವ ಪ್ರತಿಗಳಲ್ಲಿ ಕಾಣಬರುವುದಿಲ್ಲ; ಕರ್ಣಾಟಕ ಶಬ್ದಾನುಶಾಸನವನ್ನು ನೋಡಿ ಈ ಸೂತ್ರವೃತ್ತಿ ಮೊದಲಾದುವನ್ನು ರಚಿಸಿದಂತೆ ತೋರುತ್ತದೆ.
~~~~~~~~~~~~~~~~~~~~

**ಟೀಕೆ** - ಕ್ರಿಯೆಯ ಪದಂ = ಕ್ರಿಯಾಪದಂ, ತಾಂ, ಕರ್ತೃಪ್ರಯುಕ್ತಂ = ಪದದೊಡನೆ ಕೂಡಿದುದು, ಆಗಿ, ಎಲ್ಲಿ = ಆವೆಡೆಯಲ್ಲಿ, ಅದು, ಏನೆಂದು, ಎಂಬಿಚ್ಛೆಯಂ = ಎಂಬಪೇಕ್ಷೆಯಂ, ಆಶ್ರಯಿಪುದು = ಬಯಸುವುದು, ಅದು = ಆ ಪದಂ, ಸಕರ್ಮಕಂ = ಸಕರ್ಮಕ ಪ್ರಯೋಗಂ ಅಪ್ಪುದು; ಸರ್ವಧಾತುಗೆ = ಈ (ಪ್ರದಾನೇ) ಎಂಬುದಾದಿಯಾದ ಸಮಸ್ತ ಧಾತುಗಳ್ಗೆ, ಅಲ್ ಪ್ರಯುಕ್ತ ಪಡು ಧಾತು = ಅಲ್ ಎಂಬುದಱೊಡನೆ ಕೂಡಿದ ಪಡು ಎಂಬ ಧಾತು, ಅಕ್ಕುಂ = ಆಗುವುದು.

**ವೃತ್ತಿ** - ಕ್ರಿಯಾಪದಂ ಕರ್ತೃಪದದೊಡನೆ ಕೂಡಿದುದಾಗಿ ಎಲ್ಲಿ ಏನೆಂಬಪೇಕ್ಷೆಯಂ ಬಯಸುವುದು ಅದು ಸಕರ್ಮಕಮಕ್ಕುಂ. ಅಲ್ಲಿ ಈ(ಪ್ರದಾನೇ) ಎಂಬುದಾದಿಯಾದ ಸಕಲಧಾತುಗಳ್ಗೆ ಅಲ್ ಎಂಬುದಱೊಡನೆ ಕೂಡಿದ ಪಡುಧಾತುವಕ್ಕುಂ; ಅಲ್ಲಿ ಮೊದಲ್ವೇಟ್ಟಿ ತಾಂ ನೀನ್ ಆನೆಂಬ ಪುರುಷತ್ರಯಕ್ಕೆ ಏಕಾನೇಕವಚನದೊಳ್, 'ಅಮ್ ಅರ್ ಅಯ್ ಇರ್ ಎನ್ ಎವುಗಳಕ್ಕುಂ' ಎಂಬುದನುವರ್ತಿಸೆ ಪದಮಕ್ಕುಂ.

**ಪ್ರಯೋಗಂ** -

ತಾನಿರಲ್ಪಟ್ಟಂ, ತಾಮಿರಲ್ಪಟ್ಟರ್; ನೀನಿರಲ್ಪಟ್ಟಯ್, ನೀಮಿರಲ್ಪಟ್ಟಿರ್; ಆನಿರಲ್ಪಟ್ಟೆಂ, ಆಮಿರಲ್ಪಟ್ಟೆವು - ಎಂಬಂತೆ ಎಲ್ಲಕ್ಕಂ ತಿಳಿವುದು.

ಶಬ್ದಾನುಶಾಸನದಲ್ಲಿ (ಸೂತ್ರಂ ೪೪೩) ॥ಕರ್ಮಣಿ॥ ಅನ್ಯಯುಷ್ಮದಸ್ಮದರ್ಥೇಷು ಪ್ರತ್ಯೇಕಂ ಏಕತ್ವಾನೇಕತ್ವಯೋಃ ವಿವಕ್ಷಿತಯೋಃ ಯಥಾಕ್ರಮಂ ಧಾತೋಃ ಅಮ್ ಅರ್ ಅಯ್ ಇರ್ ಎನ್ ಎವು ಏತೇ ಪ್ರತ್ಯಯಾ ಭವಂತಿ ಕರ್ಮಣಿ ಚಾಭಿಧೇಯೇ॥ ಇಲ್ಲಿ ಕರ್ಮಣಿ (ಎಂದು ಕರ್ಮದಲ್ಲಿ) ಎಂಬೀ ಸೂತ್ರಕ್ಕೆ ಅನುವರ್ತನೆ ಬಂದು, ತಾನ್ನೀನಾನೆಂಬರ್ಥಂಗಳಲ್ಲಿ ಬೇಱೆ ಬೇಱೆ ಏಕವಚನ ಬಹುವಚನಂಗಳ್ ವಿವಕ್ಷೆಯಾಗೆ ಯಥಾಕ್ರಮವಾಗಿ ಧಾತುಗೆ ಅಮ್ ಅರ್ ಅಯ್ ಇರ್ ಎನ್ ಎವು ಎಂಬೀ ಪ್ರತ್ಯಯಂಗಳ್ ಕರ್ಮದೊಳಮ್ ಅಕ್ಕುಂ: ತಾನಿರಲ್ಪಟ್ಟಂ, ತಾಮಿರಲ್ಪಟ್ಟರ್, ನೀನಿರಲ್ಪಟ್ಟಯ್, (ಅದು ಇರೆಪಟ್ಟುದು) - ಎಂಬಂತೆಲ್ಲಕ್ಕಂ ಪತ್ತಿಸುಗುಂ. ಯೋಗವಿಭಾಗಮುತ್ತರಾರ್ಥಂ.

(ಸೂತ್ರಂ ೪೪೪) ಬೇಡ್ವಾದೇರಪ್ರಧಾನೇ॥ ಅನ್ಯಾದ್ಯರ್ಥವಿವಕ್ಷಾಯಾಂ ಬೇಡು ಇತ್ಯೇವಮಾದಿಭ್ಯೋ ಧಾತುಭ್ಯಃ ಅಪ್ರಧಾನೇ ಕರ್ಮಣಿ ಅಮಾದಯೋ ಭವಂತಿ ॥ ಎಂದುದಾಗಿ 'ಬೇಡ್ವಾದಿಗಪ್ರಧಾನದಲ್ಲಿ' ಎಂಬ ಸೂತ್ರಾರ್ಥಕ್ಕೆ ಅನ್ಯಾರ್ಥವಿವಕ್ಷೆಯಲ್ಲಿ ಬೇಡು ಎಂಬುದಾದಿಯಾದ ಧಾತುಗಳ್ಗೆ ಅಪ್ರಧಾನವಾದ ಕರ್ಮದಲ್ಲಿ ಅಮಾದಿಗಳಕ್ಕುಂ.

**ಪ್ರಯೋಗಂ** -

ಪಾರ್ವನಿನರಸಂ ಗ್ರಾಮಮಂ ಬೇಡಲ್ಪಟ್ಟಂ, ನೀಂ ಬೇಡಲ್ಪಟ್ಟಯ್, ಆಂ ಬೇಡಲ್ಪಟ್ಟೆಂ. ಇಂತು - ಗೋವಳನಿಂದೆ ಎರ್ಮೆ ಪಾಲಂ ಕಱೆಯಲ್ಪಟ್ಟುದು. ಉಪಾಧ್ಯಾಯಂ ಶಿಷ್ಯರಿಂ ತತ್ವಮಂ ಬೆಸಗೊಳಲ್ಪಟ್ಟಂ. ಬೇಹುಕಾಱನರಸನಿಂ ಸುದ್ದಿಯಂ ಕೇಳಲ್ಪಟ್ಟಂ; ಪಟ್ಟಳ್, ಪಟ್ಟುದು - ಎಂಬಂತೆ.

(ಸೂತ್ರಂ ೫೩೦)॥ ಕರ್ಮಣ್ಯನು ಪಡುಃ ॥ ಧಾತೋಃ ಪಡುಧಾತು ರನುಪ್ರಯುಜ್ಯತೇ ಕರ್ಮಣಿ ವಿಹಿತೇ ತಿಜಾಪರೇ ॥ ಎಂದುದಾಗಿ ಧಾತುಗೆ ಕರ್ಮದಲ್ಲಿ ವಿಹಿತಮಾದ ಅಮಾದಿಗಳ್ಪರಮಾಗೆ - ಪಡುಧಾತುವನುಪ್ರಯುಜ್ಯಮಾದಪುದು.

ಮಾಡಲ್ಪಟ್ಟುದು ಘಟಂ ಕುಂಬಜಿನಿಂ. ನೋಡಲ್ಪಟ್ಟನರಸನಂಗನೆಯಿಂ. ಬಯಸಲ್ಪಟ್ಟಳ್ತರುಣಿ ರಮಣನಿಂ. ಮಾಡಲ್ಪಡುಗೆಮಗೆ ಸಂಪದಂ ಜಿನಪತಿಯಿಂ. ಕಿಡಿಸಲ್ಪಡುಗೆಮ್ಮ ದುಃಖಸಂತತಿ ಜಿನನಿಂ.

ಕರ್ಮಣಿಪ್ರಯೋಗಮಲ್ಲದಿರೆ - ನೋಡಿದನರಸನಂಗನೆಯಂ, ರಮಣಂ ತರುಣಿಯಂ ಬಯಸಿದಂ, ಮಾಡಿದಂ ಪದಕಮನಕ್ಕಸಾಲೆ.

ಸೂತ್ರಂ(೫೩೨) ॥ ತಸ್ಮಿನ್ನೆದಲೌ ॥ ಧಾತೋಃ ಎಕಾರಃ ಅಲ್ ಭವತಃ ಪಡುಧಾತೌ ಪರೇ - ಎಂದುದಾಗಿ ಧಾತುಗೆ ಪಡುಧಾತು ಪರಮಾಗೆ ಹ್ರಸ್ವದೆಕಾರಂ ಅಲ್ಲುಂ ಅಪ್ಪುವು - ಮಾಡೆಪಟ್ಟಂ, ಮಾಡಲ್‌ಪಟ್ಟಂ; ನೋಡೆಪಟ್ಟಂ, ನೋಡಲ್ ಪಟ್ಟಂ; ಕಿಡಿಸೆಪಟ್ಟುದು, ಕಿಡಿಸಲ್‌ಪಟ್ಟುದು - ಎಂಬಂತೆಲ್ಲಕ್ಕಂ ಪತ್ತಿಸುವುದು.

ಮ ॥ ವಿ ॥ ಕವಿತಾಪ್ರೌಢಿಯೊಳಬ್ಜಸಂಭವನೆ ಕರ್ತಾರಂ ಕ್ರಿಯಾಕೌಶಲಂ ।
ಸ್ತವನೀಯಂ ತದಧೀನವಾದಖಿಳಶಾಸ್ತ್ರಾಮ್ನಾಯಮಂ ಕೂಡೆ ಬ ॥
ಲ್ಲವರಿಲ್ಲೆನ್ನದಿರೊರ್ವನಿಂದಭಿನವಬ್ರಹ್ಮಂ ಗಡೆಂಬಂತೆ ತೋ ।
ಱುವನಾತ್ಮೀಯವಚೋವಿಚಿತ್ರತರವಿದ್ಯಾವೇಶವಂ ಕೇಶವಂ ॥

***ಟೀಕೆ** - ಕವಿತ್ವದ ಬಲ್ಲತನದಲ್ಲಿ ಬ್ರಹ್ಮನೆ ಕರ್ತೃಕ್ರಿಯಾಕೌಶಲವುಳ್ಳವಂ, ಸ್ತುತಿಮಾಡಲ್ತಕ್ಕವಂ; ಅವನಧೀನವಾದ ಸಮಸ್ತ ವೇದಶಾಸ್ತ್ರಂಗಳಂ ಒಡನೆ ಅಱಿತವರ್ ಇಲ್ಲವೆಂದು ಎನಲ್ ಬೇಡ; ಕವಿಕೇಶವಂ ಒರ್ವಂ ಇಂದು ಹೊಸಬನಾದ ಬ್ರಹ್ಮಂ ಗಡ! ಎಂಬ ಹಾಂಗೆ ತನ್ನ ಸಂಬಂಧವಾದ ವಾಕ್ಯಂಗಳಂ ಚೋದ್ಯತರವಾದ ವಿದ್ಯಂಗಳ ಆವೇಶವನ್ನು ಕಾಣಿಸುವಂ.

ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಶಲ್ಯ
ಚಾರುಚುಂಬಕಾಯಮಾನಾನೂನ ಕರ್ಣಾಟಕಲಕ್ಷಣಶಿಕ್ಷಾಚಾರ್ಯ ಸುಕವಿ
ಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಆಖ್ಯಾತಸಾಕಲ್ಯಲಕ್ಷಣಮೆಂಬ
ಪಂಚಮಸಂಧಿ ಸಂಪೂರ್ಣಂ

~~~~~~~~~~~~~~~~

\* (ಪ್ರಥಮಪರಿಷ್ಕರಣದಲ್ಲಿ ಇದನ್ನು 'ತಾತ್ಪರ್ಯ' ಎಂದಿದೆ.)
~~~~~~~~~~~~~~~~

# ಆರನೆಯ ಸಂಧಿ

## ಧಾತುಪ್ರಕರಣಂ

ವೇದಸಮನಾಗಿ ಭೀಮನಿ ।
ನಾದುದು ಸಂಸ್ಕೃತದ ಧಾತುವಾ ತೆಱದಿಂದಂ ॥
ಯಾದವ ಕಟಕಾಚಾರ್ಯನಿ ।
ನಾದುದು ಕರ್ಣಾಟಧಾತು ಕವಿಕೇಶವನಿಂ ॥

ವೃತ್ತಿ - ವೇದದ ವೋಲ್ ಭೀಮಕವಿಯಿನೆಂತು ಸಂಸ್ಕೃತಧಾತು ಪ್ರಸಿದ್ಧಮಾಯ್ತಾ ತೆಱದೊಳ್ ಯಾದವಕಟಕೋಪಾಧ್ಯಾಯನಪ್ಪ ಕವಿಕೇಶವನಿಂ ಕರ್ಣಾಟಧಾತು ನೆಗೞ್ತೆವಡೆದುದು.

[ಸಂ. ಕ. ಸಾ. ಪ.]

ಸೂತ್ರಂ ॥ ದೊರೆವಡೆದ ಮಹಾಪ್ರಾಣಾ ।
ಕ್ಷರಾಂತದಿಂ ಜ ಞ ಶ ಷಾಂತ ಹಾಂತ ಕ್ಷಾಂತೋ ॥
ದ್ಧರಣದಿನುದ್ಭವಿಸವು ಬ ।
ಲ್ಲರ ಮತದಿಂ ಧಾತು ತಿಳಿವುದಿವನೀ ಕ್ರಮದಿಂ ॥ * ॥

ವೃತ್ತಿ - ವರ್ಗದ್ವಿತೀಯ ಚತುರ್ಥಾಕ್ಷರಂಗಳುಂ ಜ ಞ ಶ ಷ ಹ ಕ್ಷ ಕಾರಂಗಳುಮಂತಂಗಳಾಗಿರ್ಪ ಧಾತುಗಳ್ ಕನ್ನಡದೊಳ್ ನಿಸರ್ಗದಿನಿಲ್ಲೆಂಬುದು ಶಾಬ್ದಿಕಸಮಯಮೆಂದಱುವುದು.[೧]

[ಸಂ. ಕ. ಸಾ. ಪ.]

---

೧. (ಪ್ರಥಮ ಪರಿಷ್ಕರಣದಲ್ಲಿ ಈ ಮುಂದಿನ ಧಾತುಪಾಠದಲ್ಲಿ ಧಾತುಗಳ ಸ್ವರೂಪ, ಸಂಖ್ಯೆ, ಅನುಕ್ರಮ ಪ್ರಚಲಿತ ಪರಿಷ್ಕರಣಗಳಲ್ಲಿರುವುದಕ್ಕಿಂತ ಅಲ್ಲಲ್ಲಿ ಬೇರೆಯಾಗಿವೆ. ಕೆಲವೆಡೆ ಪದಚ್ಛೇದಗಳನ್ನೂ ಕನ್ನಡ ಶಬ್ದಾರ್ಥಗಳನ್ನೂ ಸೂಚಿಸಿದೆ. ಧಾತುಗಳ ರೂಪ ಮತ್ತು ಅರ್ಥಗಳ ಗ್ರಹಿಕೆಯಲ್ಲಿ ಗೊಂದಲಗಳಿವೆ. ಪ್ರಸ್ತುತ ಪರಿಷ್ಕರಣದಲ್ಲಿ ಕನ್ನಡ ಶಬ್ದಾರ್ಥಗಳನ್ನು ಮಾತ್ರ ಉಳಿಸಿಕೊಂಡು, ಪದಚ್ಛೇದಗಳನ್ನು ಕೈಬಿಟ್ಟಿದೆ. ಧಾತುಗಳ ರೂಪ, ಸಂಖ್ಯೆ ಮತ್ತು ಅರ್ಥಗಳನ್ನು ಪ್ರಚಲಿತ ಪರಿಷ್ಕರಣಗಳನ್ನು ಆಧರಿಸಿ ಸಾಧ್ಯವಿದ್ದಮಟ್ಟಿಗೆ ಪರಿಷ್ಕರಿಸಿದೆ.)

## ೧. ಸ್ವರಧಾತುಗೆ

೧. ಈ - ಪ್ರದಾನೇ.
೨. ಓ - ಸ್ನೇಹೇ.

## ೨. ಕಾಂತಕ್ಕೆ

೩. ಅಡುಕು - ಸ್ಥಾನಾಂತರಪ್ರಣೇತೇ.
೪. ಅಟ್ಕು - ಜೀರ್ಣೇ (ಗಳಿತವಾಗು).
೫. ಅಳ್ಕು - ಭಯೇ, ಅಶಕ್ತೌ ಚ.
೬. ಇಕ್ಕು - ತ್ಯಾಗ ಹನನಯೋಃ (ಹೊಡೆ)
೭. ಇಡುಕು, ಇಡುಂಕು - ಗಾಢ ವಿಮೋಚನೇ (ಥಟ್ಟನೆ ಬಿಡು, ಬಿಡಿಸು).
೮. ಇಱುಕು, ಇಱುಂಕು - ನಿಗ್ರಹಗ್ರಹಣೇ.
೯. ಉರ್ಕು - ಔದ್ಧತ್ಯೇ (ಗರ್ವಿಸು), ಲೋಹಭೇದೇ ಚ.
೧೦. ಉಲುಕು - ಶರೀರಸ್ಫುರಣೇ (ನಡುಗು).
೧೧. ಉಳ್ಕು - ದೀಪ್ತೌ (ಪ್ರಕಾಶಿಸು), ದ್ರವ್ಯೇ ಚ (ಉಲ್ಕ).
೧೨. ಎಕ್ಕು - ವಿಭಜನೇ, ಪ್ರವಾಹಿಕಾಯಾಂ ಚ (ಭೇದಿಯಾಗು).
೧೩. ಒಕ್ಕು - ಖಲಕರಣೇ, ಶಕುನೇ ಚ.
೧೪. ಒಟ್ಕು - ಪ್ರವಾಹೇ.
೧೫. ಔಂಕು - ದೃಢಪೀಡನೇ.
೧೬. ಕರ್ದುಕು, ಕರ್ದುಂಕು - ಲಘುಚಂಚುಘಾತನೇ (ಕೊಕ್ಕಿನಿಂದ ಮೆಲ್ಲಗೆ ಕುಕ್ಕು).
೧೭. ಕಲಂಕು - ಆಲೋಡನೇ.
೧೮. ಕಾ - ರಕ್ಷಣೇ.
೧೯. ಕೀ - ರಕ್ತಪಕ್ವೇ (ಕೀವು ತುಂಬು)
೨೦. ಕುಕ್ಕು - ವಸ್ತ್ರಸ್ವಲ್ಪಘಾತನೇ, ಪಕ್ಷಿಭೇಧೇ ಚ.
೨೧. ಕುಟುಕು - ಗಾಢಪೂರಣೇ (ಹೆಚ್ಚಾಗಿ ತುಂಬು).
೨೨. ಕುಡುಕು - ಚಂಚುಘಾತನೇ (ಕೊಕ್ಕಿನಿಂದ ಕುಕ್ಕು), ಧಾನ್ಯಾ ದಿ ದ್ರವ್ಯೇ ಚ (ಗುಟುಕು).
೨೩. ಕುಡುಕು - ಈಷತ್ಪ್ರದಾನೇ
೨೪. ಕುಣುಕು - ಮುಸಲಕ್ರಿಯಾಯಾಂ (ಕುಟ್ಟು), ಕೀಲೇ ಚ (ಅಗುಳಿ).
೨೫. ಕುಱುಕು, ಕುಱುಂಕು - ಖಾದನೇ (ತಿನ್ನು).
೨೬. ಕುಲುಕು - ಗಾಢಪೂರಣೇ (ಹೆಚ್ಚಾಗಿ ತುಂಬು).
೨೭. ಕುಸುಕು, ಕುಸುಂಕು - ಘಾತನೇ.
೨೮. ಕೂಂಕು - ಉತ್ಸರ್ಪಣೇ (ಹೋಗು).
೨೯. ಕೆಕ್ಕು - ಗೋಶಿಕ್ಷಾಧ್ವನೌ.
೩೦. ಕೆಣಕು - ಕದರ್ಥನೇ.
೩೧. ಕೇ - ಶಯನೇ, ನಿಧುವನೇ ಚ.
೩೨. ಕೊಣಕು - ಮೃಗಲಂಘನೇ (ಹಾರಿಬೀಳು).
೩೩. ಕೊಂಕು - ಕೌಟಿಲ್ಯೇ (ವಕ್ರವಾಗು).
೩೪. ಕೋ - ಸೂತ್ರಪ್ರವೇಶೇ (ಪೋಣಿಸು).
೩೫. ಚಲಕು, ಚಲಂಕು - ಕರವಿಮೋಚನೇ (ಕೈಯಿಂದ ಬಿಡಿಸಿಕೊಳ್ಳು).
೩೬. ಚಲುಕು, ಚಲುಂಕು - ಜಲೋತ್ಸರ್ಜನೇ (ದ್ರವವನ್ನು ಚೆಲ್ಲು).
೩೭. ಜರ್ಕು - ನಖಘಾತನೇ (ಉಗುರಿನಿಂದ ಹೊಡೆ).
೩೮. ಜೆರ್ಕು - ನಖಕ್ಷತೇ (ಉಗುರಿನಿಂದ ಗಾಯಮಾಡು).
೩೯. ತಳ್ಕು - ಅನುಲೇಪನೇ, ತದ್ಭಾವೇ ಚ (ಪ್ರಕಾಶ).
೪೦. ತಿಣುಕು - ಅಪಾನವಾಯೌ.
೪೧. ತುಡುಕು, ತುಡುಂಕು - ಸತ್ವರಗ್ರಹಣೇ (ಥಟ್ಟನೆ ಹಿಡಿ).
೪೨. ತುಱುಕು - ಗಾಢಪ್ರವೇಶೇ.
೪೩. ತುಳುಕು, ತುಳುಂಕು - ಸೇಚನೇ.
೪೪. ತೆಕ್ಕು - ತಿರ್ಯಕ್ಕಂಡೂತಿಲೇಹನೇ (ನವೆಗೆ ನೆಕ್ಕು).
೪೫. ತೇಂಕು - ಪ್ಲವನೇ (ತೇಲು).
೪೬. ತೊಡಕು, ತೊಡಂಕು - ವಿಪರ್ಯಾಸೇ (ಅಡ್ಡಿಮಾಡು).
೪೭. ನಕ್ಕು - ಲೇಹನೇ.
೪೮. ನಱುಕು - ವೃದ್ಧಿಹೀನೇ (ಬೆಳವಣಿಗೆ ಕಡಿಮೆಯಾಗು).
೪೯. ನಿಳ್ಕು - ಉಪರಿಸ್ಪರ್ಶನೇ (ನಿಲುಕಿಸಿಕೊಳ್ಳು).
೫೦. ನೂಂಕು - ಪ್ರೇರಣೇ.
೫೧. ನೆಕ್ಕು - ಅಂತರ್ಲೀನೇ (ಖಿನ್ನನಾಗು)
೫೨. ಪಳಂಕು - ಗಾಢಸ್ಪರ್ಶನೇ (ಒತ್ತಿ ಹಿಡಿದುಕೊಳ್ಳು).
೫೩. ಪಳುಂಕು - ಪ್ರೇರಣೇ (ನೂಂಕು)
೫೪. ಪಿಕ್ಕು - ವಿವರಣೇ (ಬಿಡಿಸು).
೫೫. ಪಿಸುಕು, ಪಿಸುಂಕು - ಅವಜ್ಞಾತಿಶಯೇ (ಅಪಮಾನಮಾಡು).
೫೬. ಪುಡುಕು, ಪುಡುಂಕು - ಕರಾನ್ವೇಷಣೇ.
೫೭. ಪೊಳಕು, ಪೊಳಂಕು - ಚರ್ವಣ ಕ್ರಿಯಾಯಾಂ (ಅಗಿಯು).
೫೮. ಬರ್ದುಕು, ಬರ್ದುಂಕು - ಜೀವನಾರ್ಥೇ.
೫೯. ಬಳ್ಕು, ಬಳುಂಕು - ನಮನೇ.
೬೦. ಬಂಕು - ಕೌಟಿಲ್ಯೇ (ವಕ್ರವಾಗು).
೬೧. ಬಿಕ್ಕು - ಉಚ್ಛ್ವಾಸೇ, ಮಾಂಸಭೇದೇ ಚ.

೬೨. ಬೆದಕು, ಬೆದಂಕು - ಅನ್ವೇಷಣೇ (ಹುಡುಕು)
೬೩. ಮಿಡುಂಕು, ಮಿಡುಂಂಕು - ಚೈತನ್ಯೇ (ಚೇತರಿಸು).
೬೪. ಮಿನುಕು - ಅಂತರ್ಗತಸ್ವನೇ (ಪಿಸುಗುಟ್ಟು), ಕಾಂತೌ ಚ (ಪ್ರಕಾಶಿಸು).
೬೫. ಮಿಸುಕು - ಸ್ಪಂದನೇ (ಅದುರು)
೬೬. ಮುಕ್ಕು - ಖಾದನವಿಶೇಷೇ.
೬೭. ಮುಡುಂಕು (ಮುದುಂಕು) - ಶರೀರೋಪ ಗೂಹನೇ (ಆಲಿಂಗನ ಮಾಡು).
೬೮. ಮುಱುಕು - ಮುಖವಿಕಾರೇ.
೬೯. ಮುಲುಕು - ಪ್ರಸವನಕ್ರಿಯಾಯಾಂ.
೭೦. ಮುೞುಕು, ಮುೞುಂಕು - ಜಲ ನಿಮಜ್ಜನೇ.
೭೧. ಮುಸುಕು - ಆವರಣೇ, ಭಾವೇ ಚ.
೭೨. ಮೊರಕು (ಮೊರ್ಕು) - ದರ್ಪ ಘೂರ್ಣನೇ (ಗರ್ವದಿಂದ ತಲೆದೂಗು).
೭೩. ಸಾಕು - ರಕ್ಷಣೇ.
೭೪. ಸಿರ್ಕು, ಸಿಲ್ಕು - ಪ್ರತಿಬಂಧೇ.
೭೫. ಸುರ್ಕು - ಸಂಕೋಚೇ (ಕುಗ್ಗು).
೭೬. ಸೆರ್ಕು - ವಸ್ತ್ವಾಂತರಪ್ರವೇಶೇ (ಸೆಕ್ಕು).
೭೭. ಸೊರ್ಕು - ಉನ್ಮಾದೇ.
೭೮. ಸೋಂಕು - ಸ್ಪರ್ಶನೇ.
೭೯. ಹಲುಕು - ವೃಕ್ಷಾರೋಪಣೇ, ಶರೀರಾಂಗ ಭೇದೇ ಚ.

## ೩. ಗಾಂತಕ್ಕೆ

೮೦. ಅಗಿ - ಸಂತ್ರಾಸ(ಭಯಪಡು), ಹರ್ಷ ಚರ್ವಣೇಷು.
೮೧. ಅಡಂಗು - ಗೋಪನೇ.
೮೨. ಅಲುಗು - ಸಂಚಲನೇ.
೮೩. ಅೞ್ಗು - ಲಯೇ, ಕ್ಷೀಣತ್ವೇ.
೮೪. ಆಗು - ಪ್ರಾದುರ್ಭಾವೇ.
೮೫. ಉಗಿ - ಆಕರ್ಷಣೇ (ಎಳೆಯು), ನಖಕ್ಷತೇ ಚ (ಉಗುರಿನಿಂದ ಸೀಳು).
೮೬. ಉಗು - ವಿಸರ್ಜನೇ.
೮೭. ಉಗ್ಗು - ವಚನನಿರೋಧೇ (ಬಿಕ್ಕಿಮಾತಾಡು).
೮೮. ಉಡುಗು - ಸಂಕೋಚನೇ.
೮೯. ಉಱುಗು - ವಕ್ರಭಾವೇ.
೯೦. ಉೞ್ಗು - ಸ್ನೇಹೇ.
೯೧. ಎಡೆಯುಡುಗು - ವಿಚ್ಛೇದೇ (ಸ್ಥಳಬಿಡು).
೯೨. ಎಱಗು - ಪ್ರಣತೇ (ನಮಸ್ಕರಿಸು).
೯೩. ಎಸಗು - ಉದ್ಯೋಗೇ (ಮಾಡು).
೯೪. ಒಗೆ-ಜನನೋತ್ಪತನ ವಸ್ತ್ರಪ್ರಕ್ಷಾಲನಯೋಃ.
೯೫. ಒಣಗು - ಶೋಷಣೇ.
೯೬. ಒಱಗು - ಸುಪ್ತೌ (ನಿದ್ದೆಹೋಗು).
೯೭. ಒೞ್ಗು - ಸಂಮೇಳನೇ (ಕೂಡಿಸು).
೯೮. ಕಡಂಗು - ಔತ್ಸುಕ್ಯೇ (ಇಚ್ಛೆ ಪಡು).
೯೯. ಕರಗು - ವಿಲೀನೇ.
೧೦೦. ಕಱಂಗು - ಕಾರ್ಷ್ಣ್ಯೇ (ಕಪ್ಪಾಗು)
೧೦೧. ಕೞ್ಗು = ಕಾರ್ಷ್ಣ್ಯೇ (ಕಪ್ಪಾಗು.)
೧೦೨. ಕುನುಂಗು - ಸಂಕೋಚನೇ (ಕುಗ್ಗು).
೧೦೩. ಕುೞ್ಗು - ಆಕುಂಚನೇ (ಕುಗ್ಗು).
೧೦೪. ಕೂಗು - ಉಚ್ಚೈರ್ಧ್ವನೌ.
೧೦೫. ಕೇಗು - ಮಯೂರಸ್ವನೇ.
೧೦೬. ಕೊರಗು - ರಹವಿಹೀನೇ (ನಿಸ್ಸಾರವಾಗು).
೧೦೭. ಚಿಗಿ - ಅಂಗುಲಿವಿಸರ್ಜನೇ (ಬೆರಳಿನಿಂದ ಚಿಮ್ಮು).
೧೦೮. ಚೆಲಂಗು - ಕರಮುಕ್ತೌ (ಕೈಯಿಂದ ಬಿಡು).
೧೦೯. ಜಿನುಗು, ಜಿನುಂಗು - ಅಸಹ್ಯಾವ್ಯಕ್ತಧ್ವನೌ, ವರ್ಷಭೇದೇ ಚ.
೧೧೦. ತಗೆ - ಸ್ತಂಭನೇ (ನಿಲ್ಲಿಸು).
೧೧೧. ತೞ್ಗು - ಕ್ಷೀಣತ್ವೇ.
೧೧೨. ತಾಗು - ಸಂಘಟ್ಟನೇ.
೧೧೩. ತಾಂಗು - ಧಾರಣ ಸಂಘಟ್ಟನಯೋಃ
೧೧೪. ತುಱುಗು - ಸಂಭಗ್ನೇ (ಕವಿದುಕೊಳ್ಳು).
೧೧೫. ತೂಗು - ತುಲನೇ.
೧೧೬. ತೆಗೆ - ಆಕರ್ಷಣೇ.
೧೧೭. ತೇಗು - ಉದಾನವಾಯೌ ವೃಕ್ಷಭೇದೇ ಚ.
೧೧೮. ತೊಡಗು - ಪ್ರಾರಂಭೇ.
೧೧೯. ತೊಲಗು - ವಿವಿಕ್ತೇ.
೧೨೦. ತೊಳಗು - ಕಾಂತೌ (ಪ್ರಕಾಶಿಸು).
೧೨೧. ನಗು - ಹಸನೇ.
೧೨೨. ನಡುಗು - ಕಂಪನೇ.
೧೨೩. ನೀಗು - ತ್ಯಜನೇ.
೧೨೪. ನುೞ್ಗು - ಸಂಚೂರ್ಣೇ.
೧೨೫. ನುಂಗು - ಗಿಲನೇ.
೧೨೬. ನೆಗೆ - ಉತ್ಪ್ಲವನೇ.
೧೨೭. ನೆರ್ಗು - ಅಂತರ್ಲೀನೇ (ಅಡಹೋಗು).
೧೨೮. ಪಿಂಗು - ಅಪಸರಣೇ (ಹಿಂದಿರುಗು).
೧೨೮* ಪಿಡುಗು - ಸಂಭಿನ್ನೇ.
೧೨೯. ಪುಗು - ಪ್ರವೇಶೇ.
೧೩೦. ಪುೞ್ಗು - ದಹನಕ್ರಿಯಾಯಾಂ (ಉರಿಸು).
೧೩೧. ಪೊಂಗು - ಸ್ಫುಟನೇ (ಹೊಮ್ಮು, ಉಕ್ಕು).
೧೩೨. ಪೋಗು - ಗಮನೇ.

೧೩೩. ಬಗಿ - ವಿಶ್ಲೇಷೇ (ಭಾಗಮಾಡು).
೧೩೪. ಬಗೆ - ಪರಿಭಾವೇ, ಚಿತ್ತೇ ಚ.
೧೩೫. ಬಾಗು - ನಮ್ರತ್ವೇ.
೧೩೬. ಬಿಗಿ - ಬಂಧನೇ, ಹಯಾದಿಪರಿಕರೇ ಚ.
೧೩೭. ಬೀಗು - ಹರ್ಷಭಾವೇ, ಸ್ಥೌಲ್ಯೇ ಚ (ಉಬ್ಬು).
೧೩೮. ಬೆಳಗು - ಕಾಂತೌ.
೧೩೯. ಮಡಗು - ಗೋಪನೇ (ಮುಚ್ಚಿಡು).
೧೪೦. ಮಱುಗು - ಸಂತಾಪೇ.
೧೪೧. ಮಲಗು, ಮಲಂಗು - ಉಪಧಾನಾವಲಂಬೇ, ಉಪಧಾನೇ ಚ (ತಲೆದಿಂಬು).
೧೪೨. ಮಸಗು - ವಿಜೃಂಭಣೇ.
೧೪೩. ಮಿಗು - ಅತಿಕ್ರಮಣೇ, ಅವಶಿಷ್ಟೇ ಚ.
೧೪೪. ಮಿಡುಗು - ಸಂಖಿನ್ನೇ (ದುಃಖದಿಂದ ಚಿಂತಿಸು).
೧೪೫. ಮಿಱುಗು - ಚಕಚಕಾಯಮಾನೇ (ಪ್ರಕಾಶಿಸು).
೧೪೬. ಮಿಸುಗು - ಕಾಂತೌ (ಪ್ರಕಾಶಿಸು).
೧೪೭. ಮುಗಿ - ಪುಷ್ಪಸಂಕೋಚನೇ (ಮೊಗ್ಗಾಗು).
೧೪೮. ಮುಗ್ಗು - ಜೀರ್ಣಾವಗಂಧೇ, ಗತಿಭಂಗೇ ಚ (ಮುಗ್ಗರಿಸು).
೧೪೯. ಮುೞುಗು - ನಿಮಗ್ನೇ.
೧೫೦. ಮುಟ್ಟು - ಪತನೇ.
೧೫೧. ಮೊಗೆ - ಜಲಾಕರ್ಷಣೇ, ಭೂಭೇದೇ ಚ, ಘಟಭೇದೇ ಚ.
೧೫೨. ಮೊೞಗು - ವಾದನಕ್ರಿಯಾಯಾಂ, ಸ್ತನಿತೇ ಚ (ಗುಡುಗು), ವೃಕ್ಷಭೇದೇ ಚ.
೧೫೩. ಮೊಗ್ಗು - ನಮನೇ.
೧೫೪. ಸಿದುಗು - ಹಸ್ತಾನ್ವೇಷಣೇ (ಕೈಯಿಂದ ಪುಡುಕು).
೧೫೫. ಸುಗಿ - ಭಯೇ.
೧೫೬. ಹರಗು - ಸಸ್ಯಕ್ರಿಯಾಯಾಂ.
೧೫೭. ಹುದುಗು - ಗೋಪನೇ (ಮುಚ್ಚು).
೧೫೮. ಹೊಗೆ - ಧೂಮನಿರೋಧಕ್ರಿಯಾಯಾಂ, ಧೂಮೇ ಚ.

## ೪. ಚಾಂತಕ್ಕೆ

೧೫೯. ಅಗುೞ್ಚು - ಜಲಾಶಯಮಗ್ನೇ.
೧೬೦. ಅಮರ್ಚು - ಸಂಘಟೀಕರಣೇ.
೧೬೧. ಅಲರ್ಚು - ವಿಕಸನೇ.
೧೬೨. ಅಱುಚು - ಉಚ್ಚೈರ್ಧ್ವನೌ.
೧೬೩. ಅೞಲ್ಚು - ದುಃಖೋತ್ಪಾದನೇ.
೧೬೪. ಉದಿರ್ಚು - ಅಧಃಪತನೇ.
೧೬೫. ಉರುಳ್ಚು - ನಿಮ್ನಗಮನಕರಣೇ.
೧೬೬. ಉರ್ಚು - ಆಕರ್ಷಣೇ ಮಲಭೇದನೇ ಚ.
೧೬೭. ಎಚ್ಚು - ಅಂಜನಕ್ರಿಯಾಯಾಂ.
೧೬೮. ಎೞಲ್ಚು - ಆಲಂಬನೇ.
೧೭೦. ಒಡರ್ಚು - ಉದ್ಯಮೇ.
೧೭೧. ಕಡೆಗಣ್ಚು - ಅವಜ್ಞಾಯಾಂ (ತಿರಸ್ಕರಿಸು).
೧೭೨. ಕರ್ಚು - ಖಾದನೇ, ಪ್ರಕ್ಷಾಲನೇ, ತಂಡುಲಪ್ರಕ್ಷಾಲಜಲೇ ಚ.
೧೭೩. ಕವಿಚು - ವಿಪರೀತಪತನೇ (ತಲೆಕೆಳಗುಮಾಡು).
೧೭೪. ಕೞಲ್ಚು - ಪೃಥಕ್ಕರಣೇ.
೧೭೫ ಕಿಮುಟ್ಚು - ಹಸ್ತಮರ್ದನೇ.
೧೭೬. ಕುರುಳ್ಚು - ಶಸ್ತ್ರಸಂಚಾಲನೇ.
೧೭೭. ಕೆಚ್ಚು-ತಂತುವಾಯಕ್ರಿಯಾಯಾಂ (ನೆಯ್ಗೆಯ ಕೆಲಸ) ತರುಸಾರೇ ಚ (ಚೇಗು).
೧೭೮. ಕೆರಳ್ಚು-ಆಸ್ಫೋಟನೇ (ಪ್ರಕಟಕೋಪೋದ್ರೇಕೇ).
೧೭೯. ಕೊರಲ್ಚು - ಆಕ್ರೋಶಧ್ವನೌ.
೧೮೦. ಚರ್ಚು - ಶಿಶುಸಂಧಾರಣೇ.
೧೮೦*ಚುರ್ಚು - ದಾಹೇ (ಉರಿ),
೧೮೧. ಜಱುಚು - ಬಹುಭಾಷಾಯಾಂ.
೧೮೨. ತಗುಳ್ಚು - ಉದ್ಯೋಗೇ, ಅಗ್ನಿಬಾಧನೇ ಚ.
೧೮೩. ತಳರ್ಚು - ಸ್ಥಾನಾಪಗಮನೇ.
೧೮೪. ತೀರ್ಚು - ನಿಷ್ಪತ್ತೌ.
೧೮೫. ತೆರಳ್ಚು - ಚಲನೇ, ಚಯನೇ ಚ.
೧೮೬. ತೊಡರ್ಚು - ಬಂಧನೇ.
೧೮೭. ನಚ್ಚು - ವಿಶ್ವಾಸೇ (ನಂಬು).
೧೮೮. ನಾಣ್ಚು - ಲಜ್ಜಾಯಾಂ.
೧೮೯. ನಿಮಿರ್ಚು - ಪ್ರಸಾರಣೇ (ನಿಗುರಿಸು)
೧೯೦. ನುಗುಳ್ಚು - ಸೂಕ್ಷ್ಮದ್ವಾರಪ್ರವೇಶೇ.
೧೯೧. ನುಣ್ಚು - ಅಪಸರಣೇ.
೧೯೨. ನೆಗಟ್ಚು - ವಿಖ್ಯಾತೌ, ಉದ್ಯೋಗೇ ಚ.
೧೯೩. ಪರ್ಚು - ಅವ್ಯಕ್ತಧ್ವನೌ (ಪಿಸುಗುಟ್ಟು).
೧೯೪. ಪಳಂಚು - ಸಂಘಟ್ಟನೇ.
೧೯೫. ಪಿಂಚು - ಪಶ್ಚಾದರ್ಥೇ (ಹಿಂದುಳಿ).
೧೯೬. ಪುಯಲ್ಚು - ಆಕ್ರೋಶಧ್ವನೌ.
೧೯೭. ಪೆಟ್ಚುವೆರ್ಚು - ದರ್ಪೇ (ಗರ್ವಪಡು).
೧೯೮. ಪೆರ್ಚು - ವಿಸ್ತಾರೇ.
೧೯೯. ಪೊಣರ್ಚು - ಸಂಯುಗೇ (ಬೆರಸು).
೨೦೦. ಪೊರಳ್ಚು - ಲುಠನೇ.

೨೦೧. ಬಟಿಲ್ಚು - ನಿಶ್ಚೇಷ್ಟಾಯಾಂ (ಅಲಸಿಕೆ ಮಾಡು).

೨೦೧*ಬಟುಲ್ಚು - ಅವಸ್ರಂಸನೇ (ಕೆಳಕ್ಕೆ ಬೀಳು, ಬೀಳಿಸು).

೨೦೨. ಬಾರ್ಚು - ಪುಂಜೀಕರಣೇ (ರಾಶಿ ಮಾಡು).

೨೦೩. ಬಿದಿರ್ಚು - ರಥವಿಮೋಚನೇ (ಬಂಡಿಯಿಂದ ಕುದುರೆ ಮೊದಲಾದುವನ್ನು ಬಿಚ್ಚು; ಹರಡು)

೨೦೪. ಬಿರ್ಚು - ವಿಭಜನೇ.

೨೦೫. ಬೆಮರ್ಚು - ಸ್ವೇದಕರಣೇ.

೨೦೬. ಬೆರ್ಚು - ಸಂತ್ರಾಸೇ (ಭಯಪಡು), ತೃಣಪುರುಷೇ ಚ (ದೃಷ್ಟಿ ಪರಿಹಾರಾರ್ಥವಾಗಿ ಮಾಡಿಡುವ ಬೊಂಬೆ).

೨೦೭. ಮಗುಟ್ಚು - ಪರಾಙ್ಮುಖೇ (ಹಿಂದಿರುಗಿಸು).

೨೦೮. ಮಚ್ಚು - ಅತಿಪರಿಚಯೇ.

೨೦೯. ಮರಲ್ಚು - ಪರಾಙ್ಮುಖೇ.

೨೧೦. ಮಿಂಚು - ದೀಪ್ತೌ, ವಿದ್ಯುತಿ ಚ.

೨೧೧. ಮುಗುಳ್ಚು - ಸಂಕೋಚಕರಣೇ (ಕುಗ್ಗಿಸು)

೨೧೨. ಮುಚ್ಚು - ಆಚ್ಛಾದನೇ.

೨೧೩. ಮುಂಚು - ಅಗ್ರಗಮನೇ (ಮುಂದುವರಿ)

೨೧೪. ಮೆಚ್ಚು - ಅಭ್ಯುಪಗಮೇ.

೨೧೫. ಮೋಚು - ವೈಧವ್ಯೇ.

೨೧೬. ಸಡಿಲ್ಚು - ಶೈಥಿಲ್ಯೇ.

೨೧೭. ಸಾರ್ಚು - ಸಮೀಪಾನಯನೇ.

೨೧೮. ಸುರುಳ್ಚು - ಸಂಕೋಚನೇ.

೨೧೯. ಸೋರ್ಚು - ಗಲನೇ (ಸೋರಿಸು)

೨೨೦. ಹರಳ್ಚು - ನೇತ್ರವಿರೋಧಕರಣೇ. (ದೃಷ್ಟಿಗೆ ಅಡ್ಡಿಮಾಡು).

೨೨೧. ಹೊಂಚು - ಸಂಕೇತೋದ್ಯೋಗೇ.

## ೫. ಜಾಂತಕ್ಕೆ

೨೨೨. ಅಂಜು - ಭಯೇ.

೨೨೩. ನಂಜು - ಈಷಲ್ಲೇಹನೇ (ನಂಚಿಕೊ), ವಿಷೇ ಚ.

೨೨೪. ಪಿಂಜು - ಪೃಥಕ್ಕರಣೇ.

೨೨೫. ಬೆರಂಜು - ಚಯನೇ (ಒಟ್ಟುಗೂಡು).

೨೨೬. ಮಾಂಜು - ಅಪಲಾಪೇ (ಮರೆಮಾಚು).

## ೬. ಟಾಂತಕ್ಕೆ

೨೨೭. ಅಟ್ಟು - ಅನುಧಾವನೇ.

೨೨೮. ಅಱಿಯಟ್ಟು - ಅನುಧಾವನೇ.

೨೨೯. ಈಂಟು - ಪಾನೇ.

೨೩೦. ಉರುಟು - ಅತಿಕ್ರಮಣೇ.

೨೩೧. ಎಟ್ಟು - ಊರ್ಧ್ವಗತವಸ್ತುಗ್ರಹಣೇ.

೨೩೨. ಎಟ್ಟಿಟ್ಟು - ಅನುಧಾವನೇ.

೨೩೩. ಒಟ್ಟು - ಏಕತ್ರಕ್ರಿಯಾಯಾಂ.

೨೩೪. ಕಟ್ಟು - ಬಂಧನೇ, ಪಕ್ವಧಾನ್ಯರಸೇ ಚ. (ಬೇಳೆಕಟ್ಟು ಇತ್ಯಾದಿ).

೨೩೫. ಕಿಟ್ಟು - ಸ್ಪರ್ಶನೇ.

೨೩೬. ಕಿಡಿಗುಟ್ಟು - ಸಂಘಟ್ಟನೇ.

೨೩೭. ಕುಟ್ಟು - ತಾಡನೇ.

೨೩೮. ಕೂಂಟು - ವಿಕೃತಗತೌ.

೨೩೯. ಕೆರಂಟು - ನಖಖನನೇ.

೨೪೦. ಗುಡಿಕಟ್ಟು - ವರ್ಣಪೂರರೇಖಾಯಾಂ (ಕುಂಡಲೀಕರಣಂ).

೨೪೧. ತಟ್ಟು - ತಾಡನೇ, ಕ್ಷಪಣಕಾಚ್ಛಾದನೇ ಚ (ಜೈನಸನ್ಯಾಸಿಯ ಹೊದಿಕೆ).

೨೪೨. ತಾಟು - ಸಂಘಟ್ಟನೇ.

೨೪೩. ತಿಟ್ಟು - ಭರ್ತ್ಸನೇ (ಬಯ್ಯು), ಉನ್ನತ ಭೂಮೌ ಚ.

೨೪೪. ತೆರಂಟು - ನಿವಸನೋದ್ವಹನೇ (ಮುಯ್ಯ ಸೀರೆ ಕೊಡು).

೨೪೫. ತೆಂಟು - ಶೂರ್ಪಕರಣೇ (ಕೇರು).

೨೪೬. ದಾಂಟು - ಲಂಘನೇ.

೨೪೭. ದೂಂಟು - ಏಕಪಾದಗತೌ.

೨೪೮. ನಾಂಟು - ಅಂತರ್ಭೇದೇ (ನಾಟಿಕೊಳ್ಳು).

೨೪೯. ಪುಟ್ಟು - ಉತ್ಪತ್ತೌ, ದಾರುಹಸ್ತೇ ಚ (ದೋಣಿ ನಡೆಯಿಸುವ ಮರಗೈ).

೨೫೦. ಬಗಟು - ಊರುವಿಶ್ಲೇಷೇ (ಕಾಲುಗಳನ್ನು ಅಗಲಿಸು).

೨೫೧. ಬೆಟ್ಟು - ಗಾಢಪ್ರವೇಶೇ, ಪರ್ವತೇ ಚ.

೨೫೨. ಬೆರಂಟು - ಅಂಗುಲಿಕ್ರಿಯಾಯಾಂ.

೨೫೩. ಮೀಂಟು - ಉತ್ಪಾಟನೇ, ಉತ್ಕರ್ಷ ದ್ರವ್ಯೇ ಚ (ಮೀಟುವ ಆಯುಧ).

೨೫೪. ಮುಟ್ಟು - ಸ್ಪರ್ಶನೇ ಉಪಕರಣೇ ಚ (ಮರಮುಟ್ಟು).

೨೫೫. ಮುರುಂಟು - ದಹನಕರಣೇ.

೨೫೬. ಮೆಟ್ಟು - ಪದವಿನ್ಯಾಸೇ, ಪಾದರಕ್ಷೇ ಚ.

೨೫೭. ಸಮಕಟ್ಟು - ವಿಧಾನೇ (ಏರ್ಪಡಿಸು).

೨೫೮. ಸೀಂಟು - ಗುದಸಮ್ಮಾರ್ಜನೇ.

೨೫೯. ಸುಟ್ಟು - ಅಂಗುಲಿದರ್ಶನೇ (ಬೆರಳಿನಿಂದ ತೋರಿಸು).

೨೬೦. ಸುರುಂಟು - ಸಂಕೋಚನೇ.

## ೭. ಡಾಂತಕ್ಕೆ

೨೬೧. ಅಡು - ಪಚನೇ.

೨೬೨. ಅಡೆ - ಅಂಗುಲಿಪ್ರಹರಣೇ (ಬೆರಳಿನಿಂದ ಕೊಡೆ), ಪಂಚಕಾರುಕ ಕರ್ಮದಾರೌ ಚ (ಅಡಿಮರ).
೨೬೩. ಅಲ್ಲಾಡು - ಸಂಚಲನೇ.
೨೬೪. ಅಳ್ಕಿಜಂಬಡು - ಅಸೂಯಾಯಾಂ.
೨೬೫. ಅೞ್ಕಾಡು - ನಿರವಶೇಷೇ (ಜೀರ್ಣವಾಗು)
೨೬೬. ಆಡು - ನರ್ತನೇ, ಅಜೇ ಚ.
೨೬೭. ಆಸೆವಡು - ಈಪ್ಸಾಯಾಂ.
೨೬೮. ಇಡಿ - ಚೂರ್ಣೇ, ಸಂಕೀರ್ಣೇ ಚ (ತುರುಕು).
೨೬೯. ಇಡು - ಕರವಿಮೋಚನೇ.
೨೭೦. ಈಡಾಡು - ಪ್ರಮಾದತ್ಯಜನೇ.
೨೭೧. ಈಸಾಡು - ಜಲೋತ್ತರಣೇ.
೨೭೨. ಉಡಿ - ಮೋಟನೇ (ಮುರಿ), ರೋಗಭೇದೇ ಚ.
೨೭೩. ಉಡು - ವಸ್ತ್ರಪ್ರವೇಷ್ಟನೇ, ಮೃಗ ವಿಶೇಷೇ ಚ.
೨೭೪. ಉಬ್ಬಸಂಬಡು - ಉಚ್ಛ್ವಾಸನಿಗ್ರಹೇ.
೨೭೫. ಉಣ್ಡು - ಭೋಜನಕ್ರಿಯಾಯಾಂ, ಆಧಾರೇ ಚ.
೨೭೬. ಊಳಿಡು - ಜಂಬುಕಸ್ವನೇ.
೨೭೭. ಏಸಾಡು - ಶರಗತೌ.
೨೭೮. ಒಡ್ಡು - ಪ್ರತೀಕಾರೇ, ವ್ಯೂಹೇ ಚ (ಗುಂಪು).
೨೭೯. ಒಡಂಬಡು - ಅಭ್ಯುಪಗಮೇ.
೨೮೦. ಒಡೆ - ಸ್ಫೋಟನೇ, ದ್ರವ್ಯೇ ಚ.
೨೮೧. ಓಡು - ಪಲಾಯನೇ, ಭಾಂಡಶಕಲೇ ಚ (ಹುರಿಯುವ ಓಡು).
೨೮೨. ಓಲಾಡು - ಜಲಖೇಲನೇ.
೨೮೩. ಔಡು - ದಂತಚರ್ವಣೇ (ಹಲ್ಲುಕಡಿ).
೨೮೪. ಕಟ್ಟುಕಡೆ - ಮನೋನಿರೋಧೇ.
೨೮೫. ಕಡಿ - ಖಂಡನೇ, ಶಕಲೇ ಚ (ತುಂಡು).
೨೮೬. ಕಡೆ - ಮಥನೇ, ಅವಸಾನೇ ಚ.
೨೮೭. ಕದಡು - ಕಲುಷೇ.
೨೮೮. ಕರುವಿಡು - ಲೇಪ್ಯಕರ್ಮಣಿ (ಎರಕ ಹೊಯ್ಯಿ).
೨೮೯. ಕಲಡು - ಕಲುಷೇ.
೨೯೦. ಕಾಡು - ಅವಹೇಳನೇ (ಅವಮಾನಮಾಡು, ಬಾಧೆ ಮಾಡು), ಅರಣ್ಯೇ ಚ.
೨೯೧. ಕಾಪಿಡು - ಸಂರಕ್ಷಣೇ.
೨೯೨. ಕಿಡು - ವಿನಾಶೇ.
೨೯೩. ಕುಡಿ- ಪಾನೇ, ವಲ್ಲ್ಯಗ್ರೇ ಚ (ಬಳ್ಳಿಯ ಕುಡಿ).
೨೯೪. ಕುಡು - ಪ್ರದಾನೇ, ವಕ್ರೇ ಚ, (ಡೊಂಕಾದ)
೨೯೫. ಕೂಗಿಡು - ಉಚ್ಚೈರ್ಧ್ವನೌ.
೨೯೬. ಕೂಡು- ಸಮ್ಮೇಲನೇ.
೨೯೭. ಕೆಡೆ- ಪತನೇ.
೨೯೮. ಕೈಮಾಡು - ಶಸ್ತ್ರಸಂಚಾಲನೇ (ಆಯುಧವನ್ನು ತಿರುಗಿಸು), ವ್ಯವಹಾರಮೌಲ್ಯೇ ಸಂಕೇತನೇ ಚ (ಬೆಲೆಯನ್ನು ನಿಷ್ಕರ್ಷಿಸು).
೨೯೯. ಕೊಱಚಾಡು - ಮರ್ಮೋದ್ಘಾಟನ ವಚನೇ (ಮಾತಿನಲ್ಲಿ ಎತ್ತಿಹಾಕು).
೩೦೦. ಕೊಂಡಾಡು - ಅತ್ಯಾದರೇ (ಹೊಗಳು).
೩೦೧. ಕೋಡು - ಶೈತ್ಯೇ, ಭಯೇ, ಶೃಂಗೇ ಚ.
೩೦೨. ಗಿಡಿ - ಕಬಳಪ್ರವೇಶೇ.
೩೦೩. ಗೋಟುಡು - ಆಕ್ರೋಶಧ್ವನೌ.
೩೦೪. ಚಿವುಡು - ನಖಚ್ಛೇದೇ.
೩೦೫. ಜಡಿ - ತರ್ಜನೇ (ಹೆದರಿಸು), ಅಲ್ಪವೃಷ್ಟೌ ಚ.
೩೦೬. ಜೇವೊಡೆ - ಶಿಂಜಿನೀ ಪ್ರಹರಣೇ (ಬಿಲ್ಲಿನ ಹೆದೆಯನ್ನು ಶಬ್ದಮಾಡಿಸು.)
೩೦೭. ತಡಮಾಡು, ತಡಂಮಾಡು - ವಿಪರ್ಯಾಸೇ (ದಾರಿತಪ್ಪಿಸು).
೩೦೮. ತಡೆ - ಕಾಲಕ್ಷೇಪೇ.
೩೦೯. ತಲೆಮಡು - ಶಿರಸ್ಸಂಧಾನೇ
೩೧೦. ತಿಟ್ಟವಿಡು - ಚಿತ್ರಪ್ರಾರಂಭೇ.
೩೧೧. ತೀಡು - ವಾಯುಗತಿ ಸ್ಪರ್ಶನೇ.
೩೧೨. ತುಡು - ಶರಸಂಧಾನೇ, ಭೂಷಣ ಧಾರಣೇ ಚ (ಒಡವೆಯನ್ನು ಇಟ್ಟುಕೊ).
೩೧೩. ತೊಡೆ - ಸಮ್ಮಾರ್ಜನೇ, ಅಂಗೇ ಚ
೩೧೪. ತೋಡು-ನಿಷ್ಕ್ರಮಣೇ (ಹೊರಟು ಹೋಗು), ಯುಗ್ಮೇ ಚ (ಜತೆ).
೩೧೫. ದಾಟುಡು - ದೂರಧಾವನೇ (ನುಗ್ಗಿಹೋಗು)
೩೧೬. ನಡು - ಸಂಸ್ಥಾಪನೇ, ಮಧ್ಯೇ ಚ
೩೧೭. ನಡೆ-ಗಮನೇ.
೩೧೮. ನೀಡು - ಪ್ರಸಾರಣೇ.
೩೧೯. ನುಡಿ-ವಚನೇ.
೩೨೦. ನೇರ್ಪಡು - ಸಂಶ್ಲೇಷೇ (ಹೊಂದಿಕೊಳ್ಳು).
೩೨೧. ನೋಡು - ಪ್ರೇಕ್ಷಣೇ.
೩೨೨. ಪಡಲಿಡು - ವಿಕೀರ್ಣಪತನೇ (ಚದರಿ ಹೋಗು).
೩೨೩. ಪಡು - ಮರಣೇ, ಶಯನೇ ಚ .
೩೨೪. ಪಡೆ -ಉಪಾರ್ಜನೇ, ಬಲೇ ಚ (ಸೈನ್ಯ).
೩೨೫. ಪಾಡು - ಗಾನೇ.

೩೨೬. ಪಿಡಿ - ಗ್ರಹಣೇ, ಕರಿಣ್ಯಾಂ ಚ (ಹೆಣ್ಣಾನೆ).
೩೨೭. ಪೊಡಮಡು - ನಮಸ್ಕಾರೇ.
೩೨೮. ಪೊಡೆ - ಪ್ರಹರಣೇ, ಕುಕ್ಷೌ ಚ (ಹೊಟ್ಟೆ).
೩೨೯. ಬಡಿ - ತಾಡನೇ, ಸ್ವಲ್ಪದಂಡೇ ಚ .
೩೩೦. ಬಾಡು - ಮ್ಲಾನೇ, ಮಾಂಸೇ, ಶಾಕೇ ಚ.
೩೩೧. ಬಾಯ್ಮಾಡು - ಪ್ರತಿಜ್ಞಾಯಾಂ.
೩೩೨. ಬಾಯ್ಬಿಡು -ದೈನ್ಯೇ.
೩೩೩. ಬಿಡು - ವಿಮೋಚನೇ.
೩೩೪. ಬಿಸಾಡು, ಬಿಸುಡು - ಪ್ರಮಾದ ತ್ಯಜನೇ.
೩೩೫. ಬೀಸಾಡು - ಕರವಿಮೋಚನೇ.
೩೩೬. ಬೆಕ್ಕಸಂಬಡು - ವಿಸ್ಮಯೇ.
೩೩೭. ಬೇಡು-ಯಾಚ್ಞಾಯಾಂ, ಶಬರ ಸಮೂಹೇ ಚ .
೩೩೮. ಬೇರ್ಪಡು - ವಿವಿಕ್ತೇ, ವಿವರೇ ಚ.
೩೩೯. ಮಡಿ - ಮರಣೇ, ಧೌತವಸ್ತ್ರೇ ಚ.
೩೪೦. ಮಡು - ದೃಢಸಂಧಾನೇ (ಬಿಗಿಯಾಗಿಡು, ಒಟ್ಟಿಗಿಡು), ಅಗಾಧಜಲೇ ಚ.
೩೪೧. ಮಾಡು - ಕರಣೇ, ಕುಡ್ಯವಿಶೇಷೇ ಚ (ಗೂಡು).
೩೪೨. ಮಿಡಿ-ಅಂಗುಲಿಪ್ರಹರಣೇ (ಬೆರಳಿನಿಂದ ಚಿಮ್ಮು), ಶಲಾಟುಫಲೇ ಚ (ಕಸುಗಾಯಿ).
೩೪೩. ಮುಡಿ - ಕೇಶಬಂಧನೇ, ನಿರ್ವಹಣೇ ಚ (ಕೊನೆಗಾಣಿಸು).
೩೪೪. ಮುದುಡು - ಸಂಕೋಚನೇ.
೩೪೫. ಮುಂಬಿಡು - ಪುರೋವಗಮನೇ (ಮುಂದುವರಿ).
೩೪೬. ಮೂಗುವಡು - ಮೌನೇ.
೩೪೭. ಮೂಡು - ಉತ್ಪತ್ತೌ.
೩೪೮. ಮೆಯ್ವಿಡು - ನಿಶ್ಯಂಕತಾಯಾಂ (ನಿರ್ಭಯದಿಂದಿರು).
೩೪೯. ಮೊಗಂಬಡೆ - ಅನುನಯನೇ (ಸಮಾಧಾನ ಮಾಡು).
೩೫೦. ರೂಪಿಡು - ಕ್ರೋಧನಿರ್ದೇಶೇ (ಕೋಪವನ್ನು ತೋರಿಸು).
೩೫೧. ಜಿೋಡಾಡು - ವಿಕೃತಾಂಗಾಪಹಸನೆ (ಮುಖ ವಿಕಾರ ಮೊದಲಾದುವುಗಳಿಂದ ಹೀಯಾಳಿಸು).
೩೫೨. ಸಿಡಿ - ವಿಕೀರ್ಣೇ, ಸೂಕ್ಷ್ಮಾಯಸೇ (ಸಿಡಿಯಾಡುವುದರಲ್ಲಿ ಉಪಯೋಗಿಸುವ ಮೊನಚಾದ ಕಬ್ಬಿಣದ ಕೊಕ್ಕಿ), ದಾಹಾಂತ (ಹುರಿಯುವುದರಲ್ಲಿ ಹಾರುವುದು), ಗಜಕ್ರೋಧವಸ್ತುನೋಃ (ಆನೆಯ ಮದೋದಕ).
೩೫೩. ಸುಡು - ದಾಹೇ.
೩೫೪. ಸೂಡು - ಪುಷ್ಪಧಾರಣೇ, ತೃಣಾದಿ ಪೂರಣೇ ಚ(ಹುಲ್ಲು ಮೊದಲಾದುವುಗಳ ಕಂತೆ).
೩೫೫. ಸೆಡು - ವಸ್ತ್ರಸ್ಯೂತೇ (ಹೊಲಿ, ಪೋಣಿಸು).
೩೫೬. ಸೆಡೆ - ಆಸ್ಥೌಲ್ಯೇ (ಹೆಚ್ಚು), ರಸಧಾನ್ಯಾಕರ್ಷಣಪಾತ್ರೇ ಚ.
೩೫೭. ಹರಡು - ಅಂಗುಲಿಖನನೇ (ಬೆರಳಿನಿಂದ ಕೆದಕು), ಪ್ರಸಾರಣೇ, ಗುಲ್ಫೇ ಚ (ಕಾಲಿನ ಹರಡು).
೩೫೮. ಹಿಂಡು - ಮುಷ್ಟಿನಿಷ್ಪೀಡನೇ, ಗೋ ಸಮೂಹೇ ಚ.
೩೫೯. ಹೂಡು - ಯೋಜನೇ.
೩೬೦. ಹೊರಡು - ಪರಿಲುಠನೇ (ಹೊರಳು).
೩೬೧. ಹೊಲಬುಗಿಡು - ದಿಗ್ಭ್ರಮಣೇ.
೩೬೨. ಹೋಗಾಡು - ಪ್ರಮಾದತ್ಯಜನೇ.

## ೮. ಣಾಂತಕ್ಕೆ

೩೬೩. ಅಣೆ - ಅಂಗುಲಿಪ್ರಹರಣೇ, ಜಲ ಪ್ರತಿಬಂಧನೇ (ಅಣೆಕಟ್ಟು), ಸ್ಪರ್ಶನೇ ಚ.
೩೬೪. ಉಣ್ - ಭೋಜನೇ.
೩೬೫. ಕಾಣ್ - ದರ್ಶನೇ.
೩೬೬. ಕುಣೆ - ನರ್ತನೇ.
೩೬೭. ಟೊಣೆ - ಶಠಾರ್ಥೇ (ಮೋಸಗೊಳಿಸು).
೩೬೮. ತಣೆ - ತೃಪ್ತೌ.
೩೬೯. ತಿಣೆ - ಸಂಕೀರ್ಣೇ (ಬೆರಸು)
೩೭೦. ನೊಣೆ - ಗಿಲನೇ (ನುಂಗು).
೩೭೧. ಪಣ್ - ಸಜ್ಜೀಕರಣೇ (ಸಿದ್ಧಮಾಡು), ಫಲೇ ಚ.
೩೭೨. ಪೂಣ್ - ಪ್ರತಿಜ್ಞಾಯಾಂ.
೩೭೩. ಪೆಣೆ - ಮಿಶ್ರಬಂಧನೇ (ಹೆಣೆ), ಸಂಯೋಗೇ ಚ.
೩೭೪. ಮಣೆ - ನಮನೇ, ಭಯ ರತ್ನಯೋಃ.
೩೭೫. ಮಾಣ್ - ನಿವಾರಣೇ.
೩೭೬. ಸೆಣೆ - ಕ್ರೋಧೇ.
೩೭೭. ಸೊಣೆ - ಅಂಗುಲಿಪ್ರಹರಣೇ.

## ೯. ತಾಂತಕ್ಕೆ

೩೭೮. ಒತ್ತು - ಆಕ್ರಮಣೇ, ನದೀತೀರೇ ಚ.
೩೭೯. ಕುತ್ತು - ಘಾತನೇ (ಹೊಡೆ).
೩೮೦. ಕೆತ್ತು - ತನೂಕರಣೇ, ಸ್ಪಂದನೇ ಚ (ಅದಿರು).

೩೮೧. ತುತ್ತು - ಕಬಲನೇ.
೩೮೨. ತೇ - ಅಪಸರಣೇ (ಹೊರಟುಹೋಗು), ಘರ್ಷಣೇ ಚ.
೩೮೩. ತೋ - ಆರ್ದ್ರಕರಣೇ (ನೆನೆಯಿಸು).
೩೮೪. ಪತ್ತು - ಸಂಶ್ಲೇಷೇ (ಹತ್ತಿಕೊಳ್ಳು), ಕಲಹ ಸಂಖ್ಯಯೋಃ.
೩೮೫. ಪೊತ್ತು - ಅಗ್ನಿಪಟೂಕರಣೇ, ಅತಿಪಕ್ವಾನ್ನೇ ಚ (ಸೀದ ಅನ್ನ).
೩೮೬. ಬತ್ತು - ನಿರ್ದ್ರವೇ.
೩೮೭. ಬಿತ್ತು - ಬೀಜಸ್ಥಾಪನೇ, ಬೀಜೇ ಚ.
೩೮೮. ಮುತ್ತು - ನಿರೋಧಾವರಣೇ, ಮೌಕ್ತಿಕೇ ಚ.
೩೮೯. ಸುತ್ತು - ವೇಷ್ಟನೇ.

## ೧೦. ದಾಂತಕ್ಕೆ

೩೯೦. ಅಟ್ಟು - ಜಲನಿಮಗ್ನೇ (ಮುಳುಗು).
೩೯೧. ಉರ್ದು - ಸನ್ನಿಘೃಷ್ಟೇ (ಉಜ್ಜು), ಮಾಷೇ ಚ (ಉದ್ದು).
೩೯೨. ಊದು - ಶ್ವಾಸಪ್ರಹರಣೇ.
೩೯೩. ಒದೆ - ಪಾದಪ್ರಹರಣೇ.
೩೯೪. ಒಂದು - ಸಮ್ಮೇಲನೇ, ಸಂಖ್ಯಾಯಾಂ ಚ.
೩೯೫. ಓದು - ಪಠನೇ.
೩೯೬. ಕಂದು - ಗತಕಾಂತೌ, ಪೇಷಣಾಗ್ರ ಶಿಲಾಯಾಂ ಚ (ಬೀಸುವ ಕಲ್ಲಿನ ಮೆಲ್ಗಲ್ಲು).
೩೯೭. ಕಾದು - ಯುದ್ಧೇ.
೩೯೮. ಕುದಿ - ಸಂತಾಪೇ.
೩೯೯. ಕುಂದು - ಕ್ಷಯೇ, ಪಶುರೋಗೇ ಚ.
೪೦೦. ಗುದಿ - ಪಾದಬಂಧನೇ.
೪೦೧. ಗುರ್ದು - ಮುಷ್ಟಿತಾಡನೇ.
೪೦೨. ತದೆ - ತಾಡನೇ.
೪೦೩. ತಾಳ್ದು - ಧಾರಣೇ.
೪೦೪. ತಿರ್ದು - ಋಜೂಕರಣೇ (ನೆಟ್ಟಗೆ ಮಾಡು).
೪೦೫. ತೆಮಳ್ದು - ಚಯನೇ (ಕೂಡಿಹಾಕು).
೪೦೬. ನಂದು - ವಿನಾಶೇ, ಗತತೇಜಸಿ ಚ (ಬೆಳಕು ತಪ್ಪಿಹೋಗು).
೪೦೭. ನಾಂದು - ದ್ರವಕರಣೇ.
೪೦೮. ನೋಳ್ದು - ಅತಿಕ್ರಮಣೇ.
೪೦೯. ಪದೆ - ಈಪ್ಸಾಯಾಂ (ಅಪೇಕ್ಷಿಸು).
೪೧೦. ಪುದಿ - ಆಚ್ಛಾದನೇ, ದ್ವಾರಪಾರ್ಶ್ವೇ ಚ.
೪೧೧. ಪೊರ್ದು - ಸಮೀಪೇ (ಹತ್ತಿರಕ್ಕೆ ಹೋಗು).
೪೧೨. ಬರ್ದು - ಮರಣೇ.
೪೧೩. ಮಾಂದು - ಪ್ರತಿಷೇಧೇ (ತಡೆ).
೪೧೪. ಮಿದಿ - ಮುಸಲಕ್ರಿಯಾಯಾಂ (ಕುಟ್ಟು), ಘಾತ ಮರ್ದನಯೋಃ (ಅರೆಯು, ಜಜ್ಜು).
೪೧೫. ಮುದು - ವೃದ್ಧೌ
೪೧೬. ಮುಂದು - ಪುರಸ್ಸರಣೇ, ಅಗ್ರೇ ಚ.
೪೧೭. ಮೋದು - ತಾಡನೇ.
೪೧೮. ಸದೆ - ಈಷಚ್ಚೂರ್ಣೇ (ಜಜ್ಜು).
೪೧೯. ಸುಂದು - ಮೈಥುನೇ, ಶಯನೇ ಚ.
೪೨೦. ಸೇಂದು - ಜಲನಿಷ್ಕ್ರಮಣೇ.
೪೨೧. ಹದಿ - ಖನನವಿವರಣೇ (ಹೂಳಿರುವುದನ್ನು ಅಗೆದು ಕಾಣಿಸು).
೪೨೨. ಹೊದೆ - ಆಚ್ಛಾದನೇ, ಶರಕೋಶೇ ಚ (ಬತ್ತಳಿಕೆ).
೪೨೩. ಹೊಂದು - ಮರಣೇ.

## ೧೧. ನಾಂತಕ್ಕೆ

೪೨೪. ಆನ್ - ಧಾರಣೇ.
೪೨೫. ಈನ್ - ತಿರ್ಯಕ್ಪ್ರಸವೇ.
೪೨೬. ಎನ್ - ಭಾಷಣೇ.
೪೨೭. ಒನೆ - ಶೂರ್ಪಕರಣೇ.
೪೨೮. ಕುನಿ - ಆಕುಂಚನೇ (ಬಗ್ಗು), ಪಕ್ವಭೂಮೌ ಚ.
೪೨೯. ಕೂನ್ - ಆನಮ್ರೇ (ಬಗ್ಗು).
೪೩೦. ಕೊನೆ - ಸ್ವೀಕೃತಾರ್ಥನರ್ಥನೇ, ಅಗ್ರೇ ಚ.
೪೩೧. ತಿನ್ - ಖಾದನೇ.
೪೩೨. ತೊನೆ - ಆಂದೋಲನೇ (ತೂಗಾಡು).
೪೩೩. ನನೆ - ಆರ್ದ್ರಭಾವೇ, ಪುಷ್ಪಕುಟ್ಮಲೇ ಚ (ಮೊಗ್ಗು).
೪೩೪. ನಾನ್ - ಆರ್ದ್ರಭಾವೇ.
೪೩೫. ನೆನೆ - ಸ್ಮರಣೇ.
೪೩೬. ನೋ - ವ್ಯಥನೇ.
೪೩೭. ನೋನ್ - ವ್ರತಾಚರಣೇ.
೪೩೮. ಪೇನ್ - ಯೂಕಸಮೃದ್ಧೌ
೪೩೯. ಬಾನ್ - ಕುಲಾಲಕರಣೇ, ಆಕಾಶ ಗೋಮಯಪಿಂಡಪುಂಜಯೋಃ (ಸಗಣಿಯ ಉಂಡೆಯ ರಾಶಿ).
೪೪೦. ಮುನಿ - ಕ್ರೋಧೇ, ತಪಸ್ವಿನಿ ಚ.
೪೪೧. ಸೀನ್ - ಕ್ಷುತಕರಣೇ.
೪೪೨. ಹನಿ - ಬಿಂದುಪತನೇ.

## ೧೨. ಪಾಂತಕ್ಕೆ

೪೪೩. ಅಪ್ಪು - ಆಲಿಂಗನೇ, ಉದಕೇ ಚ.
೪೪೪. ಅಳಿಪು - ಲೋಲತ್ವೇ (ಆಶಿಸು)
೪೪೫. ಇಟುಪು - ಅಧಃಸ್ಥಾನನಯನೇ.

೪೪೬. ಉರಿಪು - ಅಗ್ನಿಬಾಧೇ.
೪೪೭. ಉೞುಪು - ಶೇಷಕರಣೇ.
೪೪೮. ಒಪ್ಪು - ಸೌಂದರ್ಯೇ, ಅಂಗೀಕಾರೇ ಚ.
೪೪೯. ಕಪ್ಪು - ಖನನೇ.
೪೫೦. ಕಳಿಪು - ಅನುಗಮನೇ.
೪೫೧. ಕುಪ್ಪು - ಪುಂಜೀಕರಣೇ (ರಾಶಿಮಾಡು), ರೋಗಭೇದೇ ಚ.
೪೫೨. ಕೆಡಪು - ಪತನೇ.
೪೫೩. ಕೊಡಪು - ಕರವಿಕೀರ್ಣೇ.
೪೫೪. ಗಱಪು - ಬಹುಭಾಷಣೇ.
೪೫೫. ತಣಿಪು - ತೃಪ್ತೌ.
೪೫೬. ತಪ್ಪು - ಸ್ಖಲನೇ.
೪೫೭. ತಿರಿಪು - ಭ್ರಮಣೇ.
೪೫೮. ತಿಳಿಪು - ಕ್ರೋಧೋತ್ಸರ್ಜನೇ (ಕೋಪವನ್ನು ಬಿಡಿಸು).
೪೫೯. ನೆರಪು - ಸಂಗ್ರಹೇ.
೪೬೦. ಪರಪು - ಪ್ರಸಾರೇ (ಹರಡು).
೪೬೧. ಪೂ - ಪುಷ್ಪಸಂಭವೇ, ಪುಷ್ಪೇ ಚ.
೪೬೨. ಪೋಪು - ಆಸನ್ನಗಮನೇ.
೪೬೩. ಮಡಿಪು - ಮರಣಕರಣೇ (ಕೊಲ್ಲು).
೪೬೪. ಮುರಿಪು - ಮುಷ್ಟಿಭ್ರಮಣೇ.
೪೬೫. ಱೆಪ್ಪು - ಪ್ರಹರಣೇ.
೪೬೬. ಸಲಪು - ರಕ್ಷಣೇ.
೪೬೭. ಸೊಪ್ಪು - ನಿವಾರಣೇ.

## ೧೩. ಬಾಂತಕ್ಕೆ

೪೬೮. ಅಂಬು - ಶೋಷಣೇ (ಒಣಗು), ಶರೇ ಚ.
೪೬೯. ಅಲುಂಬು - ಜಲಕ್ಷಾಲನೇ.
೪೭೦. ಅಸುಂಬು - ಸಂಚಾಲನೇ (ಅಲ್ಲಾಡಿಸು).
೪೭೧. ಉರ್ಬು - ಉತ್ಸಾಹೋದ್ವರ್ತನಯೋಃ.
೪೭೨. ಉೞುಂಬು - ಯುದ್ಧಕ್ರಮಣಗಮನೇ (ದಂಡೆತ್ತಿ ಹೋಗು).
೪೭೩. ಎಬ್ಬು - ಉತ್ಸರ್ಪಣೇ.
೪೭೪. ಕೞುಂಬು - ಅಸೂಯಾಯಾಂ.
೪೭೫. ಕಲುಂಬು - ಕಲುಷೀಕರಣೇ(ಕದಡು).
೪೭೬. ಕೊರ್ಬು - ಸಮೃದ್ಧೌ.
೪೭೭. ಗೆರ್ಬು - ಮೈಥುನೇ.
೪೭೮. ಜರ್ಬು - ಆಕ್ರಮಣಧ್ವನೌ (ಗದರಿಸು).
೪೭೯. ತರ್ಬು - ಆಶ್ಲೇಷೇ (ಆಲಿಂಗಿಸು).
೪೮೦. ತೞುಂಬು - ಗತಿಸ್ತಂಭೇ (ಅಡ್ಡಗಟ್ಟು), ಶಿಲೋದ್ವಹನದಾರೌ ಚ (ಸನ್ನೆಯ ಕೋಲು).
೪೮೧. ತಿಂಬು - ಪೂರಣೇ.
೪೮೨. ತುಬ್ಬು - ಚೋರಸೂಚನೇ (ಕಳ್ಳನನ್ನು ತೋರಿಸು), ತಲ್ಲಂಚೇ ಚ (ಸಿಕ್ಕಿಬಿಡು).
೪೮೩. ತುಂಬು - ಪೂರಣೇ, ವೃಂತ (ಹೂವಿನ ಕಾವು) ಜಲಪ್ರಣಾಲಯೋಃ (ತೂಬು).
೪೮೪. ನಂಬು - ವಿಶ್ವಾಸೇ.
೪೮೫. ನಾಂಬು - ಆಲಸ್ಯೇ.
೪೮೬. ನಿಗುಂಬು - ಪುಂಜೀಕರಣೇ (ಒಟ್ಟು ಗೂಡಿಸು).
೪೮೭. ನಿಲುಂಬು - ಪುಂಜೀಕರಣೇ (ಒಟ್ಟು ಗೂಡಿಸು).
೪೮೮. ಪರ್ಬು - ವಿಸ್ತಾರೇ.
೪೮೯. ಬಾ - ಶೋಫೇ (ಬಾತುಕೊಳ್ಳು).
೪೯೦. ಬೀ - ಅವಸಾನೇ.
೪೯೧. ಬೇ - ದಾಹೇ (ಸುಟ್ಟುಹೋಗು).

## ೧೪. ಮಾಂತಕ್ಕೆ

೪೯೨. ಅಣ್ಮು - ಪೌರುಷೇ.
೪೯೩. ಉಣ್ಮು - ಉದ್ಗತೌ (ಏಳು).
೪೯೪. ಒಮ್ಮು - ಅನುವರ್ತನೇ (ಒಪ್ಪು).
೪೯೫. ಕಮ್ಮು - ಗಂಧಶ್ವಾಸೇ.
೪೯೬. ಕಯ್ಗಣ್ಮು - ಅತಿಕ್ರಮಣೇ (ಕೈಮೀರು).
೪೯೭. ಕರೆಗಣ್ಮು - ಕೂಲಾತಿಕ್ರಮಣೇ (ಮಿತಿ ಮೀರು).
೪೯೮. ಕುಮ್ಮು - ಮುಸಲಕ್ರಿಯಾಯಾಂ.
೪೯೯. ಕೆಮ್ಮು - ಖಾಸೇ.
೫೦೦. ಚಿಮ್ಮು - ಮುಕ್ತಾಂಗುಲಿವಿಮೋಚನೇ, ಶಸ್ತ್ರಕ್ರಿಯಾಯಾಂ ಚ (ಜಳಪಿಸು).
೫೦೧. ನಮೆ - ಗುರುಯಾಪ್ಯೇ (ಬಡವಾಗು), ದಾರಿದ್ರ್ಯೇ ಚ.
೫೦೨. ನೆಮ್ಮು - ಪೃಷ್ಠಸ್ಥಾಪನೇ (ಒರಗು).
೫೦೩. ಪೊಣ್ಮು - ಉದ್ಗಮನೇ (ಏಳು, ಕಾಣು).
೫೦೪. ಮೀ - ಸ್ನಪನೇ.
೫೦೫. ಮೇ - ತಿರ್ಯಕ್ಛಾದನೇ (ಮೇಯು).
೫೦೬. ಸಮೆ - ನಿರ್ವಹಣೇ, ನಿಶ್ಶೇಷೇ ಚ (ಸಮೆದು ಹೋಗು).
೫೦೭. ಹಮ್ಮು - ರಜ್ಜುಕ್ರಿಯಾಯಾಂ (ಹೆಣೆ).

## ೧೫. ಯಾಂತಕ್ಕೆ

೫೦೮. ಅಪ್ಪುಕೆಯ್ - ಅಂಗೀಕರಣೇ.
೫೦೯. ಆಯ್ - ವಿರಲವಸ್ತ್ವಾಕರ್ಷಣೇ, ಆಯುಷ್ಯೇ ಚ (ವಯಸ್ಸು).
೫೧೦. ಆರಯ್ - ಅನ್ವೇಷಣೇ.

೫೧೧. ಇಂಬುಕೆಯ್ - ಸ್ಥಾನಸಂಗ್ರಹೇ (ಸ್ಥಳ ಮಾಡಿಕೊಳ್ಳು).
೫೧೨. ಉಯ್ - ನೀಯಮಾನೇ.
೫೧೩. ಎಂಬುಕೆಯ್ - ಅನುಮತೇ (ಒಪ್ಪು).
೫೧೪. ಒಳಕೆಯ್ - ಅಂತಃಕ್ರಿಯಾಯಾಂ.
೫೧೫. ಕಡುಕೆಯ್ - ತೀವ್ರತ್ವೇ.
೫೧೬. ಕಯ್ಗಾಗಿಯ್ - ಸಂರಕ್ಷಣೇ.
೫೧೭. ಕಯ್ಗೆಯ್ - ಭೂಷಣೋದ್ವಹನೇ (ಅಲಂಕಾರ ಮಾಡಿಕೊಳ್ಳು).
೫೧೮. ಕಯ್ಬೊಯ್ - ಪ್ರತಿಜ್ಞಾಯಾಂ, ಕರತಾಡನೇ ಚ (ಕೈತಟ್ಟು).
೫೧೯. ಕಾಯ್ - ಫಲೋತ್ಪತ್ತೌ, ಕೋಪೇ ಚ.
೫೨೦. ಕೊಯ್ - ಲವನೇ.
೫೨೧. ಗೆಯ್ (ಕೆಯ್) - ಶಿಲ್ಪೇ (ಉದ್ಯೋಗ ಮಾಡು).
೫೨೨. ತಳ್ಬೊಯ್ - ಪ್ರತಿಹತೇ (ತಡೆದು ನೂಕು).
೫೨೩. ತುಟುಲ್ಗೆಯ್ - ನಮಸ್ಕಾರೇ.
೫೨೪. ತೊಯ್ - ಸಾರ್ದ್ರತ್ವೇ.
೫೨೫. ನೆಯ್ - ವಸ್ತ್ರಕ್ರಿಯಾಯಾಂ, ಘೃತೇ ಚ.
೫೨೬. ಪಾಯ್ - ಲಂಘನೇ (ದಾಟು).
೫೨೭. ಪೊಯ್ - ತಾಡನೇ.
೫೨೮. ಬಯ್ - ವಾಕ್ಪಾರುಷ್ಯೇ, ನಿಕ್ಷೇಪೇ ಚ (ಬಚ್ಚಿಡು).
೫೨೯. ಮನಂಬೊಯ್ - ಸಮಗ್ರಚೇಷ್ಟಾಯಾಂ.
೫೩೦. ಸುಯ್ - ಉಚ್ಛ್ವಾಸೇ.

## ೧೬. ರಾಂತಕ್ಕೆ

೫೩೧. ಅಡರ್ - ಆರೋಹಣೇ.
೫೩೨. ಅದಿರ್ - ಕಂಪನೇ.
೫೩೩. ಅಮರ್ - ಗಾತ್ರಶ್ಲೇಷೇ (ಬಿಗಿಪಡಿಸು).
೫೩೪. ಅರಿ - ಕೃಂತನೇ (ಕತ್ತರಿಸು).
೫೩೫. ಅರೆ - ಪೇಷಣೇ, ಅರ್ಧೇ ಚ.
೫೩೬. ಅಲರ್ - ವಿಕಸನೇ, ಪುಷ್ಪೇ ಚ.
೫೩೭. ಅಸುರ್ - ಅಸಹ್ಯಭಾವೇ.
೫೩೮. ಅಳುರ್ - ಆವರಣೇ (ಮುತ್ತಿಕೊಳ್ಳು).
೫೩೯. ಆರ್ - ಉಚ್ಚೈರ್ಧ್ವನೌ (ಅರಚು), ಹಲಾನ್ವಿತವೃಷಭಯುಗ್ಮದಾರುಭೇದೇ ಚ.
೫೪೦. ಇರ್ - ಸ್ಥಾಯಿಭಾವೇ.
೫೪೦*ಇರಿ - ದೋಹನೇ.
೫೪೧. ಉದಿರ್ - ಪತನೇ.
೫೪೨. ಉರಿ - ದಹನೇ, ತರುವಿಶೇಷೇ ಚ.
೫೪೩. ಉಸಿರ್ - ಭಾಷಣೇ.
೫೪೪. ಎಯ್ತರ್ - ಸಮೀಪಾಗಮನೇ.
೫೪೫. ಎರೆ - ಯಾಚ್ಞಾಯಾಂ (ಬೇಡು), ಭೂವಿಶೇಷ ತಿರ್ಯಗ್ಗ್ರಾಸಯೋಃ (ಮೃಗಪಕ್ಷಿಗಳ ಆಹಾರ).
೫೪೬. ಎಟ್ಟಿರ್ - ಸಮೀಪಾಗಮನೇ.
೫೪೭. ಒರೆ - ಕರ್ಷಣೇ (ಎಳೆಯು).
೫೪೮. ಒಸರ್ - ಸ್ರವಣೇ (ಸುರಿ).
೫೪೯. ಕನರ್ - ಅಪಕ್ವರಸೇ (ಕನರಾಗು).
೫೫೦. ಕರಿ - ಅತಿದಾಹೇ (ಸೀದುಹೋಗು).
೫೫೧. ಕರೆ - ಆಹ್ವಾನೇ, ವಸ್ತ್ರದಶಾ ಗೋಪನ ಗೋಕುಲೇಷು (ವಸ್ತ್ರದಶಾ = ಸೆರಗಿನ ತುದಿ).
೫೫೨. ಕಸರ್ - ಗಲಕಂಡೂತೌ (ಗಂಟಲು ಕೆರೆಯು).
೫೫೩. ಕಾರ್ - ಖಾದನೇ (ಕಚ್ಚು), ಜಲದಾಗಮೇ ಚ (ವರ್ಷಾಕಾಲ).
೫೫೪. ಕಿರಿ - ವಪನೇ (ಬೋಳಿಸು), ತಂತು ಗ್ರಂಥೌ ಚ (ದಾರದ ಗಂಟು).
೫೫೫. ಕಿಸುರ್ - ಅಸಹ್ಯಭಾವೇ.
೫೫೬. ಕಿಳಿರ್ - ಹಯಧ್ವನೌ.
೫೫೭. ಕುಳಿರ್ - ಋತುತ್ವ ಭೇದೇ, ಹೈಮೇ ಚ (ಶೀತಳವಾಗು).
೫೫೮. ಕೂರ್ - ಸ್ನೇಹೇ.
೫೫೯. ಕೆರೆ - ನಖಕ್ರಿಯಾಯಾಂ.
೫೬೦. ಕೆಳರ್ - ವಿಜೃಂಭಣೇ (ವಿಸ್ತರಿಸು, ಆಕಳಿಸು).
೫೬೧. ಕೊನರ್ - ಪಲ್ಲವೋತ್ಪತ್ತೌ (ಚಿಗುರು).
೫೬೨. ಕೊರೆ - ನಿದ್ರಾಂಗಧ್ವನೌ (ಗೊರಕೆ ಹೊಯ್).
೫೬೩. ಗೋರ್ - ಜಾಲಕರಣೇ (ಬಲೆಯಿಂದ ಮೀನು ಹಿಡಿ).
೫೬೪. ಚಿಗುರ್ - ಪಲ್ಲವೋತ್ಪತ್ತೌ.
೫೬೫. ಜರಿ - ತೀರಪತನೇ (ಜಾರು).
೫೬೬. ತಗರ್ - ಗತಿಬಂಧನೇ (ನಿಲ್ಲಿಸು), ಅಜಭೇದೇ ಚ (ಟಗರು).
೫೬೭. ತರ್ - ಆನಯನೇ.
೫೬೮. ತಳರ್ - ಚಲನೇ.
೫೬೯. ತಳಿರ್ - ಪಲ್ಲವೋತ್ಪತ್ತೌ.
೫೭೦. ತಿಮಿರ್ -ತ್ವಙ್ಮಲವಿಸರ್ಜನೇ.
೫೭೧. ತೊಡರ್ - ಬಂಧನೇ, ಬಿರುದಶೃಂಖಲಾಯಾಂ ಚ (ಬಿರುದಿನ ಸರಪಣಿ).
೫೭೨. ತೊರೆ - ಸ್ತನ್ಯೇ (ಎದೆಹಾಲು ಪ್ರವಿಸು).

೫೭೩. ನಿಮಿರ್ - ಪ್ರಸಾರಣೇ (ನೆಟ್ಟಗಾಗು).
೫೭೪. ನೆರೆ - ಸಂಯೋಗೇ (ಸೇರು), ಪಾರ್ಶ್ವೇ ಚ.
೫೭೫. ನೇರ್ - ಕೃಂತನೇ (ಕತ್ತರಿಸು).
೫೭೬. ಪರೆ - ಪ್ರಸಾರಣೇ (ಹರಡು), ಕಾಲ್ಯೇ ಚ (ಬೆಳಗಾಗು).
೫೭೭. ಪಸುರ್ - ಹರಿತಭಾವೇ.
೫೭೮. ಪಾರ್ - ಸಮಯಾನ್ವೇಷಣೇ.
೫೭೯. ಪೊಡರ್ - ಸ್ಫುರಣೇ (ನಡುಗು).
೫೮೦. ಪೊರೆ - ಪೋಷಣೇ, ಉಪಸರ್ಗೇ ಚ (ಹತ್ತಿರ).
೫೮೧. ಪೋರ್ - ಮಲ್ಲಯುದ್ಧೇ, ಬಿಲೇ ಚ.
೫೮೨. ಬರ್ - ಆಗಮನೇ.
೫೮೩. ಬರೆ - ವಿಲೇಖನೇ.
೫೮೪. ಬಾರ್ - ಚರ್ಮವಲ್ಲೀಕರಣೇ (ಚರ್ಮವನ್ನು ಪಟ್ಟೆಯಾಗಿ ಮಾಡು) ದ್ರವದ್ರವ್ಯ ನಿರ್ಮುಕ್ತೌ (ಸುರಿ).
೫೮೫. ಬಿಗುರ್ - ಭಯೇ.
೫೮೬. ಬಿದಿರ್ - ವಿಕೀರ್ಣೇ (ಚದರು, ಹರಡು), ವೇಣೌ ಚ.
೫೮೭. ಬಿದುರ್ - ಅಶೃಂಖಲಾಯಾಂ (ಕಟು ಸಡಿಲು).
೫೮೮. ಬಿರಿ - ಸ್ಫುಟನೇ.
೫೮೯. ಬೆಮರ್- ಸ್ವೇದಭಾವೇ.
೫೯೦. ಬೆಳರ್ - ಧಾವಲ್ಯೇ (ಬಿಳುಪಾಗು, ಕಾಂತಿಯಾಗು).
೫೯೧. ಮಲರ್ - ಪರಾಙ್ಮುಖೇ (ಹಿಂದಿರುಗು), ಪುಷ್ಪೇ ಚ.
೫೯೨. ಮಿಳಿರ್ - ಸಮೃದ್ಧೌ(ವೃದ್ಧಿಯಾಗು), ಲುಠನೇ (ಹೊರಳಾಡು).
೫೯೩. ಮುರಿ - ವಕ್ರಭಾವೇ (ಬಗ್ಗು).
೫೯೪. ಮೊರೆ - ಭ್ರಮರಾದಿನಿನದೇ, ಕಿನ್ನರೀ ಕ್ರಿಯಾಯಾಂ.
೫೯೫. ಸರಿ - ಪಲಾಯನೇ, ಸಾಮ್ಯೇ ಚ.
೫೯೬. ಸಾರ್ತರ್ - ಸಮೀಪಾಗಮನೇ.
೫೯೭. ಸಾರ್ - ಸಮೀಪಾಗಮನೇ.
೫೯೮. ಸುರಿ - ಗಲನೇ.
೫೯೯. ಸೇರ್ - ಸಾನುಮತೇ (ಅನುಮತಿಸು).
೬೦೦. ಸೋರ್ - ಗಲನೇ, ಗರ್ವಹೀನೇ ಚ.
೬೦೧. ಹರಿ (ಪರಿ) - ಧಾವನೇ (ಓಡು).
೬೦೨. ಹೀರ್ (ಪೀರ್) - ರಸಾಸ್ವಾದನೇ, (ಚೋ)ಷಣೇ ಚ.
೬೦೩. ಹುರಿ - ನಿರ್ದ್ರವಕರಣೇ, ರಜ್ಜುಭ್ರಮಣ ಕ್ರಿಯಾಯಾಂ ಚ.

## ೧೭. ಲಾಂತಕ್ಕೆ

೬೦೪. ಅಂಡಲೆ - ಆಸನ್ನಪೀಡನೇ (ತೊಂದರೆ ಪಡಿಸು).
೬೦೫. ಅರಲ್ - ವಿಕಾಸೇ, ಪುಷ್ಪೇ ಚ.
೬೦೬. ಅಲೆ- ಪರೀಭಾವ (ತಿರಸ್ಕರಿಸು), ಲೋಲನಯೋಃ (ಚಲಿಸು).
೬೦೭. ಆವಲ್ - ಮುಸಲಕ್ರಿಯಾಯಾಂ (ಕುಟ್ಟು), ಚಿಪಿಟಕೇ ಚ (ಅವಲಕ್ಕಿ).
೬೦೮. ಅಟಿಲ್ - ದುಃಖೇ.
೬೦೮*ಉಲಿ - ಸಂಭ್ರಮಧ್ವನೌ
೬೦೯. ಎಟಿಲ್ - ಆಲಂಬನೇ (ತೂಗಬೀಳು ತೂಗ ಹಾಕು).
೬೧೦. ಎಳೆತಳಲ್ - ಪಲ್ಲವಪ್ರಾಪ್ತೌ (ಎಲೆ ಚಿಗುರು).
೬೧೧. ಒನಲ್ - ಅಪಹಸನಕ್ರೋಧೇ (ನಗೆಯಿಲ್ಲದೆ ಸಿಟ್ಟುಗೊಳ್ಳು).
೬೧೨. ಒಱಲ್ - ಸ್ನೇಹೇ.
೬೧೩. ಒಲೆ - ಆಂದೋಲನೇ, ಅಶ್ಮಂತಕೇ ಚ (ಅಡಿಗೆಯೊಲೆ).
೬೧೪. ಕಣ್ಮಲೆ -ಚಿತ್ತಸ್ಫುರಣೇ.
೬೧೫. ಕನಲ್ - ಕ್ರೋಧೇ.
೬೧೬. ಕಲ್ - ಅಭ್ಯಾಸೇ, ಪಾಷಾಣೇ ಚ.
೬೧೭. ಕಟಿಲ್ - ತನುತ್ವೇ (ಸಣ್ಣನಾಗು), ತಕ್ರ ಮಂಜೀರಯೋಃ (ಕಾಲ್ಕಡಗ).
೬೧೮. ಕಿಚಿಕಿಲ್ - ಹೇಷಿತೇ (ಕೆನೆ)
೬೧೯. ಕುಕಿಲ್ - ಕೋಕಿಲಸ್ವನೇ, ಪಕ್ಷಿಭೇದೇ ಚ.
೬೨೦. ಕೆಲೆ - ಉತ್ಸಾಹಧ್ವನೌ.
೬೨೧. ಕೊಲ್ - ಹಿಂಸಾಯಾಂ.
೬೨೨. ಜಗಿಲ್ - ಸ್ನಿಗ್ಧ(ಜಿಡ್ಡಾಗು), ಸಂಶ್ಲೇಷಯೋಃ.
೬೨೩. ಜೋಲ್ - ಆಲಂಬನೇ (ತೂಗಬಿಡು).
೬೨೪. ತಱುಸಲ್ - ನಿಶ್ಚಯೇ.
೬೨೫. ತಳಲ್ - ಶಾಖಾಮುಖೇ (ಚಿಗುರು).
೬೨೬. ತೊವಲ್ - ಪಲ್ಲವಪ್ರಾಪ್ತೇ.
೬೨೭. ತೊಟಿಲ್ - ಭ್ರಮಣೇ.
೬೨೮. ನರಲ್ - ವೇದನಧ್ವನೌ.
೬೨೯. ನಲಿ - ರಾಗೇ
೬೩೦. ನಿಲ್ - ಗತಿಮುಕ್ತೌ, ಸ್ಥಾಪನೇ ಚ.
೬೩೧. ನುಲಿ - ಚರ್ಮಭ್ರಮಣೇ, ಪೀಡನ ರಜ್ಜುಭೇದಯೋಃ.

೬೩೧*ನೂಲ್ - ತಂತುಕರಣೇ, ತಂತೌ ಚ.
೬೩೨. ನೆಜಿಲ್ - ನಿಕ್ಷೇಪ್ಯಾವಲಂಬನೇ (ದೋಣ್ಣೆ ಮೊದಲಾದುವುಗಳ ಸ್ಥಿರವಾದ ಆಧಾರ).
೬೩೩. ನೇಲ್ - ಅಲಂಬನೇ (ತೂಗಬಿಡು).
೬೩೪. ಪಗಿಲ್ - ಸ್ನಿಗ್ಧ(ಜಿಡ್ಡಾಗು), ಸಂಶ್ಲೇಷಯೋಃ.
೬೩೫. ಪಿಳಿಲ್ - ಹಸ್ತೋನ್ಮುಕ್ತೌ (ಕೈಯಿಂದ ಬಿಡು).
೬೩೬. ಪುಯಲ್ - ಆರ್ತಧ್ವನೌ.
೬೩೭. ಪೇಲ್ - ಮಲವಿಸರ್ಜನೇ, ಮಲೇ ಚ.
೬೩೮. ಪೊಲ್ - ಸ್ಯೂತೇ (ಹೊಲಿ).
೬೩೯. ಪೋಲ್ - ಸಾದೃಶ್ಯೇ.
೬೪೦. ಬಟಿಲ್ - ಶ್ರಾಂತೌ.
೬೪೧. ಬಱುಸಲ್ - ಅನುಗಮನೇ (ಸಮೀಪಕ್ಕೆ ಬರು).
೬೪೨. ಬಿಲ್ - ವಿಕ್ರಯೇ (ಮಾರು), ಕೋದಂಡೇ ಚ.
೬೪೩. ಮಡಲ್ - ವಲ್ಲಿವೃದ್ಧೌ (ಬಳ್ಳಿಹಬ್ಬು).
೬೪೪. ಮರಲ್ - ಪರಾಙ್ಮುಖೇ, ಪುಷ್ಪೇ ಚ.
೬೪೫. ಮಲೆ - ಔದ್ಧತ್ಯೇ (ಅತಿ ಗರ್ವಪಡು), ವನೇ ಚ.
೬೪೬. ಸಡಿಲ್ - ಸ್ರಂಸನೇ.
೬೪೭. ಸಲ್ - ಸ್ಥಾನಪ್ರವೇಶೇ, ಸಮಾಖ್ಯಾತೌ ಚ (ಪ್ರಸಿದ್ಧಿ ಪಡೆ).
೬೪೮. ಸಾಲ್ - ಋಣೇ, ಸಸ್ಯಪಂಕ್ತೌ ಚ (ಪೈರಿನ ಸಾಲು).
೬೪೯. ಸಿಡಿಲ್ - ವಿಕೀರ್ಣೇ (ಎರಚು), ಮೇಘವಹ್ನೌ ಚ.
೬೪೯*ಸುಲಿ - ಆವರಣಾಪನೋದನೇ
೬೫೦. ಸೋಲ್ - ಪರಾಜಯೇ.

## ೧೮. ವಾಂತಕ್ಕೆ

೬೫೧. ಅವಿ - ನಿಗೂಹನೇ (ಮರೆಯಾಗು)
೬೫೧*ಅವು - ಮುಸಲಕ್ರಿಯಾಯಾಂ
೬೫೨. ಅಟ್ವು - ದಹನಾತಿಕ್ರಮಣೇ (ಮಿತಿಮೀರಿ ಉರಿಯು).
೬೫೩. ಎಳವು - ವೀಧಿಕರಣೇ (ಸಾಲಾಗಿಡು, ಓರಣಗೊಳಿಸು).
೬೫೪. ಎಟಿವು - ಅಪಮಾರ್ಜನೇ (ತೊಡೆಯು).
೬೫೫. ಒದವು - ಸಮೃದ್ಧೌ (ಏಳಿಗೆ ಹೊಂದು).
೬೫೬. ಓವು - ಪಾಲನೇ.
೬೫೭. ಕವಿ - ಆಚ್ಛಾದನೇ.
೬೫೮. ಗರವು - ಸರ್ವಾಕರ್ಷಣೇ.
೬೫೯. ತಡವು - ಹಸ್ತಾನ್ವೇಷಣೇ, ಸ್ಥಿಮಿತಭಾವೇ ಚ.
೬೬೦. ತವು - ಕ್ಷಯೇ.
೬೬೧. ತಳ್ವು - ಕಾಲಕ್ಷೇಪೇ (ಕಾಲಕಳೆಯು).
೬೬೨. ತಿವಿ - ಮುಷ್ಟಿಪ್ರಹರಣೇ.
೬೬೩. ತೀವು - ಪೂರಣೇ.
೬೬೪. ಸವಿ - ಖಾದನಪರೀಕ್ಷಾಯಾಂ.
೬೬೫. ಸೀವು - ಭೂಷಣೇ (ಅಲಂಕರಿಸಿಕೊಳ್ಳು).

## ೧೯. ಸಾಂತಕ್ಕೆ *

೬೬೬. ಅಕ್ಕುಳಿಸು - ನಿಮ್ನಕುಕ್ಷೌ, ಭಯೇ ಚ.
೬೬೭. ಅಗುಱುಸು - ಖನನೇ (ಅಗೆಯುವಂತೆ ಮಾಡು).
೬೬೮. ಅಡಸು - ಗಾಢಪ್ರವೇಶೇ (ತುರುಕು).
೬೬೯. ಅಪ್ಪಳಿಸು - ಆಸ್ಫಾಲನೇ.
೬೭೦. ಅಭಿನಯಿಸು - ಅನುಕರಣೇ.
೬೭೧. ಅಱಸು - ಅನ್ವೇಷಣೇ.
೬೭೨. ಅಲಸು - ಆಲಸ್ಯೇ.
೬೭೩. ಅವಧರಿಸು (ಅವಧಾರಿಸು) - ಸ್ಮರಣೇ.
೬೭೪. ಅಱುಯಿಸು - ಲಯೇ.
೬೭೫. ಆಡಿಸು - ನರ್ತನವಿಧೌ.
೬೭೬.ಆಲಿಸು - ಪರಿಭಾವನೇ, ಆಕರ್ಣನೇ ಚ.
೬೭೭. ಆಸು - ಊರ್ಧ್ವವಿಮೋಚನೇ (ಮೇಲಿನಿಂದ ಬಿಡು), ವೃಕ್ಷಭೇದೇ ಚ (ಸಾಲವೃಕ್ಷ).
೬೭೮. ಇಸು - ಶರವಿಮೋಚನೇ.
೬೭೯. ಈಸು - ಜಲೋತ್ತರಣೇ, ಶಕಟಾಂಗೇ ಚ (ಇರ್ಚಿ).
೬೮೦. ಉದಾಹರಿಸು - ಕಥನೇ.
೬೮೧. ಉಬ್ಬರಿಸು - ಪೂರಣೇ
೬೮೨. ಉಮ್ಮಳಿಸು - ಚಿಂತಾಯಾಂ (ಶೋಕ ಪಡು).
೬೮೩. ಉಱುಸು - ಸಹನೇ (ತಾಳಿಕೊಳ್ಳು).
೬೮೪. ಎತ್ತಿಸು - ಉದ್ಧರಣೇ.
೬೮೫. ಎಸೆ - ಶೋಭಾಯಾಂ.
೬೮೬. ಎಳಸು - ಇಚ್ಛಾಯಾಂ.
೬೮೭. ಒಟ್ಟಿಸು - ಪುಂಜೀಕರಣೇ.
೬೮೮. ಒತ್ತರಿಸು - ಉದ್ವೃತ್ತೌ (ಮಿತಿಮೀರು).
೬೮೯. ಒರಸು - ಘರ್ಷಣೇ.

~~~~~~~~~~

* ಪ್ರಚಲಿತ ಪರಿಷ್ಕರಣಗಳಲ್ಲಿ ಮಾಡಿರುವಂತೆ ಈ ಪರಿಷ್ಕರಣದಲ್ಲಿ ನಾಲ್ಕು ವಿಧದ ಅಂತಃಪ್ರಭೇದಗಳನ್ನು ಮಾಡಿಲ್ಲ.
~~~~~~~~~~

೧೯೦. ಒರೆಯಿಸು - ಕರ್ಷಣೇ (ಎಳೆಯುವಂತೆ ಮಾಡು).
೧೯೧. ಒಸೆ - ಪ್ರಸನ್ನತ್ವೇ (ಪ್ರೀತಿಸು).
೧೯೨. ಓದಿಸು - ಶಾಸ್ತ್ರಶಿಕ್ಷಾಯಾಂ.
೧೯೩. ಓಸರಿಸು - ಅಪಾದಾನೇ (ತೆಗೆದುಹಾಕು).
೧೯೪. ಕಟ್ಟಿಸು - ಬಂಧನೇ.
೧೯೫. ಕಡಿಯಿಸು - ಖಂಡನೇ.
೧೯೬. ಕಡೆಗಣಿಸು - ಅವಜ್ಞಾಯಾಂ (ಅಪಮಾನಿಸು).
೧೯೭. ಕದಕದಿಸು - ಸಂಚಲತ್ವೇ (ನಡುಗು).
೧೯೮. ಕನವರಿಸು - ನಿದ್ರಾವಿಕಾರೇ.
೧೯೯. ಕಯ್ವೀಸು- ರಣಾರಂಭಹಸ್ತಸೂಚನಯೋಃ.
೨೦೦. ಕಲಸು - ಸಮ್ಮಿಶ್ರೇ.
೨೦೧. ಕಳವಳಿಸು - ಮನೋವೈಕಲ್ಯೇ.
೨೦೨. ಕಾದಿಸು - ಸಂಗರಕ್ರಿಯಾಯಾಂ.
೨೦೩. ಕಾಸು - ದಾಹೇ, ವಿವಧೇ ಚ (ತಾಮ್ರದ ನಾಣ್ಯ).
೨೦೪. ಕಿನಿಸು - ಕೋಪೇ.
೨೦೫. ಕಿಸಿ - ವಿಕಸನೇ.
೨೦೬. ಕೀರ್ತಿಸು - ವರ್ಣನೇ.
೨೦೭. ಕೀಸು - ಕೃಶೀಕರಣೇ (ಸಣ್ಣಗೆ ಮಾಡು) ಕರ್ಣಪತ್ರೇ ಚ.
೨೦೮. ಕುಪ್ಪಳಿಸು - ರಾಶೌ (ಗುಡ್ಡೆಮಾಡು).
೨೦೯. ಕುರ್ಗಿಸು - ಸಂಕೋಚೇ.
೨೧೦. ಕುಸಿ - ಕ್ಷೀಣತ್ವೇ, ಕವಾಟಶಲಾ ಕಾಯಾಂ ಚ (ಅಗುಳಿ).
೨೧೧. ಕೊಕ್ಕರಿಸು - ವಿಭರ್ತ್ಸನೇ (ನಿರ್ಭರ್ತ್ಸನೇ) (ಬೆದರಿಸು).
೨೧೨. ಕೊಸೆ - ನಿಧುವನಕರಣೇ, ವಾಹಾರೋಹಭೇದೇ ಚ, (ಕುದುರೆಯ ಸವಾರಿಯ ಒಂದು ರೀತಿ).
೨೧೩. ಕೋಪಿಸು - ಅಮರ್ಷೇ.
೨೧೪. ಕೋಸು - ಸೂತ್ರಪ್ರವೇಶೇ (ಪೋಣಿಸು).
೨೧೫. ಗರ್ಜಿಸು - ಭಯಂಕರಧ್ವನೌ.
೨೧೬. ಗಬ್ಬರಿಸು - ಖನನೇ (ಅಗೆ).
೨೧೭. ಗಮಿಸು - ಗಮಕತ್ವೇ.
೨೧೮. ಗುಡಿಯಿಸು (ಗುಡಿಸು) - ಪುಂಜೀಕರಣೇ.
೨೧೯. ಗುಡುಗುಡಿಸು - ಕೋಪೋದ್ರೇಕೇ.
೨೨೦. ಗೊಂದಣಿಸು - ಸಮೂಹೇ, ಬಾಹುಲ್ಯೇ ಚ.
೨೨೧. ಘೂರ್ಣಿಸು - ವಿಜೃಂಭಣೇ (ಆಕಳಿಸು, ಹೆಚ್ಚು).
೨೨೨. ಚರಿಯಿಸು - ಭ್ರಮಣೇ.
೨೨೩. ಚಾವಳಿಸು - ಚಾಪಲ್ಯೇ.
೨೨೪. ಚಿತ್ರಿಸು - ರೂಪಾದಿ ಲೇಖನೇ.
೨೨೫. ಚಿಮಿಚಿಮಿಸು - ಶಬ್ದೇ, ಉತನೇ ಚ (ಹೊರಳಾಡು).
೨೨೬. ಜಕ್ಕುಳಿಸು - ನರ್ಮಕರಣೇ (ಪರಿಹಾಸ ಮಾಡು).
೨೨೭. ಜಾನಿಸು - ಧ್ಯಾನೇ.
೨೨೮. ಜಿನುಗಿಸು - ನಷ್ಟಚೇಷ್ಟಾಯಾಂ (ಚಲನವಿಲ್ಲದೆ ಆಗು, ಮಾಡು).
೨೨೯. ಜೇಂಕರಿಸು - ಪ್ರಶಂಸಾಯಾಂ (ಕೊಂಡಾಡು).
೨೩೦. ಟೆಬ್ಬರಿಸು - ಕುಂಠೀಕರಣೇ (ಮೊಂಡು ಮಾಡು).
೨೩೧. ತಡವರಿಸು - ಅನ್ವೇಷಣೇ.
೨೩೨. ತರ್ಜಿಸು - ನಿವಾರಣೇ.
೨೩೩. ತವಿಸು - ಕ್ಷಯೇ (ಕ್ಷೀಣವಾಗುವಂತೆ ಮಾಡು).
೨೩೪. ತುಟ್ಟಿಸು - ಶಕ್ತಿಕ್ಷಯೇ.
೨೩೫. ತುಱಿಸು - ಕಂಡೂತಿಕಷಣೇ.
೨೩೬. ತೆಗಟಿಸು - ನಿಂದಾಯಾಂ (ನಿಂದಿಸುವಂತೆ ಮಾಡು).
೨೩೭. ತೊಡೆಯಿಸು - ಲೇಪ್ಯಕರಣೇ.
೨೩೮. ದೊಮ್ಮಳಿಸು - ತಿರ್ಯಕ್ಸಮೂಹ ಸಂಭ್ರಮೇ (ದನದ ಹಿಂಡಿನಂತೆ ಗಾಬರಿಪಡು).
೨೩೯. ನಸಿ - ಜೀರ್ಣೇ, ನಷ್ಟಚೇಷ್ಟಾಯಾಂ ಚ (ನಿಶ್ಚೇಷ್ಟಿತವಾಗು).
೨೪೦. ನಂಬಿಸು - ಅನುಮೋದನೇ.
೨೪೧. ನಿಕ್ಕುಳಿಸು - ವಿಲಾಸಾವನಮ್ರೇ (ವಿನೋದದಿಂದ ಬಗ್ಗು).
೨೪೨. ನಿಗುಂಬಿಸು - ಸಂಕೀರ್ಣರಾಶೌ (ನಾನಾ ಪದಾರ್ಥಗಳನ್ನು ರಾಶಿಮಾಡು).
೨೪೩. ನಿಟ್ಟಿಸು - ನಿರ್ಭರಾಲೋಕೇ (ದಿಟ್ಟಿಸಿ ನೋಡು).
೨೪೪. ನಿಯಾಮಿಸು - ಆಜ್ಞಾಪನೇ.
೨೪೫. ನೀರಾಜಿಸು - ಆರಾತ್ರಿಕಕ್ರಿಯಾಯಾಂ.
೨೪೬. ನೆಸೆ - ಉತ್ಪ್ಲವನೇ (ಶುದ್ಧಿಯಾಗು).
೨೪೭. ನೋಡಿಸು - ಲೋಚನಕ್ರಿಯಾಯಾಂ.
೨೪೮. ಪದೆಯಿಸು - ಈಪ್ಸಾಯಾಂ (ಆಶಿಸುವಂತೆ ಮಾಡು).

೭೪೯. ಪಸು - ವಿಭಜನೇ (ವಿಭಾಗ ಮಾಡು), ಜೀವಧನೇ ಚ (ಹಸು).
೭೫೦. ಪಾಡಿಸು - ಗಾಯನೇ.
೭೫೧. ಪಾಸು - ಆಸ್ತರಣಕ್ರಿಯಾಯಾಂ, ತಲ್ಪೇ ಚ.
೭೫೨. ಪಾಳಿಸು - ಸಂಯೋಗೇ.
೭೫೩. ಪುಚ್ಚಟಿಸು - ಲಯೇ (ಕರಗಿ ಹೋಗು, ನಾಶವಾಗು).
೭೫೪. ಪುಂಜಿಸು - ರಾಶೌ.
೭೫೫. ಪೂಜಿಸು - ಅರ್ಚನವಿಧೌ.
೭೫೬. ಪೂಸು - ವಿಲೇಪನೇ, ಅಪಾನವಾಯೌ ಚ.
೭೫೭. ಪೆರ್ಚಿಸು - ವರ್ಧನೇ.
೭೫೮. ಪೊದೆಯಿಸು - ಆಚ್ಛಾದನೇ.
೭೫೯. ಪೊಸೆ - ರಜ್ಜುಕ್ರಿಯಾಯಾಂ (ಹಗ್ಗಹೊಸೆ), ಮಂಥದಂಡೇ ಚ (ಕಡೆಗೋಲು).
೭೬೦. ಬಡಿಸು - ಓದನಕ್ರಿಯಾಯಾಂ (ಊಟಕ್ಕೆ ಬಡಿಸು).
೭೬೧. ಬರೆಯಿಸು - ಲೇಖನೇ.
೭೬೨. ಬಸಿ - ಗಲನೇ (ಬಸಿಯು), ಶಾತ (ಹರಿತ ಮಾಡು), ದಂಡಮಧ್ಯಯೋಃ (ದಂಡಿಗೆಯ ಮಧ್ಯಭಾಗ).
೭೬೩. ಬಳಸು - ಭ್ರಮಣ ಕಂಚುಕಾಂಗಯೋಃ (ಯುದ್ಧಕವಚ).
೭೬೪. ಬಾಸು - ಪುರೀಷೋತ್ಸರ್ಗೇ.
೭೬೫. ಬಿಕ್ಕುಳಿಸು - ಉದ್ಗಾರೇ.
೭೬೬. ಬಿಚ್ಚಳಿಸು - ವಿಸ್ತಾರೇ.
೭೬೭. ಬಿತ್ತರಿಸು - ವಿಸ್ತಾರೇ.
೭೬೮. ಬಿನ್ನವಿಸು - ವಿಜ್ಞಾಪನೇ.
೭೬೯. ಬಿಸು - ಲೋಹಸಂಧಾನೇ (ಬೆಸೆಯು).
೭೭೦. ಬೀಸು - ಆವರ್ತನೇ.
೭೭೧. ಬೆಕ್ಕರಿಸು - ಅಜಧ್ವನೌ.
೭೭೨. ಬೆಪ್ಪಳಿಸು - ವಿಮೋಹೇ (ದಿಕ್ಕು ತೋರ ದಂತಾಗು).
೭೭೩. ಬೆರ್ಚಿಸು - ಭಯೇ.
೭೭೪. ಬೆಬ್ಬಳಿಸು - ವಿಮೋಹೇ (ದಿಕ್ಕು ತೋರ ದಂತಾಗು).
೭೭೫. ಬೆರಸು - ಸಮಿಶ್ರೇ.
೭೭೬. ಬೆಸೆ - ಗರ್ವೇ, ಕಾರ್ಪಾಸಚಾಪೇ ಚ (ಹತ್ತಿ ಎಕ್ಕುವ ಬಿಲ್ಲು).
೭೭೭. ಬೋಸರಿಸು - ಮಿಥ್ಯಾದರೇ (ಕಪಟ ಮರ್ಯಾದೆ ಮಾಡು).
೭೭೮. ಭದ್ರಿಸು - ಮುಂಡನಕ್ರಿಯಾಯಾಂ.
೭೭೯. ಭಂಗಿಸು - ಅಪಮಾನೇ.
೭೮೦. ಮಱಸು - ಆಚ್ಛಾದನೇ.
೭೮೧. ಮಸೆ - ಘರ್ಷಣೇ, ಸ್ವಲ್ಪಕ್ಷತೇ ಚ (ಸಣ್ಣಗಾಯ).
೭೮೨. ಮಂದಯಿಸು - ಸಾಂದ್ರತ್ವೇ (ದಟ್ಟನಾಗು).
೭೮೩. ಮಾಡಿಸು - ನಿರ್ಮಾಪಣೇ.
೭೮೪. ಮಾಸು - ಮಲೀಮಸೇ, ಜರಾಯೌ ಚ (ಗರ್ಭಕೋಶದ ಸತ್ತೆ).
೭೮೫. ಮಾಲಿಸು - ಕಟಾಕ್ಷೇ (ಕಡೆಗಣ್ಣಿನಿಂದ ನೋಡು), ದೀರ್ಘಾಲೋಕೇ ಚ (ಬಹಳ ಹೊತ್ತು ನೋಡು).
೭೮೬. ಮಾಂಕರಿಸು (ಮಾಕರಿಸು) - ಅವಜ್ಞಾಯಾಂ (ಅಲ್ಲಗಳೆ).
೭೮೭. ಮುಕ್ಕಳಿಸು - ಗಂಡೂಷೇ.
೭೮೮. ಮುತ್ತಿಸು - ದುರ್ಗಸಂವೇಷ್ಟನೇ.
೭೮೯. ಮುದ್ರಿಸು - ಅಂಗೀಕರಣೇ (ಒಪ್ಪು).
೭೯೦. ಮುಳಿಯಿಸು - ಕೋಪೇ.
೭೯೧. ಮೂಸು - ಆಘ್ರಾಣೇ.
೭೯೨. ಮೇಳಿಸು - ಸಂಯೋಗೇ.
೭೯೩. ಮೊಗಸು - ಉದ್ಯೋಗಾರಂಭೇ.
೭೯೪. ಯೋಜಿಸು - ಅನುಮತೇ.
೭೯೫. ರಮಿಸು - ಕ್ರೀಡಾಯಾಂ.
೭೯೬. ರಕ್ಷಿಸು - ಪಾಲನೇ.
೭೯೭. ರಂಜಿಸು - ಶೋಭಾಯಾಂ, ರಾಗೇ ಚ (ಬಣ್ಣಹಾಕು).
೭೯೮. ರಾಜಿಸು - ಶೋಭಾಯಾಂ.
೭೯೯. ವರ್ಣಿಸು - ಸ್ತೋತ್ರೇ.
೮೦೦. ವರ್ತಿಸು - ವರ್ತನೇ.
೮೦೧. ವರಿಯಿಸು - ಸ್ವೀಕಾರೇ.
೮೦೨. ವಂಚಿಸು - ಅಪಲಾಪೇ.
೮೦೩. ವಾಸಿಸು - ಆಘ್ರಾಣೇ.
೮೦೪. ಶಾಸಿಸು - ಶಿಕ್ಷಾಯಾಂ.
೮೦೫. ಶಿಕ್ಷಿಸು - ನಿಯಾಮೇ.
೮೦೬. ಸಮನಿಸು - ಪ್ರಾಪ್ತೌ.
೮೦೭. ಸಸಿ - ಸಸ್ಯಾದ್ಯುತ್ಪಾಟನೇ (ಸೊಪ್ಪು ಮೊದಲಾದುವನ್ನು ಕೀಳು) ಸಸ್ಯೇ ಚ.
೮೦೮. ಸಂಚಿಸು - ಸಂಗ್ರಹೇ.
೮೦೯. ಸಂದಣಿಸು - ಸಮೂಹೇ, ಬಾಹುಲ್ಯೇ ಚ.
೮೧೦. ಸಂದಿಸು - ಸಂಧಾನೇ (ಸೇರು, ಸೇರಿಸು).
೮೧೧. ಸ್ಥಾಪಿಸು - ನ್ಯಾಸಕರಣೇ.

೮೧೨. ಸೂತ್ರಿಸು - ಮಾನಸೂತ್ರಸ್ಥಾಪನೇ (ಅಳೆಯುವ ನೂಲನ್ನು ಇಡು).
೮೧೩. ಸೂಸು - ಪರಿತ್ಯಾಗೇ.
೮೧೪. ಸೆಣಸು - ಈರ್ಷ್ಯಾಯಾಂ.
೮೧೫. ಸೈರಿಸು - ಸಹನೇ, ಕ್ಷಮತ್ವೇ.
೮೧೬. ಸೊಗಯಿಸು - ಶೋಭಾಯಾಂ.
೮೧೭. ಸೋಲಿಸು - ಅಪಜಯೇ.
೮೧೮. ಹನಿಸು - ರಸದಾನೇ (ಸುರಿ).
೮೧೯. ಹಸಿ - ಕ್ಷುಧಾಯಾಂ, ದ್ರವದ್ರವ್ಯೇ ಚ.
೮೨೦. ಹುಸಿ - ಅನೃತೇ.
೮೨೧. ಹೇಸು - ಜುಗುಪ್ಸಾಯಾಂ.
೮೨೨. ಹೂಸು - ಅಧೋವಾಯೌ.

## ೨೦. ಱಾಂತಕ್ಕೆ

೮೨೩. ಅಱ - ಜ್ಞಾನೇ.
೮೨೪. ಅಱೆ - ಸ್ವರೂಪಾಭಾವೇ (ಸ್ವರೂಪವನ್ನು ನೀಗು), ಶಿಲಾಯಾಂ ಚ (ಬಂಡೆ).
೮೨೫. ಅಳಱು - ಭಯೇ.
೮೨೬. ಅಳ್ಕಱು - ಭಯೇ.
೮೨೭. ಅಳ್ಳಱು - ಸ್ಪಂದನೇ (ಅದುರು).
೮೨೭*ಅಟ್ಟಱು - ಪ್ರೇಮ್ಣಿ
೮೨೮. ಆಱು - ನಿರ್ದ್ರವೇ, ಸಮರ್ಥತ್ವೇ ಚ.
೮೨೯. ಆಸಱು - ಆಲಸ್ಯೇ.
೮೩೦. ಇಱ - ಘಾತನೇ.
೮೩೧. ಈಡಿಱ - ಶೃಂಗಸಂಕರ್ಷಣೇ (ಕೊಂಬಿನಿಂದ ಉಜ್ಜು, ಚಿಮ್ಮು)
೮೩೧*ಉಱು - ಸಮಗ್ರತ್ವೇ
೮೩೨. ಊಱು - ಸತ್ವೇ (ನೆಲಸು).
೮೩೩. ಎಡಱು - ವಕ್ರಭಾವೇ, ದಾರಿದ್ರ್ಯೇ ಚ.
೮೩೪. ಎಡೆಗಿಱ - ಸಂಧನ್ನೇ ( ಮುಚ್ಚು).
೮೩೫. ಎಱೆ - ದ್ರವದ್ರವ್ಯದಾನೇ (ಸುರಿ) ಪತಿತ್ವೇ ಚ (ಒಡೆತನ).
೮೩೬. ಎಚ್ಚಱು - ಜಾಗರಣೇ, ನಿದ್ರಾಭಾವೇ.
೮೩೭. ಏಱು - ಆರೋಹಣೇ, ಸಮಗ್ರತ್ವೇ, ಕ್ಷತೇ ಚ (ಗಾಯ).
೮೩೮. ಒದಱು - ಆಸ್ಫೋಟನೇ (ಚಪ್ಪಾಳೆ ತಟ್ಟು).
೮೩೯. ಒಱೆ - ಸ್ರವಣೇ, ಶಸ್ತ್ರಕೋಶೇ ಚ.
೮೪೦. ಒಳಱು - ರಾವೇ (ಶಬ್ದಮಾಡು).
೮೪೧. ಕಚ್ಚಱ- ಯುಗಲಸಂಧಾನೇ (ಯುಗ್ಮವನ್ನು ಸೇರಿಸು).
೮೪೨. ಕಯ್ಮಱೆ - ವಿಸ್ಮಯೇ (ಆಶ್ಚರ್ಯಪಡು).
೮೪೩. ಕಱೆ - ದೋಹನೇ (ಹಾಲುಕರೆ), ಕಳಂಕೇ ಚ.
೮೪೪. ಕಾಱು - ವಮನೇ.
೮೪೫. ಕಿಱು - ವ್ಯವಧಾನೇ (ನಡುವೆ ಬರು).
೮೪೬. ಕಿಳಿಱು - ಹಯಘೋಷೇ.
೮೪೭. ಕೀಱು - ಆಗ್ರಹ, ಭಯಧ್ವನಿ, ಪ್ರಮಾರ್ಜನೇಷು (ಅಳಿಸಿಬಿಡು).
೮೪೮. ಕೆದಱು - ವಿಕೀರ್ಣೇ.
೮೪೯. ಕೇಱು - ಶೂರ್ಪಕರಣೇ.
೮೫೦. ಕೊಱೆ - ಖಂಡನೇ, ಧಾನ್ಯಭೇದೇ ಚ (ಹಾರಕ).
೮೫೧. ಗಜಱು - ಗರ್ಜನೇ.
೮೫೨. ಗಿಱು - ಪರಿಭಾವನೇ.
೮೫೨*ಚೀಱು - ಭಯಧ್ವನೌ
೮೫೩. ಜಱೆ - ಅವಗ್ರಹೇ (ತಡೆಯಾಗು), ಆಕ್ರಮಣಾಲಾಪೇ (ದೂಷಿಸಿ ಮಾತನಾಡು).
೮೫೪. ತಱ - ಭೇದೇ (ಕತ್ತರಿಸು), ಖದಿರೇ ಚ (ಕಗ್ಗಲಿಮರ).
೮೫೫. ತಾಱು - ಶೋಷಣೇ, ಶಕುನೇ ಚ.
೮೫೬. ತಿಱು - ದ್ರವ್ಯವಿನಿಮಯೇ (ಒಂದು ಕೊಟ್ಟು ಒಂದು ತೆಗೆದುಕೊ).
೮೫೭. ತೀಱು - ಕಬಳನೇ (ನುಂಗು).
೮೫೮. ತೂಱು - ಉದ್ಧೂತೌ (ಧಾನ್ಯವನ್ನು ತೂರು).
೮೫೯. ತೆಗೆನೆಱೆ - ಆಕರ್ಣಾಂತಾಕರ್ಷಣೇ (ಪೂರಾ ಎಳೆ).
೮೬೦. ತೆಪ್ಪಱು - ಚೇತನಕರಣೇ.
೮೬೧. ತೆಱೆ - ಅನಾವರಣೋದ್ಘಾಟನಯೋಃ, ಕರೇ ಚ (ಕಪ್ಪ, ಕಾಣಿಕೆ).
೮೬೨. ತೊಱೆ - ವಿಸರ್ಜನೇ, ನದ್ಯಾಂ ಚ.
೮೬೩. ತೋಱು - ದರ್ಶನೇ.
೮೬೪. ದೂಱು - ಪೈಸುನ್ಯೇ (ದೂರು ಹೇಳು).
೮೬೫. ನಾಱು - ದುರ್ಗಂಧೇ, ಆರ್ದ್ರೀಕರಣೇ ಚ (ನನೆಯಿಸು).
೮೬೬. ನುಱು - ಸಂಚೂರ್ಣೇ.
೮೬೭. ನೆಱೆ - ಸಮಗ್ರತ್ವೇ.
೮೬೮. ಪಱ - ವಿಚ್ಛಿತ್ತೌ (ಹರಿ).
೮೬೯. ಪಾಱು - ಉತ್ಪ್ಲವನೇ(ನೆಗೆ), ವಹಿತ್ರಭೇದೇ ಚ (ಹರಿಗೋಲು)
೮೭೦. ಪಾಂಗಱ - ಪ್ರಕಾರಗಮನೇ (ರೀತಿಯನ್ನು ತಿಳಿ).
೮೭೦*ಪೀಱು - ವಿಕೀರ್ಣೇ (ಚೆಲ್ಲು).
೮೭೧. ಪೆಱು - ಉಪಲಬ್ಧೌ (ಸಂಪಾದಿಸು),

ಪ್ರಸೂತೇ ಚ.
೮೭೨. ಪೆಳಱು - ಭಯೇ.
೮೭೩. ಪೇಱು - ಧಾರಣೇ.
೮೭೪. ಪೊಚ್ಚಱು - ಸ್ಫುರಣೇ (ತೋರ್ಪಡು).
೮೭೫. ಪೊಱಮಾಱು - ಪಲಾಯನೇ.
೮೭೬. ಪೊಱು - ಶಿರೋಧಾರಣೇ.
೮೭೬*ಬಱೆ - ಅವಗ್ರಹೇ.
೮೭೭. ಬಿಱು - ಭಯೇ.
೮೭೮. ಬೀಱು - ಸ್ವೇಚ್ಛಾಪ್ರದಾನೇ (ಇಷ್ಟಬಂದಂತೆ ಕೊಡು).
೮೭೯. ಬೆದಱು - ವ್ಯಸ್ತೇ.
೮೮೦. ಬೆಱೆ - ಅಹಂಕಾರಭಾವೇ (ಗರ್ವಪಡು).
೮೮೧. ಬೆಳ್ಕುಱು - ಭಯೇ.
೮೮೨. ಬೇಸಱು - ಆಲಸ್ಯೇ.
೮೮೩. ಬೊಬ್ಬಿಱು - ಮಹಾರವೇ.
೮೮೪. ಮಱೆ - ವಿಸ್ಮರಣೇ.
೮೮೫. ಮಾಱು - ವಿಕ್ರಯೇ.
೮೮೬. ಮೀಱು - ಅತಿಕ್ರಮಣೇ.
೮೮೭. ಮುಱು - ಮೋಟನೇ, ಖಂಡೇ ಚ (ತುಂಡು).
೮೮೮. ಮುಸುಱು - ಸಂಭನ್ನೇ.
೮೮೯. ಮೆಱೆ - ವಿಡಂಬೇ.
೮೯೦. ಸಮಱು - ಚಾರುಕರಣೇ (ನಯಮಾಡು).
೮೯೧. ಸಾಱು - ಘೋಷಣೇ (ಡಂಗುರ ಹೊಡಿ), ರಸಾರ್ಥೇ ಚ (ಬೇಳೆಯ ಸಾರು).
೮೯೨. ಸೀಱು - ದುಃಕಲಹೇ, ದುಃಖಲಯೇ (ದುಃಖದಲ್ಲಿ ಮುಳುಗು, ದುಃಖನಾಶಹೊಂದು).
೮೯೩. ಸುಱು - ಲೇಹನೇ.

## ೨೧. ೞಾಂತಕ್ಕೆ

೮೯೪. ಅಗೞ್ - ಖನನೇ, ಪರಿಖಾಯಾಂ ಚ (ಅಗಳ್).
೮೯೫. ಅಗುೞ್ - ಖನನೇ, ಜಲನಿಮಜ್ಜನೇ (ಮುಳುಗು).
೮೯೬. ಅಸಕೞು - ಅತಿಕ್ರಮಣೇ.
೮೯೭. ಅೞ್ - ರೋದನೇ.
೮೯೮. ಅೞು - ವಿನಾಶೇ, ಮಾನಸೇಷರಸೇ ಚ (ಅಳೆಯುವ ಪಾತ್ರೆಯಲ್ಲಿ ನಿಂತ ದ್ರವ), ಭ್ರಮರಾರ್ಥೇ ಕ್ಷಳಂ (ಅಳಿ).
೮೯೯. ಆೞ್ - ಜಲನಿಮಜ್ಜನೇ (ಮುಳುಗು), ಸೇವಕೇ ಕುಳಂ (ಆಳ್).
೯೦೦. ಇೞು - ನಿಮ್ನಾವತರಣೇ.
೯೦೧. ಉೞ್ - ಹಲವಿಲೇಖನೇ.
೯೦೨. ಉೞು - ಅವಶಿಷ್ಟೇ, ವಿಮೋಚನೇ ಚ (ಜೀವದಿಂದುಳಿ), ಚೋರಪ್ರಸ್ತರೋಪಕರಣ ಗೊಪನೇಷು ಕುಳಂ.
೯೦೩. ಎೞೆ - ಆಕ್ರಮಣಾಕರ್ಷಣೇ, ತಂತುಮಾತ್ರೇ ಚ (ದಾರದೆಳೆ), ಭೂವಾಚಕೇ ಕ್ಷಳಂ.
೯೦೪. ಏೞ್ - ಉತ್ಥಾನೇ.
೯೦೫. ಕಯ್ಗೞು - ಅತಿಕ್ರಮಣೇ.
೯೦೬. ಕೀೞ್ - ಉತ್ಪಾಟನೇ
೯೦೭. ಕೞು - ನಿಧಾನಾತಿದೂರಯೋಃ (ಕೊನೆಗಾಣು, ಸಾಯು, ಬಹುದೂರ ತೊಲಗು), ಸೌವೀರೇ ಚ (ಗಂಜಿ).
೯೦೮. ಕುೞು - ಖನನೇ, ನಿಮ್ನಭೂಮೌ ಚ.
೯೦೯. ಕೊೞೆ - ಜೀರ್ಣೇ, ಕಾಯಮಲೇ ಚ.
೯೧೦. ಜಗುೞ್ - ಅಪಸರಣೇ (ಹೊರಟು ಹೋಗು).
೯೧೧. ಜೀಱೀೞ್ - ಧ್ವನಿವಿಕಾರೇ.
೯೧೨. ತುೞು - ಪಾದಸಂಘಟ್ಟನೇ.
೯೧೩. ತೆಗೞ್ - ನಿಂದಾಯಾಂ.
೯೧೪. ನೆಗೞ್ - ಉದ್ಯೋಗ ಖ್ಯಾತ ಯೋಃ, ನಕ್ರೇ ಚ (ಮೊಸಳೆ).
೯೧೫. ಪೞು - ನಿಂದಾಯಾಂ, ವಸ್ತ್ರ ವಿಶೇಷ ಚ.
೯೧೬. ಪಾಱೀೞ್ - ನಿರ್ಧಾವನೇ (ಓಡಿ ಹೋಗು), ಅಪಮಾನೇ ಚ (ಅಪಮಾನಿತನಾಗು).
೯೧೭. ಪೂೞ್ - ಆಚ್ಛಾದನೇ.
೯೧೮. ಪೆಡಮಗುೞ್, ಪೆಡಂಮಗುೞ್ - ಪರಾಙ್ಮುಖೇ (ಹಿಂದಿರುಗು).
೯೧೯. ಪೊಗೞ್ - ಸಂಸ್ತವನೇ.
೯೨೦. ಪೋೞ್ - ವಿದಾರಣೇ, ಖಂಡೇ ಚ,
೯೨೧. ಬೞು - ಸಮ್ಮಾರ್ಜನ ಮಾರ್ಗ ವಂಶೇಷು, ಆಹ್ವಾನಪುರುಷೇ ಚ.
೯೨೨. ಬಾೞ್ - ಜೀವನೇ, ಖಡ್ಗೇ ಕುಳಂ (ಬಾಳ್).
೯೨೩. ಬೀೞ್ - ಪತನೇ, ಖಿಲಕ್ಷೇತ್ರೇ ಚ (ಪಾಳುಭೂಮಿ).
೯೨೪. ಮಗುೞ್ -ನಿವರ್ತನೇ (ಹಿಂದಿರುಗು).
೯೨೫. ಸುೞು - ಭ್ರಮಣೇ, ಜಲಾವರ್ತೇ ಚ.
೯೨೬. ಹೞು - ನಿರ್ದ್ರವಕರಣೇ (ಹಿಂಡು).

ದಲನಾರ್ಥೇ ಕುಳಂ (ಹಿಳಿ).

## ೨೨. ಳಾಂತಕ್ಕೆ

೯೨೮. ಅಸುಂಗೊಳ್ - ಪ್ರಾಣಾಪಹರಣೇ.
೯೨೯. ಅಳೆ - ಪರಿಮಾಣೇ, ತಕ್ರೇ ಚ.
೯೩೦. ಉರುಳ್ - ನಿಮ್ನಪತನೇ.
೯೩೧. ಊಳ್ - ದೂರಾದಾಹ್ವಾನೇ (ದೂರದಿಂದ ಕರೆ).
೯೩೨. ಒಲವರಂಗೊಳ್ - ಸ್ವಪಕ್ಷಸ್ವೀಕಾರೇ.
೯೩೩. ಓಳ್ - ನಿಧುವನೇ.
೯೩೪. ಕಣ್ಗೊಳ್ - ದರ್ಶನೀಯೇ.
೯೩೫. ಕಯ್ಕೊಳ್ - ಸ್ವೀಕಾರೇ.
೯೩೬. ಕಳ್ - ಸ್ತೇಯೇ (ಕಳ್ಳತನ ಮಾಡು), ಮದ್ಯೇ ಚ.
೯೩೭. ಕಳೆ - ವಿಸರ್ಜನೇ, ಕಲಾಯಾಂ ಕ್ಷಳಂ.
೯೩೮. ಕೇಳ್ - ಆಕರ್ಣನೇ.
೯೩೯. ಕೊಳ್ - ಗ್ರಹಣೇ.
೯೪೦. ಚಳಿ - ವಿಗತಪ್ರಭಾವೇ (ಶಕ್ತಿಗುಂದು), ಶೀತೇ ಚ.
೯೪೧. ತಗುಳ್ - ಅನುಧಾವನೇ (ಹಿಂದೋಡು)
೯೪೨. ತಳಿ - ಸೇಚನೇ (ಚಿಮುಕಿಸು), ಸತ್ರೇ ಚ (ಸತ್ರ). ಸ್ಥೂಲದಾರೌ ಟಿಟಂ (ತಟು).
೯೪೩. ತಳೆ - ಧಾರಣೇ, ಆತಪತ್ರಭೇದೇ ಟಿಟಂ (ತಟಿ).
೯೪೪. ತಾಳ್ - ಧಾರಣೇ, ವೃಕ್ಷೇ ಟಿಟಂ (ತಾಟ್)
೯೪೫. ತಿಳಿ - ನೈರ್ಮಲ್ಯೇ, ಜ್ಞಾನಪ್ರಸನ್ನ ಭಾವಯೋಃ (ಒಲಿ). ಕಾಂಜಿಕೇ ಚ (ಗಂಜಿ).
೯೪೬. ತೂಳ್ - ಅವಸರ್ಪಣೇ (ಹಿಂದಿರುಗಿ ಓಡು).
೯೪೭. ತೊಳೆ - ಪ್ರಕ್ಷಾಲನೇ, ಫಲತುಳಾಯಾಂ ಚ.
೯೪೮. ದೊರೆಕೊಳ್ - ಪ್ರಾಪ್ತೌ.
೯೪೯. ನಳಿ - ನಮನೇ.
೯೫೦. ನೀಳ್ - ಪ್ರಸಾರಣೇ (ಉದ್ದವಾಗು).
೯೫೧. ನುಗುಳ್ - ಸೂಕ್ಷ್ಮ ದ್ವಾರಪ್ರವೇಶೇ.
೯೫೨. ನುಸುಳ್ - ಸೂಕ್ಷ್ಮ ದ್ವಾರಪ್ರವೇಶೇ.
೯೫೩. ನೆಟ್ಟಿಕೊಳ್ - ಸರ್ವಸ್ವಹರಣೇ, ಮರ್ಮ ಭೇದೇ ಚ (ಚುಚ್ಚು).
೯೫೪. ನೋಳ್- ಅಗ್ರಗಮನೇ (ಮುಂದುವರಿ).
೯೫೫. ಪೊರಳ್ - ಲುಠನೇ.
೯೫೬. ಪೊಳೆ - ಲುಠನೇ (ಹೊರಳು), ನದ್ಯರ್ಥೇ ಟಿಟಂ (ಪೊಟೆ).
೯೫೭. ಬಗುಳ್ - ಕುರ್ಕುರಧ್ವನೌ, ಸಾರಣೇ ಚ (ಆಮಶಂಕೆಯಿಂದ ತೊಂದರೆ ಪಡು).
೯೫೮. ಬಳೆ - ಪ್ರವೃದ್ಧೌ, ಕಾಚಭೂಷಣೇ ಚ.
೯೫೯. ಬಟ್ಟಕೊಳ್ - ಕ್ರಮಸಂಧಾನೇ (ಕ್ರಮವಾಗಿಡು).
೯೬೦. ಬೆಳೆ - ಸಸ್ಯವೃದ್ಧೌ.
೯೬೧. ಬೆಂಕೊಳ್ - ಅನುಧಾವನೇ (ಬೆನ್ನಟ್ಟು).
೯೬೨. ಬೇಳ್ - ಹವಿಃ ಪ್ರದಾನೇ (ಆಹುತಿಕೊಡು), ನಿರ್ಬುದ್ಧೌ ಚ.
೯೬೩. ಮನಂಗೊಳ್ - ಚಿತ್ತವಿಮೋಹನೇ (ಮನಸ್ಸಿಗೆ ಹತ್ತು).
೯೬೪. ಮಸುಳ್ - ವಿಗತಪ್ರಭಾಯಾಂ (ಕಳೆಗುಂದು).
೯೬೫. ಮಾರ್ಕೊಳ್ - ಸಮ್ಮುಖೇ (ಇದಿರಾಗು).
೯೬೬. ಮುಗುಳ್ - ನಿಮೀಲನೇ (ಕಣ್ಣುಮುಚ್ಚು) ಕುಟ್ಮಲೇ ಚ (ಮೊಗ್ಗು).
೯೬೭. ಮುಳಿ - ಕೋಪೇ.
೯೬೮. ಮೊಳೆ - ಪ್ರರೋಹಕ್ರಿಯಾಯಾಂ (ಅಂಕುರಿಸು), ಅಂಕುರೇ ಚ.
೯೬೯. ಸೀಳ್ - ವಿದಾರಣೇ, ಶಕಲೇ ಚ.
೯೭೦. ಸುರುಳ್ - ಸಂಕೋಚನೇ.
೯೭೧. ಸೂರುಳ್ - ಶಪಥೇ (ಪ್ರತಿಜ್ಞೆಮಾಡು).
೯೭೨. ಸೆಳೆ - ಆಕರ್ಷಣೇ, ಬಾಲಶಿಕ್ಷಾದಂಡೇ ಚ.

ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಶಲ್ಯ
ಚಾರುಚುಂಬಕಾಯಮಾನಾನೂನ ಕರ್ಣಾಟಕಲಕ್ಷಣಶಿಕ್ಷಾಚಾರ್ಯ ಸುಕವಿ
ಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಧಾತುನಿರ್ಣಯಮೆಂಬ
ಷಷ್ಠಮಪ್ಪ ಸಂಧಿ ಸಂಪೂರ್ಣಂ

# ಏಳನೆಯ ಸಂಧಿ

## ಅಪಭ್ರಂಶ ಪ್ರಕರಣಂ

**ಸೂತ್ರಂ ॥ ಈಕ್ಷಿಸಿ ಶಿಕ್ಷಾಸೂತ್ರದ ।**
**ಲಕ್ಷಣಮಂ ಲೋಕರೂಢಿ ಕಿಡದ ವೊಲಱಿವರ್ ॥**
**ಲಕ್ಷಿಪುದು ನುಡಿಗಳೊಳ್ ಬಹು ।**
**ಳಾಕ್ಷೇಪಣಮಿಲ್ಲದಿರೆಯು[1]ಮಱಿಯದ ಕೆಲವಂ ॥ ೨೫೨ ॥**

ವೃತ್ತಿ – ಈ ಪ್ರಕರಣದೊಳ್ ಪೇಟ್ದ ಶಿಕ್ಷಾಸೂತ್ರಂಗಳ ಲಕ್ಕಣಮಂ ವಿದ್ವಾಂಸರ್ ನೋಡಿ ಶಬ್ದಂಗಳೊಳ್ ಬಹುಳವೃತ್ತಿಯಿಲ್ಲದೊಡಂ ಅಱಿಯದ ಕೆಲವು ತದ್ಭವಂಗಳಂ ಲೋಕರೂಢಿಯಱಿಯದಂತುದಾಹರಿಪುದು.

[ಸಂ. ಕ. ಸಾ.ಪ]

**ಸೂತ್ರಂ ॥ ಸಕ್ಕದದ ತದ್ಭವಂಗಳ ।**
**ಲಕ್ಕಣಮಂ ಕನ್ನಡಕ್ಕೆ ಲಕ್ಷಿಸಿ ಪೇೞ್ವೆಂ ॥**
**ಸಕ್ಕದದ ಶ ಷ ದ್ವಿತಯ ।**
**ಕ್ಕಕ್ಕುಂ ಸತ್ವಂ ಪ್ರಸಿದ್ಧಿಯಿಂದೆಲ್ಲೆಡೆಯೊಳ್ ॥ ೨೫೩ ॥**

ವೃತ್ತಿ – ಸಂಸ್ಕೃತಕ್ಕೆ ಪುಟ್ಟಿದ ಕನ್ನಡಮಂ ನಿರೂಪಿಸುವೆಂ. ಸಂಸ್ಕೃತದ ಶ ಷಂಗಳ್ಗೆ ಸಕಾರಂ ಪ್ರಸಿದ್ಧಮಾಗೆಲ್ಲೆಡೆಯೊಳಮಕ್ಕುಂ.

**ಪ್ರಯೋಗಂ[2] –**

ಶಕಾರಕ್ಕೆ –

| | | |
|---|---|---|
| ಅಶನಿ-ಅಸನಿ | ಪರಶು-ಪರಸು | ಶಶಿ-ಸಸಿ |
| ಅಂಕುಶ-ಅಂಕುಸ | ಪಶು-ಪಸು | ಶಂಕು-ಸಂಕು[3] |
| ಆಕಾಶ-ಆಗಸ | ಪಾಶ-ಪಾಸ | ಶಂಕೆ-ಸಂಕೆ |
| ಕಳಶ-ಕಳಸ | ರಾಶಿ-ರಾಸಿ | ಶಂಬರ-ಸಂಬರ[4] |
| ಗಿರಿಶ-ಗಿರಿಸ | ಶಕುನ-ಸಕುನ. | ಶಂಬಲ-ಸಂಬಳ |
| ದಶಾ-ದೆಸೆ | ಶಕುನಿ-ಸಕುನಿ | ಶಾಣ-ಸಾಣೆ |
| ನಿಶ್ಶಂಕ-ನಿಸ್ಸಂಕ | ಶರ-ಸರ | ಶಾಪ-ಸ್ಸಾಪ |
| ನಿಶಾದಿ-ನಿಸಾದಿ | ಶರದ-ಸರದ | ಶಾರೀರ-ಸಾರೀರ |

~~~~~~~~~~~~~~~~~~~

೧. (ಅಱಿವುದು) ೨. (ಅಲ್ಲಲ್ಲಿ ಪದಾನುಕ್ರಮಣಿಯೂ ಪದಗಳ ಉಲ್ಲೇಖವೂ ಪ್ರಚಲಿತ ಪರಿಷ್ಕರಣಗಳಿ ಬೇರೆ ರೀತಿಯಲ್ಲಿವೆ; ಅಕಾರಾಂತ ಶಬ್ದಗಳನ್ನು ಅಬಿಂದುಕಗಳಾಗಿರಿಸಿದೆ. ೩. ಸಂಕು = ಕೊರಡು, ಗಿರ್ವ ೪. ಸಂಬರ - ಉದಕ
~~~~~~~~~~~~~~~~~~~

| | | |
|---|---|---|
| ಶಾಲಣ-ಸಾಲಣ | ಶೀತ-ಸೀತ | ಶೌರಿ-ಸೌರಿ |
| ಶಾಲೆ-ಸಾಲೆ | ಶುಚಿ-ಸುಚಿ | ಶೌರಿದ-ಸೌರಿದ |
| ಶಾಂತಿ-ಸಾಂತಿ | ಶುದ್ಧಿ-ಸುದ್ಧಿ | ಸಂಶಯ-ಸಂಸಯ |
| ಶಿರ-ಸಿರ | ಶುಂಠಿ-ಸುಂಟಿ | |
| ಶಿವಾ-ಸಿವೆ | ಶೂಲ-ಸೂಲ | |

ಷಕಾರಕ್ಕೆ -

| | | |
|---|---|---|
| ಆಮಿಷ-ಆಮಿಸ | ನಿಷಾದಿ-ನಿಸಾದಿ[೧] | ರೋಷ-ರೋಸ |
| ಔಷಧ-ಔಸದ | ಪಾಷಾಣ-ಪಾಸಾಣ | ವಿಷ-ವಿಸ |
| ಕಾಷಾಯ-ಕಾಸಾಯ | ಪಾಷಂಡಿ-ಪಾಸಂಡಿ | ವಿಷಯ-ವಿಸಯ |
| ಜ್ಯೋತಿಷ-ಜೋಯಿಸ | ಪೌರುಷ-ಪೌರುಸ | ವೇಷ-ವೇಸ |
| ದೂಷಣ-ದೂಸಣೆ | ಭಾಷಾ-ಬಾಸೆ | ಶೇಷ-ಸೇಸ |
| ದೋಷ-ದೋಸ | ಮಷಿ-ಮಸಿ | ಶೇಷೆ-ಸೇಸೆ |
| ನಿಮಿಷ-ನಿಮಿಸ | ಮೇಷ-ಮೇಸ | ಹರ್ಷ-ಹರುಸ |

**ಸೂತ್ರಂ ॥ ವಿರಳಂ ಮಾಡಿದ ದಡ್ಡ ।**
**ಕ್ಕರದ ಮೊದಲ್ಗತ್ವಮಿತ್ವಮುತ್ವಮುಮಕ್ಕುಂ ॥**
**ದೊರೆಕೊಳ್ಗುಮತ್ವದಿತ್ವದ ।**
**ಪರವರ್ಣಂ ದೀರ್ಘಮಾದ ಪಕ್ಷಂ ಹ್ರಸ್ವಂ ॥ ೨೫೪ ॥**

ವೃತ್ತಿ - ಬೇರ್ಕೆಯ್ದ ದಡ್ಡಕ್ಕರದ[೨] ಪೂರ್ವವ್ಯಂಜನಕ್ಕೆ ಅಕಾರಮಿಕಾರಮುಕಾರಮಕ್ಕುಂ; ಅಕಾರದಿಕಾರದ ಮುಂದಣ ದೀರ್ಘಕ್ಕೆ ಹ್ರಸ್ವಮಕ್ಕುಂ.

**ಪ್ರಯೋಗಂ -**

ಅಕಾರಕ್ಕೆ -

ಇಂದ್ರ-ಇಂದರ; ಕ್ರಕಚ-ಕರಗಸ; ಯತ್ನ-ಜತನ.

ಇಕಾರಕ್ಕೆ -

ಗಿರ್ಗಟ-ಗಿರಿಗಟ; ವರ್ಷ-ಬರಿಸ; ಶ್ರೀ-ಸಿರಿ.

ಉಕಾರಕ್ಕೆ -

| | | |
|---|---|---|
| ಅಲ್ಪ-ಅಲುಪ | ಭಕ್ತಿ-ಭಕುತಿ | ಲಕ್ಷ್ಮೀ-ಲಕುಮಿ |
| ಅರ್ಹ-ಅರುಹ | ಮಾತ್ರ-ಮಾತುರ | ಲಗ್ನ-ಲಗುನ |
| ಆಕರ್ಷಣ-ಆಕರುಸನ | ಮುಕ್ತಿ-ಮುಕುತಿ | ಶಬ್ದ-ಸಬುದ |
| ತಂತ್ರ-ತಂತುರ | ಯುಗ್ಮ-ಜುಗುಮ | ಸರ್ಷಪ-ಸರುಸಪ[೩] |
| ದರ್ಶನ-ದರುಸನ | ರತ್ನ-ರತುನ | ಸೂಕ್ಷ್ಮ-ಸುಕುಮ |
| ಪದ್ಮ-ಪದುಮ | ಲಕ್ಷ್ಮಣ-ಲಕುಮಣ | ಹರ್ಷ-ಹರುಸ |

೧. ನಿಸಾದಿ - ಮಾವಂತಿಗ ೨. ದಡ್ಡಕ್ಕರ = ಒತ್ತಕ್ಷರ ೩. ಸರುಸಪ = ಸಾಸವೆ

ಅತ್ವದ ಮುಂದಣ ಹ್ರಸ್ವಕ್ಕೆ -
ತ್ರಾಣ-ತರಣ; ತ್ರಾಸ-ತರಸ; ಪ್ರಾಣ-ಹರಣ; ಪ್ರಾಯ-ಹರಯ.
ಇತ್ವದ ಮುಂದಣ ಹ್ರಸ್ವಕ್ಕೆ -
ವ್ಯಾಧ-ಬಿಯದ; ವ್ಯಾಧಿ-ಬಿಯದಿ; ವ್ಯಾಸಂಗ-ಬಿಯಸಂಗ; ವ್ಯಾಳ-ಬಿಯಳ.

**ಸೂತ್ರಂ ॥ ವರ್ಗಪ್ರಥಮಂಗಳ್ತ ।**
**ದ್ವರ್ಗತೃತೀಯಂಗಳಪ್ಪುವುೞಿಯೆ ಪವರ್ಗಂ ॥**
**ವರ್ಗದ್ವಿತೀಯವರ್ಣಂ ।**
**ವರ್ಗಪ್ರಥಮಂ ಚತುರ್ಥಮೞ್ಗೆ ತೃತೀಯಂ ॥ ೨೫೫ ॥**

**ವೃತ್ತಿ** - ಪವರ್ಗಮಂ ಕಳೆದುೞಿದ ವರ್ಗಂಗಳ ಮೊದಲ ಕ ಚ ಟ ತಂಗಳ್ ತಮ್ಮ ಮೂಱನೆಯ ಗ ಜ ಡ ದಂಗಳಪ್ಪುವು ; ವರ್ಗದೆರಡನೆಯ ಖ ಛ ಠ ಥ ಫಂಗಳ್ ತಮ್ಮ ಮೊದಲ ಕ ಚ ಟ ತ ಪಂಗಳಪ್ಪುವು ; ವರ್ಗದ ನಾಲ್ಕನೆಯ ಘ ಝ ಢ ಧ ಭಂಗಳ್ ತಮ್ಮ ಮೂಱನೆಯ ಗ ಜ ಡ ದ ಬಂಗಳಪ್ಪುವು.

(೧) ಕಕಾರಕ್ಕೆ ಗಕಾರಂ -

| | | |
|---|---|---|
| ಆಕರ-ಆಗರ | ದೀಪಿಕಾ-ದೀವಿಗೆ | ಮಲ್ಲಿಕಾ-ಮಲ್ಲಿಗೆ |
| ಆಕಾಶ-ಆಗಸ | ಪಿಣ್ಡಿಕಾ-ಪಿಣ್ಡಿಗೆ | ಮುಷ್ಟಿಕಾ-ಮುಟ್ಟಿಗೆ |
| ಓಳಿಕಾ-ಓಳಿಗೆ | ಪೂರಿಕಾ-ಪೂರಿಗೆ | ವಾಸುಕಿ-ಬಾಸುಗಿ |
| ಗಳಂತಿಕಾ-ಗಳಂತಿಗೆ[೧] | ಪೇಟಿಕಾ-ಪೆಟ್ಟಿಗೆ | ಹಾರಿಕೆ-ಹಾರಿಗೆ |
| ಜೀವಕ-ಜೀವಗ[೨] | ಪೈತೃಕ-ಹೈತಿಗೆ, ಹೈತಿಗ | ಹೋರಿಕ-ಹೋರಿಗ |
| ಡಮರುಕ-ಡಮರುಗ | | |

ಚಕಾರಕ್ಕೆ ಜಕಾರಂ -
ಕಾಚ-ಗಾಜು ; ವಚಾ-ಬಜೆ ; ವಾಚನಾ-ಬಾಜನೆ ; ಸೂಚಿ-ಸೂಜಿ.

ಟಕಾರಕ್ಕೆ ಡಕಾರಂ -

| | | |
|---|---|---|
| ಅಟವಿ-ಅಡವಿ | ಕೋಟಾ-ಗೋಡೆ | ಮಕುಟ-ಮಗುಡ |
| ಕಟ-ಕಡ | ಕೋಟಿ-ಕೋಡಿ | ಮಾಟ-ಮಾಡ |
| ಕಟಕ-ಕಡಗ | ತಟ-ತಡ | ಲಕುಟ-ಲಗುಡ[೩] |
| ಕುಟಿ-ಗುಡಿ | ತಟಿ-ತಡಿ | |
| ಕೂಟ-ಕೋಡು | ಪಟಲಕ-ಹಡಲಗೆ | |

ತಕಾರಕ್ಕೆ ದಕಾರಂ -
ಕೈತವ-ಕೈದವ ; ಚತುರ-ಚದುರ ; ಜಾತಿ-ಜಾದಿ ; ತಾತ-ತಂದೆ ; ದೂತಿ-ದೂದಿ; ಪ್ರಾಕೃತ-ಪಾಗದ ; ಭೂತಿ-ಬೂದಿ ; ವಸತಿ-ಬಸದಿ.

---

೧. ಗಳಂತಿಗೆ = ಅಣದಿಗೆ  ೨. ಜೀವಗ - ಹೊನ್ನೆಯ ಮರ  ೩. ಲಗುಡ = ದಾಣೆ

(೨) ಖಕಾರಕ್ಕೆ ಕಕಾರಂ -

| | | |
|---|---|---|
| ಖಜಾಖ-ಕಜಾಕ | ಖಂಕರಿ-ಕಂಕರಿ | ನಖ-ನಕ |
| ಖದಿರ-ಕದಿರ | ಖಂಡ-ಕಂಡ | ಪರಿಖ-ಪರಿಕೆ |
| ಖರ-ಕರ | ಖಾಸ-ಕಾಸ | ಮುಖ-ಮುಕ |
| ಖಳ-ಕಳ | ಖುರ-ಕುರ | ಶಂಖ-ಸಂಕ |

ಛಕಾರಕ್ಕೆ ಚಕಾರಂ -

ಛವಿ-ಚವಿ ; ಛಂದ-ಚಂದ ; ಛಾಂದಸ-ಚಾಂದಸ ; ಛಿನ್ನ-ಚಿನ್ನ.

ಠಕಾರಕ್ಕೆ ಟಕಾರಂ -

ಕಠೋರ-ಕಟೋರ ; ಕಂಠ-ಕಂಟ ; ಕಂಠಿಕಾ-ಕಂಟಿಕೆ ; ಮಠ-ಮಟ ; ವಂಠ-ಬಂಟ ; ಶಠ-ಸಟೆ ; ಶುಂಠಿ-ಸುಂಟಿ.

ಥಕಾರಕ್ಕೆ ತಕಾರಂ -

ಕಥಾ-ಕತೆ ; ಕಂಥಾ-ಕಂತೆ ; ಗ್ರಂಥ-ಗ್ರಂತ ; ಪಂಥ-ಪಂತ ; ಮಂಥನಿ-ಮಂತಣಿ[೧]; ಮಂಥ-ಮಂತ[೨]; ಮಿಥಿಳಾ-ಮಿತಿಳೆ ; ವೃಥಾ-ವಿತೆ[೩].

ಫಕಾರಕ್ಕೆ ಪಕಾರಂ -

ಕಫ-ಕಪ; ಗುಂಫನ-ಗುಂಪನ; ಫಣಿ-ಪಣಿ; ಫಲಕ-ಹಲಗೆ; ಫಲ್ಗುನ-ಪಲುಗುಣ; ಫಲ-ಪಳ; ಫಾಲ-ಪಾಲ; ಫಾಲ್ಗುನ-ಪಾಲುಗುಣ; ಫೇನ-ಪೇನ.

(೩) ಘಕಾರಕ್ಕೆ ಗಕಾರಂ -

| | | |
|---|---|---|
| ಅರ್ಘ-ಅಗ್ಗ | ಘಂಟಾ-ಗಂಟೆ | ಜಘನ-ಜಗನ |
| ಗರ್ಘರ-ಗಗ್ಗರ | ಘುಂಟಿಕಾ-ಗುಂಟಿಗೆ | ನಿಘಂಟು-ನಿಗಂಟು |
| ಘಟ-ಗಡ | ಘೂಕ-ಗೂಗೆ | ಸಂಘ-ಸಂಗ |
| ಘಟಕ-ಗಡಿಗೆ | ಘೋಷಣಾ-ಗೋಸಣೆ | |

ಝಕಾರಕ್ಕೆ ಜಕಾರಂ - ಝಗಟಾ-ಜಗಳೆ; ಝಡಿತಿ-ಜಡಿತಿ[೪]; ಝಂಕಾ-ಜಂಕೆ; ಝಂಝಾ-ಜಂಜು; ಝಂಪ-ಜಂಪ; ಝೋಂಟಿಗ-ಜೋಂಟಿಗ.

ಢಕಾರಕ್ಕೆ ಡಕಾರಂ -

ಗಾಢ-ಗಾಡ; ಢಕ್ಕಾ-ಡಕ್ಕೆ; ಢೆಂಕಾ-ಡೆಂಕೆ; ರೂಢಿ-ರೂಡಿ; ಷಂಢ-ಸಂಡ.

ಧಕಾರಕ್ಕೆ ದಕಾರಂ -

| | | |
|---|---|---|
| ಔಷಧ-ಔಸದ | ಧೂಳಿ-ದೂಳಿ | ವಿಧಿ-ಬಿದಿ |
| ಧನ-ದನ | ನಿಧಾನ-ನಿದಾನ | ಶುದ್ಧಿ-ಸುದ್ದಿ |
| ಧಾರಾ-ದಾರೆ | ನಿಧಿ-ನಿದಿ | ಸಾಧನ-ಸಾದನೆ |
| ಧೂಪ-ದೂಪ | ಬಂಧ-ಬಂದ | ಸಿಂಧುರ-ಸಿಂದುರ |
| ಧೂಸರ-ದೂಸರ[೫] | ಬುಧ-ಬುದ | ಸೈಂಧವ-ಸೈಂದವ |

~~~~~~~~~~~~~~~~~

೧. ಮಂತಣಿ = ಕಡೆವ ಮಡಕೆ. ಗುಡುವನಂ; ೨. ಮಂತ=ಕಡೆಗೋಲು, ಮೊಸರ ಮೇಲಣ ನಿಡಿ; ೩. ವಿತೆ = ಪ್ರಯೋಜನವಿಲ್ಲದುದು; ೪. ಜಡಿತಿ = ಬೇಗ; ೫. ದೂಸರ = ನಸುಬಿಳಿದು
~~~~~~~~~~~~~~~~~

ಭಕಾರಕ್ಕೆ ಬಕಾರಂ -

| | | |
|---|---|---|
| ಆರಂಭ-ಆರಂಬ | ಭೀಮ-ಬೀಮ | ರಂಭಾ-ರಂಬೆ |
| ಕುಸುಂಭ-ಕುಸುಂಬೆ | ಭೇರಿ-ಬೇರಿ | ಲೋಭ-ಲೋಬ |
| ಕುಂಭ-ಕುಂಬ | ಭೈರವ-ಬೈರವ | ಶಂಭು-ಸಂಬು |
| ಭವಿ-ಬವಿ | ಭೋಗ-ಬೋಗ | ಶುಭ-ಸುಬ |
| ಭಂಡ-ಬಂಡ | ಭೋಗಿ-ಬೋಗಿ | ಶುಂಭ-ಸುಂಬ |

**ಸೂತ್ರಂ ॥ ಖತ್ವಕ್ಕಂ ಬಹುಳತೆಯಿಂ ।**
**ಗತ್ವಂ ಛತ್ವಂ ದ್ವಿರುಕ್ತಿಯಿಂ ಕೂಡಿರೆ ಮೇಣ್ ॥**
**ಯತ್ವಾನ್ವಿತಮಿರೆ ಚತ್ವಂ ।**
**ದ್ವಿತ್ವಂ ಛತ್ವಕ್ಕೆ ಸತ್ವಮುಂಟರೆಎಡೆಯೊಳ್ ॥ ೨೫೬ ॥**

**ವೃತ್ತಿ** - ಖಕಾರಕ್ಕೆತ್ತಾನುಂ ಗಕಾರಮಕ್ಕುಂ; ಛಕಾರಂ ದಡ್ಡಕ್ಕರಮಾಗಿರ್ದೊಡಂ ಮೇಣ್ ಯಕಾರಂ ಬೆರಸಿರ್ದೊಡಂ ದ್ವಿತ್ವಮಪ್ಪ ಚಕಾರಮಕ್ಕುಂ; ಛಕಾರಕ್ಕೆ ಸಕಾರಮುಂ ಕೆಲವೆಡೆಯೊಳಕ್ಕುಂ.

**ಪ್ರಯೋಗಂ** -

ಖಕಾರಕ್ಕೆ ಗಕಾರಂ -

ಮುಖ-ಮೊಗ; ವೈಶಾಖ-ಬೇಸಗೆ.

ದ್ವಿತ್ವದ ಛತ್ವಕ್ಕೆ ದಡ್ಡಕ್ಕರದ ಚಕಾರಂ - ಇಚ್ಛಾ-ಇಚ್ಚೆ; ಮಚ್ಛರ-ಮಚ್ಚರ.

ಯತ್ವಂ ಬೆರಸಿದ ಛತ್ವಕ್ಕೆ ದ್ವಿತ್ವದ ಚಕಾರಂ - ಅಛ್ಯ - ಅಚ್ಚ ; ತುಛ್ಯ-ತುಚ್ಚ ; ಮಛ್ಯ - ಮಚ್ಚ ; ಲಾಂಛ್ಯನ - ಲಚ್ಚಣ; ವಿಛ್ಯಂದ-ಬಿಚ್ಚಂದ(?).

ಛಕಾರಕ್ಕೆ ಸಕಾರಂ - ಛತ್ರಿಕಾ-ಸತ್ತಿಗೆ ; ಛುರಿಕಾ-ಸುರಿಗೆ.

**ಸೂತ್ರಂ ॥ ಅರಮೆ[1] ಠಕಾರಂ ಡ ಟದಿಂ ।**
**ಪರಿಣಮಿಕುಂ ಸತ್ವಮಿಶ್ರಮಪ್ಪ ಥಕಾರಂ ॥**
**ಬರೆಯುಂ ತಕಾರಮಕ್ಕುಂ ।**
**ಸ್ವರಾನ್ವಿತಂ ಥತ್ವಮೊರ್ಮೆ ದ ಟ ಹಮುಮಕ್ಕುಂ ॥ ೨೫೭ ॥**

**ವೃತ್ತಿ** - ಎತ್ತಾನುಂ ಕೆಲವು ಶಬ್ದಂಗಳ ಠಕಾರಂ ಡ ಟಕಾರಮಾಗಿ ಪರಿಣಮಿಕುಂ; ಸಕಾರದೊಡವೆರಸಿದ ಥಕಾರಂ ಸ್ವರಾನ್ವಿತಮಪ್ಪ ತಕಾರಮಕ್ಕುಂ ; ಥಕಾರಮೊರ್ಮೆ ದಕಾರಮುಂ ಟಕಾರಮುಂ ಹಕಾರಮುಂ ಅಕ್ಕುಂ.

**ಪ್ರಯೋಗಂ** -

ಠಕಾರಕ್ಕೆ ಡಕಾರಂ -

ಕುಠಾರ-ಕೊಡಲಿ ; ಮಠ-ಮಡ.

~~~~~~~~~~~~~~~~~~

೧. ಅರಮೆ = ಕೆಲವೆಡೆಯೊಳ್.
~~~~~~~~~~~~~~~~~~

ಠಕಾರಕೆ ಟಿಕಾರಂ -

ಪೀಠಿಕಾ - ಪೀಟಿಗೆ ; ಮಠಿಕಾ - ಮಟಿಗೆ.

ಸಕಾರದೊಡನೆ ಕೂಡಿದ ಥಕಾರಕ್ಕೆ ತಕಾರಂ -

ಅವಸ್ಥಾ-ಅವತೆ ; ಸಂಸ್ಥಾ-ಸಂತೆ ; ಸ್ಥಾನ-ತಾಣ ; ಸ್ಥಾಪನ-ತಾಪಣೆ ; ಸ್ಥೂಲ-ತೂಳ.

ಥಕಾರಕ್ಕೆ ದತ್ವಂ -

ವೀಥಿ-ಬೀದಿ.

ಥಕಾರಕ್ಕೆ ಟತ್ವಂ -

ಗ್ರಂಥಿ-ಗಂಟು.

ಥಕಾರಕ್ಕೆ ಹತ್ವಂ -

ಗಾಥಾ-ಗಾಹೆ.

**ಸೂತ್ರಂ ॥ ಅವತರಿಸಿರ್ಕುಂ ಪತ್ವ ।**
**ಕ್ಕೆ ವತ್ವಹತ್ವ ವ್ಯವಸ್ಥೆ ಕೆಲಕೆಲವೆಡೆಯೊಳ್ ॥**
**ಸವನಿಸುಗುಂ ಬತ್ವಕ್ಕೊ ।**
**ರ್ಮೆ [1]ವತ್ವಮುಂ ವತ್ವದೆಡೆಗೆ ಬತ್ವಂ ಬಹುಳಂ ॥ ೨೫೮ ॥**

ವೃತ್ತಿ - ಪಕಾರಕ್ಕೆ ವಕಾರಮುಂ ಹಕಾರಮುಂ ಕೆಲಕೆಲವೆಡೆಯೊಳಕ್ಕುಂ ; ಬಕಾರಕ್ಕೊರ್ಮೆ ವಕಾರಮುಂ, ವಕಾರಕ್ಕೊರ್ಮೆ ಬಕಾರಮುಮಕ್ಕುಂ.

**ಪ್ರಯೋಗಂ -**

ಪತ್ವಕ್ಕೆ ವತ್ವಂ -

ಕಪಿಲಾ-ಕವಿಲೆ ; ಕಪಿಂಜಳ-ಕವಿಂಜಳ ; ಕೂಪಸ್ತಂಭ-ಕೂವಕಂಬ ; ಚಾಪಳ-ಚಾವಳ ; ತ್ರಿಪದಾ-ತಿವದೆ ; ತ್ರಿಪದಿ - ತಿವದಿ, ದೀಪಿಕಾ-ದೀವಿಗೆ ; ವಾಪಿ-ಬಾವಿ ; ಸೂಪ-ಸೂವ.

ಪತ್ವಕ್ಕೆ ಹತ್ವಂ -

ಗೋಪುರ-ಗೋಹುರ; ಪಟ್ಟಿಕಾ-ಹಟ್ಟಿಕೆ; ಪರವಶ-ಹರವಸ; ಪಂಜರ-ಹಂಜರ; ಪಂಡ-ಹಂಡ; ಪಂಥ-ಹಂತ; ಪಾದುಕ-ಹಾವುಗೆ; ಪಾಶ-ಹಾಸ; ಪಿಪ್ಪಲಿ-ಹಿಪ್ಪಲಿ; ಪಿಶುನ-ಹಿಸುಣ.

ಬತ್ವಕ್ಕೆ ವತ್ವಂ -

ಕಬಲ-ಕವಳ; ವಿಬಂಧ-ವಿವಂದ; ಶಬ-ಸವ; ಶಿಬಿಕಾ-ಸಿವಿಗೆ.

ವತ್ವಕ್ಕೆ ಬತ್ವಂ -

ವಲ್ಲೀ-ಬಳ್ಳಿ ; ವಶಾ-ಬಸೆ[2]; ವಸತಿ-ಬಸದಿ, ಬಸತಿ; ವಸಂತ-ಬಸಂತ; ವಂಚನಾ-ಬಂಚನೆ; ವಾಲ-ಬಾಳ, ಬಾಲ; ವಾಸಂತೀ-ಬಾಸಂತಿ; ವಿಧಿ-ಬಿದಿ; ವೀಣಾ-ಬೀಣೆ; ವೀರ-ಬೀರ; ವೇಗ-ಬೇಗ; ವೇದನಾ-ಬೇದನೆ.

~~~~~~~~~~~~~~~~

೧. (ವತ್ವವಿಧಿ) ೨. ಬಸೆ = ನೆಣ, ಹೆಣ್ಣಾನೆ, ಗೊಡ್ಡಾಕಳು;
~~~~~~~~~~~~~~~~

ಸೂತ್ರಂ ॥ ಘನಮಿಲ್ಲ[1] ಯತ್ವದೊಳ್ ಗ ।
ತ್ವ ನತ್ವವಿಧಿ ಪಿರಿದು ಜತ್ವವಿಧಿ ಮತ್ತಂ ದ ॥
ತ್ವ ನಿಯುಕ್ತ ಯತ್ವಮುಂ ಜ ।
ತ್ವ ನಿಯತಮಂ ಕೆಲವು ಶಬ್ದದೊಳ್ತಾಳ್ದಿರ್ಕುಂ ॥ ೨೫೯ ॥

ವೃತ್ತಿ - ಯಕಾರಕ್ಕೆ ಗಕಾರ ನಕಾರಾದೇಶಂ ಕಿಱಿದೆಡೆಯೊಳುಂಟು; ಆ ಯಕಾರಕ್ಕೆ ಜಕಾರಾದೇಶಂ ಪಿರಿದು; ದಕಾರದೊಳ್ಕೂಡಿದ ಯಕಾರಕ್ಕಂ ದ್ವಿತ್ವದ ಜಕಾರಮಕ್ಕುಂ.

ಪ್ರಯೋಗಂ -

ಯಕಾರಕ್ಕೆ ಗಕಾರಂ -
ಚರ್ಯಾ-ಚರಿಗೆ; ದ್ವಿತೀಯಾ-ಬಿದಿಗೆ; ತೃತೀಯಾ-ತದಿಗೆ.

ಯತ್ವಕ್ಕೆ ನತ್ವಂ -
ಯುಗ-ನೊಗ

ಯತ್ವಕ್ಕೆ ಜತ್ವಂ -

| | | |
|---|---|---|
| ದುರ್ಯೋಧನ-ದುಜ್ಜೋದನ | ಯಶಸ್-ಜಸ | ಯೋಗಿ-ಜೋಗಿ |
| ಯತಿ-ಜತಿ | ಯಂತ್ರ-ಜಂತ್ರ | ಯೌವನ-ಜವ್ವನ |
| ಯಮಲ-ಜಮಳ | ಯಾತ್ರಾ-ಜಾತ್ರೆ | |
| ಯಮುನಾ-ಜಗುನೆ | ಯುಗ-ಜುಗ | |
| ಯವ-ಜವೆ | ಯುಗ್ಮ-ಜುಗುಮ | |
| ಯವನಿಕಾ-ಜವನಿಕೆ | ಯುದ್ಧ-ಜುದ್ದ | |

ದಕಾರದೊಳ್ ಬೆರಸಿದ ಯತ್ವಕ್ಕೆ ದ್ವಿತ್ವಜಕಾರಂ -
ಉದ್ಯೋಗ-ಉಜ್ಜುಗ; ವಿದ್ಯಾ-ಬಿಜ್ಜೆ; ವಿದ್ಯಾಧರ-ಬಿಜ್ಜೋದರ; ವೈದ್ಯ-ಬೆಜ್ಜ.

ಸೂತ್ರಂ ॥ ವ್ಯವಹರಿಕುಂ ಲೋಪಂ ದ್ಯೂ ।
ತ ವಿಂಧ್ಯವಂಧ್ಯಾ ಪ್ರಶಸ್ತಸಂಧ್ಯಾ ಧ್ಯಾನ ॥
ಪ್ರವಿದಿತ ದ ಧಕಾರಂಗ ।
ಳ್ಗವಶಿಷ್ಟ ಯಕಾರಮಂತೆ ಜತ್ವಮನಾಳ್ಗುಂ * ॥೨೬೦ ॥

ವೃತ್ತಿ - ಮೇಲಿರ್ದ ದಧಕಾರಂಗಳಂ ಲೋಪಿಸಿ, ನಿಂದ ಯಕಾರಕ್ಕೆ ಜತ್ವಮಕ್ಕುಂ.

ಪ್ರಯೋಗಂ -

ದ್ಯೂತ-ಜೂದು, ಜೂಜು; ಧ್ಯಾನ-ಜಾನ; ವಂಧ್ಯಾ-ಬಂಜೆ; ವಿಂಧ್ಯ-ಬಿಂಜ; ಸಂಧ್ಯಾ-ಸಂಜೆ.

---

೧. ಘನಮಿಲ್ಲ = ವೆಗ್ಗಳವಾಗಿ ಬಾರದು.

*ಅನ್ವಯಂ - ದ್ಯೂತ ವಿಂಧ್ಯ ವಂಧ್ಯಾ ಪ್ರಶಸ್ತಸಂಧ್ಯಾ ಧ್ಯಾನ ಪ್ರವಿದಿತ ದ ಧಕಾರಂಗಳ್ಗೆ ಲೋಪ ವ್ಯವಹರಿಕುಂ; ಅವಶಿಷ್ಟ ಯಕಾರಂ ಅಂತೆ ಜತ್ವಮಂ ಆಳ್ಗುಂ.

ಸೂತ್ರಂ ॥ ನೆಗಟ್ಟುಂ ದ್ವಿತ್ವಾಗ್ರದ ರೇ ।
ಫೆಗೆ ಲೋಪಂ ವರ್ಣಮಿಶ್ರರೇಫಕ್ಕಂ ತಾಂ ॥
ನೆಗಟ್ಟುಂ ಲೋಪಂ ಬಹುಳದೆ ।
ನೆಗಟ್ಟುಂ ವೃತರೇಫಮಡಿಯೊಳಾ ವರ್ಣದ ವೋಲ್ ॥ ೨೬೧ ॥

ವೃತ್ತಿ - ದಡ್ಡಕ್ಕರದ ಮೇಲಣ ರೇಫೆಗೆ ಲೋಪಂ; ಬಳಸಿದ ರೇಫೆಗಂ ಬಹುಳದಿಂ ಲೋಪಂ; ಆ ಸುತ್ತಿದ ರೇಫೆ ತನ್ನೊಳಿರ್ದಕ್ಕರದಂತೆ ದ್ವಿರ್ಭಾವಮಂ ಕೆಲವೆಡೆಯೊಳ್ ತಳೆಗುಂ.

ಪ್ರಯೋಗಂ -

ದ್ವಿತ್ವಾಗ್ರ ರೇಫಲೋಪಕ್ಕೆ -

| | | |
|---|---|---|
| ಅರ್ಘ್ಯ-ಅಗ್ಗ | ಧರ್ಮ್ಮ-ದಮ್ಮ | ವರ್ಗ್ಗ-ಬಗ್ಗ |
| ಅರ್ಚ್ಚನಾ-ಅಚ್ಚನೆ | ನಿರ್ಬ್ಬುದ್ಧಿ-ನಿಬ್ಬುದ್ಧಿ | ವರ್ತ್ತಿ-ಬತ್ತಿ |
| ಅರ್ದ್ಧ-ಅದ್ದ | ನಿರ್ಮ್ಮಳ-ನಿಮ್ಮಳ | ಶರ್ಕ್ಕರಾ-ಸಕ್ಕರೆ |
| ಕರ್ಕ್ಕಶ-ಕಕ್ಕಸ | ಪುರ್ಗ್ಗಿ-ಪುಗ್ಗಿ | ಶೀರ್ಷಕ-ಸೀಸಕ[2] |
| ಕರ್ತ್ತರಿ-ಕತ್ತರಿ | ಬರ್ಬ್ಬರ-ಬಬ್ಬರ[1] | ಸರ್ಬ್ಬ-ಸಬ್ಬ |
| ದರ್ಪ್ಪ-ದಪ್ಪ | ಮರ್ಕ್ಕಟ-ಮಕ್ಕಡ | |

ಅರ್ಕ್ಕ ದರ್ದ್ದುಗಳೆರಡಱ ಮೇಲಣ ರೇಫೆಗೆ ತದ್ಭವಮಾದೊಡಂ ಬಹುಳದಿಂ ಲೋಪಮಿಲ್ಲ -

ಅರ್ಕ್ಕ-ಎರ್ಕ್ಕೆ; ದರ್ದ್ದು-ತರ್ದ್ದು ಈ ತೆಱದಿನಿರ್ಪುವು.

ಅವರ್ಕೆ ಪ್ರಯೋಗಂ -

ಕಂ ॥ ಒರ್ಕ್ಕುಡಿತ ನೀರ್ಗೆ ಪಱುಪ ।
ಟ್ಟೆರ್ಕ್ಕೆಯ ಪಣ್ಣೆಲೆಯ . . . . . ॥ ೧

ಕಂ ॥ ತರ್ದ್ದುಗಳಟಾಗುಂ ಬಱಟಿಯೊ[3] ।
ಉರ್ದ್ದಿ ನೆಲಾವರೆಯ ಬೇರನಾಮಳಕಮುಮಂ ॥
ಬರ್ದ್ದಿಲಿಮಿಂಚಿಯ ರಸದೊಳ್ ।
ನಿರ್ದ್ದಯೆಯಿಂದೊರಸಿ ಪೂಸೆ ದಿನಪಂಚಕದೊಳ್ ॥ ೨

ಪರಿವೃತರೇಫ ಲೋಪಕ್ಕೆ -

| | | |
|---|---|---|
| ಕ್ರೇಣಿ-ಕೇಣಿ | ಪತಿವ್ರತಾ-ಹದಿಬದೆ | ಭ್ರಮರ-ಬವರ |
| ಚಂದ್ರ-ಚಂದ | ಪ್ರಣತ-ಹಣತೆ | ಶ್ರವಣ-ಸವಣ |
| ದ್ರೋಣ-ದೋಣ[4] | ಪ್ರಭಾ-ಹಬೆ | ಶ್ರೇಣಿ-ಸೇಣಿ |
| ದ್ರೋಣಿ-ದೋಣಿ | ಪ್ರಭು-ಹಬು | ಶ್ರೋಣಿ-ಸೋಣಿ |
| ದ್ರೋಹ-ದೋಹ | ಪ್ರಸರ-ಪಸರ | |

~~~~~~~~~~~~~~~~

೧. ಬಬ್ಬರ = ನಾರುವ ಬೇಳೆ; ಬೊಬ್ಬುಲಿ, ಒಂದು ದೇಶ. ೨. ಸೀಸಕ = ತಲೆಯ ಟೌಳಿ
೩. ಬೆಱಟಿಯೊ. ೪. ದೋಣ = ನಾಗೊಳಗ, ದ್ರೋಣಾಚಾರ್ಯ
~~~~~~~~~~~~~~~~

ಸುತ್ತಿದ ರೇಫೆ ದಡ್ಡಕ್ಕರಮಾದುದರ್ಕೆ -

| | | |
|---|---|---|
| ಚಕ್ರಪಕ್ಷಿ-ಜಕ್ಕವಕ್ಕಿ | ನಿದ್ರಾ-ನಿದ್ದೆ | ವ್ಯಾಘ್ರ-ಬಗ್ಗ |
| ಚಿತ್ರಾಕಾರ-ಚಿತ್ತಾಗಾರ | ನೇತ್ರ-ನೆತ್ತ | ವೇತ್ರ-ಬೆತ್ತ |
| ಛತ್ರಿಕಾ-ಸತ್ತಿಗೆ | ಪುತ್ರಿಕಾ-ಪುತ್ತಿಗೆ | ಸೂತ್ರಿಕಾ-ಸುತ್ತಿಗೆ |
| ತೀವ್ರ-ತಿಬ್ಬ | ಮುದ್ರಿಕಾ-ಮುದ್ದಿಗೆ | |

**ಸೂತ್ರಂ ॥ ದ್ವಿತ್ವಂ ಬೆರಸಿದ ಕತ್ವಂ ।**
**ಚತ್ವಂ ಖತ್ವಂ ಯಥಾಪ್ರಯೋಗದಿನಕ್ಕುಂ ॥**
**ಕ್ಷತ್ವಕ್ಕೆ ಬಹುಳದಿಂದಂ**
**ಸತ್ವಂ ಕತ್ವಂ ದ್ವಿರುಕ್ತಿಯಿಲ್ಲದೆಎಡೆಯೊಳ್ ॥ ೨೬೨ ॥**

ವೃತ್ತಿ - ಕ್ಷಕಾರಕ್ಕೆ ದ್ವಿತ್ವಂ ಬೆರಸಿದ ಕಕಾರಮುಂ ಚಕಾರಮುಂ ಖಕಾರಮುಂ ಪ್ರಯೋಗಾನುಸಾರಮಾಗಿ ಬಹುಳದಿನಕ್ಕುಂ; ಆ ಕ್ಷಕಾರಕ್ಕೆ ಸಕಾರಮೊರ್ಮೆ ಘಟಿಯಿಸುಗುಂ; ದ್ವಿತ್ವಮಿಲ್ಲದ ಕಕಾರಮುಂ ಕ್ಷಕಾರಕ್ಕೆ ಕಿಱುದೆಡೆಯೊಳಕ್ಕುಂ.

**ಪ್ರಯೋಗಂ -**

ಕ್ಷಕಾರಕ್ಕೆ ದ್ವಿತ್ವದ ಕಕಾರಂ -

ಅಕ್ಷರ-ಅಕ್ಕರ; ಪಕ್ಷ-ಪಕ್ಕ; ಪ್ರೇಕ್ಷಣ-ಪೆಕ್ಕಣ; ಭಿಕ್ಷೆ-ಬಿಕ್ಕೆ; ರಕ್ಷಾ-ರಕ್ಕೆ; ಲಕ್ಷ-ಲಕ್ಕ; ಲಕ್ಷಣ-ಲಕ್ಕಣ; ಸಾಕ್ಷಿ-ಸಕ್ಕಿ.

ದ್ವಿತ್ವದ ಚಕಾರಕ್ಕೆ -

ಅಕ್ಷ-ಅಚ್ಚು; ಅಕ್ಷಿ-ಅಚ್ಚಿ; ಕಕ್ಷ-ಕಚ್ಚ; ಭಿಕ್ಷು-ಬಿಚ್ಚು; ಮಕ್ಷಿ-ಮಚ್ಚು.

ದ್ವಿತ್ವದ ಖಕಾರಕ್ಕೆ -

ಪ್ರಕ್ಷಾಲ-ಪಖ್ಖಾಳ, ಪಖ್ಖಳ.

ಬಹುಳದಿಂ ಣಕಾರಮಿಶ್ರಮಪ್ಪ ಕ್ಷಕಾರಕ್ಕಂ ದ್ವಿತ್ವದ ಕಕಾರಂ -

ತೀಕ್ಷ್ಣ-ತಿಕ್ಕ.

ಸಕಾರಕ್ಕೆ

ಕ್ಷಪಣ-ಸವಣ; ಕ್ಷೇಮ-ಸೇಮ.

ಅದ್ವಿತ್ವದ ಕಕಾರಕ್ಕೆ - ದೀಕ್ಷಾ-ದೀಕೆ; ಪರೀಕ್ಷಾ-ಪರಿಕೆ; ಭೈಕ್ಷ-ಬೈಕ; ಕ್ಷಾರ-ಕಾರ; ಕ್ಷೀರ-ಕೀರ; ಕ್ಷೇಪಣ-ಕೇವಣ[೧].

**ಸೂತ್ರಂ ॥ ಪಡೆಗುಂ ಮತ್ವಂ ವತ್ವಮ ।**
**ನಡಸಿದ ಚತ್ವಕ್ಕೆ ಸತ್ವ ದತ್ವಂ ಶ ಷ ತಂ ॥**
**ಪಡೆಗುಂ [೨]ಚಕಾರಮಂ ತಾಂ ।**
**ಪಡೆಗುಂ ಬಹುಳದೆ ಹಕಾರದೆಡೆಯಂ ಯಗಣಂ ॥ ೨೬೩ ॥**

---

೧. ಕೇವಣ = ನೂಂಕುವುದು. ೨. (ಚತ್ವಮನೆತ್ತಂ.)

ವೃತ್ತಿ - ಪರದೊಳಗಣ ಮಕಾರಂ ವಕಾರಮಕ್ಕುಂ; ಚಕಾರಕ್ಕೆ ಸಕಾರಮುಂ ದಕಾರಮುಮಕ್ಕುಂ; ಶ ಷ ತಂಗಳ್ಗೆ ಚಕಾರಮಕ್ಕುಂ; ಹಕಾರಂ ಬಹುಳದಿಂ ಯಕಾರಮುಂ ಗಕಾರಮುಂ ಣಕಾರಮುಮಕ್ಕುಂ.

ಪ್ರಯೋಗಂ -

ಮಕಾರಕ್ಕೆ ವಕಾರಂ -

| | | |
|---|---|---|
| ಅಮರೀ-ಅವರಿ | ಜೀಮನ-ಜೀವಣ | ರೋಮ-ರೋವ |
| ಕ್ರಮ-ಕವ | ಡಮರುಕ-ಡವರುಗ | ಶ್ರಮ-ಸವ |
| ಕುಂಕುಮ-ಕುಂಕುವ | ಭೀಮ-ಬೀವ | ಸಂಗಮ-ಸಂಗವ |
| ಗ್ರಾಮ-ಗಾವ | ಭೂಮಿ-ಬೂವಿ | ಹಿಮ-ಹಿವ |
| ಚಾಮುಂಡೀ-ಚಾವುಂಡಿ | ಯಮಳ-ಜವಳ | |

ಚಕಾರಕ್ಕೆ ಸಕಾರಂ -

ಕ್ರಕಚ-ಕರಗಸ; ಚರ್ಮಕಾರ-ಸಮ್ಮಗಾಱ; ಚೀರ-ಸೀರೆ; ಚೂರ್ಣ-ಸುಣ್ಣ; ಚೇಲ-ಸೇಲೆ; ಮರಿಚ-ಮೆಳಸು.

ಚಕಾರಕ್ಕೆ ದತ್ವಂ -

ಉಚ್ಚ-ಉದ್ದ.

ಶತ್ವಕ್ಕೆ ಚತ್ವಂ -

ನಿಶ್ಚಲ-ನಿಚ್ಚಲ; ನಿಶ್ಚಿಂತ-ನಿಚ್ಚಿಂತ; ವಂಶ-ಬಂಚ; ಶಷ್ಕುಲಿ-ಚಕ್ಕುಲಿ; ಶಿಖರಿ-ಚಿಕರಿ; ಶಿಲ್ಪಿಕ-ಚಿಪ್ಪಿಗ.

ಷತ್ವಕ್ಕೆ ಚತ್ವಂ -

ಷಷ್ಠಿ - ಚಟ್ಟಿ.

ಬಹುಳದಿಂ ಸತ್ವಕ್ಕೆ ಚತ್ವಂ - ಅಪ್ಸರಸ್-ಅಚ್ಚರಿಸಿ; ಕಾಂಸ್ಯ-ಕಂಚು; ತುಳಸಿ-ತೊಳಚಿ; ಹಂಸ-ಅಂಚೆ.

ತಕಾರಕ್ಕೆ ಚತ್ವಂ - ನರ್ತಕಿ-ನಚ್ಚಣಿ; ನಿತ್ಯಂ-ನಿಚ್ಚ; ವತ್ಸಳಾ-ಬಚ್ಚಳೆ, ಬಚ್ಚಣೆ.

ಹಕಾರಕ್ಕೆ ಯಕಾರಂ - ಕುಹಕ-ಕೊಯಕ.

ಹಕಾರಕ್ಕೆ ಗಕಾರಂ ಸಿಂಹ-ಸಿಂಗ; ಪಡಹು-ಪಡಗು.

ಹಕಾರಕ್ಕೆ ಣಕಾರಂ - ಸನ್ನಾಹ-ಸನ್ನಣ[೧].

ಸೂತ್ರಂ ॥ ತಳೆಗುಂ ಮೇಲಣ ಕ ಸ ಷಂ ।
ತಳದ ಕಕಾರಸ್ವರೂಪಮಂ ಮೇಗೆ ತಗು ॥
ಳ್ದೆಳಸಿದ ಹಕಾರಮುಂ ತಳ ।
ದೊಳಿರ್ದ ಮ ನಕಾರ ರೂಪಮಂ ಧರಿಯಿಸುಗುಂ ॥ ೨೬೪ ॥

~~~~~~~~~~~~~~~~

೧. ಸನ್ನಣ = ದಗಲೆ
~~~~~~~~~~~~~~~~

ವೃತ್ತಿ - ಮೇಲಿರ್ದ ಕ ಸ ಪಾಕ್ಷರಂಗಳ್ ಕೆಳಗಣ ತಕಾರರೂಪಮಾಗಿ ಪರಿಣಮಿಸುಗುಂ; ಮೇಲಣ ಹಕಾರಮುಂ ಕೆಳಗಣ ಮಕಾರ ನಕಾರಮಾಗಿ ಪರಿಣಮಿಸುಗುಂ.

ಪ್ರಯೋಗಂ -

ಮೇಲಣ ಕಕಾರಕ್ಕೆ ತಕಾರಂ -
ಯುಕ್ತಿ-ಜುತ್ತಿ, ಜುಗುತಿ, ಜುಕುತಿ; ಶುಕ್ತಿ-ಸುತ್ತಿ.
ಮೇಲಣ ಸಕಾರಕ್ಕೆ ತಕಾರಂ -
ಕಸ್ತೂರಿ-ಕತ್ತುರಿ; ಕುಸ್ತುಂಬುರು-ಕೊತ್ತುಂಬರಿ; ಪುಸ್ತಕ-ಹೊತ್ತಗೆ; ವಿಸ್ತಾರ-ಬಿತ್ತರ.
ಮೇಲಣ ಪಕಾರಕ್ಕೆ ತಕಾರಂ -
ಗುಪ್ತ-ಗುತ್ತ; ಸಪ್ತಮಿ-ಸತ್ತಮಿ.
ಮೇಲಣ ಹತ್ವಕ್ಕೆ ಮಕಾರಂ - ಬ್ರಹ್ಮ-ಬೊಮ್ಮ.
ಮೇಲಣ ಹತ್ವಕ್ಕೆ ನತ್ವಂ - ಚಿಹ್ನ-ಚಿನ್ನ.

**ಸೂತ್ರಂ ॥ ತಳದ ಮ ಕಾಕ್ಷರರೂಪಂ ।**
**[1]ಗಳಿಯಿಪುದಗ್ರದ ಷಕಾರಮಗ್ರ ತಕಾರಂ ॥**
**ತಳದ ಪ ಫ ನಮೆ ದಲಕ್ಕುಂ ।**
**ತಳದ ನ ಮಾಕ್ಷರಮೆಯಕ್ಕುಮಗ್ರದ ನ ಣಮುಂ ॥ ೨೬೫॥**

ವೃತ್ತಿ - ಮೇಲಣ ಷತ್ವಂ ತಳದ ಮತ್ವ ಕತ್ವಂಗಳಕ್ಕುಂ: ಮೇಲಣ ತತ್ವಂ ಕೆಳಗಣ ಪ ಫ ನಂಗಳಕ್ಕುಂ; ಮೇಲಣ ಣಕಾರ ನಕಾರಂಗಳ್ ಕೆಳಗಣ ನತ್ವಂ ಮತ್ವಂಗಳಕ್ಕುಂ.

ಪ್ರಯೋಗಂ -

ಮೇಲಣ ಷತ್ವಕ್ಕೆ ಮತ್ವಂ -
ಊಷ್ಮನ್-ಉಮ್ಮೆ.
ಮೇಲಣ ಷತ್ವಕ್ಕೆ ಕತ್ವಂ -
ಪುಷ್ಕರಣೀ-ಹೊಕ್ಕರಣೆ; ಮಷ್ಕರಿ-ಮಕ್ಕರಿ; ವಿಷ್ಕಿರ-ವಿಕ್ಕಿರ[2].
ಮೇಲಣ ತತ್ವಕ್ಕೆ ಪತ್ವಂ -
ಉತ್ಪಟ-ಉಪ್ಪಡ.
ಮೇಲಣ ತತ್ವಕ್ಕೆ ಫತ್ವಂ -
ಸತ್ಫಲ-ಸಪ್ಫಳ.
ಮೇಲಣ ತತ್ವಕ್ಕೆ ನತ್ವಂ -
ರತ್ನ-ರನ್ನ.
ಮೇಲಣ ಣತ್ವಕ್ಕೆ ನತ್ವಂ - ಕರ್ಣ-ಕನ್ನ; ಕರ್ಣಾಟಕ-ಕನ್ನಡ; ಜೀರ್ಣ-ಜಿನ್ನ.
ಮೇಲಣ ನತ್ವಕ್ಕೆ ಮತ್ವಂ - ಉನ್ಮತ್ತ-ಉಮ್ಮತ್ತ.

~~~~~~~~~~~~~~~~~

೧. (ಘಳಿಯಿಪುದಗ್ರದ)     ೨. ವಿಕ್ಕಿರ = ಪಕ್ಷಿ
~~~~~~~~~~~~~~~~~

**ಸೂತ್ರಂ ॥ ಜ ಲ ತದ ಕೆಳಗಣ ವತ್ವಂ ।**
**[1]ನ ಲ ತಪವಾಕ್ಷರದ ಕೆಳಗೆ ಕೂಡಿದ ಯತ್ವಂ ॥**
**ಸಲೆ ಗತ್ವದ ಕೆಳಮ್ಮೆಯೊಳ್ ।**
**ನೆಲಸಿದ ನತ್ವಂ ತದಾಕೃತಿಯನಾಳ್ದಿರ್ಕುಂ ॥ ೨೬೬ ॥**

**ವೃತ್ತಿ** - ಪದಂಗಳೊಳ್ ನೆಲಸಿದ ಜಕಾರ ಲಕಾರ ತಕಾರಂಗಳ ಕೆಳಗಿರ್ದ ವಕಾರಮವಱಿಂತಕ್ಕುಂ; ನಕಾರ ಲಕಾರ ತಕಾರ ಪಕಾರ ವಕಾರಂಗಳ ಕೆಳಗಿರ್ದ ಯಕಾರಮವಱಿಂತಕ್ಕುಂ; ಗತ್ವದ ಕೆಳಗಣ ನತ್ವಂ ಗತ್ವಮೆಯಕ್ಕುಂ.

**ಪ್ರಯೋಗಂ -**

ವತ್ವಕ್ಕೆ ಜತ್ವಂ -
ಉಜ್ಜ್ವಲ-ಉಜ್ಜಳ; ಪ್ರಜ್ವಲ-ಪಜ್ಜಳ.
ವತ್ವಕ್ಕೆ ಲತ್ವಂ -
ಬಿಲ್ವಪತ್ರ-ಬೆಲ್ಲವತ್ತ.
ವತ್ವಕ್ಕೆ ತತ್ವಂ -
ಸತ್ವಕ-ಸುತ್ತುಗ.
ಯತ್ವಕ್ಕೆ ನತ್ವಂ -
ಅನ್ಯಾಯ-ಅನ್ನೆಯ; ಕನ್ಯಕಾ-ಕನ್ನಿಕೆ; ಮನ್ಯಾಳಿ-ಮನ್ನಳಿ.
ಯತ್ವಕ್ಕೆ ಲತ್ವಂ -
ಪಲ್ಯಯನ-ಹಲ್ಲಣ.
ಯತ್ವಕ್ಕೆ ತತ್ವಂ -
ಮೃತ್ಯು-ಮಿತ್ತು, ಮಿಟ್ಟು.
ಯತ್ವಕ್ಕೆ ಪತ್ವಂ -
ಲೇಪ್ಯ-ಲೆಪ್ಪ.
ಯತ್ವಕ್ಕೆ ಬತ್ವಂ -
ಕಾವ್ಯ-ಕಬ್ಬ.
ನತ್ವಕ್ಕೆ ಗತ್ವಂ -
ಅಗ್ನಿ-ಅಗ್ಗಿ; ಲಾಗ್ನಿಕ-ಲಗ್ಗಿಕ, ಲಗ್ಗಿಗ.

ಮೃದ್ವೀಕಾ-ಮುದ್ದಿಗೆಯಾದಂತೆ ಕೆಳಗಣಕ್ಕರಮೆ ಮೇಲಣದಪ್ಪುದರ್ಕೆ ಕೆಲವಂ ಪ್ರಯೋಗವಶದಿನಱಿವುದು.

**ಸೂತ್ರಂ ॥ ವ ರ ಜ ಯ ತ ಡ ವರ್ಣಮನಾ ।**
**ಚರಿಪುದು ತಾಂ ಬೇಱೆ ವೇಱೆ ಪದಚಯದೊಳ್ ಸಂ ॥**
**ಚರಿಪ ದಕಾರಕ್ಕಾದಂ ।**
**ದೊರೆಕೊಳ್ಗುಂ ಕೆಲವು ಶಬ್ದದಾದಿಗೆ ದೀರ್ಘಂ ॥ ೨೬೭ ॥**

~~~~~~~~~~~~~~~~

೧. (ನಲತವಪಾಕ್ಷರದ)
~~~~~~~~~~~~~~~~

ವೃತ್ತಿ - ಪದಂಗಳೊಳ್ ನೆಲಸಿದ ದತ್ವಕ್ಕೆ ವತ್ವಮುಂ ರೇಫೆಯುಂ ಜತ್ವಮುಂ ಯತ್ವಮುಂ ತತ್ವಮುಂ ಡತ್ವಮುಮಾದೇಶಮಕ್ಕುಂ; ಕೆಲವು ಶಬ್ದಂಗಳಾದಿಗೆ ದೀರ್ಘಮಕ್ಕುಂ.

ಪ್ರಯೋಗಂ -

ದಕಾರಕ್ಕೆ ವತ್ವಂ - ಪಾದುಕ-ಹಾವುಗೆ.

ದಕಾರಕ್ಕೆ ರೇಫಂ -

ಕದಂಬ - ಕರಂಬ[೧].

ದತ್ವಕ್ಕೆ ಜತ್ವಂ -

ಗದಾ-ಗಜೆ; ದಂತ-ಜಂತ.

ದತ್ವಕ್ಕೆ ಯತ್ವಂ -

ಪದ-ಪಯ; ಮದನ-ಮಯಣ; ಯಶೋದಾ-ಜಸೋಯೆ.

ದತ್ವಕ್ಕೆ ತತ್ವಂ -

ದರ್ದುರ-ತರ್ದುರ.

ದತ್ವಕ್ಕೆ ಡತ್ವಂ -

[ಪದಢಕ್ಕೆ-ಪಡಡಕ್ಕೆ]; ವಿಚ್ಛಂದ-ಬಿಚ್ಚಂಡ.

ಪದದಾದಿಯ ದೀರ್ಘಕ್ಕೆ -

ಅಮರ-ಆವರೆ; ಕಹಳ-ಕಾಳೆ; ಗಹನ-ಗಾನ; ದಂಷ್ಟ್ರಾ-ದಾಡೆ; ದ್ವಿಪಟ್ಟಿಕಾ-ದೂವಟ್ಟಿಗೆ; ದ್ವಿಹಸ್ತಿ-ದೂಹಸ್ತಿ; ನವಮಿ-ನಾಮಿ.

**ಸೂತ್ರಂ ॥ ಪದದಾದಿಯ ಋತ್ವಕ್ಕಿ ।**
**ತ್ವದೆತ್ವದತ್ವದ ವಿಧಾನಮುತ್ವಂ ಬಹುಳಂ ॥**
**ಪುದಿದಿರ್ಕುಮಮೃತಶಬ್ದಾಂ ।**
**ತದಲ್ಲಿಯುಂ ಬ್ರಹ್ಮ ಶಬ್ದದಂತಿರೆ ರೇಫಂ ॥ ೨೬೮ ॥**

ವೃತ್ತಿ - ಪದದ ಮೊದಲ ಋತ್ವಕ್ಕೆ ಇತ್ವಮುಂ ಎತ್ವಮುಂ ಅತ್ವಮುಂ ಬಹುಳದಿನುತ್ವಮುಮಕ್ಕುಂ; ಬ್ರಹ್ಮಶಬ್ದದಂತಮೃತಶಬ್ದದ ಕಡೆಗಂ ರೇಫಂ.

ಪ್ರಯೋಗಂ -

ಋತ್ವಕ್ಕಿತ್ವಂ -

| | | |
|---|---|---|
| ಋಜು-ರಿಜು | ಬೃಂದ-ಬಿಂದ | ವೃತ್ತಿ-ವಿತ್ತಿ |
| ಋಣ-ರಿಣ | ಭೃಂಗ-ಬಿಂಗ | ವೃಥಾ-ವಿತೆ |
| ಋತು-ರಿತು | ಭೃಂಗಾರ-ಬಿಂಗಾರ | ವೃದ್ಧಿ-ವಿದ್ದಿ |
| ಋಷಿ-ರಿಸಿ | ಮೃಗ-ಮಿಗ | ಶೃಂಗಾರ-ಸಿಂಗಾರ |
| ತೃಣ-ತಿಣ | ಮೃತ-ಮಿತ | ಶೃಂಗಿ-ಸಿಂಗಿ |

~~~~~~~~~~~~~~~~~~

೧. ಕರಂಬ = ಹಸುರ ಶಾಕದ ಶಾವು
~~~~~~~~~~~~~~~~~~

ಋತ್ವಕ್ಕೆತ್ವಂ -

ಹೃದಯ-ಹೆದೆಯ; ಹೃಷ್ಟ-ಹೆಟ್ಟ.

ಋತ್ವಕ್ಕತ್ವಂ -

ಕೃತಕಿ-ಗದಕಿ; ವೃಷಭ-ಬಸವ; ಶೃಂಖಲಾ-ಸಂಕಲೆ.

ಬಹುಳದಿಂ ಪದಮಧ್ಯದ ಋತ್ವಕ್ಕಮತ್ವಂ-

ಅಮೃತ-ಅಮರ್ದು; ಪ್ರಾಕೃತ-ಪಾಗದ; ಸಂಸ್ಕೃತ-ಸಕ್ಕದ.

ಪದದಾದಿಯ ಋತ್ವಕ್ಕುತ್ವಂ -

ಮೃದ್ವೀಕಾ-ಮುದ್ದಿಗೆ.

ಬ್ರಹ್ಮಶಬ್ದದಂತಮೃತಶಬ್ದದ ಕಡೆಗಂ ರೇಫಂ -

ಬ್ರಹ್ಮ-ಬರ್ಮ್ಮ; ಅಮೃತ-ಅಮರ್ದು.

**ಸೂತ್ರಂ ॥ ಆದಿಯೊಳಿರ್ದತ್ವಕ್ಕು ।**
**ತ್ವಾದೇಶಮುಮಿತ್ವವೃತ್ತಿಯುಂ ಹತ್ವಮುಮಾ ॥**
**ಪಾದಿತಮಕ್ಕುಂ ಜ್ಞತ್ವ ।**
**ಕ್ಕಾದಿಯನುೞಿದು ನ್ನನಕ್ಕುಮದು ಬಹುಳತೆಯಿಂ ॥ ೨೬೯ ॥**

ವೃತ್ತಿ - ಪದದಾದಿಯ ಅಕಾರಕ್ಕುಕಾರಮುಮಿಕಾರಮುಂ ಹಕಾರಮುಮಕ್ಕುಂ; ಆದಿಯಂ ಕಳೆದುೞಿದ ಜ್ಞತ್ವಕ್ಕೆ ದ್ವಿತ್ವದ ನಕಾರಂ ಬಹುಳದಿನಕ್ಕುಂ.

ಪ್ರಯೋಗಂ -

ಅತ್ವಕ್ಕುತ್ವಂ -

ಅಂಗುಷ್ಠ-ಉಂಗುಟ; ತ್ವರಿತ-ತುರಿಹ.

ಅತ್ವಕ್ಕಿತ್ವಂ -

ಅಂಗಾರ-ಇಂಗಳ; ಜಳೂಕ-ಜಿಗುಳೆ.

ಅತ್ವಕ್ಕೆ ಹತ್ವಂ -

ಅಗ್ನಿ-ಹಗ್ಗಿ.

ಜ್ಞಕಾರಕ್ಕೆ ದ್ವಿತ್ವ ನಕಾರಂ -

ಯಜ್ಞ-ಜನ್ನ; ವಿಜ್ಞಾನ-ಬಿನ್ನಣ; ವಿಜ್ಞಾಪನ-ಬಿನ್ನಪ; ಸಂಜ್ಞಾ-ಸನ್ನೆ.

ಬಹುಳಮೆಂಬುದಱಿಂದೆ ಆಜ್ಞೆಗೆ ಆಣತಿ ಎಂದುಂಟು.

**ಸೂತ್ರಂ ॥ ಪದದಾದಿಯುವರ್ಣಕ್ಕೌ ।**
**ತ್ವದತ್ವದೆಡೆಗೊತ್ವಮುಂ ಪೊದೞ್ದೋತ್ವಮುಮ ॥**
**ಪ್ಪುದು ವೈಕಲ್ಪಿಕದಿಂ ಶ ।**
**ಬ್ದದಾದಿ ದೀರ್ಘಕ್ಕೆ ಪಿರಿದುಮಕ್ಕುಂ ಹ್ರಸ್ವಂ ॥ ೨೭೦ ॥**

ವೃತ್ತಿ - ವಿಕಲ್ಪದಿಂ ಪದದಾದಿಯ ಉ ಊ ಎಂಬಿವರ್ಕಂ ಔಕಾರಕ್ಕಂ ಅಕಾರಕ್ಕಂ ಹ್ರಸ್ವೋತ್ವಮುಂ ದೀರ್ಘೋತ್ವಮುಂ ಅಕ್ಕುಂ; ಪದಂಗಳ ಮೊದಲ ದೀರ್ಘಕ್ಕೆ ಪಿರಿದುಂ ಹ್ರಸ್ವಮಕ್ಕುಂ.

**ಪ್ರಯೋಗಂ -**

ಉಕಾರಕ್ಕೆ ಒತ್ವಂ -

| | | |
|---|---|---|
| ಉಷ್ಟ್ರ-ಒಟ್ಟೆ, ಒಂಟೆ | ತುವರಿ-ತೊವರಿ | ಸುಧಾ-ಸೊದೆ |
| ಕುಂಡ-ಕೊಂಡ | ಪುಸ್ತಕ-ಪೊತ್ತಗೆ | ಸುಭಗ-ಸೊಬಗ |
| ಕುಂತ-ಕೊಂತ | ಭುಜಂಗ-ಬೊಜಂಗ | |
| ತುಲಸಿ-ತೊಳಸಿ, | ಮುಖ-ಮೊಗ | |
| ತೊಳಚಿ | ಸುಖ-ಸೊಕ, ಸೊಗ | |

ಉಕಾರಕ್ಕೆ ಓತ್ವಂ -

ಕುಕ್ಕುಟ-ಕೋೞಿ; ಕುರಂಟ-ಗೋರಟೆ; ಸುವಾಸಿನಿ-ಸೋವಾಸಿಣಿ, ಸೋವಾಸಿನಿ.

ಊಕಾರಕ್ಕೆ ಓತ್ವಂ -

ಕೂಟ - ಕೋಡು; ಮೂಢ - ಮೋಡ

ಔಕಾರಕ್ಕೆ ಒತ್ವಂ -

ಕ್ರೌಂಚ - ಕೊಂಚೆ; ಸೌರಾಷ್ಟ್ರ - ಸೊರಟ.

ಔಕಾರಕ್ಕೆ ಓತ್ವಂ -

ಕೌಪೀನ - ಕೋವಣ.

ಅಕಾರಕ್ಕೆ ಒತ್ವಂ -

ಸ್ವರ್ಣ - ಸೊನ್ನೆ.

ಅಕಾರಕ್ಕೆ ಓತ್ವಂ -

ಮಯೂರ - ಮೋರ.

ಆದಿ ದೀರ್ಘಕ್ಕೆ ಹ್ರಸ್ವಂ -

| | | |
|---|---|---|
| ಆರ್ಯ-ಅಜ್ಜ | ಗೂರ್ಜರ-ಗುಜ್ಜರ | ರಾಕ್ಷಸ-ರಕ್ಕಸ |
| ಕಾರ್ಯ-ಕಜ್ಜ | ತಾತ-ತಂದ್ಯೆ | ಲಾಗ್ನಿಕ-ಲಗ್ಗಿಕ, ಲಗ್ಗಿಗ |
| ಕಾಂಚಿ-ಕಂಚಿ | ತೀಕ್ಷ್ಣ-ತಿಕ್ಕ | ವ್ಯಾಘ್ರ-ಬಗ್ಗ |
| ಕಾಂಜಿ-ಗಂಜಿ | ಪೂರ್ವ-ಹುಬ್ಬೆ | ಸಾಕ್ಷಿ-ಸಕ್ಕಿ |
| ಕಾಂಡಪಟ-ಕಂಡಪಟ | ಪ್ರೇಕ್ಷಣ-ಪೆಕ್ಕಣ | ಸೂತ್ರಿಕಾ-ಸುತ್ತಿಗೆ |

**ಸೂತ್ರಂ ॥ ಅಕ್ಕುಮೆವರ್ಣಂ ಭಾವಿಸೆ ।**
**ತಕ್ಕಂತೆ ಪದಾದಿಯಿತ್ವದತ್ವದ ಸಂಸ್ಥಾ ॥**
**ನಕ್ಕಂ ಮತ್ತೈತ್ವಕ್ಕಂ ।**
**ಮಿಕ್ಕಾದಿ ಹಕಾರಮಸ್ವರದೆ ಲೋಪಿಸುಗುಂ ॥ ೨೭೧ ॥**

ವೃತ್ತಿ - ಎ ಏ ಎಂಬಕ್ಕರಂಗಳ್ ಪದಾದಿಯ ಇಕಾರಕ್ಕಮಕಾರಕ್ಕಮೈಕಾರಕ್ಕಮಕ್ಕುಂ; ಪದಾದಿಯ ಹಕಾರಂ ಸ್ವರರಹಿತವಾಗಿ ಲೋಪಮಕ್ಕುಂ.

ಪ್ರಯೋಗಂ -

ಇಕಾರಕ್ಕೆ ಎತ್ವಂ -

ಇಳಾ - ಎಳೆ; ದಿವಸ - ದೆವಸ; ದಿಶಾ - ದೆಸೆ; ಬಿಲ್ವಪತ್ರ - ಬೆಲ್ಲವತ್ತ; ವಿನಾಯಕ - ಬೆನಕ; ಶಿಲಾ - ಸೆಲೆ; ಸಿಂದೂರ - ಸೆಂದುರ.

ಇಕಾರಕ್ಕೆ ಏತ್ವಂ -

ನಿಯಮ-ನೇಮ.

ಅ ಆಕಾರಂಗಳ್ಗೆ ಎತ್ವಂ -

ವ್ಯತಿರೇಕ - ಬೆತಿರೇಕ, ವೆತಿರೇಕ; ವ್ಯಂಜನ - ಬೆಂಜನ; ಜಟಾ - ಜೆಡೆ; ವ್ಯಥಾ - ಬೆತೆ, ವೆತೆ; ಶಯ್ಯಾ - ಸೆಜ್ಜೆ.

ಅಕಾರಕ್ಕೆ ಏತ್ವಂ -

ವ್ಯವಹಾರ - ಬೇಹಾರ, ಬೇಹರ.

ಐಕಾರಕ್ಕೆ ಎತ್ವಂ -

ತೈಲಿಕ - ತೆಲ್ಲಿಗ; ವೈದ್ಯ - ಬೆಜ್ಜ; ಸೈಂಧವ - ಸೆಂದವ.

ಐಕಾರಕ್ಕೆ ಏತ್ವಂ -

ವೈರ - ಬೇರ; ವೈಶಾಖ - ಬೇಸಗೆ.

ತಕ್ಕಂತೆ ಎಂಬ ಪರಿಮಿತವಚನದಿಂದಿತ್ವಕ್ಕಮತ್ವಕ್ಕಮೈತ್ವಕ್ಕಂ ಎವರ್ಣಂ ಕೆಲವಱೊಳಿಲ್ಲ.

ಇತ್ವಕ್ಕೆ -

ನಿಮಿಷ - ನಿಮಿಸ; ನಿಶಾ - ನಿಸಿ; ವಿಷ - ಬಿಸ.

ಅತ್ವಕ್ಕಮಂತೆ -

ಅಂಕುಶ - ಅಂಕುಸ; ಕಂಠಿಕಾ - ಕಂಟಿಕೆ, ಕಂಟಿಗೆ; ಖಂಕರಿ - ಕಂಕರಿ.

ಐತ್ವಕ್ಕಮಂತೆ -

ಭೈಕ್ಷ - ಬೈಕ; ಭೈರವ - ಬೈರವ; ಶೈವ - ಸೈವ.

ಅಸ್ವರಹಕಾರ ಲೋಪಕ್ಕೆ -

ಹಂಸ - ಅಂಚೆ; ಹಿಂಗು - ಇಂಗು; ಹಿಂಗುಲಿಕ - ಇಂಗುಲಿಕ.

**ಸೂತ್ರಂ ॥ ಅಕ್ಕುಂ ಸ್ಪರ್ಶ ಸ್ಫಟಿಕ**
**ಸ್ಫಿಕ್ಕಾ ಸ್ಫೋಟಕದೊಳಂ ಸ್ತುತಿ ಸ್ತಿಮಿತ ಸ್ತೋ ॥**
**ಮಕ್ಕಿರ್ದ ಪದಾದಿ ಸಕಾ।**
**ರಕ್ಕಂ ಲೋಪಂ ಶ್ಮಶಾನದಾ ಶತ್ವಕ್ಕಂ ॥ ೨೭೨ ॥**

ವೃತ್ತಿ - ಈ ಪೇೞಲ್ಪಟ್ಟ ಶಬ್ದಂಗಳ ಸಕಾರಕ್ಕಂ ಶ್ಮಶಾನಶಬ್ದದ ಶಕಾರಕ್ಕಂ ಲೋಪಮಕ್ಕುಂ.

ಪ್ರಯೋಗಂ -

ಸ್ಪರ್ಶ - ಪರುಸ; ಸ್ಫಟಿಕ - ಪಳಿಕು; ಸ್ಫಿಕ್ಕಾ - ಹೆಕ್ಕೆ, ಹಿಕ್ಕೆ; ಸ್ಫೋಟಕ- ಹೋಳಿಗೆ; ಸ್ತುತಿ - ತುತಿ; ಸ್ತಿಮಿತ - ತಿಮಿತ; ಸ್ತೋಮ - ತೋಮ; ಶ್ಮಶಾನ- ಮಸಣ.

**ಸೂತ್ರಂ ॥ ಪದಮಧ್ಯದ ದೀರ್ಘಕ್ಕ ।**
**ಪ್ಪುದು ಪೀನಂ ಹ್ರಸ್ವಮೋತ್ವಮಾದಂದುತ್ವಂ ॥**
**ಪುದಿದುತ್ವಕ್ಕಿತ್ವಮುಮ ।**
**ತ್ವದ ಮೆಯ್ಯುಮದತ್ವದಲ್ಲಿಗಿತ್ವಾದೇಶಂ ॥ ೨೭೩ ॥**

**ವೃತ್ತಿ** - ಪದಮಧ್ಯದ ದೀರ್ಘಕ್ಕೆ ಪಿರಿದುಂ ಹ್ರಸ್ವಮಕ್ಕುಂ; ಪದಮಧ್ಯದೋತ್ವಕ್ಕುತ್ವಮಕ್ಕುಂ; ಪದಮಧ್ಯದುತ್ವಕ್ಕಿತ್ವಮುಮತ್ವಮುಮಕ್ಕುಂ; ಪದಮಧ್ಯದತ್ವಕ್ಕಿತ್ವಮಕ್ಕುಂ.

**ಪ್ರಯೋಗಂ** -

ದೀರ್ಘಕ್ಕೆ ಹ್ರಸ್ವಂ -

| | | |
|---|---|---|
| ಅಯೋಗ್ರ-ಅಯೊಗ | ತಾಂಬೂಲ-ತಂಬುಲ | ಬರ್ಬೂರ-ಬರ್ಬುಲ |
| ಆಕಾಶ-ಆಗಸ | ತೃತೀಯಾ-ತದಿಗೆ | ಬೊಬ್ಬುಲಿ, ಬಬ್ಬುಲಿ |
| ಆರಾಮ-ಆರವೆ | ದ್ವಿತೀಯಾ-ಬಿದಿಗೆ | ವಿಲಾಸ-ವಿಲಸ |
| ಕೂರ್ಪಾಸ-ಕುಪ್ಪಸ | ದುಕೂಲ-ದುಗುಲ | ಶಲಾಕಾ-ಸಲಗೆ |
| ಗೋಧೂಮ-ಗೋದುವೆ | ಪ್ರಯಾಣ-ಪಯಣ | ಶ್ಮಶಾನ-ಮಸಣ |
| ಗೋಪಾಳ-ಗೋವಳ | ಬಂಧೂಕ-ಬಂದುಗೆ | ಸನ್ನಾಹ-ಸನ್ನಣ |

ಓತ್ವಕ್ಕುತ್ವಂ -

ಅಶೋಕ - ಅಸುಗೆ; ಉದ್ಯೋಗ - ಉಜ್ಜುಗ; ಕಠೋರ - ಕಟುರ

ಉತ್ವಕ್ಕಿತ್ವಂ -

ಆಯುಷ್ಯ - ಆಯಿಸ.

ಉತ್ವಕ್ಕತ್ವಂ -

ಕುರುಂಟ - ಗೋರಟೆ, ಗೋರಣ್ಟೆ; ಮಾನುಷ - ಮಾನಸ.

ಅತ್ವಕ್ಕಿತ್ವಂ -

ಕನ್ಯಕಾ - ಕನ್ನಿಕೆ.

**ಸೂತ್ರಂ ॥ ಪದಮಧ್ಯದೇತ್ವದೊಳಮೀ ।**
**ತ್ವದೊಳಂ ತಾನತ್ವಮತ್ವಮಿರ್ದಂದುತ್ವಂ ॥**
**ವಿದಿತಾತ್ವಕ್ಕಕ್ಕುಂ ಹ್ರ ।**
**ಸ್ವದೇತ್ವವಿಧಿ ಬಹುಳವೃತ್ತಿಯಿಂ ಕೆಲವೆಡೆಯೊಳ್ ॥ ೨೭೪ ॥**

**ವೃತ್ತಿ** - ಪದಮಧ್ಯದೇಕಾರದೊಳಮೀಕಾರದೊಳಮತ್ವಮಕ್ಕುಂ; ಪದಮಧ್ಯದತ್ವಕ್ಕುತ್ವಮಕ್ಕುಂ; ಪದಮಧ್ಯದಾತ್ವಕ್ಕೆತ್ವಂ ಬಹುಳದಿನಕ್ಕುಂ.

**ಪ್ರಯೋಗಂ** -

ಏತ್ವಕ್ಕತ್ವಂ -

ಅಲೇಖ - ಅಳಕ.

ಈಕಾರಕ್ಕೆ ಅತ್ವಂ -

ಕೌಪೀನ - ಕೋವಣ; ಮರೀಚ - ಮೆಳಸು.

ಅತ್ವಕ್ಕುತ್ವಂ -

ಸತ್ವಕ - ಸತ್ತುಗ.

ಆತ್ವಕ್ಕೆತ್ವಂ -

ಅನ್ಯಾಯ - ಅನ್ನೆಯ.

ಬಹುಳದಿನೆಂಬುದಱಿಂ -

ರಸಾಯನ - ರಸೆಯನ.

**ಸೂತ್ರಂ ॥ ಅವತರಿಸಿರ್ಕುಂ ಪದ ಮ ।**
**ಧ್ಯ ವರ್ಣದೊಳ್ ಲೋಪವೃತ್ತಿ ಬಹುಳತೆಯಿಂ ತ ॥**
**ದ್ಭವಮಾದಿಯ ಬತ್ವಂ ಭೈ ।**
**ತ್ವವೈತ್ವವಿಧಿಯತ್ವದಾತ್ವದೊಳ್ ದೊರೆಕೊಳ್ಗುಂ ॥ ೨೭೫ ॥**

ವೃತ್ತಿ - ಪದಮಧ್ಯದಕ್ಕರಕ್ಕೆ ಬಹುಳದಿಂ ಲೋಪಮಕ್ಕುಂ; ಪದಾದಿಯ ಬಕಾರಕ್ಕೆ ಐತ್ವಂಬೆರಸಿದ ಭಕಾರಮಕ್ಕುಂ; ಪದಾದಿಯತ್ವಕ್ಕಮಾತ್ವಕ್ಕಮೈತ್ವಮಕ್ಕುಂ.

**ಪ್ರಯೋಗಂ** -

ಪದಮಧ್ಯಲೋಪಕ್ಕೆ -

ಕುಕ್ಕುಟ - ಕೋೞಿ; ಕುಮಾರ - ಕೋರ, ಕುವರ; ಗಹನ - ಗಾನ; ನವಮಿ - ನಾಮಿ; ನಿಯಮ - ನೇಮ; ಮಯೂರ - ಮೋರ; ಸಾಹಸ - ಸಾಸ.

ಬತ್ವದ ಭೈಕಾರಕ್ಕೆ -

ಬಹಿತ್ರ - ಭೈತ್ರ.

ಅತ್ವಕ್ಕೈತ್ವಂ -

ಮಹಿಮ - ಮೈಮೆ; ಮಹಿಷಿ - ಮೈಸಿ.

ಆತ್ವಕ್ಕೈತ್ವಂ -

ವಾಹ್ಯಾಳಿ - ವೈಹಾಳಿ; ಬಹುಳದಿನಿಲ್ಲಿ ಪದಮಧ್ಯಲೋಪಮಿಲ್ಲ.

**ಸೂತ್ರಂ ॥ ಸಮನಿಸುಗುಂ ಗತ್ವಂ ಶ ।**
**ಬ್ದಮಧ್ಯ ಮತ್ವಕ್ಕಮಂತೆ ಳತ್ವಕ್ಕಂ ಕ ॥**
**ತ್ವಮದಿರ್ದೊಡೆ ವತ್ವಂ ಯ ।**
**ತ್ವಮಿಶ್ರ ಧತ್ವಕ್ಕೆ ದತ್ವಮತ್ವಕ್ಕಿತ್ವಂ ॥ ೨೭೬॥**

ವೃತ್ತಿ - ಶಬ್ದಮಧ್ಯದ ಮಕಾರಕ್ಕಂ ಳಕಾರಕ್ಕಂ ಗಕಾರಮಕ್ಕುಂ; ಪದಮಧ್ಯ ಕಕಾರಕ್ಕೆ ವಕಾರಮಕ್ಕುಂ; ಯತ್ವಮಿಶ್ರ ಧಕಾರಕ್ಕೆ ದಕಾರಮಕ್ಕುಂ, ಅದಱತ್ವಕ್ಕಿತ್ವಮಕ್ಕುಂ.

**ಪ್ರಯೋಗಂ** -

ಮಕಾರಕ್ಕೆ ಗಕಾರಂ -

ಯಮುನಾ - ಜಗುನೆ.

ಳಕಾರಕ್ಕೆ ಗಕಾರಂ -

ಜಳೂಕಾ - ಜಿಗುಳೆ.

ಕಕಾರಕ್ಕೆ ವತ್ವಂ -

ಶೀಕರ - ಸೀವರ.

ಯತ್ವಮಿಶ್ರ ಧಕಾರಕ್ಕಿತ್ವಂ ಬೆರಸಿದ ದಕಾರಂ -

ಅಧ್ಯಕ್ಷ - ಅದ್ದಿಕ.

**ಸೂತ್ರಂ ॥ ಪದಮಧ್ಯ ತಕಾರಕ್ಕ**
**ಪುದೊರ್ಮೆ ರೇಫಂ ಟಕಾರಮೊರ್ಮೆ ಗಕಾರಂ ॥**
**ಪುದಿದಿರ್ಕುಮೊರ್ಮೆ ತಾನಂ ।**
**ತ್ಯದೊಳೊಂದಿರೆ ಡತ್ವಮೊರ್ಮೆಯೊರ್ಮೆ ಹಕಾರಂ ॥ ೨೭೭ ॥**

**ವೃತ್ತಿ** - ಪದಮಧ್ಯ ತಕಾರಕ್ಕೊರ್ಮೆ ರೇಫಮುಂ ಟಕಾರಮುಂ ಗಕಾರಮುಮಕ್ಕುಂ; ಪದಾಂತ್ಯ ತಕಾರಕ್ಕೆ ಡಕಾರಮುಂ ಹಕಾರಮುಮಕ್ಕುಂ.

**ಪ್ರಯೋಗಂ** -

ಪದಮಧ್ಯ ತಕಾರದ ರೇಫೆಗೆ -

ಖಾತಿಕಾ - ಕಾರಿಗೆ, ಖಾರಿಗೆ.

ತಕಾರಕ್ಕೆ ಟಕಾರಂ -

ಪತ್ತನ - ಪಟ್ಟಣ.

ತಕಾರಕ್ಕೆ ಗಕಾರಂ -

ಅತಸಿ - ಅಗಸೆ; ಉತ್ಕಟ - ಉಗ್ಗಡ.

ಪದಾಂತ ತಕಾರದ ಡತ್ವಕ್ಕೆ -

ಸಂಘಾತ - ಸಂಗಡ.

ತಕಾರಕ್ಕೆ ಹಕಾರಂ -

ತ್ವರಿತ - ತುರಿಹ.

**ಸೂತ್ರಂ ॥ ತಿಳಿ ಬಹುಳದೆ ಶಬ್ದಾಂತಂ ।**
**ಗಳ ನತ್ವ ಜ್ಞತ್ವ ಕತ್ವದೆಡೆಗೆ ಣಕಾರಂ ॥**
**ತಳೆಗುಮದಂತಪದಾಂತಂ ।**
**ಗಳೆತ್ವಮುಮನಿತ್ವವೃತ್ತಿಯುಮನುತ್ವಮುಮಂ ॥ ೨೭೮ ॥**

**ವೃತ್ತಿ** - ಬಹುಳದಿಂ ಶಬ್ದಂಗಳ ಕಡೆಯ ನಕಾರ ಜ್ಞಕಾರ ಕಕಾರಂಗಳ್ಗೆ ಣತ್ವಮಕ್ಕುಂ; ಪದಾಂತ್ಯದಕಾರಂಗಳ್ಗೆ ತ್ವಮುಮಿತ್ವಮುಮುತ್ವಮುಮಕ್ಕುಂ.

**ಪ್ರಯೋಗಂ** -

ನತ್ವಕ್ಕೆ ಣತ್ವಂ -

ಅಂಕನ-ಅಂಗಣ[೧]; ಖನಿ - ಕಣಿ; ಪತ್ತನ - ಪಟ್ಟಣ; ಹಿಶುನ - ಹಿಸುಣ; ಫಲ್ಗುನ -

~~~~~~~~~~~~~~~~~~

೧. 'ಅಂಗಣವಾವಿ' ಎಂದು ಅಚ್ಚಗನ್ನಡದ ಸಮಾಸಮುಂಟು; ಮತ್ತಂ ಸಂಸ್ಕೃತದೊಳಂ 'ಅಂಗಣಂ' ಉಂಟು - ರಾಜಾಂಗಣಂ, ಗೃಹಾಂಗಣಂ ಎಂದು.
~~~~~~~~~~~~~~~~~~

ಪಲುಗುಣ; ಮಂಥನಿ - ಮಂತಣಿ; ಲಂಬನ - ಲಂಬಣ; ವಿಜ್ಞಾನ - ಬಿನ್ನಣ; ಸ್ಥಾನ - ತಾಣ; ಸುವಾಸಿನಿ - ಸೋವಾಸಿಣಿ.

ಜ್ಞತ್ವಕ್ಕೆ ಣತ್ವಂ -
ಆಜ್ಞೆ - ಆಣೆ.
ಕಕಾರಕ್ಕೆ ಣತ್ವಂ -
ನರ್ತಕಿ - ನಚ್ಚಣಿ.
ಬಹುಳದಿಂ ಪದಮಧ್ಯ ನಕಾರಕ್ಕಂ ಣತ್ವಂ -
ಶುನಕ - ಸೊಣಗ.

ಅತ್ವಕ್ಕೆತ್ವಂ -

| | | |
|---|---|---|
| ಅರ್ಕ್ಕ-ಎರ್ಕ್ಕೆ | ಘಟ್ಟಣ-ಗಟ್ಟಣೆ | ಪ್ರಹರಣ-ಪ್ರಹರಣೆ |
| ಅಂದುಕೆ-ಅಂದುಗೆ | ಚೀರ-ಸೀರೆ | ಮಂಡಕ-ಮಂಡಗೆ |
| ಕಳಮು-ಕಳವೆ | ಜೀರಕ-ಜೀರಿಗೆ | ಶಾಣ-ಸಾಣೆ |
| ಕುರುಂಟ-ಗೋರಟೆ | ಧೂಮು-ದೂವೆ | ಸ್ಥಾಪನ-ತಾಪಣೆ |
| ಕುಸುಂಭ-ಕುಸುಂಬೆ | ಪಾದುಕ-ಪಾವುಗೆ, ಹಾವುಗೆ | ಹಂಸ-ಅಂಚೆ |
| ಕೋಕಿಲ-ಕೋಗಿಲೆ | | |

ಅತ್ವಕ್ಕಿತ್ವಂ -

| | | |
|---|---|---|
| ಅರ್ಗಳ-ಅಗುಳಿ | ಕುದ್ದಾಲ-ಗುದ್ದಲಿ | ಭೃಂಗಾರ-ಬಿಂಗಾರಿ |
| ಆಷಾಢ-ಆಸಡಿ, | ಪಾಟಳ-ಪಾದರಿ | ಮಾಘ-ಮಾಗಿ |
| ಕಂಬಲ-ಕಂಬಳಿ | ಬರ್ಬುಲ-ಬೊಬ್ಬುಲಿ, ಬಬ್ಬುಲಿ | ಸಸ್ಯ-ಸಸಿ |
| ಕುಕ್ಕುಟ-ಕೋಟಿ | | |

ಅತ್ವಕ್ಕುತ್ವಂ -

| | | |
|---|---|---|
| ಅಮೃತ-ಅಮರ್ದು | ದ್ಯೂತ-ಜೂದು, | ರೂಪ-ರೂಪು, ರೂವು |
| ಅಕ್ಷ-ಅಚ್ಚು | ದಾಮ-ದಾವು | ವಾಟ-ಬಾಡು |
| ಕಾಚ-ಗಾಜು, ಕಾಜು | ಪಿಷ್ಟ-ಹಿಟ್ಟು | ವಾದ-ಬಾದು |
| ಕೂಟ-ಕೋಡು | ಪೇಟ್ಟ-ಪೆಟ್ಟು | ಶುಲ್ವಂ, ಸುಲ್ವಂ-ಸುಲು[೧] |
| ತರಂಗ-ತರಂಗು | ಮರೀಚ-ಮೆಳಸು | ಸ್ಫಟಿಕ-ಪಳಿಕು |
| ದಂಡ-ದಂಡು | | |

**ಸೂತ್ರಂ ॥ ನೆಲೆಗೊಂಡುತ್ವಕ್ಕಿತ್ವಂ ।**
**ಕೆಲವೆಡೆಯಿತ್ವಕ್ಕಮುತ್ವಮುಂ ಹ್ರಸ್ವತೆಯ ॥**
**ಗ್ಗಲಿಸಿರ್ದೆತ್ವಮುಮಂತ್ಯ ।**
**ಸ್ಥಲ ಸ್ವರಕ್ಕೊರ್ಮೆ ಲೋಪಮುಂ ಸಂಭವಿಕುಂ ॥ ೨೭೯ ॥**

---

೧. ಸುಲು, ಸುಲುವು = ಕಿಸುವೊನ್

**ವೃತ್ತಿ** - ಪದಾಂತ್ಯದುಕಾರಕ್ಕಿಕಾರಮುಕ್ಕುಂ; ಕೆಲವೆಡೆಯಿಕಾರಕ್ಕುಕಾರಮುಂ ಹ್ರಸ್ವಮಪ್ಪೇತ್ವಮುಮಕ್ಕುಂ; ಸ್ವರಕ್ಕೊರ್ಮೆ ಲೋಪಮಕ್ಕುಂ.

**ಪ್ರಯೋಗಂ** -

ಉತ್ವಕ್ಕಿತ್ವಂ -

ಕುಸ್ತುಂಬುರು - ಕೊತ್ತುಂಬರಿ; ಖರ್ಜು - ಕಜ್ಜಿ.

ಇತ್ವಕ್ಕುತ್ವಂ -

ಗ್ರಂಥಿ - ಗಂಟು; ಮಕ್ಷಿ - ಮಚ್ಚು; ಮಂತ್ರಿ - ಮಂತು; ಸಂಧಿ - ಸಂದು.

ಇತ್ವಕ್ಕೆತ್ವಂ -

ಅತಸಿ - ಅಗಸೆ; ಅಷ್ಟಮಿ - ಅಟ್ಟವೆ; ಕುಕ್ಷಿ - ಕುಕ್ಕೆ; ತುಲಸಿ - ತೊಳಚೆ; ತುಂಡಿ - ತೊಂಡೆ; ಪಂಚಮಿ - ಪಂಚವೆ; ಪುಷ್ಕರಿಣಿ - ಪೊಕ್ಕರಣೆ; ಸಪ್ತಮಿ -ಸತ್ತವೆ.

ಅಂತ್ಯಸ್ವರಲೋಪಕ್ಕೆ -

ಕೀಲ - ಕೀಲ್; ಕೋಣ - ಕೋಣ್; ನೀರ - ನೀರ್; ಪ್ರಮಾಣ - ಪವಣ್; ಮೀನ - ಮೀನ್; ಮುಕುಳ - ಮುಗುಳ್; ಶೀಲ - ಶೀಲ್.

**ಸೂತ್ರಂ ॥ ಮಹಿ ಪೊಗಟ್ವಾಶ್ಚರ್ಯ ಪ್ರ ।**
**ಗ್ರಹ ವಿಜ್ಞಾಪನ ಕಪಿಂಜಳಾಂಗಿರಸಾಂತ್ಯ ॥**
**ಕ್ಕೆ ಹಿತಂ ಲೋಪವಿಧಾನಂ ।**
**ಗ್ರಹಣಕ್ಕಂ ಗರಣಮಾಯ್ತು ಶಬ್ದಾದೇಶಂ ॥ ೨೮೦ ॥**

**ವೃತ್ತಿ** – ಈ ಶಬ್ದಂಗಳ ಕಡೆಯಕ್ಕರಕ್ಕೆ ಲೋಪಂ; ಗ್ರಹಣಶಬ್ದಕ್ಕೆ ಗರಣಮೆಂದಾದೇಶಂ.

**ಪ್ರಯೋಗಂ** -

ಆಶ್ಚರ್ಯ - ಅಚ್ಚರಿ; ಪ್ರಗ್ರಹ - ಹಗ್ಗ; ವಿಜ್ಞಾಪನ - ಬಿನ್ನಪ; ಕಪಿಂಜಳ - ಕವಿಂಜು; ಆಂಗಿರಸ - ಆಂಗಿರ; ಗ್ರಹಣ - ಗರಣ.

**ಸೂತ್ರಂ ॥ ಕೂರ[೧] ಪ್ರಾಕಾರಂಗಳ ।**
**ಮೇರೆಯ ರೇಫಕ್ಕೆ ತರದೆ ಱ ಟ ಲತ್ವಂಗಳ್ ॥**
**ಪೂರಿಪುವಸ್ವರವಿಧಿಯಿಂ ।**
**ಸಾರಂ ಗ್ರಾಮಿಣ ಣತ್ವದೆಡೆಗೆ ಲಕಾರಂ ॥ ೨೮೦ (a) ॥**

**ವೃತ್ತಿ** - ಕೂರ[೨] ಪ್ರಾಕಾರಂಗಳ ರೇಫೆಗೆ ಪರಿವಿಡಿಯಿಂ ಱ ಟನುಂ ಲಕಾರಮುಂ ವ್ಯಂಜನರೂಪದಿನಕ್ಕುಂ; ಗ್ರಾಮಿಣ ಶಬ್ದದ ಣಕಾರಕ್ಕ ಲಕಾರಮಕ್ಕುಂ.

**ಪ್ರಯೋಗಂ** -

ಕೂರ - ಕೂಱ್; ಪ್ರಾಕಾರ - ಪಾಗಲ್; ಗ್ರಾಮಿಣ - ಗಾವಿಲ.

~~~~~~~~~~~~~~~~~

೧. ೨. ಕ್ರೂರ (ಮುದ್ರಿತ ಪುಸ್ತಕ ಪಾಠ)
~~~~~~~~~~~~~~~~~

ಸೂತ್ರಂ ॥ ಶ ಸ ದ ಧ ಲ ಜ ಳ ತದಿಂ ಕೆಳ ।
ಗೆ ಸಲ್ವ ವತ್ವಂ ಸ್ನುಕಾರ ನತ್ವಂ ಮತ್ತಂ ॥
ಜ ಸ ಕ ನ ವ ಶ ಷದ ಯತ್ವಂ ।
ಪ್ರಸನ್ನ ಭಾವದೊಳೆ ತಳ್ತು ಲೋಪಮನಾಳ್ಗುಂ ॥ ೨೮೧ ॥

ವೃತ್ತಿ - ಶಕಾರ ಸಕಾರ ದಕಾರ ಧಕಾರ ಲಕಾರ ಜಕಾರ ಳಕಾರ ತಕಾರದ ಕೆಳಗಣ ವತ್ವಕ್ಕೆ ಲೋಪಂ; ಸ್ನುಕಾರದ ನಕಾರಕ್ಕಂ ಲೋಪಂ; ಜಕಾರ ಸಕಾರ ಕಕಾರ ನಕಾರ ವಕಾರ ಶಕಾರ ಷಕಾರದ ಕೆಳಗಿರ್ದ ಯತ್ವಕ್ಕಂ ಲೋಪಂ.

ಪ್ರಯೋಗಂ - ವತ್ವಲೋಪಕ್ಕೆ -

| | | |
|---|---|---|
| ಈಶ್ವರ-ಈಸರ | ದ್ವೀಪ-ದೀಪ, ದೀವಿ | ಸ್ವಯಂಭು-ಸಯಂಬು |
| ಖಿಲ್ವ-ಕಿಲ್ | ಧ್ವನಿ-ದನಿ | ಸ್ವರ-ಸರ |
| ಜ್ವರ-ಜರ | ಬಿಳ್ವ-ಬಿಳ್ | ಸ್ವರೂಪ-ಸರೂಪ |
| ಜ್ವಾಲಾ-ಜಾಳೆ | ಶಾಶ್ವತ-ಸಾಸತ | ಸ್ವಾತಿ-ಸಾತಿ |
| ತಪಸ್ವಿ-ತಪಸಿ, ತವಸಿ | ಶ್ವಾನ-ಸಾನ | ಸ್ವಾಮಿ-ಸಾಮಿ |
| ತ್ವರಿತ-ತುರಿಹ | ಶ್ವೇತ-ಸೇತ | ಸುಲ್ವ-ಸುಲು, ಸುಲ್ |
| ದ್ವಾರಪಟ್ಟ-ದಾರವಟ್ಟ | ಸರಸ್ವತಿ-ಸರಸತಿ | |
| ದ್ವಿಗುಣ-ದುಗುಣ | ಸ್ವರ್ಗ-ಸಗ್ಗ | |

ಸ್ನುಕಾರ ನತ್ವಲೋಪಕ್ಕೆ - ಸ್ನುಷಾ - ಸೊಸೆ.

ಯತ್ವಲೋಪಕ್ಕೆ -

| | | |
|---|---|---|
| ಅಮಾವಾಸ್ಯಾ- ಅಮಾಸೆ, ಅವಸೆ | ಜ್ಯೋತಿಷ-ಜೋಯಿಸ | ವ್ಯಂಜನ-ಬೆಂಜನ |
| | ನ್ಯಾಯ-ನೇಯ, ನಾಯ | ವಾಂಶ್ಯ-ವಾಸ |
| ಆಯುಷ್ಯ-ಆಯಿಸ, ಆಯುಸ | ನ್ಯೂನ-ನೂನ | ಶ್ಯಾಮವರ್ಣ-ಸಾಮವರ್ಣ |
| | ಮಾಣಿಕ್ಯ-ಮಾಣಿಕ | ಸಸ್ಯ-ಸಸಿ |
| ಆಲಸ್ಯಕ-ಅಲಸುಗೆ | ವ್ಯಥಾ-ಬೆತೆ, ವೆತೆ | |
| ಕಾಂಸ್ಯ-ಕಂಚು | ವ್ಯವಹಾರ-ಬೇಹಾರ, ವೆವಹಾರ | |
| ಜ್ಯೋತಿ-ಜೋತಿ | | |

ಸೂತ್ರಂ ॥ ಯತ್ವದ ಸತ್ವದ ಚತ್ವದ ।
ದತ್ವದ ವಿಧಿ ಜತ್ವದಲ್ಲಿ ಸಂಭವಿಸಿರ್ಕುಂ ॥
ಭತ್ವಕ್ಕೆ ಹ ಪ ವಮಕ್ಕುಂ ।
ರತ್ವಕ್ಕಂ ಲ ಳಮುಮಕ್ಕುಮೋರೊಂದೆಡೆಯೊಳ್ ॥ ೨೮೨ ॥

ವೃತ್ತಿ - ಯತ್ವಮುಂ ಸತ್ವಮುಂ ಚತ್ವಮುಂ ದತ್ವಮುಂ ಜತ್ವಕ್ಕಾದೇಶಮಕ್ಕುಂ; ಭತ್ವಕ್ಕೆ ಹತ್ವಮುಂ ಪತ್ವಮುಂ ವತ್ವಮುಮಕ್ಕುಂ; ರೇಫೆಗೆ ಲತ್ವಮುಂ ಳತ್ವಮುಂ ಕೆಲವೆಡೆಯೊಳಕ್ಕುಂ.

ಪ್ರಯೋಗಂ -

ಜತ್ವಕ್ಕೆ ಯತ್ವಂ -

ರಾಜ - ರಾಯ.
ಜತ್ವಕ್ಕೆ ಸತ್ವಂ -
ಕುಟಜಕ - ಕೊಡಸಿಗೆ.
ಜತ್ವಕ್ಕೆ ದತ್ವಂ -
ಮುಂಜ - ಮೊದೆ.
ಜತ್ವಕ್ಕೆ ಚತ್ವಂ -
ಲಾಮಜ್ಜ - ಲಾಮಚ್ಚ, ಲಾಮಚ.
ಭತ್ವಕ್ಕೆ ಹತ್ವಂ -
ವಲ್ಲಭ - ಬಲ್ಲಹ.
ಭತ್ವಕ್ಕೆ ಪತ್ವಂ -
ಭಿಂಡಿವಾಳ - ಪಿಂಡಿವಾಳ.
ಭತ್ವಕ್ಕೆ ವತ್ವಂ -
ವೃಷಭ - ಬಸವ
ರೇಫೆಗೆ ಲತ್ವಂ -
ಕುಠಾರ - ಕೊಡಲಿ.
ರೇಫೆಗೆ ಳತ್ವಂ -
ಮರೀಚ - ಮೆಳಸು.

**ಸೂತ್ರಂ ॥ ಡತ್ವಂ ಜತ್ವಂ ದ್ವಿತ್ವಾ ।**
**ದ್ವಿತ್ವ ಧಕಾರಕ್ಕೆ ಯೋಗವಾಹಮನಾಳ್ದಾ ॥**
**ಷತ್ವಕ್ಕೆ ಡತ್ವ ಟತ್ವಂ ।**
**ದ್ವಿತ್ವದಿನಕ್ಕುಂ[1]ಟಕಾರಮೊರ್ಮೆದ್ವಿತ್ವಂ ॥ ೨೮೩ ॥**

**ವೃತ್ತಿ** - ದ್ವಿತ್ವಮುಮದ್ವಿತ್ವಮುಮಪ್ಪ ಧಕಾರಕ್ಕೆ ತದನುರೂಪಮಾಗಿ ಡಕಾರಮುಂ ಜಕಾರಮುಮಕ್ಕುಂ; ಆ ಯೋಗವಾಹದ ಷತ್ವಕ್ಕೆ ದ್ವಿತ್ವದ ಡಕಾರಮುಂ ಟಕಾರಮುಮಕ್ಕುಂ; ದ್ವಿತ್ವರಹಿತಮಪ್ಪ ಟತ್ವಮೊರ್ಮೆಯಕ್ಕುಂ.

**ಪ್ರಯೋಗಂ -**

ದ್ವಿತ್ವ ಧಕಾರಕ್ಕೆ ಡಕಾರಂ -
ವರ್ದ್ಧಕಿ - ಬಡ್ಡಗಿ, ಬಡಗಿ.
ದ್ವಿತ್ವ ಧಕಾರಕ್ಕೆ ಜಕಾರಂ -
ಪದ್ಧತಿ - ಪಜ್ಜೆ, ಹಜ್ಜೆ (ಪದ್ಧತಿಯೆಂಬ ಶಬ್ದದ ತಕಾರಕ್ಕೆ ಲೋಪಮುಂಟು).
ಅದ್ವಿತ್ವ ಧಕಾರಕ್ಕೆ ಜಕಾರಂ -
ಧಾತು - ಜಾದು.

~~~~~~~~~~~~~~~~

೧. (ಟಕಾರಮೊರ್ಮೆ ದ್ವಿತ್ವಂ)
~~~~~~~~~~~~~~~~

ಯೋಗವಾಹ ಷಕಾರಕ್ಕೆ ಡತ್ವಂ -

ಕಾಷ್ಠ - ಕಡ್ಡಿ.

ಆ ಷಕಾರಕ್ಕೆ ಟತ್ವಂ -

| | | |
|---|---|---|
| ಅಂಗುಷ್ಠ-ಉಂಗುಟ್ಟ, ಉಂಗುಟ | ನಷ್ಟಿ-ನಟ್ಟಿ | ಮುಷ್ಟಿಕಾ-ಮುಟ್ಟಿಗೆ |
| | ನಿಷ್ಠಾ-ನಿಟ್ಟೆ | ಷಷ್ಟೀ-ಚಟ್ಟಿ |
| ಇಷ್ಟಕಾ-ಇಟ್ಟಗೆ | ನಿಷ್ಠುರ-ನಿಟ್ಟುರ | ಸೃಷ್ಟಿ-ಸಿಟ್ಟಿ |
| ಕಷ್ಟ-ಕಟ್ಟ | ಪಿಷ್ಟ-ಪಿಟ್ಟು, ಹಿಟ್ಟು | |
| ಗೋಷ್ಠೀ-ಗೊಟ್ಟಿ | ಮಂಜಿಷ್ಠಕ-ಮಂಜಿಟ್ಟಿಗೆ, ಮಂಜಿಟಿಗೆ | |
| ದುಷ್ಟ-ದುಟ್ಟ | | |

ಆ ಷಕಾರಕ್ಕೆ ಅದ್ವಿತ್ವ ಟಕಾರಂ -

ಜ್ಯೇಷ್ಠಾ - ಜೇಟೆ; ಪ್ರತಿಷ್ಠಾ - ಹದಿಟೆ, ಪದಿತೆ; ಸೌರಾಷ್ಟ್ರ - ಸೊರಟ.

**ಸೂತ್ರಂ ॥ ಏದಿತಂ ದಾಡಿಮ ಕೂಷ್ಮಾಂ ।**
**ಡದ ಮತ್ವಸ್ಥಾನದಲ್ಲಿ ಬತ್ವಂ ಕೂಷ್ಮಾಂ ॥**
**ಡದ ಷತ್ವಕ್ಕಂ ಬಿಂದುಗ ।**
**ಮುದಯಿಸುಗುಂ ಲೋಪವೃತ್ತಿ ಲಕ್ಷಣವಿಧಿಯಿಂ ॥ ೨೮೪ ॥**

ವೃತ್ತಿ - ದಾಡಿಮ ಕೂಷ್ಮಾಂಡಂಗಳ ಮತ್ವಕ್ಕೆ ಬತ್ವಂ; ಕೂಷ್ಮಾಂಡದ ಷಕಾರಕ್ಕಂ ಬಿಂದುಗಂ ಲೋಪಮಕ್ಕುಂ.

ಪ್ರಯೋಗಂ -

ದಾಡಿಮ - ದಾಳಿಂಬ; ಕೂಷ್ಮಾಂಡ - ಕುಂಬಳ.

**ಸೂತ್ರಂ ॥ ಸಮನಿಸುಗುಮಾದಿ ವರ್ಣಾಂ ।**
**ತಿಮದೊಳಮೆರಡನೆಯ ವರ್ಣದಂತಿಮದೊಳಮಾ ॥**
**ಸಮುಚಿತ ಬಿಂದುಸ್ಥಿತಿ ಬಿಂ ।**
**ದುಮಂತ ಶಬ್ದಕ್ಕೆ ಬಿಂದುಲೋಪಂ ಬಹುಳಂ ॥ ೨೮೫ ॥**

ವೃತ್ತಿ - ಮೊದಲಕ್ಕರದ ಕಡೆಯೊಳಮೆರಡನೆಯಕ್ಕರದ ಕಡೆಯೊಳಮುಚಿತಮಾಗಿ ಬಿಂದುವಕ್ಕುಂ; ಬಿಂದುಯುಕ್ತ ಶಬ್ದಂಗಳ್ಗೆ ಬಹುಳದಿಂ ಲೋಪಮಕ್ಕುಂ.

ಪ್ರಯೋಗಂ -

ಆದ್ಯಕ್ಷರದ ಬಿಂದುವಿಂಗೆ -

ಕೂಷ್ಮಾಂಡ - ಕುಂಬಳ; ತಾತ - ತಂದೆ; ಮರ್ಕಟ - ಮಂಕಡ, ಮಕ್ಕಡ; ಮೇಥಿ - ಮೇಂಟಿ.

ದ್ವಿತೀಯಾಕ್ಷರದ ಬಿಂದುವಿಂಗೆ -

ಕ್ರಮುಕ - ಕವುಂಗು; ದಾಡಿಮ - ದಾಳಿಂಬ.

ಬಿಂದುಲೋಪಕ್ಕೆ -

ಮುಂಜ - ಮೊದೆ; ವಾಂಶ್ಯ - ವಾಸ; ಲಾಂಛನ - ಲಚ್ಚಣ; ಸಂಸ್ಕೃತ - ಸಕ್ಕದ.

ಬಹುಳಮಾಗಿ ಲೋಪಮಿಲ್ಲ -
ಅಂಕುಶ - ಅಂಕುಸ; ಮಂಥನಿ - ಮಂತಣಿ; ಸಂಘಾತ - ಸಂಗಡ.

**ಸೂತ್ರಂ ॥ ಪದದೆರಡನೆಯಕ್ಕರದ ।**
**ತ್ವದೊಳಿತ್ವಂ ಹ್ರಸ್ವದೇತ್ವಮಾತ್ವಕ್ಕೂತ್ವ ॥**
**ಕ್ಕುದಯಿಕುಮತ್ವಸ್ಥಿತಿ ಬಹು ।**
**ಳದೆ ದೀರ್ಘಂ ಹ್ರಸ್ವಮಾ ತೃತೀಯಾಕ್ಷರಕಂ ॥ ೨೮೬ ॥**

**ವೃತ್ತಿ** - ಪದದೆರಡನೆಯಕ್ಕರದತ್ವಕ್ಕಿತ್ವಮುಮಾಕಾರಕ್ಕೆ ಹ್ರಸ್ವೈತ್ವಮುಮೂಕಾರಕ್ಕತ್ವಮುಮಕ್ಕುಂ; ಆ ದ್ವಿತೀಯಾಕ್ಷರ ದೀರ್ಘಕ್ಕೆ ಹ್ರಸ್ವಮಕ್ಕುಂ; ಆ ತೃತೀಯಾಕ್ಷರಕ್ಕಮಂತೆ.

**ಪ್ರಯೋಗಂ** -

ಅತ್ವಕ್ಕಿತ್ವಂ -
ಉಜ್ಜಯಿನಿ - ಉಜ್ಜೆಣಿ.
ಆತ್ವಕ್ಕೆತ್ವಂ -
ರಸಾಯನ - ರಸೆಯನ
ಊಕಾರಕ್ಕತ್ವಂ -
ನಿರೂಪಿಸಿದ - ನಿರವಿಸಿದ.
ದ್ವಿತೀಯಾಕ್ಷರದೀರ್ಘಕ್ಕೆ ಹ್ರಸ್ವಂ -
ಅಮಾವಾಸ್ಯಾ - ಅವಸೆ, ಉದ್ಯಾಪನ - ಉಜ್ಜವಣೆ; ತೃತೀಯಾ - ತದಿಗೆ; ದ್ವಿತೀಯಾ - ಬಿದಿಗೆ; ಪ್ರಸಾಧನ - ಪಸದನ; ವಿನಾಯಕ - ಬೆನಕ; ಹಿಂಗೂಲಕ - ಇಂಗುಲಿಕ.
ತೃತೀಯಾಕ್ಷರ ದೀರ್ಘಕ್ಕೆ ಹ್ರಸ್ವಂ -
ಉತ್ತರೀಯಕ - ಉತ್ತರಿಗೆ; ವರ್ಧಮಾನ - ಬದ್ದವಣ[೧].

**ಸೂತ್ರಂ ॥ ವ್ಯವಹರಿಸುಗುಮತ್ವಕ್ಕಿ ।**
**ತ್ವವಿಧಾನಂ ಹ್ರಸ್ವದೋತ್ವಮುತ್ವಂ ಶಬ್ದ ॥**
**ಪ್ರವಿದಿತಮಾದುತ್ವಕ್ಕ ।**
**ತ್ವವೃತ್ತಿ ಮೂಱನೆಯ ವರ್ಣದೊಳ್ ನೆಲೆಗೊಳ್ಗುಂ ॥ ೨೮೭ ॥**

**ವೃತ್ತಿ** - ಶಬ್ದಂಗಳ ತೃತೀಯಾಕ್ಷರದತ್ವಕ್ಕಿತ್ವಮುಂ ಹ್ರಸ್ವೋತ್ವಮುಂ ಉತ್ವಮುಮಕ್ಕುಂ; ಉತ್ವಕ್ಕತ್ವಮಕ್ಕುಂ.

**ಪ್ರಯೋಗಂ** -

ಅತ್ವದ ಇತ್ವಕ್ಕೆ -
ಹಿಂಗೂಲಕ - ಇಂಗುಲಿಕ.

~~~~~~~~~~~~~~~~~

೧. ಬದ್ದವಣ = ಔಡಲ
~~~~~~~~~~~~~~~~~

ಒತ್ವಕ್ಕೆ -
ಸುರಪರ್ಣೆ - ಸುರಹೊನ್ನೆ.
ಉತ್ವಕ್ಕೆ -
ಆಲಸ್ಯಕ - ಅಲಸುಗೆ.
ಉತ್ವದತ್ವಕ್ಕೆ -
ಕುಸ್ತುಂಬುರು - ಕೊತ್ತುಂಬರಿ.

**ಸೂತ್ರಂ ॥ ದೊರೆಕೊಳ್ಗುಂ ನಾಲ್ಕನೆಯ ।**
**ಕ್ಕರದತ್ವಕ್ಕೋತ್ವವೃತ್ತಿ ಶಬ್ದಂಗಳೊಳಿ ॥**
**ರ್ದೆರಡನೆಯ ಮೂಱನೆಯ ಸಂ ।**
**ಚರಿಸುವ ನಾಲ್ಕನೆಯ ವರ್ಣಮಕ್ಕುಮಭಾವಂ ॥ ೨೮೮ ॥**

ವೃತ್ತಿ - ನಾಲ್ಕನೆಯಕ್ಕರದತ್ವಕ್ಕೋತ್ವಮಕ್ಕುಂ; ಶಬ್ದಂಗಳೊಳಿರ್ದೆರಡನೆಯ ಮೂಱನೆಯ ನಾಲ್ಕನೆಯಕ್ಕರಕ್ಕೆ ಲೋಪಂ.

**ಪ್ರಯೋಗಂ** -

ಅಕಾರದೋತ್ವಕ್ಕೆ -
ಆಟರೂಷಕ - ಆಡಸೋಗೆ.
ದ್ವಿತೀಯಾಕ್ಷರಕ್ಕೆ ಲೋಪಂ -
ವ್ಯವಹಾರ - ಬೇಹಾರ.
ತೃತೀಯಾಕ್ಷರಕ್ಕೆ ಲೋಪಂ -
ಅಮಾವಾಸ್ಯಾ - ಅವಸೆ; ಆಟರೂಷಕ - ಆಡಸೋಗೆ; ಉಜ್ಜಯಿನಿ - ಉಜ್ಜೆಣಿ; ಪಲ್ಯಯನ - ಹಲ್ಲಣ; ಮರುವಕ - ಮರುಗ; ವಿನಾಯಕ - ಬೆನಕ.

ಸಂಸ್ಕೃತ ಪದಕ್ಕಾದಪಭ್ರಂಶದಚ್ಚಕನ್ನಡದ ಸಮಾಸಮಂ ಪೇೞ್ವೆಂ -

**ಸೂತ್ರಂ ॥ ಪದನೆರಡುಂ ತದ್ಭವದೊಳ್ ।**
**ಪುದಿದಿರೆ ಮಾೞ್ಪುದು ಸಮಾಸಮಂ ಪದಯುಗದೊಳ್ ॥**
**ಪದಮೊಂದೇಗೆಯ್ದುಂ ವಿಧಿ ।**
**ಗೊದವದೆ ನಿಲೆಯುಂ ಸಮಾಸಮುಂಟರೆ ಎಡೆಯೊಳ್ ॥ ೨೮೯ ॥**

ವೃತ್ತಿ - ಎರಡು ಪದಂಗಳಪಭ್ರಂಶದೊಳ್ ನಿಲೆ, ಸಮಾಸಮಂ ಮಾೞ್ಪುದು; ಎರಡು ಪದಂಗಳೊಳೊಂದು ಪದನಪಭ್ರಂಶಲಕ್ಷಣಕ್ಕೆ ಬಾರದೆ ನಿಜದಿನಿರೆಯುಂ ನಿರ್ದೋಷಮಾಗಿ ಕಿಱಿದೆಡೆಯೊಳ್ ಸಮಾಸಮುಂಟು.

**ಪ್ರಯೋಗಂ** - ಎರಡು ಪದಂಗಳಪಭ್ರಂಶಕ್ಕೆ -

| | |
|---|---|
| ಅಚ್ಛಸ್ಫಟಿಕ-ಅಚ್ಚವಳಿಕು | ಆಂದೋಳಛತ್ರಿಕಾ-ಅಂದಳಸತ್ತಿಗೆ |
| ಅವನಜೇಮನ-ಅವಣಜೇವಣ | ಕರ್ಕಶಯೌವನ-ಕಕ್ಕಸಜವ್ವನ |
| ಅಂಕುಶಚಾರಣ-ಅಂಕುಸಚಾರಣೆ | ಕ್ರೂರಕರ್ಮಿ-ಕೂಱ್ಕಮ್ಮಿ |

ಖರಶಾಣ-ಕರಸಾಣೆ
ದಶಶಿರ-ದಸಸಿರ
ದೃಷ್ಟಿವಿಷ-ದಿಟ್ಟಿಬಿಸ, ದಿಟ್ಟಿವಿಸ
ಪ್ರತಿಚ್ಛಂದ-ಪಡಿಚಂದ
ಯಮಪುರ-ಜವಹುರ
ರಕ್ಷಾಶೃಂಖಲ-ರಕ್ಕಸಂಕಲೆ
ವರ್ಣಸ್ವರ-ಬಣ್ಣಸರ
ವೀರಶ್ರೀ-ಬೀರಸಿರಿ
ಶಿಲ್ಪಕವಿದ್ಯಾ-ಚಿಪ್ಪಿಗಬಿಜ್ಜೆ
ಶ್ರೀಖಂಡ-ಸಿರಿಕಂಡ
ಷಷ್ಠೀ ಗ್ರಹಣ-ಚಟ್ಟಿಗರಣ
ಸಂಭಾರಕಬಳ-ಸಂಬರಗವಳ
ಸಮೋಘಸನ್ನಾಹ-ಸವಗಸನ್ನಣ
ಸರ್ವಲಕ್ಷಣ-ಸಬ್ಬಲಕ್ಕಣ
ಸರ್ವಸನ್ನಾಹ-ಸಬ್ಬಸನ್ನಣ
ಸ್ಥಾನದೀಪಿಕಾ-ತಾಣದೀವಿಗೆ
ಸ್ಥಾನಭ್ರಷ್ಟ-ತಾಣಬಟ್ಟ

ಮೊದಲ ಪದನಪಭ್ರಂಶಕ್ಕೆ ಬಾರದೆ, ಪರಪದಂ ತದ್ಭವಮಾದ ಸಮಾಸಕ್ಕೆ -

ಉತ್ತರದೇಶ-ಉತ್ತರದೇಸ
ಕರಣಶಾಲಾ-ಕರಣಸಾಲೆ
ಜಗವರ್ತಿ-ಜಗವತ್ತಿ
ದಾನಶಾಲಾ-ದಾನಸಾಲೆ
ಪಟ್ಟಶಾಲಾ-ಪಟ್ಟಸಾಲೆ
ಪರಬ್ರಹ್ಮ-ಪರಬೊಮ್ಮ
ಪರಮಶ್ರೀ-ಪರಮಸಿರಿ
ಪಂಚಶರ-ಪಂಚಸರ
ಪಾದರಕ್ಷಾ-ಪಾದರಕ್ಕೆ
ಪಾದಶೃಂಖಲಾ-ಪಾದಸಂಕಲೆ
ಬಾಹುವಳಯ-ಬಾಹುಬಳೆ
ಮಂಗಳಪ್ರಸಾಧನ = ಮಂಗಳವಸದನ
ವಿಜಯಶೇಷಿ-ವಿಜಯಸೇಸಿ

ಪೂರ್ವಪದ ತದ್ಭವಮಾದುದರ್ಕೆ -

ಗ್ರಾಮರಸ-ಗಾವರಸ
ಚತುರ್ದಂತ-ಚೌದಂತ
ತ್ರಿಗುಣ-ತಿಗುಣ
ತ್ರಿಪುರಾಂತಕ-ತಿವುರಾಂತಕ
ತ್ರಿವಳಿ-ತಿವಳಿ
ದಿಶಾಬಲಿ-ದೆಸೆವಲಿ
ದ್ವಿಗುಣ-ದುಗುಣ
ಪದಗತಿ-ಪಯಗತಿ
ಪಶುಪತಿ-ಪಸುಪತಿ
ಯಮದಂಡ-ಜವದಂಡ
ಶನಿವಾರ-ಸಣಿವಾರ
ಶೂಲಪಾಣಿ-ಸೂಳಪಾಣಿ
ಸಂಧಿವಾತ-ಸಂದುವಾತ
ಸ್ವರಕರಣ-ಸರಕರಣ
ಸ್ವರವಾದಿ-ಸರವಾದಿ

ಎರಡು ಪದಮುಂ ತದ್ಭವಮನೆಯ್ದುವಲ್ಲಿಯೊಂದು ಪದಮನುೞಿಪಿ ತಪ್ಪಾದುದರ್ಕೆ ಹಂಸರಾಜನ ಪ್ರಯೋಗಂ -

ಮ ॥ ಸ್ರ ॥ ತರವೇೞ್ಮಾಣಿಕ್ಯಭಂಡಾರದ ಪುಡಿಕೆಗಳಂ ... ೧

(ಕಾವ್ಯಾವಲೋಕನಂ ೨೮೪)

ಇಲ್ಲಿ ಮಾಣಿಕ್ಯಶಬ್ದಮನುೞಿದು ಮಾಣಿಕಭಂಡಾರಮೆನೆ ಶುದ್ಧಂ.

**ಸೂತ್ರಂ ॥ ಏಕ ದ್ವಿ ತ್ರಿ ಚತುಃ ಶ ।**
**ಬ್ದಾಕೃತಿಗೆಕ್ಕ ದು ತಿ ಚೌಗಳಾದೇಶಂಗಳ್ ॥**
**ಸ್ವೀಕೃತ ಸಮಾಸಪೂರ್ವದೊ ।**
**ಳಾಕರಿಪರ್ ಪ್ರತ್ಯಯಾಂತದೊಳಮೀ ವಿಧಿಯಂ ॥ ೨೮೦ ॥**

ವೃತ್ತಿ - ಸಮಾಸದಾದಿಯೊಳಿರ್ದ ಏಕ ದ್ವಿ ತ್ರಿ ಚತುಃ ಶಬ್ದಂಗಳ್ಗೆ ಎಕ್ಕ ದು ತಿ ಚೌ ಎಂಬಿವಾದೇಶಮಪ್ಪುವು; ದ್ವಿ ತ್ರಿ ಚತುಃ ಶಬ್ದಂಗಳ್ ಪ್ರತ್ಯಯಾಂತಮಾದೊಡಂ ಈ ಲಕ್ಷಣಮೆ.

**ಪ್ರಯೋಗಂ -**

ಎಕ್ಕಕ್ಕೆ -

ಏಕಪತ್ರ - ಎಕ್ಕವತ್ತಿ; ಏಕಶರ-ಎಕ್ಕಸರ; ಏಕಸ್ಥೂಲ-ಎಕ್ಕತುಳ

ದುಗೆ -

ದ್ವಿಗುಣ-ದುಗುಣ; ದ್ವಿಪಟ್ಟಿಕಾ-ದುವಟ್ಟಿಗೆ, ದೂವಟ್ಟಿಗೆ; ದ್ವಿಶರ-ದುಸರ; ದ್ವಿಹಸ್ತ-ದುಹತ್ತ, ದೂಹತ್ತ.

ತಿಗೆ -

ತ್ರಿಗುಣ-ತಿಗುಣ; ತ್ರಿಪದಿ-ತಿವದಿ; ತ್ರಿವಳಿ-ತಿವಳಿ; ತ್ರಿಶರ-ತಿಸರ; ತ್ರಿಶೂಲ-ತಿಸುಳ.

ಚೌಗೆ -

ಚತುಃಖಂಡ-ಚೌಕಂಡ; ಚತುರ್ಗ್ರಾಮ-ಚೌಗಾವೆ; ಚತುರ್ದಂತ-ಚೌದಂತ; ಚತುಃಪಟ್ಟ-ಚೌವಟ್ಟ, ಚೌವಟ; ಚತುಃಪದ-ಚೌಪದ; ಚತುರ್ವೇದಿ-ಚೌವೇದಿ.

ಪ್ರತ್ಯಯಾಂತಕ್ಕೆ -

ದ್ವಿಕ-ದುಗ; ತ್ರಿಕ-ತಿಗ; ಚತುಷ್ಕ-ಚೌಕ.

**ಸೂತ್ರಂ ॥ ಸಮಸಂದ ಸಹ ಮಹಚ್ಛ ।**
**ಬ್ದಮೆ ಸಾ ಮಾದೇಶದಿಂ ಸಮಾಸಾದಿಯೊಳಂ ॥**
**ತಮರ್ದಿರ್ಕುಂ ಪರಪದಪೂ ।**
**ರ್ವಮದುಂ ವ್ಯಂಜನದೊಳೊಂದೆ ಬಹುಳತೆಯಿಂದಂ ॥ ೨೮೧ ॥**

ವೃತ್ತಿ - ವ್ಯಂಜನಂ ಪರಮಾಗೆ, ಸಹ ಮಹಚ್ಛಬ್ದಂಗಳ್ಗೆ ಸಾ ಮಾ ಎಂಬಾದೇಶಂ ಬಹುಳದಿನಕ್ಕುಂ.

**ಪ್ರಯೋಗಂ -**

ಸಾಗೆ -

ಸಹದೇವ-ಸಾದೇವ; ಸಹವಾಸಿ-ಸಾವಾಸಿ.

ಮಾಗೆ -

ಮಹಾಕಾಳಿ - ಮಾಕಾಳಿ; ಮಹಾಜನ - ಮಾಜನ; ಮಹಾದಾನಿ - ಮಾದಾನಿ; ಮಹಾದೇವ - ಮಾದೇವ; ಮಹಾಪಥ - ಮಾಪತ; ಮಹಾಪಾತಕ - ಮಾಪಾತಕ; ಮಹಾಪುರುಷ-ಮಾಪುರುಷ; ಮಹಾಸಾಮಂತ-ಮಾಸಾವಂತ; ಮಹಾಲಕ್ಷ್ಮೀ - ಮಾಲಕುಮಿ.

ಕೆಲವೆಡೆಯೊಳಿಲ್ಲ -

ಮಹಾಗಜ, ಮಹಾಗಿರಿ, ಮಹಾಸೈನ್ಯ; ಸಹಜಾತ, ಸಹಧರ್ಮಿ, ಸಹಭೋಜಿ.

**ಸೂತ್ರಂ ॥ ಪರದೊಳ್ ಪ ಬ ಮಂಗಳ್ ನೆಲ ।**
**ಸಿರೆ ವತ್ವಂ ಪೀನಮಾ ಪಕಾರಮದೂತ್ವಂ ॥**
**ಬೆರಸಿರೆ ತಾಂ ಹ್ರಸ್ವತೆಯಂ ।**
**ತರೆಂಬ ಶಬ್ದಾಂತರೇಫೆಗಕ್ಕುಂ ಲೋಪಂ ॥ ೨೮೨ ॥**

**ವೃತ್ತಿ** - ಪರಪದದ ಮೊದಲೊಳ್ ಪಕಾರ ಬಕಾರ ಮಕಾರಂಗಳಿರೆ ವತ್ವಮಕ್ಕುಂ; ಆ ಪಕಾರದೂತ್ವಕ್ಕೆ ಹ್ರಸ್ವಮಪ್ಪುಕಾರಮಕ್ಕುಂ; ಅಂತರ್ ಶಬ್ದದ ಕಡೆಯ ರೇಫೆಗೆ ಲೋಪಮಕ್ಕುಂ.

**ಪ್ರಯೋಗಂ** -

ಚಂದ್ರಪುರ-ಚಂದವುರ
ಪಂಜರಪಕ್ಷಿ-ಹಂಜರವಕ್ಕಿ
ಪಾದಪಟ್ಟ-ಪಾಯವಟ್ಟ
ಪಾದಪಾಶ-ಪಾದವಾಸ
ಯೋಗಪಾದುಕಾ-ಜೋಗವಾವುಗೆ
ರತ್ನಪಟ್ಟಿಕಾ-ರನ್ನವಟ್ಟಿಗೆ
ರಾಕ್ಷಸಪ್ರಕರಣ-ರಕ್ಕಸವಗರಣ
ಮಾನುಷಪುಸ್ತಕ-ಮಾನಸವೊತ್ತಗೆ
ಸಂಘಾತಪ್ರೇಕ್ಷಣ-ಸಂಗಡವೆಕ್ಕಣ
ಸಂಸ್ಥಾಪತ್ತನ-ಸಂತೆವಟ್ಟಣ
ಹಂಸಪಿಂಡ-ಅಂಚೆವಿಂಡು

ಬಕಾರಕ್ಕೆ ವಕಾರಂ -

ದಿಶಾಬಲಿ-ದೆಸೆವಲಿ; ಶರಬಂಧ-ಸರವಂದ; ಶೃಂಖಲಾಬಂಧ-ಸಂಕಲೆವಂದ.

ಮಕಾರಕ್ಕೆ ವತ್ವಂ -

ದೇವಮಾನುಷ - ದೇವವಾನಸ; ಯಮಳಮರ್ದಳ - ಜವಳಿವದ್ದಳೆ; ರತ್ನಮಣಿ-ರನ್ನವಣಿ.

ಆ ಪತ್ವದ ಊತ್ವಕ್ಕುತ್ವಂ -

ಕರ್ಣಪೂರ - ಕನ್ನವುರ; ವರ್ಣಪೂರ - ಬಣ್ಣವುರ.

ರೇಫಲೋಪಕ್ಕೆ -

ಅಂತಃಪುರ - ಅಂತವುರ.

ಪೀನಗ್ರಹಣದಿಂದೆ ಕೆಲವಱೊಳ್ ವತ್ವಮಿಲ್ಲ-

ಅಚ್ಛಮಲ್ಲಿಕಾ-ಅಚ್ಚಮಲ್ಲಿಗೆ
ಅಕ್ಷರಮಾಲಾ-ಅಕ್ಕರಮಾಲೆ
ಕಾಂಡಪಟ-ಕಂಡಪಟ
ಗೂರ್ಜರಪಟ್ಟ-ಗುಜ್ಜರಪಟ್ಟ
ನಿರ್ಬಂಧಿಕ-ನಿಬ್ಬಂದಿಗ
ನಿರ್ಬುದ್ಧಿ-ನಿಬ್ಬುದ್ದಿ
ಪತಿವ್ರತಾ-ಹದಿಬದೆ, ಹದಿಬತೆ
ವಲ್ಲೀಮಾಟ-ಬಳ್ಳಿಮಾಡ
ಶಂಕರಪ್ರಸಾದಿತ-ಸಂಕರಪಸಾಯಿತ

**ಸೂತ್ರಂ ॥ ಉದಯಿಪುದು ತೃತೀಯತೆ ಪೂ ।**
**ರ್ವದ ಸೂತ್ರವಿಧಾನದಿಂದೆ ಕ ತ ಪಕ್ಕೆ ತಗು ॥**
**ಳ್ವುದು ದೀರ್ಘಂ ಪೂರ್ವಪದಾಂ ।**
**ತ್ಯದೊಳುತ್ತರಪದದ ಮೊದಲೊಳೊದವಿರೆ ಲೋಪಂ ॥ ೨೯೩ ॥**

ವೃತ್ತಿ - ಪೂರ್ವೋಕ್ತ ಸೂತ್ರದಿಂ ಪರದ ಕ ತ ಪಕ್ಕೆ ತೃತೀಯತೆಯಕ್ಕುಂ; ಪೂರ್ವಪದಾಂತ್ಯಕ್ಕೆ ದೀರ್ಘಮುಮುತ್ತರಪದದಾದಿಗೆ ಲೋಪಮುಮಕ್ಕುಂ.

ಪ್ರಯೋಗಂ - ಕಕಾರ ತೃತೀಯತೆಗೆ -

ಕರ್ಪೂರಕರಂಡಕ - ಕಪ್ಪುರಗರಡಗೆ; ಕಾಶಾಕರ್ಪಟ - ಕಾಸೆಗಪ್ಪಡ, ಕಸೆಗಪ್ಪಡ; ಮಾನುಷಕಾವ್ಯ -ಮಾನಸಗಬ್ಬ; ರತ್ನಕಂಬಳ - ರನ್ನಗಂಬಳಿ; ಸಂಭಾರಕಬಳ - ಸಂಬರಗವಳ.

ತಕಾರ ತೃತೀಯತೆಗೆ -

ಅಚ್ಛತುವರಿ - ಅಚ್ಚದೊವರಿ, ಅಚ್ಚದೊಗರಿ; ಕಾಕತುಂಡಿ - ಕಾಗೆದೊಂಡೆ; ಖದಿರತಾಂಬೂಲ - ಕೈರದಂಬುಲ; ಮಾಲಾತೋರಣ - ಮಾಲೆದೋರಣ; ಸಂಘಾತತಾಳ-ಸಂಗಡದಾಳ.

ಪಕಾರ ತೃತೀಯತೆಯಂ ಪ್ರಯೋಗದೊಳ್ ನೋಡಿಕೊಳ್ವುದು.

ಪೂರ್ವಪದಾಂತ್ಯಕ್ಕೆ ದೀರ್ಘಮುಂ ಉತ್ತರಪದಾದಿಗೆ ಲೋಪಮುಮಾಗಿ - ಕಾಂಸ್ಯತಾಳ - ಕಂಸಾಳ, ಧರ್ಮಪಾನೀಯ - ದಮ್ಮಾಣಿ ಎಂದಾಯ್ತು.

**ಸೂತ್ರಂ ॥ ಪರಪದದಾದಿಗೆ ಲೋಪಂ ।**
**ದೊರೆಕೊಳ್ಗುಂ ಕೆಲವೆಱಲ್ಲಿ ಪೂರ್ವಪದಾಂತ್ಯ ॥**
**ಕ್ಕಿರದಕ್ಕುಂ ಲೋಪಂ ವ್ಯವ ।**
**ಹರಿಪ ಸಮಾಸಂಗಳಲ್ಲಿ ಕೆಲಕೆಲವೆಡೆಯೊಳ್ ॥ ೨೯೪ ॥**

ವೃತ್ತಿ - ಸಮಾಸದೊಳುತ್ತರಪದದಾದಿಗೆ ಕೆಲವೆಡೆಯೊಳ್ ಲೋಪಮಕ್ಕುಂ; ಪೂರ್ವಪದಾಂತ್ಯಕ್ಕೆ ಕೆಲವೆಱೊಳ್ ಲೋಪಮಕ್ಕುಂ.

ಪ್ರಯೋಗಂ -

ಉತ್ತರಪದಾದಿಯ ಲೋಪಕ್ಕೆ -

ಚರ್ಮಪಟ್ಟಿಕಾ - ಚಮ್ಮಟ್ಟಿಗೆ; ಸಮಟಿಗೆಯೆನಲುಮಕ್ಕುಂ.

ಪೂರ್ವಪದಾಂತ್ಯಲೋಪಕ್ಕೆ -

ದೇವಕುಲ - ದೇಗುಲ; ದೇಶಶಾಖಾ - ದೇಸಾಕೆ; ಸೂಚೀಯಾನ - ಸೂಯಾಣ.

**ಸೂತ್ರಂ ॥ ಆವಗಮಾಕಾರಾಗಾ ।**
**ರಾವಳಿಕೆಗಳಿವು ಸಮಾಸದುತ್ತರಪದನಾ ॥**
**ಗಾವರಿಸಿರ್ಕುಂ ಲೋಪಂ ।**
**ಭಾವಿಪೊಡೆರಡನೆಯ ವರ್ಣದೊಳಮಾದಿಯೊಳಂ ॥ ೨೯೫ ॥**

ವೃತ್ತಿ - ಆಕಾರ ಆಗಾರ ಆವಳಿಕಾ ಶಬ್ದಂಗಳ್ ಪರಮಾಗೆ, ತಮ್ಮೆರಡನೆಯಕ್ಕರದೊಳಂ ಆದಿಯಕ್ಕರದೊಳಂ ಲೋಪಂ.

**ಪ್ರಯೋಗಂ** -

ಆಕಾರಕ್ಕೆ -

ಚಿತ್ರಾಕಾರ - ಚಿತ್ತಾರ; ರೂಪಾಕಾರ - ರೂಪಾರ.

ಆಗಾರಕ್ಕೆ -

ಕ್ಷೀರಾಗಾರ - ಕೀರಾರ, ಕೀಲಾರ; ಕೋಷ್ಠಾಗಾರ - ಕೊಟ್ಟಾರ; ಗೂಢಾಗಾರ - ಗೂಡಾರ; ದೇವಾಗಾರ - ದೇವಾರ; ಧವಳಾಗಾರ - ಧವಳಾರ; ಭಾಂಡಾಗಾರ - ಭಂಡಾರ.

ಆವಳಿಕೆಗೆ -

ದೀಪಾವಳಿಕಾ - ದೀಪಾಳಿಗೆ; ಆದಿಯಕ್ಕರಂ ಲೋಪಮಾಗಿ ದೀವಳಿಗೆ ಎಂದಾಯ್ತು.

ಸಿಂಹಾಗಾರ, ಕಾರಾಗಾರಮೆಂಬ ಶಬ್ದಂಗಳ್ಗೆ ಬಹುಳದಿನೀ ಲಕ್ಷಣಮಿಲ್ಲ.

**ಸೂತ್ರಂ ॥ ದರ ದಾರ ಬಾರಮಕ್ಕುಂ ।**
**ಪರದಾ ದ್ವಾರಕ್ಕೆ ಪೂರ್ವದೊಳ್ ತದ್ಭವಮಾ ॥**
**ಗಿರೆ [1]ಸಿರಿಯ ವಂಕ ಪಾಣಿಯ ।**
**ಮಿರೆ ಕಂಟಿಯಮುಚಿತವಿಧಿ ವಿಕಲ್ಪವಿಧಾನಂ ॥ ೨೯೬ ॥**

**ವೃತ್ತಿ** - ಶ್ರೀ ವಕ್ರ ಪಾನೀಯ ಕಂಟಕಮೆಂಬಿವರ್ಕಾದ ಸಿರಿಯ ವಂಕ ಪಾಣಿಯ ಕಂಟಿಯಂಗಳ್ ಮೊದಲೊಳಿರೆ, ಪರದ ದ್ವಾರಶಬ್ದಕ್ಕೆ ದರಮೆಂದುಂ ದಾರಮೆಂದುಂ ಬಾರಮೆಂದುಮಕ್ಕುಂ; ಇವಱೊಳ್ ವಿಕಲ್ಪಮನುಚಿತಮಾಗಱಿವುದು.

**ಪ್ರಯೋಗಂ** -

ಶ್ರೀದ್ವಾರ - ಸಿರಿಯದರ, ಸಿರಿಯದಾರ, ಸಿರಿಯಬಾರ.[2] ವಕ್ರದ್ವಾರ - ವಂಕದರ, ವಂಕದಾರ, ವಂಕಬಾರ.

ಪಾನೀಯದ್ವಾರ - ಪಾಣಿಯಬಾರ; ಕಂಟಕದ್ವಾರ - ಕಂಟಿಯಬಾರ: ಈ ಎರಡು ಸಮಾಸಪದಕ್ಕಮುಚಿತವಿಧಿಯಿಂ ವಿಕಲ್ಪಮಿಲ್ಲ.

ಇಲ್ಲಿಂದಂ ಮೇಲೆ ತತ್ಸಮಕ್ಕೆ ಸೂತ್ರಂ -

**ಸೂತ್ರಂ ॥ ಮಣಿ ಮಂಚಂ ಪಟ್ಟಂ ತೋ ।**
**ರಣಮಟ್ಟಂ ಗೋಣಿ ಸಬಳಮಂಕಂ ಲತೆ ಕಂ ॥**
**ಕಣಮೆಸೆವ ಕೋಂಟೆ ಬಲಮುಂ ।**
**ಗಣಂ ಬಿಲಂ ಬಂದಿ ಮಾಲೆ ಗಾಳಂ ಗಂಡಂ ॥ ೨೯೭ ॥**

~~~~~~~~~~~~~~~~~

೧. (ಸೀಯ) ೨. (ಸೀಯದರ, ಸೀಯದಾರ, ಸೀಯಬಾರ)
~~~~~~~~~~~~~~~~~

**ಗಲ್ಲಂ ಮಲ್ಲಂ ತಳಮಿಂ ।**
**ತೆಲ್ಲಂ ತತ್ಸಮಮುಮಿವಱುದಾಹರಣೆಗಳಂ ॥**
**ಸೊಲ್ಲಿಸುವೆನೆರಡು ಮೆಯ್ಗಂ ।**
**ಬಲ್ಲರ್ಗಳ್ ಮೆಚ್ಚುತಿರೆ ಸಮಾಸೋಕ್ತಿಗಳಿಂ ॥ ೨೯೮ ॥**

**ವೃತ್ತಿ** - ಈ ಶಬ್ದಂಗಳ್ ಸಂಸ್ಕೃತಕ್ಕಂ ಕನ್ನಡಕ್ಕಂ ಸರಿ; ಇವಱುದಾಹರಣಂಗಳಂ ಸಮಾಸೋಕ್ತಿಯಿಂ ಸಂಸ್ಕೃತ ಕರ್ಣಾಟಕಂಗಳೊಳ್, ಬಲ್ಲರ್ ಮೆಚ್ಚೆ, ತೋಱುದಪೆಂ.

**ಪ್ರಯೋಗಂ** -

ಮಣಿಗೆ - ಮಕುಟಮಣಿ, ದಿನಮಣಿ; ಉಡೆವಣಿ, ಕೆಲವಣಿ.

ಮಂಚಕ್ಕೆ - ಕಾಂಚನಮಂಚ, ರತ್ನಮಂಚ; ತೂಗುಮಂಚ, ಸೆಳೆಮಂಚ.

ಪಟ್ಟಕ್ಕೆ - ಪಟ್ಟಗದ್ದುಗೆ, ಪಟ್ಟಗೊಱೆ, ಪಟ್ಟಮಹಿಷಿ ; ಪಟ್ಟವಣೆ, ಪಟ್ಟವರ್ಧನ, ಪಟ್ಟಶರ.

ತೋರಣಕ್ಕೆ - ಕಾಂಸ್ಯತೋರಣ, ತಳಿರ್ದೋರಣ, ಪಚ್ಚೆದೋರಣ, ಮಕರ ತೋರಣ.

ಅಟ್ಟಕ್ಕೆ - ಅಟ್ಟಗವಲ್, ಅಟ್ಟವಡಿ; ಅಟ್ಟಹಾಸ.

ಗೋಣಿಗೆ - ಕಿಱುಗೋಣಿ, ಗೋಣಿಕಾಪುತ್ರ, ಪೆರ್ಗೋಣಿ.

ಸಬಳಕ್ಕೆ - ಸಬಳಗದ್ಯಾಣ, ಸಬಳತ್ರಿಣೇತ್ರ, ಸಬಳದೆಱೆ, ಸಬಳವಿನ್ನಣಿ, ಸಬಳಸಹಸ್ರಬಾಹು.

ಅಂಕಕ್ಕೆ - ಅಂಕವಱೆ, ಅಂಕವಾತು, ಕಟ್ಟಂಕ, ಮಾಱಂಕ, ಮೃಗಾಂಕ, ವೃಷಾಂಕ.

ಲತೆಗೆ - ಎಳಲತೆ, ನವಲತೆ, ಲತೆವನೆ, ಲತೆವಳ್ಳಿ.

ಕಂಕಣಕ್ಕೆ - ಗುಬ್ಬಿಗಂಕಣ, ಮಣಿಕಂಕಣ; ಹಸ್ತಕಂಕಣ, ಹಿಂಡುಗಂಕಣ.

ಕೋಂಟೆಗೆ - ತಱುಗೋಂಟೆ, ಧೂಳಿಕೋಂಟೆ, ಹತ್ತುಗೋಂಟೆ, ಹೆಡಗೆಗೋಂಟೆ.

ಬಲಕ್ಕೆ - ಆಳ್ವಲ (ಆಳ್ಬಲ), ತೋಳ್ವಲ (ತೋಳ್ಬಲ), ನೆಲವಲ, ಪೆರ್ವಲ, ಭುಜಬಲ, ಭೂಬಲ, ಮಾರ್ವಲ.

ಅಂಗಣಕ್ಕೆ - ಅಂಗಣವಲಯ, ಅಂಗಣವಾವಿ, ಅಂಗಣವಟ್ಟು. ಅಂಕಣಶಬ್ದಕ್ಕಂಗಣ ಮಾದುದಾಗಿ ತತ್ಸಮಮಾಗಲಾರ್ಪುದು.

ಬಿಲಕ್ಕೆ - ಬಿಲದ್ವಾರ, ಬಿಲಸರ್ಗ (ಬಿಲಸಗ್ಗ), ಪೆರ್ಬಿಲ.

ಬಂದಿಗೆ - ಬಂದಿಗ್ರಹಣ, ಬಲ್ವಂದಿಕಾಱ.

ಮ ॥ ವಿ ॥ ... ಬಲ್ವಂದಿಕಾ
ಱನ ಪೋಲ್ ಪಿಂಡೊಡೆದೊಂದೆ ಪೋಯ್ತು ... ೧
(ಸೂಕ್ತಿಸುಧಾರ್ಣವಂ ೩-೧೩೩)

ಮ ॥ ವಿ ॥ ... ಬಂದಿವಿಡಿದಂ ಬಿಂಬಾಧರಸ್ಥಾನಮಂ ... ೨
(ಸೂಕ್ತಿಸುಧಾರ್ಣವಂ ೧೪-೯)

ಮಾಲೆಗೆ - ಕಂಠಮಾಲೆ, ಪಚ್ಚೆಮಾಲೆ, ಪೂಮಾಲೆ, ವನಮಾಲೆ.

ಗಾಳಕ್ಕೆ - ಎಡೆಗಾಳ, ಗಳಗಾಳ, ಸಣ್ಣಗಾಳ.

ಗಂಡಕ್ಕೆ - ಗಂಡಗಲಿ, ಗಂಡಗರ್ವ, ಗಂಡಗುಣ, ಗಂಡಪೆಂಡಿರ್, ಗಂಡವರಿಜು, ಗಂಡವಸದನ.

ಗಲ್ಲಕ್ಕೆ - ಗಲ್ಲಗಿವಿ, ಗಲ್ಲಗುಗ್ಗುರಿ, ಗಲ್ಲಸ್ಥಳಂ, ತೆಳ್ಗಲ್ಲ.

ಮಲ್ಲ - ಮಲ್ಲಗಾಳೆಗ, ಮಲ್ಲಮುರಾಂತಕ, ಮಲ್ಲವಾತು.

ತಳಕ್ಕೆ - ಕರತಳ, ಕೆಂದಳ, ತಟ್ಟತಳ, ತಳಹಗ್ಗ, ಧರಣೀತಳ - ಎಂಬಂತೆ.[೧]

**ಸೂತ್ರಂ ॥ ಸಕ್ಕದಮಂ ಮಱೆಗೊಳ್ಳದೆ ।**
**ಚೊಕ್ಕಳಿಕೆಯಿನಚ್ಚಗನ್ನಡಂ ಬೇೞ್ಪರ ಕ ॥**
**ಯ್ವೊಕ್ಕ ನಿಧಿಯೆನಿಪಪಭ್ರಂ ।**
**ಶಕ್ಕಂ ದೇಶೀಯಪದಕಮುಂಟು ಸಮಾಸಂ ॥ ೨೯೯ ॥**

**ವೃತ್ತಿ** - ಸಂಸ್ಕೃತಮಂ ಮಱೆಗೊಳ್ಳದೆ ನೆಱೆವಣೆಗೆಯಿಂದಚ್ಚಗನ್ನಡಮಂ ಪೇೞ್ವರ್ಗೀಯಪಭ್ರಂಶಪದಮುಂ ಇದಱ ಸಮಾಸಮುಂ ತತ್ಸಮದ ಸಮಾಸಮುಂ ಕಯ್ವೊಕ್ಕ ನಿಧಾನಮಿದಱೊಡನೆ ಕನ್ನಡದ ದೇಶೀಯಪದಮಂ ಸಮಾಸಿಸಲಪ್ಪುದು.

**ಪ್ರಯೋಗಂ -**

ಅಪಭ್ರಂಶಕ್ಕಂ ದೇಶೀಯಪದಕ್ಕಂ ಸಮಾಸಂ -
ರಾಯಗೋಂಟೆ, ಸಿಂಗವೇಂಟೆ, ಸೆಜ್ಜೆವನೆ.
ಅಪಭ್ರಂಶಸಮಾಸಕ್ಕಂ ದೇಶೀಯ ಪದಕ್ಕಂ ಸಮಾಸಂ -
ಜವಳಿವದ್ದಳೆದೊಂಗಲ್; ಜೊನ್ನವಕ್ಕಿಗಣ್ಗಳ್; ತಾಣದೀವಿಗೆವೆಳಗು.
ತತ್ಸಮಸಮಾಸಕ್ಕಂ ದೇಶೀಯಪದಕ್ಕಂ ಸಮಾಸಂ -
ಕಟ್ಟಂಕದಲ್ಲಣಂ; ಪೂಮಾಲೆದುಱುಂಬು; ಸಬಳಗದ್ಯಾಣದೆಱೆ.

ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಶಲ್ಯ
ಚಾರುಚುಂಬಕಾಯಮಾನಾನೂನ ಕರ್ಣಾಟಕಲಕ್ಷಣ ಶಿಕ್ಷಾಚಾರ್ಯ ಸುಕವಿ
ಕೇಶಿರಾಜ ವಿರಚಿತಮಪ್ಪ ಶಬ್ದಮಣಿದರ್ಪಣದೊಳ್
ಅಪಭ್ರಂಶಪ್ರಪಂಚಲಕ್ಷಣಮೆಂಬ ಸಪ್ತಮಮಪ್ಪ ಸಂಧಿ ಸಮಾಪ್ತಂ.

~~~~~~~~~~~~~~

೧. (ಮುಂದೆ [illegible] ತತ್ಸಮಗಳ ಸಮಾಸಪದಗಳನ್ನು ಪ್ರಥಮಪರಿಷ್ಕರಣದಲ್ಲಿ ಅಕಾರಾದಿ [illegible].)
~~~~~~~~~~~~~~

# ಎಂಟನೆಯ ಸಂಧಿ

## ಅವ್ಯಯ ಪ್ರಕರಣಂ

**ಸೂತ್ರಂ॥ ಅನುಕೃತಿಪದಮೊದವೆಯುಮದು ।**
**ವನೆಯೆಂಬೆರಡುಂ ಪದಾಂತ್ಯದೊಳ್ ಬರೆಯುಂ ನೆ ॥**
**ಟ್ಟನೆ ತಾವವ್ಯಯಮಪ್ಪುವು ।**
**ವನೆಯ ನಕಾರಂ ವಿಕಲ್ಪದಿಂದೆ ಗಕಾರಂ ॥ ೨೦೦ ॥**

ವೃತ್ತಿ - ಧಿಗಿಲನೆ, ಭುಗಿಲನೆ, ಭೋರನೆ ಎಂಬನುಕರಣಪದಂಗಳ್ ಬರೆಯುಂ, ಅದು ಅನೆ ಎಂಬಿವು ಪದಾಂತಂಗಳೊಳಿರೆಯುಂ, ಅವ್ಯಯ ಪದಂಗಳಪ್ಪುವು.

**ಪ್ರಯೋಗಂ -**

ಅದುಗೆ - ನೂಂಕದು (ನೂಕದು), ನೂಳದು, ತೆತ್ತದು[1] (ತೆಕ್ಕದು).

ಅನೆಗೆ - ಕಮ್ಮನೆ, ಇಮ್ಮನೆ, ಸಿಯ್ಯನೆ, ಮೆಲ್ಲನೆ.

ನಕಾರಕ್ಕೆ ವಿಕಲ್ಪದಿಂ ಗಕಾರಂ -

ನೆಟ್ಟನೆ, ನೆಟ್ಟಗೆ; ಸುಮ್ಮನೆ, ಸುಮ್ಮಗೆ; ಕಮ್ಮನೆ, ಕಮ್ಮಗೆ; ಬಿನ್ನನೆ, ಬಿನ್ನಗೆ.

**ಸೂತ್ರಂ ॥ ಸೊಲ್ಲೊಳ್ ಕ್ರಿಯಾತ್ಮಕಾವ್ಯಯ ।**
**ಮಿಲ್ಲೆಂಬುದು ಕೀಱದೆಂಬುದಾಕೀರ್ಣಾರ್ಥಂ ॥**
**ಬಲ್ಲರ್ಗೆ ನಿರ್ನಿಮಿತ್ತಾ ।**
**ರ್ಥೋಲ್ಲಸಿತಂ[2]ನಿರ್ನಿರೆಂ[3]ಬುದುಂ ನಿರ್ನೆರಮುಂ ॥ ೨೦೧ ॥**

*ವೃತ್ತಿ - ವಾಕ್ಯದೊಳ್ ಇಲ್ಲ ಎಂಬುದು (ಪ್ರತಿಷೇಧ) ಕ್ರಿಯಾತ್ಮಕಾವ್ಯಯಮೆನಿಸುಗುಂ. ಕೀಱದೆಂಬುದು ತುಱುಗಿದರ್ಥದೊಳಂ, ನಿರ್ನಿರ್, ನಿರ್ನೆರಂ ಎಂಬಿವು ನಿರ್ನಿಮಿತ್ತಾರ್ಥದೊಳಂ ವರ್ತಿಸುಗುಂ.[4]

**ಸೂತ್ರಂ ॥ ನೆಗಟ್ಟುಂ ಮೌನಾರ್ಥಂ ಸು ।**
**ಮ್ಮಗೆ ಸುಮ್ಮನೆಯುಸಿಕನೆಂದು ನುಡಿವವ್ಯಯದೊಳ್ ॥**
**ಪುಗುಗುಂ ಗುಱುಗುಮ್ಮಗೆ ಬಿ ।**
**ನ್ನಗೆ ಬಿನ್ನನೆಯೆನಲೊಡಂ ಕ್ರಿಯಾಶೂನ್ಯಾರ್ಥಂ ॥ ೨೦೨ ॥**

* ವೃತ್ತಿ - ಮೌನಾರ್ಥದೊಳ್ ಸುಮ್ಮಗೆ, ಸುಮ್ಮನೆ, ಉಸಿಕಂ ಎಂಬವ್ಯಯಮಂ ಪೇೞಲಕ್ಕುಂ; ಕ್ರಿಯಾಶೂನ್ಯಾರ್ಥದೊಳ್ ಗುಱುಗುಮ್ಮಗೆ, ಬಿನ್ನಗೆ, ಬಿನ್ನನೆ ಎಂಬವ್ಯಯಮಂ ಪೇೞಲಕ್ಕುಂ.

~~~~~~~~~~~~~~~~~~

೧. ತೆತ್ತದು=ತೀರದು. ೨. ನಿರ್ನೆರ್. ಕ. ಖ. ೩. ನಿರ್ನೆರೆಂಬುದುಂ.

೪. ಈ ಪ್ರಕರಣದಲ್ಲಿ ನಕ್ಷತ್ರಚಿಹ್ನೆ ಹಾಕಿರುವ ವೃತ್ತಿಗಳು ಕ. ಸಾ. ಪ. ನ ಸಂಪಾದಕರು ಬರೆದುವು.
~~~~~~~~~~~~~~~~~~

ಸೂತ್ರಂ ॥ ಆನುಮೆನಿಪ್ಪವ್ಯಯಮಂ ।
ಸ್ಥಾನ ದಿಶಾ ಕಾಲ ಸಂಖ್ಯೆಗಳೊಳುಸಿರ್ವರ್ ಮ ॥
ತ್ತೇನುಮೆನಿಪ್ಪರ್ಥಮನಿರ ।
ದಾನಿಪರಣಮಾಣಮೆಂದು ನುಡಿವವ್ಯಯದೊಳ್ ॥ ೩೦೩ ॥

* ವೃತ್ತಿ - ಸ್ಥಾನ ದೆಸೆ ಕಾಲ ಸಂಖ್ಯೆಗಳಲ್ಲಿ ಆನುಂ ಎಂಬವ್ಯಯಮಂ ಪೇೞಲಕ್ಕುಂ; ಏನುಮೆಂಬರ್ಥದೊಳ್ ಅಣಂ ಆಣಂ ಎಂಬವ್ಯಯಮಂ ಪೇೞಲಕ್ಕುಂ.

ಪ್ರಯೋಗಂ –

ಸ್ಥಾನಕ್ಕೆ - ಎಲ್ಲಿಯಾನುಂ.

ದೆಸೆಗೆ - ಎತ್ತಾನುಂ.

ಕಾಲಕ್ಕೆ - ಎಂದಾನುಂ.

ಸಂಖ್ಯೆಗೆ - ಒಂದಾನುಂ, ಎರಡಾನುಂ, ಪತ್ತಾನುಂ, ನೂಱಾನುಂ.

ಅಣಕ್ಕೆ - ಕಾರ್ಯಮಣಮಿಲ್ಲ.

ಆಣಕ್ಕೆ - ಗುಣಮಾಣಮಿಲ್ಲ (= ಏನುಮಿಲ್ಲೆಂಬರ್ಥಂ).

ಸೂತ್ರಂ ॥ ನಾಡೆಯೆಡೆಯಾವಗಂ ನೆಱೆ ।
ನೀಡುಂ ಕರಮಾದಮೆಯ್ದೆ ನೂಳದು ಪಿರಿದುಂ ॥
ನೀಡು ಮಿಗೆ ಕೆನ್ನಮೆಲ್ಲಂ ।
ರೂಢಿಯನುಳ್ಳುದುಮಿವವ್ಯಯದೊಳಧಿಕಾರ್ಥಂ ॥ ೩೦೪ ॥

* ವೃತ್ತಿ - ನಾಡೆ, ಎಡೆ, ಆವಗಂ, ನೆಱೆ, ನೀಡುಂ, ಕರಂ, ಆದಂ, ಎಯ್ದೆ, ನೂಳದು, ಪಿರಿದುಂ, ನೀಡು, ಮಿಗೆ, ಕೆನ್ನಂ - ಇವು ಅಧಿಕಾರ್ಥ ಬೋಧಕಾವ್ಯಯಂಗಳ್.

ಸೂತ್ರಂ ॥ ಭೋಂಕನೆ ಚೆಕ್ಕನೆ ಭೋರನೆ ।
ಭೋಂಕಲ್ ಚಡುಪುಡನೆ ಗಿಜ್ಜಿತಿಜ್ಜನೆಯುಂ ಮ ॥
ತ್ತಂ ಕಡು ಚೆಚ್ಚರ ಬೆಚ್ಚರ ।
ಮುಂ ಕೂಡಿರೆ ತಮ್ಮೊಳೊದವುಗುಂ ಶೀಘ್ರಾರ್ಥಂ ॥ ೩೦೫ ॥

* ವೃತ್ತಿ – ಭೋಂಕನೆ, ಚೆಕ್ಕನೆ, ಭೋರನೆ, ಭೋಂಕಲ್, ಚಡುಪುಡನೆ, ಗಿಜ್ಜಿತಿಜ್ಜನೆ, ಕಡು, ಚೆಚ್ಚರಂ, ಬೆಚ್ಚರಂ - ಈ ಅವ್ಯಯಂಗಳ್ ಶೀಘ್ರಾರ್ಥ ಬೋಧಂಕಗಳ್.

ಸೂತ್ರಂ ॥ ಏಗಂ ವಲಂ ವೆಱಂ ದಲ್ ।
ತಾಗುಗುಮತಿನಿಶ್ಚಯಾರ್ಥಮಂ ತಾನಿತರಾ ॥
ರ್ಥಾಗತಮದು ಮತ್ತಿನ ನುಡಿ ।
ಯೇಗೆಯ್ದುಂ [1]ಬೇಱೆಬೇಱೆಯೆನೆ ಪೃಥಗರ್ಥಂ ॥ ೩೦೬ ॥

~~~~~~~~~~~~~~~~~

೧. (ಬೇಱೆವೇಱೆಯೆನೆ)
~~~~~~~~~~~~~~~~~

* **ವೃತ್ತಿ** – ಏಗಂ, ವಲಂ, ವೇಱಂ, ದಲ್ - ಎಂಬವ್ಯಯಂಗಳತಿನಿಶ್ಚಯಾರ್ಥಮಂ ನುಡಿಗುಂ; ಮತ್ತಿನ ಎಂಬುದು ಅನ್ಯಾರ್ಥದೊಳಂ, ಬೇಱಬೇಱ ಎಂಬುದು ಪೃಥಗರ್ಥದೊಳಂ ವರ್ತಿಸುಗುಂ.

**ಸೂತ್ರಂ ॥ ಅನು [1]ತಿಱ್ಱನೆ ತಿಟ್ಟನೆ ಬ ।**
**ಟ್ಟನೆಯೆಂಬಿವಱೊಳ್ ಭ್ರಮಾರ್ಥಮೊಯ್ಯನೆಯೆನೆ ನೆ ॥**
**ಟ್ಟನೆಯೆನೆ ನೆಟ್ಟಗೆಯೆನೆ ಬಂ ।**
**ದು ನಿಲ್ಕುಮಿವಱೊಳ್ ಪರಿಸ್ಫುಟಾರ್ಥವಿಧಾನಂ ॥ ೩೦೭ ॥**

* **ವೃತ್ತಿ** – ತಿಱ್ಱನೆ, ತಿಟ್ಟನೆ, ಬಟ್ಟನೆ - ಎಂಬಿವು ಭ್ರಮಣಾರ್ಥಂಗಳಪ್ಪುವು; ಒಯ್ಯನೆ, ನೆಟ್ಟನೆ, ನೆಟ್ಟಗೆ - ಎಂಬವ್ಯಯಂಗಳ್ ಪರಿಸ್ಫುಟಾರ್ಥಮಂ ಪೇೞ್ಗುಂ.

**ಸೂತ್ರಂ ॥ [2]ವೇದನೆಯೊಳಹಹಮೆಂಬುದು ।**
**ಖೇದದೊಳಚ್ಚರಿಯೊಳಕ್ಕಟಾ ಎಂಬುದು ತತ್ ॥**
**ಖೇದ ವಿಡಂಬನ ಕರುಣಾ ।**
**ನಾದದೊಳಯ್ಯೋ ಎನಿಪ್ಪುದವತರಿಸಿರ್ಕುಂ ॥ ೩೦೮ ॥**

* **ವೃತ್ತಿ** – ಅಹಹಂ ಎಂಬವ್ಯಯಂ ನೋವಂ ಸೂಚಿಪಲ್ಲಿ ಪೇೞಲ್ಪಡುಗುಂ; ಅಕ್ಕಟಾ ಎಂಬುದು ದುಃಖದಲ್ಲಿಯುಂ ಆಶ್ಚರ್ಯಮಂ ಸೂಚಿಪಲ್ಲಿಯುಂ ವರ್ತಿಸುಗುಂ; ಅಯ್ಯೋ ಎಂಬವ್ಯಯಮಂ ದುಃಖದ, ವಿಡಂಬನದ, ಕರುಣದ ಧ್ವನಿಯಲ್ಲಿ ಪೇೞಲಕ್ಕುಂ.

**ಸೂತ್ರಂ ॥ ಸವನಿಪುದೋಹೋ ಹೋ ಎನೆ ।**
**ನಿವಾರಣಾರ್ಥಂ ಸಹಾರ್ಥಮೊಡನೆನೆ ಹಸನ ॥**
**ವ್ಯವಹೃತಿ [3]ಗಹಗಹಮೆನೆ ಪಿರಿ ।**
**ದುವೆಂಬಭಿಪ್ರಾಯದಲ್ಲಿ ಸೋಡಂಬಾಡಂ ॥ ೩೦೯ ॥**

* **ವೃತ್ತಿ** – ಓಹೋ, ಹೋ ಎಂಬವ್ಯಯಮಂ ತಡೆವರ್ಥದೊಳಂ, ಒಡನೆ ಎಂಬುದಂ ಸಹಾರ್ಥದೊಳಂ, ಗಹಗಹಮೆಂಬುದಂ ಹಸನಾರ್ಥದೊಳಂ, ಸೋಡಂಬಾಡಂ ಎಂಬವ್ಯಯಮಂ ಪಿರಿದೆಂಬರ್ಥದೊಳಂ ಪೇೞಲಕ್ಕುಂ.

**ಸೂತ್ರಂ ॥ [4]ಪರಿವಿಡಿಯಿಂದಾಃ ಆಃ ಎಂ ।**
**ಬೆರಡುಂ ವಿಸ್ಮಯ [5]ವಿಡಂಬನ ವ್ಯಥನಂ ಸಂ ॥**
**ಸ್ಫುರಿತಾರ್ಥದೊಳುಃ ಎಂಬುದು ।**
**ಪಿರಿದುಮಸಹ್ಯಾರ್ಥದೊಳ್ ಪ್ರಯೋಗಿಸೆಪಡುಗುಂ ॥ ೩೧೦ ॥**

* **ವೃತ್ತಿ** – ಆಃ, ಆಃ ಎಂಬೆರಡುಂ ಶಬ್ದಂಗಳ್ ಆಶ್ಚರ್ಯಮಂ ವಿಡಂಬನಮಂ ವ್ಯಥನಮಂ ಥಟ್ಟನೆ ಸ್ಫುರಿಸುವ ಭಾವಮಂ ಪೇೞ್ಗುಂ; ಉಃ ಎಂಬುದು ಅಸಹ್ಯಾರ್ಥದೊಳ್ ವರ್ತಿಸುಗುಂ.

~~~~~~~~~~~~~~~~

೧. (ತಿಟ್ಟನೆ ತಿಱ್ಱನೆ) ೨. (ವೇದನೆಯೊಳಹಹ ಎಂಬುದು) ೩. (ಗಹಗಹನ ಎನೆ)
೪. (ಪರಿವಿಡಿಯಿದಃ ಆಃ) ೫. ವಿಡಂಬನಂ ವ್ಯಸನ ಸುಖ (ಅಚ್ಚಿನ ಪುಸ್ತಕ).
~~~~~~~~~~~~~~~~

ಸೂತ್ರಂ ॥ ಸ್ಮರಣ ವಿಚಾರಾಮಂತ್ರಣ ।
ಪರಿಗತವೆನಿಸಿರ್ಪುವೆಲೆಲೆ ಏ ಎಂಬಿವು ಸಂ ॥
ಚರಿಸುವುದನುಮತದೊಳ್ ಬ ।
ಲ್ಲರಿನೇಕಾರಮದೆಕಾರಮವಧಾರಣೆಯೊಳ್ ॥ ೩೧೧ ॥

* ವೃತ್ತಿ - ಎಲೆಲೆ, ಏ ಎಂಬಿವು ನೆನೆವಲ್ಲಿಯುಂ ವಿಚಾರದಲ್ಲಿಯುಂ ಸಂಬುದ್ಧಿಯಲ್ಲಿಯುಂ ವರ್ತಿಸುಗುಂ; ಎ ಏ ಎಂಬಿವಂ ಅವಧಾರಣಾರ್ಥದೊಳ್ ಪೇೞಲಕ್ಕುಂ.

ಸೂತ್ರಂ ॥ ಮತ್ತೆಂಬುದು ಪುನರರ್ಥದೊ ।
ಳೆತ್ತಾನುಮದೆಲ್ಲಿಯಾನುಮೆಂಬರ್ಥದೊಳಾ ॥
ಯತ್ತಂಗಳರಮೆ ಅರೆಗಳ್ ।
ಸುತ್ತೇಂ ತರಲಾರ್ಥದಲ್ಲಿ ಬೆಳ್ವಳಮಕ್ಕುಂ ॥ ೩೧೨ ॥

* ವೃತ್ತಿ - ಮತ್ತೆ ಎಂಬುದು ಪುನರರ್ಥದೊಳ್ ಪೇೞಲ್ಪಡುಗುಂ; ಅರಮೆ, ಅರೆ ಇವು ಎತ್ತಾನುಂ, ಎಲ್ಲಿಯಾನುಂ ಎಂಬರ್ಥದೊಳಂ, ಬೆಳ್ವಳಂ ಎಂಬುದು ಚಂಚಲಾರ್ಥದೊಳಂ ವರ್ತಿಸುಗುಂ.

ಸೂತ್ರಂ ॥ ಸಲೆಯೆಂಬುದು ನಿತ್ಯಾರ್ಥಾ ।
ವಲಂಬಿ ಹುಂ [1]ಎನೆಯುಂ ಅಲ್ತೆಯಲ್ತೆಯೆನೆಯುಂ ॥
ಫಲಿಯಿಸುಗುಂ ಪ್ರಶ್ನಾರ್ಥೋ ।
ಜ್ಜ್ವಲಾನುಮಾನಾರ್ಥಯುಗಳಮವು ಶಾಬ್ದಿಕರಿಂ ॥ ೩೧೩ ॥

* ವೃತ್ತಿ - ಸಲೆಯೆಂಬುದು ನಿತ್ಯಾರ್ಥದೊಳಂ ಹುಂ ಎಂಬುದುಂ ಅಲ್ತೆಯಲ್ತೆಯೆಂಬುದುಂ ಪ್ರಶ್ನಾರ್ಥದೊಳಂ ಅನುಮಾನಾರ್ಥದೊಳಂ ವರ್ತಿಸುಗುಂ.

ಸೂತ್ರಂ ॥ ಅಮುಮೆಂಬಿವೆರಡುಮಮರ್ಗುಂ ।
ಸಮುಚ್ಚಯಾರ್ಥದೊಳೆ ಏ ಒ ಓ ಎಂಬಿವು ಶ ॥
ಬ್ದಮನಪ್ಪಿ ವಿಶಂಕಾ ಪ್ರ ।
ಶ್ನ ಮಂಡಲಾಕ್ಷೇಪಕಾರ್ಥದೊಳ್ ವರ್ತಿಸುಗುಂ ॥ ೩೧೪ ॥

* ವೃತ್ತಿ - ಅಂ ಉಂ ಎಂಬಿವೆರಡುಂ ಸಮುಚ್ಚಯಾರ್ಥಮಂ ಪೇೞ್ಗುಂ; ಎ ಏ ಒ ಓ ಎಂಬಿವು ಪದಾಂತದೊಳಿರ್ದು ವಿಶಂಕೆ, ಪ್ರಶ್ನೆ, ಆಕ್ಷೇಪ - ಈಯರ್ಥಂಗಳೊಳ್ ವರ್ತಿಸುಗುಂ.

ಸೂತ್ರಂ ॥ ಬೞಿಕೆ ಬೞಿಕ್ಕಂ ಬೞಿಕಂ ।
ಬೞಿಕ್ಕೆ ಬೞಿಯಂ ಪ್ರಸಿದ್ಧ ಪಶ್ಚಾದರ್ಥಂ ॥
ಘಟಿಯಿಪುದು ವಿಕಲ್ಪಾರ್ಥಂ ।
ಕಟಿಲದೆ ಮೇಣೆಂಬ ಶಬ್ದದೊಳ್ ಶಾಬ್ದಿಕರಿಂ ॥ ೩೧೫ ॥

~~~~~~~~~~~~~~~~~~~

೧. (ಎನೆಯುಮಲ್ತೆಯಲ್ತೇ ಎನೆಯುಂ)
~~~~~~~~~~~~~~~~~~~

*ವೃತ್ತಿ - ಬೞಿಕೆ, ಬೞಿಕ್ಕಂ, ಬೞಿಕಂ, ಬೞಿಕ್ಕೆ, ಬೞಿಯಂ - ಎಂಬಿವು ಪಶ್ಚಾದರ್ಥಂಗಳ್; ಮೇಣೆಂಬವ್ಯಯಮಂ ವಿಕಲ್ಪಾರ್ಥದೊಳ್ ಪೇೞಿಲಕ್ಕುಂ.

**ಸೂತ್ರಂ ॥ ಉಪಮಾನಾರ್ಥದೊಳಿವು ವ ।**
**ರ್ತಿಪುವಂತಿರೆಯಂತೆಯಂತೆವೋಲ್ವೋಲ್ಗಳ್ ರಂ ॥**
**ಜಿಪುವು ಗಡ ಗಳ ಗಡಂಗಳ ।**
**ವುಪಚಿತವಾರ್ತೆಯೊಳಮುಚಿತಸಂಭಾಷಣೆಯೊಳ್ ॥೩೧೬॥**

* ವೃತ್ತಿ - ಅಂತಿರೆ, ಅಂತೆ, ಅಂತೆವೋಲ್, ವೋಲ್ - ಇವು ಉಪಮಾನಾರ್ಥದೊಳ್ ವರ್ತಿಪುವು; ಗಳ, ಗಡ - ಎಂಬಿವು ಉಪಚಾರೋಕ್ತಿಯೊಳಂ ಉಚಿತ ಸಂಭಾಷಣೆಯೊಳಂ ಪೇೞಲ್ಪಡುಗುಂ.

**ಸೂತ್ರಂ ॥ ಮೆಱೆಗುಂ ಸುಮ್ಮನೆ ಸುಮ್ಮಗೆ ।**
**ಬಱದಲ್ಲವೞೆಂಬ ಮಾತಕಾರಣದೊಳ್ [1]ಪೊ॥**
**ಚ್ಚಱುಗುಂ ತೃತೀಯೆ ಬಂದಂ ।**
**ತಱನೆಂಬ ಪದಕ್ಕಮಾ ಎಕಾರಕ್ಕಿತರಂ ॥೩೧೭॥**

* ವೃತ್ತಿ - ಸುಮ್ಮನೆ, ಸುಮ್ಮಗೆ, ಬಱದೆ, ಅಲ್ಲವೞ್ - ಇವು ಕಾರಣವಿಲ್ಲೆಂಬರ್ಥದಲ್ಲಿ ಬರ್ಪುವು; ಅಂತಱನೆಂಬ ಪದಕ್ಕೆ ಎಕಾರಕ್ಕನ್ಯಮಾದ ಇಂ, ಇಂದಂ, ಇಂದೆ ಎಂಬ ತೃತೀಯಾ ವಿಭಕ್ತಿಪ್ರತ್ಯಯಂ ಪತ್ತುಗುಂ.

**ಸೂತ್ರಂ ॥ [2]ಹೌವನೆಯಾಕಸ್ಮಿಕ ಭಯ ।**
**ಭಾವಿತವಂತಿಂತುಗಳ್ ಪದಾಪೂರಣದೊಳ್ ॥**
**ಕೋವುವು ಚಿಃ ಇಸ್ಸೀಗಳ್ ।**
**ತಾವೊಗೆದು ಜುಗುಪ್ಸನಾರ್ಥದೊಳ್ ವರ್ತಿಸುಗುಂ ॥ ೩೧೮ ॥**

* ವೃತ್ತಿ - ಹೌವನೆ ಎಂಬವ್ಯಯಮಂ ಆಕಸ್ಮಿಕ ಭಯಾರ್ಥಂಗಳೊಳ್ ಪೇೞಲಕ್ಕುಂ; ಅಂತು, ಇಂತು ಎಂಬಿವಂ ಪಾದಪೂರಣದೊಳ್ ಪೇೞಲಕ್ಕುಂ; ಚಿಃ, ಇಸ್ಸೀ ಎಂಬಿವಂ ಜುಗುಪ್ಸಾರ್ಥದೊಳ್ ಪೇೞಲಕ್ಕುಂ.

**ಸೂತ್ರಂ ॥ ಮತ್ತೆಂಬರ್ಥದೊಳುಸಿರ್ವರ್ ।**
**[3]ಬಿತ್ತೆಗರಾ ಬಲ್ಲೆ ಬೞಿಗಳಂ ಕಾಲಾರ್ಥಂ ॥**
**ಪತ್ತುವುದಂದಿಂದುಂದೆಂ ।**
**ದೆತ್ತಂ ನುಡಿವವ್ಯಯಂಗಳೊಳ್ ವಾಗ್ವಿದರಿಂ ॥೩೧೯॥**

ವೃತ್ತಿ - ಬಲ್ಲೆ, ಬೞಿ ಎಂಬವ್ಯಯಮಂ ಮತ್ತೆಂಬರ್ಥದೊಳ್ ಪೇೞಲಕ್ಕುಂ; ಅಂದು, ಇಂದು, ಉಂದು, ಎಂದು ಎಂಬವ್ಯಯಂಗಳ್ ಕಾಲಾರ್ಥಮಂ ಪೇೞ್ಗುಂ.

~~~~~~~~~~~~~~~~

೧. ಪೊಚ್ಚಱುಗುಂ = ಪೊರ್ದುಗೆಯಪ್ಪುದು ೨. (ಪೌವನೆ) ೩. ಬಿತ್ತೆಗರ್ = ಬಲ್ಲವರ್
~~~~~~~~~~~~~~~~

ಸೂತ್ರಂ ॥ ಭ್ರಾಂತಿಯ[1]ನುಱದಂತಿಂತುಂ ।
ತೆಂತೆಂಬಿವು ತಾಂ ಪ್ರಕಾರ [2]ಕಾಲ್ಯಾರ್ಥಂಗಳ್ ॥
ಮುಂತೆ ಚತುರ್ಥೀ ಷಷ್ಠೀ ।
ಕಾಂತಂಗಳವೆಂದು ತಿಳಿಗೆ ಪೇೞ್ವವ್ಯಯಮಂ ॥ ೩೨೦ ॥

* ವೃತ್ತಿ – ಅಂತು, ಇಂತು, ಉಂತು, ಎಂತು - ಎಂಬಿವು ಪ್ರಕಾರಾರ್ಥಮಂ ಪೇೞ್ವುವು. ಕಾಲಭೇದಮನಱಪುವ ಮುಂದಣವ್ಯಯಂಗಳೊಳ್ ಚತುರ್ಥೀ ಷಷ್ಠಿಗಳ್ ಪರಿಣಮಿಸಿರ್ಪುವೆಂದಱವುದು.

ಸೂತ್ರಂ ॥ ತಳೆಗುಂ ಕಾಲಾರ್ಥಮನಾ ।
ಗಳೀಗಳೆಂಬಾಗಡೀಗಡೆಂಬಿವು ಬಿಂದೂ ॥
ಜ್ಜ್ವಳಮುಮಿವುದಯಮನುಸಿರ್ವುವು ।
ತಿಳಿ ಸವಳದೆ ಪೊೞ್ತಡೆನೆ ಸವಳ್ತಡೆನೆಯುಂ ॥೩೨೧॥

ಸವಸಂದ ಕಾಲವಾಚಕ ।
ಮಿವು ನಾಡಿದು ನಾಳೆ ನಿನ್ನೆ ಮೊನ್ನೆಗಳಾದಂ ॥
[3]ವಿವರಿಪುವೀವಱು ಮೊನೆಯೇ ।
ಡವು ಕಿಂಚಿದ್ಭೂತ ಭೂತಕಾಲ ದ್ವಯದೊಳ್ ॥೩೨೨॥

ವೃತ್ತಿ – ಇವಱೊಳ್ ಚತುರ್ಥಿ ಷಷ್ಠಿಗಳ್ ಪತ್ತುವಂದಮಂ ಉದಾಹರಿಪೆಂ -

ಅಗಳಿಂಗೆ, ಈಗಳಿಂಗೆ, ಆಗಡಿಂಗೆ, ಈಗಡಿಂಗೆ; ಆಗಳಿನ, ಈಗಳಿನ, ಆಗಡಿನ, ಈಗಡಿನ; [ಆಗಳುಂ, ಈಗಳುಂ; ಆಗಡುಂ, ಈಗಡುಂ]; ಸವಳ್ತಡಿಂಗೆ, ಪೊೞ್ತಡಿಂಗೆ; ಸವಳ್ತಡಿನ, ಪೊೞ್ತಡಿನ. ಸವಳದೆಗೆ ಆಗದು.

ನಾಳಿಂಗೆ, ನಾಡಿದಿಂಗೆ, ನಿನ್ನಿಂಗೆ, ಮೊನ್ನಿಂಗೆ; ನಾಳಿನ, ನಾಡಿದಿನ, ನಿನ್ನಿನ, ಮೊನ್ನಿನ; ಈವಱಂಗೆ, ಮೊನೆಯೇಡಿಂಗೆ; ಈವಱನ, ಮೊನೆಯೇಡಿನ. (ಈವಱೆಂಬುದು ಈಷದ್ಭೂತಕಾಲಂ; ಮೊನೆಯೇಡೆಂದು ಭೂತಕಾಲಂ; ಇವು ವರ್ಷವಾಚಕಂಗಳಾಗಿ ಕಾಲೋಪಯುಕ್ತಂಗಳ್)

ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಶಲ್ಯ
ಚಾರುಚುಂಬಕಾಯಮಾನಾನೂನ ಕರ್ಣಾಟಕಲಕ್ಷಣಶಿಕ್ಷಾಚಾರ್ಯ ಸುಕವಿ
ಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಅವ್ಯಯಾರ್ಥವಿವರಣಮೆಂಬ
ಅಷ್ಟಮಮಪ್ಪ ಸಂಧಿ ಸಂಪೂರ್ಣಂ.

~~~~~~~~~~~~~~~~~

೧. ನುಱಯಂ. ಕ. ಖ. ೨. ಕಾಲಾರ್ಥಂ (ಅಚ್ಚಿನ ಪುಸ್ತಕ). ೩. (ಬವರಿಪುವೀವಱು ಮೊನೆಯೇಡಿವು.)
~~~~~~~~~~~~~~~~~

## ಸಮಾಪ್ತಿ ವಾಕ್ಯಂಗಳ್

ಕಂ॥ ನಡೆದುದೆ ಮಾರ್ಗಂ ಪದವಿಡ ।
ಲೊಡರಿಸಿದುದೆ ಭಂಗಿ ಕೇಶವಂಗಿದಿರುಂಟೇ ॥
ತೊಡಗಿದ ಕೃತಿಗಳೊಳಾನೆಯ ।
ನಡು ಬಡವೆ ತಾನೆ ಲೋಕದೊಳ್ ಲಾಕ್ಷಣಿಕಂ ॥ ೧ ॥

ದೊರೆವಡೆದ ಚೋಟಿಪಾಲಕ ।
ಚರಿತಂ ಶ್ರೀ ಚಿತ್ರಮಾಲೆಯಂತೆ ಸುಭದ್ರಾ ॥
ಹರಣಂ ಪ್ರಬೋಧಚಂದ್ರಂ ।
ಕಿರಾತಮಿವು ಕೇಶಿರಾಜಕವಿರಚಿತಂಗಳ್ ॥ ೨ ॥

ಸಿರಿಗೀಕ್ಷಿಪ ರಸಚಿತ್ರಂ ।
ಸರಸತಿಗೆರಡನೆಯ ಬೀಣೆಯೆನೆ ಸೌಭಾಗ್ಯಂ ॥
ಕರಮಾದುದೆಂದು ಬುಧರಾ ।
ದರಿಪರ್ ಮೆಚ್ಚೆಂದೆ ಶಬ್ದಮಣಿದರ್ಪಣಮಂ ॥೩॥

ಆರ್ಯನ ಯಾದವಕಟಕಾ ।
ಚಾರ್ಯನ ಕೇಶವನ ಶಬ್ದಮಣಿದರ್ಪಣಮುಂ ॥
ಸೂರ್ಯೇಂದುಮೇರುವಾರಿಧಿ ।
ಪರ್ಯಂತಂ ಪರೆದು ನಿಲ್ಕನಾಕುಳದಿಂದಂ ॥ ೪ ॥

ಚಂ॥ಮಾ॥ ಗಮಕಸಮಾಸದಿಂ ಜಿಟಿ ಕುಳ ಕ್ಷಳದಿಂ ಶ್ರುತಿಸಹ್ಯಸಂಧಿಯಿಂ ।
ಸಮುಚಿತಮಾಗಿ ಬರ್ಪ ಸತಿಸಪ್ತಮಿಯಿಂ ಸಮಸಂಸ್ಕೃತೋಕ್ತಿಯಿಂ ॥
ವಮ ಹಪ ಭೇದದಿಂ ವಿರಹಿತಾವ್ಯಯಸಂಸ್ಕೃತಲಿಂಗದಿಂ ಪದೋ ।
ತ್ತಮಶಿಥಿಲತ್ವದಿಂ ಯತಿವಿಲಂಘನದಿಂದರಿದಲ್ತೆ ಕನ್ನಡಂ ॥೫॥

# ಪರಿಶಿಷ್ಟ

## ಪ್ರಯೋಗಸಾರಮೆಂಬ ಶಬ್ದಾರ್ಥನಿರ್ಣಯಂ

ಕಂ ॥ ಅಪರಿಮಿತವಿದ್ಯರೆನಿಸಿ ।
ರ್ದ ಪುರಾಣಕವೀಂದ್ರರಖಿಳಕಾವ್ಯಂಗಳ ಗೂ ॥
ಢಪದಪ್ರಯೋಗಮಂ ನೆರೆ ।
ಪಿ ಪದಾರ್ಥಂಗಳನಣಂ ಮನಂಬುಗೆ ಪೇೞ್ವೆಂ ॥ ೬ ॥

೧. ಅಗುಂದಲೆ = ಪಿರಿದು.
೨. ಅಜ್ಜಂ = ಸಾವಾಸಿ (ಪೊಸವಾಸಿ)
೩. ಅಡುವಳಂ = ಬಾಣಸಿಗಂ.
೪. ಅಡಿವಣಿಗೆ = ಕೆಸಱೊಳಾದ ಪಜ್ಜೆ.
೫. ಅಣೆಯರಂ = ಪಿರಿದು.
೬. ಅತ್ತಪರಂ = ಕಾಳೆಗವಲಗೆ.
೭. ಅರ್ತುದು = ಅಱಿತುದು.
೮. ಅದುವದು = ವಿಚಾರಿಸುಹಂ.
೯. ಅರ್ಬಿ = ನಿರ್ಝರಂ.
೧೦. ಅಮ್ಮಂಗೊಡಲಿ = ಪಗ್ಗಟ್ಟವತ್ತಿಗೆ.
೧೧. ಅಱುಲ್ = ನಕ್ಷತ್ರಂ.
೧೨. ಅಲರ್ವಕ್ಕಿ = ತುಂಬಿ.
೧೩. ಅಲ್ಲಣಿಗೆ = ಮೇಳಂ.
೧೪. ಅವುತೆ (ಅವುಸೆ) = ಕವಚಂ.
೧೫. ಅಸಕಱುಹಂ = ಕೈಮೀಱುಹಂ.
೧೬. ಅಸಿದಂ = ಈಡಾಡಿದಂ.
೧೭. ಅೞ್ಕರ್ತಂ = ಪ್ರೀತಿವಟ್ಟಂ.
೧೮. ಅಳಕಂ = ಅಲೇಖಂ.
೧೯. ಅಳಸು = ಸುರತಧ್ವನಿ.
೨೦. ಅಳ್ಕು = ಭಯಂ.
೨೧. ಆಱಡಿ = ತುಂಬಿ.
೨೨. ಆಪೆಯಾದೊಡಂ= ಆರಾದೊಡಂ.
೨೩. ಆಸು = ಶೀಘ್ರಂ.
೨೪. ಇಂಗೋಲ್ವಿಲ್ಲಂ = ಕಾಮಂ.
೨೫. ಇಱುಸಿಲ್ = ಮಿಗಮಂ ಕೆಡಪುವ ಗುಱು
೨೬. ಇಱುವು = ಸಂದಣಿ.
೨೭. ಉಕ್ಕೆವಂ = ಠಕ್ಕು.
೨೮. ಉಗಿಪಟಂ = ಸುಲಿಹಂ.
೨೯. ಉರ್ಗಿವಳದೆಣ್ಣೆ[ಅಗ್ಗಿವಳೆ ದೆಣ್ಣೆ]= ಉರಿವೆಣ್ಣೆ.
೩೦. ಉಣ್ಣವಳಿ = ಪಿರಿದು.
೩೧. ಉಬ್ಬದಿಗಂ (ಉಬ್ಬರಿಗಂ) = ಪಿರಿದು.
೩೨. ಉರ್ಬಿನಂ = ಪಿರಿದು.
೩೩. ಉಮ್ಮಳಿಸಿತು = ಊಷ್ಮ ತೋಱುದುದು.
೩೪. ಉೞ್ಗಿ (ಉಗ್ಗಿ) = ಒಂದು ನೋಂಪಿ.
೩೫. ಉೞುಗಿದಂ = ಕೂರ್ತಂ.
೩೬. ಎನವು [ಎನತು] = ಎನ್ನ ವರ್ತನಂ.
೩೭. ಎಂಬುಕೆಯ್ದಂ = ಎಂದುದಂ ಮಾಡಿದಂ.
೩೮. ಎವುೞ್ = ಎಂಜಲ್.
೩೯. ಏರ್ಪೂತುದು = ತಡಂ ಬೊಯ್ದುದು.
೪೦. ಒಡಂಬಿ = ಶರೀರಂ.
೪೧. ಒಱಲ್ದಂ = ಕೂರ್ತಂ.
೪೨. ಕಚ್ಚಟು = ಬಿರುದಿನ ಬಳೆ.

೪೩. ಕಣ್ಣಲೆದುದು = ಪೊಡಕರಿಸಿತು.
೪೪. ಕಣ್ಮಲೆದುದು = ಪೊಡಕರಿಸಿತು.
೪೫. ಕತ್ತುಪೆನಂ = ಬೆಗಳಂ (ಜಗಳಂ).
೪೬. ಕನ್ನಡವಕ್ಕಿ = ಗಿಳಿ.
೪೭. ಕಮ್ಮಂಗಣೆಯಂ = ಕಾಮಂ.
೪೮. ಕಯ್ಕೋಲ್ = ಕಡೆಗೋಲ್.
೪೯. ಕರಿ = ಆನೆ.
೫೦. ಕರೆದಂ = ಅಡಂಗಿದಂ.
೫೧. ಕಸವರಂ = ಪೊನ್ (ಮಿಸುನಿ).
೫೨. ಕಾವಲ್ಮೆ = ಸ್ನೇಹಂ.
೫೩. ಕಾಮಕರಂ = ಗರ್ವಂ ("ತಾಂ ಮುಸಗೆ ತಾಗಿದಸುರನ ಕಾಮಕರಂ ಕರಮಡಂಗಿ ನುರ್ಗಪ್ಪಿನೆಗಂ").
೫೪. ಕಿರ್ಗಿ = ಒಱಪು.
೫೫. ಕಿತ್ತಡಿ = ವ್ರತಿ.
೫೬. ಕಿಱುಗೆ = ಒಱಪು.
೫೭. ಕಿಸುಗಣ್ಚಿದಂ = ಕೋಪಿಸಿದಂ.
೫೮. ಕುಂಗರ್ = ಬೆಸದವರ್.
೫೯. ಕುಯಕಂ = ಕುಹಕಂ.
೬೦. ಕುಱು = ಕುಱುಪು (ಕುಱುಪು).
೬೧. ಕೆಕ್ಕೆ = ಕೆನ್ನೆ.
೬೨. ಕೆಂಗಣ್ಣಲರ್ವಕ್ಕಿ = ಕೋಗಿಲೆ.
೬೩. ಕೆಲಚು = ಸಹಾಯಂ.
೬೪. ಕೆಸಱಂಕರ್ = ಮಲ್ಲರ್.
೬೫. ಕೇಱು = ಪಜ್ಜು.
೬೬. ಕೈದವಂ = ಕೈತವಂ.
೬೭. ಕೊಟ್ಟಜಂ = ಕಪ್ಪಂ.
೬೮. ಕೊತ್ತಣೆ = ಕಾಗೆಗಳ ಮೊತ್ತಂ.
೬೯. ಕೊಂಬು = ಸಂಕೇತಸ್ಥಳಂ.
೭೦. ಕೊಱೆದುದು = ಗರವಟಿಸಿಡುವುದು.
೭೧. ಕೊಳಂ = ಸಂಕೇತಸ್ಥಳಂ.
೭೨. ಕೊಳವೇರ್ = ಲಾಮಂಚಂ.
೭೩. ಕೋವಳೆ = ನೆಯ್ದಿಲ್ (ನೆಯ್ದಲ್).
೭೪. ಕೋವರ್ = ಕುಂಬಱರ್.
೭೫. ಕೌವರೆ = ಸಂಭ್ರಮಂ.
೭೬. ಗರವಸಂಗೊಂಡುದು = ಗರವಟಿಸಿಡುವುದು.
೭೭. ಗಱುವೂ = ಕೇದಗೆಯ ಪೂ.
೭೮. ಗಾರಣಂ = ದೂಱು.
೭೯. ಗಾಳಿವಾತು = ಬೈಗುಳ್.
೮೦. ಗುಂಡು = ನೆರವಿ.
೮೧. ಗುಣಕಱುಗೊಂಡಂ = ಪ್ರೀತಿವಟ್ಟಂ.
೮೨. ಗೊಂಕೆ = ಗೋಣ್.
೮೩. ಚಣಕಂ = ಚಲ್ಲಣಂ (ಅರ್ಧೋರುಕಂ).
೮೪. ಚತ್ತಾಣಂ = ಒಂದು ಕಾವ್ಯಂ.
೮೫. ಚಲ್ಲವೊತ್ತರ್ = ನಂಬಿಸಿ ತಿಂಬವರ್.
೮೬. ಚೆನ್ನಪೊಂಗಂ = ವೀರಂ.
೮೭. ಚೆಲಂಕಿದಂ = ಈಡಾಡಿದಂ.
೮೮. ಜಱುಚು = ವ್ಯರ್ಥಾಳಾಪಂ.
೮೯. ಜೀವರಕ್ಕೆ = ಕವಚಂ.
೯೦. ಜೊನ್ನವಕ್ಕಿ = ಚಕೋರಂ.
೯೧. ಜೋಡಂ = ಸಿತಗಂ; ಪಾಣ್ಬಂ.
೯೨. ಜೋಡೆ = ಸಿತಗೆ.
೯೩. ಡವಕೆ = ಕಾಳಾಂಜಿ.
೯೪. ಡಾಹಿಣಿ ಲ್ಡಾಣ್ವೆ = ರಕ್ಕಸಿಯ ಕತ್ತಿಗೆ.
೯೫. ತಗರ್ದುದು = ತಗೆದುದು.
೯೬. ತಟ್ಟಿಮೆಡಱುದಂ = ತಟ್ಟಿವೆಣೆದಂ.
೯೭. ತಡಂಗುಂಡಿ = ಜಳಪ್ರತ್ಯಯಂ.
೯೮. ತಡಮಾಡಿದಂ = ತಳ್ಳಂಕಗೊಳಿಸಿದಂ.
೯೯. ತಮ್ಮಡಂ = ತಡೆದುದು.
೧೦೦. ತಱುಸಲವು = ನಿರ್ಣಯಂ.
೧೦೧. ತಳಮಳಗು = ಬೆರಗಾಗುಹಂ.
೧೦೨. ತಾರಗೆವಟ್ಟೆ = ಆಗಸಂ.
೧೦೩. ತಿಟ್ಟು = ಬೈಗುಳ್.
೧೦೪. ತಿಬ್ಬಂ = ತೀವ್ರಂ.

೧೦೫. ತಿಱುಕೊಱೆ = ಆಯ್ಕುಳಿ.
೧೦೬. ತಿಪ್ಪುಟಿಱ್ = ಗಱು.
೧೦೭. ತುಟಿಲ್ = ವೀರಂ; ಪೊಡವಡಿಕೆ.
೧೦೮. ತೆಗಲೆ = ಪೆಗಲ್.
೧೦೯. ತೇಂಗುಹಂ = ಹಕ್ಕಿಯೆಱಗುಹಂ.
೧೧೦. ತೆಪ್ಪರ್ತ್ತಂ = ಮೂರ್ಛೆ ತಿಳಿದಂ.
೧೧೧. ತೆರೆಪೊಡೆ = ಮಡಿಲ್.
೧೧೨. ತೆಲ್ಲಂಟಿ = ನಿಬ್ಬಣಂ.
೧೧೩. ತೇನತೇನಂ = ಮೇಲೆಮೇಲೆ.
೧೧೪. ತೊದಳ್ = ಪುಸಿ.
೧೧೫. ತೋರ್ಪುರ್ = ತೋರ್ಕೆ.
೧೧೬. ದಡ್ಡಸ = ಡೊಂಬವಱೆ.
೧೧೭. ದಡ್ರುಂಚ್ಲೆದುಂಡುಱುಂಬ್ವೆ = ಸಿತಗೆ.
೧೧೮. ದಳಂ = ಪತ್ರಂ.
೧೧೯. ದೊಡ್ಡಮಾರ್ಗಂ = ಆನೆ ಕುದುರೆಗಳೊಳಾದ ಕಿಱುದೊಡೆಯ ಜಿಡ್ಡು (ಜಡ್ಡು, ದಡ್ಡು).
೧೨೦. ನನಸು = ದಿಟಂ.
೧೨೧. ನವಿರ್ = ಕೂದಲು.
೧೨೨. ನಾಗಹಂ = ಗೋದಾವರಿಯೊಳೊಂದು ಮಡು.
೧೨೩. ನಾಟು = ನಾಡಿ.
೧೨೪. ನಿಕ್ಕುವಂ = ನಿಶ್ಚಯಂ.
೧೨೫. ನಿಗ್ಗವಂ = ಗಜದಂತಂ.
೧೨೬. ನಿಗುಂಬಿತು = ಕುಪ್ಪಳಿಸಿತ್ತು.
೧೨೭. ನಿರ್ನೆರಂ, ನಿರ್ನೆರ್ = ನಿರ್ನಿಮಿತ್ತಂ.
೧೨೮. ನಿರದಂ = ಕೊಂದಂ
೧೨೯. ನಿಱುಗಂ = ಒಂದು ಮಾವು.
೧೩೦. ನಿಲುಂಬಿತು = ಕುಪ್ಪಳಿಸಿತ್ತು.
೧೩೧. ನಿಸ್ಸಂಕೆ = ಅವಜ್ಞೆ.
೧೩೨. ನೂಳದು = ಪಿರಿದು.
೧೩೩. ನೆಲಕಲಂ = ಲೋಭಿ.
೧೩೪. ನೇರ್ದಂ = ಅರಿದಂ.
೧೩೫. ನೋಳ್ಪಿದಂ = ಇದಿರ್ಚಿ ನಡೆದಂ.
೧೩೬. ಪಂಚಪಲ್ಲವದ ವಾಜಿಗಳ್ = ರಾಜವಾಹನಂಗಳ್.
೧೩೭. ಪಚ್ಚವಡಿತಿ = ಹಚ್ಚಡಿಸುವಾಕೆ.
೧೩೮. ಪಚ್ಚಾಯ್ಲಂ = ಪಚ್ಚಗಾಱಂ.
೧೩೯. ಪಂಚಂ = ಅಪೂರ್ವಂ.
೧೪೦. ಪಡಿಯಱವಕ್ಕಿ = ಕೋಗಿಲೆ.
೧೪೧. ಪಂಡಿತವಕ್ಕಿ = ಗಿಳಿ.
೧೪೨. ಪನ್ನತಿಕೆ = ಪರಾಕ್ರಮಂ.
೧೪೩. ಪನಂ = ಸಂಕೇತಸ್ಥಳಂ.
೧೪೪. ಪರ್ಪರಿಕೆ = ಕರ್ಕಶತೆ.
೧೪೫. ಪರಕಂ = ಪರೋಕ್ಷಂ.
೧೪೬. ಪಱಿಮೆ = ತುಂಬಿ.
೧೪೭. ಪಲ್ಲಮಱು = ಆನೆಯ ಮಱು.
೧೪೮. ಪವಿತ್ರಂ = ಒಂದು ಕಿವಿದುಡುಗೆ.
೧೪೯. ಪಳಾಳಂ = ಠಕ್ಕು.
೧೫೦. ಪಳುಂಕಿದಂ = ನೂಂಕಿದಂ.
೧೫೧. ಪಾಗಲ್ = ಪ್ರಾಕಾರಂ.
೧೫೨. ಪಾಱು (ಪಾಣ್ಬೆ) = ಸಿತಗೆ.
೧೫೩. ಪಾಱು = ಬಹಿತ್ರಭೇದಂ.
೧೫೪. ಪಾಟು = ಪಙ್ಕ್ತಿ.
೧೫೫. ಪಿರಿತಿನಿ = ಮರುಳ್.
೧೫೬. ಪುಗ್ಗಾಯ್ಲಂ = ಗರ್ವಿತಂ.
೧೫೭. ಪುಚ್ಚಟು = ಕೇಡು.
೧೫೮. ಪುಚ್ಚವಣಂ = ಪರೀಕ್ಷೆ ; ಅಣ್ಮು.
೧೫೯. ಪೂಜಾಗಜಂ = ಪಟ್ಟವರ್ಧನಂ.
೧೬೦. ಪೆಱಂ = ಪಡೆಯಂ.
೧೬೧. ಪೆಟಿಕು = ಜಗಳಂ.
೧೬೨. ಪೊಚ್ಚಱುಸಿತು = ಪೊಡಕರಿಸಿತು.
೧೬೩. ಪೊಚ್ಚಂ = ಪೊಟಱೆ.
೧೬೪. ಪೊಪ್ಪುಕಂ = ಸೊಪ್ಪುಗುಟ್ಟುಹಂ.

೧೬೫. ಪೊಱಮಾಱು = ಬೆನ್ನೀಹಂ.
೧೬೬. ಪೋರ್ಕುಳಿವಕ್ಕಿ = ಕೋಗಿಲೆ.
೧೬೭. ಬಂಡಣಂ = ಕಾಳೆಗಂ.
೧೬೮. ಬದಸು, ಬದಗು = ಕೌಟಿಲ್ಯಂ.
೧೬೯. ಬದ್ದವಣಂ = ಮಂಗಳವಱಿ.
೧೭೦. ಬದ್ದಂ = ಗಾಢಂ.
೧೭೧. ಬದ್ದಿಸಂ (ಬಡ್ಡಿಸಂ) = ಅವುಂಕುಹಂ.
೧೭೨. ಬರ್ದು = ಪ್ರೌಢಿ.
೧೭೩. ಬರ್ದುಗೆ = ಸಾವು.
೧೭೪. ಬವಸು = ವ್ಯವಸಾಯಂ.
೧೭೫. ಬಳಮರ್ದು, ಬಲಮರ್ದು= ಅಂಕದೌಷಧಂ.
೧೭೬. ಬಳೆ = ಕುದುರೆಯ ವಳಯಂ.
೧೭೭. ಬಾಗುಳ್ = ವ್ಯಾಕುಳಂ.
೧೭೮. ಬಾನ್ = ಗಗನಂ.
೧೭೯. ಬಾಂಬರ್ = ಕುಂಬಱರ್
೧೮೦. ಬಿಜ್ಜಲಬಿಟ್ಟೇಱು = ಹಿರಿಯ ಬಿಟ್ಟೇಱು.
೧೮೧. ಬಿತ್ತಗಂ = ತುತ್ತಿದಂ (?)
೧೮೨. ಬಿತ್ತೆಗಂ = ಪ್ರೌಢಂ.
೧೮೩. ಬಿಸವಂದಂ = ಕೌತುಕಂ.
೧೮೪. ಬಿಸುಗೆ = ಱಿಂಚೆಯಂ.
೧೮೫. ಬೆಗಡು = ಭಯಂ.
೧೮೬. ಬೆಜ್ಜಂ = ವೈದ್ಯಂ.
೧೮೭. ಬೆಜ್ಜೆ = ಚಪ್ಪರಣೆ.
೧೮೮. ಬೆಂಟೆ = ಸರವಿ (ಮಳಲ ಬೆಂಟೆಯಂ ಮಾಡಿದವೋಲ್).
೧೮೯. ಬೆದಂಡೆ = ವೈದಂಡಿಕಂ.
೧೯೦. ಬೆಳ್ಪಳಂ = ಸಂಚಳಂ.
೧೯೧. ಬೆಳ್ಪಡಿ = ಗೊರವಂ.
೧೯೨. ಬೆಳ್ಪು = ನಿರ್ಮಳಿಕೆ.
೧೯೩. ಬೊಂದಿ = ಶರೀರಂ.
೧೯೪. ಮಗಳ್ಮಾಯ್ = ಗಂಡನಂ ಪತ್ತಿ ಬಿಡದಾಕೆ.
೧೯೫. ಮಚ್ಚೆ = ನೊಳಂ (ನೊಣಂ).
೧೯೬. ಮಱುಗಿದಂ = ಕೂರ್ತಂ.
೧೯೭. ಮಳಾರಂ = ಕುದುರೆಯ ಪಟ್ಟೆ.
೧೯೮. ಮಾಳ್ಕುಕ್ಕಿ = ಗಂಡನಂ ಪತ್ತಿ ಬಿಡದಾಕೆ.
೧೯೯. ಮಾಂದದು = ಮಾಣದು.
೨೦೦. ಮಾರ್ಮರ್ = ಮಲೆವರ್.
೨೦೧. ಮೀನ್ = ನಕ್ಷತ್ರಂ.
೨೦೨. ಮುಕ್ಕುಱು = ಮುಸುಱುಹಂ.
೨೦೩. ಮುಚ್ಚೆಯುತ್ತಂ = ಮೂರ್ಛೆವೋದಂ.
೨೦೪. ಮುನ್ನೀರ್ = ಸಮುದ್ರಂ.
೨೦೫. ಮುಯ್ಯಾರಡಿ = ತುಂಬಿ.
೨೦೬. ಮುಮ್ಮುರಿ = ಕಾಸಿದ ಮಳಲ್.
೨೦೭. ಮೂಡಿ = ಉದಯಂ.
೨೦೮. ಮೆಚ್ಚವಣಿಗೆ = ಮೆಚ್ಚನುಳ್ಳುದು.
೨೦೯. ಮೆಟ್ಪಡೆ = ಮರುಳ್ತನಂ.
೨೧೦. ಮೇಳಂಬಂ = ತುಂಬಿ.
೨೧೧. ಮೊನೆ = ಕಾಳೆಗಂ.
೨೧೨. ರಾಜಾವರ್ತಂ = ಎಳನೀಲಂ.
೨೧೩. ಱೊಬ್ಬೆ = ಹಳುಕು.
೨೧೪. ವಸು = ಪೊನ್.
೨೧೫. ವಂಚಂ = ವಂಶಂ.
೨೧೬. ಲಾಳೆ = ಲಿಂಗವತ್ತಿಗೆ.
೨೧೭. ಸಬ್ಬವಂ = ಮೇಳಂ.
೨೧೮. ಸಲಂ = ಪ್ರವೇಶಂ.
೨೧೯. ಸಲಂಡುಗೊಂಡುದು = ಆಕ್ರಮಿಸಿ ಕೊಂಡುದು.
೨೨೦. ಸಾರಿ = ಱಿಂಚೆಯಂ.
೨೨೧. ಸಿತಗೆ = ಪಾಣ್ಬೆ.
೨೨೨. ಸಿರಿವಂತಿಗೆ = ಹುರಿಯೋಡು.
೨೨೩. ಸುತ್ತಿ = ಶುಕ್ತಿ.
೨೨೪. ಸುನ್ನಂ = ಶೂನ್ಯಂ.
೨೨೫. ಸುಸಿಲ್ = ಸಂಭೋಗಂ; ಪ್ರಭಾತಕಾಲಂ.

೨೨೬. ಸೈದರ್ = ನೇರಿದರ್.

೨೨೭. ಸೈಪು = ಪುಣ್ಯಂ.

೨೨೮. ಸೊಡಬಲಿ = ಮಸಣವಟ್ಟಿಗೆ.

೨೨೯. ಸೊಂದಿ = ಸಿತಗಂ.

೨೩೦. ಸೋಡಂಬಾಡಂ = ಪಿರಿದು.

೨೩೧. ಸೌಸವಂ = ಕಂಪು.

೨೩೨. ಹರಳಿಗಂ = ಜಾರಂ.

೨೩೩. ಹರಿಮೇಖಲೆ = ಇಂದ್ರಜಾಲಂ.

೨೩೪. ಹೇದೆ = ಭೂತಂ.

೨೩೫ ಹೇರಿಗಂ = ಬೇಹಿನವಂ.[೧]

~~~~~~~~~~~~~~

೧. (ಪ್ರಥಮ ಪರಿಷ್ಕರಣದ ಕೆಲವು ಸಾಮಾನ್ಯ ಪ್ರಮಾದಗಳನ್ನು ತಿದ್ದಿ ಪರಿಷ್ಕರಿಸಿದೆ.)
~~~~~~~~~~~~~~

# ಸೂಚೀಪತ್ರ ೧

## ಸೂತ್ರಾನುಕ್ರಮಣಿಕೆ

(ಪೀಠಿಕಾಪದ್ಯಗಳನ್ನೂ ಸಮಾಪ್ತಿಪದ್ಯಗಳನ್ನೂ ಸೇರಿಸಿದೆ.)

ಈ ಕೆಳಗೆ ಕೊಟ್ಟಿರುವ ಸಂಖ್ಯೆಗಳು ಸೂತ್ರಗಳನ್ನು ತೋರಿಸುವುವು.

# ಸೂಚೀಪತ್ರ ೨

## ಪ್ರಯೋಗಾನುಕ್ರಮಣಿಕೆ

(ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಸೂತ್ರಗಳ ಮತ್ತು ಪ್ರಯೋಗಗಳ ಸಂಖ್ಯೆಗಳನ್ನು ಸೂಚಿಸುವುವು.)

ಕನ್ನಡ ಸಾಹಿತ್ಯ ಪರಿಷತ್ತಿನಿಂದ
ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ
ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ
ಪುಸ್ತಕಗಳನ್ನು, ಸಹೃದಯರು ಮೆಚ್ಚಿ ಸ್ವೀಕರಿಸಲು
ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ
ಸಿದ್ಧಪಡಿಸಿದ ಮೇಲೆ ಅವುಗಳ ಮಾರಾಟದ ಪ್ರಮಾಣ
ಹೆಚ್ಚುತ್ತಿರುವುದನ್ನು ಕಂಡು ನನಗೆ ಸಂತೋಷವಾಗಿದೆ.
ಓದುಗರು ಬಯಸುವ ಪುಸ್ತಕಗಳನ್ನು, ಅವರ ಕೈಗೆ
ತಲಪುವಂತೆ ಮಾಡುವುದೇ ಪುಸ್ತಕೋದ್ಯಮದ
ಪ್ರಾಥಮಿಕ ಆಶಯ.

ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ,
ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ
ಸ್ಪಂದಿಸುತ್ತ, ಆ ಕ್ಷೇತ್ರದಲ್ಲಿ ಬಹುವೇಗವಾಗಿ
ಸಾಗುತ್ತಿರುವ ಪ್ರಕಾಶಕರ ನಡುವೆ ಕನ್ನಡ ಸರಸ್ವತಿಯ
ಆರಾಧನೆ ಮಾಡುತ್ತಿದ್ದೇವೆಂದು ಭಾವಿಸುವುದರ
ಜೊತೆಗೆ ಹೊಸಕಾಲದ ಅಗತ್ಯಕ್ಕೆ ಅನುಗುಣವಾಗಿ
ಬದಲಾಗುವುದೇ ಜೀವಂತಿಕೆಯ ಲಕ್ಷಣ ಎಂದು
ಕನ್ನಡ ಸಾಹಿತ್ಯ ಪರಿಷತ್ತು ಪರಿಗಣಿಸಿದೆ.

**ಪುಂಡಲೀಕ ಹಾಲಂಬಿ**
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

**ಕನ್ನಡ ಸಾಹಿತ್ಯ ಪರಿಷತ್ತು**
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮

ರೂ. ೧೭೦/-